ಸಾಹಿತ್ಯ ವಾರ್ಷಿಕ 1975

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು



ಕನ್ನಡ ಅಧ್ಯಯನ ಕೇಂದ್ರ, ಮಾಲೆ 26

ಸಾಹಿತ್ಯ ವಾರ್ಷಿಕ 1975

ಸಂಪಾದಕರು
ಜಿ. ಎಸ್. ಶಿವರುದ್ರಪ್ಪ

ವಿಶೇಷ ಸಹಾಯ
ಎನ್. ವಿ. ವಿಮಲ

ಸಹಕಾರ
ಬೆಂಗಳೂರು ವಿಶ್ವವಿದ್ಯಾಲಯದ
ಗ್ರಂಥಭಂಡಾರದ ಅಧಿಕಾರಿ ವರ್ಗ

ಪ್ರಸಾರಾಂಗ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು

SAHITYA VARSHIKA 1975 (Year Book Literature, 1975) A review of Kannada books on literature published in 1975
Edited by Dr. G. S. Sivarudrappa
(Centre of Kannada Studies Series No. 26)
Published by the Bangalore University, Bangalore
Pp. 214+viii. 1977

ಪ್ರಧಾನ ಸಂಪಾದಕರು
ಡಾ|| ಜಿ. ಎಸ್. ಶಿವರುದ್ರಪ್ಪ

ಪ್ರಕಾಶಕರು :
ಹೆಚ್. ಆರ್. ದಾಸೇಗೌಡ
ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಬೆಲೆ : ರೂ. 10-00

ಮುದ್ರಣ :
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಮೊದಲ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಕನ್ನಡ ಮಾಧ್ಯಮದ ಆವಶ್ಯಕತೆಯನ್ನು ಪೂರೈಸುವ ಸಲುವಾಗಿ ಈಗಾಗಲೇ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸುತ್ತಿದೆ. ಇದರ ಜೊತೆಗೆ ವಿಶ್ವವಿದ್ಯಾಲಯವು ಸಾರ್ವಜನಿಕರಿಗಾಗಿ ವರ್ಷಾದ್ಯಂತವೂ ಏರ್ಪಡಿಸುವ ಪ್ರಚಾರೋಪನ್ಯಾಸಗಳನ್ನೂ ವಿಶೇಷೋಪನ್ಯಾಸಗಳನ್ನೂ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ. ಈ ಪಂಕ್ತಿಗೆ ಇದೀಗ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ಶಾಖೆಗಳು ಕೈಕೊಳ್ಳುವ ವೈಯಕ್ತಿಕ ಹಾಗೂ ಸಾಮೂಹಿಕ ಸಂಶೋಧನಾತ್ಮಕ ವ್ಯವಸಾಯಕ್ಕೆ ಗ್ರಂಥರೂಪದ ಅಭಿವ್ಯಕ್ತಿಯನ್ನು ಕೊಡುವ ಕಾರ್ಯವು ಸೇರುತ್ತಿದೆ. ಇದರಿಂದಾಗಿ ವಿಶ್ವವಿದ್ಯಾಲಯದ ಒಂದೊಂದು ಅಧ್ಯಯನ ಶಾಖೆಯು ಅಧ್ಯಾಪಕರ ಸಂಶೋಧನಾತ್ಮಕ ಪ್ರವೃತ್ತಿಗಳಿಗೆ ತಕ್ಕಮಟ್ಟಿನ ಪ್ರೇರಣೆಯೂ ದೊರೆಯುತ್ತದೆ. ಈ ರೀತಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಕೇಂದ್ರ ಇಂಥ ಕೃತಿಗಳನ್ನು ಪ್ರಕಟಣೆಗೆ ಸಿದ್ಧಪಡಿಸುತ್ತಿರುವುದು ಪ್ರಶಂಸನೀಯವಾಗಿದೆ. ಪ್ರತಿಯೊಂದು ವಿಭಾಗವೂ ಹೀಗೆ ತನ್ನ ವಿಭಾಗದ ಹೆಸರಿನಲ್ಲಿ ಕೃತಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಮೂಲಕ ಹೊರತರಲು ಮುಂದೆ ಬರುವುದೆಂದು ನಂಬಿದ್ದೇನೆ.

ವಿಶ್ವವಿದ್ಯಾಲಯದ ನಿಜವಾದ ಹಿರಿಮೆ ಅದರ ಬೌದ್ಧಿಕ ಸಾಧನೆ ಹಾಗೂ ಅಭಿವ್ಯಕ್ತಿಗಳಲ್ಲಿದೆ. ಆದರೆ ಈ ಕಾರ್ಯದಲ್ಲಿ ಆತುರ ಸಲ್ಲದು; ವಿಶ್ವವಿದ್ಯಾಲಯ ಪ್ರಕಟಿಸುವ ಕೃತಿಗಳು ಅದರ ಮತ್ತು ವಿವಿಧ ಅಧ್ಯಯನ ವಿಭಾಗಗಳ ಘನತೆಯನ್ನು ಕಾಯ್ದುಕೊಳ್ಳುವಂತಿರಬೇಕು. ಈ ಕಾರ್ಯದಲ್ಲಿ ನಾವು ಹೊರತರುವ ಕೃತಿಗಳ ಸಂಖ್ಯೆ ಮುಖ್ಯವಲ್ಲ; ಗಾತ್ರ ಮುಖ್ಯವಲ್ಲ; ಗುಣ ಮುಖ್ಯ.

ಕನ್ನಡ ಅಧ್ಯಯನ ಕೇಂದ್ರದ ಅಧ್ಯಾಪಕರು ಹಾಗೂ ಸಂಶೋಧನ ಸಹಾಯಕರು ಸೇರಿ ಸಿದ್ಧಪಡಿಸಿರುವ ಈ 'ಸಾಹಿತ್ಯ ವಾರ್ಷಿಕ 1975', ಕನ್ನಡದಲ್ಲಿ 1975 ರಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳನ್ನು ಕುರಿತ ವಿಮರ್ಶಾತ್ಮಕ ಸಮೀಕ್ಷೆಯಾಗಿದೆ. ವರ್ಷವರ್ಷವೂ ಈ ಬಗೆಯ 'ಸಾಹಿತ್ಯ ವಾರ್ಷಿಕ'ವನ್ನು ಸಿದ್ಧಗೊಳಿಸಿ ಪ್ರಕಟಿಸುವ ಈ ಯೋಜನೆ, ಕನ್ನಡ ಸಾಹಿತ್ಯ ವಿಮರ್ಶೆಯ ಬೆಳವಣಿಗೆಯಲ್ಲಿ ಮೌಲಿಕವಾದ ಪಾತ್ರವನ್ನು ವಹಿಸುವುದೆಂಬ ನಂಬಿಕೆ ಇದೆ. ಈ ಕಾರ್ಯಕ್ಕಾಗಿ ಕನ್ನಡ ಅಧ್ಯಯನ ಕೇಂದ್ರವನ್ನು ಅಭಿನಂದಿಸುತ್ತೇನೆ.

ಎಚ್. ನರಸಿಂಹಯ್ಯ
ಉಪ ಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ಮುನ್ನುಡಿ

ಸಾಹಿತ್ಯ ವಾರ್ಷಿಕ 1975

ಇದು 1975ನೆಯ ಸಾಲಿನಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳ ಒಂದು ವಿಮರ್ಶಾತ್ಮಕ ಸಮೀಕ್ಷೆ. ಇದನ್ನು ನಡೆಯಿಸಿದವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಅಧ್ಯಾಪಕರು ಮತ್ತು ಸಂಶೋಧನ ಸಹಾಯಕರು. ಇದೊಂದು ಸಾಮೂಹಿಕ ಪ್ರಯತ್ನ. ಈ ಪ್ರಯತ್ನ ಪ್ರತಿವರ್ಷವೂ ಮುಂದುವರಿಯುತ್ತದೆ. ಈಗಾಗಲೇ 'ಸಾಹಿತ್ಯ ವಾರ್ಷಿಕ 1976' ಸಿದ್ಧವಾಗುತ್ತಿದೆ. ಹೀಗೆ ಪ್ರತಿವರ್ಷವೂ ಕನ್ನಡದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಪ್ರಕಟವಾಗುವ ಕೃತಿಗಳ ವಿಮರ್ಶಾತ್ಮಕ ಸಮೀಕ್ಷೆಯನ್ನು ಸಿದ್ಧಪಡಿಸಿ ಪ್ರಕಟಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇದು ಸುಲಭವಾದ ಕಾರ್ಯವೇನಲ್ಲ. ಬಹು ಸಂಖ್ಯೆಯಲ್ಲಿ ವರ್ಷವರ್ಷವೂ ಪ್ರಕಟವಾಗುವ ಸಾಹಿತ್ಯ ಕೃತಿಗಳ ಜಾಡು ಹಿಡಿದು ಗುರುತಿಸುವುದು, ಅನಂತರ ಅವುಗಳನ್ನೆಲ್ಲ ಒಂದೆಡೆ ಕೂಡಿಸಿಕೊಳ್ಳುವುದು ಮೊದಲನೆಯ ಕಷ್ಟ. ಅವುಗಳನ್ನು ತೀರಾ ಮುಖಾಮುಖಿ ನಿಂತು ವಿಮರ್ಶಿಸುವುದು ಎರಡನೆಯ ಕಷ್ಟ. ಕೃತಿಗಳಿಗೆ ಕೃತಿಕಾರರಿಗೆ ತೀರಾ ಸಮೀಪದಲ್ಲಿಯೇ ನಿಂತು, ಅಂದಂದಿನ ಕೃತಿಗಳನ್ನು ಅಂದಂದೇ ವಿಮರ್ಶಿಸುತ್ತೇವೆಂದು ಹೊರಡುವುದೂ ಪ್ರಿಯವಾದ ಕಾರ್ಯವೇನಲ್ಲ. ಆದರೂ ಅಗತ್ಯವಾಗಿ ಮಾಡಬೇಕಾದ ಕಾರ್ಯ; ತಪ್ಪೋ ಒಪ್ಪೋ ಯಾರಾದರೂ ಮಾಡಲೇಬೇಕಾದ ಕಾರ್ಯ. ಅದನ್ನು ನಾವು ಮಾಡಲು ಹೊರಟಿದ್ದೇವೆ. ನಾವು ಹೊರಟಿರುವ ಉದ್ದೇಶ ಒಳ್ಳೆಯದು—ಎಂಬುದೇ ನಮ್ಮ ಬೆಂಬಲಕ್ಕೆ ಇರುವ ಧೈರ್ಯ.

ಇದು ಆಯಾವರ್ಷ ಪ್ರಕಟವಾಗುವ ಪುಸ್ತಕಗಳನ್ನು ಪಟ್ಟಿಮಾಡುವ ಅಥವಾ ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸುವ ಪ್ರಾಥಮಿಕ ನೆಲೆಯಲ್ಲಿ ಪರ್ಯವಸಾನವಾಗುವ ಸ್ವರೂಪದ್ದಲ್ಲ; ಆಗಲೇ ಹೇಳಿರುವಂತೆ ಆಯಾವರ್ಷದ ಸಾಹಿತ್ಯ ಕೃತಿಗಳನ್ನು ಸಮೀಕ್ಷಿಸುವ ಸ್ವರೂಪದ್ದು. ಇಲ್ಲಿರುವ ಒಂದೊಂದು ಸಾಹಿತ್ಯಪ್ರಕಾರದ ಪರಿಶೀಲನೆಯಲ್ಲಿ ಆಯಾ ಲೇಖಕರ ಪರಿಮಿತಿಗಳನ್ನು, ಪರಿಶೀಲನಾ ಸಾಮರ್ಥ್ಯದ ತರತಮಗಳನ್ನೂ ಓದುಗರು ಗುರುತಿಸಬಹುದು. ಆಯಾ ವಿಭಾಗದ ಸಮೀಕ್ಷೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರು ಜವಾಬ್ದಾರರು.

ನಾಳೆ, ಕನ್ನಡದಲ್ಲಿ ಯಾವುದೇ ಒಂದು ಸಾಹಿತ್ಯ ಪ್ರಕಾರವನ್ನು ಕುರಿತು ಕೆಲಸಮಾಡಲು ತೊಡಗುವವರಿಗೆ ಈ 'ಸಾಹಿತ್ಯ ವಾರ್ಷಿಕ'ಗಳಿಂದಾಗುವ ಪ್ರಯೋಜನ ಅಷ್ಟಿಷ್ಟಲ್ಲ. ಯಾವ ಯಾವ ವರ್ಷ ಕನ್ನಡದಲ್ಲಿ ಏನೇನು ಕೃತಿಗಳು ಪ್ರಕಟವಾಗಿವೆ, ಸಾಹಿತ್ಯದ ಯಾವ ಯಾವ ಪ್ರಕಾರಗಳಲ್ಲಿ ಏನೇನು ಕೆಲಸ ನಡೆದಿದೆ, ಯಾವ ದೃಷ್ಟಿಧೋರಣೆಗಳು ಅವುಗಳ ಹಿನ್ನೆಲೆಗಿವೆ ಎಂಬುದು ನಾಳಿನ ವಿಮರ್ಶಕರಿಗೆ ಹಾಗೂ ಸಂಶೋಧಕರಿಗೆ ಮೂಲಭೂತ ಸಾಮಗ್ರಿಯಾಗಿ ಇದರಿಂದ ಒದಗುತ್ತದೆ. ಹಾಗೆಯೆ ಪ್ರತಿಯೊಂದು ವರ್ಷದ ಸಾಹಿತ್ಯದ ಸಾಧನೆಗಳನ್ನು ತೌಲನಿಕವಾಗಿ ಅಭ್ಯಯನ ಮಾಡುವವರ ಪಾಲಿಗೆ ಮತ್ತು ಸಾಹಿತ್ಯ ಚರಿತ್ರೆಯ ಲೇಖಕನಿಗೆ ಇದೊಂದು ಋಣದ ಗಣಿಯಾಗುವುದರಲ್ಲಿ ಸಂದೇಹವಿಲ್ಲ.

ಈ ಕಾರ್ಯದಲ್ಲಿ ನಾವು ಕೇವಲ ಸಾಹಿತ್ಯ ಸಂಬಂಧಿಯಾದ ಕೃತಿಗಳನ್ನು ಮಾತ್ರ, ಅದರಲ್ಲೂ 1975ರಲ್ಲಿ ಮೊದಲ ಮುದ್ರಣವನ್ನು ಕಂಡ ಕೃತಿಗಳನ್ನು ಮಾತ್ರ ಪರಿಶೀಲನೆಗೆ ಎತ್ತಿಕೊಂಡಿದ್ದೇವೆ. ಕನ್ನಡದಲ್ಲಿ ಪ್ರಕಟವಾಗುವ ವೈಜ್ಞಾನಿಕ, ಮಾನವಿಕ, ಶೈಕ್ಷಣಿಕ ಇತ್ಯಾದಿ ಬೇರೆ ಬೇರೆ ವಿಷಯಗಳನ್ನು ಪರಿಗಣಿಸಿಲ್ಲ ಅದಕ್ಕೆ ಕಾರಣ, ಈ ಕಾರ್ಯದಲ್ಲಿ ತೊಡಗಿರುವ ನಮಗೆ ಸಾಹಿತ್ಯೇತರ ವಿಷಯಗಳನ್ನು ಕುರಿತು ಪರಿಶೀಲಿಸಲು ಅಥವಾ ವಿಮರ್ಶಿಸಲು ಸಾಮರ್ಥ್ಯವಾಗಲಿ, ಅಧಿಕಾರವಾಗಲಿ ಇಲ್ಲ. ಹೀಗಾಗಿ ಕೇವಲ ಸಾಹಿತ್ಯ ಸಂಬಂಧಿಯಾದ ಕೃತಿಗಳ ಪರಿಶೀಲನೆಯನ್ನು ಈ 'ಸಾಹಿತ್ಯ ವಾರ್ಷಿಕ'ದಲ್ಲಿ ಕಾಣಬಹುದು. ಹಾಗೆಯೇ ಇಲ್ಲಿ 1975ರಲ್ಲಿ ಪ್ರಕಟವಾದ ಎಲ್ಲ ಸಾಹಿತ್ಯ

ಸಂಬಂಧಿಯಾದ ಕೃತಿಗಳನ್ನೂ ಗಮನಿಸಿದ್ದೇವೆ ಎಂದು ಹೇಳುವ ಧೈರ್ಯವಿಲ್ಲ. ಯಾಕೆಂದರೆ, ಆಯಾವರ್ಷ ಪ್ರಕಟವಾದ ಸಮಸ್ತ ಸಾಹಿತ್ಯ ಕೃತಿಗಳನ್ನು ಸಕಾಲದಲ್ಲಿ ಗುರುತಿಸಿ ಒಂದೆಡೆ ಕೂಡಿಸುವ ವ್ಯವಸ್ಥೆ ಸಾಧ್ಯವಾಗುತ್ತಿಲ್ಲ. ಅಲ್ಲದೆ 1975ರಲ್ಲಿ ಪ್ರಕಟವಾದ ಎಷ್ಟೋ ಕೃತಿಗಳು 1976ರ ವರ್ಷಾಂತ್ಯದವರೆಗೂ ಕಾರಣಾಂತರದಿಂದ ಕಾಣಲು ದೊರೆಯುವುದಿಲ್ಲ. ಆದರೂ ವಿಶ್ವವಿದ್ಯಾಲಯದ ಗ್ರಂಥಭಂಡಾರದ ಅಧಿಕಾರಿಗಳು ನಮಗೆ ಒತ್ತಾಸೆಯಾಗಿ ನಿಂತು ಸಾಧ್ಯ ವಾದಷ್ಟು ಮಟ್ಟಿಗೆ ಆಯಾ ವರ್ಷ ಪ್ರಕಟವಾಗುವ ಕೃತಿಗಳನ್ನು ದೊರಕಿಸಿ ಕೊಟ್ಟಿದ್ದಾರೆ. ನಮ್ಮ ಕೋರಿಕೆಯ ಮೇಲೆ ಪ್ರಜಾವಾಣಿ ಹಾಗೂ ಸುಧಾ ಪತ್ರಿಕೆಯವರು ಪ್ರತಿವಾರದ 'ಸಾದರ ಸ್ವೀಕಾರ' ವಿಭಾಗದಲ್ಲಿ, ಸ್ವೀಕಾರವಾದ ಕೃತಿಗಳು ಪ್ರಕಟವಾದ ವರ್ಷವನ್ನು ಕಾಣಿಸಿ ಈ ಒಂದು ಯೋಜನೆ ಯಲ್ಲಿ ಸಹಕರಿಸಿದ್ದಾರೆ. ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಆಗಾಗ ಬಂದ ಪುಸ್ತಕ ವಿಮರ್ಶೆಯೂ ಸಹ ನಮ್ಮ ಈ ಪರಿಶೀಲನೆಗೆ ನೆರವಾಗಿದೆ. ಹೀಗೆ ಲೇಖಕರ, ಪ್ರಕಾಶಕರ, ವಿಮರ್ಶಕರ, ಪತ್ರಿಕೆಗಳ ಮತ್ತು ಗ್ರಂಥಭಂಡಾರದ ನಿರಂತರ ಸಹಕಾರದಿಂದ ಮಾತ್ರ ಇಂಥ ಯೋಜನೆ ಯಶಸ್ವಿ ಯಾಗುವ ಸಾಧ್ಯತೆಗಳಿವೆ.

ನಮಗೆ ತಿಳಿದಮಟ್ಟಿಗೆ, 'ಸಾಹಿತ್ಯ ವಾರ್ಷಿಕ'ದಂಥ ಯೋಜನೆಯನ್ನು ಬಹುಶಃ ಯಾವ ಒಂದು ಭಾರತೀಯ ವಿಶ್ವವಿದ್ಯಾಲಯವೂ ಕೈಕೊಂಡಂತೆ ತೋರುವುದಿಲ್ಲ. ಕನ್ನಡ ವಿಮರ್ಶೆಯ ಬೆಳವಣಿಗೆಯಲ್ಲಿ ಕನ್ನಡ ಅಧ್ಯಯನ ಕೇಂದ್ರವು ಸಕ್ರಿಯವಾಗಿ ಪಾಲುಗೊಳ್ಳುವ ಒಂದು ಅವಕಾಶ ವನ್ನು ಈ ಯೋಜನೆ ಒದಗಿಸಿದೆ ಎಂದು ನಾವು ಭಾವಿಸಿದ್ದೇವೆ.

ಈ ವರ್ಷದ ಸಂಪುಟದಲ್ಲಿಯೂ ಇತರ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿಗಳ ಸಮೀಕ್ಷೆ, ಪ್ರತಿಯೊಂದು ವಿಷಯ ವಿಭಾಗದ ಕೊನೆಯಲ್ಲಿ ಬರುವಂತೆ ನೋಡಿಕೊಳ್ಳಲಾಗಿದೆ.

ಇದುವರೆಗೂ ಪ್ರಕಟವಾದ 'ಸಾಹಿತ್ಯ ವಾರ್ಷಿಕ'ಗಳನ್ನು ಓದಿ, ತುಂಬ ವಿಶ್ವಾಸದಿಂದ ಹಲ ವರು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸಂಪುಟದಿಂದ ಸಂಪುಟಕ್ಕೆ ಆಗುತ್ತಿರುವ ಸೂಕ್ತವಾದ ತಿದ್ದುಪಡಿ ಮತ್ತು ಮಾರ್ಪಾಡುಗಳು ಇಂಥ ಸಲಹೆಗಳ ಪರಿಣಾಮ.

ಇಂತಹ ಒಂದು ಯೋಜನೆಯನ್ನು ನಿರಾತಂಕವಾಗಿ ನಡೆಸಿಕೊಂಡು ಹೋಗಲು ಎಲ್ಲ ಅನು ಕೂಲಗಳನ್ನು ಕಲ್ಪಿಸಿದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ, ಈ ಪ್ರಯತ್ನದ ಜತೆಜತೆಯಾಗಿ ನಿಂತು ಸಹಕರಿಸುತ್ತಿರುವ ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಭಂಡಾರದ ಅಧಿಕಾರವರ್ಗಕ್ಕೆ ಮತ್ತು ಶ್ರೀ. ಪಿ. ಸದಾಶಿವಮೂರ್ತಿ ಅವರಿಗೆ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪರಿಶೀಲಿಸುವ ಕ್ರಮ ತೆಗೆದುಕೊಂಡು ಕನ್ನಡ ಅಧ್ಯಯನ ಕೇಂದ್ರದ ನನ್ನ ಸಹೋದ್ಯೋಗಿ ಮಿತ್ರರಿಗೆ, ಈ ಕೃತಿಯ ಪ್ರಕಟಣೆಯ ಹೊಣೆಯನ್ನು ಉತ್ಸಾಹದಿಂದ ಹೊತ್ತ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಹೆಚ್. ಆರ್. ದಾಸೇಗೌಡ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಜಿ. ಎಸ್. ಶಿವರುದ್ರಪ್ಪ
ನಿರ್ದೇಶಕರು
ಕನ್ನಡ ಅಧ್ಯಯನ ಕೇಂದ್ರ

ಪರಿವಿಡಿ

ಕಾವ್ಯ

ಕಾಳೇಗೌಡ ನಾಗವಾರ

೧೯೭೫ ರ ಕಾವ್ಯವನ್ನು ವಿಮರ್ಶೆಗೆ ಎತ್ತಿಕೊಳ್ಳುವ ಮೊದಲು ನನ್ನ ಈ ಬರಹದ ಸ್ವರೂಪವನ್ನು ಕುರಿತು ಆರಂಭದಲ್ಲಿಯೇ ಹೇಳಬೇಕಾದ ಕೆಲವು ಮಾತುಗಳಿವೆ ; ಇವು ಕಳೆದ ವರ್ಷಕೂಡ ಇದೇ ಸಂದರ್ಭದಲ್ಲಿ ಹೇಳಲಾಗಿದ್ದವುಗಳು :

(i) ಬಿಡಿಬಿಡಿ ಕವನ ಸಂಕಲನಗಳ ಪೂರ್ಣ ವಿಮರ್ಶೆ ಇಲ್ಲಿ ಸಾಧ್ಯವಿಲ್ಲ. ಆದ್ದರಿಂದ ಕವನ ಸಂಕಲನಗಳ ತಾತ್ವಿಕನೆಲೆ ಮತ್ತು ತಾಂತ್ರಿಕ ಯಶಸ್ಸುಗಳಿಗೆ ಸಂಬಂಧಿಸಿದಂತೆ ಹೇಳುವ ಮಾತುಗಳು ಬಹುಪಾಲು ತೀರ್ಮಾನ ಎನ್ನುವ ಹಾಗೆ ಕಾಣುತ್ತದೆ. ಜತೆಗೆ ಬಹಳ ಸಲ ಇದಕ್ಕೆ ಕವನ ಸಂಕಲನದಿಂದಲೇ ಸಾಕ್ಷಿ ಒದಗಿಸಲು ಸ್ಥಳ ಮಿತಿಯ ಕಾರಣದಿಂದ ಸಾಧ್ಯವಾಗಿಲ್ಲ ; ಆದರೂ ಸಾಧ್ಯವಾದಷ್ಟೂ ನಾನು ಹೇಳುವ ಮಾತುಗಳಿಗೆ ಆಧಾರವನ್ನು ಸಿದ್ಧಪಡಿಸಿದ್ದೇನೆ.

(ii) ಇನ್ನು ಪ್ರಸಿದ್ಧ—ಅಂದರೆ, ಕಾವ್ಯಮಾರ್ಗದಲ್ಲಿ ಈಗಾಗಲೇ ತಮ್ಮ ಸಾಧನೆಗಳಿಂದ ಸ್ಥಾನಗಳಿಸಿರುವ ಕವಿಗಳ ಸಂಕಲನಗಳನ್ನು ಅವರ ಒಟ್ಟು ಬೆಳವಣಿಗೆಯ ಹಿನ್ನಲೆಯಲ್ಲಿಯೇ ನೋಡಿದ್ದೇನೆ. ಅಂಥ ಕಡೆಗಳಲ್ಲಿ ಆ ನಿರ್ದಿಷ್ಟ ಕವನ ಸಂಕಲನದ ಬಗ್ಗೆ ವಿವೇಚನೆ ಕಡಿಮೆ ಆಗಿರುವ ಸಾಧ್ಯತೆ ಕೂಡಾ ಇದೆ.

(iii) ಈ ಕವನ ಸಂಕಲನಗಳು ಹೇಳುವ ಸಾಂಸ್ಕೃತಿಕ ಧ್ವನಿ ಮತ್ತು ಅದಕ್ಕೆ ಇರುವ ಹಿನ್ನೆಲೆಗಳು ನನಗೆ ಹೆಚ್ಚು ಮುಖ್ಯವಾಗಿವೆ.

(iv) ಈ ತನಕದ ಕನ್ನಡ ಸಾಹಿತ್ಯದ ಪ್ರಮುಖ ಧೋರಣೆಗಳು, ಕನ್ನಡ ಜನಾಂಗದ ಜೀವನ ವಿಧಾನ ಮತ್ತು ಕಾವ್ಯದ ಸಾಂಸ್ಕೃತಿಕ ಧ್ವನಿ—ಈ ಮೂರರ ನಡುವಿನ ಸಂಬಂಧದ ಬಗ್ಗೆ ೭೫ ರ ಕನ್ನಡ ಕಾವ್ಯ ಏನು ಮಾಹಿತಿ ನೀಡುತ್ತಿದೆ ಎಂಬುದರ ಕಡೆಗೆ ನಾನು ಹೆಚ್ಚು ಗಮನ ಕೊಟ್ಟಿದ್ದೇನೆ.

ಇದನ್ನು ಬಯಸಿರಲಿಲ್ಲ (ಗೋಪಾಲಕೃಷ್ಣ ಅಡಿಗ) ಕನ್ನಡದ ಪ್ರಮುಖ ಕವಿಗಳಾದ ಗೋಪಾಲಕೃಷ್ಣ ಅಡಿಗರ ಸಂಕಲನ ಇದು. ೧೯೭೨-೭೪ ರ ಅವಧಿಯಲ್ಲಿ ಬರೆದ ಹತ್ತು ಕವನಗಳು ಇಲ್ಲಿವೆ.

ಅಡಿಗರ ಕಾವ್ಯಬಂಧ ಉಳಿದ ಸಮಕಾಲೀನ ಕನ್ನಡ ಕವಿಗಳಿಗಿಂತ ವಿಶಿಷ್ಟವಾದದ್ದು ; ಹಲವು ಹತ್ತು ದಿಕ್ಕಿನ ವ್ಯಾಪ್ತಿ ಇಲ್ಲದೆ, ಅವರ ಕಾವ್ಯದ ಪ್ರಖರತೆ ವ್ಯಕ್ತಿಗತವಾದದ್ದು. ಇದೇ ಕಾರಣಕ್ಕಾಗಿಯೇ ವಿಶಿಷ್ಟ ಆಳವನ್ನು ಗಳಿಸಿಕೊಂಡಿರುವಂಥದು. ವಾಸ್ತವವಾಗಿ ಅಡಿಗರ ಕಾವ್ಯ ಬೆಳವಣಿಗೆಯಲ್ಲಿ 'ಇದನ್ನು ಬಯಸಿರಲಿಲ್ಲ' ಕವನ ಸಂಕಲನಕ್ಕೆ ಮಹತ್ವದ ಸ್ಥಾನವೇನೂ ಇಲ್ಲ. ಜೀವನ ಸಾರ್ಥಕತೆಯನ್ನು ಪರಂಪರೆಯ ಉತ್ಕಟ ನೆನಪುಗಳಿಂದ, 'ಪುರಾತನ ಹಡಗು ವಿದ್ಯೆಗಳನ್ನು ಇಂದಿನ ಪರಿಗೆ ಜೋಡಿಸುವುದರಿಂದ'—ಸಾಧಿಸ ಬಯಸುವ ಶೋಧನೆಯೇ ಇಲ್ಲಿಯ ಕವನಗಳ ಮುಖ್ಯ ಕಾಳಜಿ. ಆ ಕಾಳಜಿ ಅಭಿವ್ಯಕ್ತಿಯಾಗಿರುವ ಕ್ರಮ ಕೂಡಾ ಹಳೆಯದೆ. ಅಡಿಗರು ತಮ್ಮ ಹಳೆಯ ಅರ್ಥವನ್ನು ಹಳೆಯ ಮಾತುಗಳಿಂದಲೇ ಹೊರಡಿಸುತ್ತಿದ್ದಾರೆ. ಜೀವನದ ಪರಸ್ಪರ ವೈಷಮ್ಯಗಳನ್ನು ತೊಡೆದು ಹಾಕಿ ಸಂಪೂರ್ಣತೆ ಸಾಧಿಸುವ ಹಠಕ್ಕಿಂತ, ಇವೆರಡನ್ನೂ ಒಪ್ಪಿಕೊಳ್ಳುವ ಯಥಾಸ್ಥಿತಿವಾದಿ ದೃಷ್ಟಿಕೋನ ಈ ಕೆಳಗಿನ ಸಾಲುಗಳಲ್ಲಿದೆ :

ನಾರುವುದು ಸೇಂದ್ರಿಯದ ಧರ್ಮ : ಅದನ್ನು ಸದಾಕಾಲವೂ
ತೊಳೆದೊರಸಿ ಗಂಧ ಹಚ್ಚಿ ಪರಿಮಳಗೊಳಿಸಿ
ಮಂದಾಸನದ ಮೇಲೆ ಇಟ್ಟು ಲೋಭಾನ ಊದಿನ ಕಡ್ಡಿ
ಹಚ್ಚಿ, ಕರ್ಪೂರದಾರತಿ ಬೆಳಗಿ, ಪ್ರತಿನಿತ್ಯ ಬೆಳಕುಗಳ
ಕರೆದಿಟ್ಟು ಪೂಜಿಸುವುದು ಅತೀಂದ್ರಿಯದ ಕರ್ಮ ; ಈ ಕರ್ಮ
ಧರ್ಮ ಸಂಯೋಗವೇ ಬದುಕು

ಜತೆಗೆ ಇಲ್ಲಿಯ ಮುಖ್ಯ ಕವನಗಳ ಬೆಳವಣಿಗೆಯ ಶೃಂಗಸ್ಥಿತಿ ವ್ಯಕ್ತವಾಗುವುದು ವೈದಿಕ ಮನೋಧರ್ಮದ ಕೇಂದ್ರಗಳಲ್ಲಿಯೇ.

'ದೆಹಲಿಯಲ್ಲಿ' ಕವನ ಮಾತ್ರ ಇಂಡಿಯಾದ ಸ್ವಾತಂತ್ರ್ಯೋತ್ತರ ಚರಿತ್ರೆಯ ವೈಷಮ್ಯಗಳನ್ನು ವ್ಯಾಖ್ಯಾನಿಸುವಂಥದು ; ನೌಕರಶಾಹೀ, ಅಧಿಕಾರಶಾಹಿಯ ಉನ್ಮತ್ತ ಕುಣಿತಗಳ, ಕರಾಳ ಸಂಚುಗಳ ಮಾರ್ಮಿಕ ಚಿತ್ರಣ ಇಲ್ಲಿದೆ. ವ್ಯಕ್ತಿಯ ಬದುಕಿನ ಮೇಲೆ ಇಂಥ ಕ್ರೂರ ಶಕ್ತಿಗಳು ಹೇರುತ್ತಿರುವ ಒತ್ತಾಯದ ಬಗ್ಗೆ ಕವಿಗೆ ಅಪಾರ ಕಾಳಜಿ ಇದೆ. ಆದರೆ ಈ ವಿಷಸ್ಥಿತಿಯಿಂದ ಪಾರಾಗಲು ಅಡಿಗರು ಹೇಳುವ ಮಾರ್ಗ ಈ ರೀತಿ ಇದೆ :

ಮೂಲ ಕತ್ತಲಿನಲ್ಲಿ ಮುಳುಗಿ ಹೋಗುತ್ತಿರುವ ಪರಂಪರಾಗತ ತಿಳಿವ
ನೆತ್ತುವುದು, ಎತ್ತಿ ಪುರಾತನ ಮಗುವ
ಇತ್ತಕಡೆ ಕರೆತಂದು ಅಂತರಂಗದಲ್ಲಿಟ್ಟು ಕಾಪಿಟ್ಟು
ಹೊಸಗಾಳಿಯಲ್ಲುಸುರುಬಿಟ್ಟು ನಡೆಯುವ ಹಾಗೆ
ಆಧುನಿಕಗೊಳಿಸುವುದು.

ಬಂಧದ ದೃಷ್ಟಿಯಿಂದ ಕೂಡಾ ಇದು ಗೊಂದಲಪುರ, ಹಿಮಗಿರಿಯ ಕಂದರಗಳ ಪುನರಾವರ್ತನೆ : ಅಡಿಗರು ರಿಪೀಟ್ ಆಗುತ್ತಿದ್ದಾರೆ, ಹೊಸ ಬಂಧಧ ಹೊಸ ಚಿಂತನೆಯ ಅನ್ವೇಷಣೆ ಸಾಧ್ಯವಾಗುತ್ತಿಲ್ಲ ಎನ್ನುವುದಕ್ಕೆ ಈ ಕವನ ಸಂಕಲನ ಸಾಕ್ಷಿ. ಆದರೂ ಅಡಿಗರೊಬ್ಬರೇ ಅಡಿಗರ ಹಾದಿಯಲ್ಲಿ ನಡೆದಿದ್ದಾರೆ. ಹೊಸ ಕಾವ್ಯಮಾರ್ಗದ ದೃಷ್ಟಿಯಿಂದ ಅಡಿಗರು ಅಪ್ರಸ್ತುತವಾಗಿ ಕಾಣುತ್ತಾರೆ ಎಂಬ ಅಂಶವನ್ನೂ ಸಹ ಈ ಕವನ ಸಂಕಲನ ಸಮರ್ಥಿಸುತ್ತದೆ.

ನನ್ನ-ನಿನ್ನ ನಡುವೆ (ಜಿ. ಎಸ್. ಶಿವರುದ್ರಪ್ಪ) ಶಿವರುದ್ರಪ್ಪನವರ ಆಯ್ದ ಕವನಗಳ ಸಂಗ್ರಹ ಇದು. ಇಲ್ಲಿ ವಸ್ತುವಿನ ದೃಷ್ಟಿಯಿಂದ, ಸಂವೇದನೆಯ ದೃಷ್ಟಿಯಿಂದ ಕವನಗಳನ್ನು ವಿಭಾಗಿಸಲಾಗಿದೆ. ವಾಸ್ತವವಾಗಿ ಗಂಭೀರ ಕಾವ್ಯಾಭ್ಯಾಸಿಗೆ ಈ ಥರದ ವಿಭಾಗೀಕರಣ ಕೊಂಚ ಗೊಂದಲವನ್ನುಂಟು ಮಾಡುತ್ತದೆ. ಏಕೆಂದರೆ ಕವಿಯ ಅಭಿವ್ಯಕ್ತಿ ಸಾಮರ್ಥ್ಯ—ಸಂವೇದನೆಯ ಆಯಾಮಗಳ ದೃಷ್ಟಿಯಿಂದ ಅನುಕ್ರಮ ವಿಭಾಗೀಕರಣವೇ ಹೆಚ್ಚು ಸಮಂಜಸವಾದದ್ದು. ಆಗ ಕವಿಯ 'ಬೆಳವಣಿಗೆ'ಯನ್ನು ಹೆಚ್ಚು ಖಚಿತವಾಗಿ ಗುರುತಿಸಬಹುದು ; ಮೌಲ್ಯಮಾಪನ ಮಾಡಬಹುದು.

ಶಿವರುದ್ರಪ್ಪನವರು ನವೋದಯ ಕಾವ್ಯ ಇನ್ನೂ ಶೃಂಗಸ್ಥಿತಿಯಲ್ಲಿರುವಾಗಲೇ ಕಾವ್ಯ ರಚನೆ ಪ್ರಾರಂಭಿಸಿದರು ; ನವೋದಯದ ಪ್ರಮುಖ ಧೋರಣೆಗಳ ಚೌಕಟ್ಟಿನಲ್ಲಿಯೇ ತಮ್ಮ ಅಭಿವ್ಯಕ್ತಿಯನ್ನೂ ರೂಪಿಸಿಕೊಂಡರು. ಈ ಸಂದರ್ಭದ ಕವನಗಳಲ್ಲಿ ಕುವೆಂಪು ಪುತಿನರವರ ಪ್ರಭಾವ ದಟ್ಟವಾಗಿದೆ. 'ಬದುಕಿನ ವೈಷಮ್ಯಗಳ ಕಡೆಗೆ ಕಣ್ಣು ಹಾಯಿಸದ ಸುಂದರ ಪ್ರಧಾನವಾದ, ವಿಸ್ಮಯ ಮೂಲವಾದ ಕಾವ್ಯ ಇದು' ಎಂಬ ಅಭಿಪ್ರಾಯ ಈ ಘಟ್ಟದ ಕಾವ್ಯವನ್ನು ಸಮರ್ಥವಾಗಿ ವಿವರಿಸುತ್ತದೆ.

ವಾಸ್ತವವಾಗಿ ಶಿವರುದ್ರಪ್ಪನವರು ಸ್ವಂತ ನುಡಿಗಟ್ಟನ್ನು ನಿರ್ಮಿಸಿಕೊಂಡಿದ್ದು ತಮ್ಮ 'ಕಾರ್ತೀಕ' ಸಂಕಲನದಿಂದ. ಆದರೆ ಜೀವನದ ಕ್ರೂರ ವೈಷಮ್ಯಗಳ ಸ್ಪಷ್ಟ ತಿಳಿವಿನ ಜತೆಗೇ 'ದೀಪದ

ಹೆಜ್ಜೆ' ಸಂಕಲನದಿಂದ ಅಪಾರ ಭರವಸೆ ಕಾಣಿಸಿಕೊಂಡಿತು. 'ಮುಂಬೈ ಜಾತಕ' 'ಸಂಜೆದಾರಿ', 'ಮಬ್ಬಿನಿಂದ ಮಬ್ಬಿಗೆ' ಮುಂತಾದ ಕವನಗಳು ಭರವಸೆ, ನಿರಾಶೆ ಇವೆರಡೂ ನಿಲುವುಗಳ ಅರ್ಥ ಪೂರ್ಣ ದ್ವಂದ್ವ, ಭಾಷೆಯ ಸಂಯಮ, ಪ್ರತಿಮೆ ರೂಪಕಗಳ ತೀವ್ರತೆ, ಮಂಡನಾಕ್ರಮ— ಇವೆಲ್ಲದರ ದೃಷ್ಟಿಯಿಂದ ಶ್ರೇಷ್ಠ ರಚನೆಗಳಾಗಿವೆ. ಇವು ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಪಡೆಯುತ್ತವೆ. ಇವಲ್ಲದೆ ಇನ್ನೂ ಕೆಲವು ಸಾರ್ಥಕ ರಚನೆಗಳಾದ 'ಹುಟ್ಟಿದ ಹಬ್ಬ' 'ಔತಣ' ಮುಂತಾದ ಕವನಗಳೂ ಇಲ್ಲಿವೆ. 'ಹುಟ್ಟಿದ ಹಬ್ಬ' ಕವನ ಜಿ. ಎಸ್. ಎಸ್ ಅವರ ದೃಷ್ಟಿಕೋನವನ್ನು ಯಶಸ್ವಿಯಾಗಿ ಹೇಳುತ್ತದೆ :

ನಾ ಬಂದೆ,
ಮೊದಲ ಸ್ಪಂದನದಿಂದೆ—
ಮುಂದೇನು ಎಂದೆ!
ಬಾಳ ಬೀದಿಯ ಬದಿಗೆ ಬೆಳ್ಗೊಳದ ಬೆಟ್ಟದಲಿ
ಗೊಮ್ಮಟನ ಕಂಡೆ ;
ಮುಗಿಲಗಲದೆಡೆಯಲ್ಲಿ ಚಿಕ್ಕೆಗಳ ದಂಡೆ !
ಚಂದ್ರಹಾಸದ ಮುಂದೆ
ಹಣತೆಯೊಲು ನಿಂದೆ

ವಿಡಂಬನೆಯನ್ನೇ ಪೂರ್ಣ ಪ್ರಮಾಣದ ನೆಲೆಯನ್ನಾಗಿರಿಸಿಕೊಂಡ ಕೆಲವು ಅರ್ಥಪೂರ್ಣ ವಿಡಂಬನೆಗಳೂ ಮತ್ತು 'ಜಡೆ', 'ಶಾರದೆ', 'ಸ್ತ್ರೀ', 'ಒಂದು ಕ್ಷಣ', 'ಸಂಜೆದಾರಿ' ಮುಂತಾದ ರಚನೆಗಳೂ ಇಲ್ಲಿವೆ. ಇವು ಜಿ. ಎಸ್. ಎಸ್ ನಡೆದುಬಂದ ದಾರಿಯನ್ನು ಹೇಳುತ್ತವೆ.

ಜಿ. ಎಸ್. ಎಸ್ ಕಾವ್ಯಬಂಧ ಕೆಲವೊಮ್ಮೆ ನವೋದಯ-ನವ್ಯ ಎರಡರ ಸಂಕೀರ್ಣತೆಯನ್ನು ಸರಳೀಕರಿಸಿಬಿಡುತ್ತದೆ : ಇವೆರಡೂ ಅಂಶಗಳ, ಧೋರಣೆಗಳ ಹೊಂದಾಣಿಕೆಯಿಂದಾಗಿ ಅಂಥ ಗಾಢ ಹುಡುಕಾಟದ ಬಂಧ ಸೃಷ್ಟಿಯಾಗುವುದಿಲ್ಲ. ಅವರ ಅತ್ಯುತ್ತಮ ರಚನೆಗಳು ಈ ಮಾತಿಗೆ ಹೊರತಾಗಿವೆ. ಕೆಲವೊಮ್ಮೆ ಅತ್ಯಂತ ನೋವಿನ, ಆತಂಕದ ದಾಖಲಾದರೆ—ಮತ್ತೊಮ್ಮೆ ಬರೀ ಸ್ವಗತದ ತೆಳು ಮಂಡನೆಯಾಗುತ್ತವೆ. ಆದರೆ 'ದುಃಸ್ವಪ್ನ' ದಂತಹ ಪದ್ಯದ ಬಂಧ ಮಾತ್ರ ವಿಶಿಷ್ಟ ಐಕ್ಯತೆಯನ್ನೂ ತೀವ್ರತೆಯನ್ನೂ ಸಾಧಿಸಿರುವಂಥದು. ಜಿ. ಎಸ್. ಎಸ್ ರವರ ಬೆಳವಣಿಗೆಯ ದೃಷ್ಟಿಯಿಂದ ಇದು ಮಹತ್ವದ ರಚನೆಯಾಗಿದೆ. ಕವನಗಳ ಆಯ್ಕೆ ಸಮರ್ಥ ವಾಗಿದೆಯಾದರೂ ಮೊದಲೇ ಹೇಳಿದಂತೆ ವಿಭಾಗೀಕರಣ ಕೇವಲ ಆಸ್ವಾದನೆಯ ಮಟ್ಟಕ್ಕೆ ಮಾತ್ರ ನಿಲ್ಲುವಂಥದ್ದು.

ಚಿರಂತನದಾಹ (ಚೆನ್ನವೀರ ಕಣವಿ) ಕಣವಿಯವರು ರೊಮ್ಯಾಂಟಿಕ್ ಚೌಕಟ್ಟಿನಲ್ಲಿಯೇ ವಿವಿಧ ರೀತಿಯ ಪ್ರಯೋಗಗಳನ್ನು ನಡೆಸುತ್ತ ಬಂದಿರುವ ಕವಿ ಎಂದು ಅವರ ಈ ಆಯ್ದ ಕವನಗಳ ಅಧ್ಯಯನದಿಂದ ಸಿದ್ಧವಾಗುತ್ತದೆ. ಇಲ್ಲಿ ರೊಮ್ಯಾಂಟಿಕ್ ಎಂದರೆ ಒಂದು ನಿರ್ದಿಷ್ಟ ಧೋರಣೆ, ಅನುಭವ, ಮಂಡನಾಕ್ರಮ ಎಂಬುದರ ಅರ್ಥದಲ್ಲಿ ನಾನು ಹೇಳಿದ್ದೇನೆ. 'ಕಾವ್ಯಾಕ್ಷಿ' ಮತ್ತು 'ಭಾವಜೀವಿ' ಯಿಂದ 'ನಗರದಲ್ಲಿ ನೆರಳು' ಸಂಕಲನದ ತನಕ ವಿವಿಧ ವಿನ್ಯಾಸಗಳನ್ನು ಸಾಧಿಸಿರು ವುದು ಒಂದೇ ಮೂಲಚೌಕಟ್ಟು ಎಂಬುದು ಖಚಿತವಾಗುತ್ತದೆ. ಅಡಿಗರ ಬೆಳವಣಿಗೆಯ ಜೊತೆ ಇದನ್ನು ಹೋಲಿಸಿದರೆ ಈ ಮಾತು ಇನ್ನೂ ಸ್ಪಷ್ಟವಾಗುತ್ತದೆ.

ಮೂಲತಃ ಕವಿ ಇಲ್ಲಿ ಹಾಡುಗಾರ ; ವಿಸ್ಮಯದಿಂದ, ಸಂತೋಷದಿಂದ ಕವಿ ಕಂಡದ್ದನ್ನು ವರ್ಣಿಸಬಲ್ಲ, ವಿವರ ವಿವರವಾಗಿ ಹೇಳಬಲ್ಲ. ಆದಕ್ಕೆ ಇಲ್ಲಿ ಮೊದಲ ಕವಿತೆಯಿಂದ ಕೊನೆಯ ಕವಿತೆಯ ತನಕ ಭಾಷೆಯ ದೃಷ್ಟಿಯಿಂದ 'ಲಿರಿಕಲ್' ಆದದ್ದೇ ಪ್ರಮುಖ ಆಕೃತಿಯಾಗಿ ಕಾಣಿಸಿ ಕೊಳ್ಳುತ್ತದೆ :

ಆಕಾಶ ಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯ ಹೊಂದೀಪ ಉದ್ದೀಪನಗೊಂಡು
ಬಾಳ ದ್ವೀಪ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡು ಹಾಡು

ಈ ಸಾಲುಗಳನ್ನು ಕಣವಿಯವರ ಕಾವ್ಯದ ಒಟ್ಟು ಮೆನಿಫೆಸ್ಟೊ ಎನ್ನಬಹುದು.

'ಎರಡು ದಡ', 'ಮಣ್ಣಿನ ವಾಸನೆ', 'ನಗರದಲ್ಲಿ ನೆರಳು' ಮುಂತಾದ ಕವನಗಳಲ್ಲಿ ಕಣವಿಯವರು ಅತ್ಯಂತ ಸೂಕ್ಷ್ಮವಾದ ಹಂತದಲ್ಲಿ ಅನುಭವದ ಬೆಲೆ ಕಟ್ಟುತ್ತಾರೆ. "ಭಾಷೆ ಅಂತರಂಗದ ಏಕಾಂತಿಕತೆ ಮತ್ತು ಸಾರ್ವಜನಿಕ ಜೀವನದ ತುಮುಲದ ನಡುವೆ ಸಮತೂಕವನ್ನು ಕಾಯುತ್ತದೆ" ಎನ್ನುವ ಕುರ್ತಕೋಟಿಯವರ ಮಾತಿನ ಅರ್ಥ ಸ್ಪಷ್ಟವಾಗುವುದು ಇಂಥ ಕಡೆಗಳಲ್ಲಿಯೇ. ಇಲ್ಲಿ ಸೂಕ್ಷ್ಮಾತಿಸೂಕ್ಷ್ಮ ಅರ್ಥ ಪದರುಗಳುಳ್ಳ ಸಾಲುಗಳು ಕವನದ ಒಟ್ಟು ಕ್ರಿಯೆಯನ್ನೇ ವಿವರಿಸುತ್ತವೆ; ಉದಾಹರಣೆಗೆ—

ಎರಡು ದಡಗಳ ನಡುವೆ ಹಾಯಿ ಬಿಚ್ಚಿವೆ ದೋಣಿ,
ಮುಳುಗಿ ಮಿನುಗಾಡುತಿವೆ ಮೀನು; ದೂರ ನೀಲ ಶ್ರೇಣಿ

ಕಣವಿಯವರ ಇನ್ನಷ್ಟು ವಿಡಂಬನಾ ರಚನೆಗಳನ್ನು ಸೇರಿಸಿದ್ದರೆ ಈ ಸಂಕಲನ ಹೆಚ್ಚು ಸಮಗ್ರ ವಾಗುತ್ತಿತ್ತು. ಕವಿಯ ಸೃಷ್ಟಿಶೀಲ ಪ್ರಜ್ಞೆಯು ಪ್ರತಿಕ್ರಿಯಿಸುವ ವೈವಿಧ್ಯತೆಗಳ ಪರಿಚಯವೂ ಆಗುತ್ತಿತ್ತು.

'ನನ್ನ-ನಿನ್ನ ನಡುವೆ', ಮತ್ತು 'ಚಿರಂತನ ದಾಹ' ಅನೇಕ ದೃಷ್ಟಿಯಿಂದ ವಿಶಿಷ್ಟವಾದವುಗಳು. ಕಣವಿ ಮತ್ತು ಜಿ.ಎಸ್.ಎಸ್ ರವರನ್ನು ಒಟ್ಟಿಗೇ ಹೇಳುವ ಹಾಗೂ ಇವರಿಬ್ಬರನ್ನೂ ಸಮನ್ವಯ ಮಾರ್ಗದ ಕವಿಗಳೆಂದು ಕರೆಯುವ ರೂಢಿ ನಮ್ಮಲ್ಲಿದೆ. ಆದರೆ ಈ ಎರಡೂ ಸಂಕಲನಗಳನ್ನು ಓದಿದಾಗ ಸಮನ್ವಯ ಎಂಬ ಯಾವ ಕಾವ್ಯಮಾರ್ಗವೂ ಕನ್ನಡದಲ್ಲಿ ಇಲ್ಲ ಎನಿಸುತ್ತದೆ. ಏಕೆಂದರೆ ಇವರಿಬ್ಬರ ಕಾವ್ಯಸೃಷ್ಟಿಯ ಹಿಂದಿನ ಕಂಪನಗಳು, ಪರಿಣಾಮಗಳು ಪೂರ್ಣವಾಗಿ ಬೇರೆ ಬೇರೆ; ಸಾಮ್ಯಕ್ಕಿಂತ ಭಿನ್ನತೆಯೇ ಇವರಿಬ್ಬರಲ್ಲಿ ಹೆಚ್ಚು ಎಂಬುದು ಸ್ಪಷ್ಟವಾಗುತ್ತದೆ.

ಹೊಲೆಮಾದಿಗರ ಹಾಡು (ಸಿದ್ಧಲಿಂಗಯ್ಯ) ಸಿದ್ಧಲಿಂಗಯ್ಯನವರ ಇಪ್ಪತ್ತು ಕವನಗಳ ಈ ಮೊದಲ ಸಂಕಲನ, ಕನ್ನಡ ಬರವಣಿಗೆಗೆ ಅರ್ಥಪೂರ್ಣವಾದ ಹೊಸದಿಕ್ಕನ್ನು ತೋರಿಸಿಕೊಟ್ಟ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ತನ್ನೆಲ್ಲ ನೋವು ಹಾಗೂ ಚಾರಿತ್ರಿಕವಾದ ದೀರ್ಘಕಾಲದ ಸುಲಿಗೆಯ ಪೂರ್ಣ ಕಥನವನ್ನು ಥಟ್ಟನೆ ವ್ಯವಸ್ಥೆಯ ಮುಖಕ್ಕೆ ಒಡ್ಡಿ ಹೇಳುವ ರೊಚ್ಚು ಮತ್ತು ಎದೆಗಾರಿಕೆಯ ಸಂಕೇತವಾಗಿ ಈ ಸಂಕಲನದ ಶೀರ್ಷಿಕೆಯೂ ಕಾಣಿಸಿಕೊಂಡಿದೆ. ಓದುವ ಕಣ್ಣು, ಕೇಳುವ ಕಿವಿ, ತಿಳಿಯುವ ಮನಸ್ಸುಗಳನ್ನು ಸಮುದಾಯದ ಮಟ್ಟದಲ್ಲಿ ದಟ್ಟವಾಗಿ ಸೆರೆಹಿಡಿಯಬಲ್ಲ ಇಲ್ಲಿನ ಕವನಗಳ ಅನೇಕ ಸಾಲುಗಳಿಗೆ ಅತ್ಯಪೂರ್ವವಾದ ಚೈತನ್ಯವಿದೆ:

(i) ದಯಾ ತುಂಬಿರೋ ನಿಮ್ ಕ್ವಲೆಗಡುಕ್ತನ
ನಯಾ ತುಂಬಿರೋ ನಿಮ್ ಮಾತ್‌ಗಾರ್ಕೆ
ತಳಗೈಲ್ಲ ಕ್ವಳ್ತು ಹುಳಾ ತುಂಬಿರೋ ನೀವು
ಏನೂ ಬ್ಯಾಡ
ತೋಡಿರೋ ಗುಂಡಿಗ್ ನನ್ ಓಡಾಕ್ ಬುಡಿ
ಇಕ್ಕಿರೊ ಬೆಂಕೀಗ್ ನನ್ ಬೀಳಾಕ್ ಬುಡಿ
ನನ್ ಮಯ್ಯಾಗಿನ ಬಾಡ ಇಸ್ಟಿಸ್ಟೇ ಕಿತ್

ತಿನ್‌ಬ್ಯಾಡಿ, ನಾ ಜೀಮೂತವಾಹನ ಅಲ್ಲ
ಏ ಗಳ್ಡಗಳಾ

(ii) ದೇವ್ರು ದಿಂಡ್ರುಗ್ ಕಡ್ಡಿ ಹಚ್ಚಿ
ಸಾಕಾಗೋಯ್ತುಪ್ಪ
ನನ್ ಮಗ್ನವ್ ಹಂಗೇ ಕುಂತವೆ
ಉಸ್ರೇ ವಂಡಲ್ಲ

(iii) ಶಂಕರಾತ್ರಿ ಹಬ್ಬದೊಳಗೆ ಬೆಂಕಿಮ್ಯಾಲೆ ಹಾರಬೇಕು
ತಿಗವ ತೊಳೆಯದಿದ್ದರೂನೆ ಕೊಂಬಿಗೆಲ್ಲ ಹೂವ ಸಿಗಿಸಿ
ತಳ್ಳುತಾರಲ್ಲೊ ಬೆಂಕಿಗೆ ತಳ್ಳುತಾರಲ್ಲೊ

(iv) ನೆಲನೆಲದಲಿ ಜಲವುಕ್ಕಿಸಿ।ಬೆಳ್ಳಿಯ ಬೆಳೆ ತೆಗೆದವರೆ
ದುಡಿದು ದುಡಿದು ಧೂಳಾದವರೆ।ಹಸಿವನುಂಡ ಜನಗಳೆ
ಮುತ್ತಿನ ಮಳೆ ಹುಯ್ಯುವಾಗ।ಸಿಡಿಲು ಬಡಿದು ಸತ್ತವರೆ....
ಯಜಮಾನರ ಬೆತ್ತಗಳಿಗೆ।ಭುಜ ಬೆನ್ನನು ತೆತ್ತವರೆ
ಬಂದೂಕದ ತುದಿಗೆದೆಯನು|ಒಡ್ಡುವವರೆ ಬನ್ನಿ

'ನನ್ನ ಜನಗಳು,' 'ಒಂದು ಮೂಳೆಯ ಹಾಡು,' 'ಒಂದು ಪದ' 'ಸತ್ತೋಗೋರಾ', 'ಗಳ್ಡಗಳು', 'ಅಡಗೂಲಜ್ಜಿಯಕಥೆ', 'ನಗ್ಬೇಕು,' 'ಒಂದು ದನದ ಪದ' ಮತ್ತು 'ಹಾವುಗಳೇ ಕಚ್ಚಿ' ಈ ಸಂಕಲನದ ಅತ್ಯುತ್ತಮ ಕವನಗಳಾಗಿವೆ. ಮಾನವೀಯ ದೃಷ್ಟಿಯಲ್ಲಿ ಬದುಕನ್ನು ನೋಡುವ ಹಟ ಮತ್ತು ಜೀವಂತವಾದ ಭಾಷೆ ಇವುಗಳಲ್ಲಿ ಕಾಣುವ ಪ್ರಧಾನ ಗುಣಗಳು.

ಅಸಂಖ್ಯ ಬಡಕನ್ನಡಿಗರನ್ನು ಒಳಗೊಂಡ ಕರ್ನಾಟಕದ ಅಂತರಂಗದ ಬಗ್ಗೆ ಕುರುಡಾಗಿ ಭಾವುಕ ಗತ್ತುಗಳಲ್ಲಿ ಕನ್ನಡಮ್ಮನನ್ನು ಹಾಡಿ ಹೊಗಳುವ ಜನಗಳ ಕಣ್ಣು ತೆರೆಸಲು ಕಾರಣವಾಗುವ ಕವನ 'ಕನ್ನಡವ್ವನಿಗೆ.' ಈ ತಾಯಿಯ ಚಾರಿತ್ರ್ಯ ಹೀಗೂ ಇದೆಯಲ್ಲ ಎಂದು ಸಿದ್ಧಲಿಂಗಯ್ಯ ಕನ್ನಡಿಗರ ಬೆನ್ನು, ಮುಖಗಳ ಪರಿಚಯವನ್ನು ಒದಗಿಸುತ್ತಾರೆ :

ರೈತರ ಬೆವರ ನೆಕ್ಕಿ ನೆಕ್ಕೂದಿದ
ಜಮೀನುದಾರರ ಜೊತೆಗಾತಿ
ಕಾರ್ಮಿಕರ ರಕ್ತದ ರವೆವುಂಡೆಯ ಉಂಡು ಕಾರಿನ
ಹಾರನ್ನಿನಂತೆ ತೇಗುವ ಮಾಲೀಕರ ಮಿಂಡಗಾತಿ

ಇದೇ ರೀತಿಯಲ್ಲಿ 'ಅಂಬೇಡ್ಕರ್' ಕವನವೂ ಕೂಡ ತುಂಬಾ ಕುತೂಹಲಕಾರಿಯಾಗಿದೆ. ಡಾ॥ ಅಂಬೇಡ್ಕರ್ ಹೋರಾಟ, ಸಾಧನೆಗಳ ಹಿನ್ನಲೆಯಲ್ಲಿ ಅವರ ಸಣ್ಣ ಪುಟ್ಟ ಮಿತಿಗಳನ್ನೂ ಮರೆಯದಂತೆ ದಾಖಲುಗೊಳಿಸಿರುವ ಎಚ್ಚರ ಈ ಕವಿಯ ರಕ್ತದ ಮುಖ್ಯಗುಣವನ್ನು ತಿಳಿಸುತ್ತದೆ. ನಾಡಿನಾದ್ಯಂತ ಚಿಂತನಶೀಲ ಸಾಹಿತ್ಯಾಭ್ಯಾಸಿಗಳೆಲ್ಲರ ಗಮನವನ್ನು ಸೆಳೆದ 'ಹೊಲೆಮಾದಿಗರ ಹಾಡು' ಚಾರಿತ್ರಿಕವಾಗಿ ಕೂಡ ಕನ್ನಡ ಕಾವ್ಯ ಮಾರ್ಗದಲ್ಲಿ ಹೊಸ ಆಶೆ, ಭರವಸೆಗಳನ್ನು ಮೂಡಿಸಿದ ಮುಖ್ಯಕೃತಿಯಾಗಿದೆ. ಕಲಾತ್ಮಕವಾದ ಅಂಶಗಳ ಕಡೆಗೂ ಹೆಚ್ಚಿನ ಗಮನವನ್ನು ಕೊಟ್ಟು ಇನ್ನೂ ಸ್ಥಿರವಾದ ವೈಚಾರಿಕ ನಿಲುವುಗಳೊಂದಿಗೆ ಸಿದ್ಧಲಿಂಗಯ್ಯ ಬೆಳೆಯಬಲ್ಲರು-ಎಂಬ ಹಾರೈಕೆಗೆ ತಕ್ಕ ಸಾಕ್ಷ್ಯಗಳನ್ನು ಅವರ ಈ ಮೊದಲ ಸಂಕಲನವೇ ಒದಗಿಸಿದೆ.

ಇರುತ್ತವೆ (ಬಿ. ವಿಜಯ) ಈ ವರ್ಷದ ಸಂಕಲನಗಳಲ್ಲಿ ಇದು ವಿಶಿಷ್ಟವಾದದ್ದು. ಒಂದು ಹೆಣ್ಣು ರಚಿಸಿದ್ದು ಎಂಬುದೊಂದೇ ಇದರ ವಿಶಿಷ್ಟತೆಗೆ, ಸಾಫಲ್ಯತೆಗೆ ಕಾರಣವಲ್ಲ. ಅಸಮಾನತೆಯ

ಮೇಲೆ ನಿಂತಿರುವ ಸಮಾಜವ್ಯವಸ್ಥೆಯುಳ್ಳ ನಮ್ಮ ದೇಶದಲ್ಲಿ ಹೆಣ್ಣಿನ ಸ್ಥಿತಿಯ ಬಗ್ಗೆ ಆಂಶಿಕ ಎಚ್ಚರ ಸಾಧಿಸಿರುವ ಪ್ರಜ್ಞೆಯೊಂದು ಈ ಎಲ್ಲಾ ರಚನೆಗಳ ಹಿಂದೆ ಚುರುಕಾಗಿ ಕೆಲಸ ಮಾಡುತ್ತದೆ. ಹೆಣ್ಣಿನ ಸಾಮಾಜಿಕ-ಭಾವುಕ ಸ್ಥಿತಿಗತಿಗಳೇ ಇಲ್ಲಿಯ ಎಲ್ಲ ಕವನಗಳ ವಸ್ತು. ಈ ಕೃತಿಯು ಹಿಂದಿರುವ ಪ್ರಜ್ಞೆಯು ಎಚ್ಚರ ಆಂಶಿಕವಾದದ್ದೇಕೆಂದರೆ, ಆರ್ಥಿಕ ಸ್ವಾತಂತ್ರ್ಯದ ದೃಷ್ಟಿಯಿಂದ ತುಳಿತಕ್ಕೊಳಗಾದ ಗಂಡು-ಹೆಣ್ಣಿನ ವಿಮೋಚನೆ ಒಟ್ಟಿಗೇ ನಡೆಯುತ್ತದೆ ಎಂಬ ತಿಳಿವು ಇಲ್ಲಿ ಕಾಣುವುದಿಲ್ಲ. ಆದ್ದರಿಂದ ಇಲ್ಲಿಯ ನಿಲವು ಇನ್ನಷ್ಟು ಅರ್ಥಪೂರ್ಣ ತಾತ್ವಿಕ ಆಯಾಮ ಗಳಿಸಿಕೊಳ್ಳಬೇಕಾದ ಅನಿವಾರ್ಯತೆ ಕಾಣುತ್ತದೆ : ಅಂದರೆ "ಇರುತ್ತವೆ" ಕೃತಿಯ ಹಿಂದಿನ ನಿಲುವು ಖಂಡಿತ ಸ್ವಾಗತಾರ್ಹವಾದದ್ದಾದರೂ ಸೀಮಿತವಾದದ್ದು.

ಹೆಣ್ಣಿನ ಸ್ಥಿತಿಗತಿಯ ಬಗ್ಗೆ ಇಲ್ಲಿರುವ ರೊಚ್ಚು ವೇದಿಕೆಯ ಮೇಲೆ ನಿಂತು ಗಟ್ಟಿಯಾಗಿ ಹೇಳುವ ಧಾಟಿಯದಲ್ಲ ; ಆತ್ಮೀಯವಾಗಿ ತನಗೆ ತಾನೆ ಮನದಟ್ಟು ಮಾಡಿಕೊಳ್ಳುತ್ತ ಮಾತನಾಡಿ ಕೊಳ್ಳುವ ಧಾಟಿಯದು. ಇದೇ ಕಾರಣದಿಂದ ಇಲ್ಲಿರುವ ವ್ಯಂಗ್ಯ ಕೂಡಾ ಅತ್ಯಂತ ನವಿರಾದದ್ದು ; ಸೂಕ್ಷ್ಮ ವಿಷಾದವನ್ನು ಬೆರೆಸಿಕೊಂಡಿರುವಂಥದು. ಈ ಕವನದ ನಿರೂಪಣೆ-ವ್ಯಾಖ್ಯಾನದೊಟ್ಟಿಗೇ ಹೋಗುವ ಅತ್ಯಂತ ಮಾರ್ಮಿಕ ಪರಿಣಾಮವನ್ನುಂಟುಮಾಡುವ ಶೈಲಿಯನ್ನು ಇಲ್ಲಿ ಕಾಣಬಹುದು:

ಒಂದು ವೇಳೆ
ರಾವಣ ದುಶ್ಶಾಸನರು ಹುಟ್ಟಿ
ನಿಮ್ಮ ಹೊತ್ತು, ಸೀರೆ ಎಳೆದರೂ
ರಾಮ ಕೃಷ್ಣರಿದ್ದಾರೆ
ನಿಮ್ಮ ವಸ್ತ್ರ ಅಕ್ಷಯವಾಗಿಸಿ
ಅಗ್ನಿ ಪರೀಕ್ಷೆ ಮಾಡಿ
ಮೀಸೆ ತಿರುವಿಕೊಳ್ಳುವ ಭೂಪರು.

(ನಾರೀಮಣಿಗಳಿಗೊಂದು ಕಿವಿಮಾತು)

'ಕಿಟಕಿಗಳಲ್ಲಿ', 'ಇರುತ್ತವೆ' ಕವನಗಳು ಒಟ್ಟು ಭಾರತದಂಥ ದೇಶದಲ್ಲಿ ಹೆಣ್ಣಿನ ಬದುಕು ಬಂಧನದಲ್ಲಿಯೇ ಇರುವುದನ್ನು ಯಾವ ತೋರಿಕೆಯ ಭಾವಾಡಂಬರವೂ ಇಲ್ಲದೆ ಹೇಳುತ್ತವೆ ; ಬಂಧನದ ಬಗ್ಗೆ ಎಚ್ಚರ, ಪ್ರತಿಕ್ರಿಯೆ ಹೊಸದೂ ಅಲ್ಲ, ಕೊನೆಯದೂ ಅಲ್ಲ ಎಂಬ ನಿಲವನ್ನು ಈ ಸಾಲುಗಳು ಹೇಳುತ್ತವೆ ;

ಚಂದ್ರಮ - ಚಂದ್ರಕಾಂತ
ಮಾಮರ - ಮಲ್ಲಿಗೆಯ
ಕನಸಿನ ತೇಲುಗಣ್ಣಲ್ಲಿ
ಮರೆಸುವ ಹಾಡೇ
ತೊಲಗು ತೊಲಗೆನ್ನುವ
ನನ್ನ
ಈ ಕವನ ಹೊಸದಲ್ಲ - ಕೊನೆಯಲ್ಲ

(ಕೊನೆಯ ಮಾತು)

ಈ ಕವನಗಳ ಬಂಧ ತಾಂತ್ರಿಕವಾಗಿ ಸಾಕಷ್ಟು ಯಶಸ್ಸುಗಳಿಸಿವೆ ; ಇಲ್ಲಿಯ ಒಂದೊಂದು ರಚನೆಯೂ ತನ್ನ ಸೂಕ್ಷ್ಮ ನಿರೀಕ್ಷಣೆಯಿಂದಾಗಿ ಕುತೂಹಲ ಹುಟ್ಟಿಸುತ್ತವೆ.

ಚಿತ್ತಾಲೆ ಪದ್ಯಗಳು (ಹೊ. ಮ. ಪಂಡಿತಾರಾಧ್ಯ) ಪಂಡಿತಾರಾಧ್ಯರ ಮೊದಲ ಕವನ ಸಂಕಲನ ಇದು ; ನವ್ಯದ ಒಟ್ಟು ಆವರಣದಲ್ಲಿಯೇ ತನ್ನ ಅಭಿವ್ಯಕ್ತಿಯನ್ನು ತಾನು ಕಲಿತುಕೊಂಡ

ಈ ಕವಿ ಅದರಾಚೆಗೂ ಮಾತಿನ ಕ್ರಮವನ್ನು ಕಟ್ಟಿಕೊಂಡಿರುವುದು ಕುತೂಹಲ ಹುಟ್ಟಿಸುವ ಸಂಗತಿಯಾಗಿದೆ. ಕವಿಯ ಚಿಂತನೆಯ ಕೇಂದ್ರಗಳು ವಿಸ್ತರಿಸಿವೆ ಎಂಬುದು ಈ ಬದಲಾವಣೆಗೆ ಮುಖ್ಯ ಕಾರಣವಾಗಿದೆ.

'ಮೃಗಜಲ', 'ವಿಫಲತೆ', 'ವಿರಹ', 'ಸಂಗೀತ', 'ಗ್ರಹಗಳು' ಮುಂತಾದ ಕವನಗಳು ಅನುಭವವನ್ನು ಬಿಚ್ಚುವ ರೀತಿ, ತೀರ್ಮಾನ ಎಲ್ಲವೂ ಪಾಟೀಲರ ಮಾತಿನಲ್ಲಿ ಹೇಳುವುದಾದರೆ 'ನಿಯೊ ರೊಮ್ಯಾಂಟಿಕ್' ಎನ್ನಬಹುದಾದ ಧಾಟಿಯಲ್ಲೇ ಸಾಗುತ್ತವೆ; ಕನ್ನಡದ ನವ್ಯ ತನ್ನ ಧೋರಣೆಯ ದೃಷ್ಟಿಯಿಂದ ನಿಯೊರೊಮ್ಯಾಂಟಿಕ್ ಎನ್ನುವ ಈ ಅಂಶ, ನವ್ಯದ ಆವರಣದಲ್ಲಿಯೇ ತಮ್ಮನ್ನು ಸೃಷ್ಟಿಸಿಕೊಂಡ ಕೆಲವು ತರುಣ ಕವಿಗಳಿಂದ ಗೊತ್ತಾಗುತ್ತದೆ.

ಆದರೆ ಕೆಲವು ಕವನಗಳಲ್ಲಿ ಪಂಡಿತಾರಾಧ್ಯರು ವ್ಯಕ್ತಿಗತ ಹಳಹಳಿಕೆಯನ್ನು ದೂರತಳ್ಳಿ ಇನ್ನಷ್ಟು ವಿಶಾಲ ತುಡಿತಗಳಿಗೆ ಹಮ್ಮಿಕೊಂಡಿದ್ದಾರೆ. ಈ ದೃಷ್ಟಿಯಿಂದ 'ನಮ್ಮ ದೇಶ ಭಾರತ', 'ಉರಿಯುತ್ತಿರುವ ಜನ ನಾವು', 'ಗುರುತು ಹತ್ತದವರು' ಮುಂತಾದ ಕವನಗಳು ಸತ್ವಪೂರ್ಣ ರಚನೆಗಳಾಗಿವೆ. ಈ ಕವನಗಳ ಹಿಂದಿರುವ ವ್ಯವಸ್ಥೆಯ ವಿರೋಧಿರೊಚ್ಚು, ಆಕ್ರೋಶ ಗಮನಾರ್ಹವಾದದ್ದು; ಅಂಥ ಆಕ್ರೋಶದ ಮೆನಿಫೆಸ್ಟೋ ಆಗಿ ಕೂಡಾ ಕೆಲವು ಪದ್ಯಗಳು ಕಾಣುತ್ತವೆ. ಉದಾಹರಣೆಗೆ ಕೆಲವು ಸಾಲುಗಳು :

ನಮ್ಮೆಲುವುಗಳ ಕಲ್ಲುಗಳಾಗಿಟ್ಟು
ಮೈಯರಕ್ತವ ನೀರಾಗಿ ಕಲಸಿ
ಮಾಂಸವ ಕೆಸರಾಗಿ ಮೆತ್ತಿ
ನೀವು ಕಟ್ಟಿಕೊಂಡಿರುವ ನಿಮ್ಮರಮನೆಗಳ ಕಂಬಗಳ
ಹೊಡೆದುರುಳಿಸುತ್ತೇವೆ.

(ಉರಿಯುತ್ತಿರುವ ಜನ ನಾವು)

ಪಂಡಿತಾರಾಧ್ಯರಿಗೆ ಭಾಷೆಯ ಜೊತೆಗೆ ಸೃಜನಾತ್ಮಕ ಸಂಬಂಧವಿರುವುದರಿಂದ ಈ ಎಲ್ಲ ಕವನಗಳಲ್ಲಿ ಚುರುಕಾದ, ಉತ್ಸಾಹೀ ಭಾಷೆಯನ್ನು ಕಾಣುತ್ತೇವೆ. 'ಬಸವಣ್ಣ', 'ನಾಡಿಗೆ ನಾಮಕರಣ' 'ಕವಿ ಸಮ್ಮೇಳನ' ಮುಂತಾದ ವಿಡಂಬನೆಯ ರಚನೆಗಳಲ್ಲಿ ಭಾಷೆಯ ಲವಲವಿಕೆಯನ್ನು ಕಾಣಬಹುದು. ನವ್ಯದ ಚೌಕಟ್ಟಿನಿಂದ ಪಂಡಿತಾರಾಧ್ಯರು ಗಮನಾರ್ಹವಾಗಿ ಬಿಡಿಸಿಕೊಂಡಿದ್ದಾರಾದರೂ ಹೊಸ ಕಾವ್ಯಮಾರ್ಗದ ರಚನೆಯಲ್ಲಿ ಇನ್ನಷ್ಟು ಸತ್ವಪೂರ್ಣವಾಗಿ, ಅಲ್ಲಲ್ಲಿ ಕಾಣುವ ಏಕತಾನತೆಯನ್ನು ಬಿಡಿಸಿಕೊಂಡು ತೊಡಗಬೇಕಾಗಿದೆ. ಬೆತ್ತಲೆ ಪದ್ಯಗಳಲ್ಲಿ ಅಂಥ ಕೆಲವು ರಚನೆಗಳಿವೆ ಎಂಬುದೊಂದು ಸಮಾಧಾನದ ಮಾತು.

ಕಾಡುಗಿಡದ ಹಾಡು ಪಾಡು (ಶ್ರೀ ಕೃಷ್ಣ ಆಲನಹಳ್ಳಿ) ''ಮಣ್ಣಿನ ಹಾಡು'' ಸಂಕಲನದ ಮೂಲಕ ಕನ್ನಡ ಕಾವ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನಗಳಿಸಿಕೊಂಡ ಶ್ರೀಕೃಷ್ಣ ಆಲನಹಳ್ಳಿಯವರ ಎರಡನೆಯ ಸಂಕಲನ ಇದು. ಭಾಷಾ ಸಾಮರ್ಥ್ಯದಲ್ಲಿ ಶಕ್ತಿವಂತ ಸಂಯಮ ಸಾಧಿಸಿ, ತೀವ್ರತೆಗೆ ಹೆಸರಾದರೂ ''ಕಾಡುಗಿಡದ ಹಾಡುಪಾಡು'' ಕವನ ಸಂಕಲನದಲ್ಲಿ "ಮಣ್ಣಿನ ಹಾಡು" ಸಂಕಲನದಲ್ಲಿರುವ ಹೊಚ್ಚ ಹೊಸತನ ಇಲ್ಲ. ಧೋರಣೆಯ ದೃಷ್ಟಿಯಿಂದ ಕೂಡಾ "ಮಣ್ಣಿನ ಹಾಡು" ಸಂಕಲನಕ್ಕಿಂತ ಇದು ಭಿನ್ನವಲ್ಲ; ಆದರೆ ಶಬ್ದ ಶಬ್ದಗಳಲ್ಲಿ ಅಪೂರ್ವಶಕ್ತಿಯಾಗಿ ಪ್ರಕಟವಾಗುತ್ತಿದ್ದ ಲೈಂಗಿಕ ತೀವ್ರತೆ ಇಲ್ಲಿ ಸ್ವಲ್ಪ ತಳಕ್ಕೆ ಸರಿದಿದೆ.

ಕಾವ್ಯ ಬಂಧದಲ್ಲಿ ಆಲನಹಳ್ಳಿ ನವ್ಯ ಎನಿಸಿದರೂ, ಧೋರಣೆಯ ದೃಷ್ಟಿಯಿಂದ ಮಾತ್ರ ರಮ್ಯತಾ ಪ್ರಧಾನ ಕವಿಯೇ ಆಗಿದ್ದಾರೆ. ಉದಾಹರಣೆಗೆ ಈ ಎರಡು ಕವನಗಳನ್ನು ಪ್ರಾತಿನಿಧಿಕವಾಗಿ ಗಮನಿಸಬಹುದು.

(i) 'ಮಣ್ಣಾಸೆ' ಕವನ ; ಮಣ್ಣಿನ ಜೊತೆಯ ಸಂಪರ್ಕದಿಂದ ಕವಿಯ ಬದುಕು ಹೊಸ ಹಾಡಿಗೆ ತೂಗುವುದೇ ಇಲ್ಲಿಯ ಮುಖ್ಯ ಆಶಯ ; 'ಮಣ್ಣು' ಎನ್ನುವುದರ ಯಾವ ವಾಸ್ತವನೆಲೆಗಳೂ ಇಲ್ಲಿ ಸಿಕ್ಕುವುದಿಲ್ಲ. ಕವಿ ಅದನ್ನು ಹೇಳುವ ರೀತಿಯನ್ನು ಗಮನಿಸಿ :

ಈ ಕಪ್ಪನೆಯ ಮಣ್ಣಲ್ಲಿ ಕಾಲಿಟ್ಟೊಡನೆ
ಹಿಗ್ಗಿ ಪುಳಕಗೊಳ್ಳುವ ನನ್ನೀ ಮೈಮನಕ್ಕೆ
ಮಣ್ಣ ಜೊತೆ ಯಾವ ಮೋಹ ಬಂಧವೊ ಕಾಣೆ

ಈ ಮಣ್ಣಿನ ಸಂಪರ್ಕದಿಂದ ಕವಿಯಲ್ಲಿ ಉಂಟಾಗುವ ಹೊಸ ಬದುಕಿನ ನಿರೂಪಣೆ ಕೂಡಾ ರೊಮ್ಯಾಂಟಿಕ್ ಭಾವನೆಯ ಒಂದು ಪರಿಷ್ಕರಣವಲ್ಲದೆ ಬೇರೇನೂ ಅಲ್ಲ.

(ii) 'ಚಿಟ್ಟೆ ಮತ್ತು ಮೇಷ್ಟ್ರು' ಕವನ :

ಹಿಡಿದಷ್ಟೂ ಬಣ್ಣಗಳು ಉಕ್ಕಿ ಬಂದಂತೆ
ಉಕ್ಕಿದ ಬಣ್ಣಗಳೆ ಹೂ ಚಿಟ್ಟೆಗಳಾಗಿ
ನನ್ನ ಕಣ್ಣೊಳಗೇ ಅರಳಿ ಬಿಟ್ಟಂತೆ

ಹಾರುವ ಚಿಟ್ಟೆಯ ಬಗ್ಗೆ ಕವಿಗೆ ಅಪಾರ ವಿಸ್ಮಯ ; ಒಂದು ಮನಸ್ಥಿತಿಗೆ ಕೂಡಾ ಇದು ಸಂಕೇತ. ಆದರೆ ಈ ಚಿಟ್ಟೆಯ ಮೂಲ ಹುಟ್ಟನ್ನು ಬೊಕ್ಕತಲೆ ಮೇಷ್ಟ್ರು 'ಕಂಬಳಿ ಹುಳುವೆ ಬಣ್ಣದ ಚಿಟ್ಟೆಯಾಗುತ್ತೆ' ಎಂದು ಹೇಳಿದ್ದು ಕವಿಗೆ ಅಪಾರ ಬೆರಗು : ಕೊನೆಗೆ ಕವಿ ಈ ತೀರ್ಮಾನಕ್ಕೆ ಬರುತ್ತಾನೆ :

ಬೇಡ-ಬೊಕ್ಕತಲೆ ಮೇಷ್ಟ್ರ ಪಾಠವೂ ಬೇಡ
ನನ್ನ ಸುಂದರ ಚಿಟ್ಟೆ
ಹೊಲಸು ಕಂಬಳಿ ಹುಳವಾಗಿತ್ತು ಅಂತ
ಪಾಠ ಒಪ್ಪಿಸುವುದೂ ಬೇಡ

ವಾಸ್ತವದ ಸೂಕ್ಷ್ಮ ಕುರೂಪವನ್ನೂ, ವೈಷಮ್ಯಗಳನ್ನೂ ನಿರಾಕರಿಸಿ 'ಸುಂದರ'ವನ್ನೇ ಆಶ್ರಯಿಸುವ ರಮ್ಯ ಧೋರಣೆಯ ಇನ್ನೊಂದು ಮುಖ ಈ ನಿಲವು. ನವ್ಯ ಧೋರಣೆ ಇದಕ್ಕೆ ಸಂಪೂರ್ಣ ವಿರುದ್ಧವಾದದ್ದು. ಈ ನಿಯೊ-ರೊಮ್ಯಾಂಟಿಕ್ ಧೋರಣೆಯ ಚೌಕಟ್ಟಿನಲ್ಲೇ ಇಲ್ಲಿಯ ಬಹುಪಾಲು ಕವನಗಳು ವ್ಯವಹರಿಸುತ್ತವೆ.

ಭಾಷೆಯ ಬಗ್ಗೆ ಸೂಕ್ಷ್ಮ ಎಚ್ಚರ ಈ ಕವನ ಸಂಕಲನದ ಮುಖ್ಯಗುಣ ; 'ಪ್ರ.ತಿ.ನ.' ಮತ್ತು 'ದೇವಿ' ರಚನೆಗಳು.... ಈ ಕವನ ಸಂಕಲನದ ಅತ್ಯುತ್ತಮ ಕವನಗಳು. ಸಂವೇದನೆಯ ಸೀಮಿತತೆಯಿಂದಾಗಿ ಇಲ್ಲಿಯ ರಚನೆಗಳು ಎಷ್ಟೇ ತಾಂತ್ರಿಕ ಯಶಸ್ಸನ್ನು ಗಳಿಸಿದರೂ ಹೊಸ ದಿಕ್ಕಿಗೆ ಹಬ್ಬಲಾರದೆ ಹೋಗುತ್ತವೆ.

ಬಿರುಗಾಳಿ (ಸೋಮಶೇಖರ ಇಮ್ರಾಪೂರ) "ಬಿರುಗಾಳಿ"ಯ ಇಮ್ರಾಪೂರರನ್ನು ಬೇಂದ್ರೆಯೋತ್ತರ ಕವಿಯೆಂದು ಶಂಕರ ಮೊಕಾಶಿಯವರು ಸ್ವಾಗತಿಸಿದ್ದಾರೆ ; ಈ ಕೃತಿಗೆ ಸಾಕಷ್ಟು ದೀರ್ಘವಾದ ಹಿನ್ನುಡಿಯನ್ನೂ ಬರೆದಿದ್ದಾರೆ. ತುಂಟುತನ ಉತ್ಪ್ರೇಕ್ಷೆ ತುಂಬಿ ಹರಿಯುತ್ತಿರುವ ಮೊಕಾಶಿಯವರ ಮಾತುಗಳನ್ನು ವಸ್ತುನಿಷ್ಠ ವಿಮರ್ಶೆ ಎಂದು ಸ್ವೀಕರಿಸುವುದು ಕಷ್ಟ.

ಶಂಕರ ಮೊಕಾಶಿಯವರ ಭರ್ಜರಿ ಹಿಮ್ಮೇಳದೊಂದಿಗೆ ರಂಗಕ್ಕೆ ಬಂದಿರುವ ಈ ಕೃತಿ ಕುತೂಹಲದ ಬೆನ್ನಿಗೇ ನಿರಾಶೆಯನ್ನು ಹುಟ್ಟಿಸುತ್ತದೆ. 'ನವ್ಯ' ಮಾರ್ಗದಿಂದ ಇಮ್ರಾಪೂರರು

ಭಿನ್ನವಾಗುವ ಪ್ರಯತ್ನವನ್ನೂ ಮಾಡಿದ್ದಾರೆ. ಆದರೆ "ಬಿರುಗಾಳಿ"ಯಲ್ಲಿ ಇವರ ಪ್ರಯತ್ನದ ಸಾಧನೆ ಬಹಳ ತೆಳುವಾಗಿ ಕಾಣುತ್ತದೆ. ಇಲ್ಲಿಯ ಬಹುಪಾಲು ಕವನದ ಬಂಧಗಳೆಲ್ಲಾ ಅಡಿಗರ ಇಟ್ಟಿಗೆಗಳನ್ನೇ ಬೇರೆ ಬೇರೆ ಥರ ಜೋಡಿಸಿದ ಹಾಗೆ ಕಾಣುತ್ತದೆ. ವಾಸ್ತವವಾಗಿ ಅಡಿಗರ ಪ್ರಭಾವವೇ ಅಂತಹುದು. 'ಕಪ್ಪುರಾವಣ,' 'ಶೋಕತಪ್ತರು,' 'ಬೆಳಗಾಗಿದೆ,' 'ಗತಿ-ಸ್ಥಿತಿ,' 'ಬೆಳ್ಳಿ ಹಬ್ಬದಾಕೆ'—ರಚನೆಗಳು ಇದಕ್ಕೆ ಉತ್ತಮ ಉದಾಹರಣೆಗಳು. ಇವುಗಳ ಹಿಂದಿರುವ ತುಡಿತ ಎಷ್ಟೇ ಆಸಕ್ತಿ ಹುಟ್ಟಿಸಿದರೂ, ಅದು ತನ್ನನ್ನು ಕಟ್ಟಿಕೊಳ್ಳುವ 'ಅಡಿಗತ್ವ' ಒಡೆದು ಮಹತ್ವದ ರಚನೆಗಳಾಗದೆ ಮರಿಗಳಾಗಿಯೇ ಉಳಿಯುತ್ತವೆ.

ಇಮ್ರಾಪೂರರು ಜೀವಂತಿಕೆಯಿಂದ ಸತ್ವಪೂರ್ಣವಾಗಿ ಕಾಣಿಸಿಕೊಳ್ಳುವುದು 'ಬಲ ಹೂವ ಕೆಡುವ ತಾಯಿ', 'ದುಮ್ಮಜಲಿನ ಮನೆ,' 'ಅಣುಮನ ಪತ್ರ,' ತಿರಬೋಕಿ ಪದಾ' ಕವನಗಳಲ್ಲಿ. ಇವರ ಹೊಸ ಅನ್ವೇಷಣೆಯ ತೀವ್ರತೆ ಇಲ್ಲಿ ಯಶಸ್ವಿಯಾಗಿದೆ :

(i) ಜಂಗತಿಂದ ಹಳೆ ಹತಾರದಾಗ ನೀಕೊಯ್ಯಬ್ಯಾಡ ನನ್ನಕುತಗಿ
(ii) ಕತ್ತಲಕ ಮುದ್ರಿ ಒತ್ತೂತ ಗೂಗಿ ಹೇಳ್ಯಾವ ಇದರ ಮರ್ಮಾ
(iii) ನಿಮ್ಮ ಹೆಣಕ ರಣಹಲಿಗೆ ಹೊಡದೇವಿ
(iv) ಅಬ್ಬಿಗೇರಿ ಗ್ರಾಮದಾಗ ಗಬ್ಬ ಹಿಡಿದು ಹೋದ ಕತಿ
ಮಬ್ಬಾದಾಗ ಹೇಳೂದಲ್ಲ ಹೆದರೀಕಿ
ಹೊತ್ತು ಬಾಳಾ ಆಗೇತಂತ ಸಣ್ಣಮಾಡಿ ಹೇಳ್ತೀನಿ
ಚಿತ್ತಕೊಟ್ಟು ಕೇಳ್ರಿ ಗೌಡ್ತಿ ಬಾಳ್‌ಬೆರಕಿ

ಇಂಥ ಸಾಲುಗಳು ಕವನದ ಬೆಳವಣಿಗೆಯನ್ನೂ, ಮೂಡನ್ನೂ ಒಂದು ನಿರ್ದಿಷ್ಟ ಶೃಂಗಸ್ಥಿತಿಗೆ ಕೊಂಡೊಯ್ಯುತ್ತವೆ: ಇಮ್ರಾಪೂರರ ಸಾಧನೆಯ ಬಗ್ಗೆ ಸಾಕ್ಷಿ ಹೇಳುವುದು ಇಂಥ ರಚನೆಗಳು ಮಾತ್ರ. ಏಕೆಂದರೆ ನವ್ಯದ ಚೌಕಟ್ಟಿನಲ್ಲಿಯೇ ಇದ್ದು ಅದನ್ನು ಹಾರ ಬಯಸುವ ಉಳಿದ 'ಅಡಿಗ ಪ್ರಯತ್ನ'ಗಳಿಗಿಂತ ಇದು ಭಿನ್ನವಾದದ್ದು ; ಗಮನಾರ್ಹವಾದದ್ದು. ಉಳಿದ ತಮ್ಮ ಸಂಕಲನಗಳಿಗಿಂತ ಇಮ್ರಾಪೂರರು ತಮ್ಮ ಸಂವೇದನೆಯ ಆಯಾಮಗಳನ್ನು ಇನ್ನಷ್ಟು ಸೂಕ್ಷ್ಮವಾಗಿಸಿಕೊಂಡಿದ್ದಾರೆ: ಹೊಸ ಆಯಾಮಗಳತ್ತ ನಡೆದಿದ್ದಾರೆ. ಅವರ ವೈಯಕ್ತಿಕ ಬೆಳವಣಿಗೆಯ ದೃಷ್ಟಿಯಿಂದ ಮಾತ್ರ ಇದು ಮುಖ್ಯವಾಗುತ್ತದೆ.

ಜೋಗಳ ತುಂಬದ ಬದುಕು (ದೇಶಪಾಂಡೆ ಸುಬ್ಬರಾಯ) ನವ್ಯಕಾವ್ಯ ಪಂಥದ ಚೌಕಟ್ಟಿನಲ್ಲಿಯೇ ವ್ಯವಹರಿಸುವ ಕೃತಿ ಇದಾದರೂ ಪ್ರತಿಕ್ರಿಯಾವಿಧಾನದ ದೃಷ್ಟಿಯಿಂದ ಕೆಲವು ಕವನಗಳು ಇಲ್ಲಿ ಭಿನ್ನವಾಗಿವೆ. 'ದೃಶ್ಯಗಳು' ಎನ್ನುವ ಕವನ ಈ ಸಂಕಲನದ ಅತ್ಯುತ್ತಮ ಕವನ. ಮಾನವ ಜನಾಂಗದ ಮೇಲಾದ ಹಿಂಸೆ, ಕ್ರೌರ್ಯ, ಅಮಾನುಷ ದಬ್ಬಾಳಿಕೆಗಳ ಮಾರ್ಮಿಕ ಚಿತ್ರಣ ಈ ಕವನದಲ್ಲಿದೆ. ಸೂಕ್ಷ್ಮ ವಿಡಂಬನೆಯಿಂದ ಪ್ರಾರಂಭವಾದ ಈ ಕವನ ಬರುಬರುತ್ತಾ ದಟ್ಟವಿಷಾದದ ಜೊತೆಗೆ ಚರಿತ್ರೆಯ ಪುಟಗಳನ್ನು ಬಿಚ್ಚುತ್ತಾ ಬರುತ್ತದೆ. ಆದರೆ ಈ ಕವನದ ವೈಶಿಷ್ಟ್ಯ ಕೇವಲ ಅನುಕಂಪ ಮೂಲವಾದ ವಿಷಾದವಲ್ಲ. ಇದು ಮಧ್ಯಮವರ್ಗದ ವ್ಯಕ್ತಿಯ ನಿಷ್ಕ್ರಿಯತೆಯಿಂದಾಗಿ ಹುಟ್ಟುವ ವಿಷಾದ. ಈ ಸಾಲುಗಳನ್ನು ಗಮನಿಸಿ :

ಕ್ರೂಜೆಗಿಕ್ಕಿದ ಕ್ರಿಸ್ತನ ಕಣ್ಣಿಂದ ಕೆಂಪುಧಾರೆ ತೊಟ್ಟಿಕ್ಕಿದ್ದು,
ನಾವು ನೀವೆಲ್ಲ ನೋಡುನೋಡುತ್ತ ಮಲಗಿದ್ದು
ಮಲಮಲಗಿ ಸತ್ತದ್ದು
ಮಾನವೀಯತೆಯ ಗೋರಿ ಕಟ್ಟಿದ್ದು
ಕತ್ತಲಲ್ಲಾರೋ ಕೂಗಿ ಕೂಗಿ ಅತ್ತದ್ದು...

ಎಲ್ಲ ಮಾನಗಳಿಂದಲೂ 'ದೃಶ್ಯಗಳು' ಉತ್ತಮ ಕವನ. 'ಯಾನ,' 'ಮಧ್ಯರಾತ್ರಿ-ಕೇಶವಾಪುರ,' 'ಗೋಡೆಗಳು' ಮುಂತಾದವು ಉತ್ತಮ ರಚನೆಗಳಾಗುವತ್ತ ನಡೆದರೂ, ಬರೀ ಒಂದು ಪರಿಸರವನ್ನು ಮಾತ್ರ ಸೃಷ್ಟಿಸಿ ಅಲ್ಲಿಗೇ ನಿಂತುಬಿಡುತ್ತವೆ. ಟಿಪಿಕಲ್ ನವ್ಯ ಎಂದು ಹೇಳಬಹುದಾದ ಶೈಲಿಯಿಂದಾಗಿ ಇನ್ನುಳಿದ ಕವನಗಳು ಸಪ್ಪೆಯಾಗಿ, ಕ್ರಿಯಾರಹಿತವಾಗಿ ಕಾಣುತ್ತವೆ. "ಎರಡು ಮಾತು"ಗಳು ಎಂಬ ಲೇಖಕರ ಮುನ್ನುಡಿಯಲ್ಲಿ ಲಂಕೇಶರ ಶೈಲಿ, ಚಿಂತನೆಯ ದಟ್ಟ ನೆರಳು ಕಾಣುತ್ತದೆ.

ಊರ ಮುಂದಿನ ಬಾವಿ (ಎಚ್. ಜೆ. ಲಕ್ಕಪ್ಪಗೌಡ) "ವಸಂತಗೀತ" ಎಂಬ ತಮ್ಮ ಮೊದಲ ಸಂಕಲನವನ್ನು ಪ್ರಕಟಿಸಿದ ಒಂಬತ್ತು ವರ್ಷಗಳ ಅನಂತರ ಲಕ್ಕಪ್ಪಗೌಡರ ಈ ಕೃತಿ ಹೊರಬಂದಿದೆ. ಕನ್ನಡ ಕಾವ್ಯಪರಂಪರೆಯ ಅಧ್ಯಯನದ ಹಿನ್ನೆಲೆಯಿರುವ ಇವರ ರಚನೆಗಳಲ್ಲಿ ತಮ್ಮ ಸ್ವಂತ ನುಡಿಗಟ್ಟುಗಳನ್ನು ಸೃಷ್ಟಿಸಿಕೊಳ್ಳಲು ನಡೆಸಿರುವ ಪ್ರಯತ್ನಗಳನ್ನು ಗಮನಿಸಬಹುದು. ಇದು ಸಾಕಷ್ಟು ಯಶಸ್ವಿಯಾಗಿರುವ ರೀತಿಯನ್ನು ಈ ಸಂಕಲನದ 'ಬಾಲ' ಎಂಬ ಉತ್ತಮ ವಿಡಂಬನ ಕವನದಲ್ಲಿ ಕಾಣಬಹುದು. 'ಪ್ರ.ತಿ.ನ.,' 'ಕಾಡು,' 'ಕಾಲ ಕೆಟ್ಟಿದೆ ನೋಡಿ,' 'ರೈಲು ನಿಲ್ದಾಣ.' 'ಉದ್ಘೋಷ,' 'ಇವಳು' ಮುಂತಾದವು ಇಲ್ಲಿನ ಇತರ ಉತ್ತಮ ಕವನಗಳು.

> ಇದ್ದಾನೆ ಇಲ್ಲೊಬ್ಬ ಬಾಳೆ ಕಡಿಯುವ ಗೂಳಿ
> ಸತ್ತ ಶವವನು ಸದೆವ ಶೂರ ಸರದಾರ
> ಕೊಟ್ಟ ಕೊನೆವರೆಗೂ ಅನುಕೂಲ ಪಡೆವಧೀರ
> ಸಲಬೇಕು ಇವಗೆ ಬಿರುದು–'ಪರಮವೀರ' !

ಈ ಬಗೆಯ ಅನೇಕ ಸಾಲುಗಳಲ್ಲಿ ಸಿಟ್ಟು, ವ್ಯಂಗ್ಯ, ನೋವು ಪ್ರಕಟಗೊಳ್ಳುತ್ತವೆ. ಭಾಷೆಯ ಬಗೆಗಿನ ಇವರ ಎಚ್ಚರ ಕವನದ ವಸ್ತುವಿನ ಬಗೆಗೂ ಬಂದು, ಸುತ್ತಲ ಪರಿಸರವನ್ನು ಸೂಕ್ಷ್ಮವಾಗಿ ನೋಡುವ ಸಾಧ್ಯತೆಗಳು ಇನ್ನೂ ಹೆಚ್ಚಾಗಿ ಇವರ ಮುಂದಿನ ರಚನೆಗಳಲ್ಲಿ ಕಂಡುಬರುವ ಸೂಚನೆಗಳನ್ನು ಈ ಸಂಕಲನದ ಬಹುಪಾಲು ಕವನಗಳು ನೀಡುತ್ತವೆ.

ಅನಾಮಧೇಯನ ಆತ್ಮಕಥೆ (ಸು. ರುದ್ರಮೂರ್ತಿ ಶಾಸ್ತ್ರಿ) ನಿರ್ದಯ ಸಮಾಜದಲ್ಲಿ ಅಸ್ಥಿಪಂಜರದ ಶಿಶುವಾಗಿ ಹುಟ್ಟಿ ಹೆಚ್ಚಿನ ಯಾತನೆಗೆ ಸಿಕ್ಕಿ, ಮಿಡಿತಗಳನ್ನೆಲ್ಲ ಅದುಮಿಟ್ಟುಕೊಂಡು ಬಾಳುವ ನೂರಾರು ಜನರ ಚಿತ್ರ, ಈ ಕಥನಕವನದಲ್ಲಿ ಕಾಣಸಿಗುತ್ತದೆ. ಬದುಕಿನಲ್ಲಿ ಕೆಲವು ಗಳಿಗೆ ವಸಂತ ಸುಳಿದರೂ ಕೊನೆಗೆ ನಾಯಕ ಗೋಳಿನ ಪಾತಾಳದಾಳಕ್ಕೆ ಮರಳುವ ದುರಂತ ಈ ಕವನದ ಕೇಂದ್ರ ಭಿತ್ತಿ. ಆದ್ದರಿಂದ ವಿಷಾದ, ನೋವುಗಳು ಸಾಲು ಸಾಲುಗಳಲ್ಲಿ ಮಡುಗಟ್ಟಿವೆ. ಅನಿಸಿಕೆಗಳ ಅಭಿವ್ಯಕ್ತಿಗಾಗಿ ಕವಿ ಛಂದಸ್ಸನ್ನು ಮರೆಹೋಗುತ್ತಾರೆ. ಸಲೀಸಾಗಿ ಕಥೆ ಹೇಳುವ ಕಲೆ ಇವರದು. ಬಾಳಿನ ಒಳಪದರಗಳ ನೀಳ ಪರಿಚಯ ಇವರಿಗಿರುವುದರಿಂದಲೇ ಕೆಲವು ಸೂಕ್ಷ್ಮಗಳ ಅವಗಾಹನೆ ಸಾಧ್ಯವಾಗಿದೆ. ಪ್ರಜ್ಞೆ ಪಕ್ವವಾದಮೇಲೆ ಲೇಖಕರು ತಮ್ಮ ಬಾಳಿನ ಅವಲೋಕನ ಮಾಡುತ್ತಾರೆ. ಇದರಿಂದ ಕೆಲವು ಕಡೆ ಗೊಂದಲಗಳನ್ನು ಹುಟ್ಟಿಸುತ್ತಾರೆ. ತಾಯಿ ವೇಶ್ಯಾವೃತ್ತಿ ಮಾಡುವವಳು. ಇದನ್ನು ಪುಟ್ಟ ಮಗು ನೋಡುತ್ತದೆ. ಆಗ ಅದಕ್ಕಾದ ಅನುಭವ ; 'ಅಡಿಯಿಂದ ಮುಡಿಯವರೆಗೆ ಹತ್ತಿ ಉರಿಯುವ ಬೆಂಕಿ। ಹೊರಗಿಷ್ಟು ಬರಲಿಲ್ಲ ಮಾತಿನಲ್ಲಿ.'

ಒಂದು ವರ್ಗ ಪರಿಸರದಲ್ಲಿ ಬೆಳೆಯುತ್ತಿರುವ ಸಣ್ಣ ಮಗುವಿಗೆ ಅನ್ಯ ಪ್ರಭಾವವೇನೂ ಇಲ್ಲದೆ ತಾಯಿಯ ಸೂಳೆಗಾರಿಕೆ ತಪ್ಪು ಎಂಬ ಕಲ್ಪನೆ ಹೇಗೆ ಬರಲು ಸಾಧ್ಯ ? ಶಿಷ್ಟಮೌಲ್ಯಗಳ ಪರಿಚಯದಿಂದ ಮಾತ್ರ ಇದು ಸಾಧ್ಯ. ಆದ್ದರಿಂದಲೇ ಇಂಥ ಕಡೆ ಕವಿ ಕೃತಕವಾಗಿ ಯೋಚಿಸುತ್ತಾರೆ. ಇಂಥದಕ್ಕೆ ಇನ್ನೊಂದು ಉದಾಹರಣೆ :

> ಅಮ್ಮ ಅಣ್ಣಾ ಎಂದು ಕರುಳಲ್ಲೆ ಕೂಗಿದೆನು
> ತೊಲಗಾಚೆ ಎಂದಾಗ ಬಂದೆ ನಾಚಿ

ಇದೂ ಸಹ ಅಸಹಜ. ಏಕೆಂದರೆ ಆ ಪರಿಸರದಲ್ಲಿ ಹುಟ್ಟಿ ಬೆಳೆಯುತ್ತಿರುವ ಮಗುವಿಗೆ ಈ 'ನಾಚಿಕೆ'ಯ ಪ್ರಶ್ನೆ ಏಳುವುದಿಲ್ಲ. ಯಾಕೆಂದರೆ ಭಿಕ್ಷೆ ಬೇಡುವುದೂ, ಕಳ್ಳತನ ಮಾಡುವುದೂ, ಆ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುತ್ತದೆ. ಅಂಥದೊಂದರ ಹುಟ್ಟಿಗೆ ಕಾರಣ, ಕ್ರೂರವಾಗಿರುವ ಸಮಾಜವ್ಯವಸ್ಥೆಯೇ ಆಗಿರುತ್ತದೆ.

ನಾಯಕ ಕಾಲು ಕಳೆದುಕೊಂಡು ದುಡಿಯುವ ಶಕ್ತಿಯಿಂದ ದೂರವಾದಾಗ ಕರುಳು ಕಿವುಚುವ ಪ್ರಸಂಗ ಬರುತ್ತದೆ. ಹೆಂಡತಿ ಸೂಳೆಗಾರಿಕೆಗೆ ಮರಳುತ್ತಾಳೆ. ಇವೆಲ್ಲಾ ಇಂದಿನ ಜೀವನದ ಪ್ರತಿಬಿಂಬಗಳು. "ಬರಿಯ ಮುದ್ದಿನ ಮಾತು ಹೊಟ್ಟೆ ತುಂಬಲೆ ಇಲ್ಲ" ಮತ್ತು "ಅಪ್ಪಿಕಪ್ಪುಗಳೆರಡು ಜಗಲಿಯಲ್ಲೇ ಉರುಳಿ ನರಳಿದಂತೆ" ಇವೆಲ್ಲ ಕವಿಯು ತನ್ನ ದಟ್ಟ ಅನುಭವವನ್ನು ಮಾತಿನಲ್ಲಿ ಹಿಡಿದುಕೊಡುವ ಶಕ್ತಿಗೆ ಸಾಕ್ಷಿಗಳಾಗಿವೆ.

ಚಿಂತೆಮಾಡಲು ಇಂಚು ಸಮಯವೂ ಇರಲಿಲ್ಲ
ಯಮನಂತೆ ನಿಂತಿದ್ದ ಸಾಲದವನು

ಇಂಥ ಕಡೆ ಕವಿ ಶೋಷಕ ಸಮಾಜದ ಚಟುವಟಿಕೆಗಳಿಗೆ ಮೈಗೊಟ್ಟ ಮೂಕ ಜನತೆಯ ಮಾತಾಗಿ ಮಿಡಿಯುತ್ತಾರೆ. ಕಥೆ ಹೇಳುವ ರೀತಿ ಅಭಿನಂದನಾರ್ಹವಾಗಿದೆ.

ಹತಭಾಗಿನಿ ತಂಗಿಗೆ (ಶಿವಳ್ಳಿ ಕೆಂಪೇಗೌಡ) ಈ ವರ್ಷ ಪ್ರಕಟವಾಗಿರುವ ಕವನ ಸಂಕಲನಗಳಲ್ಲಿ ಇದು ಕೆಲವು ಪ್ರಮುಖ ಅಂಶಗಳ ವೈಶಿಷ್ಟ್ಯದಿಂದ ಕೂಡಿದೆ : ಶಿವಳ್ಳಿಯವರ ಈ ಮೊದಲ ಸಂಕಲನ ಆಕಾರದಲ್ಲಿ ತುಂಬಾ ಚಿಕ್ಕದು ; ಹದಿನಾಲ್ಕು ಪುಟಗಳಲ್ಲಿ ಹದಿಮೂರು ಕವನಗಳಿವೆ. ಮೊದಲ ಸಂಕಲನ ಎನ್ನುವ ಕಾರಣಕ್ಕಾಗಿ ಯಾವುದೇ ರಿಯಾಯಿತಿಯನ್ನೂ ಯಾಚಿಸಿದ ಪ್ರಬುದ್ಧ ಮನಸ್ಸು ಇಲ್ಲಿನ ಎಲ್ಲ ಕವನಗಳಲ್ಲೂ ಸ್ಪಷ್ಟವಾಗಿ ಕಾಣುತ್ತದೆ. ಅನವಶ್ಯಕ ಮಾತುಗಾರಿಕೆಯಾಗಲಿ, ಕವನದ ಹೆಸರಿನಲ್ಲಿ ಕಾಡು ಹರಟೆಯಾಗಲಿ ಇಲ್ಲಿ ಕಾಣುವುದಿಲ್ಲ. ತನ್ನಾವರಣದ ಕ್ರೌರ್ಯದ ಹಿನ್ನೆಲೆಯಲ್ಲಿ ಯಾವುದಕ್ಕೂ ದಿಕ್ಕು ತೋಚದೆ ತಲೆಯ ಮೇಲೆ ಕೈಹೊತ್ತು ಕೂತ 'ತಂಗಿ'ಯೊಬ್ಬಳನ್ನು ಪರಿಚಯ ಮಾಡಿಸುತ್ತಾ "ನಿನ್ನ ಹಳೆಮನೆಯ ಮಂದಿಯ । ಗೊಡ್ಡು ಧರ್ಮಶಾಸ್ತ್ರಗಳ ಕಟ್ಟಿ । ಚಿತೆಗಿಟ್ಟು ಸುಟ್ಟು । ಹಣೆಗೆ ನೆತ್ತರ ಬೊಟ್ಟಿಟ್ಟು । ಕಾಳಿಯಾಗಿ ಮೇಲೇಳು" ಎಂದು ಆಕೆಯ ದುಃಖದಲ್ಲಿ ಸಹಭಾಗಿಯಾಗುವ ಕವಿ ಖಚಿತವಾದ ಧೋರಣೆಯನ್ನು ಹೊಂದಿದ್ದಾರೆ. ಜೀತ ಪದ್ಧತಿಯ ಅಮಾನುಷ ಉಗ್ರಚಿತ್ರ 'ವಿಷವರ್ತುಲ' ಕವನದಲ್ಲಿ ಮೂಡಿಗಟ್ಟಿದೆ :

ಬಿಸಿಲು ಧಣಿ ಹೊಡೆತ, ಉಗಿತ
ಕಿತ್ತು ಬರುವ ಬೆವರು - ರಕ್ತ
ಹಾಸಿದ್ದೇ ಹೊದೆಯುವುದು । ಚಳಿ, ಚೂರಿ
ತಟ್ಟೆ, ಗಂಜಲ ಗುಂಡಿಯ ನೆಂಟ.
ತುಪ್ಪನೆ ಬೀಳುವುದು ತಂಗಳು,
ಹಳಸಲು. ಕುಡಿಯುವುದೋ ?
ಕೇಳಬೇಡಿ । ಬೊಗಸೆಯಲಿ ನೀರು,
ಜೊತೆಗೆ ಕಣ್ಣೀರು.

'ಹಸಿದವನು', 'ಮಾರಿಕೊಂಡವ', 'ಸಂಪಾದಕರಿಗೆ ಸಾಮಾನ್ಯನ ಕೋರಿಕೆ', 'ಹತಭಾಗಿನಿ ತಂಗಿಗೆ', 'ಜಾತಿ', 'ಸ್ನೇಹಿತ'–ಇವು ಈ ಸಂಕಲನದ ಅತ್ಯುತ್ತಮ ಕವನಗಳು. ಕೆಂಪೇಗೌಡರ ಮುಂದಿನ ರಚನೆಗಳ ಬಗ್ಗೆ ಇವು ಹುಟ್ಟಿಸಿರುವ ಆಶೆ, ಭರವಸೆಗಳು ಮತ್ತು ಕೆರಳಿಸಿರುವ ಕುತೂಹಲ ಪ್ರಮುಖವಾದುವುಗಳು.

ಮೇಘಮಾಲಾ (ಪಾಂಚಜನ್ಯ) "ಸಮಾಜದ ಆಘಾತಕ್ಕೆ ಸಿಕ್ಕಿದಾಗ ಸಾಹಿತ್ಯಕ್ಕೆ ಶರಣು ಹೋಗಿದ್ದೇನೆ" ಎನ್ನುವ ಈ ಲೇಖಕರು ತಮ್ಮ ಎಲ್ಲ ಕವನಗಳಲ್ಲಿಯೂ ಮುಖ್ಯವಾಗಿ ಮುಂದಿನ ಒಳ್ಳೆಯ ದಿನಗಳಿಗಾಗಿ ಹಾರೈಸುವ ಸಂಭ್ರಮವನ್ನು ಕಾಣುತ್ತೇವೆ. ಆ ಒಳ್ಳೆಯ ದಿನಗಳು ಮನುಷ್ಯ ಪ್ರಯತ್ನದಿಂದಲ್ಲ ಬರುವುದು ; ದೇವದೇವತೆಗಳ ಕರುಣೆಯಿಂದ ಎಂದು ಇಲ್ಲಿನ ಪದ್ಯಗಳು ಸಾರುತ್ತವೆ :

ನೀನೆ ಜಗನ್ಮೋಹಿನಿ ! ಮನಮೋಹಿನಿ !
ಪತಿತಪಾವನಿ ! ಧರ್ಮ ಸಂಸ್ಥಾಪನೆಗೆ
ಯುಗಯುಗಾಂತರದಿಂ
ನೀಂ ಬರುತಿಹ ಹಾದಿಯಲಿ
ನಿನಗಾಗಿ ಕಾದಿಹೆನು

ರಾಮಾಯಣ, ಮಹಾಭಾರತ ಗೀತೆಗಳಲ್ಲಿನ ಪೌರಾಣಿಕ ಕಲ್ಪನೆಗಳೆಲ್ಲಾ ಅಕ್ಷರಶಃ ನಿಜವೆನ್ನುವಂತೆ ಲೇಖಕರು ನಂಬಿರುವುದನ್ನು ಈ ಕವನಗಳಲ್ಲಿ ಕಾಣಬಹುದು. ಬದುಕನ್ನು ನೇರವಾಗಿ ಎದುರಿಸುವ ಕೆಚ್ಚಿಲ್ಲದೆ ಸುಂದರ ಮತ್ತು ಶಿವಮಯವೆಂದು ಹೇಳುತ್ತಾ ಕಣ್ಣುಮುಚ್ಚಿ ಹೊರಡುವ ವ್ಯಕಿತ್ವ ಇಲ್ಲಿ ಕಂಡುಬರುತ್ತದೆ. ಭಾಷೆಯ ಬಳಕೆಯಲ್ಲಿ ಹೊಸತನವಿಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯ ಇಲ್ಲ. ಈ ಸಂಕಲನದಲ್ಲಿರುವ ಎರಡು ಇಂಗ್ಲಿಷ್ ಕವನಗಳಿಗೂ ಕೂಡ ಮೇಲಿನ ಮಾತುಗಳು ಅನ್ವಯಿಸುತ್ತವೆ.

ಕ್ಷಿತಿಜ (ಕುಲಶೇಖರಿ) "ಸಂಕಲ್ಪ", "ರಾಗಮಾಲಿಕೆ", "ಮಧುವನ"–ಎಂಬ ಮೂರು ಮುಂದಿನ ಕವನ ಸಂಕಲನಗಳನ್ನು ಈಗಾಗಲೇ ಸಿದ್ಧಪಡಿಸಿಕೊಂಡಿರುವ ಕುಲಶೇಖರಿಯವರ ಮೊದಲ ಸಂಕಲನ ಇದು. ಈ ಲೇಖಕಿಯ ಉತ್ಸಾಹವನ್ನು ಕುರಿತು ಅವರ ಪುಟ್ಟ ಮಗು ಕೂಡ - "ಬಸ್ ಟಿಕೆಟ್ ಹಿಂಭಾಗದಲ್ಲಿಯೂ ಕವನ ಬರೆದಿದ್ದಾರೆ ಅಮ್ಮ" ಎಂದು ಹೇಳುತ್ತದೆ. ಮಹಿಳಾ ವರ್ಷದಲ್ಲಿ ಈ ಪುಸ್ತಕ ಹೊರಬರುತ್ತಿದೆ ಎನ್ನುವ ಸಡಗರದಲ್ಲಿದ್ದಾರೆ ಲೇಖಕಿ. ಆದರೆ ಮಹಿಳೆಯು ಚಾರಿತ್ರಿಕವಾಗಿ ನಮ್ಮಲ್ಲಿ ತುಳಿದ ಗಡಿಗೆರೆಗಳ ಕಡೆಗೆ ಕಣ್ಣಾಡಿಸದೆ ಬರೆದ ರಚನೆಗಳು ಇಲ್ಲಿ ಕಾಣುತ್ತವೆ.

ದಿನಚರಿಯ ಸಂಗತಿಗಳನ್ನು ಹರಟೆಯ ಧಾಟಿಯಲ್ಲಿ ಹೇಳುತ್ತಾ ಹೊರಡುವ ಲೇಖಕಿ ಕಿಲುಬುಗಟ್ಟಿದ ಭಾಷೆಯನ್ನು ಬಳಸುವುದಿಲ್ಲ. ಸರಳ ಗದ್ಯವಾಗಿ ರೂಪುಗೊಂಡ ಅನೇಕ ಸಾಲುಗಳು ಇಲ್ಲಿವೆ :

ಕಾಲನ ಹೆಜ್ಜೆಯ ಕಾಲ್ತುಳಿತಕೆ ಸಿಲುಕಿ
ನಲುಗುತಿವೆ ಹೃದಯದ ಭಾವನೆಗಳೆಲ್ಲ
ಮುಳುಗುತ್ತಿವೆ ಮನದಾಸೆ ಕಿರಣಗಳೆಲ್ಲ
ಹಾಳಾಗುತಿವೆ ಹುಡಿಯೊಂದಿಗೆ ಹುಡಿಯಾಗಿ

ಎನ್ನುವಂತಹ ಮುಖ್ಯವಾದ ಅಂಶಗಳನ್ನು ಪರಿಣಾಮಕಾರಿಯಾಗಿ ಹೇಳಲು ಬೇಕಾದ ತೀವ್ರತೆಯಿಲ್ಲದೆ ಅನೇಕ ಸಾಲುಗಳು ಸಪ್ಪೆಯಾಗುತ್ತವೆ. 'ನಾನು ಹಂಚಿ ಹೋಗಿದ್ದೇನೆ', 'ಸ್ತ್ರೀಸಾಮಾನ್ಯ' ಮತ್ತು 'ಸೋಮಾರಿ'–ಈ ಸಂಕಲನದ ಉತ್ತಮ ಪದ್ಯಗಳು.

ರಾಯರ ಅಂತರಂಗ (ಕಂದ ಜಲಜ) "ಮಂತ್ರಾಲಯದ ಗುರುಸಾರ್ವಭೌಮರಾದ ಕಡಲ ಬಾಳು ರಾಯರ ಅಂತರಂಗವನ್ನು ಬಹಿರಂಗಪಡಿಸಿದವಳು" ಎಂದು ತಮ್ಮ ಬಗ್ಗೆ ಲೇಖಕಿಯು ಹೇಳಿಕೊಂಡಿದ್ದಾರೆ. ತೊಂಬತ್ತೈದು ಪುಟಗಳ ತುಂಬ ಹರಡಿಕೊಂಡಿರುವ ಇಲ್ಲಿನ ಹಾಡುಗಳಲ್ಲಿ ಧರ್ಮ ಭಕ್ತಿಗಳು ಭಾರತದಲ್ಲಿ ಮಾಯವಾಗುತ್ತಿರುವ ಅಂಶಗಳನ್ನು ಕುರಿತು ಬಗೆಬಗೆಯಾಗಿ ವಿವರಿಸಲಾಗಿದೆ.

ಕಾವ್ಯವಾಗದ ನೀರಸ ಸಾಲುಗಳಿಂದ ಕೂಡಿರುವ ಈ ಸಂಕಲನ ಪಾಮರಾಲಿಯಾದ ಅರ್ಥದಲ್ಲಿ ಒಂದು 'ನೀತಿ' ಪುಸ್ತಕವಾಗಿದೆ.

ಶ್ರೀ ಅಭಿನವ ಮಹಾಭಾರತ ಕಾವ್ಯಮಂಜರಿ - ಸಂಪುಟ 1 (ಸಿ. ಎಂ. ದೇವೇಂದ್ರ ನಾಯಕ) ಶರಷಟ್ಪದಿಯಲ್ಲಿ ಮಹಾಭಾರತವನ್ನು ಕಥನ ಕಾವ್ಯವಾಗಿ ಬರೆಯ ಹೊರಟ ಲೇಖಕರ ಮೊದಲ ಸಂಪುಟ ಇದು. "ಇನ್ನು ಉಳಿದ ಹತ್ತೊಂಭತ್ತು ಸಂಪುಟಗಳನ್ನು ಕಾವ್ಯಪ್ರಕಾಶದ ಬೆಳಕಿನ ವೇಗದಲ್ಲಿ ಬರೆದು ಕನ್ನಡ ಕುಲರಸಿಕರಿಗೆ ಸಮರ್ಪಿಸಿ, ನನ್ನ ಇಹ ಜೀವನದಲ್ಲಿ ಕಾವ್ಯದ ಈ ಮಹಾಪರ್ವವನ್ನು ಆದಷ್ಟು ಬೇಗನೆ ಮುಗಿಸುವೆನೆಂಬ ಆತ್ಮ ಭರವಸೆಯನ್ನು ಓದುಗರಿಗೆ ಕೊಡಬಯಸುವೆ"-ಎನ್ನುವ ದೇವೇಂದ್ರನಾಯಕರು ಈ ಸಂಪುಟವನ್ನು ಕುರಿತು ಹೀಗೆ ಹೇಳಿದ್ದಾರೆ : "ಆಧುನಿಕ ಕನ್ನಡ ಕಾವ್ಯ ಪ್ರಪಂಚದಲ್ಲಿ ಇದು ನನ್ನ ಕಾವ್ಯಸೀಮೋಲ್ಲಂಘನೆ ಎಂದು ಪುಳಕಿತನಾಗಿ ಅರ್ಪಿಸಿರುವೆ". ಇಷ್ಟೆಲ್ಲ ಸಂಭ್ರಮದಲ್ಲಿರುವ ಲೇಖಕರು "ಕುಮಾರವ್ಯಾಸ ಭಾರತ ಕಥೆಯನ್ನು ಓದಿದ ಪರಿಯನು ವಿವರಿಸುವೆ" ಎಂದು ವಿನಯವನ್ನು ಪ್ರಕಟಿಸಿದ್ದಾರೆ. ಈ "ವಿವರಿಸು"ವ ಕ್ರಿಯೆಯಲ್ಲಿ ತೊಡಗಿದ ಇವರು ಶರಷಟ್ಪದಿಯಲ್ಲಿ ಆದಿಪ್ರಾಸವನ್ನಿಟ್ಟು ಕಥೆ ಹೇಳುತ್ತಾರೆ. ಇವರ ಪ್ರಾಸದ ಗೀಳು 'ಹುಬ್ಬಳ್ಳಿ' ಯನ್ನು 'ಹೂಬಳ್ಳಿ'ಯನ್ನಾಗಿಯೂ, 'ಕುವೆಂಪು'ವನ್ನು 'ಕೂವೆಂಪು'ವೆಂದೂ ಮಾರ್ಪಡಿಸುವಂತೆ ಬಲಾತ್ಕರಿಸುತ್ತದೆ. ತನ್ನ ಕಾವ್ಯ ಕೃಷ್ಣ, ಅರ್ಜುನ, ಕರ್ಣ ಮುಂತಾದವರ ಕಥೆಯಲ್ಲ. 'ಧರ್ಮರಾಯನ ಸೂರಿ' ಇರುವ ಗ್ರಂಥವೆಂದು ಲೇಖಕರು ವೈಶಿಷ್ಟ್ಯವನ್ನು ಹೇಳಿದ್ದಾರೆ. 'ಮಂಗಳ ಪೀಠಿಕೆ'ಯಿಂದ ಪ್ರಾರಂಭವಾಗಿ 'ದ್ರೋಣರಲ್ಲಿ ಕುರುಪಾಂಡವರ ಬಿಲ್ಲು ವಿದ್ಯೆಯ ಶಿಕ್ಷಣ' ನಡೆಯುವ ತನಕದ ಕಥೆಯನ್ನು ಮೊದಲ ಸಂಪುಟವು ಒಳಗೊಂಡಿದೆ. ಈ ಪುಟ್ಟ ಛಂದೋರೂಪವನ್ನು ದೊಡ್ಡ ಕಥೆಯ ಮಾಧ್ಯಮವಾಗಿ ಆರಿಸಿಕೊಂಡ ಲೇಖಕರು ಪ್ರಾಸ ಕೆಡದಂತೆ ಭಾರತ ಕಥೆ ಮುಂದೆ ಸಾಗುವುದಕ್ಕಷ್ಟೇ ಇಕ್ಕಟ್ಟಿನ ದಾರಿಯಲ್ಲಿ ಕಷ್ಟಪಟ್ಟಿದ್ದಾರೆ. ಕಲೆ ಮತ್ತು ಕಾವ್ಯಕ್ಕೆ ಸಂಬಂಧಪಟ್ಟಂತೆ ಹೇಳಬೇಕಾದ್ದು ಈ ಸಂಪುಟದ ಮಟ್ಟಿಗೆ ಏನೂ ಇಲ್ಲ.

ಕನ್ನಡ ಕಿರಣ (ನರಸಿಂಹಕುಮಾರ) ಇದು ಲೇಖಕರ ಮೊದಲ ಸಂಕಲನ. ಆರಂಭದ ಉತ್ಸಾಹ ಕನ್ನಡ ನಾಡು, ನುಡಿ ಹಾಗೂ ಜನವನ್ನು ಕುರಿತು ಹಾಡಿ ಹೊಗಳುವ ಸಾಮಾನ್ಯ ಕ್ರಿಯೆಯಲ್ಲಿ ಕವಿಯನ್ನು ತೊಡಗಿಸಿದೆ. "ಹೊನ್ನನೆ ಬೆಳೆಯುವ ಚಿನ್ನದ ನಾಡು. ಗಂಧದ ತವರು ಚಂದದ ಬೀಡು" ಆಗಿರುವ ಕರ್ನಾಟಕದಲ್ಲಿ 'ಜಂಬವು ಏತಕೆ ನಾ ಬಡವ' ಎಂದು ಒಪ್ಪಿಕೊಳ್ಳುವ ಸ್ಥಿತಿ ವ್ಯಕ್ತಿಗೆ ಇದೆ. ಅದಕ್ಕೆ ಪರಿಹಾರವನ್ನು ದೇವರಲ್ಲಿ ಮೊರೆಯಿಟ್ಟು ಅಳುವುದರಲ್ಲಿ ಕಾಣುತ್ತಿರುವುದು ಹಾಸ್ಯಾಸ್ಪದ. 'ಹಳ್ಳಿಯ ಹಾಡು', 'ಓಟಿ' ಮತ್ತು 'ತಾಪ'-ಈ ಸಂಕಲನದಲ್ಲಿನ ಉತ್ತಮ ಕವನಗಳಾಗಿವೆ ; ಉಳಿದ ಕವನಗಳ ಹಿನ್ನೆಲೆಯಲ್ಲಿ ಬರವಣಿಗೆಯ ಧಾಟಿಯನ್ನು ಗಮನಿಸಿದರೆ ಈ ವಿಚಾರ ಲೇಖಕರಿಗೆ ಗೊತ್ತಿರುವಂತೆ ಕಾಣುವುದಿಲ್ಲ. "ಸಂಯಮದಿಂದ ಬರೆದು, ತಿದ್ದಿ ಬರೆಯುತ್ತಾ ಹೋದರೆ, ಅಭ್ಯಾಸ ನಡೆಸಿದರೆ ಉತ್ತಮ ಕವನ ಬರೆಯಬಲ್ಲರು'' ಎಂದು ಮುನ್ನುಡಿಕಾರರು ಹೇಳಿರುವುದು ಸೂಕ್ತವಾಗಿದೆ.

ವೀಣೆಯ ತಂತಿ ; ದುಂಬಿ (ರಘುಸುತ) ಕಳೆದ ಇಪ್ಪತ್ತು ವರ್ಷಗಳಲ್ಲಿ ತಾವು ಬರೆದ ಪದ್ಯಗಳನ್ನು ಈ ಎರಡು ಸಂಕಲನಗಳಾಗಿ ಲೇಖಕರು ಪ್ರಕಟಿಸಿದ್ದಾರೆ. ಪ್ರಕೃತಿ ಸೌಂದರ್ಯ ಮತ್ತು ಪ್ರೇಮವನ್ನು ಕುರಿತು ಬರೆಯುವಾಗ ತೀರ ಬಾಲಿಶವಾದ ಅಭಿಪ್ರಾಯಗಳನ್ನು ಕವನಗಳಲ್ಲಿ ತುರುಕಿದ್ದಾರೆ. ಸಮಾಜದಲ್ಲಿನ 'ಅವ್ಯವಸ್ಥೆ'ಯನ್ನು ವಿವರಿಸುವ ಸಂದರ್ಭ ಬಂದಾಗ – ಒಂದು ನಿರ್ದಿಷ್ಟ ತಾತ್ವಿಕ ನೆಲೆಗಟ್ಟನ್ನು ರೂಪಿಸಿಕೊಳ್ಳದಿರುವ ಸ್ಥಿತಿಯ ಈ ಲೇಖಕ ಗೊಂದಲಕ್ಕೆ ಒಳಗಾಗುತ್ತಾರೆ. ಕನ್ನಡದ ಕೆಲವು ವಿಮರ್ಶಕ ಹಾಗೂ ಕವಿಗಳನ್ನು ವೈರಿಗಳಂತೆ ಭಾವಿಸಿ ಮೈ ಪರಚಿಕೊಂಡು ಒಂದೆರಡು ಪದ್ಯಗಳನ್ನೂ ಬರೆದಿದ್ದಾರೆ. ಇಪ್ಪತ್ತು ವರ್ಷಗಳ ಅವಧಿಯಲ್ಲಿನ ಇಲ್ಲಿನ ಪದ್ಯಗಳ ರಚನೆಯ ವಿಧಾನದಲ್ಲಿ ಬದಲಾವಣೆಯೇ ಕಾಣುವುದಿಲ್ಲ. "ವೀಣೆಯ ತಂತಿ" ಸಂಕಲನದ 'ಮೊದಲ

ಮಾತು' ಬರೆಯುತ್ತಾ ತಮ್ಮ ಈತನಕದ ಕೃತಿಗಳನ್ನು ಕಟುವಾಗಿ ವಿಮರ್ಶಿಸಿದವರ ಮೇಲೆ ಹರಿಹಾಯ್ದಿದ್ದಾರೆ. 'ಮದ್ದು ಇಡುವವರದೇ ಒಂದು ಗುಂಪು ಇರುತ್ತದೆ. ಯಾರೂ ದೊರೆಯುದಿದ್ದಾಗ ಸ್ವಂತ ಮಕ್ಕಳಿಗೇ ಮದ್ದೀಡು ಮಾಡುವರಂತೆ!...ಹಾಗಾಗಿದೆ ನಮ್ಮ ಈ ವಾನ್ಯ ವಿಮರ್ಶಕರ ಸ್ಥಿತಿ' ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವ ಒಳ್ಳೆಯ ಗಾದೆ ಕನ್ನಡದಲ್ಲಿದೆ. ನಿಜ. ಆದರೆ ಇತರರ ವಿಚಾರಗಳ ಕಡೆಗೆ ಕಣ್ಣಾಡಿಸುವುದೇ ಇಲ್ಲ ಎಂದು ಪ್ರತಿಜ್ಞೆ ಮಾಡಿ ಕೂತರೆ?

ಅನ್ವೇಷಣ (ಸಿ. ಪಿ.) ದೇವ-ಜೀವರ ಸಂಬಂಧವನ್ನು ಕುರಿತು ಇಲ್ಲಿನ ಪದ್ಯಗಳಲ್ಲಿ ಹಾತಲಾಗಿದೆ. ಈ ಸಂಬಂಧವು ಬಹುಪಾಲು ನಮ್ಮ ಪ್ರಾಚೀನರು ಹೇಳಿದ ರೀತಿಯದು. ತಮ್ಮದೇ ಆದ ಹೊಚ್ಚ ಹೊಸ ಭಾಷೆಯನ್ನು ಲೇಖಕರು ರೂಢಿಸಿಕೊಳ್ಳಲಿಲ್ಲವಾದ ಕಾರಣ ಪರಿಣಾಮಕಾರಿಯಾಗಿ ಓದುಗರನ್ನು ಇಲ್ಲಿನ ಪದ್ಯಗಳು ಮುಟ್ಟಲಾರವು. 'ಕ್ರಾಂತಿಪಥ' 'ನಾವೆಲ್ಲ ಒಂದೆ' ಮುಂತಾದ ರಚನೆಗಳು ಲೇಖಕರ ಬೆಳವಣಿಗೆಯ ಬಗ್ಗೆ ಆಶಾದಾಯಕವಾಗಿವೆ.

ಲಾಸ್ಯ-ತಾಂಡವ (ಬಿ. ಎಸ್. ಸ್ವಾಮಿ) ಬೆಂಗಳೂರು ಆಕಾಶವಾಣಿಯ ಸಹ ಸಂಪಾದಕರೂ ಆದ ಲೇಖಕರು ಬರೆದ ಹಲವು ರೇಡಿಯೋ ಹಾಡುಗಳು ಅವರ ಈ ನಾಲ್ಕನೆಯ ಸಂಕಲನದಲ್ಲಿ ಸೇರಿವೆ. ಹಾಡುವುದಕ್ಕೆ ಬರೆದ ಈ ಪದ್ಯಗಳಲ್ಲಿ ಪ್ರಾಸಕ್ಕೆ ಪ್ರಥಮ ಪ್ರಾಶಸ್ತ್ಯ ಸಿಕ್ಕಿದೆ: 'ಶ್ರೀ ಸಿದ್ಧಗಂಗಾ, ನಿನ್ನಾತ್ಮ ತುಂಗಾ। ತರದಿರೆನ್ನ ಭಾವಕ್ಕೆ ಭಂಗಾ.' ಇನ್ನು ಇವರ ವೈಚಾರಿಕ ನಿಲುವನ್ನು ಪರಿಚಯ ಮಾಡುವ ಕವನದ ಸಾಲುಗಳಲ್ಲಿ ಇವು ಕೆಲವು:

ಪಾವನೆಯ ಕೋಪಕ್ಕೆ ಸಿಲುಕಿ ನಾ ಪಾಪಿಯಾದೆ
ಅಂಗಾಂಗ ಬಣ್ಣಿಸಿದ ತಿಳಿಗೇಡಿ ನಾನಾದೆ
ಸುಂದರಿಯ ಭ್ರಮಿಸಿದ ಭ್ರಷ್ಟನೂ ನಾನಾದೆ
ಶ್ರೀ ಸಿದ್ಧಗಂಗಾ ಶಾಪಕ್ಕೆ ನಾ ತುತ್ತಾದೆ

ಕುಟುಂಬಯೋಜನೆಯ ಪ್ರಚಾರ ಕಾರ್ಯದಲ್ಲಿಯೂ ಲೇಖಕರು ಸೇವೆಯನ್ನು ಸಲ್ಲಿಸಿದ್ದಾರೆ. 'ಕಾಲಕ್ಕನುಗುಣವಾಗಿ ಕೆಲವು ನವ್ಯಪದ್ಯಗಳೂ ಭಾವನೆಗೆ ಸಿಲುಕಿ ಮೂಡಿ ಬಂದಿವೆ' ಎಂದು ಹೇಳಿದ್ದಾರೆ. ಗಮನಿಸಬಹುದಾದ ಯಾವ ಉತ್ತಮ ಅಂಶವನ್ನೂ ಅವರ 'ನವ್ಯಪದ್ಯ'ಗಳು ಕೂಡಾ ಒಳಗೊಂಡಿಲ್ಲ.

ಬೆಂಗಾಡು (ವಿ. ಎಸ್. ಕಾಶೆಟ್ಟಿ) 'ಮಳಲುದಾರಿ'ಯ ನಡಿಗೆಯನ್ನು ಮುಗಿಸಿ ಈಗ 'ಬೆಂಗಾಡು' ತಲುಪಿರುವ ಕಾಶೆಟ್ಟಿಯವರಲ್ಲಿ ಸಾಕಷ್ಟು ಬೆಳವಣಿಗೆ ಕಂಡುಬಂದಿದೆ. ಭಾಷೆಯ ಬಳಕೆಯಲ್ಲಿ ಕೂಡ ಮೊದಲ ಸಂಕಲನಕ್ಕಿಂತ ಗಮನಾರ್ಹವಾದ ಯಶಸ್ಸನ್ನು ಸಾಧಿಸಿದ್ದಾರೆ. 'ಬೆಂಕಿ ಬಿದ್ದಿದೆ ಒಡಲಿಗೆ', 'ಉಡ್ಡಾಣ', 'ಕುಯಿಲು', 'ಮರಗಳು'–ಈ ಸಂಕಲನದ ಉತ್ತಮ ಕವನಗಳು. ನವ್ಯ ಹಾಗೂ ನವ್ಯವಲ್ಲದ ಕವನಗಳೆಂದು ಕವಿಯೇ ವಿಂಗಡಿಸುವ ಗೋಜಿಗೆ ಹೋಗುವ ಬದಲು ತಾನು ಬರಹದಲ್ಲಿ ಹೇಳಬೇಕಾದ್ದು ಏನು ಎನ್ನುವುದನ್ನು ತಿಳಿದರೆ ಸಾಕು. ಬದುಕಿನ ಕಷ್ಟ ಕೋಟಲೆಗಳನ್ನು ಸಾಕಷ್ಟು ಗಟ್ಟಿಯಾಗಿ ಅಲ್ಲಲ್ಲಿ ಚಿತ್ರಿಸಲು ಶಕ್ತರಾಗಿರುವ ಲೇಖಕರು ಅದಕ್ಕೆಲ್ಲ ಮದ್ದು ಹುಡುಕುವಲ್ಲಿ ಕಂಡುಕೊಂಡಿರುವ ದಾರಿ ಮಾತ್ರ ಗಾಬರಿ ಹುಟ್ಟಿಸುತ್ತದೆ:

ಕೊರಡು ಕೊನರೀತು ಅವನೊಲಿದರೆ
'ಯದಾ ಯದಾ ಹಿ ಧರ್ಮಸ್ಯ...
...ಸಂಭವಾಮಿ ಯುಗೇಯುಗೇ'
ಎನುತ ನೋಡುತ್ತಲಿದ್ದೇನೆ
ಆ ಬೆಟ್ಟದತ್ತ,—
ಈ ಬೆಂಗಾಡಿನಲ್ಲಿ.

ಅಂಕುರ (ಟಿ. ಜಿ. ಪ್ರಭಾಶಂಕರ 'ಪ್ರೇಮಿ') ಕಳೆದ ಹದಿನೈದು ವರ್ಷಗಳಲ್ಲಿ ಲೇಖಕರು ಬರೆದ ಕವನಗಳು ಅವರ ಈ ಮೊದಲನೆಯ ಸಂಕಲನದಲ್ಲಿ ಸೇರಿವೆ. 'ಸ್ವಾನುಭಾವದಿಂದ ಮೂಡಿದ ನನ್ನ ಕವಿತೆಗಳಲ್ಲಿ ವಿಚಾರಗಳನ್ನು ಮತ್ತು ಶಬ್ದಗಳನ್ನು ಅನಾವಶ್ಯಕವಾಗಿ ತುರುಕುವ ಪ್ರಯತ್ನ ನಡೆದಿಲ್ಲ. ಅನ್ನಿಸಿದ್ದನ್ನು ಅನಿಸಿದಂತೆಯೇ ನಿರೂಪಿಸುವ ಪ್ರಯತ್ನ ಮಾಡಿದ್ದೇನೆ' ಎಂದು 'ಪ್ರೇಮಿ'ಯವರು ಪ್ರಾರಂಭದ ತಮ್ಮ ಮಾತುಗಳಲ್ಲಿ ತೀರಾ ಮುಗ್ಧವಾಗಿ ಸ್ಪಷ್ಟಪಡಿಸಿದ್ದಾರೆ. ಶ್ರೇಷ್ಠ ಕಾವ್ಯ ರಚನೆಯ ಆಶೆಯುಳ್ಳ ಯಾವ ಕವಿಯೂ ವಿಚಾರ ಮತ್ತು ಭಾಷೆಯ ಜತೆಗಿನ ತನ್ನ ಸಂಬಂಧವನ್ನು ಇಷ್ಟು ಸಲೀಸಾಗಿ ಹೇಳಿಕೊಳ್ಳಲಾರ. ಆದ್ದರಿಂದಲೇ 'ಅಂಕುರ' ಕವನ ಸಂಕಲನದ ಬಹುಪಾಲು ಕವನಗಳು ಮುಗ್ಧವೂ, ಬಾಲಿಶವೂ ಆಗಿವೆ. ಹಿನ್ನುಡಿಯಲ್ಲಿ ರಾಜಪ್ಪನವರು ಹೇಳಿರುವಂತೆ, 'ಈ ಕವನಗಳಲ್ಲಿ ಆಧುನಿಕ ಕನ್ನಡ ಕವನಗಳ ಲಕ್ಷಣಗಳನ್ನು ಹುಡುಕಿದರೆ ಸಿಗುವುದಿಲ್ಲ. ಆದರೆ ತಮಗೆ ಆಯಾ ಕಾಲಕ್ಕೆ ಮೂಡಿದ ಭಾವನೆಗಳಿಗೆ ಭಾಷೆಯ ತೊಡಿಗೆಯಿಟ್ಟು ತಮ್ಮ ಭಾವನೆಗಳನ್ನು ಸ್ಪಷ್ಟವಾಗಿ ಮೂಡಿಸುವ ನಮ್ರ ಪ್ರಯತ್ನವಿಲ್ಲಿದೆ'.

ಮಣಿಮಾಲೆ (ರಂ. ಶ್ರೀ. ಮುಗಳಿ) ಇದು ನೂರೆರಡು ಮುಕ್ತಕಗಳ ಸಂಕಲನ. ಬದುಕಿನಲ್ಲಿ ಬೇಜವಾಬ್ದಾರಿ ಮತ್ತು ಪಲಾಯನತ್ವ ಬರುವ ಮಟ್ಟಕ್ಕೆ ಈ ಮುಕ್ತಕಗಳಲ್ಲಿ ಅಹಂನ ಖಂಡನೆ ನಡೆದಿದೆ. 'ಮಣಿಮಾಲೆ'ಯ ಆರಂಭದ ಕವನಗಳಲ್ಲಿ ಲೇಖಕರು 'ಎಲ್ಲವೂ ದೈವಪ್ರೇರಿತ' ಎಂಬ ಸಿದ್ಧಾಂತವನ್ನು ನೇರವಾಗಿ ಮಂಡಿಸುತ್ತಾರೆ. 'ಎಲ್ಲಿಂದಲೋ ಬಂದ ಚಂದವನು ತಾತಂದ ಸಿರಿಯೆಂದು ತಿಳಿಯದಿರಲಿ ಕವಿಯೆಂಬ ವಾಹಕನು' ಎಂಬಲ್ಲಿ ಇದು ಸ್ಪಷ್ಟವಾಗುತ್ತದೆ. ಪ್ರಕೃತಿಯ ಕೆಲವು ವಿದ್ಯಮಾನಗಳನ್ನು ಹೇಳುವುದರ ಮುಖಾಂತರ ಇವರು ತಮ್ಮ ವಾದಕ್ಕೆ ಪುಷ್ಟಿಯನ್ನು ಪಡೆಯಲು ಯತ್ನಿಸುತ್ತಾರೆ. ಎಲ್ಲಕ್ಕೂ ದೈವಪ್ರೇರಣೆ ಕಾರಣ ಎಂಬ ಸಿದ್ಧಾಂತದ ಪ್ರತಿಪಾದನೆಯೂ ಅಸ್ಪಷ್ಟವಾಗಿ ನಡೆದು ಇವರ ಕಾವ್ಯ ಗೊಂದಲದಲ್ಲಿ ಬೀಳುತ್ತದೆ.

ದೇವರು ಭೂಮಿಯನ್ನು ಕಾಲ್ಚೆಂಡು ಮಾಡಿಕೊಂಡಿರುವ ಪ್ರತಿಮೆ ಬರುತ್ತದೆ. ಹುಟ್ಟು ಮತ್ತು ಸಾವು ಅವನ ಹಿಂದು ಮತ್ತು ಮುಂದಿನ ಒದೆತ-ಸೃಷ್ಟಿಯ ಬಗ್ಗೆ ಈ ಧೋರಣೆ ತಳೆದಿರುವ ಕವಿಗೆ ಸಾಯುವಾಗ 'ಬಿಟ್ಟು ಹೋಗಲಾರದ ನಟ್ಟ ಮಮತೆಯ ಅಳು' ಬರುತ್ತದೆ. ಬಾಳಿನ ತುಂಬ 'ಅಳು' ಇದೆ ಎನ್ನುವುದು ಇವರ ಸರಳೀಕೃತ ಧೋರಣೆ. ಇದಕ್ಕೆ ಪರಿಹಾರ 'ತಾಳು ತಾಳು' ಎಂದು ಹೇಳುವ ನಭೋವಾಣಿ. ವಿಶ್ವವು ಇವರಿಗೆ 'ಯಾವ ಮಾರಾಯನೋ ಕಟ್ಟಿಸಿ ಕಡೆಗಣಿಸಿದ ಧರ್ಮ ಶಾಲೆ' ಆಗಿದೆ. ಮಾನವರು ಯಾತ್ರಿಕರು ಎಂಬ ನಿರ್ಲಿಪ್ತತೆಯನ್ನು ತೋರಿಸಿಕೊಳ್ಳುತ್ತಾರೆ. ಬಾಳಿನ ಸೂತ್ರಧಾರನ ಅಸ್ತಿತ್ವವನ್ನು ನಿರಾಕರಿಸುವ ಮಾತೂ ಬರುತ್ತದೆ. 'ಅವನಿಲ್ಲ' ಎಂಬ ಮಾರ್ದನಿ ಬಾಳ ಗುಮ್ಮಟದಲ್ಲಿ ನಿನಾದ ಮಾಡಿದರೆ 'ನಾನಿಹೆನು ನಿನ್ನಲ್ಲಿ ಅಡಗಿಹೆನು' ಎಂಬ ದೇವರವಾಣಿ ನೆಲಮುಗಿಲನ್ನು ತುಂಬಿ ಜೀವ ಜೀವದ ಪದರಪದರದಲ್ಲಿ ಇವರಿಗೆ ಕೇಳುತ್ತದೆ.

ಹೀಗೆ ಕವಿಯ ತಾತ್ವಿಕ ನಿಲುವಿನಲ್ಲಿಯೇ ವಿರೋಧಾಭಾಸಗಳು ಸ್ಪಷ್ಟವಾಗಿ ಮೂಡುತ್ತವೆ. ಬದುಕಿನ ನಶ್ವರತೆಯನ್ನೂ ದೇವರ ವೈಭವವನ್ನೂ ಮನವರಿಕೆ ಮಾಡಿಸಲು ಯತ್ನಿಸುವ ಈ ಕವಿ ಮುಂದುವರಿದು ಅನ್ನ ಸಮಸ್ಯೆ, ಅದರ ಕರಾಳತೆ ಮತ್ತು ಬಡವರ ಗೋಳಿನ ಬಗ್ಗೆ ಅಷ್ಟೇ ತನ್ಮಯವಾಗಿ ಹೇಳುವಾಗ ಸಿಕ್ಕಿ ಬೀಳುತ್ತಾರೆ. ಜನತೆಯನ್ನು ದೇವರ ಸೂತ್ರದ ಗೊಂಬೆಗಳೆಂದು ತಿಳಿಯುವ ಈ ಕವಿ, ಬಡವರ ಅಸಹಾಯಕತೆ, ಹಾಗೂ ಸಿರಿವಂತರ ದರ್ಪದ ಬಗ್ಗೆ ಕಳಕಳಿಯಿಂದ ಮಾತನಾಡುವುದು ವಿಲಕ್ಷಣವಾಗುತ್ತದೆ. ಆದ್ದರಿಂದ ಅವರು ಮುಂದಿನ ಮುಕ್ತಕಗಳಲ್ಲಿ ಹೇಳುವ ಸಾಮಾಜಿಕ ಕಳಕಳಿಗೆ ಭೂಮಿಕೆಯೇ ಸಿದ್ಧವಾಗುವುದಿಲ್ಲ.

ಕೂಳುಕೂಳೆಂದು ಜನಜಂಗುಳಿಯು ಕೂಗಾಡಿದಾಗ ಅವನ ಅರಮನೆಯ ಐಸಿರಿಯು ಕಲೆ ಸಿಡಿಯುತ್ತದೆ; ದೊರೆ ಇನ್ನು ದೊರೆಯದವನಾಗುತ್ತಾನೆ–ಎನ್ನುವಾಗ ಕವಿ ಅನ್ನಕ್ಕಾಗಿ ಜನ ನಡೆಸಿದ ಪ್ರತಿಭಟನೆಯನ್ನು ಕುರಿತು ಹೇಳಲು ತೊಡಗುವರು. ಜನತೆಯ ಬವಣೆ ಚಿತ್ರಿತವಾಗಿರು

ವುದಕ್ಕಿಂತ ಕವಿಗಳಿಗೆ ಕಲೆ ಹಸಿವಿಗೆ ಆಹುತಿ ಆದ ನೋವು ಮತ್ತು ದೊರೆಯು ದೊರೆಯಲಾರದ ಸ್ಥಿತಿಗಾಗಿ ಸಂಕಟ ಇರುವಂತಿದೆ. ಹಾಗೆಯೇ "ಭೂಮಿಯ ಮೇಲಣ ಭೋಗವೆಲ್ಲವೂ ತಮಗೆಂದು ಜನಕೋಟಿಯನು ಕಾಲ್ಕೆಳಗೆಸೆದು ತೊತ್ತಳದುಳಿದು" ಮೆರೆದಂಥ ಜನ ಪಾತಾಳದಾಳಕ್ಕೆ ಹೋದರು; ಇತಿಹಾಸದ ಸಂಪುಟಗಳನ್ನು ರಕ್ತಸಿಕ್ತವಾಗಿಸಿದರು ಎನ್ನುವಾಗ ಶೋಷಕರ ಚಿತ್ರವನ್ನು ಕೊಡುವ ಯತ್ನ ನಡೆದಿದೆ. ಹಿಂಸೆ ಹಾಗೂ ರಕ್ತದ ಸುಳಿವುಗಳನ್ನು ಕಾಣುತ್ತಾರೆ. ಶೋಷಕರು ಮುಗಿದರು ಎಂದು ಹೇಳುವ ಕವಿ ಶೋಷಣೆಯ ಪ್ರಸ್ತುತ ಚಿತ್ರ ಕೊಡುವುದಿಲ್ಲ.

ಇಪ್ಪತ್ತಾರು ಕವಿತೆಗಳು (ಅಬ್ದುಲ್ ರಹಮಾನ್ ಪಾಸಾಪತಿ) "ಎಷ್ಟೋ ಕವಿತೆಗಳನ್ನು ಬರೆದು, ಓದಿ–ಸಂತೋಷಗೊಂಡು ಹರಿದು ಹಾಕಿದ್ದೇನೆ!" ಎನ್ನುವ ಪಾಸಾಪತಿಯವರ ಮೊದಲ ಸಂಕಲನ ಇದು. ಬರೆದುದ್ದನ್ನೆಲ್ಲಾ ಅಚ್ಚಿಗೆ ಕಳಿಸುವ ಹವ್ಯಾಸ ಈ ಲೇಖಕರಿಗೆ ಇಲ್ಲವೆನ್ನುವುದು ಅವರ ಮೇಲಿನ ಮಾತಿನಿಂದ ಗೊತ್ತಾಗುತ್ತದೆ. ಹಾಗೆಯೇ "ನನ್ನ ಕವಿತೆಗಳ ಬಗ್ಗೆ ನಾನು ಏನನ್ನೂ ಹೇಳಲಾರೆ" ಎನ್ನುವ ಅವರ ಮತ್ತೊಂದು ಸಾಲು ಅವರ ಸೌಜನ್ಯ, ಎಚ್ಚರಗಳ ಪರಿಚಯ ವನ್ನು ನೀಡುತ್ತದೆ. 'ಎರಡು–ಚಿತ್ರ' ಎನ್ನುವ ತಮ್ಮದೊಂದು ಕವಿತೆಯಲ್ಲಿ ನಮ್ಮ ಸಮಾಜ ದಲ್ಲಿನ ಎರಡು ಅತಿಗಳನ್ನು ಪಾಸಾಪತಿಯವರು ಗುರುತಿಸಿದ್ದಾರೆ. ಇಲ್ಲಿನ ಅನೇಕ ಸಾಲುಗಳು ತೀರಾ ನೀರಸವಾಗಿದ್ದರೂ ಕೂಡ ಲೇಖಕರ ಆಶಯವನ್ನು ನಾವು ಗಮನಿಸಬೇಕು :

> ದಿಶೆ-ದಿಶೆಗೂ ಹಾಹಾಕಾರ,
> ಹೆಜ್ಜೆ–ಹೆಜ್ಜೆಗೂ ವಾದ-ವಿವಾದ,
> ಅಂತಸ್ತು ಅಂತಸ್ತಿಗೂ ವಿಪರೀತ ವೈಷಮ್ಯ,
> ಕಣ್ಣೆತ್ತಿದೆಡೆಗೆಲ್ಲ 'ಹೊಟ್ಟೆಯ ಗೋಳು' !
> ಜೋಳ-ಅಕ್ಕಿ-ಸಕ್ಕರೆ-ಎಣ್ಣೆಗಾಗಿ
> ಸಾಲುಸಾಲಾಗಿ ಕಾಯುತ್ತಾರೆ-ಅರೆಹೊಟ್ಟೆಯ ದಲಿತಜನ !

ಈ ವ್ಯವಸ್ಥೆಗೆ ಕಾರಣವಾದ ಬದುಕಿನ ಕ್ರೌರ್ಯವನ್ನು ಪತ್ತೆಹಚ್ಚಿ ವಿವರಿಸಬೇಕಾದ ನಿಷ್ಠೆ ಕವಿಗೆ ಬೇಕು. ಆ ಕೆಲಸವನ್ನು ತಮ್ಮ ಮುಂದಿನ ಕವಿತೆಗಳಲ್ಲಿ ಯಶಸ್ವಿಯಾಗಿ ಮಾಡಬಲ್ಲರೆಂಬ ಭರವಸೆಯನ್ನು ಈ ಸಂಕಲನದ 'ಪ್ರೊ।। ನರಿಯಣ್ಣನಿಗೆ ಶ್ರದ್ಧಾಂಜಲಿ,' 'ನಶ್ವರ-ಜೀವನ' ಮತ್ತು 'ಮನಸು' ಮುಂತಾದ ಕವನಗಳ ಬರವಣಿಗೆಯ ರೀತಿಯು ಒದಗಿಸುತ್ತದೆ.

ನಮ್ಮ ಚರಿತ್ರೆ (ಭುವನ ಮಿತ್ರ) ಇದು ಈ ಲೇಖಕರ ಐದನೆಯ ಕವನ ಸಂಕಲನ. ಕಳೆದ ವರ್ಷ ಎರಡು ಸಂಕಲನಗಳನ್ನು ಪ್ರಕಟಿಸಿದ ಈ ಬರಹಗಾರ ಹಾಲೀ ಮತ್ತೆರಡು ಕವನ ಸಂಕಲನ ಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿದ್ದಾರೆ. ಎಡೆಬಿಡದಂತೆ ಇಷ್ಟೊಂದು ವೇಗದ ಪ್ರಮಾಣದಲ್ಲಿ ಕವನ ಗಳನ್ನು ರಚಿಸುತ್ತಿರುವ ಇವರ ಬರಹಗಳನ್ನು ಓದಿದಾಗ ಗಟ್ಟಿಯಾದ ವೈಚಾರಿಕ ನೆಲೆಗಟ್ಟಿಲ್ಲದೆ ತೀರಾ ವಿರೋಧಾಭಾಸಗಳನ್ನು ಒಟ್ಟೊಟ್ಟಿಗೇ ಹೇಳುತ್ತಿರುವುದನ್ನು ಕಾಣುತ್ತೇವೆ. ಭಾಷೆಯ ವಿಚಾರ ದಲ್ಲಿಯೂ ಕೂಡ ತಮಗೆ ಆಡುನುಡಿಯ ನುಡಿಗಟ್ಟುಗಳ ಪರಿಚಯ ಉಂಟೆಂದು ತೋರಿಸು ತ್ತಾರೆಯೇ ಹೊರತು ಅವುಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವ ಜಾಣ್ಮೆಯನ್ನು ಪ್ರಕಟಿಸಲಾರರು.

"ನವನಾಗರಿಕತೆ, ವಿಜ್ಞಾನ ಕೈಗಾರಿಕೆಗಳ ಕಾರಣದಿಂದ ಆಕರ್ಷಕ ಮೌಲ್ಯಗಳು, ಸುಖ ಕೊಡುವ ಸೌಲಭ್ಯಗಳು ಹುಟ್ಟಿಕೊಂಡು ನಾವು ನಿಂತಲ್ಲಿ ಕುಂತಲ್ಲಿ ನಮ್ಮ ಸುತ್ತ ಕುಣಿಯಲಾರಂಭಿಸಿವೆ" ಎಂದು ತಮ್ಮ ಮುನ್ನುಡಿಯಲ್ಲಿ ಹೇಳುವ ಲೇಖಕರು ಇಂಡಿಯಾ ಪೂರ್ತಿ ಸೌಲಭ್ಯಗಳ ಆಗರವೆನ್ನುವ ಭ್ರಮೆಯಲ್ಲಿ ಇರುವಂತಿದೆ. ಹಾಗೆಯೇ ಈ ಮಾತಿಗೆ ವಿರುದ್ಧವಾದ ಅಭಿಪ್ರಾಯವನ್ನು ಕೂಡ "ಬಾ, ಇಲ್ಲಿ ಹೇ..." ಕವನದ ಕೆಲವು ಸಾಲುಗಳು ಹೇಳುತ್ತವೆ :

ಎಣಿಸಲಾರದ ಸಾಲು ಸಾಲಲಿ ನಿಂತು
ಹಸಿದ ಹೃದಯಕೆ ಕಣ್ಣೀರ ಕುಡಿಯುತಿಹ
ದೀನ ದಲಿತರ ವಂಚಿತ ನತದೃಷ್ಟರ
ಉದ್ಧರಿಸಿ ಉಸಿರ ತುಂಬುವರಾರು ಜರ್ಜರಿತ ಪ್ರಾಣ ಕೋಶದಲಿ ?

ದೇವದೇವತೆಗಳ ಈ ನಾಡಿನಲ್ಲಿ ದಯೆ, ಧರ್ಮ, ನ್ಯಾಯ, ಕರುಣೆಗಳು ಹಿಂದೆ ತುಂಬಿದ್ದವು, ಈಗ ಇಲ್ಲವೆನ್ನುತ್ತಾರೆ. ಇದನ್ನು ಕಂಡು ಕವಿಯ ಕಣ್ಣುಗಳಲ್ಲಿ ರಕ್ತ, ಕೈಯಲ್ಲಿ ಬೆಂಕಿ ಹರಿಸುವುದೇಕೆಂದು ದೇವರನ್ನು ಕೇಳುತ್ತಾರೆ. ದಲಿತಬ್ರಹ್ಮ, ದರಿದ್ರನಾರಾಯಣ, ಕುರುಡಬ್ರಹ್ಮ, ಕೂಲಿನಾರಾಯಣ— ಎಂದು ಸಿಟ್ಟಿನಿಂದ ಸಂಬೋಧಿಸುತ್ತಾರೆ. ಇವರಿಗೆ ತನ್ನ ಸುತ್ತಲ ವ್ಯವಸ್ಥೆಯ ಕ್ರೌರ್ಯ ಗೊತ್ತಿದೆ; ಕಾರಣ ಹುಡುಕುವಲ್ಲಿ ತಪ್ಪುತ್ತಾರೆ. ಮಾದ, ಕರಿಯರಂಥ ಜೀತದಾಳುಗಳ ಗೋಳಿನಲ್ಲಿ ಮುಳಗುತ್ತಾರೆ; ಹಾಗೆಯೇ ವಿಜಯನಗರ ಸಾಮ್ರಾಜ್ಯದ 'ವೈಭವ'ದ ಕಾಲವನ್ನು ಹೊಗಳುತ್ತಾರೆ. ಆಗ ತಾನು ಹುಟ್ಟಿದ್ದರೆ ''ರಾಜನ ಬಳಿ ನಾ ಪಡೆಯುತ್ತಿದ್ದೆ ಬೀಡಿ। ವಿಜಯನಗರದೊಳಾ ವಿಜನ ಪ್ರಾಂತದಲಿ ವನವೇಷ್ಟಿತಗೇಹ'' ಎಂದು ಕನವರಿಸುತ್ತಾರೆ; ಬಡತನದ ನಡುವೆ ಹುಟ್ಟಿದ ಕವಿಗೆ ಈಗ ಮರ್ಯಾದೆ. ವೈಭವ ವಿಲಾಸಗಳಿಲ್ಲವೆಂದು ವೈಯಕ್ತಿಕವಾಗಿ ದುಃಖಿಸುತ್ತಾರೆ. ಇಂಥ ಲೇಖಕರ ವೈಚಾರಿಕ ನಿಲವುಗಳ ಬಗ್ಗೆ ಇನ್ನು ಮಾತಾಡದಿರುವುದೇ ಒಳ್ಳೆಯದು.

'ಊರಗೌಡ', 'ಬೆಂಗಳೂರು', 'ಅವ್ವ'–ಇವು ಈ ಸಂಕಲನದ ಉತ್ತಮ ಕವನಗಳಾಗಿವೆ. ನಿರಂತರವಾಗಿ ಕವನಗಳನ್ನು ಬರೆಯುತ್ತಲೇ ಇರುವ ಇವರು ಇನ್ನಾದರೂ ಅರ್ಥಪೂರ್ಣವಾದ ಧೋರಣೆಯನ್ನು ತಮ್ಮ ಕಾವ್ಯಕ್ರಿಯೆಯಲ್ಲಿ ರೂಢಿಸಿಕೊಳ್ಳಬಲ್ಲರೇ ಎಂಬುದನ್ನು ಕಾದುನೋಡ ಬೇಕಾಗಿದೆ.

ಗೊತ್ತಿಲ್ಲದ ದಾರಿ (ಅಶೋಕ ಮಠದ) ಮುಕ್ತಮನಸ್ಸಿನ ಸಂಕೇತವಾಗಿ ಕಾಣಿಸಿಕೊಳ್ಳುವ ಆಕರ್ಷಕ ಶೀರ್ಷಿಕೆಯನ್ನು ಹೊಂದಿರುವ ಈ ಸಂಕಲನವು ಲೇಖಕರ ಮೊದಲನೆಯ ಕೃತಿಯಾದರೂ ಆರಂಭದ ಎಳಸುತನಗಳನ್ನು ನೀಗಿಕೊಂಡಿರುವುದು ಸಂತೋಷದ ಸಂಗತಿಯಾಗಿದೆ. 'ಹನಿ' ಮತ್ತು 'ಈಗೀಗ' ಕವನಗಳು ಪುಟ್ಟ ಪುಟ್ಟ ಯಶಸ್ವೀಕವನಗಳಾಗಿವೆ. ವೈಯಕ್ತಿಕವಾದ ನೋವು, ಆನಂದವನ್ನು ಸ್ವಂತ ನುಡಿಗಟ್ಟುಗಳಲ್ಲಿ ಹಿಡಿದಿಟ್ಟಿರುವುದರಲ್ಲಿ ಅಶೋಕರು ತೋರಿದ ಆಸಕ್ತಿಯನ್ನು ಸುತ್ತಲ ಪರಿಸರದ ಒಳಗುಟ್ಟನ್ನು ತಿಳಿದುಕೊಳ್ಳುವಲ್ಲಿ ಕೂಡ ತೋರಿಸುತ್ತಿರುವುದು ಸಂತೋಷದ ಸಂಗತಿ. ರಚನೆಯ ದೃಷ್ಟಿಯಿಂದ ಅಷ್ಟೇನು ಯಶಸ್ವಿಯಾಗದಿದ್ದರೂ 'ದರಿದ್ರ' ಎಂಬ ಕವನದ ವಸ್ತು ನಮ್ಮ ಗಮನವನ್ನು ಸೆಳೆಯುತ್ತದೆ:

ಬಾಡಿಗಿ ಇದ್ದ ಮನಿಮಾಲಕಗ
ನನ್ಮಗಾ ಹೊಲ್ಯಾ ಅಂತ ಗೊತ್ತಾಗಿ
ಮಗಾ ಊಟ ಮಾಡು ತಾಟಾ-ತಂಬಿಗಿ
ಹಾಸಿಗಿ-ಹೊದಿಕಿ ಎಲ್ಲಾ ತಗದು
ಹಾದೀ ಮ್ಯಾಲ ಒಗ್ಯಾದಲ್ದ
"ನಮ್ಮ ಧರ್ಮಾ ಕೆಡಿಸಿದ್ಯಲೇ" ಅಂತ
ಹೊಡದು ಬಡದು ಓಡಿಸ್ಯಾನ,
ರಾತ್ರಿ ಗಾಡೀ ಹತ್ತಿ ಹುಡುಗಾ
ಮನಿಗಿ ಬಂದ ಮಸಿಗ್ಯಾನ:
ದೇವರಾ ನಮ್ಮಂಥಾವ್ರಿಗೆ
ಇಂಥಾ ಜಾತ್ಯಾಗ
ಯಾಕರೇ ಹುಟ್ಟಸ್ಯಾನ ?

ತಮ್ಮ ಮೊದಲ ಸಂಕಲನದಲ್ಲಿಯೇ ಈ ಲೇಖಕರು ಹುಟ್ಟಿಸಿರುವ ಕುತೂಹಲ ಮುಖ್ಯವಾದುದು.

ಹತ್ತರ ಕೂಡ ಹನ್ನೊಂದು (ಶಿವಶರಣ ಜಾವಳಿ) ಜಿ. ಎಸ್. ಶಿವರುದ್ರಪ್ಪನವರ ಸಫಲ ಕವನಗಳಲ್ಲಿ ಒಂದಾದ 'ನನ್ನ ಹಣತೆ'ಯ ಯದ್ವತ್ ಅನುಕರಣವಾಗಿ ಈ ಸಂಕಲನದ ಕೆಳಗಿನ ಸಾಲುಗಳು ರೂಪುಗೊಂಡಿವೆ. ಭಾಷೆ ಮತ್ತು ಲಯಗಳಮಟ್ಟಿಗೆ ಕೂಡ ಈ ಮಾತು ನೇರವಾಗಿ ಅನ್ವಯಿಸುತ್ತದೆ :

ತಮಂಧ ಘನ ;
ಅಸಂಖ್ಯಾತ ದೀಪಾವಳಿಗಳಿದರಲ್ಲಿ
ಕರಗಿ ಹೋದದ್ದು ಗೊತ್ತು.
ಆದರೂ ಅದರ ಮುಂದೆ ನಾನೇನು ಮಾಡಬಲ್ಲೆನೆಂದು
ಕೈ ಕೊಡಹಿ ಕುಳಿತವನಲ್ಲ,
ಶಕ್ತಿಯಿದ್ದಷ್ಟರಲೆ ಹೋರಾಡಿ ಶ್ರಮಿಸಿ
ಕೊನೆಗೂ ದೀಪ ಹಚ್ಚಿದ್ದೇನೆ.
ಬೆಳಕು ಮಾಡಿದ್ದೇನೆ
ಬೀಸಿ ಬರುವ ಬಿರುಗಾಳಿಗೆ
ಅಡ್ಡಲಾಗಿ ಕೈಯೊಡ್ಡಿ
ಹೊತ್ತಿಸಿಕೊಂಡದ್ದನ್ನು ದಕ್ಕಿಸಿಕೊಂಡಿದ್ದೇನೆ.

ಇಷ್ಟಾಗಿಯೂ ಕೂಡ ಮುನ್ನುಡಿಯಲ್ಲಿ ಚೆನ್ನವೀರ ಕಣವಿಯವರು ಹೇಳಿರುವಂತೆ "ಇವರ ಈ ಸ್ವಂತಿಕೆ, ಸಮಕಾಲೀನ ಪ್ರಜ್ಞೆಯಿಂದ ಒಗುಮಿಗುವ ಅನುಭವ, ಅಭಿವ್ಯಕ್ತಿ ಸಾಮರ್ಥ್ಯ– ಇವುಗಳನ್ನು ನೋಡಿದಾಗ ಈ ಕವಿ ಹತ್ತರ ಕೂಡೆ ಹನ್ನೊಂದಲ್ಲ ಎನ್ನುವುದನ್ನು ಸೂಚಿಸುತ್ತವೆ." ಈ ಮಾತು 'ಪಯಣ,' 'ಅಜ್ಜ ನೆಟ್ಟಿರುವ ಆಲದ ಮರ', 'ಜಾರುವ ಮಾತು,' 'ನಮ್ಮ ಭಾವೈಕ್ಯತೆಯ ಕಥೆ', 'ಹತ್ತರ ಕೂಡ ಹನ್ನೊಂದು' 'ಅನಾಗರೀಕರ ನಾಗರಿಕತೆ', 'ನವಕರ್ನಾಟಕ' 'ರಜತ ಮಹೋತ್ಸವವಾಯಿತು.. ಮುಂದೆ? 'ಸ್ಥಳಪುರಾಣ'–ಮುಂತಾದ ಕವನಗಳಿಗೆ ಅನ್ವಯವಾಗುತ್ತದೆ. "ಇದರ ಕಾವ್ಯಮನೋಭೂಮಿಕೆಯಲ್ಲಿ ಒಂದು ಸೂಕ್ಷ್ಮವಾದ ಬಂಡಾಯ ಹೊಗೆಯಾಡುತ್ತಿದೆ. ಅವರು ಇನ್ನುಮುಂದೆ ಕ್ರಾಂತಿಯತ್ತ ವಾಲಿದರೂ ಅಚ್ಚರಿ-ಪಡಬೇಕಾಗಿಲ್ಲ" ಎಂದು ಪ್ರಭುರಾಜರು ಜಾವಳಿಯರ ಬಗ್ಗೆ ಅಭಿಪ್ರಾಯಪಡುತ್ತಾರೆ. ಸುತ್ತಲಿನ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗಮನಿಸಬಲ್ಲ ಯಾವುದೇ ಕವಿ ತನ್ನ ಜವಾಬ್ದಾರಿಯೆಂದು ತಿಳಿದು ಈ ಕೆಲಸವನ್ನು ಮಾಡಬೇಕಾಗಿದೆ. ಬರವಣಿಗೆಯ ದಿಕ್ಕನ್ನು ಬಲ್ಲ ಜಾವಳಿಯವರು ತಮ್ಮ ಮುಂದಿನ ಕೃತಿಗಳಲ್ಲಿ ಇನ್ನೂ ಹೆಚ್ಚಿನ ಬೆಳವಣಿಗೆ, ಸಾಧನೆಯನ್ನು ತೋರಿಸಬಲ್ಲರೆಂದು ಹಾರೈಸಬಹುದು.

ವಿಶ್ವಕಲ್ಯಾಣ ಗೀತೆ (ಸಂ. ಮಾತೆ ಮಹಾದೇವಿ) ಬೇರೆ ಬೇರೆಯ ಲೇಖಕರ ಹಾಡುಗಳನ್ನು ಸಂಗೀತದ ವಿವಿಧ ಮಟ್ಟುಗಳಲ್ಲಿ ಹಾಡಲು ಅನುಕೂಲವಾಗುವಂತೆ ರಾಗತಾಳಗಳನ್ನು ಹೆಸರಿಸಿ ಜೋಡಿಸಲಾಗಿರುವ ಸಂಕಲನ ಇದು. ಮಾತೆ ಮಹಾದೇವಿಯವರ ರಚನೆಗಳೇ ಇಲ್ಲಿ ಹೆಚ್ಚಾಗಿದ್ದರೂ, ಅವೆಲ್ಲಾ ಅಕ್ಕಮಹಾದೇವಿಯ ವಚನಗಳ ಪೇಲವ ಅನುಕರಣೆಯಾಗಿ ಕಂಡು ಬರುತ್ತವೆ. ತಾವು ಅಭಿನವ ಅಕ್ಕನೆನ್ನುವಂತೆ ಸಂಪಾದಕಿ ಭಾವಿಸಿದ್ದಾರೆ. ಇನ್ನು ಇವರ ಭಕ್ತರುಗಳಿಗಂತೂ ನಾನಾ ಅವತಾರವಾಗಿ ಕಾಣಲ್ಪಡುತ್ತಾರೆ :

ಮನದ ಮೈಲಿಗೆ ಕಳೆಯಲು
ಸಾಕು ತವ ದರುಶನದ
ಬರಿ ದಿವ್ಯ ಭಂಗಿ!....
ಮಹಾದೇವನ ವರಸತಿ ಮಾತೆ ಮಹಾದೇವಿ
ನೀವಾದಿರಿ ಕನ್ನಡದ ಶ್ರೀ ವಾಗ್ದೇವಿ
ಮುಕ್ತಿಕಾಂತೆ, ಶಕ್ತಿದಾತೆ; ಹಾಡಿದಿರಿ ಬಸವಗೀತೆ
ಧನ್ಯೋಸ್ಮಿ, ಧನ್ಯೋಸ್ಮಿ ಹೇ ಭಾರತ ಮಾತೆ ॥

ಅಕ್ಕ, ಅಲ್ಲಮ, ಹರಿಹರ, ಮುಪ್ಪಿನ ಷಡಕ್ಷರಿ ಮುಂತಾದವರ ಒಂದೆರಡು ಉತ್ತಮ ರಚನೆಗಳು ಈ ಸಂಕಲನದಲ್ಲಿ ಸೇರಿರುವುದು ಮಹತ್ವದ ಅಂಶವಾಗಿದೆ.

ಕವಿಗಳು ಕಂಡ ಕೊಡಗು (ಸಂ: ಡಿ. ಬಿ. ರಾಮಚಂದ್ರಾಚಾರ್) ಕರ್ನಾಟಕದ ಅತ್ಯಂತ ಸುಂದರ ತಾಣಗಳಲ್ಲಿ ಒಂದಾದ ಕೊಡಗನ್ನು ಕುರಿತು ಕನ್ನಡ ಕವಿಗಳು ಬರೆದ ಕವನಗಳನ್ನು ಇಲ್ಲಿ ಕಲೆ ಹಾಕಲಾಗಿದೆ. ಕೊಡಗಿನ ಹೊರ ನೋಟವನ್ನು ಉದ್ಗಾರಪೂರಿತ ವಾಕ್ಯಗಳಲ್ಲಿ ಎಲ್ಲ ಕವಿಗಳೂ ಸಂಭ್ರಮದಿಂದ ಬಣ್ಣಿಸಿರುವುದನ್ನು ಇಲ್ಲಿನ ಬಹುಪಾಲು ಕವನಗಳಲ್ಲಿ ನಾವು ಕಾಣುತ್ತೇವೆ. 'ಹುತ್ತರಿಯ ಹಾಡು', 'ಪೂವಮ್ಮ', 'ಮಡಿಕೇರೀಲಿ ಮಂಜು', 'ಬ್ರಹ್ಮಗಿರಿ' ಮತ್ತು 'ಕನ್ನಡ ತಾಯಿಯ ಸುಂದರ ಸೆರಗು' ಈ ಸಂಕಲನದ ಉತ್ತಮ ಕವನಗಳಾಗಿವೆ. ಈ ಸುಂದರ ಕೊಡಗಿನ ಅಂತರಂಗ ಇನ್ನೂ ಅನೇಕ ವೈವಿಧ್ಯಮಯ ಪದರುಗಳನ್ನು ಒಳಗೊಂಡಿದೆ. ಇಲ್ಲಿನ ಗಿರಿಜನರು ಹಾಗೂ ಕೊಡವರ ಸಾಂಸ್ಕೃತಿಕ ಜೀವನವನ್ನು ಅರಿತು ಹೊಸ ಸಾಧ್ಯತೆಗಳ ಹಿನ್ನೆಲೆಯಲ್ಲಿ ಹುಡುಕುವ ಬರಹಗಾರ ಮಾತ್ರ ಈ ಜನಾಂಗದ ನಿಜವಾದ ಬದುಕನ್ನು ಚಿತ್ರಿಸಬಲ್ಲ. ಈ ಕಾರ್ಯ ಆ ಪ್ರದೇಶದವರಿಂದ ಮಾತ್ರ ಸಾಧ್ಯ. ಹೊರಗಿನ ಪ್ರಭಾವಕ್ಕೆ ಒಳಗಾಗಿ ಸರಳ ತೀರ್ಮಾನಗಳಿಂದ ಬರೆಯ ಹೊರಡುವ ಬಿ. ಡಿ. ಗಣಪತಿ ಮತ್ತು ಐ. ಮಾ. ಮುತ್ತಣ್ಣನವರು ಕೊಡವರಾದರೂ ಆ ಜನರ ಬದುಕನ್ನು ಸಮರ್ಥವಾಗಿ ಚಿತ್ರಿಸುವಲ್ಲಿ ಸಹಜವಾಗಿಯೇ ವಿಫಲರಾಗಿದ್ದಾರೆ. ವೈದಿಕ ಮೌಲ್ಯಗಳ ಹಿನ್ನೆಲೆಯಲ್ಲಿ ವ್ಯಕ್ತಿತ್ವ ರೂಪಿಸಿಕೊಂಡ 'ಕೊಡವ'ರಲ್ಲದ ಭಾರತೀಸುತರ ಕೊಡಗಿನ ಬದುಕನ್ನು ಕುರಿತಬರಹಗಳ ಸೋಲಿನ ಕಾರಣದ ಗುಟ್ಟು ಕೂಡಾ ಇಲ್ಲಿದೆ.

ವರಕವಿ (ಸಂ: ಸು. ರಂಗಸ್ವಾಮಿ) ಕರ್ನಾಟಕದ ನಮ್ಮ ಮಹತ್ವದ ಕವಿಗಳಲ್ಲಿ ಒಬ್ಬರಾದ ಬೇಂದ್ರೆಯವರನ್ನು ಕುರಿತು ಕೆಲವು ಕವಿಗಳು ಬರೆದ ಕವನಗಳ ಸಂಕಲನ ಇದು. "ಕವಿ ಅಂಬಿಕಾತನಯದತ್ತ" ಎನ್ನುವ ಇದೇ ರೀತಿಯ ಸಂಕಲನವೊಂದು ಬೇಂದ್ರೆಯವರಿಗೆ ಐವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ಬಂದಿದ್ದುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಅಲ್ಲಿನ ಒಂಬತ್ತು ಕವನಗಳು ಕೂಡ ಇಲ್ಲಿ ಸೇರಿಕೊಂಡಿವೆ. 'ಕವಿಪೂಜೆ'ಗೆ ಹೊರಟಾಗ ಎಲ್ಲ ಬಗೆಯ ಗುಣವಾಚಕಗಳನ್ನೂ ಸೇರಿಸಿ ಅಸಂಬದ್ಧವಾಗಿ ಹೊಗಳಲು ತೊಡಗುವ ಕ್ರಿಯೆ ನಡೆಯುತ್ತದೆ ಎಂಬುದಕ್ಕೆ ಸಾಕ್ಷಿಯಾಗಿ ಇಲ್ಲೂ ಅನೇಕ ಕವನಗಳು ಕಾಣಿಸಿಕೊಂಡಿವೆ. ಈ ನಡುವೆಯೂ 'ಎಪ್ಪತ್ತರ ಬೇಂದ್ರೆ' 'ಶ್ರೀ ಬೇಂದ್ರೆಯವರನ್ನು ಕುರಿತು,' 'ಈ ಲೋಕದಿಂದ ಆ ಲೋಕಕ್ಕೆ ಏಣಿ ಹಾಕ್ತದ'–ಮುಂತಾದ ಮೂರ್ನಾಲ್ಕು ಕವನಗಳು ಮಾತ್ರ ಉತ್ತಮ ಮಟ್ಟದವುಗಳಾಗಿವೆ. ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಬೇಂದ್ರೆಯವರ ಸ್ಥಾನವನ್ನು ಗುರುತಿಸುವ ಹಾ. ಮಾ. ನಾಯಕರ ಪರಿಚಯಾತ್ಮಕ ಭಾಷಣ 'ಬೇಂದ್ರೆ ಸ್ತವನ'ವು ಈ ಸಂಕಲನದ ಮುನ್ನುಡಿಯಂತೆ ಕಾಣಿಸಿಕೊಂಡಿದ್ದಲ್ಲದೆ, ಇಲ್ಲಿನ ಎಷ್ಟೋ ಕವನಗಳು ನಿಖರವಾಗಿ ಹೇಳಲಾರದ ಮಾತುಗಳನ್ನು ಒಳಗೊಂಡಿದೆ. ಬೇಂದ್ರೆಯವರ ಜೀವನ ಹಾಗೂ ಕಾವ್ಯ ಜೀವನವನ್ನು ಸ್ಪಷ್ಟವಾಗಿ ಪರಿಚಯ ಮಾಡಿಕೊಡುವ ಚಂದ್ರಶೇಖರ ಪಾಟೀಲರ, 'ಬೇಂದ್ರೆ: ಅಂಬಿಕಾತನಯದತ್ತ' ಎನ್ನುವ ಉತ್ತಮ ಕವನವೊಂದು ಕನ್ನಡದಲ್ಲಿರುವುದು ಕಾವ್ಯಾಸಕ್ತರೆಲ್ಲರಿಗೂ ತಿಳಿದಿರುವ ಅಂಶ: ಆದರೆ ಆ ಕವನ ಇಲ್ಲಿ ಸೇರದಿರುವುದು ಈ ಸಂಕಲನದ 'ವೈಶಿಷ್ಟ್ಯ'!

ಚೇತನ (ಸಂ: ಸಾಹಿತ್ಯಾನಂದ ಮತ್ತು ಕೆ. ವಿರೂಪಾಕ್ಷಗೌಡ) ಬಳ್ಳಾರಿ ಜಿಲ್ಲೆಯ ಇಪ್ಪತ್ತೊಂದು ಕವಿಗಳು ಬರೆದ ಕವನಗಳ ಸಂಕಲನ ಇದು. ಲೇಖಕರ ಭೌಗೋಳಿಕ ನೆಲೆಯ ಆಧಾರದ ಮೇಲೆ ಕೊಡಬೇಕಾದ ತಕ್ಕ ಪ್ರಾತಿನಿಧ್ಯ ದೊರೆಯಲಿಲ್ಲವೆಂಬ ಕಾರಣಕ್ಕಾಗಿ ಯಾರನ್ನೋ ಮುಸುಕಿನ ಕಾದಾಟದಲ್ಲಿ ಗುದ್ದುತ್ತಿರುವ ಅಸ್ಪಷ್ಟ ಚಿತ್ರ 'ಚೇತನ' ಸಂಪಾದಕರಲ್ಲಿ ಒಬ್ಬರಾದ ಸಾಹಿತ್ಯಾನಂದರ 'ಪ್ರಸ್ತಾವನೆ'ಯಲ್ಲಿ ಕಾಣಸಿಗುತ್ತದೆ: "ತಮ್ಮ ಭಾಗದವರನ್ನು ಅಲಕ್ಷಿಸಲಾಯಿತೆಂದು ಹುಯಿಲೆಬ್ಬಿಸಿದ ಸಂಪಾದಕರು, ಬೆಳಕನ್ನು ಗುರುತಿಸುವ ಸ್ತುತ್ಯಕಾರ್ಯದಲ್ಲಿ ತಮ್ಮ ಜಿಲ್ಲೆಗೇ ಸಿಂಹಪಾಲನ್ನು ಕಬಳಿಸಿಕೊಂಡು, ಅನ್ಯರಿಗೆ ತೋರಿಕೆಯ ಪಾಲನ್ನು ಕೊಡುವ ನಾಟಕ ಆಡಿದರು!" ಈ ವಿಚಾರಗಳನ್ನು ನೇರವಾಗಿಯೇ ಲೇಖಕರು ಚರ್ಚಿಸಿದ್ದಲ್ಲಿ ಒಳ್ಳೆಯದಿತ್ತು. ಇನ್ನೂ ಅನೇಕ ವಿಷಯಗಳ ಪ್ರಸ್ತಾಪವನ್ನು ಇವರು ಮಾಡಿ ಹೊಸಬರನ್ನು ನಿರುತ್ಸಾಹಗೊಳಿಸುವ ವ್ಯವಸ್ಥೆಯೊಂದು ಸದ್ಯದ ಕನ್ನಡ ಸಾಹಿತ್ಯದ ಪರಿಸರದಲ್ಲಿ ಇದೆ ಎಂದು ಹೇಳುತ್ತಾರೆ. ಆದ್ದರಿಂದ ತಾವು "ಶ್ರೇಷ್ಠತೆಯ ಪ್ರತಿಷ್ಠೆಗೆ ಪಕ್ಕಾಗದೆ" ಈ ಸಂಕಲನವನ್ನು ಹೊರತಂದಿರುವ ನಿಷ್ಠೆಯನ್ನೂ ಪ್ರಕಟಿಸಿದ್ದಾರೆ! ಕಿರಿಯರ ಉತ್ಸಾಹಕ್ಕೆ ಕೆಲವರು 'ತಣ್ಣೀರೆರಚುತ್ತಾರೆ'ನ್ನುವ ಮೂಲಕ, ಹೊಸ ಕವಿಗಳು ವಾಸ್ತವವಾದದ್ದನ್ನು ಒಪ್ಪಿಕೊಳ್ಳದ ಅಂಜುಬುರುಕರಾಗಿದ್ದಾರೆಂದು ಹೇಳಿ, ಸಾಹಿತ್ಯಾನಂದರು ಅನುಮಾನ ವ್ಯಕ್ತಪಡಿಸುತ್ತಾರೆ. ಈ ಬಗೆಯ ಯಾವ ರಿಯಾಯಿತಿಯನ್ನೂ ಸಿದ್ಧಲಿಂಗಯ್ಯ, ಪಂಡಿತಾರಾಧ್ಯ ಮೊದಲಾದ ಕವಿಗಳು ಅಪೇಕ್ಷಿಸದೆ ನಮ್ಮೆದುರಿಗೆ ಇದ್ದಾರೆಂಬುದನ್ನು ನಾವು ಮರೆಯಬಾರದು. ಗಟ್ಟಿಯಾಗಿ ನಿಲ್ಲಬಲ್ಲ ಕವಿಗೆ ಯಾವ ವದೆಗಲ್ಲು, ಊರೆಗೋಲುಗಳೂ ಬೇಕಾಗಿಲ್ಲ.

ಇಷ್ಟಾಗಿಯೂ "ಚೇತನ" ಸಂಕಲನದಲ್ಲಿನ ಕೆಲವು ಕವಿಗಳು ಸಾಕಷ್ಟು ಚೈತನ್ಯದಾಯಕವಾದ ತಮ್ಮ ಕೆಲವು ಕವನಗಳ ಮೂಲಕ ಗಮನವನ್ನು ಸೆಳೆಯುತ್ತಾರೆ. 'ಚಂದ್ರಶೇಖರ ವಿಳಾಸ', 'ಹೊತ್ತಾರೆ ಎದ್ದು ', 'ಅಕ್ಕಿ-ಸಕ್ಕರೆ', 'ದೇವರು', 'ಮುಖಂಡ', 'ಶೂದ್ರಗಮನ', 'ಸೂಳೆ', 'ರಾಮು-ನಾಮು', 'ಸತ್ತಜನರೇ...' ಮುಂತಾದ ಕವನಗಳು ತಮ್ಮ ವಸ್ತು ಮತ್ತು ಭಾಷೆಯ ದೃಷ್ಟಿಯಿಂದ ಯಶಸ್ವಿಯಾದ ರಚನೆಗಳಾಗಿವೆ. ಹೊ. ಮ. ಪಂಡಿತಾರಾಧ್ಯರಂತೂ ಭರವಸೆಯನ್ನು ಹುಟ್ಟಿಸುವ ಹೊಸ ಕವಿಯಾಗಿದ್ದಾರೆ.

ಡೋಗ್ರಾಪಹಾರಿ ಪ್ರೇಮಗೀತೆಗಳು (ರೂಪಾಂತರ: ಶ್ರೀಕೃಷ್ಣ ಆಲನಹಳ್ಳಿ) ಕಾಶ್ಮೀರದ ಜಾನಪದ ಪ್ರೇಮಕವನಗಳ ರೂಪಾಂತರ ಈ ಕೃತಿ; ಪ್ರೇಮಕವನಗಳ ಹಿನ್ನಲೆಯಾದ ಕಾಶ್ಮೀರದ ನಿಸರ್ಗ ಈ ಎಲ್ಲಾ ಪದ್ಯಗಳಲ್ಲಿ ಸುಂದರವಾಗಿ ಮೈದಾಳುತ್ತದೆ. ಪ್ರೇಮದ ಅಭಿವ್ಯಕ್ತಿಯ ಕ್ರಮ ಕೆಲವೆಡೆಯಂತೂ ಮತ್ತೆ ಮತ್ತೆ ಗುನುಗುವಷ್ಟು ಸೊಗಸಾಗಿದೆ.

ಹಳ್ಳಿಗಾಡಿನ, ಗಿರಿಸಾಲಿನ ಹೆಣ್ಣುಮಕ್ಕಳ ಪ್ರೇಮದ ಮುಗ್ಧತೀವ್ರತೆ ಈ ಎಲ್ಲಾ ಕವನಗಳ ಹಿಂದೆ ಮಾತನಾಡುತ್ತಿದೆ; ಹೊರಗಡೆ ಕಾಡು ಮೃಗಗಳ ಕಾಟವೆಂದು ನಲ್ಲನನ್ನು ಉಳಿಸಿಕೊಳ್ಳುವ ಹೆಣ್ಣೊಬ್ಬಳ ಮಾದಕ ಒತ್ತಾಯ ಈ ರೀತಿ ಇದೆ:

ಹೋಗದಿರು ಈ ಇರುಳೆ
ಕಾಡುಮೃಗಗಳ ಕಾಟ
ಹೇಗಿರಲಿ ಹೇಳು—ನಾನೊಬ್ಬಳೆ
ಹೇಗಿರಲಿ ಹೇಳು ?

ಕಾಡುಮೃಗಗಳ ಕಾಟಕ್ಕಿಂತ, ವಿರಹದ ಭಯವೇ ನಲ್ಲನನ್ನು ಇರುವಂತೆ ಒತ್ತಾಯಿಸುತ್ತದೆ ಎಂದು ಮೇಲಿನ ಸಾಲುಗಳೇ ಹೇಳುತ್ತವೆ. ನಲ್ಲನಿಗಾಗಿ ಕಾಯುವ ನಲ್ಲೆಯೊಬ್ಬಳ ಅಳಲಿನ ಸಾಲುಗಳು ಕೆಳಗಿನವು; ಕನ್ನಡದ ಸಹಜ ನುಡಿಗಟ್ಟಿನಲ್ಲೇ ಸತ್ವಪೂರ್ಣವಾಗಿ ಬಂದಿರುವ ಸಾಲುಗಳಿವು:

ಕಾಗೆಗಳ ಬೆದರಿಸಟ್ಟುವ ಕುಂಟುನೆಪದಲಿ
ಸಂಜೆ ಮುಂಜಾನೆ ಹೊಸಲಾಚೆ ನಿಂತು ಕಾಯುತಿರುವೆ ;
ಕಣ್ಣ ತುಂಬಿದ ನೀರು ನಿನಗಾಗಿ ತುಳುಕಿ
ನೂರೆಂಟುಸಲ ನಿನ್ನನ್ನೆ ಕೂಗಿ ಕೂಗಿ ಹಂಬಲಿಸುತ್ತಿರುವೆ

ಇಂಥ ಅನೇಕ ಮಾರ್ದವ ಸಾಲುಗಳು ಇಡೀ ಸಂಕಲನದುದ್ದಕ್ಕೂ ಬೇಕಾದಷ್ಟು ಸಿಗುತ್ತವೆ. ಈ ಪ್ರೇಮಿಗಳ ಪರಿಭಾಷೆ ವ್ಯಕ್ತವಾಗುವುದು ಅಲ್ಲಿಯ ಬೆಟ್ಟ, ತೊರೆ, ಝರಿ, ಮೋಡ ಮುಂತಾದುವುಗಳ ಮಾಧ್ಯಮದಲ್ಲಿ. ಒಟ್ಟಾರೆ ಸುಂದರವಾದ, ಸಮರ್ಪಕವಾದ ರೂಪಾಂತರಗಳು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲವಾದರೂ—ಕೆಲವು ಕಡೆ ರೂಪಾಂತರದ ನುಡಿಗಟ್ಟಿನಲ್ಲಿ ಏಕರೂಪತೆ ಇಲ್ಲದಿರುವುದು ಕಂಡುಬರುತ್ತದೆ. ಕನ್ನಡದ ಜನಪದ ಪ್ರೇಮಗೀತಗಳ ಲಯದಲ್ಲಿ ಈ ರೂಪಾಂತರಗಳನ್ನು ಪ್ರಯತ್ನಿಸಿದ್ದರೆ ಇನ್ನಷ್ಟು ಸೊಗಸಾಗಲು ಸಾಧ್ಯವಿತ್ತೇನೋ ?

*   *   *   *

೧೯೭೫ ರ ಕಾವ್ಯ, ಕನ್ನಡ ಕಾವ್ಯಚರಿತ್ರೆಯ ದೃಷ್ಟಿಯಿಂದ ತುಂಬಾ ಮುಖ್ಯವಾದದ್ದು. ಒಂದು ಜನಾಂಗದ ಪ್ರಮುಖ ಕವಿಯಾದ ಅಡಿಗರು 'ಇದನ್ನು ಬಯಸಿರಲಿಲ್ಲ' ಸಂಕಲನದ ಮೂಲಕ ತಮ್ಮ ವ್ಯಕ್ತಿಗತ, ಜನಾಂಗದ ನೆನಪುಗಳಿಗೆ ಜೋತುಬಿದ್ದ, ವೈದಿಕ ಧೋರಣೆಯ ಕೇಂದ್ರಗಳ ಕಾವ್ಯವನ್ನು ಮತ್ತೆ ಖಚಿತಪಡಿಸಿದ್ದಾರೆ. ಮಧ್ಯಮವರ್ಗದ ಉದಾರವಾದಿ ಧೋರಣೆಯ 'ನನ್ನ ನಿನ್ನ ನಡುವೆ' ಮತ್ತು 'ಚಿರಂತನ ದಾಹ' ಕವನ ಸಂಕಲನಗಳು ಬಂದಿವೆ. ಇವೆಲ್ಲಕ್ಕೂ ಭಿನ್ನವಾಗಿ ಕ್ರಾಂತಿಸತ್ವವನ್ನು ತನ್ನ ಶಬ್ದಶಬ್ದಗಳಲ್ಲಿ ಹಮ್ಮಿಸಿಕೊಂಡು 'ಹೊಲೆಮಾದಿಗರ ಹಾಡು' ಬಂದಿದೆ : ಕನ್ನಡ ಕಾವ್ಯದ ನಿರಂತರತೆ ಮತ್ತೆ ಸತ್ವಪೂರ್ಣವಾಗಿ ತನ್ನನ್ನು ವಿಸ್ತರಿಸಿಕೊಂಡಿದೆ ; ಶತಶತಮಾನಗಳಿಂದ ಮೂಕವಾಗಿದ್ದ ವರ್ಗಕ್ಕೂ ಧ್ವನಿಕೊಟ್ಟಿದೆ.

ನಾಟಕ

ಸಿ. ಬಿ. ಕೆ.

ಈ ವರ್ಷ ಒಟ್ಟು ಇಪ್ಪತ್ತೇಳು ನಾಟಕ ಬಂದಿದ್ದು, ಅವುಗಳಲ್ಲಿ ಹನ್ನೊಂದು ಅನುವಾದ ಕೃತಿಗಳು ಇಲ್ಲವೆ 'ಅಳವಡಿಕೆ'ಗಳಾಗಿವೆ, ಉಳಿದುವು ಸ್ವತಂತ್ರ ಕೃತಿಗಳು. ಈ 'ಅಳವಡಿಕೆ'ಗಳಲ್ಲಿ ಕೆಲವು ನೇರ ಅನುವಾದಗಳಾಗಿದ್ದರೆ ಇನ್ನು ಕೆಲವು ಇಲ್ಲಿಯ ಮಣ್ಣಿಗೊಗ್ಗುವಂತೆ ಅಷ್ಟಿಷ್ಟು ಬದಲಾವಣೆಯೊಂದಿಗೆ ಬಂದಿವೆ. ಅನೇಕರು ಮೂಲದ ಊರು, ಪಾತ್ರಗಳ ಹೆಸರುಗಳನ್ನು ಬದಲಿಸಿದ ಮಾತ್ರಕ್ಕೆ ಅಳವಡಿಕೆಯೆಂದು ಧೈರ್ಯವಾಗಿ ಕರೆದುಕೊಂಡಿದ್ದಾರೆ. ಅಳವಡಿಕೆಯ ತಪ್ಪು ಅರ್ಥವೇ ಇಷ್ಟಕ್ಕೆಲ್ಲ ಕಾರಣವೆಂದು ತೋರುತ್ತದೆ. ಅನುವಾದ ಬೇರೆ, ಅಳವಡಿಕೆ ಬೇರೆ. ಅಳವಡಿಕೆಯೆಂದರೆ ಸಿದ್ಧವಾದ ಕಥೆ ಇಲ್ಲವೆ ಕೃತಿಯನ್ನಾಧರಿಸಿ ಆ ಮೂಲಕ ಇನ್ನೊಂದು ಭಾಷೆಯ ಅಥವಾ ಅದೇ ಭಾಷೆಯ ಇನ್ನೊಬ್ಬ ಲೇಖಕ ತಾನು ಹೇಳಬೇಕಾದ್ದನ್ನು ಹೇಳುವುದು. ಭಾಷಾಂತರ ವೆಂದರೆ ಮೂಲ ಕೃತಿಯನ್ನು ಇಡೀಯಾಗಿ ಇದ್ದುದಿದ್ದಂತೆ ನೀಡುವುದು. ಅನುವಾದಕ್ಕೆ ಪಾಂಡಿತ್ಯ ಮೂಲಾಧಾರವಾದೀತು, ಆದರೆ ಅಳವಡಿಕೆಯ ಲೇಖಕ ಸ್ವಯಂ ಕ್ರಿಯಾಶೀಲ ಬರಹಗಾರನೇ ಆಗಿರಬೇಕು, ಈ ದೃಷ್ಟಿಯಿಂದ ಇವುಗಳಲ್ಲಿ ಶಿಷ್ಟಾಚಾರವೊಂದೇ ಅಳವಡಿಕೆಯಾಗುತ್ತದೆ. ಉಳಿದವು ಅಳವಡಿಕೆಯ ಹೆಸರಿನಲ್ಲಿ ಬಂದ ಅನುವಾದಗಳು. ಇಷ್ಟನ್ನು ಮನಸ್ಸಿನಲ್ಲಿಟ್ಟುಕೊಂಡು ನಾಟಕಗಳನ್ನು ಗಮನಿಸಲಾಗಿದೆ.

ಪ್ರಹಸನತ್ರಯೀ : (ಡಿ.ವಿ.ಜಿ.) ಇದರಲ್ಲಿ ಮೂರು ಹಾಸ್ಯ ಪ್ರಹಸನಗಳಿವೆ. 'ಮಹಾ ಚುನಾವಣೆ'ಯಲ್ಲಿ ಚುನಾವಣೆಗೆ ಸಂಬಂಧಿಸಿದ ಕೆಲವು ವ್ಯಂಗ್ಯ ಪದ್ಯಗಳಿವೆ. ಎರಡನೆಯದು 'ಗರ್ದಭ ವಿಜಯ,' ಹೆಸರೇ ಸೂಚಿಸುವಂತೆ ಇಂದಿನ ರಾಜಕೀಯದ ವಿಡಂಬನೆ. ಮಾನವನ ಸಂಖ್ಯಾಧಿಕ್ಯದಿಂದ ಕತ್ತೆಗಳ ಸಂಖ್ಯೆ ಕಮ್ಮಿಯಾಗಿ ಅವೆಲ್ಲ ಸೇರಿಕೊಂಡು ತಮ್ಮ ಕುಲಗುರು ನಾರದನ ಸಹಾಯದಿಂದ ಬ್ರಹ್ಮನ ವರ ಪಡೆದು ತಮ್ಮ ಸಂಖ್ಯೆಯನ್ನು ಜಾಸ್ತಿ ಮಾಡಿಕೊಳ್ಳುವುದೇ ಇದರ ವಸ್ತು. ಸಂಖ್ಯಾಧಿಕ್ಯದಿಂದ ದಕ್ಕುವ ಗೆಲುವನ್ನು ಲೇವಡಿ ಮಾಡುವ ನಾಟಕ ಬಹುಶಃ ಪ್ರಜಾ ಪ್ರಭುತ್ವದ ವಿಡಂಬನೆಯೆಂದು ತೋರುತ್ತದೆ. ಆದರೆ ಲೇಖಕರ ಹಾಸ್ಯ ದೃಷ್ಟಿಯ ತೀವ್ರತೆಯಿಂದ ನಾಟಕದ ಕ್ರಿಯೆ ಸೊರಗುತ್ತದೆ. ಅಥವಾ ಬಹಳ ತೆಳುವಾದ ಜೋಕೊಂದನ್ನು ಹಿಗ್ಗಲಿಸಿ ನಾಟಕ ಮಾಡಿದಂತಿದೆ.

ಮೂರನೆಯದಾದ ಜಾಕ್ ಕೇಡ್ ಷೇಕ್ಸ್‌ಪಿಯರ್ ಕೃತಿಯ ಅನುವಾದ; ಹೇಳಿ ಕೇಳಿ ದೊಂಬಿ ಧಾಂದಲೆಯ ಪ್ರಹಸನ. ಇಂಗ್ಲೆಂಡ್‌ನ್ನು ಆಳಿದ ಆರನೆ ಹೆನ್ರಿಯ ಚರಿತ್ರೆಯ ಕೆಲವು ಪ್ರಕರಣಗಳನ್ನು ಷೇಕ್ಸ್ಪಿಯರ್ ಮೂರು ಭಾಗಗಳ ಒಂದು ನಾಟಕದಲ್ಲಿ ಚಿತ್ರಿಸಿದ್ದಾನೆ. ಅದರ ಎರಡನೆ ಭಾಗ ಕೇಡ್ ಎಂಬ ದೊಂಬಿ ನಾಯಕನ ಸಾಹಸಗಳನ್ನು ಕುರಿತಿದೆ. ರಾಜ್ಯದಲ್ಲಿ ಅರಾಜಕತೆ ಉಂಟಾದಾಗ ದಾರಿಯಲ್ಲಿ ಹೋಗು ಬರುವವರೆಲ್ಲ ದೊಂಬಿ ಮಾಡಿ ನಾಯಕರಾಗುವುದು ಸಹಜ, ಕೇಡ್ ಅಂಥ ಒಬ್ಬ ನಾಯಕ. ನಮ್ಮ ಸಮಸ್ಯೆಗಳ ಪ್ರತಿಧ್ವನಿಯನ್ನು ಈ ಕಥೆಯಲ್ಲಿ ಗುರುತಿಸಿ ಡಿ.ವಿ.ಜಿ. ಇದನ್ನು ಕನ್ನಡಿಸಿದ್ದಾರೆ. ಭಾಷಾಂತರ ಸೊಗಸಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಡಿವಿಜಿಯವರ ಇತರ ಕೃತಿ ಓದಿದವರಿಗೆ ಅವರು ವಯಸ್ಸಾದಾಗಲೂ ಇಂದಿನ ರಾಜಕೀಯ ವಿದ್ಯಮಾನಗಳ ಬಗ್ಗೆ ಎಷ್ಟು ಗಂಭೀರವಾಗಿ ಆಲೋಚನೆ ಮಾಡುತ್ತಿದ್ದರು, ಎಷ್ಟು ಆಳದಲ್ಲಿ ನೊಂದಿದ್ದರೆಂದು ವೇದ್ಯ ವಾಗುತ್ತದೆ.

ಏಕಾಂಕ ನಾಟಕಗಳು : (ವೀರಣ್ಣ ರಾಜೂರ) : ಮೂಕಪ್ರೇಮ, ಸುಬ್ಬಿ ನಿಜ್ಣ, ಗೌಪ್ರ ಅಳಿಯ – ಈ ಮೂರು ಏಕಾಂಕ ನಾಟಕಗಳ ಸಂಕಲನ ಇದು. ಹಾಸ್ಯವನ್ನೇ ಉದ್ದೇಶವಾಗುಳ್ಳ ಕೃತಿಗಳು. ಉತ್ತರ ಕರ್ಣಾಟಕದ ಆಡುನುಡಿಯ ಸೊಗಸು ಸಂಭಾಷಣೆಗೆ ತೀವ್ರತೆಯನ್ನ, ಚಕಮಕಿಯಂಥ ಹೊಳಪನ್ನ ಕೊಟ್ಟಿದೆ. ಆದರೆ ಮೂಲ ಉದ್ದೇಶವೇ ಲಘುವಾದ್ದರಿಂದ ಇಂಥ ಕೃತಿಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದಿಲ್ಲ. ದೇಶಿ ನುಡಿಯ ಸೊಗಸುಗಾರಿಕೆಯೊಂದನ್ನು ಬಿಟ್ಟರೆ ಇನ್ನಿತರ ಹಾಸ್ಯ ನಾಟಕಗಳಿಗೂ ಈ ಕೃತಿಗಳಿಗೂ ಏನು ವ್ಯತ್ಯಾಸವಿದೆಯೆಂದು ತಿಳಿಯುವುದಿಲ್ಲ. ಮೂರು ಏಕಾಂಕ ನಾಟಕಗಳಲ್ಲಿ 'ಸುಬ್ಬಿ ನಿಜ್ಣ'ದ ನಿರೂಪಣೆಯಲ್ಲಿ ಕೊಂಚ ಗಾಂಭೀರ್ಯವಿರುವುದು ನಿಜ. ಆದರೆ ತಂದೆ ತಾಯಂದಿರ ವಿಷಣ್ಣತೆಯಾಗಲಿ, ಸಮಸ್ಯೆಯ ಆಳದರ್ಶನವಾಗಲಿ ಇಲ್ಲಿ ಕಾಣುವುದಿಲ್ಲ. ತೋರಿಕೆಯ ಸಮಸ್ಯೆಯನ್ನು ಹಾಸ್ಯ ಸಂಭಾಷಣೆಯಿಂದ ಹೆಣೆದು ನಿರೀಕ್ಷಿಸಬಹುದಾದ ಕೊನೆಕೊಡಲು ದೊಡ್ಡ ಶಕ್ತಿಯೇನೂ ಬೇಕಿಲ್ಲ.

ಹಾಗೆಯೇ ಇನ್ನು ಮೂರು ಹಾಸ್ಯಕೃತಿಗಳು ರಘುಸುತರ **ಚೀಟಿಕಾಟ**, ಮಾಸ್ಟರ್ ಹಿರಣ್ಣಯ್ಯನವರ **ಫೋನಾವತಾರ**, ಗೌರೀತನಯರ **ವಧುದಕ್ಷಿಣೆ**. ಇವರು ಮೂವರೂ ಹಾಸ್ಯಕ್ಕಾಗಿ ನಗಿಸುವುದಕ್ಕಾಗಿ ಬೇಕಾದರೆ ನಾಟಕವನ್ನು ಬಲಿ ಕೊಡಬಲ್ಲರು. ಫೋನಾವತಾರ ಮನರಂಜನೆಯ ವಾಗ್ವೈಖರಿಯನ್ನೇ ಪ್ರಧಾನವಾಗಿ ಉಳ್ಳ ನಾಟಕ. ಬಸರಿಯಾದ ಹೆಂಡತಿ, ಹೆರಿಗೆ ನೋವು ತಿನ್ನುತ್ತಿದ್ದಾಗ ಗಂಡ ಡಾಕ್ಟರರಿಗೆ ಫೋನ್ ಮಾಡುತ್ತ ಪ್ರೇಕ್ಷಕರನ್ನು ನಗಿಸುವುದೇ ಇದರ ವಸ್ತು. ಆದರೆ ಆ ರೀತಿ ಹೆಂಡತಿ ವೇದನೆ ಪಡುತ್ತಿದ್ದಾಗ ಗಂಡ ಹಲ್‌ಚೆಲ್ಲಾಗಿ ಮಾತಾಡುವುದು ಬಹಳ ಕ್ರೂರವಾದ ವಾಸ್ತವಕ್ಕೆ ಅರ್ಥಾಥ್ ಸಂಬಂಧವಿಲ್ಲದ ಹಾಸ್ಯವೆನಿಸುತ್ತದೆ.

ಧನದಾಹದಿಂದ ಮಕ್ಕಳ ಸೌಖ್ಯ ಗಮನಿಸದ ಜಿಪುಣ ತಂದೆಗಳಿಗೆ ಬುದ್ಧಿ ಕಲಿಸುವ ಉದ್ದೇಶದಿಂದ ಬರೆದ ಕೃತಿ 'ವಧುದಕ್ಷಿಣೆ'.

ಕುಲಟೆ (ಶ್ರೀನಿವಾಸ ಎಸ್. ಕೆ.) ಇದೊಂದು ಸಾಮಾಜಿಕ ನಾಟಕ. ಹೊಟ್ಟೆಗಿಲ್ಲದ ಹೆಣ್ಣೊಂದು ತನ್ನ ಶೀಲವನ್ನು ಮಾರಿಕೊಂಡಿದ್ದಲ್ಲದೇ ತನ್ನ ಮಗಳನ್ನೂ ಅಧಃಪತನಕ್ಕೆ ಈಡು ಮಾಡುವುದೇ ಇದರ ವಸ್ತು. ಕೆಲವು ಅನವಶ್ಯಕ ಸನ್ನಿವೇಶಗಳನ್ನು ತೆಗೆದುಹಾಕಿದರೆ ನಾಟಕಕ್ಕೆ ಬಿಸಿ ಹೆಚ್ಚುತ್ತದೆ'' ಎಂದು ನಾಡಿಗೇರ ಕೃಷ್ಣರಾಯರು ಹೇಳಿದ್ದು ಸರಿಯಾದ ಮಾತಾಗಿದೆ. ಇವರದೇ ಇನ್ನೊಂದು ನಾಟಕ **'ಕನ್ನಡನಾಡಿನ ಕಲಿ'** ಕರ್ನಾಟಕಕ್ಕಾಗಿ, ಕನ್ನಡಕ್ಕಾಗಿ ನಿಸ್ವಾರ್ಥದಿಂದ ದುಡಿಯುವವರ ಗತಿ ಕಡೆಗೇನಾಗಬಹುದೆಂದು ''ಪುಟ್ಟಬುದ್ಧಿಗೆ ತೋಚಿದ ರೀತಿಯಲ್ಲಿ ಬಾಲ ನುಡಿಯಲ್ಲಿ'' ನಿರೂಪಿಸುವ ನಾಟಕ.

ದಿವ್ಯಜ್ಯೋತಿ (ರಾ. ಗೋಪಾಲಕೃಷ್ಣ) ಇದು ಮೂರು ನಾಟಕಗಳ ಸಂಕಲನ ಹವ್ಯಾಸಿ ರಂಗಕ್ಕಾಗಿ ರಚಿಸಿದ ಕೇವಲ ಒಂದು ಅಥವಾ ಒಂದೂವರೆ ಗಂಟೆಯ ಸ್ಪರ್ಧಾನಾಟಕಗಳು. ಮೊದಲನೆಯದಾದ **'ಶಾಕುಂತಲಾ'** ನಾಟಕವು ವಿಶ್ವಾಮಿತ್ರ ಮೇನಕೆಯರ ನರ್ತನದಿಂದ ಶುರುವಾಗಿದೆ. ದುಷ್ಯಂತ ಶಕುಂತಲೆಯರ ಕಾಮ ಶುದ್ಧ ಪ್ರೇಮವಾಗುವಲ್ಲಿ ಮುಗಿಯುತ್ತದೆ. ಶೀಘ್ರ ಕೋಪಿಯಾದ ತಂದೆ 'ವಾಜಸ್ರವಸ'ನದಾನದ ಮೇರೆಗೆ ಯಮಲೋಕಕ್ಕೆ ತೆರಳಿದ ಅವನ ಪುತ್ರ ನಚಿಕೇತನು ಯಮನಿಂದ ಅಗ್ನಿವಿದ್ಯೆಯನ್ನೂ ಪರಮಾತ್ಮನಿಂದ ಪರಾವಿದ್ಯೆಯನ್ನೂ ಸಾಧಿಸಿ ಜಗತ್ತೇ ಓಂಕಾರ ಸ್ವರೂಪವೆಂಬ ಉಪನಿಷತ್ ಸಂದೇಶವನ್ನು ಸಾರುವಲ್ಲಿ ಮುಗಿಯುತ್ತದೆ. ಎರಡನೆ ನಾಟಕ ಕೊನೆಯದಾದ 'ವಾಲಿ' ನಾಟಕವು ಅದಷ್ಟು 'ಐತಿಹಾಸಿಕ' ಹಿನ್ನೆಲೆಯಲ್ಲಿ ಬರೆದದ್ದು.

ಮೂರು ಗೀತನಾಟಕಗಳು (ಚಿರಂತನ) 'ಎಚ್ಚರಿರು ಕಂದ' 'ಸಮಾಗಮ' 'ಕವೇರ ಕುವರಿ' ಇವೇ ಆ ಮೂರು ನಾಟಕಗಳು. ಎಚ್ಚರಿರು ಕಂದ ಎಂಬುದು 'ಸ್ವತಂತ್ರ ಭಾರತ'ದ ಅಂತರ್ವಾಣಿಯೆಂದೂ, ಎರಡನೆಯದಾದ 'ಸಮಾಗಮ'ವು ಮುದ್ದಣನ ರಾಮಾಶ್ವಮೇಧದ ನಾಟಕ ರೂಪವೆಂದೂ,

ಕೊನೆಯ 'ಕವೇರ ಕುವರಿ' ದಕ್ಷಿಣದ ಗಂಗೆ ಎನಿಸಿದ ಕಾವೇರಿಯ ಬಗ್ಗೆ ಪ್ರಚಲಿತವಾದ ಕಥೆಯೊಂದರ ಆಧಾರದಿಂದ ರೂಪಿತವಾದುದೆಂದು ಹೇಳಿದ್ದಾರೆ.

ಒಂದೆರಡು ಕಂಪನಿ ನಾಟಕಗಳು ಈ ವರ್ಷ ಬಂದಿವೆ. ಕವಿತಾಕೃಷ್ಣರ 'ತ್ಯಾಗಮಯಿ' ಕ್ಯಾತ್ಸಂದ್ರ ಚಂದ್ರಶೇಖರ ಅವರ 'ಮನೆಹಾಳ' ಇಂಥವು. ನಮ್ಮಲ್ಲಿಯ ಕಂಪನಿ ನಾಟಕಗಳ ಪರಂಪರೆಯೊಂದನ್ನು ಪ್ರತ್ಯೇಕವಾಗಿಯೇ ಗುರುತಿಸಬೇಕೆಂದು ತೋರುತ್ತದೆ. ಬೇರೆ ನಾಟಕಗಳನ್ನು ಸಾಹಿತ್ಯಿಕವಾಗಿಯೂ ಮೌಲ್ಯಮಾಪನ ಮಾಡಬಹುದಾದರೆ ಕಂಪನಿ ನಾಟಕಗಳನ್ನು ಪ್ರಯೋಗದ ಆಧಾರದಮೇಲೆಯೇ ನೋಡಬೇಕಾಗುತ್ತದೆ. ಯಾಕೆಂದರೆ ಓದಿದಾಗ ಭಾವುಕವೆನ್ನಿಸುವ ಅನೇಕ ಸನ್ನಿವೇಶಗಳು ಪ್ರಯೋಗದಲ್ಲಿ ತೇಲಿಕೊಂಡು ಹೋಗಿ ಗ್ರಾಹ್ಯವೆನ್ನಿಸುವುದುಂಟು. ಈ ನಾಟಕಕಾರರಿಗೆ ತಮ್ಮವರೇ ಆದ ಪ್ರೇಕ್ಷಕರಿದ್ದಾರೆ. ಅವರ ಅಭಿರುಚಿಯನ್ನು ಇವರು ಚೆನ್ನಾಗಿ ಬಲ್ಲರು ಕೂಡ. ಇಲ್ಲದಿದ್ದರೆ ಹಳ್ಳಿಗಳಲ್ಲಿ ನಗರಗಳಲ್ಲಿ ಕೂಡ ಈ ನಾಟಕಗಳು ನೂರಾರು ಪ್ರಯೋಗಗಳನ್ನು ಕಾಣುವ ಸಂಭವ ಇರುತ್ತಿರಲಿಲ್ಲ. ಪ್ರಸ್ತುತ ಎರಡು ನಾಟಕಗಳು ಇಂಥವು. ಇದರಲ್ಲಿ ಹಾಡುಗಳಿವೆ. ಭಾವುಕ ಕಥೆ, ಕಥೆಗೆ ತಕ್ಕ ಸಂಭಾಷಣೆ ಕೂಡ ಇದೆ. 'ಸರಳ ಪಾತ್ರಗಳ, ಸುಲಲಿತ ಭಾಷೆಯ, ಸುಲಭ ರಂಗಸಜ್ಜಿಕೆಗಳ ವಿಚಾರಪೂರ್ಣ ನಾಟಕ' ಎನ್ನುವ ಮಾತು ಸಾಹಿತ್ಯಿಕ ದೃಷ್ಟಿಯಿಂದ ಅತಿಶಯೋಕ್ತಿ ಆದೀತು. ಆದರೆ ಪ್ರಯೋಗದ ದೃಷ್ಟಿಯಲ್ಲಿ ಹೇಗೆಂಬುದನ್ನು ನೋಡಿಯೇ ಹೇಳಬೇಕು.

ಬೇರೆ ಕೊಂಚ ಮಧು ಪಾತ್ರಕ್ಕೆ ಹಾಕಿ (ವಸಂತ ಕವಲಿ.) ಬೇರೆ "ಕೊಂಚ ಮಧು ಪಾತ್ರಕ್ಕೆ ಹಾಕಿ ಪಾನಂ ಬೇಲೆತ್ತಿ ಮದುವಂ ಬೆರೆತ್ತುವೆನ್''- ಎರಡನೆ ಶತಮಾನದ ಗ್ರೀಕ್ ನಾಟಕವೊಂದರಲ್ಲಿ ಸಿಕ್ಕುವ ಕನ್ನಡವೆನ್ನಬಹುದಾದ ಈ ಮಾತಿನ ಆಧಾರದ ಮೇಲೆ ಕಟ್ಟಿದ ನಾಟಕವಿದು. ಈ ಮಾತುಗಳ ಬಗೆಗೆ ವಿದ್ವಾಂಸರು ಸಾಕಷ್ಟು ವಾದ ವಿವಾದ ಮಾಡಿ ದಣಿದು ಕೈಬಿಟ್ಟಿದ್ದಾರೆ. ಕವಲಿಯವರು ಮಾತ್ರ ಕಲಾತ್ಮಕವಾಗಿ ಅದರ ಹಿನ್ನೆಲೆಯನ್ನು ಊಹಿಸಿ ಇವು ಪ್ರಹಸನದ ಮಾತುಗಳಲ್ಲ ದುರಂತ ನಾಟಕದ ಮಾತುಗಳೆಂದು ಗ್ರಹಿಸಿ ಆ ರೀತಿಯಲ್ಲಿ ನಾಟಕ ಹೆಣೆದಿದ್ದಾರೆ. ಇಲ್ಲಿಯ ನಾಯಕ ಗ್ರೀಸ್ ದೇಶದ 'ಚಾರೀಸಿಯನ್' ಎಂಬ ನಟಿಯ ಅಭಿನಯಕ್ಕೆ ಮನಸೋತು 'ದೆಸೆಂಟೋಕ್ಲಿಸ್' ಎಂಬ ಕವಿ ನಾಟಕಕಾರನಾದ ಅವಳ ನಲ್ಲನಿಂದ ಬೇರ್ಪಡಿಸಿ ಕಡಲ್ಗಳ್ಳರ ಮೂಲಕ ಅವಳನ್ನಿಲ್ಲಿಗೆ ತರಿಸಿ ಅವಳ ಮನಸ್ಸನ್ನು ಗೆಲ್ಲುತ್ತಾನೆ. ಮುಂದೆ ಅವಳ ನಲ್ಲ ಮತ್ತು ಅಣ್ಣ ಬಂದು ನಾಯಕನಿಗೆ ಮತ್ತು ಬರಿಸಿ ಅವಳನ್ನು ವಾಪಸ್ಸು ಕರೆದೊಯ್ಯುವದೇ ಈ ನಾಟಕದ ವಸ್ತು. ''ಕವಲಿಯವರ ಕಲ್ಪನೆಯಲ್ಲಿ ರೂಪಗೊಂಡು ಈ ಕಥಾವಸ್ತು ಸೊಗಸಾದ, ಕರುಣ, ರಮ್ಯ ರುದ್ರನಾಟಕವಾಗಿ ಮೈದಾಳಿದೆ. ವರ್ತಮಾನದ ಸಂಶೋಧಕ ನಾರಾಯಣರಾಯರ ಮನೆಯ ದೃಶ್ಯದಿಂದ... ಈ ಕಥೆಯ ಸಂಭಾವ್ಯತೆಗೆ ಅಗತ್ಯವಾದ ಒಂದು ನೆಲೆಗಟ್ಟು ನಿರ್ಮಿತವಾಗುತ್ತದೆ. ಅನಂತರ ಮುಂದಿನ ಘಟನೆಗಳು ಇತಿಹಾಸ ದೃಷ್ಟಿಗೆ ಅಸ್ಪಷ್ಟವಾದ ಪ್ರಾಚೀನತೆಯ ಮಬ್ಬಿನಲ್ಲಿ ಮೆತ್ತಗೆ ಬಿಚ್ಚಿಕೊಂಡು ರಂಗದಮೇಲೆ ಅಭಿನಯಿತವಾಗುತ್ತವೆ. ಗ್ರೀಕ್ ಹಾಗೂ ವಾಣಿಜ್ಯ ಸಂಬಂಧಗಳು, ಕಡಲ್ಗಳ್ಳರ ಚಟುವಟಿಕೆಗಳು. ಕಲಹಗಳು, ಕಲೆಗಳು ಹೀಗೆ ಒಂದು ಗೂಡುವ ಪರಿಸ್ಥಿತಿಯು ಪರಿಚಯವಾಗುತ್ತಲೇ ಇತ್ತ ಕಥಾವಸ್ತು ಉದಯನ ವಾಸವದತ್ತೆಯರ ಭಾರತೀಯ ಪುರಾಣ ಕಥೆಯೊಂದಿಗೆ ಬೆಸೆದುಕೊಳ್ಳುತ್ತ ಎರಡು ಸಂಸ್ಕೃತಿಗಳ ಸಂಬಂಧ ಹಾಗೂ ಸಂಘರ್ಷವನ್ನು ಈ ನಾಟಕ ತನಗೆ ಹಿನ್ನೆಲೆಯಾಗಿ ಉಪಯೋಗಿಸಿಕೊಳ್ಳುತ್ತ ಹೋಗುತ್ತದೆ......ಕನ್ನಡ ರಂಗಭೂಮಿಗೆ ಈ ಕೃತಿ ಹೊಸ ವಸ್ತುವೊಂದನ್ನು ಪರಿಚಯ ಮಾಡಿಕೊಡುತ್ತದೆ. ಹಾಗೆಯೇ ಕವಲಿಯವರ ಪ್ರಯೋಗ ಪರಿಣತ ಮಾತಿಗೆ ಕನ್ನಡಿ ಹಿಡಿಯುತ್ತದೆ.'' (ಮುನ್ನುಡಿ : ಡಾ॥ ಶಿವರುದ್ರಪ್ಪ)

ಈ ವರ್ಷ ಶ್ರೀರಂಗರ ಎರಡು ನಾಟಕಗಳು 'ಏನ ಬೇಡಲಿ ನಿನ್ನ ಬಳಿಗೆ ಬಂದು' ಹಾಗೂ 'ಯಾರಿಗೆ ಮಾಡ್ತಿ ಪ್ಯಾಂ' ಬಂದಿವೆ. ಕನ್ನಡದ ಮೊದಲ ನಾಟಕಕಾರರಲ್ಲಿ ಒಬ್ಬರಾದ ಶ್ರೀರಂಗ

ರಿಂದ ಹೆಚ್ಚು ಗಟ್ಟಿಮುಟ್ಟಾದ ಸತ್ವಪೂರ್ಣವಾದ ಪಕ್ವ ನಾಟಕ ಬಯಸಿದವರಿಗೆ ಇಲ್ಲಿ ನಿರಾಶೆಯಾಗುತ್ತದೆ. ಬಾದಲ ಸರ್ಕಾರ್ ವಿಜಯ ತೆಂಡುಲ್ಕರ್, ಶ್ರೀರಂಗ—ಇವರೆಲ್ಲರ ಇತ್ತೀಚಿನ ನಾಟಕಗಳನ್ನು ಗಮನಿಸಿದರೆ ಒಂದು ಮಾತು ಖಾತ್ರಿಯಾಗುತ್ತದೆ. ಇವರೆಲ್ಲ ತಮ್ಮ ಕಲೆಗಾರಿಕೆಯ ಬಗ್ಗೆ ತಾವೇ ಬೇರಗಾಗಿದ್ದಾರೆ ಎನ್ನುವದು. ಹಾಗೆಯೇ ಇನ್ನೂ ಒಂದು ಮಾತು ತಿಳಿಯುತ್ತದೆ. ಇನ್ನು ನಮ್ಮಲ್ಲಿ ಎರಡು ಬಗೆಯ ನಾಟಕಕಾರರಿದ್ದಾರೆ (೧) ಒಂದು ವಿಚಾರವನ್ನು ಯೋಚಿಸಿ ಆಮೇಲೆ ಅದನ್ನು concept ಮಾಡಿ ಅದಕ್ಕೆ ಕೈಕಾಲು ಮೂಡಿಸಿ ನಾಟಕ ಬರೆಯುವವರದು ಒಂದು ತಂಡ ಇವರಿಗೆ ತಮ್ಮ 'ವಿಚಾರ'ವನ್ನು ಸಂಪಾದನ ಮಾಡುವದಕ್ಕೆ ನಾಟಕ ಒಂದು ಮಾಧ್ಯಮ. ಆದ್ದರಿಂದ ಅನಿವಾರ್ಯವಾಗಿ ಈ ವಿಚಾರವಾದ ವಿವಾದವಾಗಿ, ಈ ವಿವಾದ ವಾಚಾಳಿ ತಂತ್ರವಾಗಿ ಪರಿವರ್ತನೆಗೊಳ್ಳುತ್ತದೆ. ವಿಚಾರ ಸಣ್ಣದಿದ್ದಾಗ ಹೇಳುವ ತಂತ್ರ ಬಲವಾಗಿ ಆ ವಿಚಾರದಮೇಲೆ ವಿಪರೀತ ಒತ್ತಡ ಬೀಳುತ್ತದೆ. ಆದರೆ ಈ ನಾಟಕ ನೋಡುವ ಕೃತಿಯಾಗುವದಿಲ್ಲ. ಕೇಳುವ ಕೃತಿಯಾಗುತ್ತದೆ. ಆದಾದರೂ ತಪ್ಪೇನಿತ್ತು, ಇವರು ಕವಿಗಳಾಗಿದ್ದರೆ. ಆದರೆ ಇವರಲ್ಲಿ ಯಾರೂ ಕವಿಗಳಲ್ಲ. ಹೀಗಾಗಿ ಇಡೀ ನಾಟಕ ವಕೀಲರ ವಾದ ಸರಣಿಯಾಗಿ ರಂಗಭೂಮಿ ಕೋರ್ಟಾಗಿ ಮಾರ್ಪಾಡಾಗುತ್ತದೆ. ೨) ಬದುಕಿನ ತೀವ್ರ ಸನ್ನಿವೇಶವೊಂದನ್ನು ಆಳವಾಗಿ ಅನುಭವಿಸಿ ಅದರೊಂದಿಗಿನ ತನ್ನ ಸಂಬಂಧವನ್ನು ವ್ಯಾಖ್ಯಾನಿಸುತ್ತ, ಕಂಡುಕೊಳ್ಳುತ್ತ ಆ ಅನುಭವವನ್ನು ಕಲಾನುಭವವಾಗಿ ಸಲಿಕ್ಕಾಗಿ ಅದಕ್ಕೊಂದು ರೂಪಕೊಡುತ್ತ ನಾಟಕ ಬರೆಯುವವರದು ಇನ್ನೊಂದು ತಂಡ. ಇವರಿಗೆ ಅನುಭವ ಕೊಡುವದಕ್ಕಾಗಿ ನಾಟಕ ಮಾಧ್ಯಮವಾದದ್ದು. ಅದರ ತಂತ್ರಕೂಡ ಅನುಭವದ ಸೇಂದ್ರಿಯ ಘಟಕವಾಗುವಷ್ಟರಮಟ್ಟಿಗೆ ಇವರು ಭಾಷೆ, ರೂಪ, ಪಾತ್ರ, ವಾತಾವರಣಗಳನ್ನು ಸೃಷ್ಟಿಸುತ್ತ ಕ್ರಿಯಾಶೀಲರಾಗಿರುತ್ತಾರೆ.

ಶ್ರೀರಂಗರು ಮೊದಲನೇ ವರ್ಗಕ್ಕೆ ಸೇರುತ್ತಾರೆ. ಅನೇಕ ಸಲ ಈ ಎರಡೂ ನಾಟಕಗಳನ್ನು ತಂತ್ರಕ್ಕಾಗಿ ಬರೆದರೋ ಎನ್ನಿಸುತ್ತದೆ. "ಇತ್ತೀಚೆಗೆ ನಾವು ವಿರಾಮ ವೇಳೆಯಲ್ಲಿ ಓದಿದ ಕೆಲವು ಜೀವಶಾಸ್ತ್ರ ಮತ್ತು ಪ್ರಾಣಿಶಾಸ್ತ್ರಗಳ ಪುಸ್ತಕಗಳು. ಆ ಶಾಸ್ತ್ರಗಳ ತಜ್ಞನಲ್ಲದ ನನ್ನಲ್ಲಿ ದಿನನಿತ್ಯ ಜೀವನದ ಮಾನವನ ಬಗ್ಗೆ ಕೆರಳಿಸಿದ ಕೆಲವು 'ವಿಚಾರಗಳೇ' ಈ ನಾಟಕದ ಸಾಮಗ್ರಿ. ಇದನ್ನು ಬರೆಯುವುದಕ್ಕೆ ಪ್ರೇರಕ" ಎಂದು ಮುನ್ನುಡಿಯಲ್ಲಿ (ಏನಬೇಡಲಿ ನಿನ್ನ ಬಳಿಗೆ ಬಂದು) ಹೇಳಿದ್ದಾರೆ. ಸರಿಯೇ, ಈ ನಾಟಕದ 'ಸಾವಿತ್ರಿ'ಯಲ್ಲಿ ತೋರಿಸುವುದೂ ಅದನ್ನೇ. ಆದರೆ ಈ ವಿಚಾರ ಕೊನೆಗೂ ವಿಚಾರವಾಗಿ ಉಳಿಯುವುದೇ ಹೊರತು ನಾಟಕಾನುಭವವಾಗಿ ದಕ್ಕುವುದಿಲ್ಲ. ಅಲ್ಲದೆ ಅವರು ಹೇಳಬೇಕೆಂಬ ವಿಚಾರವೂ ದೊಡ್ಡದಲ್ಲ, ಅಸಾಧಾರಣವಲ್ಲ. ಈ ಮಾತು 'ಯಾರಿಗೆ ಮಾಡ್ತೀಯ್ಯಾಂ? ನಾಟಕಕ್ಕೆ ಇನ್ನೂ ಹೆಚ್ಚು ಚೆನ್ನಾಗಿ ಅನ್ವಯಿಸುತ್ತದೆ. ತೀರ ಬಡತನದ ಕುಟುಂಬದಲ್ಲಿ ಹುಟ್ಟಿ ಇಂದು ಲಕ್ಷಾಧೀಶರಾಗಿ ಮುಂದಾಳಾದ ಭೀಮರಾಯನ ಜೀವನ ರಹಸ್ಯವನ್ನು ಅರಿಯುವ ನೆಪದಲ್ಲಿ ಬದುಕಿನ ಒಳಲೊಟ್ಟೆತನ ತೋರಿಸುವದೇ ಇದರ ವಸ್ತು. ಆದರೆ ಸೂತ್ರಧಾರ-ಮಾರಿಷರ ಅಧಿಕ ಪ್ರಸಂಗತನದಿಂದಾಗಿ ಒಳಲೊಟ್ಟೆತನ ಮಾತಾಗಿ ಮಾತುಭಾಷಣವಾಗಿ ನಿಲ್ಲುತ್ತದೆ. ನಾಟಕದ ಅನುಭವ ಕೊನೆಗೂ ದಕ್ಕುವದಿಲ್ಲ.

ಈ ವರ್ಷ ನನ್ನ ಎರಡು ನಾಟಕ ಪುಸ್ತಕಗಳು ಹೊರಬಂದಿವೆ. 'ಜೈಸಿದನಾಯ್ಕ' ದಲ್ಲಿ 'ಜೈಸಿದನಾಯ್ಕ' ಹಾಗೂ 'ಹಿರೋಹಿರ' ಎಂಬ ಎರಡು ನಾಟಕಗಳಿವೆ. ಇನ್ನೊಂದು 'ಸಂಗ್ಯಾ ಬಾಳ್ಯಾ ಅನ್ನಬೇಕೋ ನಾಡೊಳಗ'. ಇದು ಜನಪದ ಬಯಲಾಟವಾದ ಶ್ರೀ ಪತ್ತಾರ ಕವಿಯ 'ಸಂಗ್ಯಾಬಾಳ್ಯಾ'ದ ಅಳವಡಿಕೆ.

ಶಿಷ್ಟಾಚಾರ : (ಕೆ. ಪಿ. ಶಂಕರಗೌಡ) ಆಸ್ಕರ್‌ವೈಲ್ಡ್‌ನ 'Ideal Husband' ಎಂಬ ನಾಟಕದ ಅಳವಡಿಕೆಯಿದು. ವಿಭಿನ್ನವಾದ ಪಶ್ಚಿಮದ ಸಾಮಾಜಿಕ ಸನ್ನಿವೇಶಗಳನ್ನು ನಮ್ಮ ಸಮಾಜಕ್ಕೆ ಹೊಂದಿಕೊಳ್ಳುವಂತೆ ಸೂಕ್ತವಾದ ಮಾರ್ಪಾಟು ಮಾಡಿಕೊಂಡಿದ್ದಾರೆ. ಪ್ರಸ್ತುತ

ಲೇಖಕರು ರಾಜಕೀಯವನ್ನು ಬಹಳ ಹತ್ತಿರದಿಂದ ಬಲ್ಲವರಾದುದರಿಂದ ಇಲ್ಲಿಯ ಘಟನೆಗಳಲ್ಲಿ, ಅವುಗಳನ್ನು ಕ್ರಮಗೊಳಿಸಿ ಒಟ್ಟಂದದ ವ್ಯಂಗಾರ್ಥವೊಂದನ್ನು ಧ್ವನಿಸುವುದರಲ್ಲಿ ನೈಪುಣ್ಯ ತೋರಿದ್ದಾರೆ. ಕೊನೆಯತನಕ ಕುತೂಹಲ ಮುಕ್ಕಾಗುವುದಿಲ್ಲ. ಇಷ್ಟಾಗಿಯೂ ಬಳಸಿದ ಗ್ರಾಂಥಿಕ ಭಾಷೆಯಿಂದಾಗಿ ನಾಟಕಾನುಭವ ಓದುಗರಿಂದ ಒಂದು ಹೆಜ್ಜೆ ದೂರದಲ್ಲೇ ನಿಲ್ಲುತ್ತದೆ. ತಮ್ಮ ಉಪಭಾಷೆಯನ್ನು ಬಳಸಿದ್ದರೆ ಅದರ ಮೆರುಗೇ ಬೇರೆಯಾಗುತ್ತಿತ್ತು. ಈ ದೋಷವಿದ್ದಾಗ್ಯೂ ಇದೊಂದು ಗಟ್ಟಿಮುಟ್ಟಾದ ನಾಟಕವೆನ್ನುವುದರಲ್ಲಿ ಸಂದೇಹವಿಲ್ಲ.

ಬಾದರಾಯಣಿ (ಟಿ. ಸುನಂದಮ್ಮ) ಇದೊಂದು ನಗೆನಾಟಕ. 'ಆಸ್ಕರ್‌ವೈಲ್ಡ್'ನ 'ದಿ ಇಂಪಾರ್ಟೆನ್ಸ್ ಆಫ್ ಬಿಯಿಂಗ್ ಅರ್ನೆಸ್ಟ್' ನಾಟಕದ ಛಾಯಾನುವಾದ ಎನ್ನಬಹುದು. ಸಾಧ್ಯವಾದಷ್ಟು ಇಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ವ್ಯಕ್ತಿಗಳ ಸ್ಥಳಗಳ ಹೆಸರು ಹಾಗೂ ಕೆಲವು ಕಲ್ಪನೆಗಳನ್ನು ಬದಲಾಯಿಸಿಕೊಂಡಿದ್ದಾರೆ. ಅನುವಾದ ಚೆನ್ನಾಗಿದೆ. ಮೂಲಕರ್ತೃವಿನ ಆಶಯ ಸರಿಯಾಗಿ ಮೂಡಿದೆಯೆಂದು ಅನ್ನಿಸುತ್ತದೆ.

ಪಾಪಕಳೆದಾತ್ಮ (ವೈನತೇಯ) ಸೊಫೊಕ್ಲೀಸ್ ಕವಿಯ ಈಡಿಪಸ್ ನಾಟಕದ ಇನ್ನೊಂದು ಅನುವಾದ. ಇಲ್ಲಿಯ ವಾತಾವರಣಕ್ಕೆ ಹೊಂದಿಕೆಯಾಗುವಂತೆ ಪಾತ್ರ ಊರುಗಳ ಹೆಸರನ್ನು ಬದಲಿಸಿದ್ದಾರೆ. ಆದರೆ ಮೂಲ ಈಡಿಪಸ್ ಮತ್ತು ಯೊಕಾಸ್ತರ ತಾಯಿ ಮಗ ಸಂಬಂಧವನ್ನು ಅಣ್ಣ ತಂಗಿ ಎಂದು ಬದಲಿಸಿಕೊಂಡದ್ದು ಮಾತ್ರ ಎಷ್ಟಕ್ಕೂ ಸರಿಹೋಗಿಲ್ಲ. ತಮ್ಮ ಈ ಬದಲಾವಣೆಯನ್ನು ಸಮರ್ಥಿಸಿಕೊಳ್ಳುತ್ತ 'ತಾಯಿಯೊಂದಿಗೆ ರಮಿಸಿದ ಮಗ ಹಾಗೂ ಮಗನಿಗೆ ಮೈ ನೀಡಿದ ತಾಯಿಯರು ನಮ್ಮ ಸಂಸ್ಕೃತಿಯಲ್ಲಿ ಬಹುತೇಕ ಸಿಗುವುದಿಲ್ಲ, ಸಿಕ್ಕಿದರೂ ಅವರ ಹೆಸರನ್ನು ಒಂದೇ ಪೀಳಿಗೆಯ ಅವಧಿಯಲ್ಲಿ ಮತ್ತೆ ನೆನಪಾಗದಂತೆ ಅಳಿಸಿ ಬಿಡುವಂಥ ಉಚ್ಚ ಸಂಸ್ಕೃತಿ ನಮ್ಮದು" ಎಂದಿದ್ದಾರೆ. ಅವರಿಗೆ ಗೊತ್ತಿಲ್ಲ-ಗ್ರೀಕ್‌ಸಂಸ್ಕೃತಿಯಲ್ಲೂ ಅಂಥವರು ಸಿಕ್ಕುವುದಿಲ್ಲ. ಅಲ್ಲಿರುವುದು ಮಾನವನ ಗೂಢ ಸಂಬಂಧಗಳ ಅನುಭವಚಿತ್ರಣ, ಇಡೀ ನಾಟಕವನ್ನು ತಪ್ಪಾಗಿ ಗ್ರಹಿಸಿದ್ದೇ ಇದಕ್ಕೆ ಕಾರಣವಾಗಿದೆ. ನಮ್ಮ ಜನಪದ ಸಂಸ್ಕೃತಿಯಲ್ಲಿ ದೈವ ಪ್ರಾಬಲ್ಯವನ್ನು ಹೇಳುವ ಇಂಥ ಕಥೆಗಳಿವೆ. ಮಾತ್ರವಲ್ಲ ಜನ ಎಂದಿನಿಂದಲೂ ಅವುಗಳನ್ನು ಹೇಳುತ್ತ ಕೇಳುತ್ತ ಬಂದಿದ್ದಾರೆ. ಹೀಗಿದ್ದೂ 'ಈ ಕಥೆಯ ಮೂಲಕ ಸೊಫೊಕ್ಲೀಸ್ ಹೇಳಬಯಸಿದ ನೀತಿಗೆ ಯಾವ ಧಕ್ಕೆಯನ್ನೂ ತಂದಿಲ್ಲ' ಎಂದು ಹೇಳುವುದು ಭಾರೀ ದಡ್ಡತನದ ಮಾತಾಗುತ್ತದೆ. ಇದನ್ನು 'ಜಾನಪದ ಅನೂಚಾನ ನಾಟಕ' ವೆಂಬುದಾಗಿ ಯಾಕೆ ಕರೆದಿದ್ದಾರೆಂದೇ ತಿಳಿಯುವುದಿಲ್ಲ.

ಹನ್ನೆರಡನೇ ರಾತ್ರಿ : (ಪಿ. ವಿ. ನಾರಾಯಣ) ಷೇಕ್ಸ್‌ಪಿಯರನ 'ಟ್ವೆಲ್ಫ್ತ್ ನೈಟ್' ನಾಟಕದ ಅನುವಾದವಿದು. ಈ ಹಿಂದೆಯೇ ಶ್ರೀ ಮಾಸ್ತಿಯವರ 'ದ್ವಾದಶ ರಾತ್ರಿ' ಬಂದಾಗಿದೆ. ಮೂಲಕೃತಿ ಷೇಕ್ಸ್‌ಪಿಯರನ ವೈನೋದಿಕಗಳಿಗಿಂತ ಭಿನ್ನ ಹಾಗೂ ಅನೇಕ ಅಂಶಗಳಲ್ಲಿ ಉತ್ತಮವಾದದ್ದು, ಅನುವಾದ ನಮ್ಮ ಮಾತಿನ ಧಾಟಿಗೆ ಹೆಚ್ಚು ಹತ್ತಿರವಾಗಿದೆ. ಕೊನೆಯಲ್ಲಿ ಕೊಟ್ಟ ಟಿಪ್ಪಣಿಗಳು ಉಪಯುಕ್ತವಾಗಿವೆ.

ಯಃಕಶ್ಚಿತ್ ಹೆಂಗಸು (ಪರ್ವತವಾಣಿ) ಆಸ್ಕರ್‌ವೈಲ್ಡ್‌ನ 'ದಿ ವುಮನ್ ಆಫ್ ನೋ ಇಂಪಾರ್ಟೆನ್ಸ್' ನಾಟಕವನ್ನಾಧರಿಸಿದ ಕೃತಿಯಿದು. ಕನ್ನಡ ನಾಟಕ ರಚಿಸುವಾಗ ನಾವು ನಮ್ಮ ಜೀವನಕ್ರಮ, ನಮ್ಮ ಸಂಸ್ಕೃತಿ, ನಮ್ಮ ಸಮಾಜ, ನಮ್ಮ ರುಚಿ, ನಮ್ಮ ಸೌಕರ್ಯ ಇವೆಲ್ಲವನ್ನು ಗಮನದಲ್ಲಿಡದೆ 'ಮಕ್ಕಿ ಕಾಮಕ್ಕಿ' ಪ್ರತಿಕೃತಿ ತಯಾರಿಸಲು ಹೊರಟರೆ ಸೋಲು ಕಟ್ಟಿಟ್ಟದ್ದು' ಎನ್ನುವುದನ್ನು ಕಂಡುಕೊಂಡು ಸೂಕ್ತ ಮಾರ್ಪಾಡುಗಳೊಂದಿಗೆ ಅನುವಾದಿಸಿದ್ದಾರೆ, ಆದರೆ ಅನುವಾದಕರೇ ಲೇವಡಿ ಎಬ್ಬಿಸಿದಂತಿರುವ ಕಣ್ಣಪ್ಪನ ಮಾತಿನ ಧಾಟಿ ಅತಿಶಯೋಕ್ತಿ ಎನಿಸುತ್ತದೆ. ಅನುವಾದ ಅಡ್ಡಿಯಿಲ್ಲ.

ತಿರುಗುಮುರುಗು (ಅನು : ಆರ್. ನಾಗರಾಜ್). ಸ್ಕಾಟ್‌ಲೆಂಡಿನ ಸರ್ ಜೇಮ್ಸ್ ಬ್ಯಾರಿಯ 'ದಿ ಅಡ್ಮಿರಲ್ ಕ್ರೈಟನ್' ನಾಟಕದ ಅನುವಾದವಿದು. ನಾಗರಿಕತೆ ಪ್ರಕೃತಿಗಳ ಪರಸ್ಪರ ಸಂಬಂಧವೇ ಈ ನಾಟಕದ ವಸ್ತು. ಪರಿಸರದ ಪ್ರಭಾವದಿಂದ ಒಬ್ಬ ವ್ಯಕ್ತಿ ಯಜಮಾನನಾಗಬಹುದು. ಸೇವಕನಾಗಬಹುದು. ಯಾರಾದರೇನು, ಅಂತಃಸತ್ವ ಮಾತ್ರ ಒಂದೇಯಾಗಿ ಉಳಿಯಬಲ್ಲದೆಂಬುವನ್ನು ಬ್ಯಾರಿ ತನ್ನ ಅನೇಕ ನಾಟಕಗಳಲ್ಲಿನಂತೆ ಇಲ್ಲಿಯೂ ಹೇಳಿದ್ದಾನೆ.

ಇದು ಬ್ಯಾರಿಯ ಪ್ರಸಿದ್ಧ ಕೃತಿ, ಪ್ರಪಂಚದ ತುಂಬಾ ಜನಪ್ರಿಯವಾದುದು, ಓದುವುದಕ್ಕೂ, ಆಡುವುದಕ್ಕೂ, ಪರಿಸರದ ಪ್ರಭಾವದಿಂದ ಯಜಮಾನರಾಗಿದ್ದ ಮಂಗೇಶರಾಯರು ಸೇವಕರಾಗುತ್ತಾರೆ, ಸೇವಕನಾಗಿದ್ದ ಕಿಟ್ಟ ಯಜಮಾನನಾಗುತ್ತಾನೆ. ಆದರೆ ಎರಡು ಸಂದರ್ಭಗಳಲ್ಲಿಯೂ ಕಿಟ್ಟ ತನ್ನ ಸ್ವಧರ್ಮಕ್ಕೆ ಸುಳ್ಳುಬೀಳುವುದಿಲ್ಲ. ನಾಗರಿಕತೆಯ ಮಧ್ಯದಲ್ಲಿದ್ದಾಗ ಅದರ ಕಟ್ಟುಕಟ್ಟಳೆ ಒಪ್ಪಿದ್ದವನು ಪ್ರಕೃತಿಯ ಮಧ್ಯದಲ್ಲಿ ಅದರ ಪ್ರಚೋದನೆಗಳನ್ನು ಒಪ್ಪುತ್ತಾನೆ, ಪ್ರಾಮಾಣಿಕವಾಗಿ ಕೂಡ. ಒಂದರ್ಥದಲ್ಲಿ ಅವನೇ ನಾಯಕ, ಯಾಕೆಂದರೆ ಬದುಕಿನ ಗುಟ್ಟನ್ನು ಆಳವಾಗಿ ಅರಿತವನು, ಅದರಂತೆ ನಡೆಯಬಲ್ಲ ತಾಕತ್ತಿದ್ದವನು ಅವನೊಬ್ಬನೇ.

ಅನೇಕ ವಿಮರ್ಶಕರು, ಪ್ರಸ್ತುತ ಅನುವಾದಕರು ಕೂಡ, ಬರ್ನಾರ್ಡ್ ಷಾ ಬ್ಯಾರಿಗಿಂತ ಮೇಲಿನವನು ಎಂದಿದ್ದಾರೆ. ಇಬ್ಬರ ನಾಟಕಗಳಲ್ಲಿ, ಅವುಗಳ ಬಂಧದಲ್ಲಿ ಎಷ್ಟೋ ಸಾಮ್ಯವಿದೆ. ಇಬ್ಬರೂ ವಾಚಾಳಿಗಳು. ಪಾತ್ರಗಳಿಗಿಂತ ಕಂಸಿನಲ್ಲಿ, ರಂಗ ನಿರ್ದೇಶನದ ಹೆಸರಿನಲ್ಲಿ ಇವರು ಮಾತಾಡುವುದೇ ಹೆಚ್ಚು. ಆದರೆ ಇಬ್ಬರಲ್ಲಿ ಮಹತ್ವದ ವ್ಯತ್ಯಾಸವೂ ಇದೆ. ಬ್ಯಾರಿಗಿದ್ದ ಕಲಾಪ್ರಜ್ಞೆ ಷಾನಲ್ಲಿ ಇರಲಿಲ್ಲ. ಮಾತುಗಾರಿಕೆಗಾಗಿ ಷಾ ನಾಟಕವನ್ನು ಕೂಡ ಬಲಿ ಕೊಡಬಲ್ಲ ಎನ್ನುವುದನ್ನು ಮರೆಯುವಂತಿಲ್ಲ. ಅನುವಾದ ಒಟ್ಟಿನಲ್ಲಿ ಚೆನ್ನಾಗಿ ಬಂದಿದೆ. ಆಡುನುಡಿಯ ಬಳಕೆ ಸಮರ್ಪಕವಾಗಿದೆಯೇನೋ ನಿಜ. ಆದರೆ ರಂಗನಿರ್ದೇಶನವನ್ನೂ ಆಡುನುಡಿಯಲ್ಲಿ ಅನುವಾದಿಸಿದ ಔಚಿತ್ಯ ಗೊತ್ತಾಗುವುದಿಲ್ಲ.

ಜೂಲಿಯಸ್ ಸೀಸರ್ (ಅನು: ಭಗವಾನ್). ಷೇಕ್ಸ್‌ಪಿಯರ್ ಮಹಾಕವಿಯ ಇದೇ ಹೆಸರಿನ ನಾಟಕದ ಅನುವಾದವಿದು. ಪೀಠಿಕೆಯಲ್ಲಿ "ಎಂಥ ಶ್ರೇಷ್ಠ, ಸುಂದರ ಅನುವಾದವೂ ಮೂಲಕೃತಿಗೆ ಸಂವಾದಿಯಲ್ಲ ; ಸಮನಲ್ಲ" ಎಂದು ಅನುವಾದಕರು ಮೊದಲೇ ಹೇಳಿಕೊಂಡಿದ್ದಾರೆ. ಎರಡು ಸಂಸ್ಕೃತಿಗಳು ಎಷ್ಟು ಭಿನ್ನ ಎಂದು ತಿಳಿಯುವುದು ಅನುವಾದದಲ್ಲಿಯೇ. ಹೀಗಾಗಿ ಒಂದು ಭಾಷೆಯ ಕೃತಿಯನ್ನು ಇನ್ನೊಂದಕ್ಕಿಳಿಸುವಾಗ ಕೆಲಮಟ್ಟಿನ ಒಪ್ಪಂದಗಳಿಲ್ಲದೆ ಸಾಧ್ಯವಾಗದ ಮಾತು, ಸ್ವಯಂ ಈ ಅರಿವಿನಿಂದ ಮಾಡಿದ ಅನುವಾದ ಕೃತಿ ಇದಾದ್ದರಿಂದ ಇಡೀ ಕೃತಿಯಲ್ಲಿ ಒಂದು ವಿಶೇಷ ಎಚ್ಚರ, ಕಾಳಜಿ ಇರುವುದನ್ನು ಸ್ಪಷ್ಟವಾಗಿ ನೋಡಬಹುದು. ಆಡುನುಡಿಗೆ ಹತ್ತಿರವಾಗುತ್ತಾ, ಭಾಷೆಯ ಗಾಂಭೀರ್ಯವನ್ನು ಉಳಿಸಿಕೊಳ್ಳುವ ಪ್ರಯತ್ನ ಸ್ತುತ್ಯವಾಗಿದೆ. ಆದರೂ ಕ್ಯಾಪಿಟಲ್ ಎಂಬುವುದರ ಬದಲು ಆ ಭಾವ ನೀಡುವ ಇಲ್ಲಿಯ ಪದ ಬಳಸಿದ್ದರೆ ಒಳ್ಳೆಯದಾಗುತ್ತಿತ್ತೆಂದು ತೋರುತ್ತದೆ. ಯಾಕೆಂದರೆ "ಮೂಲ ಗೊತ್ತಿಲ್ಲದವರಿಗೆ ತಾನೆ ಅನುವಾದ?" ಅಥವಾ ಇಂಥ ದೋಷ ಈ ಕೃತಿಗೆ ದೊಡ್ಡದಲ್ಲ.

ಪಡುವಣನಾಡಿನ ಪ್ರೇಮವೀರ (ಅನು : ಬಸವರಾಜ ನಾಯ್ಕರ) ಹೆಸರಾಂತ ಐರಿಶ್ ನಾಟಕಕಾರ ಜೆ.ಎಂ. ಸಿಂಜ್‌ನ 'ದಿ ಪ್ಲೇಬಾಯ್ ಆಫ್ ದಿ ವೆಸ್ಟರ್ನ್ ವರ್ಲ್ಡ್' ನಾಟಕದ ಕನ್ನಡಾನುವಾದವಿದು. ಮೂಲನಾಟಕ ಇಡೀ ಜಗತ್ತಿನ ಲಕ್ಷ್ಯವನ್ನೇ ಸೆಳೆದ ಕೃತಿ, ಅತ್ಯಂತ ಚರ್ಚೆ ಕೆರಳಿಸಿದ ವಿಚಿತ್ರ ಕಥಾವಸ್ತುವಿನಿಂದ ಕೂಡಿದ್ದು. ಲೋಕದಲ್ಲೇ ದೊಡ್ಡ ಅಪರಾಧವೆನ್ನಬಹುದಾದ ಕೃತ್ಯ ಕಣ್ಣಮರೆಯಲ್ಲಿ ದೂರದಲ್ಲಿ, ನಡೆದಾಗ ಕಲೆಯಬಣ್ಣ ಪಡೆಯುತ್ತದೆ. ಕಣ್ಣೆದುರಿಗೇ ನಡೆದಾಗ ಅದರ ಕ್ರೌರ್ಯ, ಭಯಂಕರತೆ ನಮ್ಮನ್ನು ಕಂಗೆಡಿಸುತ್ತವೆ. ಕತೆಯಾದ ಹುಸಿ ವ್ಯಕ್ತಿತ್ವವೊಂದು

ಸ್ತ್ರೀಯ ಸಾಮಿಪ್ಯದಿಂದ ಗಟ್ಟಿ ವ್ಯಕ್ತಿತ್ವ ಪಡೆಯುತ್ತದೆ. ಈ ವಸ್ತುವನ್ನು ಈ ನಾಟಕದಲ್ಲಿ ಬಹಳ ಸೂಕ್ಷ್ಮರೀತಿಯಲ್ಲಿ ಪ್ರತಿಪಾದಿಸಲಾಗಿದೆ.

ಇಂಥ ವಿಶಿಷ್ಟ ಕೃತಿಯ ಅನುವಾದ ಇಂಗ್ಲಿಷಿನಲ್ಲೂ ಕಷ್ಟ. ಮೂಲಕೃತಿ ಒಂದು ನಿರ್ದಿಷ್ಟ ಪರಿಸರದ ದೇಶೀ ಭಾಷೆಯಲ್ಲಿ ರಚಿತವಾದದ್ದು, ಎಂದಾಗಲೂ ಅನುವಾದಕರ ಕಷ್ಟ ಹೇಳತೀರದು. ಈ ಕಷ್ಟವನ್ನು ಶ್ರೀ ಬಸವರಾಜ ನಾಯ್ಕರ ಅವರು ಲೀಲಾಜಾಲವಾಗಿ ಗೆದ್ದಿದ್ದಾರೆ. ಒಂದು ಸ್ವತಂತ್ರ ಕೃತಿಯಂತೆ ಈ ಕೃತಿಯೂ ಉಜ್ವಲವಾಗಿದೆ.

ಸ್ವಪ್ನವಾಸವದತ್ತಂ (ಸಂ. ಕೆ. ಕೃಷ್ಣಮೂರ್ತಿ, ಬಿ. ಆರ್. ಮೋಡಕ್, ಡಿ. ಎನ್. ಶಾನಭಾಗ.) ಭಾಸನ ಇದೇ ಹೆಸರಿನ ಸಂಸ್ಕೃತ ನಾಟಕದ ನೇರ ಕನ್ನಡ ಅನುವಾದವಿದು. ಕರ್ನಾಟಕದ ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯ ಈ ಕೃತಿಯನ್ನು ಹೊರತಂದಿದೆ. ಪ್ರತಿ ವರ್ಷ ಒಂದಿಲ್ಲೊಂದು ತರಗತಿಗೆ ಪಠ್ಯವಾಗಿ ಇಡಲ್ಪಡುವ ಪ್ರಸಿದ್ಧ ಕೃತಿಯಿದು. ಮೂವರೂ ಅನುವಾದಕರು ಸಂಸ್ಕೃತದ ನುರಿತ ಅಧ್ಯಾಪಕರೇ ಆಗಿದ್ದಾರೆ.

ಇದು ಅನುವಾದಗೊಳ್ಳುತ್ತಿರುವುದು ಪ್ರಥಮ ಬಾರಿಯೇನಲ್ಲ, ಆದರೆ ಹಿಂದಿನ ಅನುವಾದಗಳಲ್ಲಿಲ್ಲದ ಸ್ವಚ್ಛ ಕನ್ನಡ ಇಲ್ಲಿದೆ. ಮೂಲದ ಪದ್ಯಗಳನ್ನು ಇಲ್ಲಿ ಗದ್ಯದಲ್ಲಿ ಭಾಷಾಂತರಿಸಿದ್ದಾರೆ. ಅಲ್ಲದೆ ಅವುಗಳ ಕಾವ್ಯ ಗುಣಕ್ಕೆ ಲೋಪಬರದಂತೆ ಎಚ್ಚರವಹಿಸಲಾಗಿದೆ. ಮೂಲ ಮತ್ತು ಅನುವಾದಗಳನ್ನು ಅಕ್ಕ ಪಕ್ಕದಲ್ಲಿ ಕೊಟ್ಟದ್ದು, ವಿಸ್ತಾರವಾದ ಟಿಪ್ಪಣಿಗಳಿದ್ದದ್ದು ಇದರ ಉಪಯುಕ್ತತೆಯನ್ನು ಜಾಸ್ತಿ ಮಾಡಿವೆಯೆಂದು ಹೇಳಬಹುದು.

ಹಕ್ಕಿ ಹಾರುತಿದೆ ನೋಡಿದಿರಾ (ಅನು : ಪ್ರೇಮಾ ಕಾರಂತ) ವಿಜಯ ತೆಂಡೂಲ್ಕರ್ ಅವರ ಮರಾಠಿ ನಾಟಕದ ಅನುವಾದವಿದು. ಬೇಜವಾಬ್ದಾರಿಯ, ಯಾವ ಹಂಗು ಹಗರಣೆಯಿಲ್ಲದ, ಯಾವುದಕ್ಕೂ ಬದ್ಧನಾಗದ ಯುವಕ ಅರುಣ, ತನ್ನ ಆಟದಲ್ಲಿ ತಾನೇ ಸಿಕ್ಕೂ, ಸಿಕ್ಕಿಕೊಳ್ಳದೆ ಪಾರಾಗುವುದೇ ಇದರ ವಸ್ತು. ಹಾರಾಡುವ ಸ್ವಚ್ಛಂದ ಹಕ್ಕಿಯಂಥವನು, ತನ್ನ ಕಥೆ ಹೇಳುತ್ತ, ತಾನೇ ಸೂತ್ರಧಾರನಾಗುತ್ತ ಮೊದಲಿಂದ ಕೊನೇತನಕ ರಂಗದ ಮೇಲಿದ್ದೂ ಪಾತ್ರವಾಗದೆ, ವ್ಯಕ್ತಿತ್ವವಾಗದೆ ಹಾರಿಹೋಗುತ್ತಾನೆ. ಅವನ ಸುತ್ತ ಸುಳಿಯುವವರು ತಂತಮ್ಮ ಬದ್ಧತೆಯೊಂದಿಗೆ ಅದೇ ಕಾರಣಕ್ಕಾಗಿ ಪಾತ್ರವಾಗುತ್ತಾರೆ. ತಮ್ಮ ಮೊದಲ ಮಾತಿನಲ್ಲಿ ಇದು 'ಬಹಳ ಸರಳ ನಾಟಕ'ವೆಂದು ಪ್ರೇಮಾ ಕಾರಂತ ಹೇಳಿದ್ದು ಸಾಹಿತ್ಯಿಕವಾಗಿ ಕೂಡ ನಿಜವೆನಿಸುತ್ತದೆ. ಬೇರುಬಿಡದೆ ಸಂಚರಿಸುತ ಮೋಜಿಗಾಗಿ ಒಂದು ಮನೆ ಹೊಕ್ಕವನು ಒಂದೆರಡು ಪುಟಗಳಲ್ಲೇ ಮನೆಯ ಜೀವನದ ಆಳದಲ್ಲಿ ಸಿಗಬೀಳುತ್ತಾನೆ. ಸಿಕ್ಕುಬಿದ್ದದ್ದು ಗೊತ್ತಾಗಿ ಕೊನೆಗೊಂದು ಮೆಲೊಡ್ರಾಮಾ ಮಾಡಿ ಹೊರಬೀಳುತ್ತಾನೆ. ಆದರೆ ಬದ್ಧತೆ ಹೇಗೆ ದುರಂತವಾಗಬಲ್ಲುದೋ, ಹಾಗೇ ಬದ್ಧನಾಗದೇ ಇರುವುದೂ ದುರಂತವಾಗಬಲ್ಲುದು. ಆ ವಿಷಣ್ಣತೆ ಅರುಣನಲ್ಲಿದೆ. ಆದರೆ ಅದಕ್ಕೆ ಆಳ ಸಾಲದು. ಇದೇ ಈ ನಾಟಕದ 'ದುರಂತ'. ಭಾಷಾಂತರ ಮಾತ್ರ ಅಚ್ಚಗನ್ನಡ ಕೃತಿಯಷ್ಟೇ ಸಹಜವಾಗಿದೆ; ಸೊಬಗಿನಿಂದ ಕೂಡಿದೆ. ಇವನ್ನು ರಂಗದ ನಿಕಷಕ್ಕೊಡ್ಡಿ ಅಚ್ಚು ಹಾಕಿಸಿದ್ದರಿಂದಲೋ ಏನೋ, ಕನ್ನಡದ ಸ್ವತಂತ್ರ ಕೃತಿಯಷ್ಟೇ ಉಜ್ವಲವಾಗಿದೆ.

ಸಣ್ಣ ಕತೆ

ಬರಗೂರು ರಾಮಚಂದ್ರಪ್ಪ

ಈ ವರ್ಷ ಬಂದ ಕಥಾಸಂಕಲನಗಳ ಸಂಖ್ಯೆ ಇಪ್ಪತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಸ್ವಲ್ಪ ಕಡಮೆ. ಕಳೆದವರ್ಷ (೧೯೭೪) ಇಪ್ಪತ್ತೈದು ಸಂಕಲನಗಳು ಬಂದಿದ್ದವು.

ಈ ವರ್ಷದ ಸಂಕಲನಗಳಲ್ಲಿ ವಸ್ತು, ಶೈಲಿಗಳ ದೃಷ್ಟಿಯಿಂದ ವೈವಿಧ್ಯವಿದೆ. ಸಣ್ಣ ಕತೆಯ ವಿಭಿನ್ನ ಆಯಾಮಗಳು, ಕೃತಿಕಾರರ ಬರವಣಿಗೆ, ಬೆಳವಣಿಗೆಗಳ ಹಂತಗಳು ಇದರಿಂದ ಗೊತ್ತಾಗುತ್ತವೆ. ತೀರಾ ಕಳಪೆ ಕೃತಿಗಳಿರುವಂತೆ ಮಧ್ಯಮ ದರ್ಜೆಯ ಕೃತಿಗಳೂ ಇವೆ. ಆದರೆ ಹೆಚ್ಚೆಂದರೆ ಎರಡು ಮೂರು ಸಂಕಲನಗಳ ಹೊರತು ಉಳಿದಂತೆ ಗಟ್ಟಿ ಕೃತಿಗಳಿಲ್ಲ. ಕೆಲವಂತು ಮೊದಲ ಪ್ರಯತ್ನವೆಂಬುದನ್ನು ಉದ್ದಕ್ಕೂ ಸಾಬೀತುಪಡಿಸುತ್ತ ಸಾಗುತ್ತವೆ. ಇನ್ನು ಕೆಲವು ಮೊದಲ ಪ್ರಯತ್ನಗಳಾದರೂ ಆಸೆ ಹುಟ್ಟಿಸುತ್ತವೆ. ನವ್ಯ ಕತೆಗಳ ಪ್ರಭಾವ ವಲಯದ ಸಂಕಲನಗಳಿದ್ದರೂ, ಅದಕ್ಕೆ ಹೊರತಾಗುವ ಸೂಚನೆಗಳುಳ್ಳ ಕತೆಗಳು ಹೆಚ್ಚು ಇರುವುದು ವಿಶೇಷವಾಗಿ ಗಮನಿಸಬೇಕಾದ ಅಂಶ ; ಗ್ರಾಮ್ಯ ಬದುಕಿನ ಅನುಭವ ವಿಸ್ತಾರ, ಅಲ್ಲಿನ ಸಾಮಾಜಿಕ ವಿಷಮತೆಯನ್ನು ಗುರುತಿಸುವ ತೀವ್ರತೆ ಕಂಡುಬಂದಿರುವುದು ಒಂದು ಮುಖ್ಯ ಸಂಗತಿ. ರಾವ ಬಹದ್ದೂರರ 'ನೆರೆ–ಹೊರೆ'ಯ ಹಿನ್ನೆಲೆಯಲ್ಲಿ ಈ ಮಾತುಗಳು ಹೆಚ್ಚು ಅರ್ಥಪೂರ್ಣವಾಗುತ್ತವೆ. ಇನ್ನು ಕೆಲವು ಸಂಕಲನಗಳು ಈ ದಿಕ್ಕಿನ ಪ್ರಯತ್ನಗಳಾಗಿವೆ. ಬಹು ದಿನಗಳಿಂದ ಸಣ್ಣ ಕತೆಯನ್ನು ಪ್ರಮುಖ ಪ್ರಕಾರ ಮಾಡಿಕೊಂಡಿರುವ ವ್ಯಾಸರಾಯ ಬಲ್ಲಾಳರ ಆಯ್ದ ಕತೆಗಳ ಸಂಕಲನ– 'ಮಂಜರಿ'–ಈ ವರ್ಷದಲ್ಲಿ ಬಂದ ಒಬ್ಬರೇ ಲೇಖಕರ ಪ್ರಾತಿನಿಧಿಕ ಸಂಕಲನ. ಒಬ್ಬ ಕತೆಗಾರನ ಬೆಳವಣಿಗೆಯ ಹಂತಗಳನ್ನು ಗುರುತಿಸಲು ಇದು ಸಹಾಯಕ. ಈ ಸಾರಿ ಮೂರು 'ವೈಜ್ಞಾನಿಕ ಕತೆ'ಗಳ ಸಂಕಲನಗಳು ಬಂದಿವೆ. ಬಹುಪಾಲು ಕತೆಗಳು 'ಕುತೂಹಲದ ಕಟ್ಟು'ಗಳಾಗಿವೆ ; ಅಷ್ಟೆ. ಅನುವಾದ ಕೃತಿಗಳಲ್ಲಿ 'ಮರಾಠಿ ಸಣ್ಣಕತೆಗಳ ಕಣಜ' ಆ ಭಾಷೆಯಲ್ಲಿ ಬಂದ ಸಣ್ಣ ಕತೆಗಳ ವಿವಿಧ ಸ್ತರಗಳನ್ನು ಗುರುತಿಸಲು ಸಹಾಯಕವಾಗಿದೆ.

ನಿಸರ್ಗ ಹೊ. ಶಿ. ಗಿರಿರಾಜ್ ಅವರ ಹತ್ತು ಕತೆಗಳ ಸಂಕಲನ. ಲೇಖಕರು 'ಕತೆ' ಎಂದಿರುವುದರಿಂದ ಮಾತ್ರ ಕೆಲವು ಬರಹಗಳನ್ನು ಹಾಗೆಂದು ಭ್ರಮಿಸಬೇಕಾಗಿದೆ. ಪ್ರವಾಸ, ಶ್ಯಾವಿಗೆ ರಾದ್ಧಾಂತ, ನಮ್ಮವರೊಡನೆ – ಇಂಥ 'ಕತೆಗಳು' ಇತ್ತ ಒಳ್ಳೆಯ ಲಲಿತ ಪ್ರಬಂಧವೂ ಆಗದೆ ಅತ್ತ ಕತೆಯ ಕೇಂದ್ರವೂ ಇಲ್ಲದೆ ಎಲ್ಲೋ ಮಧ್ಯಸ್ಥಿತಿಯಲ್ಲಿ ನಿಂತು ಹಾಳಾಗಿವೆ. ಶಿಲ್ಪಕ್ಕೆ ಬೇಕಾದ ಸಿದ್ಧತೆಯೇ ಇಲ್ಲದೆ ಹಿಗ್ಗಾಮುಗ್ಗ ಎಳೆಯುವ ವಿವರಗಳಿಂದ ಕೆಲವು 'ಕತೆಗಳು' ಒಣ ಹರಟೆಗಳಾಗಿವೆ. ಉದಾಹರಣೆಗೆ 'ಹಂಗು'ವನ್ನು ನೋಡಬಹುದು. ಇದರ ಮೊದಲ ಅನೇಕ ಪುಟಗಳು ಕತೆಯೊಂದಿಗೆ ತಾದಾತ್ಮ್ಯ ಪಡೆಯದ, ಲೇಖಕರು ಹೇಳಲೇಬೇಕೆಂದು ಹಟ ಹಿಡಿದ ಭಾಗ ಗಳಾಗಿವೆ. ಉತ್ತಮ ವಸ್ತುವನ್ನು ಸ್ವೀಕರಿಸಿದರೂ ಅದನ್ನು ಸಾರ್ಥಕವಾಗಿ ನಿಭಾಯಿಸುವ ನಿರೂಪಣೆಯಿಲ್ಲದೆ ಕುಂಟುವ ಕತೆಗಳಿಗೆ ನಿಸರ್ಗ, ಖೋಜಾ, ಪ್ರೇಮ – ಇವು ನಿದರ್ಶನವಾಗಿವೆ. ಇಲ್ಲಿ ಸಾಮಾಜಿಕ ಮೂಲಗಳನ್ನು ಹುಡುಕುವ ಸಾಧ್ಯತೆಯಿದ್ದು, ಅದು ಲೇಖಕರಿಗೆ ಲೆಕ್ಕಕ್ಕೇ ಇಲ್ಲ.

ಒಂಟಿ ಮರ ಉಮಾಶಂಕರರು ಬರೆದ ಕಥಾ ಸಂಕಲನ. ಇವೆಲ್ಲ ಕುಟುಂಬ ಪ್ರಧಾನ ಕತೆಗಳು. ಕೌಟುಂಬಿಕ ವಲಯದ ಸಾಮಾನ್ಯ ಘಟನೆಗಳು ಕತೆಯ ರೂಪದಲ್ಲಿ ಕಾಣಿಸಿಕೊಂಡಿರು

ವುದೇ ಹೆಚ್ಚು. 'ಒಡೆದ ಕನ್ನಡಿ' ವಸ್ತುವಿನ ಗಾಢತೆಯೇನೂ ಇಲ್ಲದ ಪೇಲವ ಕತೆಯಾದರೂ ಮೂಢ ನಂಬಿಕೆಯೊಂದನ್ನು (ಕನ್ನಡಿ ಒಡೆದರೆ ಅಶುಭ) ಅಲ್ಲಗಳೆಯುವ ನಿಲುವಿನಿಂದ ಕೂಡಿ ಆ ಮಟ್ಟಿಗೆ ಸಂಗತವಾಗಿದೆ. ಆದರೆ ಅದಷ್ಟೇ ಕತೆಯ ಜೀವಾಳವಾಗದು ಎಂಬುದನ್ನು ಮರೆಯ ಲಾಗದು. ಇವರ ಬಹುಪಾಲು ಕತೆಗಳು ಹಳೇ ದಾಟಿಯ ನಾಟಕೀಯ ಸಂಭಾಷಣೆ, ಸಾಂಸಾರಿಕ ತೆಳು ವಿವರಗಳ ಆಗರವಾಗಿವೆ. 'ಮಾರ್ಗದರ್ಶನ'–ಕತೆ ಯಾವುದೇ ಸ್ಪಂದನಕ್ಕೆಳೆಯದ ಒಂದು ಸಾಮಾನ್ಯ ಬರವಣಿಗೆ. ಇಂಥ ಕತೆಗಳಿಗಿಲ್ಲಿ ಕೊರತೆಯಿಲ್ಲ. ಸಾಂಸಾರಿಕ ಸುಖ-ದುಃಖ, ಏಳು-ಬೀಳು, ಗಂಡ-ಹೆಂಡತಿ ಮತ್ತು ಗಂಡನ ಮನೆಯವರ ಸಂಬಂಧ ವರ್ತುಲ—ಇವು ಈ ಸಂಕಲನದ ಸಾಮಾನ್ಯಾಂಶಗಳು. 'ಥತ್ ! ಇದೆಂಥ ಕತೆ'—ತನ್ನ ನಿರೂಪಣಾ ಕ್ರಮದಿಂದ ವಿಭಿನ್ನವಾಗಿ ರಂಜಿಸುತ್ತದೆ. ಲೇಖಕ-ಪ್ರಕಾಶಕರ ಪ್ರವೃತ್ತಿಯ ಪರಿಚಯ ಮಾಡಿಕೊಡುವ ಈ ಕತೆ ಬೇರೆ ಕತೆಗಳಿಗಿಂತ ಶೈಲಿಯಲ್ಲಿ ಹೊಸತಾಗಿದೆ. 'ಎಣ್ಣೆ ಮುಗಿಯಿತು ದೀಪದಲ್ಲಿ'–ಎಂಬ ಕತೆಯೂ ಪರವಾಗಿಲ್ಲ; ಬಿಗಿ ಇದೆ. ಮುರುಕು ಗುಡಿಸಲು – ಮುದುಕಿ, ಪರಸ್ಪರ ಹೊಂದುವ ವಿವರಗಳಿಂದ ಪ್ರತಿಮೆಯ ಸಾಧ್ಯತೆ ತೋರಿದೆ. ಇದೇ ರೀತಿ ಸರಳ ಸಂಕೇತ, ಪ್ರತಿಮೆಗಳ ಆಯಾಮ ಕಾಣಿಸುವ 'ಒಂಟಿ ಮರ'ದ ಕಲಾತ್ಮಕತೆಯನ್ನು ಜ್ಞಾಪಿಸಿಕೊಳ್ಳಬಹುದು. ಉತ್ತಮ ಬರಹಗಾರನಿಗೆ ಆಳ, ಅಗಲ ಒದಗಿಸಬಹುದಾದ ಸಾಮಾಜಿಕ ಮೂಲಗಳ ಶೋಧನೆಯಿಲ್ಲದೆ ಈ ಸಂಕಲನದ ಕತೆಗಳ 'ವಸ್ತು' ಸರಳೀಕೃತಗೊಂಡಿದೆ. ಇಲ್ಲಿ ಸಾಮಾನ್ಯ ವಸ್ತು, ಸರಳ ನಿರೂಪಣೆ ಉಮಾಶಂಕರರ ಬರವಣಿಗೆಯ ಪ್ರಧಾನಾಂಶವಾಗಿದೆ.

ಗುಲಾಬಿ ಬಾಡಿತು ವಿಮಲಾ ರಾಘವೇಂದ್ರರ ಎಂಟು ಕತೆಗಳ ಸಂಕಲನ. ತ್ರಿವೇಣಿಯವರ ದಟ್ಟ ಪ್ರಭಾವ ಕೆಲವು ಕತೆಗಳಲ್ಲಿದೆ; (ಉದಾ :– ಮನ ಅರಳಿತು ಮನೆ ಬೆಳಗಿತು) ಭಾವುಕ ಮನಸ್ಸಿನ ಸ್ತ್ರೀಯರನ್ನು ಚಿತ್ರಿಸುವ ಸರಳ ವಿವರಗಳು ಕಾಣಸಿಗುತ್ತವೆ. (ಉದಾ :– ಗುಲಾಬಿ ಬಾಡಿತು). ಮಾನಸಿಕ ತುಮುಲ ಚಿತ್ರಿಸುವತ್ತ ಪ್ರಾಮಾಣಿಕ ಪ್ರಯತ್ನ ನಡೆಸಿದ್ದರೂ 'ಗಾಜು ಒಡೆದಿತ್ತು' ಗಟ್ಟಿತನ ಗಳಿಸಿಲ್ಲ. 'ಕತ್ತಲೆ ಕವಿಯಿತು' ಕತೆಯಲ್ಲಿ ಹಳೆಯ 'ಪತ್ರ ತಂತ್ರ'ವಿದೆ. ಈ ಸಂಕಲನದ ಯಾವ ಕತೆಯೂ ಗಟ್ಟಿ ನೆಲಗಟ್ಟನ್ನು ನಿರ್ಮಿಸದೆ, ಹೊಸತೆನ್ನಿಸದೆ ಇಡೀ ಸಂಕಲನ 'ಪ್ರಥಮ ಬರವಣಿಗೆ'ಯ ಪ್ರತೀಕವಾಗಿ ನಿಲ್ಲುತ್ತದೆ.

ಶಿವಳ್ಳಿ ಕೆಂಪೇಗೌಡರ **ಕಾಗೆಪುರದಲ್ಲಿ ಮೂರು ಮಕ್ಕಳ ಸಾವು** ಎಂಬ ಸಂಕಲನದಲ್ಲಿ ಎಂಟು ಮಿನಿಗತೆಗಳಿವೆ. ಅರ್ಧಕ್ಕೂ ಹೆಚ್ಚು ಕತೆಗಳಲ್ಲಿ ಬಡತನದ ವಿಷಯ ಬಂದರೂ ಸಮಸ್ಯೆಯ ಸ್ವರೂಪ ದರ್ಶನ ಮಾಡಿಸಲಾರದ ಮಿನಿ ದಾಖಲೆಗಳಾಗಿವೆ. ಓದಿದ ಮಗ ತನ್ನ ಸ್ವಂತ ತಂದೆಯನ್ನು peon ಎಂದು ತನ್ನ ಸ್ನೇಹಿತರಿಗೆ ಪರಿಚಯಿಸುವ ಸಂದರ್ಭವುಳ್ಳ 'ಆಳು' ಕತೆಯ ವಸ್ತು ಅತ್ಯಂತ ಹಳ ಸಲು. ವಸ್ತುವಿಗೆ ವ್ಯಾಪ್ತಿಯಿದ್ದರೂ ಕತೆಗಳು ಆ ಸಾಧ್ಯತೆಗೆ ಚಾಚಿಕೊಳ್ಳದೆ ಅಂಗೈಯಗಲ ಜಾಗದಲ್ಲಿ ಮೈಮುದುರಿಕೊಂಡು ಕೂತಿವೆ. ಇದ್ದುದರಲ್ಲಿ 'ಕಾಗೆಪುರದಲ್ಲಿ ಮೂರು ಮಕ್ಕಳ ಸಾವು' ಕತೆಯಲ್ಲಿ ರುವ ವ್ಯಂಗ್ಯ ಮತ್ತು ಒಟ್ಟು ಸಂಕಲನದ ಹಿಂದಿರುವ ಸಾಮಾಜಿಕ ಕಾಳಜಿ ಗಮನಾರ್ಹ.

ಗೌರವ ತೆರೆಯಲ್ಲಿ ರಘುಸುತರ ಮೂರು ಸ್ವಂತ ಕತೆಗಳೂ, ನಾಲ್ಕು ಭಾವಾನುವಾದಗಳೂ ಇವೆ. ಸ್ವಂತ ಕತೆಗಳಲ್ಲಿ ಒಂದು ಐತಿಹಾಸಿಕ ವಸ್ತು ಹೊಂದಿದೆ; 'ಗಿಡುಗ' ಮೇಲಧಿಕಾರಿಯ ಮೋಸವನ್ನು ಬಯಲಿಗೆಳೆಯುವುದರಲ್ಲಿ ತೃಪ್ತಿ ಹೊಂದುವ ಕತೆ. ಇದು ಲೇಖಕರ ಆಶಯವನ್ನೂ ಪ್ರತಿನಿಧಿಸುತ್ತದೆ. ಸ್ವಂತ ಕತೆಗಳಾವುವೂ ಅನುಭವದ ಗಾಢತೆಯಲ್ಲಿ ಖಚಿತ ಧೋರಣೆಯ ಹಿನ್ನೆಲೆ ಯಲ್ಲಿ ರೂಪುಗೊಂಡಿಲ್ಲ. ವಿಶೇಷವಾಗಿ ಉಲ್ಲೇಖಿಸುವಂಥಾದ್ದೇನೂ ಇಲ್ಲ; ಭಾವಾನುವಾದ ಓದಿಸಿಕೊಳ್ಳುವಂತಿದೆ.

ಸಿಗ್ನಿ ಸಂಗೀತ ಮತ್ತು **ಶುಕ್ರಗ್ರಹದ ಸಾಹಸಿ ರಿಝಿಯಾನ್** — ಇವೆರಡು ರಾಜಶೇಖರ ಭೂಸ ನೂರು ಮಠ ಅವರು ಬರೆದ 'ವೈಜ್ಞಾನಿಕ ಕತೆಗಳ' ಸಂಕಲನಗಳು. ವೈಜ್ಞಾನಿಕ ಕತೆಗಳೆಂದರೆ

ಈಗಾಗಲೆ ಪ್ರಚಲಿತವಿರುವ ವಿಜ್ಞಾನದ ವ್ಯಾಪ್ತಿ ಮತ್ತು ಬದುಕಿನ ಸಂಬಂಧಗಳನ್ನು ಪರಿಭಾವಿಸಿದ ಗದ್ಯಾಭಿವ್ಯಕ್ತಿಯೆಂದು ಭಾವಿಸಬಾರದು. ಕುತೂಹಲ ಉಳಿಸಿಕೊಂಡು ಹೋಗುವಂತೆ, ಅದನ್ನು ಬಯಸುವ ಓದುಗಸಮೂಹಕ್ಕೆ ರುಚಿಸುವಂತೆ, ರಚಿತವಾಗಿರುವ ಮನರಂಜನೆಯ ಕತೆಗಳು. ಯಾವುದೇ ಔಚಿತ್ಯಪ್ರಜ್ಞೆಯಿಲ್ಲದೆ ಹೇಗೆಂದರೆ ಹಾಗೆ ವಿಜ್ಞಾನ – ವಿಜ್ಞಾನಿಗಳು ಬೆರೆಯುವ ಬದುಕುವ ಸನ್ನಿವೇಶಗಳು ಇಲ್ಲಿವೆ. ಔಚಿತ್ಯವಿಲ್ಲದ ವಿಕಾಸದ ಉತ್ಪ್ರೇಕ್ಷಿತ ಚಿತ್ರಣ ವಿಜ್ಞಾನವನ್ನು ಕುರಿತ ವ್ಯಂಗ್ಯವೂ ಆಗಬಹುದು ; ಆದರೆ ಇಲ್ಲಿ ಹಾಗಾಗದೆ ಕೇವಲ ಕುತೂಹಲದ ಕುದುರೆಯಾಗಿರುವುದು ಕತೆಗಳ ಸಂದರ್ಭದಲ್ಲಿ ಸ್ಪಷ್ಟವಾದಾಗ ಗಂಭೀರ ಚರ್ಚೆಗೆ ಇವು ಆಹಾರವಾಗ ಬೇಕಿಲ್ಲ ಎನ್ನಿಸುತ್ತದೆ. ಲೇಖಕರ ಉದ್ದೇಶವೂ ಸ್ಪಷ್ಟಪಡುವುದರಿಂದ, ಅವರ ಗುರಿಯತ್ತ ಈ ಕತೆಗಳು ಸರಾಗವಾಗಿ ಸಾಗಿವೆಯೆನ್ನಬಹುದು.

'ಸಿಗ್ನಿ ಸಂಗೀತ'ದಲ್ಲಿನ ಒಂದು ಕತೆಯಲ್ಲಿ (ಕಾಸೆಟ್ 100 ಪ್ರೊಜೆಕ್ಟ್) ಕ್ರಿ.ಶ. 2060 ರಲ್ಲಿ ತುಂಬಿದ ಗ್ರಹಗಳಲ್ಲಿ ಜಾಗವಿಲ್ಲದೆ ದೇವಲೋಕಕ್ಕೆ ಹೋಗುವ ಭೂಲೋಕದವರ ವಿಷಯವಿದೆ. 'ನೀಹಾರಿಕೆಗಳಿಗೆ ಸಂದೇಶ'ದಲ್ಲಿ ಕ್ರಿ.ಶ. 1995 ರ ವಿಷಯ ಬರುತ್ತದೆ. [ಈ ಕತೆಗಳು ಮುಂದೆ ಹೀಗೇ ನಡೆಯುತ್ತದೆಯೆಂಬ ಭ್ರಮೆಯಿಡಿಸದಿದ್ದರೆ ಸಾಕು] 'ಪ್ರಯೋಗ ಪಶು ಯಾರು ?' — ಮನುಷ್ಯನ (ಆತನೂ ವಿಜ್ಞಾನಿ) ಸಣ್ಣತನವನ್ನು ತೋರುವ, ತಾನೇ ನಿರ್ಮಿಸಿದ ಮೋಸದ ಜಾಲಕ್ಕೆ ಆತನನ್ನೇ ಬಲಿಯಾಗಿಸುವ ಪ್ರಸಂಗದಿಂದ 'ಧ್ವನಿ' ಪಡೆಯುತ್ತದೆ ; ನಂಬುವಂತೆಯೂ ಇದೆ ; 'ಪವಾಡಗಳು' ಕತೆಯಲ್ಲಿ 'ಪವಾಡ ಪುರುಷ' ಸ್ವಾಮಿಗೆ ವಿಜ್ಞಾನಿಯೊಬ್ಬ ಶಿಷ್ಯನಾಗುವುದು, ಇನ್ನೊಬ್ಬ ವಿಜ್ಞಾನಿ ಸ್ವಾಮಿಯನ್ನು ಹಿಪ್ನಾಟೈಸ್ ಮಾಡಿದಾಗ ಆತ ತಾನು ಮೋಸಗಾರನೆಂದು ಒಪ್ಪಿಕೊಳ್ಳುವುದೂ ಅಷ್ಟೆ. ಇಂಥ ಒಂದೆರಡು ಕತೆಗಳ ಹೊರತು ಸಮಕಾಲೀನ ಸಂಬಂಧ ಕಡಿಮೆ.

'ಶುಕ್ರಗ್ರಹದ ಸಾಹಸಿ ಝಿಯಾನ್' – ಕೃತಿಯಲ್ಲಿ ಝಿಯಾನನ ಅನೇಕ ಸಾಹಸಗಳು ವರ್ಣಿತವಾಗಿವೆ. ಆತ ಮೊದಲೇ ಶುಕ್ರಗ್ರಹದ ಸಾಹಸಿ ! ಪ್ರಣಯಾಸಕ್ತ ಬೇರೆ. ಇನ್ನು ಕತೆಗೇನು ಕಡಮೆ ? ಇದರಲ್ಲಿ ಪ್ರಪಂಚ ಪ್ರಳಯವಾಗುತ್ತದೆ ; ಇಪ್ಪತ್ತೊಂದನೇ ಶತಮಾನದ ವಿಷಯವೂ ಬರುತ್ತದೆ.

ಕಡೆಯಲ್ಲಿ ನನ್ನಲ್ಲೆದ್ದ ಪ್ರಶ್ನೆ : ವೈಜ್ಞಾನಿಕ ಕತೆಗಳೆಂದರೆ ವಿಜ್ಞಾನಕ್ಕೆ ಸಂಬಂಧಿಸಿದ ಶಬ್ದಜಾಲ ಮತ್ತು ಅಸಂಭಾವ್ಯ ಸಾಹಸದ ವಿವರಗಳಲ್ಲಿ ತೇಲಿ ಬಿಡುವುದೆ ?

ಮೇಲಿನ ಈ ಎರಡು ಕೃತಿಗಳ ಸಾಲಿಗೆ ಸೇರಿಸಬಹುದಾದ ಹ. ಶಿ. ಬೈರನಟ್ಟಿಯವರ ಕಥಾ ಸಂಕಲನ—ಬೈಲೆಟ್ ಮಾನವ ಓದಿದಾಗಲೂ ಈ ಪ್ರಶ್ನೆ ಹಾಗೇ ಉಳಿಯಿತು. ಇದರ ಮೊದಲ ಕತೆಯ ಮೊದಲ ಸಾಲಿನ ಮೊದಲೆರಡು ಶಬ್ದಗಳೇ 'ಇಪ್ಪತ್ತೊಂದನೆಯ ಶತಮಾನ'ವನ್ನು ಜ್ಞಾಪಿಸುತ್ತವೆ. ಆ ಶತಮಾನದ ಸಂದರ್ಭದಲ್ಲೆ ನಿಂತು ಮಾತನಾಡುವ ಮೋಜೂ ಇದೆ ! ನೆನಪಿನ ಶಕ್ತಿಯನ್ನು ಕಳೆಯುವ ಕಿರಣಗಳ ಸಂಶೋಧಕ ವಿಜ್ಞಾನಿಯ 'ಶಕ್ತಿ' ಈ ಕತೆಯಲ್ಲಿ ಅಭಿವ್ಯಕ್ತಿ ಹೊಂದಿದೆ. ಕಬ್ಬಿಣದ ಅಭಾವವಿರುವ ಬಂಗಾರದ ನಾಡನ್ನು ಪ್ರವೇಶಿಸಿದ ವಿಜ್ಞಾನಿಯ ಪ್ರೇಮ ಪ್ರಕರಣವೂ ಒಂದು ಕತೆಯಲ್ಲಿ (ಕಡಲಾನೆಯ ಗರ್ಭದಲ್ಲಿ) ಇದೆ. 1978 ರ ಏಪ್ರಿಲ್ ಮೂರನೇ ತಾರೀಕು ರಾತ್ರಿ 12 ರಿಂದ 1 ಗಂಟೆಯವರೆಗೆ ಭಾರಿ ಭೂಕಂಪ ನಡೆದುಹೋದ (?) ಸಂಗತಿಯೂ ಇದೆ. (ಟೇಪ್ ಟೌನ್ ದುರಂತ). ಹೀಗೆ ಅಸಾಮಾನ್ಯ, ಅಲ್ಲದೆ, ಅಸಂಭಾವ್ಯ ಪ್ರಸಂಗಗಳೂ ಹಾದುಹೋಗುತ್ತವೆ. ಉಳಿದಂತೆ ವಿವರಣೆ, ವ್ಯಾಖ್ಯಾನ ಅನಗತ್ಯ.

ಮರಿ ಕತೆಗಳು ಕಣ್ಣದಾಸನ್ ಅವರ ಮೂಲ ತಮಿಳು ಕತೆಯ ಅನುವಾದ. ಇದರ ಅನುವಾದಕರು ಕೆ. ಸುಬ್ರಹ್ಮಣ್ಯ ಇದರಲ್ಲಿ ಅರ್ಧ, ಒಂದು, ಒಂದೂವರೆ ಪುಟಗಳಲ್ಲಿ ಕೂತಿರುವ ಬರಹಗಳಿವೆ. ಇವು

ಚಮತ್ಕಾರಕವಾಗಿ ಗಂಭೀರ ವಿಷಯವನ್ನು ಧ್ವನಿಸುವ ಪ್ರಯತ್ನ ಮಾಡಿವೆ. ಸಮಕಾಲೀನ ಸ್ಥಿತಿಯ ವಿಶ್ಲೇಷಣೆ ನಡೆಸುವ, ಅಲ್ಲಲ್ಲೆ ವ್ಯಂಗ್ಯ ತರುವ ಕ್ರಮ ನೆನಪಿನಲ್ಲಿ ಉಳಿಯುವಂಥದು. ಕೆಲವು ಕಥೆ ಕೇವಲ ಚಮತ್ಕಾರ ಮುಖ್ಯವಾಗಿದೆ. ಯಥಾ ಸ್ಥಿತಿವಾದಿ ಧೋರಣೆಯಿದೆ. ಆದರೂ ತೀಕ್ಷ್ಣ ರಾಜಕೀಯ ವಿಡಂಬನೆಯಿದೆ. ಉತ್ತಮ ಉದಾಹರಣೆಯೆಂದರೆ : 'ನಾಲಗೆಯ ಕಥೆ ?' ಇನ್ನು ಕೆಲವು ನಗೆಹನಿಗಳ ಮಾದರಿಯಲ್ಲಿವೆ. ಒಟ್ಟಾರೆ ನೀತಿ, ವ್ಯಂಗ್ಯ ಮುಂತಾದ ಅಂಶಗಳೊಂದಿಗೆ ಖುಷಿಕೊಡುವ ಬರಹಗಳಾಗಿವೆ. ಇವುಗಳ ಹಿಂದಿರುವ ವಿಚಾರ, ಒಟ್ಟು ಬರಹಗಳನ್ನು ಗಮನಿಸಿದಾಗ ಕಾಣುವ ವೈವಿಧ್ಯಗಳು ಆಲೋಚನೀಯವಾಗಿವೆ,

*ಸುಂಟರಗಾಳಿ ಬರಗೂರು ರಾಮಚಂದ್ರಪ್ಪನವರ ಹನ್ನೆರಡು ಕತೆಗಳ ಸಂಕಲನ. ಈ ಕತೆಗಳಲ್ಲಿನ ಅನುಭವ ಮುಖ್ಯವಾಗಿ ಸಾಮಾಜಿಕವಾಗಿ, ಕೆಳಗಿನ ವರ್ಗದ ಸಂವೇದನೆಗಳನ್ನು, ಸಮಸ್ಯೆಗಳನ್ನು ಕುರಿತದ್ದು. ಈ ಕತೆಗಳನ್ನು ನವ್ಯ, ಅನವ್ಯ ಇತ್ಯಾದಿ ಪ್ರಭಾವಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವುಗಳ ಪ್ರಭಾವವನ್ನು ಗುರುತಿಸುವ, ಅಥವಾ ಆ ಪ್ರಭಾವದಿಂದ ಎಷ್ಟರಮಟ್ಟಿಗೆ ಬಿಡಿಸಿಕೊಂಡಿವೆ ಎಂಬ ಹವ್ಯಾಸವನ್ನು ಬಿಟ್ಟು, ಹಾಗೆಯೇ ನೋಡುವುದು ಒಳ್ಳೆಯದು. ಯಾಕೆಂದರೆ, ರಾಮಚಂದ್ರಪ್ಪನವರು, ತಾವು ಕಂಡ—ಉಂಡ ಪರಿಸರದ ಅನುಭವಗಳನ್ನೆ ಯಥಾವತ್ತಾಗಿ ಇಲ್ಲಿ ಸಹಜವಾಗಿ ರೂಪಿಸಿದ್ದಾರೆ. ಇಲ್ಲಿ ಒಂದು ಸಾಮಾಜಿಕ ಪರಿಸರದ ಸಮಸ್ತ ಸಂಕೀರ್ಣತೆಗಳೂ ಅಭಿವ್ಯಕ್ತವಾಗಿವೆ. ಬಡತನ, ಶೋಷಣೆ, ಮೂಢನಂಬಿಕೆ ಇವುಗಳೇ ಇಲ್ಲಿನ ಕತೆಯ ಕೇಂದ್ರಗಳು. ಬಡತನ ಹಾಗೂ ಮೂಢನಂಬಿಕೆಗಳನ್ನು ಬಂಡವಾಳವನ್ನಾಗಿ ಮಾಡಿಕೊಂಡು, ಒಂದು ಸಾಮಾಜಿಕ ಪರಿಸರದ ಉಳ್ಳವರು ತಮಗಿಂತ ಆರ್ಥಿಕವಾಗಿ ಬಡವರಾದವರನ್ನು ಹೇಗೆ ಶೋಷಿಸುತ್ತಾರೆಂಬುದೇ ಇಲ್ಲಿನ ಕತೆಗಳ ಒಟ್ಟು ಧ್ವನಿಯಾಗಿದೆ. ಶೋಷಣೆ ಎಂದಕೂಡಲೇ, ಒಂದು ಶ್ರೀಮಂತ ವರ್ಗ ಮತ್ತೊಂದು ದಲಿತವರ್ಗ—ಎಂಬ ಸರಳೀಕೃತ ಸಿದ್ಧಾಂತವನ್ನಿರಿಸಿಕೊಳ್ಳದೆ, ಅನೇಕ ಸ್ತರಗಳಲ್ಲಿ, ಉಳ್ಳವರು ಮತ್ತು ಇಲ್ಲದವರುಗಳ ಶೋಷಕ-ಶೋಷಿತ ಸಂಬಂಧವನ್ನು ಚಿತ್ರಿಸುವುದು ರಾಮಚಂದ್ರಪ್ಪನವರ ನಿಲುವಾಗಿದೆ. 'ನಂಬಿಕೆ' ಕತೆಯಲ್ಲಿ ಜಮೀನ್ದಾರರಾದ ಚಂದ್ರಯ್ಯನವರು ಜೀತಕ್ಕಿರಿಸಿಕೊಂಡ ಚಿಕ್ಕನನ್ನು 'ಬಲಿ' ತೆಗೆದುಕೊಂಡರೆ, 'ಕ್ಷಾಮ' ಕತೆಯಲ್ಲಿ ಬರಗಾಲದ ಪರಿಸ್ಥಿತಿಯಲ್ಲಿ ಮೇಸ್ತ್ರಿ ರಂಗಪ್ಪ, ಕೂಲಿಯವಳಾದ 'ಚೆನ್ನಿ'ಯನ್ನು ಉಪಯೋಗಿಸಿಕೊಳ್ಳುವ ಮತ್ತು ತಿರಸ್ಕರಿಸುವ ಕ್ರಿಯೆಯಲ್ಲಿ ಶೋಷಣೆಯ ಈ ಮುಖವನ್ನು ಗುರುತಿಸಬಹುದು. ಸುಂಟರಗಾಳಿ, ಕಂದರ, ಬೆಕ್ಕು, ಪರಿಸರ, ಕೊಂಡಿ, ಕ್ಷಾಮ—ಈ ಕೆಲವು ಕತೆಗಳಲ್ಲಿ, ಕಾಮದಂತಹ ವಸ್ತುವನ್ನು ಲೇಖಕರು ನಿರ್ವಹಿಸಿರುವ ರೀತಿ ಮೆಚ್ಚತಕ್ಕದ್ದಾಗಿದೆ. ಸುಂಟರಗಾಳಿ, ಪರಿಸರ, ಕ್ಷಾಮ ಇಂಥ ಕತೆಗಳಲ್ಲಿನ 'ಕಾಮ' ಕೂಡ, ಶೋಷಣೆಯ ಪರಿಧಿಯಲ್ಲೇ ನಡೆಯುವ ಒಂದು ಕ್ರಿಯೆಯಾಗಿದೆ. ಇನ್ನಿತರ ಕತೆಗಳಲ್ಲಿ, ಮನುಷ್ಯನ ಅದಮ್ಯವಾದ ಬಯಕೆಗಳು, ಕನಸುಗಳು, ಸಣ್ಣತನಗಳು—ತೀವ್ರವಾಗಿ ಕಾಣಿಸಿಕೊಂಡಿವೆ. 'ಸತ್ತವನು' ಕತೆ, ಕ್ರಮಕ್ರಮೇಣ ತನ್ನ ಸುತ್ತಣ ಪರಿಸರವನ್ನು ಒಳಗೊಳ್ಳುತ್ತಾ ಸಂಕೀರ್ಣವಾಗಿ ಸೊಗಸಾದ ಸಂಕೇತವಾಗುತ್ತದೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಕತೆ ಹೇಳುವ ಯಾವ ಬುದ್ಧಿಪೂರ್ವಕವಾದ ತಾಂತ್ರಿಕ ಚಮತ್ಕಾರಗಳೂ ಇಲ್ಲದೆ, ಅಥವಾ ತೀರಾ ಸರಳೀಕೃತವಾಗದ, ಒಂದು ಸಹಜ ವಿಧಾನದಲ್ಲಿ ಈ ಕತೆಗಳು ಮೈದಾಳಿರುವುದು ಸಮಾಧಾನದ ಸಂಗತಿಯಾಗಿದೆ. ಬರವಣಿಗೆಯಲ್ಲಿ ಸಾಂಕೇತಿಕತೆ ಸಮೃದ್ಧವಾಗಿದ್ದರೂ, ಅದು ಉದ್ದೇಶಪೂರ್ವಕವಾಗಿ ಅಳವಡಿಸಿದ್ದಾಗದೆ, ಗುರುತಿಸದಲ್ಲದೆ ತಾನಾಗಿಯೇ ಎದ್ದು ಕಾಣದ ಸಹಜತೆಯಿಂದ ಕೂಡಿದೆ. ಆಳವಾದ ನೋವು, ಕಟುವಲ್ಲದ ವ್ಯಂಗ್ಯ, ತುಂಬಿ ತುಳುಕುವ ಸಾಮಾಜಿಕ ಎಚ್ಚರಗಳಿಂದಾಗಿ ಈ ಕತೆಗಳು ಸುತ್ತಣ ಬದುಕಿನ ಓರೆ-ಕೋರೆಗಳಿಗೆ ಕನ್ನಡಿ ಹಿಡಿಯುತ್ತಾ, ವಿಚಾರ ಮಾಡಲು ಪ್ರಚೋದಿಸುತ್ತವೆ.

---
* ಸಂಪಾದಕರಿಂದ

ಅಮ್ಮನವರ ಇಚ್ಛಾ ಬೀಚಿಯವರ 'ಕತೆಗಳ ಸಂಕಲನ'ವೆಂದು ಹೇಳಲಾಗಿದೆ. ಬೀಚಿಯುವರು ತಮ್ಮ 'ಮುನ್ನುಡಿ'ಯಲ್ಲಿ ಲೇಖನಗಳೆಂದು ಕರೆದಿರುವುದು ಅನೇಕ ಬರಹಗಳಿಗೆ ಅನ್ವರ್ಥವಾಗಿದೆ. ಕೆಲವು ಕತೆಯಾಗ ಹೊರಟು ನಗೆ ಬರಹಗಳಾಗಿವೆ: 'ಆತ್ಮ'ದಂಥ ಬರಹ ಅಪ್ಪಟ ಲೇಖನವಾಗುವ ಎಲ್ಲ ಸಾಧ್ಯತೆಗಳಿವೆ. ಬಹುಪಾಲು 'ವಿಡಂಬನಾತ್ಮಕ ಕತೆಗಳು' ಎಂದು ಬೇಕಾದರೆ ಕರೆದುಕೊಳ್ಳ ಬಹುದು, ಅದೇನೇ ಇರಲಿ, ಈ ಬರಹಗಳ ಹಿಂದೆ ಒಂದು ಮುಖ್ಯ ಧೋರಣೆಯಿದೆ; ಅದು ಹಳೆಯ ಕೆಡಕು ಮೌಲ್ಯಗಳನ್ನು ಧಿಕ್ಕರಿಸುವ ಸಮಾಜ ಭ್ರಷ್ಟತೆಯನ್ನು ಬಯಲಿಗೆಳೆಯುವ ಧೋರಣೆ, 'ಬೀಚಿ ಸಂದರ್ಶನ'ದಲ್ಲಿ ಲೇಖಕರ ದೃಷ್ಟಿಕೋನ ವ್ಯಕ್ತವಾಗಿವೆ, ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರೀತಿಸುವ ಇವರು ವಾಸ್ತವವಾಗಿ ಬೇರೆಯವರ ಧಾರ್ಮಿಕ ಕ್ರಿಯೆಗಳ ಬಗ್ಗೆ ಸಹಾನುಭೂತಿಯಿಂದ ನೋಡುವ ಉದಾರತೆಯನ್ನು ತೋರಬಲ್ಲರು, (ಉದಾ: ತನ್ನ ಪತ್ನಿಯ ದೈವ ಪೂಜೆ ಇತ್ಯಾದಿ) ಟೀಕೆಗೆ ತೊಡಗಿದಾಗ ದೇವರಿಲ್ಲವೆಂದು ಫೋಜ್‌ಕೊಡುವ 'ನಾಸ್ತಿಕವಾದಿ'ಗಳನ್ನೂ ಬಿಡುವುದಿಲ್ಲ. ಇದು ದೇವರಿದ್ದಾನೆಯೆ? ಎಂಬ ವಿಡಂಬನಾತ್ಮಕ ಲೇಖನದಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. ತಮ್ಮ ಬಗೆಗಿನ ಟೀಕೆ ಟಿಪ್ಪಣಿಗಳನ್ನು sportive ಆಗಿ ತೆಗೆದುಕೊಂಡು ತನ್ನ ದೃಷ್ಟಿಯನ್ನು ಪ್ರತಿಪಾದಿಸುವ ವಿಡಂಬನಾತ್ಮಕ ಶೈಲಿ 'ಯಾವುದು ಸುಳ್ಳು? ರಲ್ಲಿದೆ. ಸಮಾಜದ ಕೆಡುಕುಗಳನ್ನು ಎತ್ತಿ ತೋರಿಸುವ ಇಷ್ಟವಾದದ್ದನ್ನು ಗೇಲಿಮಾಡುವ, ಕೆಲವೊಮ್ಮೆ ತನ್ನನ್ನು ಗೇಲಿಗೊಳಪಡಿಸುವ ಬೀಚಿಯವರ ಬರಹ ಗಳು ಒಂದು ಹಂತದವರೆಗೆ ವೈಚಾರಿಕವಾಗಿ ಕ್ರಿಯಾಶೀಲವಾಗಿವೆಯೆನ್ನಿಸಿದರೂ, ಅನೇಕಸಾರಿ ಚಮತ್ಕಾರದ ಮಾತುಗಳಲ್ಲಿ ತಮಾಷೆಯ ತಾಣವಾಗಿ ಪರಿಣಮಿಸಿ ಗಂಭೀರ ಕೇಂದ್ರವೊಂದನ್ನು ಸೃಷ್ಟಿಸಿಕೊಳ್ಳದೆ ಹೋಗುತ್ತವೆ; ಗಂಭೀರ ಚಿಂತನೆಗೆ ತೊಡಗಿಸಿಕೊಳ್ಳಬೇಕಾದ ಕಡೆಯೂ ಹಾಗಾದರೆ ಕೇವಲ ರಂಜಕ ಸಾಮಗ್ರಿಯಾಗುವ ಅಪಾಯವಿದೆ. ಇದಕ್ಕೆ ಕಾರಣ ಬೀಚಿಯುವರಲ್ಲಿರುವಂತೆ ಈ 'ಕತೆ' ಎಂದು ಕರೆದಿರುವ ಬರಹಗಳ ಒಳ-ಹೊರ ಸ್ವರೂಪದಲ್ಲೂ ವ್ಯಕ್ತವಾಗಿದೆ. ನಗೆಯಲ್ಲಿ ತೇಲಿಸುವ ಲಘುತ್ವ ಇಲ್ಲದಿದ್ದರೆ ಇಲ್ಲಿನ ಬಹುಪಾಲು ಬರಹಗಳು ಬೇರೆ ಸ್ವರೂಪವನ್ನೇ ಪಡೆಯುತ್ತಿದ್ದವು.

ಆಗಮನ ಎಚ್. ಹಾಲಪ್ಪನವರು ಸಂಪಾದಿಸಿರುವ ಶಿವಮೊಗ್ಗ ಜಿಲ್ಲೆಯ ಹೊಸ ಬರಹಗಾರರ ಕಥಾ ಸಂಕಲನ. ಇದರಲ್ಲಿ ಏಳು ಕತೆಗಳಿವೆ. ಇದರಲ್ಲಿ ಕೆಲವು ಆಯಾ ಲೇಖಕರ ಪ್ರಥಮ ಬರಹ ಗಳೆಂದೂ ಹೇಳಲಾಗಿದೆ. ಒಂದಿಬ್ಬರು ಪದ್ಯ, ಕತೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ; 'ಉದಯೋನ್ಮುಖ' ಎಂದು ಬೇಕಾದರೆ ಹೆಸರಿಸಬಹುದಾದ ಲೇಖಕರ ಈ ಕತೆಗಳು ಆ ಜಿಲ್ಲೆಯ ಕತೆಗಾರರ ಬಗ್ಗೆ ಆಸೆ ಮೂಡಿಸುವಲ್ಲಿ ಯಶಸ್ವಿಯಾಗಿವೆ. ಎಂ. ಎನ್. ಜೈಪ್ರಕಾಶ್‌ರಂಥವರು (ಜಾತ್ರೆ) ದಟ್ಟ ವಿವರಗಳಲ್ಲಿ ಭಾಷೆಯ ಬಳಕೆಯಲ್ಲಿ ವಿವಿಧ ವಿನ್ಯಾಸ ಪ್ರಕಟಿಸುತ್ತಾ (ಕೆಲವೊಮ್ಮೆ ಕಾವ್ಯವನ್ನೇ ತಂದು) ಕತೆ ಹೇಳುವ ಕಡೆ ಗಮನ ಕೊಟ್ಟರೆ, ಕೋಳಿಗೆ ಶಿವಪ್ಪ, ಇಂದಿರಾ – ಇವರು ಎದ್ದು ಕಾಣುವ ಸಾಮಾಜಿಕ ಕಳಕಳಿಯ ಕತೆಗಳನ್ನು ಕೊಟ್ಟಿದ್ದಾರೆ. 'ಜಾತ್ರೆ' ಕತೆ ತನ್ನ 'ರೀತಿ' ಯಿಂದಲೇ ನಮ್ಮನ್ನು ಕಾಡಿಸದೆ ಹೋಗುವ ಅಪಾಯವಿದ್ದರೆ 'ಕೊಡಲಿ ಕಾವು' ಮತ್ತು 'ಕೆಂಚವ್ವ ನೀರು ನೇದಿದಳು' ವಸ್ತುವಿಗಿರುವ ವ್ಯಾಪ್ತಿಯನ್ನು ಅದರ ಆಳ ಅಗಲದೊಂದಿಗೆ ಹಿಡಿಯದಿದ್ದರೂ ಸ್ತುತ್ಯ ಪ್ರಯತ್ನಗಳಾಗಿವೆ. ಶ್ರೀನಿವಾಸರ 'ವಿಕಲ್ಪ'ದಲ್ಲಿ ಭಾಷೆ ಭಾವದ ಬೆನ್ನೆಲುಬಾಗಿದೆ, ಆದರೂ ಹೈಸ್ಕೂಲು ಹುಡುಗನ ಆಲೋಚನೆಗಳು ಕೆಲವೊಮ್ಮೆ ಕೇವಲ ಲೇಖಕರ ಆಲೋಚನೆ ಗಳೆಂಬಂತೆ ಕಾಣುವುದು ನಿರೂಪಣೆಯ ರೀತಿಯನ್ನು ನಿರ್ದೇಶಿಸುತ್ತದೆ. ಎಂ. ಚಂದ್ರಶೇಖರಯ್ಯ ನವರ 'ಹಟ್ಟಿ ಹಬ್ಬದ ನಾಟಕ ಕಾಂಡ' ಹಳೆಯ ಒಂದು ಘಟನೆಯನ್ನು ಹಳ್ಳಿಯ ಒಂದು ಆಡು ಮಾತಿನ ನಿರೂಪಣೆಯಲ್ಲಿ ಎರಕಹೊಯ್ಯುವ ಪ್ರಯತ್ನ. ಮುನ್ನುಡಿಕಾರರು ಹೇಳಿರುವಂತೆ ದೇವ ನೂರು ಮಹಾದೇವರ ಪ್ರಭಾವವಿದೆ. ಬಿ. ಶ್ರೀ ಲಕ್ಷ್ಮಿಯವರ 'ಸನ್ನಪ್ಪಯ್ಯ' ಮತ್ತು ಶ್ರೀಕಂಠ ಕೊಡಿಗೆಯವರ 'ಕೆರೆಯ ಅಂಚಿನಲ್ಲಿ' ಓದಿಸಿಕೊಳ್ಳುವ ಗುಣ ಹೊಂದಿವೆ. 'ಕೆರೆಯ ಅಂಚಿನಲ್ಲಿ' ಪರಿಸರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದು ಉಲ್ಲೇಖನಾರ್ಹ.

3

ಮೇಲಿನ ಮಾತುಗಳನ್ನು ಹೇಳುವಾಗ ಈ 'ಆ್ಯಂಥಾಲಜಿಯು' ಕತೆಗಳು ಬಹುಪಾಲು ಮೊದ ಮೊದಲ ಪ್ರಯತ್ನಗಳೆಂಬುದನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಹೊಸ ಬರಹಗಾರರ ಇದ್ದುದ ರಲ್ಲಿ ಒಳ್ಳೆಯ ಕತೆಗಳನ್ನು ಆರಿಸುವಲ್ಲಿ ಸಂಪಾದಕರ ಕೆಲಸ ಪ್ರಶಂಸನೀಯವೆನ್ನಬೇಕು. ಬಂದ ನಲವತ್ತು ಕತೆಗಳಲ್ಲಿ ಏಳನ್ನು ಮಾತ್ರ ಆರಿಸಿಕೊಳ್ಳುವ ನಿರ್ದಾಕ್ಷಿಣ್ಯ ಮನೋಭಾವ ಜಿಲ್ಲೆಯ ಹೊಸ ಬರಹಗಾರರ ಪ್ರಾತಿನಿಧಿಕ ಕಥಾಸಂಕಲನ ಕೊಡಲು ಸಹಾಯಕವಾಗಿದೆಯೆಂದರೆ ತಪ್ಪಾಗದು.

ಕ್ಯಾತನಹಳ್ಳಿ ರಾಮಣ್ಣನವರ ವಜ್ರ ವರ್ತುಲದಲ್ಲಿ ಹಳ್ಳಿಯ ಬದುಕಿನಿಂದ ತೆಗೆದುಕೊಂಡ ಪ್ರಸಂಗಗಳು ಕತೆಗಳಾಗಿವೆ. ನಗರದ ವಿಷಯ ಬಂದರೂ ಅಲ್ಲಿನ ಕಥಾನಾಯಕ ಹಳ್ಳಿಯವನೇ ಆಗಿರುತ್ತಾನೆ. ಸಾಮ್ವಿ ಮತ್ತು ವಜ್ರ ವರ್ತುಲ—ಕತೆಗಳನ್ನು ನೋಡಿದರೆ ರಾಮಣ್ಣನವರ ಗುಣ ದೋಷಗಳ ಪರಿಚಯವಾದೀತು. 'ಸಾಮ್ವಿ'ಯ ಮೊದಲ ವಿವರಗಳು ಕತೆಯ ಕೇಂದ್ರವಲ್ಲದಿದ್ದರೂ ಲಘು ಹಾಸ್ಯ ಬೆರೆತ ಶೈಲಿಯಲ್ಲಿ ಓದಿಸಿಕೊಂಡು ಹೋಗುತ್ತದೆ. ಅಣ್ಣ-ತಮ್ಮಂದಿರ ಸಂಬಂಧವನ್ನು ಕೇಂದ್ರವಾಗುಳ್ಳ ಕತೆ ತನ್ನ ಕಡೆಯ ಮೂರು ಸಾಲುಗಳಿಂದ ಮೂಢನಂಬಿಕೆಯ ವ್ಯಂಗ್ಯವೂ ಆಗಿ ಆ ಮಟ್ಟಿಗೆ ಸಾರ್ಥಕವಾಗುತ್ತದೆ. ಸಂಭಾಷಣೆಯ ಅತಿರೇಕ ಇಲ್ಲದಿದ್ದರೆ ಮತ್ತಷ್ಟು ತಾಕತ್ತು ಪಡೆಯ ಬಹುದಾಗಿದ್ದ ಕತೆ ಇದು. ಆದರೆ 'ವಜ್ರವರ್ತುಲ'ದಲ್ಲಿ ಸಂಭಾಷಣೆಗಳು ಕಡಿಮೆಯಿದ್ದರೂ ಪ್ರಸಂಗಗಳೆಲ್ಲ ಹೇಳಿಕೆಯ ಮಟ್ಟದಲ್ಲಿ ನಿಲ್ಲುವುದರಿಂದ ವಿಫಲವಾಗುತ್ತದೆ. ಈ ಕತೆಯ ವಿವರಗಳು ಒಂದು ಕಾದಂಬರಿಗಾಗುವಷ್ಟಿವೆ. ಅವನ್ನು ಸಣ್ಣ ಕತೆಯಲ್ಲಿ ಅಡಕಗೊಳಿಸುವ ಪ್ರಯತ್ನ ಫಲ ಕೊಡದೆ, ಕತೆಗಾರರಿಗೆ ವಸ್ತುವಿನ ವ್ಯಾಪ್ತಿಯ ಅರಿವಿಲ್ಲವೇನೊ ಎಂಬ ಅನುಮಾನಕ್ಕೆಡೆಕೊಡುತ್ತದೆ. ಮೊದಲನೇ ಕತೆ 'ಗೂಡು' ಕೇವಲ ಒಂದು ಸಂಸಾರದ ಒಳಜಗಳದ ಸಾಮಾನ್ಯ ಚಿತ್ರವಾಗಿದೆ. 'ಹೊತ್ತು ಮುಳುಗುವ ಹೊತ್ತು' ಮುಂತಾದ ಕತೆಗಳು ಸುಮಾರಾಗಿವೆ; 'ಬೇಟೆ' ಕತೆಯಲ್ಲಿ ಯೌವನಕ್ಕೆ ಬಂದವನನ್ನು ಮದುವೆಗೆ ಒಪ್ಪಿಸಲು ಸ್ನೇಹಿತ ಮತ್ತು ಮನೆಯವರ ಪ್ರಯತ್ನ ನಾಯಕನ ತುಮುಲ ಇದೆ. ಇದು ಪರವಾಗಿಲ್ಲವೆಂಬಂತೆ ಇದೆಯಾದರೂ ವಿಶಿಷ್ಟ ಎನ್ನಬಹುದಾದ ಅಂಶಗಳೇನೂ ಇಲ್ಲ. ಕ್ಯಾತನಹಳ್ಳಿ ರಾಮಣ್ಣನವರು ಪ್ರಾದೇಶಿಕ ಭಾಷೆಯ ಬಳಕೆಯಲ್ಲಿ, ಅದೂ ಸಂಭಾಷಣೆಯ ಸಂದರ್ಭ ದಲ್ಲಿ ಹೆಚ್ಚು concentrate ಆಗುತ್ತಾರೆ. ಅಷ್ಟರ ಮಟ್ಟಿಗೆ ತೃಪ್ತಿಕೊಡುತ್ತಾರೆ. ಆದರೆ ಕತೆಯ ಸಂವಿಧಾನದಲ್ಲಿ ಇಡುವ ಹಳ್ಳಿಯ ಸಾಮಾಜಿಕ ಪರಿಸರ ವೈಚಾರಿಕ ಎಳೆಯಿಲ್ಲದೆ ಸಾಮಾನ್ಯ ಎನಿಸಿ ಕೊಳ್ಳುತ್ತದೆ.

ಕ್ಷಣಗಳು ವಿಜಯ ಸಾಸನೂರರ ಕಥಾಸಂಕಲನ. ಇದು ಇತರೆ ಸಂಕಲನಗಳಿಗಿಂತ ವಿಭಿನ್ನ ವಾದುದು, ಹಾಗೆಂದಾಕ್ಷಣ ವಿಶಿಷ್ಟ ಸ್ಥಾನ ಇದೆಯೆಂದು ಅರ್ಥವಲ್ಲ. ಐ. ಪಿ. ಎಸ್. ಅಧಿಕಾರಿ ಯೊಬ್ಬರು ಸಾಹಿತ್ಯ ಕೃಷಿಗೆ ತೊಡಗಿದಾಗ, ತಮ್ಮ ವೃತ್ತಿ ವಲಯದೊಳಗೆ ಬರುವ ಅನುಭವಗಳಿಗೆ ಅಭಿವ್ಯಕ್ತಿರೂಪ ಕೊಡುವ ಪ್ರಯತ್ನ, ಅಧ್ಯಾಪಕರ ಸಾಹಿತ್ಯದಿಂದ ಭಿನ್ನವಾಗಿದೆ; ಕೊಲೆ, ಪತ್ತೇದಾರಿ ಕೆಲಸ, ಕುತೂಹಲಕರ ಪ್ರಸಂಗ, ಘಟನೆಗಳು ಇಲ್ಲಿನ ಕತೆಗಳಲ್ಲಿ ಎದ್ದುಕಾಣುತ್ತವೆ. ಮೊದಲ ಕತೆ 'ಮಾಂತ್ರಿಕರು' ಊರಿನ ಮುಂದಾಳೊಬ್ಬ ಮಾಂತ್ರಿಕರ ಸಹಕಾರದಿಂದ ನಡೆಸುತ್ತಿದ್ದ ದೌರ್ಜನ್ಯವನ್ನು 'ಹೀರೊ'ನಂತೆ ಬರುವ ಪೃಥ್ವಿಸಿಂಗ್ (ಪೋಲೀಸ್ ಇಲಾಖೆ) ಬಯಲುಮಾಡುವ ವಸ್ತು ಹೊಂದಿದೆ. 'ಕಾಮಿನಿ...ಕಾಮನೆ...ಕೊಲೆ ಇತ್ಯಾದಿ' ಮೇರಿ ಎಂಬ ವಿದೇಶಿ 'ಕಾಮಿನಿ' ಯೊಬ್ಬಳನ್ನು ಲಾರಿಯ ಡ್ರೈವರ್ 'ಕಾಮನೆ'ಯಿಂದ ಅತ್ಯಾಚಾರ ನಡೆಸಿ ಕಡೆಗೆ 'ಕೊಲೆ' ಮಾಡಿದ ಕತೆ. ಕೊಲೆಗಾರನ ಪತ್ತೆಯಂತೂ ಆಗಲೇಬೇಕಲ್ಲ? ಹೀಗೇ ಕೆಲವು ಕತೆಗಳು ಕೊಲೆ, ಕಳ್ಳತನ, ಪತ್ತೆಗಳ ಸುತ್ತ ಹಬ್ಬಿವೆ; ಕೇವಲ ಕುತೂಹಲಕರ ಪತ್ತೇದಾರಿ ಕತೆಯಾಗುವ ಅಪಾಯದಿಂದ ಒಂದೆರಡು ಕತೆಗಳು (ಉದಾ : ಶಿಕ್ಷೆ) ಇರುವುದು ಸಮಾಧಾನದ ಅಂಶ. ಕೇವಲ ಕಳ್ಳತನಕ್ಕೆ ಬಂದವನ ಮೇಲೆ ಮನೆಯೊಡತಿ ತನ್ನ ಗಂಡನ ಕೊಲೆಯ ಆರೋಪ ಹೊರಿಸಲು ಹೂಡುವ ತಂತ್ರ, ಆತ ತಾನು ಕೊಲೆಗಾರನಲ್ಲ ಕಳ್ಳ ಮಾತ್ರ ಎಂದು ಸತ್ಯ ಹೇಳಿದರೂ ಕೊಲೆಯ ಅಪಾದನೆಯ ಮೇಲೆ ಶಿಕ್ಷೆಗೆ ಗುರಿಯಾದ ದುರಂತ ಶ್ರೀಮಂತ ಮಹಿಳೆಯೊಬ್ಬಳ ಅಥವಾ ಈ ಕಳ್ಳನ ಕತೆ ಮಾತ್ರವಾಗದೆ

ನ್ಯಾಯ'ವನ್ನೂ ವಿಡಂಬಿಸುವುದರಿಂದ ಗಮನಾರ್ಹವಾಗುತ್ತದೆ. ಇನ್ನು ಕೆಲವು ಕ್ರಿ.ಶ. ೨೦೪೫ಕ್ಕೆ ಸಂಬಂಧಿಸಿದ (?) ವೈಜ್ಞಾನಿಕ ಕತೆಗಳ ಮಾದರಿಯಲ್ಲಿರುವ ಬರಹಗಳೂ ಇವೆ. (ಉದಾ : ಸಂಜೀವಿನಿ) ಇವುಗಳ ಬಗ್ಗೆ ಹೇಳುವಂಥದೇನೂ ಇಲ್ಲ. ಈ ಕೊಲೆಯ ಮತ್ತು ವೈಜ್ಞಾನಿಕ (?) ಕತೆಗಳ ನಡುವೆ 'ಕಿಟಕಿಗಳು' ವಿನಂತಿ ಕತೆಯೂ ಇದೆ. 'ಕ್ಷಣಗಳು'—ಎಂಬ ಕತೆ ಹೆರಿಗೆಗೆಂದು ಪತ್ನಿಯು ಆಸ್ಪತ್ರೆಯಲ್ಲಿರುವಾಗ ಗಂಡನ ಮನಸ್ಸಿನಲ್ಲಿ ನಡೆಯುವ ತುಮುಲಗಳ ಶುಷ್ಕ ವರದಿ.

ಕೊಲೆ, ಕಳ್ಳತನದ ವಸ್ತುವನ್ನು ತೆಗೆದುಕೊಂಡರೂ ಅದನ್ನು ಕೇವಲ ಕುತೂಹಲಕ್ಕೆ ಬಗ್ಗಿಸದೆ ಆರ್ಥಿಕ, ಸಾಮಾಜಿಕ, ಸಂಬಂಧಗಳೊಂದಿಗೆ ಎರಕ ಹೊಯ್ಯುವ ಕಲೆಗೆ ಗಮನ ಕೊಟ್ಟರೆ ಗಮನಾರ್ಹ ಎನ್ನಿಸುವ ಕತೆಗಳನ್ನು ರಚಿಸುವ ಶಕ್ತಿ ವಿಜಯ ಸಾಸನೂರರಿಗಿದೆ ಎನ್ನಬಹುದು. ಪೋಲೀಸ್ ಇಲಾಖೆಯ ಅನುಭವವೇ ಮತ್ತಷ್ಟು ಸಂಕೀರ್ಣ ಸ್ಥಿತಿಯಲ್ಲಿ ಅಭಿವ್ಯಕ್ತವಾದಾಗ ವಿಶಿಷ್ಟ ಕೃತಿ ರಚಿಸಲು ಸಾಧ್ಯ. ಇದು 'ಶಿಕ್ಷೆ' ಕತೆಯಲ್ಲಿ ಸಾರ್ಥಕವಾಗಿದೆ.

ಅಶೋಕ ಕುಲಕರ್ಣಿಯವರ ಕೃತಪುರದ **ಡಾ॥ ಎಲಗುರ್ದ**ದಲ್ಲಿ ಎರಡು ಕತೆಗಳಿವೆ, ಮೊದಲ ಕತೆ ಡಾ॥ ಎಲಗುರ್ದನನ್ನೂ ಕುರಿತದ್ದು ; ಆತನ ವ್ಯಕ್ತಿ ವಿಶೇಷ, ಆಸೆ ಆಕಾಂಕ್ಷೆಗಳನ್ನು ವಿಭಿನ್ನ ವ್ಯಕ್ತಿಗಳ ಪರಿಸರದ ಸಂದರ್ಭದಲ್ಲಿ ಚಿತ್ರಿಸುತ್ತ, ಅದೇ ಸಂದರ್ಭದಲ್ಲಿ ವ್ಯಾಖ್ಯಾನಿಸುತ್ತ ಹೋಗುವ ಈ ಕತೆ ಆಸಕ್ತಿ ಕೆರಳಿಸುತ್ತದೆ; ನಿಜ, ಆದರೆ ಒಂದೇ ಸಮ ನಡೆಯುವ ಘಟನೆಗಳು ಸಹಜ ವಾತಾವರಣ ನಿರ್ಮಿಸಿ ಕತೆಯ ವ್ಯಾಪ್ತಿಯನ್ನು ಹಿಗ್ಗಿಸುವ ಸಾಧ್ಯತೆಯಿತ್ತು. ಆದರೆ ಇರುವಷ್ಟರಲ್ಲೆ 'ರಾಜಕಾರಣ ಲೈಂಗಿಕ ಸಂಬಂಧಗಳನ್ನು ತಂದು ಅರ್ಥ ಹೊರಡಿಸುವ ಪ್ರಾಮಾಣಿಕ' ಪ್ರಯತ್ನವಿದೆ. ರಕ್ಷಾ ಪುಟದ ಮೇಲಿರುವ ವ್ಯಾಖ್ಯಾನ ಏನೇನೊ ಹೇಳಿದ್ದರೂ ಎಲಗುರ್ದನ ಕಲ್ಪನಾ ಸುಖ, ಕಳಕಪ್ಪನ ವಾಸ್ತವತೆ ಇವುಗಳಮಟ್ಟಿಗೆ ಕತೆ ಗಟ್ಟಿಯಾಗಿದೆ ; ಕತೆ ಹೇಳುವ ರೀತಿ ಹೊಸದೇನೂ ಅಲ್ಲ, ಎರಡನೇ ಕತೆ 'ಬುಡ್ಯಾನ ಸಾಹಸಗಳು' ಯಾವ ಸಾಹಸವನ್ನು ಹೇಳುವುದಿಲ್ಲ. ಆತನಿಗೆ ಬಿದ್ದ ಕನಸಿನ ಚಿತ್ರಣದ ಮೂಲಕ ಪರೋಕ್ಷವಾಗಿ ರಾಜಕೀಯ ವ್ಯವಸ್ಥೆಯೊಂದನ್ನು ವಿಡಂಬಿಸುವ ಪ್ರಯತ್ನ ; ಅದೂ ಸರಳೀಕೃತ, ಆಕ್ರೋಶಿತ, ವಿಡಂಬನೆ. ಇದನ್ನು ಕನಸಿನ ಮುಖಾಂತರ ಹೇಳುವ 'ಉಪಾಯ' ಯಾಕೆಂದು ಅರ್ಥವಾಗದು. ಇದೊಂದು 'ಅಲೆಗರಿ'ಯೆಂದೇನೊ ಸರಿ, ಆದರೆ 'ಕನ್ನಡ ಸಾಹಿತ್ಯಕ್ಕೆ ಇಂಥ ಪ್ರಯೋಗ ಹೊಸದು' ಎಂದು ರಕ್ಷಾಪುಟ ಉದ್ಘೋಷಿಸಿರುವುದು ಆಶ್ಚರ್ಯ, ದುರ್ಗಸಿಂಹನ 'ಪಂಚತಂತ್ರ' ಮತ್ತೇನು ?

ಸುಮತೀಂದ್ರ ನಾಡಿಗರ **ಕಾರ್ಕೋಟಕ** ದಲ್ಲಿ ಹತ್ತು ಕತೆಗಳಿದ್ದು ಅದರಲ್ಲೊಂದು ಹಿಂದಿಯ ಭಾಷಾನುವಾದ. ಉಳಿದ ಒಂಬತ್ತು ಕತೆಗಳಲ್ಲಿ 'ಕಾರ್ಕೋಟಕ' ನೀಳ್ಗತೆ ; ಇನ್ನು ಎಂಟು ಕತೆಗಳಲ್ಲಿ ಖಂಡಿತ ಇಷ್ಟವಿಲ್ಲ, 'ಕರಿಮಲ್ಲಿಗೆ ಮೊಗ್ಗು', 'ಒಡೆಯದ ಬೀಗ', 'ನೀತಿಯ ಮಾನಭಂಗ'–ಇಂಥವು ಸೊರಗಿ ಹೋಗಿವೆ ; ಈ ಸಂಕಲನದ ಬಹಳಷ್ಟು ಕತೆಗಳಲ್ಲಿ ಕೆಲವೊಮ್ಮೆ ಗಟ್ಟಿ ವಸ್ತುವಿಲ್ಲದೆ, ಕೆಲವೊಮ್ಮೆ ಗಟ್ಟಿಗೊಳಿಸಲಾಗದೆ, ಏನನ್ನೊ ಹೇಳಹೊರಟು ಎಲ್ಲಿಯೊ ದುಡುಮ್ಮನೆ ನಿಂತು ಅತೃಪ್ತಿಯ ನೆಲೆಯಲ್ಲಿ ನಮ್ಮನ್ನು ನಿಲ್ಲಿಸುತ್ತವೆ. ಮನುಷ್ಯರ ಸಣ್ಣ ಬುದ್ಧಿ, ದೌರ್ಬಲ್ಯ, ಆಂತರಿಕ ಘರ್ಷಣೆ, ಮುಖವಾಡ, ಇವೆಲ್ಲ ನಾಡಿಗರ ಕತೆಗಳಲ್ಲಿ ಕಂಡುಬರುತ್ತವೆ. ಇವನ್ನು ಕಥಾ ಸಂವಿಧಾನದಲ್ಲಿ ಹೇಳುವ ತವಕವೂ ಇದೆ. ಆದರೆ ಅನೇಕ ಸಾರಿ ಕೇಂದ್ರವೊಂದನ್ನು ಸೃಷ್ಟಿಸಿಕೊಳ್ಳದೆ, ಕಲಾತ್ಮಕ ವರದಿಯಂತೆ ಹೊರಟು ಮುಗಿ ಬೀಳುವ ಬರವಣಿಗೆ ವಸ್ತುವನ್ನು ಇಡಿಯಾಗಿ ತೆಕ್ಕೆಗೆ ತೆಗೆದುಕೊಳ್ಳದೆ ಅಲ್ಲಲ್ಲೆ ಇಣಕುವ ವ್ಯಂಗ್ಯ ನುಡಿಗಳಿಂದ ಮಾತ್ರ ರಂಜಿಸಿ ಸುಮ್ಮನಾಗುತ್ತದೆ. ನಿದರ್ಶನವಾಗಿ 'ಕರಿಮಲ್ಲಿಗೆ ಮೊಗ್ಗು' ನೋಡಬಹುದು ; ಕೇವಲ ವ್ಯಕ್ತಿ ವಿಕಾರವನ್ನು ತಿಳಿಸುವ 'ಚಿತ್ರ'ವಾಗದೆ ಬೇರೆ ಅರ್ಥದ ಆಯಾಮಗಳನ್ನು ತೆರೆಯುವ ಸಾಧ್ಯತೆಯಿದ್ದ ಕತೆ 'ಅಲ್ಪತೃಪ್ತಿ' ಯಲ್ಲಿ ಧನ್ಯತೆ ಪಡೆಯುವುದರಿಂದ ಪೇಲವವಾಗಿದೆ. ಇಲ್ಲಿ ಮೇಲೆ ಹೇಳಿದ ಕತೆಗಳನ್ನೂ ಜ್ಞಾಪಿಸಿಕೊಳ್ಳಬಹುದು.

ಪ್ರತ್ಯೇಕವಾಗಿ ನೋಡಿದಾಗ ಮನುಷ್ಯನ ಮನಸ್ಸಿನ ವಿಕೃತ ಸ್ಥಿತಿಯನ್ನು 'ಹೇಳುವಲ್ಲಿ' ನಾಡಿಗರು ಯಶಸ್ವಿಯಾಗುತ್ತಾರೆ; ಸಾಹಿತ್ಯ ಕ್ಷೇತ್ರದ ಹಿನ್ನೆಲೆಯಲ್ಲಿ 'ಕಾರ್ಕೋಟಕ' ವನ್ನಿಟ್ಟಾಗ ಅದರ ವಸ್ತುವಿಗೊಂದು ವಾರ್ಲ್ಯ ದಕ್ಕುವುದು ಸಾಧ್ಯ. ಮಹೇಶ, ಆನಂದ ಇಬ್ಬರ ಆಂತರಿಕ ಸ್ಥಿತಿ, ಬಾಹ್ಯ ಚಟುವಟಿಕೆಗಳನ್ನು ತುಲನೆಮಾಡುವ ಚಂದ್ರು ಕತೆಯಲ್ಲಿ ತೊಡಗಿದಂತೆ ಕಂಡರೂ ದೂರ ಉಳಿಯುತ್ತಾನೆ: ದೂರವುಳಿಯುವ ಸಂದರ್ಭದಲ್ಲಿ ಮಹೇಶ, ಆನಂದರ ವ್ಯಕ್ತಿತ್ವಗಳು ಒಡೆದು ಕಾಣುತ್ತವೆ: ಚಂದ್ರುವಿನ ಮೇಲೆ ಕಾಮೆಂಟ್ ಮಾಡುವಾಗ ಆತ್ಮ ನಿರೀಕ್ಷಣೆಗೆ ತೊಡಗುತ್ತ ತನ್ನ ಪುಕ್ಕಲುತನವನ್ನು ಪ್ರದರ್ಶಿಸುವ ವ್ಯಕ್ತಿಯಾಗುತ್ತಾನೆ. ಚಂದ್ರು ಕತೆಯ ನಿರೂಪಕ ಪಾತ್ರವಾಗಿ 'ತನ್ನತನ'ವನ್ನು ತೆರೆದರೂ ಆನಂದ ಮಹೇಶರ ವ್ಯಕ್ತಿತ್ವಗಳಿಗೆ ಬಿದ್ದ ಒತ್ತು, ವಿಕೃತಿ ಗಳಿಗೆ ನಮ್ಮ ಸಂದರ್ಭದಲ್ಲಿ ಕಾರಣ ಕೆದಕುವ ಸೂಕ್ಷ್ಮ ಎಲ್ಲ ಸಂದರ್ಭದಲ್ಲೂ ಗಾಢವಾಗುವುದಿಲ್ಲ. ಕನಸಿನ ಸಂದರ್ಭ ಮಾತ್ರ ಮಹೇಶ-ಆನಂದರ ದೌರ್ಬಲ್ಯ ಮತ್ತು ಅಗತ್ಯಗಳನ್ನು ಹಿಡಿದಿಡುವಲ್ಲಿ ಫಲಿಸಿದ ಪ್ರತಿಮೆಯಾಗಿದೆ. ಇಷ್ಟಾದರೂ ಉಳಿದ ಕತೆಗಳಲ್ಲಿರುವ ನೀರಸ ನಿರೂಪಣೆ ಇಲ್ಲೂ ತಲೆಹಾಕುವುದು ಮತ್ತು ನಮ್ಮ ಕಣ್ಣೆದುರಿನ ನಿರ್ದಿಷ್ಟ ವ್ಯಕ್ತಿಚಿತ್ರಗಳನ್ನು ದಾಟಿ ಸಾರ್ವತ್ರಿಕವಾಗುವ ಸಾಮಾಜಿಕತೆ ಪಡೆಯದಿರುವುದು 'ಕಾರ್ಕೋಟಕ'ದ ಕೊರತೆ,

ರಾಮದಾಸರ ಸೇಡು ಸಂಕಲನದ ಬಹಳಷ್ಟು ಕತೆಗಳ ಕೇಂದ್ರ: ಕಾಮ. ನವ್ಯ ಸಾಹಿತ್ಯ ಹೆಚ್ಚು ಚಲಾವಣೆಯಲ್ಲಿದ್ದ ಸಂದರ್ಭದಲ್ಲಿ 'ಕಾಮ'ವನ್ನು ವಸ್ತುವಾಗುಳ್ಳ ಕತೆ, ಕವನಗಳು ಹುಟ್ಟಿದ್ದು ನಿಜ. ಅದಕ್ಕೆ 'ನವ್ಯ' ಒಂದು ಸಾಹಿತ್ಯ ಚಳುವಳಿಯಾಗಿ ಹಳೆಯದಕ್ಕೆ ಪ್ರತಿಕ್ರಿಯೆ ಯಾಗಿ ನಿಂತದ್ದೂ ಒಂದು ಕಾರಣ; ಅಲ್ಲಿಯವರೆಗೆ ಮಗುಮ್ಮಾಗಿ ವ್ಯಕ್ತವಾಗುತ್ತಿದ್ದ ಅಂಶಗಳು ಸ್ವಲ್ಪ ನಿರ್ಭಿಡೆಯಿಂದ ಅಭಿವ್ಯಕ್ತವಾದದ್ದು ಪ್ರತಿಕ್ರಿಯಾತ್ಮಕ ಧೋರಣೆ, ವೈಯಕ್ತಿಕ ತುರ್ತು ಗಳಿಂದಿರಬಹುದು. ಆದರೆ ಈಗಲೂ ಕಾಮ ಹಸಿ ಹಸಿಯಾಗಿ ವ್ಯಕ್ತವಾಗುವುದಕ್ಕೆ ವಿಶೇಷ ಸಾಮಾಜಿಕ, ಸಾಹಿತ್ಯಿಕ ಕಾರಣಗಳಿವೆಯೆನ್ನಿಸುವುದಿಲ್ಲ. ಕಾಮಕ್ಕಾಗಿ ಕಾಮವಾಗುವುದು ಕೃತಿಗೆ ಲಭ್ಯವಾಗಿರುವ ಮಿತಿಯ ಪ್ರದರ್ಶನ. ಈ ಮಾತನ್ನು ರಾಮದಾಸರ ನಾಲ್ಕೈದು ಕತೆಗಳ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ. ಇನ್ನು ಕೆಲವು ಕತೆಗಳಲ್ಲಿ ಬರುವ ವಿಚಾರಶೀಲತೆ ವಸ್ತುವಿನೊಂದಿಗೆ ತಾದಾತ್ಮ್ಯ ಹೊಂದದೆ ಪ್ರತ್ಯೇಕವಾಗುಳಿಯುತ್ತದೆ, ಕತೆಯೊಳಗೆ ಸಂಬಂಧ ಸ್ಥಾಪಿಸಿದ ವೈಚಾರಿಕತೆ ಅನಾಥವಾಗುಳಿಯುವ ಅಪಾಯವೇ ಹೆಚ್ಚು. 'ಗೊಮ್ಮಟನ ಮೇಲೆ ಕೂತ ಕಾಗೆ' ಓದಿಸಿಕೊಳ್ಳುವ ಗುಣದೊಂದಿಗೆ ವಸ್ತುವಿನ ವಿಶ್ಲೇಷಣೆಯಲ್ಲೂ ಮಗ್ನವಾಗಿ ಪರವಾಗಿಲ್ಲವೆನ್ನಿಸುತ್ತದೆ. 'ಅಪರಾಧಿ ನಾನಲ್ಲ'ದ ಬಾಲಕ ಅನೇಕ ಒತ್ತಡಗಳಿಗೆ ಸಿಕ್ಕಿ ತೆಗೆದುಕೊಳ್ಳುವ ತೀರ್ಮಾನದ ದುರಂತ ವ್ಯಾಪಕಾರ್ಥ ಪಡೆದು ಕತೆ ಸಾರ್ಥಕವಾಗಿದೆ. ಈ ಎರಡು ಕತೆಗಳು ರಾಮದಾಸರ ಬಗ್ಗೆ ಕುತೂಹಲದಿಂದ ಕಾಯಲು ಆಧಾರವಾಗಬಹುದು.

ಮುಂಜವಿ ವ್ಯಾಸರಾಯ ಬಲ್ಲಾಳ ಅವರು ಬರೆದ ಕತೆಗಳಿಂದ ಆಯ್ದು ಪ್ರಕಟಿಸಿದ ಸಂಕಲನ. ಬಲ್ಲಾಳರು ಅನೇಕ ವರ್ಷಗಳಿಂದ ಕತೆಗಳನ್ನು ಬರೆಯುತ್ತಿದ್ದಾರೆ; ತಮ್ಮದೇ ಶೈಲಿಯನ್ನು ರೂಢಿಸಿ ಕೊಂಡಿದ್ದಾರೆ. ಈ ಸಂಗ್ರಹದಲ್ಲಿ ಅವರ ಪ್ರಾರಂಭದ ಬರವಣಿಗೆಯಿಂದ ಹಿಡಿದು ಇತ್ತೀಚಿನ ವರೆಗಿನ ಕತೆಗಳನ್ನು ಸೇರಿಸಿರುವುದರಿಂದ ವ್ಯಾಸರಾಯ ಬಲ್ಲಾಳರ ಬೆಳವಣಿಗೆಯ ಮಜಲುಗಳನ್ನು ಅರಿಯಲೂ ಇದು ಸಹಾಯಕ. ಇಲ್ಲಿನ ಕತೆಗಳು ಸಾಮಾನ್ಯವಾಗಿ ಮುಂಬಯಿ ಜೀವನದ ವಿವರಗಳಿಂದ ಕೂಡಿವೆ. ಹಾಗೆಂದಾಕ್ಷಣ ಎಲ್ಲವೂ ಮುಂಬಯಿಯ ವಿಶಿಷ್ಟತೆಯನ್ನು ಧ್ವನಿಸುತ್ತವೆ ಯೆಂದು ಅರ್ಥವಲ್ಲ; 'ವಿಷವರ್ತುಲ' 'ಅವಿವಾಹಿತೆ'-ಕತೆಗಳನ್ನು ನೋಡಿದರೆ ಇದು ಸ್ಪಷ್ಟ ವಾಗುತ್ತದೆ. 'ವಿಷವರ್ತುಲ'ದ ನಾಯಕ ಸಂಕಷ್ಟಗಳ ಸಂಸಾರಿ. ಒಳಗೆ ಪತ್ನಿ ಹಾಸಿಗೆ ಹಿಡಿದಿದ್ದಾಗ ಹೊರಗೆ ವಿಲಾಸದಲ್ಲಿ ಮೆರೆಯುವ ಆಕಾಂಕ್ಷೆ ಉಳ್ಳವ; ರುಕ್ಮಿಣಿಯೆಂಬ ಯುವತಿ ಇವನನ್ನು ವಂಚಿಸಿ ತನ್ನ ಕಡೆಯವರು ಹಣ ಕೀಳಲು ಅನುವು ಮಾಡಿಕೊಡುತ್ತಾಳೆ. 'ಅವಿವಾಹಿತೆ'ಯ ನಾಯಕಿಗೆ ತೊಸ್ಸಿನ ಗುರುತುಗಳಿವೆ; ಎಂದಮೇಲೆ ಮಧ್ಯಮವರ್ಗದ ಆಶಯಗಳ ಮೊತ್ತ

ಇಲ್ಲಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ! ಆಕೆಯನ್ನಾರೂ ಮದುವೆಯಾಗದಿದ್ದಾಗ ಪತ್ರಿಕೆಗೆ ಜಾಹಿರಾತು ಕೊಡುತ್ತಾರೆ. ಸ್ವಂತ ಅಣ್ಣನೇ, ತಂಗಿ ದುಡಿಯುವುದರಿಂದ ಮನೆಯಲ್ಲೇ ಇರಲೆಂಬ ಸ್ವಾರ್ಥಕ್ಕೆ ಬಿದ್ದು ಸುಳ್ಳು ಪತ್ರ ಸೃಷ್ಟಿಸಿ ಆಕೆಯನ್ನು ನಿರಾಶೆಗೆ ತಳ್ಳುತ್ತಾನೆ;— ಈ ಎರಡು ಕತೆಗಳು ಮುಂಬಯಿ ಜೀವನದಲ್ಲಿ ಮಾತ್ರ ನಡೆಯಬೇಕೆಂದೇನೂ ಇಲ್ಲ. ಲೇಖಕರಿಗೆ ಮುಂಬಯಿ ಪರಿಚಿತವಾದ್ದರಿಂದ ಕತೆಗೆ ವಿವರಗಳು ಅಲ್ಲಿಂದ ಬಂದಿರುವುದು ಸಹಜ. ಆದರೆ ಕೇಂದ್ರ ವಸ್ತು ಬೇರೆಡೆಗೂ ವ್ಯಾಪಿಸುವಂಥಾದ್ದು. ಬಲ್ಲಾಳರು ಸಾಮಾನ್ಯವಾಗಿ ಮಧ್ಯಮ ವರ್ಗದ ಆಸೆ, ಆಕಾಂಕ್ಷೆ, ನಿರಾಶೆ, ಅಸಹಾಯಕತೆಗಳನ್ನು ತಮ್ಮ ಕತೆಗಳಲ್ಲಿ ಹೇಳಿದ್ದಾರೆ. ಅವರ ಬರವಣಿಗೆಯ ಬೆಳವಣಿಗೆಯನ್ನು ಗುರುತಿಸಲು ಮಸಣದ ಶಾಂತಿ ಮತ್ತು ಕೊನೆಯ ಸೋಲು ಕತೆಗಳ ವಸ್ತು, ನಿರೂಪಣೆಗಳಲ್ಲಿರುವ ವ್ಯತ್ಯಾಸ ಸಹಾಯಕವಾಗಬಲ್ಲುದು. 'ಮಸಣದ ಶಾಂತಿ' ೧೯೪೭ರಲ್ಲಿ ಬರೆದ ಕತೆ; ಹಿಂದೂ-ಮುಸ್ಲಿಂ ಗಲಭೆಯ ಹಿನ್ನೆಲೆ ಉಳ್ಳ ಈ ಕತೆಯಲ್ಲಿ ಸಂಕಷ್ಟ ಸ್ಥಿತಿಗೆ ಒಳಗಾದ ಹಿಂದೂವಿನ ವ್ಯಥೆ ಹಬ್ಬಿದೆ. ಹಾಗೆಂದಾಕ್ಷಣ ಇದು ಮುಸ್ಲಿಂ ವಿರೋಧಿಯಲ್ಲ. ಮುಸ್ಲಿಮರು ನಡೆಸಿದ 'ಹತ್ಯಾಕಾಂಡ'ವನ್ನು ಚಿತ್ರಿಸುವಾಗಲೂ, ಹಿಂದೂವಿನ ಮಿತ್ರ ಮುಸ್ಲಿಮನೊಬ್ಬ ಇವರನ್ನು ರಕ್ಷಿಸಲು ಮನಸ್ಸು ಮಾಡಿದ್ದು ಸಹಬಾಳ್ವೆಯ ಸಂಕೇತ. ಇವರಿಬ್ಬರೂ ಮುಂಚೆ ಜಮೀನ್ದಾರೀ ವರ್ಗದ ವಿರುದ್ಧ ರೈತವರ್ಗವನ್ನು ಸಂಘಟಿಸಿದ ಶಕ್ತಿಗಳು. ಆದರೆ ಜಾತೀಯತೆ ಅದೆಷ್ಟು ಭಯಂಕರವಾಗಿ ಹಬ್ಬುತ್ತ ಬಂದಿತೆಂದರೆ ವರ್ಗ ಪ್ರಜ್ಞೆ ದೇಶದಲ್ಲೆಲ್ಲ ಗೌಣವಾಗಿ ಮಾನವೀಯ ಮೌಲ್ಯಗಳಿಗೆ ಧಕ್ಕೆ ಒದಗಿದ ನೋವಿನ ದನಿ ಕತೆಯಲ್ಲಿದೆ; (ಎಲ್ಲ ಮುಸ್ಲಿಮರೂ ಕೆಟ್ಟವರಲ್ಲವೆಂಬ ಭಾವನೆ ಲೇಖಕರಿಗಿದ್ದರೂ, ಮುಸ್ಲಿಮರ ದೌರ್ಜನ್ಯಕ್ಕೇ ಕತೆಯಲ್ಲಿ ಅಗ್ರ್ರತೆ). ಆದರೆ ಇಡೀ ಕತೆ ಮೆಲೊ ಡ್ರಮ್ಯಾಟಿಕ್ ಆಗಿ ಹಿಂದಿನ ಬರವಣಿಗೆಯ ರೀತಿಯನ್ನು ಜ್ಞಾಪಿಸುತ್ತದೆ. ಈ ರೀತಿ ಲೇಖಕರಿಗಿರುವ 'ಸಹಬಾಳ್ವೆಯ ಆಶಯ'ವನ್ನೂ ಮೀರಿ ಮುಸ್ಲಿಮ್ ವಿರೋಧಿ ದನಿ ಹೊಂದುವ ಸಾಧ್ಯತೆ ಹೆಚ್ಚು. ಇನ್ನೊಂದು ಕತೆ 'ಕೊನೆಯ ಸೋಲು' ಲೇಖಕರ ಪ್ರಬುದ್ಧತೆಗೆ ಸಾಕ್ಷಿ. ಖಾಸಗಿ ಆರ್ಥಿಕ ಶಕ್ತಿ ಮತ್ತು ಬ್ಯೂರೋಕ್ರಸಿ ತನ್ನೊಳಗಿನ ಕೆಳ ನೌಕರರ ದುಡಿಮೆಯ ಶಕ್ತಿಗೆ ಮಾತ್ರ ಬೆಲೆ ಕೊಡುವ ಅಮಾನವೀಯತೆಯ ಜೊತೆ ಜೊತೆಗೆ ಗಡಿಯಾರದ ಸಂಕೇತದ ಮೂಲಕ ಯಾಂತ್ರಿಕ ಬದುಕನ್ನು ಧ್ವನಿಸುವ ಕತೆ ಬಲ್ಲಾಳರ ಬರವಣಿಗೆಯ ಇನ್ನೊಂದು ದಿಕ್ಕನ್ನು ದರ್ಶನೀಕರಿಸಿದೆ. ಇಲ್ಲಿ ಬರುವ ಮಧ್ಯಮ ವರ್ಗದ ಮನೆಯ ಚಿತ್ರದಲ್ಲಿ ಫಳಫಳ ಹೊಳೆವ ಕಣ್ಣಿನ ಹೆಳವೆ ಆಶಾ, ಆಸೆ ಮತ್ತು ಅಸಹಾಯಕತೆ, ಕಾಂತಿ ಮತ್ತು ಕತ್ತಲುಗಳ ದ್ವಂದ್ವವನ್ನು ಧ್ವನಿಸುವ ಪಾತ್ರವಾಗುತ್ತಾಳೆ. ವ್ಯಕ್ತಿಯ ಮಾನಸಿಕ ಯಾತನೆ, ದುಡಿಮೆಯ ಶಕ್ತಿಗೆ ಮಾತ್ರ ಬೆಲೆ ಕೊಡುವ ನಿರ್ದಾಕ್ಷಿಣ್ಯ 'ದಣಿಗಳು', ಮಧ್ಯಮ ವರ್ಗದ ಆಶೋತ್ತರ ಅಸಹಾಯಕತೆ, ಯಾಂತ್ರಿಕ ಬದುಕು—ಇವೆಲ್ಲವನ್ನೂ ಒಟ್ಟಿಗೇ ಅಭಿವ್ಯಕ್ತಿಸಿದ ಸಾರ್ಥಕತೆ ಈ ಕತೆಗಿದೆ.

ಉಳಿದಂತೆ ಪ್ರೇಮ, ಸಾಂಸಾರಿಕ ಸಂಕಷ್ಟ, ವಂಚನೆ, ಕ್ರೌರ್ಯ, ಪರಿಸ್ಥಿತಿಯ ಹಿಡಿತ—ಹೀಗೆ ಬದುಕಿನ ಬೇರೆ ಬೇರೆ ಸ್ತರಗಳು ಈ ಸಂಗ್ರಹದಲ್ಲಿ ಸಿಗುತ್ತವೆ. ವ್ಯಾಸರಾಯ ಬಲ್ಲಾಳರ ಬರವಣಿಗೆಯ ಬೆಳವಣಿಗೆ ಮತ್ತು ಸ್ವತಃ ಅವರನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಇದು ಸ್ವಾಗತಾರ್ಹ ಸಂಕಲನ.

ನೆರೆ-ಹೊರೆ ರಾವಬಹದ್ದೂರರ ಹನ್ನೆರಡು ಕತೆಗಳ ಸಂಕಲನ. ಎಲ್ಲ ಕತೆಗಳಲ್ಲಿ ಗ್ರಾಮೀಣ ಜೀವನ ಹಾಸು ಹೊಕ್ಕಾಗಿದೆ. ಹಳ್ಳಿಯ ಬದುಕಿನಲ್ಲಿ ಬರುವ ದ್ವೇಷಾಸೂಯೆ, ಸಾಂಪ್ರದಾಯಿಕ ಆಚರಣೆಗಳಿಂದ ಪ್ರಚೋದಿತವಾಗುವ ಘರ್ಷಣೆಗಳು ವ್ಯಕ್ತಿಗಳ ಸಣ್ಣತನ—ಸಮಯ ಸಾಧಕ ಪ್ರವೃತ್ತಿ, ಈ ನಡುವೆ ಯಥಾಸ್ಥಿತಿಯನ್ನುಳಿಸುವ ಪ್ರಯತ್ನ, ಅದಕ್ಕೆ ಪೂರಕ ಧೋರಣೆ—ಇವೆಲ್ಲ 'ನೆರೆ-ಹೊರೆ'ಯ ಒಡಲಲ್ಲಿವೆ. ರಾವಬಹದ್ದೂರರಿಗೆ ಗ್ರಾಮ್ಯಪರಿಸರದ ಅನುಭವ ದಟ್ಟವಾಗಿದ್ದು ಅದರ ಮೇಲಿರುವ ಪ್ರಭುತ್ವ ಈ ಸಂಕಲನದಲ್ಲೂ ಕಾಣುತ್ತದೆ. ಪರಿಸರದ ವಿಷಮ ಸ್ಥಿತಿಯನ್ನು ಬಿಚ್ಚಿಡುತ್ತ 'ಬದುಕು ಕೂಡಿ ಬಾಳುವುದರಲ್ಲಿ ಧನ್ಯತೆಯನ್ನು ಹೊಂದುವದು' ಎಂಬ ನಂಬಿಕೆಗೆ

ಒಗ್ಗಿಸುತ್ತ ಹೋಗುವುದು ಇಲ್ಲಿನ ಬಹುಪಾಲು ಕತೆಗಳ ಜಾಡು-ಪಾಡು. ಇದು ಕೆಲವೊಮ್ಮೆ ಕತೆಯ ಆಶಯ, ಶಿಲ್ಪಗಳನ್ನು ಅತಿ ಸರಳೀಕರಿಸಲು ಸಹಕಾರಿಯಾಗುವುದುಂಟು. ಇದಕ್ಕೆ 'ದಬ್ಬಿದವ ಬಿದ್ದ, ಬಿದ್ದವ ಎದ್ದ' ಎಂಬ ಕತೆ ಒಳ್ಳೆಯ ಉದಾಹರಣೆಯಾಗಬಲ್ಲದು. ಹೆಣ್ಣಿನ ಕಡೆಯ ಪಾತ್ರಗಳನ್ನು ದೋಚುವುದು ಗಂಡಿನ ಕಡೆಯವರ ಹಕ್ಕೆಂಬ ಸಾಂಪ್ರದಾಯಿಕ ನಂಬಿಕೆಯೊಂದರ ಆಧಾರದಿಂದ ಹುಟ್ಟಿದ ಜಗಳದ ಸುತ್ತ ಈ ಕತೆಯ ಹಂದರವಿದೆ. ಇಂಥ ಸಮಸ್ಯೆ ಉದ್ಭವವಾದಾಗ 'ಕತೆಯ ನಿರೂಪಕ' ಹಿಂದೆಂದೊ ನಡೆದ ಇದೇ ಮಾದರಿಯ ಘರ್ಷಣೆಯನ್ನು, ಅದರ ದುಷ್ಪರಿಣಾಮಗಳೊಂದಿಗೆ ವಿವರಿಸಿದಾಗ, ಜಗಳಕ್ಕೆ ನಿಂತವರು ಶಾಂತಿ ಸಮಾಧಾನ ತಾಳಿ ಸಾಮರಸ್ಯದಿಂದ ನಡೆದುಕೊಳ್ಳುವಲ್ಲಿಗೆ ಕತೆ ಮುಕ್ತಾಯ. ಕಡೆಯಲ್ಲಿ ಬರುವ ಮನಃಪರಿವರ್ತನೆಗೆಂದೇ ಕತೆ ಕಟ್ಟುವ ಕಾರ್ಯ ನಡೆದಿದೆ; ಇದು ಕಥಾವಸ್ತುವಿನ ಸಾಧ್ಯತೆಗಳನ್ನು ಸಂಕುಚಿತಗೊಳಿಸಿದೆ. 'ಕೊಲೆಯ ಕುಲಿಮೆಯಲ್ಲಿ ಹೊಸ ಬದುಕಿನ ಸೆಲೆ'—ಕತೆಯಲ್ಲಿ ಬರುವ ಭೈರಾಗಿ, ಕತೆಯ ಕೇಂದ್ರ ಪಾತ್ರವಾಗುತ್ತ ಉಪದೇಶಕ ಸ್ಥಾನಮಾನ ಪಡೆಯುವುದರಿಂದ, ವಸ್ತು ಆದರ್ಶದ ಗಾಳಿಯಲ್ಲಿ ತೇಲಿ ತನ್ನ ಶಕ್ತಿಯನ್ನು ಕುಗ್ಗಿಸಿಕೊಂಡಿದೆ. ಈ ಕತೆಯೂ ಕಚ್ಚಾಟದಲ್ಲಿ ಸುಖವಿಲ್ಲವೆಂದು ಬೋಧಿಸುವ ಆಶಯ ಹೊಂದಿದೆ. 'ದ್ವೇಷದ ಜ್ವಾಲೆಗೆ ಸ್ನೇಹದ ಪನ್ನೀರು'—ಕತೆಯಲ್ಲಿ ಭಗವಂತ ಮಾಸ್ತರನ ಸಾವಿನೊಂದಿಗೆ ಹಳ್ಳಿಯ ಸಮಸ್ತರ ಸಣ್ಣತನ ಬಿಚ್ಚಿಕೊಳ್ಳತೊಡಗಿ, ದೊಡ್ಡ ರಾದ್ಧಾಂತವೇ ಆಗಿ, ಅದು ಪಡೆಯುವ ವ್ಯಾಪ್ತಿ ನಿರಾಯಾಸವಾಗಿ ಚಿತ್ರಿತವಾಗಿದೆ. ಕೂಡಿ ಬಾಳುವ ಸಾಮಾನ್ಯಾಶಯ ಇಲ್ಲೂ ಇದೆ. ರಾವ ಬಹದ್ದೂರರ ಆಶಯ, ಧೋರಣೆ ಏನೆಂಬುದು ಈ ಕತೆಗಳಲ್ಲಿ ಸ್ಪಷ್ಟ. ಜೀವನ ಸಮರಸತೆಯಲ್ಲಿ ಶ್ರದ್ಧೆಯಿರುವ ಅವರು ಅದನ್ನು ಕತೆಯಲ್ಲಿ ಕೆಲವೆಡೆ ತೀರಾ ಸ್ಪಷ್ಟಗೊಳಿಸುತ್ತಾರೆ. ಆಗ ಕತೆಯೊಳಗೆ ಸೃಷ್ಟಿಯಾಗುವ ವಿವಿಧ ಸ್ತರಗಳು ಸೊರಗುವಂತಾಗುತ್ತದೆ. ಕತೆಯಲ್ಲಿ ಹುಟ್ಟಿ ಅನುಭವಕ್ಕೆ ಬರಬೇಕಾದ ಮಾನವೀಯ ಮೌಲ್ಯ ತೇಲುವಾಗುವುದು ಹೆಚ್ಚು. ಅವರು ಆಯ್ದುಕೊಂಡ ವಸ್ತುವಿನಲ್ಲೆ ಬೇರೆ ತಿರುವಿಗೆ ತಕ್ಕ ವಿವರಗಳಿದ್ದರೂ (ಉದಾ: ರೈತರು 'ದಣಿ' ಗಳಿಗೆ ಸೇವೆ ಸಲ್ಲಿಸಲು ಸದಾ ಸಿದ್ಧವಾಗಿರುವುದು, ಒಮ್ಮೊಮ್ಮೆ ನ್ಯಾಯವೆನ್ನಿಸಿದ ಕಡೆ ಒಲವು ತೋರಿಸಿ ಯಜಮಾನರ ಪರವಾಗಿ ಕ್ರಿಯಾಶೀಲರಾಗದಿರುವುದು) ಆ ಕಡೆಗೆ ಹರಿದು ಹೊಸ ಆಯಾಮ ತೆರೆದು ಮೂಲಧೋರಣೆಯನ್ನೂ ಉಳಿಸಿಕೊಳ್ಳುವ ಸಂಕೀರ್ಣಸ್ಥಿತಿ ಕಡಿಮೆ. ಆದರೆ ನೇರವಾಗಿ ರಾವಬಹದ್ದೂರರ ದೃಷ್ಟಿಕೋನಕ್ಕೆ ಅಭಿವ್ಯಕ್ತಿಯ ಹಂದರವಾಗುವಲ್ಲಿ ಯಶಸ್ವಿಯಾಗಿವೆ. ಲೇಖಕ ತನ್ನ ಧೋರಣೆ ವಿವರಗಳನ್ನು ದುಡಿಸಿಕೊಂಡಿರುವುದು ಸುವ್ಯಕ್ತ. ಇದನ್ನು ಮೆಚ್ಚಬೇಕಾದರೂ ಅದೇ ಸಂಧರ್ಭದಲ್ಲಿ ಕತೆಯೊಂದು ಉತ್ತಮ ಕಲಾಕೃತಿಯ ಸಾಧ್ಯತೆಗಳನ್ನು ಮರೆಯದಿದ್ದರೆ ಮೇಲೆಂದು ಹೇಳಬಹುದು. 'ನಂಜು ಬಿಟ್ಟ ಹಾವು' ಕತೆಯು ಶಿಲ್ಪದ ದೃಷ್ಟಿಯಿಂದ ಉಳಿದ ಅನೇಕ ಕತೆಗಳಿಗಿಂತ ಬಿಗಿಯಾಗಿದೆ. ಮೂಢನಂಬಿಕೆ, ಸಣ್ಣತನ, ಕ್ರೌರ್ಯಗಳ ಸಂಕೀರ್ಣ ಮೊತ್ತವಾಗಿ ದೃಷ್ಟಿಕೋನ ಅಂತರ್ಜಾಲದಂತಾಗುವ ಯಶಸ್ಸು ಈ ಕತೆಗಿರುವುದಲ್ಲದೆ, ಸಂಗತವಾಗಿರುವುದೂ (relevant) ಮುಖ್ಯ.

ರಾವಬಹದ್ದೂರರ ಈ ಕತೆಗಳಲ್ಲಿ ಹಳ್ಳಿಯ ವಿಷಮ ಘಟ್ಟಗಳ ಚಿತ್ರಣವಿದ್ದರೂ ಅದನ್ನು ಸಮಾಜದ ಸ್ವರೂಪದಲ್ಲಿ ಪರೀಕ್ಷಿಸುವ ತೀಕ್ಷ್ಣತೆಯಿಲ್ಲ. ವಿಷಮತೆ ಕಳೆದು ಸಮರಸತೆ ಮೂಡಬೇಕೆಂಬ 'ಆದರ್ಶದ ಆಶಯ'ವಿದೆ. ಪರಿಸರದ ಪರಿವೀಕ್ಷಣೆಯಲ್ಲಿ ವರ್ಗಪ್ರಜ್ಞೆಯಿದ್ದಿದ್ದರೆ ಈ ಕಾಲದ ಮಹತ್ವದ ಕತೆಗಳಾಗುವ ಸಾಧ್ಯತೆಯಿತ್ತು. ಇಷ್ಟಾದರೂ ಈ ಕತೆಗಳು ಪ್ರಾದೇಶಿಕವಾದ ಸಾಂಸ್ಕೃತಿಕ ದಾಖಲೆಗಳಾಗಿ ನಮಗೆ ಮುಖ್ಯವಾಗುತ್ತವೆ.

ಹನ್ನೊಂದು ಹೊರಗಿನ ಕತೆಗಳು [ಮೂಲ : ವಿವಿಧ ಲೇಖಕರು, ಅನುವಾದ : ಸಿ.ಪಿ.ಕೆ.] ಹೆಸರೇ ಸೂಚಿಸುವಂತೆ ಕನ್ನಡಕ್ಕೆ ಅನುವಾದಗೊಂಡ ಹನ್ನೊಂದು ಕತೆಗಳ ಸಂಗ್ರಹ. ಇವು ಬೇರೆ ಬೇರೆ ಭಾಷೆಯ ಕತೆಗಳಾಗಿದ್ದು ಇಂಗ್ಲಿಷಿನ ಮುಖಾಂತರ ಕನ್ನಡಕ್ಕೆ ಅನುವಾದಗೊಂಡಿವೆ. ಅನುವಾದಕರು ಬೇರೆ ಬೇರೆ ಕಾಲದಲ್ಲಿ ತಮ್ಮ ಇಚ್ಛೆಗನುಗುಣವಾದ ಕತೆಗಳನ್ನು ಅನುವಾದಿಸಿದ್ದು ಇಲ್ಲಿ

ಒಂದೆಡೆ ಸೇರಿಸಲಾಗಿದೆ. ಆದ್ದರಿಂದ ಅನುವಾದಕರ ರುಚಿ, ವಿಚಾರಧಾರೆ, ಕತೆಗಳ ಆಯ್ಕೆಯಲ್ಲಿ ನಿರ್ಣಾಯಕ ಸಾಧನ, ಇವನ್ನು ಆಯಾ ಭಾಷೆಯ ಪ್ರಾತಿನಿಧಿಕ ಕತೆಗಳೆನ್ನುವಂತಿಲ್ಲ. 'ಸ್ವಲ್ಪ ಮಟ್ಟಿಗೆ ಪ್ರಾತಿನಿಧಿಕ ಸ್ವರೂಪವಿದೆ ಎನ್ನಬಹುದು' ಎಂಬ ಅನುವಾದಕರ ನುಡಿಯಲ್ಲೂ ಖಚಿತ ದನಿಯಿಲ್ಲ. ಆದರೆ ಅವರೇ ಹೇಳಿರುವಂತೆ ವೈವಿಧ್ಯವಂತೂ ಇದೆ. ನಿರಪರಾಧಿಯೊಬ್ಬ ಪರಿಸ್ಥಿತಿಯ ಒತ್ತಡದಿಂದ ವರ್ಷಾನುಗಟ್ಟಲೆ ಜೈಲಿನಲ್ಲಿದ್ದು ಸತ್ಯ ಹೊರಬೀಳುವ ವೇಳೆಗೆ ಮೃತ್ಯುವಶನಾಗುವ ಕತೆ 'ದೇವರಿಗೆ ಕಣ್ಣುಂಟು' (ಲೇ : ಟಾಲ್‌ಸ್ಟಾಯ್) ಕಾನೂನುಗಳ ಶುಷ್ಕ ಕಟ್ಟಳೆಯನ್ನು ಪ್ರಶ್ನಿಸುವ ಮಾನವೀಯ ದನಿಯಿಂದ ಕೂಡಿದೆ. [ಹೆಂಡತಿಯ (ಅಪಶಕುನದ) ಕನಸು ನಿಜವಾಗುವುದು ಕಾಕತಾಳೀಯವೆ ? ಎಂಬ ಪ್ರಶ್ನೆಯೂ ಇದೆ] 'ನೇಣಿನ ನೆರಳಲ್ಲಿ' – ನೇಣಿಗೇರುವ realityಯಲ್ಲಿ ನಿಂತು ಕನಸುಕಟ್ಟುವ ವ್ಯಕ್ತಿಯ ಸುತ್ತ ಹೆಣೆದ ಕತೆ. ಸಾವಿನ ಅನಿವಾರ್ಯತೆಯಲ್ಲೂ ಹಾದುಬರುವ ಕಲ್ಪನೆ, ಆಸೆ ಆಕಾಂಕ್ಷೆಗಳು ಬದುಕಿನ ನಿರಂತರ ಸೆಳೆತದ ಸಂಕೇತವಾಗಿ ಕತೆಗೆ ಶಕ್ತಿ ಬಂದಿದೆ. ಕುತೂಹಲ ಕೆರಳಿಸುವ 'ಒಂದು ಪ್ರಯೋಗ'ದಂಥ ಕತೆಯೂ ಇದೆ. ಹೀಗೆ ಬೇರೆ ಬೇರೆ ಮಟ್ಟದ ಕತೆಗಳು ಈ ಕೃತಿಯಲ್ಲಿವೆ. ಸಿ.ಪಿ.ಕೆ.ಯವರ ಅನುವಾದ ಪರವಾಗಿಲ್ಲ.

ಮರಾಠಿ ಸಣ್ಣಕತೆಗಳ ಕಣಜ [ಸಂ : ಅಚ್ಚುತ ಕೇಶವ ಭಾಗವತ, ಅನು : ಲ. ಜಿ. ಬೇಂದ್ರೆ] ಸಂಪಾದಕರು ಹೇಳಿರುವಂತೆ ಮರಾಠಿ ಸಾಹಿತ್ಯದ ಸಣ್ಣ ಕತೆ ಪ್ರಕಾರದ ಪ್ರಾತಿನಿಧಿಕ ಸಂಗ್ರಹ. ಇವೆಲ್ಲವೂ 'ಮರಾಠಿ ಸಾಹಿತ್ಯದಲ್ಲಿಯ ಶ್ರೇಷ್ಠ ಕತೆ'ಗಳೆಂದು ರಕ್ಷಾಪುಟದ ಬರಹ ಸಾರಿದೆ, ಆಯಾ ಕಾಲದ ಬರವಣಿಗೆಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡಾಗ ಸ್ವಲ್ಪ ಉತ್ತಮ ಕತೆಗಳೆಂದು ಪರಿಗಣಿಸಬಹುದೇ ಹೊರತು ಇವೆಲ್ಲಾ ಶ್ರೇಷ್ಠ ಕತೆಗಳೇ ಆಗಿವೆಯೆಂದು ಖಚಿತವಾಗಿ ಹೇಳುವುದು ಕಷ್ಟ. ರಕ್ಷಾಪುಟದ ಬರಹ ಹೇಳಿರುವಂತೆ ಮರಾಠಿ "ಲಘುಕತೆ ಬೆಳೆದು ಬಂದ ಬಗೆಯನ್ನು ಸೂಚಿಸುತ್ತವೆ" ಯೆಂಬ ಮಾತನ್ನು ಒಪ್ಪಬಹುದು. ಇಲ್ಲಿನ ಕತೆಗಳನ್ನು ಓದುತ್ತ ಹೋದಂತೆ ಅತಿ ಸಾಮಾನ್ಯವೆನ್ನಿಸುವ ವಸ್ತು – ಕತೆಗಳಿಂದ ಹಿಡಿದು ಮೆಚ್ಚುಗೆಗೆ ಅರ್ಹವಾದವೂ ಕಾಣಸಿಗುತ್ತವೆ. ಮರಾಠಿ ಕತೆಗಳ ಪ್ರಾತಿನಿಧಿಕ ಸ್ವರೂಪದ ಪರಿಚಯ ಈ ಮೂಲಕ ಆಗುತ್ತದೆ. ಸಾಂಸಾರಿಕ ಜಗಳದಂತಹ ಸಾಮಾನ್ಯ ಘಟನೆಗಳಿಂದ ಹಿಡಿದು ಆರ್ಥಿಕ ಸ್ಥಿತಿಯ ಮೂಲಕ ಸಮೂಹವನ್ನು ಅರ್ಥೈಸುವವರೆಗೂ ಪ್ರಯತ್ನ ಹಬ್ಬಿದೆ. ಅಂದರೆ ಹಳೆಗಾಳಿ ಮತ್ತು ಹೊಸಗಾಳಿಯವರೆಗಿನ ಕತೆಗಳು ಇಲ್ಲಿವೆ ಎನ್ನಬಹುದು. ಮೊದಲ ಕತೆ 'ಚುಣೇದ್ದ ಜಗಳ' ತೀರಾ ಸಾಮಾನ್ಯ ವಸ್ತುವಿನಿಂದ ಕೂಡಿದೆ. ಹೆಂಡತಿ ಗಂಡನೊಂದಿಗೆ ಜಗಳವಾಡಿಕೊಂಡು ಅಜ್ಜಿಯ ಮನೆಗೆ ಹೋಗುತ್ತಾಳೆ. ಅಲ್ಲಿ ಅಜ್ಜಿ ಮೊಮ್ಮಗಳು ಮಾಡಿದ್ದು ಸರಿಯಲ್ಲವೆಂದು ಹೇಳಿ ತಾನು ಹಿಂದೆ ಹೀಗೇ ನಡೆದುಕೊಂಡದ್ದರಿಂದಾದ ಅನಾಹುತವನ್ನು ಹೇಳಿದಾಗ ಮೊಮ್ಮಗಳ ಮನಸ್ಸು ಪರಿವರ್ತಿತವಾಗಿ ಗಂಡನ ಬಳಿ ಬರುತ್ತಾಳೆ - 'ಮುತ್ತಿನ ಬೆಂಡಣಲಿ'ಯ ನಾಯಕಿಗೆ - ಮುತ್ತಿಣಭರಣದ ಆಸೆ, ಗಂಡ ಅದನ್ನು ಏನೇನೋ ಕಷ್ಟ ಬಿದ್ದು ಕೆಲವು ದಿನಗಳ ನಂತರ ತಂದಾಗ 'ಈಗದು ಫ್ಯಾಷನ್ನೇ ಅಲ್ಲ' ಎಂದು ಹೆಂಡತಿ ಹೇಳುವಲ್ಲಿಗೆ ಕತೆ ಮುಕ್ತಾಯ. 'ನುಗ್ಗೀಕಾಯಿ'ಯಲ್ಲಿ ಮೂವರು ಅಣ್ಣ ತಮ್ಮಂದಿರು ಜಗಳವಾಡಿದ್ದಾಗ ತಂಗಿ ನುಗ್ಗೀಕಾಯಿ ಸಾರು ಮಾಡಿ ಎಲ್ಲರನ್ನೂ ಆಹ್ವಾನಿಸಿದಾಗ ಅವರು ಒಂದಾಗುತ್ತಾರೆ. 'ರಾಕ್ಷಸ' ಕತೆಯಲ್ಲಿ ಕೆಲಸ ಕಳೆದುಕೊಂಡ ವ್ಯಕ್ತಿಯೊಬ್ಬ ಸಂಸಾರವೆಂದರೆ ರಾಕ್ಷಸವೆನ್ನುತ್ತಾನೆ ; ಪ್ರೀತಿ ವಿಶ್ವಾಸದಿಂದ ಕರೆದುಕೊಂಡು ಹೋದ ಸ್ನೇಹಿತನ ಮನೆಯಲ್ಲಿ ಬೀಡು ಬಿಟ್ಟು ಉದ್ಯೋಗಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡದೆ ಇದ್ದಾಗ ಅವರಿಗೇ 'ರಾಕ್ಷಸ'ನಂತೆ ಕಾಣುತ್ತಾನೆ. (ಈ ಕತೆಗೆ ಪ್ಯಾರಿಸ್ಸಿನ 'ಕಲ್ಚರಲ್ ಸೊಸಾಯಿಟಿ ಆಫ್ ದಿ ವರ್ಲ್ಡ್' ಸಂಸ್ಥೆಯಿಂದ ಪ್ರಥಮ ಪಾರಿತೋಷಕ ಸಿಕ್ಕಿದೆಯಂತೆ) ...ಹೀಗೇ ಉದಾಹರಿಸಬಹುದು. ಇವೆಲ್ಲ ವಸ್ತು - ನಿರೂಪಣೆಯಲ್ಲಿ ವಿಶೇಷ ಹೊಸತನ್ನೇನೂ ಸಾಧಿಸದ ಕತೆಗಳು ಕೆಲವು ಮೊದಲ ಕತೆಗಳು ಸಾಮಾನ್ಯ ನಿರೂಪಣೆಯಿಂದ ಕೂಡಿದ್ದರೆ, ಇನ್ನು ಕೆಲವು ನವುರಾದ ನಿರೂಪಣೆಯಿಂದ ರಂಜಕವಾಗಿವೆ. ಮಧ್ಯಮ ವರ್ಗದ ಜನ ಜೀವನದ ಮುಖಗಳಲ್ಲದೆ 'ಕೆಳ ವರ್ಗದವರನ್ನು ಕುರಿತ ಒಂದೆರಡು ಕತೆಗಳಿವೆ. ಆದರೆ ಅವು ಆ ವರ್ಗದ ವ್ಯಕ್ತಿಯ

ಚಿತ್ರ ಕೊಡುವುದರಲ್ಲಿ ತೃಪ್ತವಾಗುತ್ತವೆ. (ಉದಾ :- ವಿಕ್ಟೋರಿಯಾಪಾಲಾ) ಪ್ರಪಂಚಕ್ಕೆ ಪದಾರ್ಪಣ 'ಮಾನವೀಯ ಮೌಲ್ಯಗಳನ್ನುಳ್ಳ ಕತೆ. ಬಂಡವಾಳ ಶಾಹಿ ಮತ್ತು ಕೂಲಿಗಾರರ ಅಂತರವನ್ನು ಚಿತ್ರಿಸುವ ಸಂದರ್ಭದಲ್ಲಿ ಮಗುವಿನ ಕಣ್ಣಿಗೆ ಕಂಡಂತೆ ಶೋಷಣೆಯ ಸ್ವರೂಪವನ್ನು ಚಿತ್ರಿಸುವ 'ತಂತ್ರ' ಫಲಿಸಿದೆ. ಮುಗ್ಧ ಮಗುವಿನಲ್ಲೇಳುವ ಪ್ರಶ್ನೆ, ದ್ವಂದ್ವ, ವ್ಯಥೆಗಳು ಕತೆಗೆ ಗಟ್ಟಿತನ ಒದಗಿಸುವ ಸಂವಹನೀಯಗೊಳಿಸುವ ಸಾಧನವಾಗುವ ಜೊತೆಗೆ ಮಾನವೀಯತೆಯ ಪ್ರೇರಕ ಸಾಮಗ್ರಿಯಾಗುವ ಸಾಧ್ಯತೆಯಿದೆ – 'ಮಾರುತಿ ರಾಯ' ಕತೆಯಲ್ಲಿ ಆಂಜನೇಯನ ಗುಡಿ ಹೊಕ್ಕು ಹೊರಬಂದ ಕೋತಿಯನ್ನು ಆಂಜನೇಯನೇ ಬಂದನೆಂದು ಭಾವಿಸಿದರು. ಅದು ಕಾಟ ಕೊಟ್ಟಾಗ ಕೊಲ್ಲುವ ಹುಡುಗರು ಅನಂತರ ರಾಮ ಭಜನೆ ಸಮೇತ ಮಣ್ಣುಮಾಡುತ್ತಾರೆ. ಹಿರಿಯನೊಬ್ಬ (ನಾನಾ) ಸ್ಮಾರಕ ಕಟ್ಟುತ್ತಾನೆ. ಕತೆಯ ಶೈಲಿ ವಸ್ತು ಸ್ಥಿತಿಯನ್ನು ತಿಳಿಸುತ್ತಲೇ ವ್ಯಂಗ್ಯವಾಗಿದೆ.

ಹೀಗೆ ನಾನಾ ವಸ್ತು - ಶೈಲಿಗಳಿಂದ ಮಾಡಿದ ಈ ಸಂಕಲನ ಮರಾಠಿ ಸಣ್ಣ ಕತೆಯ ಸ್ವರೂಪ ವನ್ನು ತಿಳಿಯಲು ಸಹಾಯಕವಾಗಿದೆ. ಪ್ರಾತಿನಿಧಿಕ ಸಂಗ್ರಹದಲ್ಲಿ ಎಲ್ಲ ಕತೆಗಳು ಒಂದೇ ಮಟ್ಟದ ವಿರಬೇಕೆಂದು ನಿರೀಕ್ಷಿಸಲಾಗದು.

ಒಂದು ಭಾಷೆಯ ಸಮಗ್ರ ಶಕ್ತಿಯನ್ನು ಅನುವಾದದಲ್ಲಿ ಹಿಡಿಯುವುದು ಕಷ್ಟವಾದರೂ ಕೆಲವು ಸಾಮಾನ್ಯ ದೋಷಗಳಿಂದ ಮುಕ್ತವಾಗುವುದು ಅಸಾಧ್ಯವೇನಲ್ಲವೆಂದು ಹೇಳಬೇಕಾಗಿದೆ. ಕೆಲವು ಕಡೆ ತದ್ರೂಪ್ ಅನುವಾದವಾಗಿರುವುದರಿಂದಲೇನೋ ಕೃತಕತೆ ತಲೆಹಾಕಿದೆ.

ಉದಾ :- (೧) ಮಂಜರೀ ನೀನು ಲಕ್ಷ್ಯದಲ್ಲಿ ತೆಗೆದುಕೊಳ್ಳಲೊಲ್ಲಿ ಏನೆಂದರೆ ನಿನ್ನ ಮದುವೆ ಯಾಗಿದೆ ಎಂಬುದನ್ನು (೨) ಸುಖರೂಪವಾಗಿ ಹೋಗು. (೩) ಇದರಲ್ಲಿ ಗಂಡನೇ ಮಾತ್ರ ಸರ್ವಸ್ವೀ ತನ್ನದೇ ಆದ ಹೋಳಿಗೆಯ ಮೇಲೆ ತುಪ್ಪ ಸುರುವಿಕೊಳ್ಳುತ್ತಾನೆ - ಇತ್ಯಾದಿ.

ಕನ್ನಡ ಜಾಯಮಾನಕ್ಕೆ ಒಗ್ಗುವ ಆಡುಮಾತು, ಗ್ರಾಂಥಿಕ ಶೈಲಿಗಳು ಗಟ್ಟಿಗೊಳ್ಳದ ಅನೇಕ ನಿದರ್ಶನಗಳು ಸಿಗುತ್ತವೆ.

ಕಾದಂಬರಿ

ಎಸ್. ವಿ. ವಿಮಲ

ಈ ವರ್ಷ ಪ್ರಕಟವಾಗಿ ನಮ್ಮ ಗಮನಕ್ಕೆ ಬಂದ ಸುಮಾರು ಎಪ್ಪತ್ತು ಕಾದಂಬರಿಗಳಲ್ಲಿ ಸಾಧಾರಣ ದರ್ಜೆಯ ಕಾದಂಬರಿಗಳು ಅಧಿಕ ಸಂಖ್ಯೆಯಲ್ಲಿವೆ. ಅಂದರೆ ಎಂದಿನಂತೆ ಈ ವರ್ಷವೂ ಈ ಸಾಹಿತ್ಯ ಪ್ರಕಾರದಲ್ಲಿ ಕಾಳಿಗಿಂತ ಜೊಳ್ಳೇ ಜಾಸ್ತಿ ಎಂದು ಇಲ್ಲಿನ ಸಮೀಕ್ಷೆಯಿಂದ ಗೋಚರವಾಗುತ್ತದೆ. ಆದರೆ ಓದುಗರ ಸುದೈವದಿಂದ ಕೇವಲ ಬೆರಳೆಣಿಕೆಯ ಕೃತಿಗಳು ಮಾತ್ರ ನಿಜವಾದ ಅರ್ಥದಲ್ಲಿ ಕಾದಂಬರಿ ಎನಿಸಿಕೊಂಡಿರುವುದು ಸಮಾಧಾನ ತರುವ ಸಂಗತಿ.

ನಮ್ಮ ಸಮೀಕ್ಷೆಗೆ ಬಂದ ಈ ಸಲದ ಕಾದಂಬರಿಗಳಲ್ಲಿ ಸಾಮಾಜಿಕ ಕಾದಂಬರಿಗಳ ಸ್ಥಾನ ಹಿರಿದು. ಸು. ಐವತ್ತೆಂಟು ಸಾಮಾಜಿಕ ಕಾದಂಬರಿಗಳಿವೆ. ಉಳಿದವು ಐತಿಹಾಸಿಕ, ಅನುವಾದಿತ, ಪತ್ತೇದಾರಿ ಹಾಗೂ ಪೌರಾಣಿಕ ಕಾದಂಬರಿಗಳು. ಈ ಬಗೆಯ ಕಾದಂಬರಿಗಳು ಮಿತ ಸಂಖ್ಯೆಯಲ್ಲಿವೆ.

ಎಚ್. ಎಲ್. ನಾಗೇಗೌಡರ ಸೊನ್ನೆಯಿಂದ ಸೊನ್ನೆಗೆ, ಗ್ರಾಮೀಣ ಬದುಕಿನ ಒಂದು ಮುಖವನ್ನು ಜೀವಂತವಾಗಿ ಚಿತ್ರಿಸಿರುವ ಕಾದಂಬರಿ. ಇದು ಇವರ ದೊಡ್ಡ ಮನೆ ಕಾದಂಬರಿಯನ್ನು ಬಹುಮಟ್ಟಿಗೆ ಹೋಲುತ್ತದೆ. ಮಂಡ್ಯ ತಾಲ್ಲೂಕಿನ ಬಯಲು ಸೀಮೆಯ ಪರಿಸರದ ಗ್ರಾಮೀಣ ಭಾಷೆಯ ಸೊಗಡನ್ನು ಪಾತ್ರಗಳ ಮೂಲಕ ಸೊಗಸಾಗಿ ಹೊರಹೊಮ್ಮಿಸಿದ್ದಾರೆ. ಅಷ್ಟೇ ಅಲ್ಲದೆ ಅಲ್ಲಿ ಬಳಸುವ ನುಡಿಗಟ್ಟುಗಳು, ಗಾದೆಯ ಮಾತುಗಳು ಕಾದಂಬರಿಯ ತುಂಬ ತುಂಬಿಕೊಂಡಿವೆ.

ಸೊನ್ನೆಯಿಂದ ಆರಂಭವಾದ ಚನ್ನನ ಬಾಳು ಕ್ರಮೇಣ ವೈಭವದ ಶ್ರೇಣಿಯನ್ನೇರಿ ಮತ್ತೆ ಸೊನ್ನೆಯಿಂದಲೇ ಮುಕ್ತಾಯವಾಯಿತು. ಹೀಗಾಗಿ ಈ ಕಥೆಗೆ ಇಟ್ಟಿರುವ ಶೀರ್ಷಿಕೆ ಅರ್ಥವತ್ತಾಗಿದೆ. ನಿರ್ಗತಿಕನೂ, ತಬ್ಬಲಿಯೂ ಆದ ಚನ್ನನೆಂಬ ಹುಡುಗನು ಉದಾರ ಹೃದಯಿ ಮಲ್ಲೇಗೌಡರ ಆಶ್ರಯ ಪಡೆದು ಒಬ್ಬ ಮನುಷ್ಯನೆನಿಸಿಕೊಳ್ಳುತ್ತಾನೆ. ಸಂಸಾರಿಯಾಗುತ್ತಾನೆ. ಮೈಸೂರಿನಿಂದ ತನ್ನ ಹಳ್ಳಿಗೆ ಸಾಮಾನುಗಳನ್ನು ತರಲು ಗಾಡಿ ಹೊಡೆಯುವುದರಿಂದ ಅವನ ಕಾಯಕ ಪ್ರಾರಂಭವಾಗುತ್ತದೆ. ಅವನಿಗೆ ಲಕ್ಷ್ಮೀ ಕಟಾಕ್ಷವಾದಮೇಲೆ ಚನ್ನೇಗೌಡನೆಂದು ಪ್ರಸಿದ್ಧನಾಗುತ್ತಾನೆ. ಗ್ರಾಮದಲ್ಲಿ ಭಾರಿ ಕುಳವಾಗುತ್ತಾನೆ. ಮೈಲಾರ ಲಿಂಗನ ಗುಡಿ ಕಟ್ಟಿಸಲು ಚನ್ನನ ತಾತನ ಮನೆಯಲ್ಲಿಟ್ಟಿದ್ದ ಹೊನ್ನಿನ ಗಂಟನ್ನು ಚನ್ನನ ತಾತ ಅಪಹರಿಸಿರುತ್ತಾನೆ. ತಾತ ಮಾಡಿದ ಪಾಪದ ಪ್ರಾಯಶ್ಚಿತ್ತಕ್ಕಾಗಿ ಮೊಮ್ಮಗ ಮೈಲಾರ ಲಿಂಗನ ಗುಡಿ ಕಟ್ಟಿಸಿ ಕುಲದ ಪಾಪವನ್ನೂ ತೊಳೆಯುತ್ತಾನೆ. ಕಡೆಗೆ ತಾನೂ ದುಷ್ಟ ಸಹವಾಸಕ್ಕೆ ಬಿದ್ದು ತನ್ನದೆಲ್ಲವನ್ನೂ ಕಳೆದುಕೊಂಡು ಈ ಜೀವನಕ್ಕೆ ಬೇಸತ್ತು ಭಿಕ್ಷಕ ವೃತ್ತಿಯನ್ನವಲಂಬಿಸಿ ತಾನು ಹುಟ್ಟಿದ ಗ್ರಾಮದಿಂದ ಬಹುದೂರ ಹೊರಟು ಹೋಗುತ್ತಾನೆ. ಇದರಿಂದಾಗಿ ಬಯಲು ಸೀಮೆಯ ಗ್ರಾಮಾಂತರ ಪ್ರದೇಶದಲ್ಲಿ ಈಗಲೂ ಯಾರನ್ನಾದರೂ ಬಯ್ಯಬೇಕಾದರೆ, 'ನಿನ್ನ ಮನೆ ಧೂಪದ ಚನ್ನನ ಮನೆಯಂತಾಗ ! ನಿನ್ನ' ಮನೆ ಧೂಪದ ಚನ್ನನ ಮನೆಯಂತೆ ಗುಡಿಸಿ ಗುಂಡಾಂತರಾಗ' ಎಂಬ ಮಾತುಗಳಿಂದ ಬಯ್ಯುತ್ತಾರೆಂದು ಲೇಖಕರು ತಿಳಿಸಿದ್ದಾರೆ. ಈ ಮಾತಿನ ಹಿನ್ನೆಲೆಯಲ್ಲಿ ಅಡಗಿದ್ದ ಚನ್ನನೆಂಬ ವ್ಯಕ್ತಿಯ ಕಥೆಯ ವ್ಯಥೆಯನ್ನು ಲೇಖಕರು ಚಿತ್ರಿಸಿದ್ದಾರೆ. ಕತೆಯ ಕಾಲ ಒಂದು ಶತಮಾನದ ಹಿಂದಿನದು. ಅಂದಿನ ಗ್ರಾಮೀಣ ಬದುಕನ್ನು ಚಿತ್ರಿಸುವಲ್ಲಿ ಲೇಖಕರು ಬಹುಮಟ್ಟಿಗೆ ಸಫಲರಾಗಿದ್ದಾರೆ.

ನಾಗೇಗೌಡರ ಬರವಣಿಗೆ, ಅಲ್ಲಲ್ಲಿ ಸುದೀರ್ಘ ವಿವರಗಳಿಗೆ ಹೋಗುತ್ತದೆ. ಮಾತಿನಲ್ಲಿ ಆಡು ನುಡಿಯ ಸೊಗಡಿದೆ. ಪಾತ್ರಗಳು ಲವಲವಿಕೆಯಿಂದ ಕೂಡಿವೆ. ಆದರೆ ಮಧ್ಯೆ ಮಧ್ಯೆ ಅನೇಕ ಸಾರಿ ಪ್ರತ್ಯಕ್ಷವಾಗುವ ನುಡಿಗಟ್ಟುಗಳು, ಗಾದೆ ಮಾತುಗಳು, ಹಾಗೂ ಸರ್ವಜ್ಞ ಸಂಗಣ್ಣನ ವಚನಗಳು—ಇವುಗಳ ಬಳಕೆ ಮಿತವಾಗಿದ್ದಿದ್ದರೆ ಈ ಕಾದಂಬರಿಯು ಈಗಿರುವುದಕ್ಕಿಂತಲೂ ಹಿತವಾಗಿರುತ್ತಿತ್ತು. ಗ್ರಾಮೀಣ ಶಬ್ದಗಳಿಗೆ ಕೊಟ್ಟಿರುವ ಟಿಪ್ಪಣಿ ತುಂಬಾ ಉಪಯುಕ್ತವಾಗಿದೆ.

ಸ್ವತಃ ರಾಜಕಾರಿಣಿಯಾದ ಕಡಿದಾಳ್ ಮಂಜಪ್ಪನವರಿಂದ ರಚಿತವಾದ ಕ್ರಾಂತಿಕೂಟ ಕುತೂಹಲ ಕೆರಳಿಸುವ ಒಂದು ರಾಜಕೀಯ ಕಾದಂಬರಿ. ರಾಜಕಾರಿಣಿಯ ಅನುಭವದ ಮೂಸೆ ಯಿಂದ ಮೂಡಿ ಬಂದಿರುವ ಈ ಕೃತಿ ಸ್ವೈಜತೆಯ ಸತ್ವವನ್ನು ಕಾಯ್ದುಕೊಂಡಿದೆ. ಕಾಲ್ಪನಿಕವಾದ ಎರಡು ಕ್ರಾಂತಿಕಾರಿ ಪಕ್ಷಗಳ ನಡುವೆ ನಡೆಯುವ ನಿರಂತರ ಪೈಪೋಟಿಯ ಹೋರಾಟದ ಕತೆ ಇದರ ವಸ್ತು. 'ನಮ್ಮವರೇ ನಮ್ಮ ಶತ್ರುಗಳು' – ಎಂದು ಇತಿಹಾಸ ನಮಗೆ ಕಲಿಸಿದ ಪಾಠವನ್ನು ನಾವು ಎಂದಿಗೂ ಮರೆಯುವಂತಿಲ್ಲ. ಕ್ರಾಂತಿ ಸೇನೆಯನ್ನು ಕಟ್ಟಿಕೊಂಡು ನಿರರ್ಥಕ ಕೊಲೆ, ಸುಲಿಗೆ, ದರೋಡೆಗಳನ್ನು ತನ್ನ ಸ್ವಂತ ಸುಖಕ್ಕಾಗಿ, ಸ್ವಾರ್ಥಕ್ಕಾಗಿ, ವೈಭವಕ್ಕಾಗಿ ನಡೆಸುವ ಶಂಕರನ ಕತೆ ಒಂದು ತುದಿಯಾದರೆ, ಇದಕ್ಕೆ ಹೇಸಿ ಅವನ ಸೇನೆಯನ್ನು ಬಿಟ್ಟು ಇದರ ವಿರುದ್ಧವಾಗಿ ಕ್ರಾಂತಿ ಕೂಟವನ್ನು ಕಟ್ಟಿದ ಚಂದ್ರಹಾಸನ ಕತೆ ಮತ್ತೊಂದು ತುದಿಯಾಗುತ್ತದೆ. ಈ ಇಬ್ಬರು ಕ್ರಾಂತಿ ವೀರರ ಮಧ್ಯೆ ಆಡಳಿತ ಕಾಂಗ್ರೆಸ್‌ನಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಆದರ್ಶ ಭೂಮಾಲಿಕ ಗೋಪಾಲನೆಂಬ ಸದ್ಗುಣಿಯೂ ಬರುತ್ತಾನೆ.

ಹೀಗೆ ಈ ಕಾದಂಬರಿಯಲ್ಲಿ ದೇಶದ ಭವಿತವ್ಯ, ಆಗು ಹೋಗುಗಳ–ಬಗೆಗೆ ಲೇಖಕರು ಸಾಕಷ್ಟು ಪರಿಶೀಲಿಸಿದ್ದಾರೆ. ಇದರಿಂದಾಗಿ ಓದುಗರು ದೇಶದ ಭವಿತವ್ಯವನ್ನು ಕುರಿತು ಆಳವಾದ ವಿಚಾರ ಮಾಡಲು ಪ್ರೇರಿತರಾಗುತ್ತಾರೆಂದು ಇವರು ಆಶಿಸಿದ್ದಾರೆ.

ಮೇಲು ನೋಟಕ್ಕೆ ಈ ಕಾದಂಬರಿಯಲ್ಲಿ ಕೇವಲ ರಾಜಕೀಯ ಪ್ರಧಾನವಾಗಿ ಕಂಡು ಬಂದರೂ, ಅದರೊಂದಿಗೆ ಸಾಮಾಜಿಕ, ಧಾರ್ಮಿಕ ಮತ್ತು ಇತರ ವಿಷಯಗಳೂ ಸಾಕಷ್ಟು ಬಂದಿವೆ. ನಾಯಕ, ನಾಯಕಿಯರ ಪ್ರೇಮ ಪ್ರಕರಣ, ವರದಕ್ಷಿಣೆಯ ಅನಿಷ್ಟ ಪದ್ಧತಿ, ಲಂಚ, ಭ್ರಷ್ಟಾಚಾರ- ಇವೆಲ್ಲವೂ ಇಲ್ಲಿವೆ. ಈ ಕಾದಂಬರಿಯಲ್ಲಿ ಮೂರು ಸಂಸಾರಗಳ ಚಿತ್ರಣವಿದೆ. ಒಂದು ಗೌರಿ–ಚಂದ್ರಹಾಸರ ಆದರ್ಶ ಸಂಸಾರ ; ಚಂಚಲೆ–ಗೋಪಾಲರ ಸಾಧಾರಣ ಹಾಗೂ ನೆಮ್ಮದಿಯ ಸಂಸಾರ ; ಕೃಷ್ಣಕಾಂತ–ಕಮಲೆಯರ ವಿರುಪೇರಿನ ಸಂಸಾರ. ಅಂತರ ಜಾತಿಯ ವಿವಾಹದ ಸಮರ್ಥನೆಯೂ ಇದೆ. ಹೀಗಾಗಿ ಈ ಕಾದಂಬರಿ ವಿವಿಧೋದ್ದೇಶವನ್ನು ಹೊಂದಿದೆ.

ಪುರುಷೋತ್ತಮಬಾಬುಗಳ ದಿವ್ಯ ವ್ಯಕ್ತಿತ್ವ ಎಂದೆಂದಿಗೂ ನೆನಪಿನಲ್ಲುಳಿಯುವಂತಹುದು. ಚಂಚಲೆಯದು ದಿಟ್ಟ ಸಾಹಸ ಪ್ರವೃತ್ತಿ. ಸಹಾಯಕ ಪಾತ್ರ ಕಿಶೋರ್‌ನದು ಚೊಕ್ಕವಾದ ಪಾತ್ರ. ಕೃಷ್ಣಕಾಂತರದು ಓದುಗರ ಸಹಾನುಭೂತಿಗೆ ತಕ್ಕುದಾದ ಪಾತ್ರ. ಇಲ್ಲಿನ ಸಂಭಾಷಣೆಯಲ್ಲಿ ಚುರುಕು ತನವಿದೆ. ಕೆಲವು ಪಾತ್ರಗಳ ಔಚಿತ್ಯಪೂರ್ಣವಾದ ಮಾತುಗಳು ಪ್ರಭಾವಕಾರಿಯಾಗಿವೆ. ಉದಾ :

ದೇಶದಲ್ಲಿ ನಿರಪರಾಧಿಗಳ ಕೊಲೆ, ಸುಲಿಗೆ, ದರೋಡೆ ಹಾಗೂ ಅಮಾನುಷ ಹಿಂಸಾಕೃತ್ಯಗಳು ನಡೆಯುತ್ತಿದ್ದರೂ ಸರ್ಕಾರ ಅದನ್ನು ತಡೆಗಟ್ಟುವಷ್ಟು ಸಮರ್ಥವಾಗಿಲ್ಲ. ಸರ್ಕಾರ ಅರ್ಧ ಸತ್ತು ಹೋಗಿದೆ; ಸರ್ಕಾರ ಜನರನ್ನು ಕಾಪಾಡೋ ಕಾಲ ಹೋಗಿದೆ (ಪು. ೮೦). ಕ್ರಾಂತಿಯಾದರೂ ಶಂಕರನಂತಹವರೇ ಅಧಿಕಾರಕ್ಕೆ ಬರುತ್ತಾರೆ (ಪು. ೧೨೭). ಇತ್ಯಾದಿ.

ಶಂಕರನನ್ನು ಚಂಚಲೆ ಕೊಲ್ಲುವ ಕಡೆಯ ಸನ್ನಿವೇಶ ಮತ್ತು ಅವಳು ಆತ್ಮಹತ್ಯೆ ಮಾಡಿ ಕೊಳ್ಳುವುದು -ಇಲ್ಲೆಲ್ಲಾ ಸಿನಿಮಾ ಘಟನೆಗಳು ನೆನಪಿಗೆ ಬರುತ್ತವೆ. ಕ್ರಾಂತಿಸೇನೆಯವರು ನಿರಪ

ರಾಧಿಗಳನ್ನು ಕೊಲ್ಲುವ ಸನ್ನಿವೇಶಗಳ ಸೃಷ್ಟಿ ರೋಮಾಂಚಕಾರಿಯಾಗಿ, ಭೀಕರವಾಗಿವೆ. ಒಟ್ಟಿನಲ್ಲಿ ಒಂದು ವಿಶಿಷ್ಟ ಅನುಭವವನ್ನು ತಂದುಕೊಡುವ ಈ ಕಾದಂಬರಿ ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ. ಜನತೆಯಲ್ಲಿ ವೈಚಾರಿಕ ಕ್ರಾಂತಿಯಾಗಬೇಕೆಂಬ ಲೇಖಕರ ಉದ್ದೇಶ ಫಲಕಾರಿಯಾಗಿದೆ ಎನ್ನಬಹುದು.

ಸುಂದರನಾಡಕರ್ಣಿಯವರ ಗೋಡೆಗಳು ಖಾಸಗೀ ಕಾಲೇಜಿನ ಆಡಳಿತದಲ್ಲಿನ ಹುಳುಕುಗಳನ್ನು ಹೆಕ್ಕುತ್ತಾ ಹೋಗಿರುವ ಕಾದಂಬರಿ. ಸಹೋದ್ಯೋಗಿ ಅಧ್ಯಾಪಕರುಗಳ ಸಾಮಿಾಲುತನ, ಆಡಳಿತ ವರ್ಗದವರ ಕೈಗೊಂಬೆಯಾದ ಪ್ರಿನ್ಸಿಪಾಲರ ಧೋರಣೆ, ಕಾಲೇಜಿನ ಸಂಚಾಲಕ ಮಂಡಳಿಯವರ ಪ್ರಚೋದನೆ, ಪರೀಕ್ಷೆ ಸಮಯದಲ್ಲಿ ನಡೆಯುವ ಭ್ರಷ್ಟಾಚಾರ, ವಿದ್ಯಾರ್ಥಿಗಳ ಬುದ್ಧಿಮಟ್ಟ ಮತ್ತು 'ಚಮಚಾಗಿರಿ'–ಇತ್ಯಾದಿಗಳ ವಿರುದ್ಧ ಕುರಿತ ಒಬ್ಬ ಸೂಕ್ಷ್ಮ ಸಂವೇದನಾಶೀಲ ಅಧ್ಯಾಪಕನ ಪ್ರತಿಕ್ರಿಯೆ ಇಲ್ಲಿದೆ. ಕಾಲೇಜು ಸೆಕ್ರೆಟರಿಯ ತಂಗಿಯ ಮಗನಿಗೆ ಪರೀಕ್ಷೆಯಲ್ಲಿ ಪಾಸಾಗುವಷ್ಟು ಮಾರ್ಕ್ಸ್ ತಂಬಲು ನಿರಾಕರಿಸಿದ್ದರಿಂದ, ಕಾಲೇಜಿನ ವಯ್ಯಾರಿ ಹುಡುಗಿಗೆ ಪರೀಕ್ಷೆಗೆ ಮೊದಲೇ ಪ್ರಶ್ನೆಯನ್ನು ಹೇಳಲು ಒಪ್ಪದ್ದರಿಂದ ಇನ್ನೂ ಹಲವಾರು ಕಾರಣಗಳಿಂದ ಇಲ್ಲಿನ ನಾಯಕ (ಅಧ್ಯಾಪಕ) ಆ ಕಾಲೇಜಿನ ಕೆಲಸವನ್ನು ಕಳೆದುಕೊಳ್ಳುತ್ತಾನೆ. ಕಡೆಗೆ ಸಂಸಾರ ತಾಪತ್ರಯ, ಜೀವನ ನಿರ್ವಹಣೆಗಾಗಿ ಅದಕ್ಕಿಂತ ಕೆಳಮಟ್ಟದ ಕೊಂಪೆಯಲ್ಲಿರುವ ಕೆಳದರ್ಜೆಯ ಮತ್ತೊಂದು ಖಾಸಗೀ ಕಾಲೇಜಿಗೆ ಅಧ್ಯಾಪಕನಾಗಿ ಸೇರುತ್ತಾನೆ. ಆದರೆ 'ನಾನು' ಎಂಬುದನ್ನು ಮಾತ್ರ ಹಿಂದೆಯೇ ಬಿಟ್ಟು ಹೋಗುತ್ತಾನೆ. ಕಥಾವಸ್ತುವಿನ ನಿರ್ವಹಣೆ ಚೆನ್ನಾಗಿದೆ. ತಂತ್ರ ಹಾಗೂ ಶೈಲಿಯ ಹೊಸತನವನ್ನು ಹೊತ್ತು ಬಂದ ಇವರ ಮೋಹಿತರು ಕಾದಂಬರಿಯಂತೆಯೇ ಇದೂ ಓದುಗರ ಮೆಚ್ಚುಗೆಗೆ ಪಾತ್ರವಾಗುತ್ತದೆ. ನಾಯಕನ ಯೋಚನಾತರಂಗದ ಮೂಲಕ ಹರಿಯುವ ಕತೆಯ ತಂತ್ರ ಓದುಗರ ಆಸಕ್ತಿಯನ್ನುಳಿಸಿಕೊಳ್ಳುತ್ತದೆ. ಇಲ್ಲಿನ ಭಾಷೆ ಸರಳವಾಗಿದೆ. ಕೆಲವೇ ಮಾತುಗಳಲ್ಲಿ, ಸನ್ನಿವೇಶಗಳಲ್ಲಿ ಇಂದು ತಾಂಡವಾಡುತ್ತಿರುವ ಭ್ರಷ್ಟಾಚಾರ, ಲಂಚ ಕೋರತನ, ಅಕ್ರಮ, ಅನ್ಯಾಯ–ಇತ್ಯಾದಿಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ತನ್ನ ಮತ್ತು ಇಲ್ಲಿ ಬರುವ ವ್ಯಕ್ತಿಗಳ ನಡುವೆ ಅಡ್ಡವಾಗಿ ನಿಂತಿರುವ ಗೋಡೆಯನ್ನು ಸರಿಸುವುದು ಅಸಾಧ್ಯವೆನಿಸಿದಾಗ ತನ್ನತನವನ್ನು ಬಿಟ್ಟು ಜೀವನ ನಿರ್ವಹಣೆಗಾಗಿ ಪುನಃ ಅಲ್ಲಿಗೇ ಹೋಗಬೇಕಾಗಿ ಬಂದುದರ ನಾಯಕನ ಪರಿಸ್ಥಿತಿಗೆ ಅನುತಾಪವೂ ಆಗುತ್ತದೆ. ಒಟ್ಟಿನಲ್ಲಿ ಈ ಚಿಕ್ಕ ಕಾದಂಬರಿ (೧೫೫ ಪುಟಗಳು) ಉಂಟುಮಾಡುವ ಪರಿಣಾಮ ವಿಶೇಷರೀತಿಯದೆಂದು ಹೇಳಬಹುದು.

ಚಂದ್ರಕಾಂತ ಕುಸನೂರರ ಯಾತನಾ ಶಿಬಿರ ಎಂಬ ಕಾದಂಬರಿ ಜಲಜಾಕ್ಷಿ ನದಿಯ ದಡದಲ್ಲಿ ಶಾಂತವಾಗಿದ್ದ ಚಂದನಕೇರಿ ಎಂಬ ಊರು, ಬರಗಾಲ, ಕಾಲರಾ ಮತ್ತು ಊರಿನ ಒಳಜಗಳಗಳಿಂದ ಕ್ರಮೇಣ ಯಾತನಾಶಿಬಿರನಾಗಿ ಪರಿಣಮಿಸಿದುದರ ಚಿತ್ರಣವನ್ನು ಪರಿಣಾಮಕಾರಿಯಾಗಿ ಮೂಡಿಸುತ್ತದೆ. ಸರಳ ಹಾಗೂ ನಿರಾಡಂಬರ ನಿರೂಪಣೆ ಈ ಕಾದಂಬರಿಯ ಪ್ರಮುಖ ಆಕರ್ಷಣೆ ಎನ್ನಬಹುದು. ಕಥಾವಸ್ತುವಿನ ಮೇಲೆ ಲೇಖಕರಿಗಿರುವ ಗೌರವ ಉದ್ದಕ್ಕೂ ಸೂಚಿತವಾಗುತ್ತದೆ. ಇದನ್ನು ಅವಸರದ ಬರವಣಿಗೆಯೆಂದು ಕರೆದಿರುವ ಮುನ್ನುಡಿಕಾರರ ಮಾತು ಒಪ್ಪುವಂತಿದೆ.

ಕಾದಂಬರಿಯ ಮೊದಲಿನಲ್ಲಿ ಕೆಲಸಕ್ಕೆ ಸೇರಲೆಂದು ಬಂದ ಕಾಲೇಜು ಅಧ್ಯಾಪಕ ಹಾಗೂ ಕತೆಯ ಮೊದಲಿನ ನಿರೂಪಕ ಬರುಬರುತ್ತಾ ಮರೆಯಾಗಿಬಿಡುತ್ತಾನೆ. ಕಡೆಯವರೆಗೂ ಅಲ್ಲಿನ ಕಾಲೇಜು ಅಧ್ಯಾಪಕರಿಗೆ (ಊರಿನಿಂದ ಕೇವಲ ಮೂರು ಮೈಲಿ ದೂರವಿರುವ) ಊರಿನ ಜನರಿಗೆ ತಟ್ಟುವ ಭೀಕರ ಪರಿಸ್ಥಿತಿಯ ಪರಿಣಾಮ ತಟ್ಟುವುದಿಲ್ಲ. ಒಟ್ಟಿನಲ್ಲಿ ಕತೆಯು ವೇಗದಿಂದ ಬೆಳೆಯುತ್ತಾ ಹೋಗಿ ಅವಸರದಲ್ಲಿ ಮುಕ್ತಾಯವಾಗುತ್ತದೆ.

ಪರಿಜನರು ಕೊಟ್ಟ ಆಹಾರವನ್ನು ತಿಂದ ದಿನದಿಂದ, ಎಲ್ಲರಂತೆ ಸಾಧಾರಣ ಮನುಷ್ಯನಾಗಿದ್ದ ಕೃಷ್ಣಾದೀಕ್ಷಿತನಲ್ಲಿ ದಿಢೀರನೆ ಮಹತ್ವದ ಬದಲಾವಣೆಯುಂಟಾಗಿ ಅವನು ಹೊಸ ಮನುಷ್ಯನಾಗುತ್ತಾನೆ. ಅವನಿಗೆ ಸಮಾಜದ ಕಟ್ಟುಕಟ್ಟಳೆ, ನಿರ್ಬಂಧಗಳು ಅರ್ಥವಿಲ್ಲದೇ ಹೋಗುತ್ತವೆ. ಮಾನವ ಧರ್ಮವೊಂದೇ ಎಂಬ ಸತ್ಯವನ್ನು ಕಂಡುಕೊಳ್ಳುತ್ತಾನೆ. ಇವನ ಈ ಜಾಗೃತ ಪ್ರಜ್ಞೆ ಚಂದನ ಕೇರಿಯ ಸುಧಾರಣೆಗೆ ಕಾರಣವಾಗಿ ಊರೆಲ್ಲ ತುಂಬಿಕೊಳ್ಳುತ್ತದೆ. ಚಂದನಕೇರಿ ಪಿಡುಗಿನಿಂದ ಯಾತನಾ ಶಿಬಿರವಾಗಿ ಪರಿಣಮಿಸಿದಮೇಲೆ ನೆಚ್ಚಿನ ಗೆಳೆಯನನ್ನು, ಹೆಂಡತಿ ಕುಸುಮಾಳನ್ನೂ ಕಳೆದುಕೊಂಡ ದೀಕ್ಷಿತ ಏಕಾಕಿಯಾಗಿ ಊರಿನ ಬಸ್ಸು ಹತ್ತುತ್ತಾನೆ. ಆಗ ದೀಕ್ಷಿತನಾಡುವ ಸಾಧಾರಣ ಮಾತಿನಲ್ಲಿಯೂ ಅನುಭವದ ನೋವು, ನಿರಾಸೆ, ನಿರ್ಲಿಪ್ತತೆಯನ್ನು ಲೇಖಕರು ಸೆರೆ ಹಿಡಿದಿದ್ದಾರೆ.

ಊರಿನವರ ಕಣ್ಣಿಗೆಲ್ಲ 'ಸೂಳೆ'ಯಾಗಿದ್ದ ಶಾರಿ ಗೌಡರ ಆಶ್ರಯದಲ್ಲಿದ್ದೂ ಶೀಲವನ್ನು ಉಳಿಸಿಕೊಂಡುದರ ರಹಸ್ಯ ಬಯಲಾಗಿ, ಕಡೆಗೆ ಗರತಿಯಾಗಿ ಗಂಡನೊಂದಿಗೆ ಊರನ್ನು ಬಿಡುತ್ತಾಳೆ. ಹೀಗೆ ಅನೇಕ ಸಂಗತಿಗಳು, ಹಲವು ಹತ್ತು ಪಾತ್ರಗಳು ಈ ಕಾದಂಬರಿಯಲ್ಲಿ ಸಂಕುಚಿತಗೊಂಡಂತೆ ಭಾಸವಾಗುತ್ತದೆ.

ಪ್ರಭಾವಶಾಲಿ ಊರ ಪ್ರಮುಖರ ವೈವಿಧ್ಯಮಯವಾದ ಬದುಕಿನಿಂದ ಹಾಗೂ ಜೀವಕಳೆಯಿಂದ ಕೂಡಿದ್ದ ಊರು ಕ್ರಮೇಣ ಪ್ರಕೃತಿಯ ವಿಕೋಪಕ್ಕೆ ಗುರಿಯಾಗಿ ಯಾತನಾ ಶಿಬಿರವಾಗಿ ಮಾರ್ಪಾಡಾಗುವ ರೀತಿ ಧ್ವನಿ ಪೂರ್ಣವಾಗಿ ರೂಪುಗೊಂಡಿದೆ ಎಂದು ಹೇಳಬಹುದು.

ಆರ್. ಬಸವರಾಜ್ ಅವರ ಈಸೂರಿನ ಚಿರಂಜೀವಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಲಿದಾನಮಾಡಿದ ಈಸೂರಿನ ಐವರು ವೀರರನ್ನು ಕುರಿತ ಕಾದಂಬರಿ. ಈಸೂರಿನ ವೀರರು ತಮ್ಮ ಗ್ರಾಮದಲ್ಲಿ ಸ್ವತಂತ್ರ ಸರ್ಕಾರ ಸ್ಥಾಪಿಸಿ ಅದನ್ನು ಕಾಯ್ದುಕೊಳ್ಳಲು ವೀರಾವೇಶದಿಂದ ಹೋರಾಡಿದ ಕತೆ ಇಲ್ಲಿದೆ. ಬ್ರಿಟಿಷರ ದಬ್ಬಾಳಿಕೆಗೆ ಮಣಿಯದೆ, ಬ್ರಿಟಿಷ್ ಆಳರಸರ ವಿರುದ್ಧ ಸೆಟೆದು ನಿಂತು ತಮ್ಮ ತ್ಯಾಗ, ಬಲಿದಾನಗಳ ಮೂಲಕ ಈಸೂರಿಗೆ ಕೀರ್ತಿ ತಂದ ಇಲ್ಲಿನ ವೀರರ ಸಾಹಸ ಚಿತ್ರವನ್ನು ಲೇಖಕರು ಪರಿಣಾಮಕಾರಿಯಾಗಿ ಕೊಟ್ಟಿದ್ದಾರೆ. ಆದರೆ ಇಲ್ಲಿನ ನಿರೂಪಣೆ ಸಾಂಪ್ರದಾಯಿಕ ಶೈಲಿಯಲ್ಲಿದೆ. ಮಧ್ಯೆ ಮಧ್ಯೆ ಹಣಿಕಿಹಾಕುವ ವರದಿಗಳು, ವ್ಯಾಖ್ಯಾನಗಳು, ಜಯಘೋಷಗಳು ಇವುಗಳ ಹಾವಳಿ ವಿಪರೀತವಾಗಿದೆ. ಮಧ್ಯೆ ಮಧ್ಯೆ ಭಾಷಣಗಳೂ, ಭಾಷಣ ಶೈಲಿಯ ಮಾತುಗಳೂ ತಲೆಹಾಕಿವೆ. ಆದರೆ ಅಂದಿನ ಹೋರಾಟದ ಬಗೆಗಿನ ಮಾಹಿತಿಗಳನ್ನು ಒಪ್ಪವಾಗಿ ಈ ಕಾದಂಬರಿ ಒದಗಿಸುತ್ತದೆ. ಈಸೂರಿನ ಆರಾಧ್ಯ ದೇವತೆ ವೀರಭದ್ರ ದೇವರ ಗುಡಿಯೇ ಸಂಗ್ರಾಮದ ಕೇಂದ್ರ ಹಾಗೂ ಸ್ಫೂರ್ತಿಯ ನೆಲೆ. ಕಲಿತನಕ್ಕೆ ಹೆಸರಾದ ಈ ಗುಡಿಯ ಪ್ರಾಂಗಣದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಕ್ಕೆ ನಾಂದಿಯಾಗುತ್ತದೆ. ಈ ಜನರಲ್ಲಿರುವ ಅಚಲವಾದ ದೈವ ಭಕ್ತಿಗೆ ಬೆರಗಾಗುತ್ತೇವೆ. ಕೆಲವು ಸಲ ಇವರ ದೈವಭಕ್ತಿ ಸಾಹಸವನ್ನು ಮೀರಿ ನಿಲ್ಲುತ್ತದೆ! ಅಂದವಾದ ಮುದ್ರಣದಿಂದ ಕೂಡಿದ ಈ ಪುಟ್ಟಪುಸ್ತಕ ಅಂದಿನ ಹೋರಾಟದ ಬಗೆಗೆ, ತ್ಯಾಗ, ಬಲಿದಾನ, ದೇಶ ಭಕ್ತಿಗಳ ಬಗೆಗೆ ಬೆಳಕು ಚೆಲ್ಲಿದೆ.

ಬಸವರಾಜ ಕಟ್ಟೀಮನಿಯವರು ತಮ್ಮ ಮಾಜೀ ಮಂತ್ರಿ ಎಂಬ ಕಾದಂಬರಿಯಲ್ಲಿ ರಾಜಕೀಯ ಕಟು ಸತ್ಯವನ್ನು ಹೊರಗೆಡಹಿದ್ದಾರೆ. ಇದನ್ನು 'ಲೇಖಕರ ಲೋಕಾನುಭವದ ಕುಲುಮೆಯಲ್ಲಿ ಕರಗಿದನಂತರ ರೂಪುಗೊಂಡ ಕಾದಂಬರಿ'ಯೆಂದು ಹೇಳಿದ್ದಾರೆ.

ತಾತನು (ಮಾಜೀ ಮಂತ್ರಿ) ಬರೆದಿಟ್ಟ ತನ್ನ ಜೀವನ ಚರಿತ್ರೆಯನ್ನು ಮೊಮ್ಮಗ ಓದುವುದರ ಮೂಲಕ ಮಾಜೀ ಮಂತ್ರಿಯ ಮೋಜಿನ ಬದುಕಿನ ಪುಟಗಳು ಒಂದೊಂದಾಗಿ ತೆರೆಯುತ್ತಾ ಹೋಗುತ್ತವೆ. ಊರಿಗೆಲ್ಲಾ ಬೇಕಾದವನಾಗಿ ಬದುಕಿದ ಸಂಗಲೂರಿನ ಸಮಾಜ ಸೇವಕ ಲಿಂಗಣ್ಣನೇನೋ ವೇದಾಂತಿ. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯಂತಿದ್ದ. ಆದರೆ ಅವನ ಹೆಂಡತಿ ತಾರಾ

ಪತಿಯ ಒತ್ತಾಯದಿಂದ ಅವನು ಮಂತ್ರಿಯಾಗಿ ಪಡಬಾರದ ಕಷ್ಟಪಟ್ಟನು. ಆದರೆ ಸಮಾಜ ಅವನನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದೆ ಕೆಲಕಾಲ ತಿರಸ್ಕರಿಸಿತು.

ಮಂತ್ರಿ ಲಿಂಗಣ್ಣನ ಹೆಂಡತಿ ತಾರಾಮತಿಯ ದರ್ಬಾರು, ಅವಳ ವೈಭವ, ವಿಲಾಸ, [illegible] ಶಿಫಾರಿಸಿನಿಂದ ಅಧಿಕಾರಿಗಳನ್ನು ಕೈಕೆಳಗೆ ಹಾಕಿಕೊಂಡರೀತಿ, ಎಲ್ಲ ಗುಂಪುಗಳ, ಎಲ್ಲ [illegible] ಪರಿಚಯ ಮಾಡಿಕೊಂಡು, ಮಂತ್ರಿಮಂಡಲವನ್ನು ಉರುಳಿಸಲು ಹೊಂಚುಹಾಕುತ್ತಿದ್ದ ವಿರುದ್ಧ ಪಕ್ಷದವರಿಗೆ ಬೆಂಬಲಿಗಳಾಗಿರುವುದು. ತನ್ನ ಗಂಡನು ಮಂತ್ರಿಯಾಗಿದ್ದ ಅವಧಿಯಲ್ಲಿ ಅವಳು ಸ್ವಂತಕ್ಕೆ ಗಳಿಸಿದ ಆಸ್ತಿ ಹಾಗೂ ಮಂತ್ರಿಯಾದ ತನ್ನ ಗಂಡನನ್ನು ತನ್ನ ಅಂಗೈಯ ಮೇಲಿಟ್ಟು ಕೊಂಡು ಕುಣಿಸಿದ ಅವಳ ಚಾಕಚಕ್ಯತೆ ಇವೆಲ್ಲ ಸ್ವಾರಸ್ಯಪೂರ್ಣವಾಗಿ ಚಿತ್ರಿತವಾಗಿದೆ. ಇವಳು ಅರ್ಥಾತ್ 'ಮಿಸ್ಟರ್ ಮಂತ್ರಿಣಿ' !

ಕತೆಯ ನಿರೂಪಣಾ ಶೈಲಿಯಲ್ಲಿ ಚುರುಕುತನ ಎದ್ದುಕಾಣುತ್ತದೆ. ಪಾತ್ರಗಳು ಜೀವಂತ ವಾಗಿ ನಡೆದಾಡುತ್ತವೆ. ಭಾಷೆಯ ಸರಳತೆ ಹಾಗೂ ರಾಜಕೀಯ ರಂಗದಲ್ಲಿ ನಡೆಯುವ ನೈಜ ಪರಿಸ್ಥಿತಿಯ ಚಿತ್ರಣದಿಂದಾಗಿ ಮಾಜೀ ಮಂತ್ರಿ ಆಕರ್ಷಣೀಯವಾಗಿದೆ.

ಕಾರಂತರ 'ಇಳೆಯೆಂಬ...', ನಾಟಕದಲ್ಲಿ ಆಸಕ್ತಿಯುಳ್ಳ ಇಬ್ಬರು ತರುಣರನ್ನು ಕೇಂದ್ರ ಪಾತ್ರವಾಗುಳ್ಳ ಕಾದಂಬರಿ. 'ನಾಟಕವನ್ನೋ, ನಟರನ್ನೋ ಕುರಿತು ಬರೆಯಬೇಕೆಂಬ ಹವಣಿಕೆ ಯಿಂದ ಹುಟ್ಟಿಕೊಂಡ ಈ ಕಾದಂಬರಿಗೆ ಬೀಜ ರೂಪದಲ್ಲಿ ಕಾಣಿಸಿದ್ದು ಶ್ಯಾಮರಾಯನ ಜೀವನ ನಾಟಕ.' ಎಂದು ಕಾರಂತರು ತಮ್ಮ ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಮುಂದುವರೆದು 'ನಾನೆಣಿಸಿ ಕೊಂಡಿದ್ದ ವಿಚಾರಗಳನ್ನು ಮರೆಯಿಸಿ ಎಣಿಸಿಕೊಂಡಿರದ ಕೆಲವು ಸಮಸ್ಯೆಗಳೂ ಹೊರಕ್ಕೆ ಬಂದುವು' ಎಂದು ಹೇಳಿದ್ದಾರೆ.

ಆನಂದರಾಯ ಮತ್ತು ಶಾಮರಾಯ ಇಬ್ಬರೂ ಮಿತ್ರರು. ಇವರಿಬ್ಬರೂ ನಾಟಕಗಳಲ್ಲಿ ಆಸಕ್ತರಾಗಿದ್ದರೂ ಇವರಿಬ್ಬರ ಸ್ವಭಾವ, ಭಾವ ಬೇರೆ ಬೇರೆಯಾದುದು. ಆನಂದರಾಯ ನಾಟಕ ವನ್ನು ಅಭಿನಯ ಕಲೆಯನ್ನು ಉತ್ತಮವಾಗಿ ಸ್ವೀಕರಿಸಿ ಉತ್ತಮ ಅಭಿರುಚಿಯನ್ನು ಬೆಳೆಸಿಕೊಂಡ ಒಬ್ಬ ಚಿಂತನ ಶೀಲ. ಆದರೆ ಇದಕ್ಕೆ ವಿರುದ್ಧ ಪಾತ್ರ ಶಾಮರಾಯನದು. ವಿದ್ಯಾರ್ಥಿ ದೆಸೆ ಯಿಂದಲೂ 'ಧೂರ್ತ'ನಾಗಿದ್ದ ಅವನು ಕಡೆಯವರೆಗೂ ಧೂರ್ತನಾಗಿದ್ದು ಭೋಳೆ ಸ್ವಭಾವದ ಸ್ನೇಹಿತನನ್ನು ವಂಚಿಸುತ್ತಾನೆ. ನಾಟಕದಲ್ಲಿ ಖಳನಾಯಕನ ಪಾತ್ರವನ್ನು ವಹಿಸಲು ಇಚ್ಛಿಸುತ್ತಿದ್ದ ಅವನು ಜೀವನ ನಾಟಕದಲ್ಲಿಯೂ ಖಳನಾಯಕನ ಪಾತ್ರ ವಹಿಸುತ್ತಾನೆ. ಹೀಗೆ ಪರಸ್ಪರ ವಿರುದ್ಧ ಸ್ವಭಾವದ ಇಬ್ಬರು ತರುಣರನ್ನು ಮಿತ್ರರನ್ನಾಗಿ ಕೂಡಿಸಿದ್ದ ಒಂದೇ ಒಂದು ಎಳೆಯೆಂದರೆ ಅವರಿಬ್ಬ ರಿಗಿದ್ದ ನಾಟಕದ ಗೀಳು.

ಗೆಳೆಯರಿಬ್ಬರೂ ಒಂದೇ ಊರಿನಲ್ಲಿ ವಕೀಲರು. ನಾಟಕ ಪ್ರದರ್ಶನ ಇಬ್ಬರ ಜೀವನದ ಗತಿಯ ಮೇಲೂ ಪ್ರಭಾವ ಬೀರುತ್ತದೆ. ಇದನ್ನು ಚಿತ್ರಿಸುವುದರ ಜೊತೆಗೆ ನಾಟಕದ ಸ್ವರೂಪ, ಉದ್ದೇಶ, ಪ್ರೇಕ್ಷಕ ನಾಟಕ ಸಂಬಂಧ, ಅಭಿನಯದ ತಿರುಳು—ಇವುಗಳನ್ನು ಕುರಿತು ಸಾಕಷ್ಟು ದೀರ್ಘ ನಿರೂಪಣೆಯಿದೆ.

ಸ್ತ್ರೀ ಸ್ವಾತಂತ್ರ್ಯದ ಪ್ರತಿನಿಧಿಯಾಗಿ ಬರುವ ಜ್ವಾಲಾಳದು ಒಂದು ಜೀವಂತ ಪಾತ್ರ. ಜ್ವಾಲೆ ಶ್ಯಾಮರಾಯನಿಗೆ ಮರುಳಾಗಿ ಅವನಿಂದ ವಂಚಿತಳಾಗುತ್ತಾಳೆ. ಕಡೆಗೆ ಆನಂದ ಮತ್ತು ಜ್ವಾಲೆಯರ ಬದುಕು ಹಸನಾಗುತ್ತದೆ. ಈ ಮೂರು ಪಾತ್ರಗಳನ್ನು ಲೇಖಕರು ತಾರ್ಕಿಕವಾದ ರೀತಿಯಲ್ಲಿ ಬೆಳೆಸಿಕೊಂಡು ಹೋಗಿರುವುದು ಮೆಚ್ಚಬೇಕಾದ ಸಂಗತಿ.

ಕೆಲವು ನಾಟಕಗಳ ವಿಚಾರ, ಅವುಗಳ ಸುದೀರ್ಘ ಕತೆ ಹೇಳುವ ರೀತಿ, ನಾಟಕ ಕಲೆಯನ್ನು ಕುರಿತು ಆಡುವ ಮಾತುಗಳು, ಮತ್ತು ಸ್ತ್ರೀ ಸ್ವಾತಂತ್ರ್ಯದ ಬಗೆಗಿನ ಭಾಷಣಗಳು—ಇವೆಲ್ಲಾ ಈ

ಕೃತಿಯ ಒಟ್ಟಂದಕ್ಕೆ ಊನತರುವ ಸಂಗತಿಗಳಾಗಿವೆ ಎನಿಸುತ್ತದೆ. ಹೀಗಾಗಿ ಇಳೆಯೆಂಬ...., ನಾಟ್ಯ ರಂಗದಲ್ಲಿನ ಬದುಕನ್ನು ಚಿತ್ರಿಸಿರುವ ಈ ಕಾದಂಬರಿಯ ಓದು ಒಂದು ದೃಷ್ಟಿಯಿಂದ ತೃಪ್ತಿಯನ್ನು ಕೊಡುತ್ತದೆ.

ರಘುಸುತ ಅವರ ಅನುಭವ ಮನೆಕಟ್ಟಿನೋಡು...ಎಂಬ ಗಾದೆ ಮಾತಿನ ಹಿನ್ನೆಲೆಯಲ್ಲಿ ರಚಿತವಾಗಿರುವ ಕಾದಂಬರಿ. ಈಗಿನ ಕಾಲದಲ್ಲಿ ಮನೆಕಟ್ಟುವುದು ಎಂತಹ ಸಾಹಸದ ಕೆಲಸ ಮತ್ತು ಮನೆ ಕಟ್ಟುವವರು ವಹಿಸಬೇಕಾಗುವ ಎಚ್ಚರ ಎಂತಹುದು ಎಂಬುದನ್ನು ಇಲ್ಲಿ ತಿಳಿಸಲು ಲೇಖಕರು ಪ್ರಯತ್ನಪಟ್ಟಿದ್ದಾರೆ. 'ಹೀಗಾಗಿ ಇದೊಂದು ಸಮಸ್ಯಾತ್ಮಕ ಕಾದಂಬರಿ. ಮನೆ ಕಟ್ಟಲು ಅವಶ್ಯಕವಾದ ಸೈಟನ್ನು ಪಡೆಯುವುದು ಹೇಗೆ ಎಂಬುದೇ ಇಂದಿನ ನಾಗರೀಕ ಜೀವನದ ಮುಖ್ಯ ಸಮಸ್ಯೆ. ಈ ಸಮಸ್ಯೆಯ ಮತ್ತೊಂದು ರೂಪ ರೆವೆನ್ಯೂ ಸೈಟುಗಳದು.' ಎಂಬುದಾಗಿ ಲೇಖಕರು ತಿಳಿಸಿದ್ದಾರೆ. ಈ ಸಮಸ್ಯೆಗಳ ಜಟಿಲತೆಯನ್ನು ಕೃತಿ ಪರಿಚಯ ಮಾಡಿಕೊಡುತ್ತವೆ. ಗೋಮುಖ ವ್ಯಾಘ್ರ ದಳ್ಳಾಳಿಗಳ ವಂಚನೆಯ ಜಾಲಕ್ಕೆ ಸಿಕ್ಕಿ ನರಳುವ ಸರಳ ನಿಷ್ಕ್ರಿಯ ವ್ಯಕ್ತಿತ್ವದ ಶ್ರೀನಿವಾಸರಾಯರು ಇಲ್ಲಿನ ಕೇಂದ್ರ ಪಾತ್ರ. ರೆವೆನ್ಯೂ ಸೈಟನ್ನೂ ಕೊಂಡು ಸಮಸ್ಯೆಗಳ ಸುಳಿಯಲ್ಲಿ ಒದ್ದಾಡುತ್ತಿದ್ದ ರಾಯರು ಸೇಟ್ ನಾಥೂಮಲ್‌ನ ಔದಾರ್ಯದಿಂದ ದಿಢೀರನೆ ಹಣವಂತರಾದುದು ಒಂದು ಪವಾಡ. ಟ್ರಸ್ಟ್ ಬೋರ್ಡಿನ ಅಧಿಕಾರಿಗಳು ರೆವೆನ್ಯೂ ಸೈಟುಗಳನ್ನು ವಶಪಡಿಸಿಕೊಂಡ ಕಾದಂಬರಿಯ ಪ್ರಮುಖ ಘಟನೆ ಸಪ್ಪೆ ವರದಿಯಂತಿದೆ. ಒಟ್ಟಿನಲ್ಲಿ ಈ ಕೃತಿ ಕಾದಂಬರಿಯಾಗುವುದಕ್ಕಿಂತ ಹೆಚ್ಚಾಗಿ ನಗರಗಳಲ್ಲಿ ಮನೆಯ ನಿವೇಶನಗಳ ಸಮಸ್ಯೆಯನ್ನು ಕುರಿತ ಒಂದು ದೀರ್ಘವಾದ ಮಾಹಿತಿಯನ್ನು ನೀಡುತ್ತದೆ ಎನ್ನಬಹುದು.

ಟಿ. ಕೆ. ರಾಮರಾವ್ ಅವರ ಮರಳು ಸರಪಣಿ, ಫೈರೋ, ಫೀಭಿಯಾ ಮನೋವ್ಯಾಧಿಗೊಳಗಾದ 'ಉಷಾಕಿರಣ್' ಎಸ್ಟೇಟಿನ ವಾರಸುದಾರ ಬಾಲಕನೊಬ್ಬನಿಗೆ ಸಂಬಂಧಿಸಿದ ಕತೆ. ಶ್ರೀಕಾಂತನೆಂಬ ಸ್ನೇಹಿತನ ಎಸ್ಟೇಟಿಗೆ ಬಂದ ತರುಣ ನಿರುದ್ಯೋಗಿ ವೈದ್ಯ ಹರ್ಷ, ಸಂಜಯನೆಂಬ ಬಾಲಕನ ಮನೋವ್ಯಾಧಿಯನ್ನು ಇಪ್ಪತ್ತೆರಡು ದಿನಗಳಲ್ಲಿ ಗುಣಪಡಿಸಿಸುವ ಸಾಹಸದ ಕತೆ ಇಲ್ಲಿದೆ. ಇದರೊಂದಿಗೆ ಸಂಬಂಧಿಸಿದ ನಡುಕೇರಿಗೌಡರ ಮನೆತನದಲ್ಲಿ 'ಉಷಾಕಿರಣ್' ಎಸ್ಟೇಟಿಗೆ ಸಂಬಂಧಪಟ್ಟಹಾಗೆ ನಡೆದ ಕೊಲೆಯ ಬಗೆಗೂ ಈ ವೈದ್ಯ ಪತ್ತೆದಾರಿ ಕೆಲಸ ನಡೆಸುತ್ತಾನೆ. ಹೀಗೆ ಇದು ಸಾಮಾಜಿಕ, ಪತ್ತೇದಾರಿ, ಹಾಗೂ ಮನೋವೈಜ್ಞಾನಿಕ-ಸಮಸ್ಯೆಗಳನ್ನು ಸಾಕಷ್ಟು ಚರ್ಚಿಸುವ ಕಾದಂಬರಿ ಈ ಕತೆಯಲ್ಲಿನ ಪಾತ್ರಗಳು ತಮ್ಮ ಮನೆತನದ ಗೌರವವನ್ನು ಕಾಪಾಡುವ ಹೊಣೆಗಾರಿಕೆಯಿಂದಾಗಿ ಸಂಜಯನ ಮನೋವ್ಯಾಧಿಗೆ ಕಾರಣವಾದ ಬೆಂಕಿಯ ಹಾಗೂ ಕೊಲೆಗೆ ಸಂಬಂಧಿಸಿದ ವಿವರವನ್ನು ಒಂದೊಂದು ರೀತಿಯಲ್ಲಿ ವ್ಯಕ್ತಪಡಿಸಿ ವೈದ್ಯನನ್ನು ಗೊಂದಲದಲ್ಲಿ ಬೀಳಿಸುತ್ತಾರೆ.

ತಾನು ನಡೆಸಿದ ಘೋರ ಕೃತ್ಯವನ್ನು ಕತ್ತಲಿನಲ್ಲಿಟ್ಟು ತನ್ನ ಬಂಧು ಬಾಂಧವರ ನಡುವೆ ಮರಳು ಸರಪಣಿಯಾಗಿದ್ದ ಮಲ್ಲೇಶ ಕಡೆಗೆ ತಾನು ನಡೆಸಿದ ಕ್ರೂರ ಕೃತ್ಯಕ್ಕೆ ತಕ್ಕ ಶಿಕ್ಷೆ ಪಡೆಯುತ್ತಾನೆ. ಮನೋವ್ಯಾಧಿಯಿಂದ ಸಂಪೂರ್ಣ ಮುಕ್ತನಾದ ಸಂಜಯ ಎಲ್ಲರ ಬಾಂದವ್ಯವನ್ನು ಬಿಗಿಯುವ ಉಕ್ಕಿನ ಸರಪಣಿಯಾಗುತ್ತಾನೆ. ಇಲ್ಲಿ ಬರುವ ಕೆಲವು ಸನ್ನಿವೇಶಗಳ ವರ್ಣನೆ ರೋಮಾಂಚಕಾರಿಯಾಗಿವೆ. ಸಂಭಾಷಣೆಯಲ್ಲಿ ಚುರುಕುತನ ಕಾಣುತ್ತದೆ. ಈ ಕಾದಂಬರಿ ಇನ್ನಷ್ಟು ಅಡಕವಾಗದಿದ್ದರೆ ಮತ್ತಷ್ಟು ಪರಿಣಾಮಕಾರಿಯಾಗುತ್ತಿತ್ತು.

ಇವರ ಗುಲಾಮ ಹೆಣ್ಣು ಒಂದು ಪತ್ತೇದಾರಿ ಮಿನಿ ಕಾದಂಬರಿ. ತನ್ನ ಗಂಡನನ್ನು ಕೊಲೆಮಾಡಿದ ಕೊಲೆಗಾರನ ಹೆಂಡತಿಯಾಗಿ ನಟಿಸಬೇಕಾಗಿ ಬಂದ ಗುಲಾಮ ಹೆಣ್ಣಿನ ಕತೆ ಇಲ್ಲಿವೆ. ಇದು ಪತ್ತೇದಾರಿ ಪ್ರಿಯರನ್ನು ರಂಜಿಸುತ್ತದೆ.

ಹೆಚ್. ವೆಂಕಟೇಶ್ ಅವರ ಗಂಗಾ ಮತ್ತು ಹೆಣ್ಣಲ್ಲವೇ ನಾನು– ಇವು ಹೆಣ್ಣಿನ ಬಾಳಿನ ಸುತ್ತ ಹೆಣೆದ ಕಾದಂಬರಿಗಳು. ಇವುಗಳ ಕಥಾ ವೈಖರಿ ಚಿತ್ರ ವಿಚಿತ್ರವಾಗಿವೆ. ತಪ್ಪು

ತಪ್ಪು ಭಾಷಾ ಪ್ರಯೋಗಗಳು, ದೋಷಯುಕ್ತವಾದ ವಾಕ್ಯಗಳಿಂದ ಇವು ನಿರಾಸೆಯನ್ನುಂಟು ಮಾಡುತ್ತವೆ.

ಚಲನಚಿತ್ರವಾಗಿರುವ ಕಾದಂಬರಿ ಎಂಬ ಹಣೆ ಪಟ್ಟಿಯೊಡನೆ ಬಂದಿರುವ ಬಸವರಾಜ್ ಕೆಸ್ತೂರ್ ಅವರ ಸಂಘರ್ಷ ಕಾಲೇಜಿನ ವಿದ್ಯಾಭ್ಯಾಸದ ನಡುವಿನಲ್ಲಿ ಸ್ವಚ್ಛಂದವಾಗಿ ವಿಹರಿಸಿ ನಂತರ ಮದುವೆಯಾಗಿ, ತನ್ನ ಹಿಂದಿನ ಗುಟ್ಟು ಖಳನಾಯಕನಿಂದ ತನ್ನ ಗಂಡನಿಗೆಲ್ಲಿ ಗೊತ್ತಾಗುತ್ತದೋ ಮತ್ತು ತನ್ನ ಬಾಳು ನರಕವಾಗುತ್ತದೋ ಎಂದು ಪರಿತಪಿಸುವ ಹೆಣ್ಣಿನ ಸುತ್ತ ಹೆಣೆದ ಕತೆ. ಒಟ್ಟಿನಲ್ಲಿ ಇದು 'ಕಮರ್ಷಿಯಲ್' ಚಿತ್ರವನ್ನು ಗುರಿಯಾಗಿಟ್ಟುಕೊಂಡು ಬರೆದ ಕತೆ. ವಿಚಿತ್ರ ಕತೆ, ಕೃತಕ ಭಾಷೆ, ವಿಚಿತ್ರ ಘಟನೆಗಳ ಜೋಡಣೆ ಹಾಗೂ ವಿಚಿತ್ರ ಪಾತ್ರಗಳು—ಇವುಗಳಿಂದಾಗಿ ಈ ಕಾದಂಬರಿ ಬೇಸರ ಹುಟ್ಟಿಸುತ್ತದೆ.

ಕೂಳೂರು ಶ್ರೀನಿವಾಸರಾಯರ ಬಂಗಾರದ ತೆನೆ, 'ಸತ್ಯಮೇವ ಜಯತೆ' ಎಂಬ ಮಾತನ್ನು ಅಕ್ಷರಶಃ ಪಾಲಿಸುವ ಸ್ವಾಮಿ ನಿಷ್ಠ ಅಧಿಕಾರಿಯೊಬ್ಬನ ಆದರ್ಶವನ್ನು ಎತ್ತಿಹಿಡಿದಿದೆ. ನಾಯಕ ಪ್ರಸಾದ್ ತನ್ನ ಪ್ರಯತ್ನದಿಂದ, ನಿಷ್ಠೆಯಿಂದ ಮೇಲೇರುವುದನ್ನು ಚಿತ್ರಿಸಿದ್ದಾರೆ. ಭ್ರಷ್ಟಾಚಾರ, ಲಂಚಕೋರತನ. ಮುಂತಾದ ಸಾಮಾಜಿಕ ಪಿಡುಗುಗಳ ನಡುನಡುವೆ ಅಲ್ಲಲ್ಲಿ ಇರುವ ಸ್ವಾಮಿನಿಷ್ಠೆ, ತತ್ತ್ವನಿಷ್ಠೆಯನ್ನು ಗುರುತಿಸಿದ್ದಾರೆ.

ಎನ್. ಪಿ. ಅನಂತರಾಮ್ ಅವರ ಚೈತ್ರವನ, 484 ಪುಟದಷ್ಟು ಬೆಳೆದಿರುವ ಅನವಶ್ಯಕ ಬರವಣಿಗೆ. ಎಕನಾಮಿಕ್ಸ್ ಆನರ್ಸ್ ಸೇರಿದ ರ್‍ಯಾಂಕ್ ವಿದ್ಯಾರ್ಥಿನಿ 'ವಾಣಿ', ಯಾವಾಗಲೂ, ಯಾರಿಗೂ ತನ್ನ ಮೊದಲನೆ ರ್‍ಯಾಂಕ್‌ನ ಸ್ಥಾನವನ್ನು ಬಿಟ್ಟು ಕೊಡದವಳು. ಆ ಸ್ಥಾನ ತನಗಲ್ಲದೆ ಬೇರಾರಿಗೂ ಇಲ್ಲವೆಂಬ ಅತಿಯಾದ ಆತ್ಮ ವಿಶ್ವಾಸ, ಹೆಮ್ಮೆ ಅವಳಲ್ಲಿತ್ತು. ಇದರ ಮಧ್ಯೆ ತನಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಮೆರಿಟ್ ಸ್ಕಾಲರ್ ಷಿಪ್ ಅನ್ನು ತನ್ನ ನಂತರದ ಬಡ ವಿದ್ಯಾರ್ಥಿಗೆ ಕೊಡುವಷ್ಟು ಸಹಾನುಭೂತಿ, ಉದಾರತೆಯನ್ನೂ ತೋರುತ್ತಾಳೆ. ಇದ್ದಕಿದ್ದ ಹಾಗೆ ಇವಳ ತರಗತಿಗೆ 'ರಮಾನಾಥ' ನೆಂಬ ಪ್ರತಿಭಾವಂತ ವಿದ್ಯಾರ್ಥಿ ಸೇರುತ್ತಾನೆ. ಇವರಿಬ್ಬರಲ್ಲಿ ರ್‍ಯಾಂಕ್ ಗಿಟ್ಟಿಸಲು ತೀವ್ರ ಸ್ಪರ್ಧೆ ನಡೆಯುತ್ತದೆ. ಓದುಗರನ ನಿರೀಕ್ಷೆಯಂತೆ ಇವರ ಸ್ನೇಹ, ಪ್ರೇಮಕ್ಕೆ ತಿರುಗಿ ಮದುವೆಯಲ್ಲಿ ಮುಕ್ತಾಯವಾಗುತ್ತದೆ. ಎಂ.ಎ. ನಲ್ಲಿ ಮೊದಲನೆಯ ರ್‍ಯಾಂಕ್ ಗಿಟ್ಟಿಸಿದತಂಹ ಗಂಡನನ್ನು ಎರಡನೆಯ ರ್‍ಯಾಂಕ್ ಬಂದ ನಾನು ಪಡೆದುಕೊಂಡೆ ನನ್ನದೇ ಹೆಚ್ಚು ಎಂಬ ಸಂತೃಪ್ತಿಯನ್ನು ವಾಣಿ ಪಡೆಯುತ್ತಾಳೆ. ಇದಿಷ್ಟು ಕತೆ. ಕಾದಂಬರಿಯ ಮುಖ್ಯ ಪಾತ್ರಗಳು ಆದರ್ಶದ ಮುದ್ದೆಯಾಗಿ ಚಿತ್ರಿತರಾಗಿದ್ದಾರೆ. ಉಳಿದ ಪಾತ್ರಗಳು ತಮ್ಮ ಕೆಲಸವನ್ನು ತಕ್ಕಮಟ್ಟಿಗೆ ನಿರ್ವಹಿಸಿವೆ. ವಾಣಿಗೆ ಮೊದಲು ಗೊತ್ತಾದ ಡಾಕ್ಟರ್ ವರತಪ್ಪಿ ಅವಳು ರಮಾನಾಥನನ್ನು ಮದುವೆಯಾಗುವವರೆಗೆ ನಡೆಯುವ ಘಟನೆಗಳು ತುಂಬಾ ನಾಟಕೀಯವಾಗಿವೆ. ಕೆಲವು ಪುಟಗಳನ್ನು ಓದಿದನಂತರ ಇದರ ಮುಕ್ತಾಯವನ್ನು ಹೀಗೇ ಎಂದು ನಿರ್ಧರಿಸಬಹುದು.

ಸಿ. ಎನ್. ಚನ್ನವೀರಯ್ಯನವರು ದುಂಬಿಯಾಟ ಎಂಬ ತಮ್ಮ ಕಾದಂಬರಿಯಲ್ಲಿ ಕನ್ಯಾಪಿತೃಗಳನ್ನು ವಂಚಿಸಿ, ಯುವತಿಯರನ್ನು ವೇಶ್ಯಾವೃತ್ತಿಗೆಳೆಯುವ ನಯ ವಂಚಕರನ್ನು ಬಯಲಿಗೆಳೆದಿದ್ದಾರೆ. ಪ್ರಕಾಶ್ ಎಂಬುವನು ತಾನೊಬ್ಬ ವಿದ್ಯಾವಂತ ವರನೆಂಬ ಸೋಗು ಹಾಕಿಕೊಂಡು ವೀಣಾ ಎಂಬ ಹುಡುಗಿಯನ್ನು ಮದುವೆಯಾಗಿ ಅವಳನ್ನು ಮಧು ಚಂದ್ರಕ್ಕೆ ಬೊಂಬಾಯಿಗೆ ಕರೆದುಕೊಂಡು ಹೋಗಿ ಅಲ್ಲಿನ ವೇಶ್ಯಾ ಗೃಹಕ್ಕೆ ತಳ್ಳುತ್ತಾನೆ. ಇವರ ಜೊತೆ ಹೋದ ವೀಣಳ ಗೆಳತಿ ಅಂಬುಜಳಿಗೂ ಇದೇ ಗತಿಯಾಗುತ್ತದೆ. ಮತ್ತೆ ಚಂಪಾ ಎಂಬ ಯುವತಿಯನ್ನೂ ವಂಚಿಸಿ ಮದುವೆಯಾಗಿ ಇದೇ ವೇಶ್ಯಾ ಗೃಹಕ್ಕೆ ಸೇರಿಸುತ್ತಾನೆ. ಆದರೆ ಜೂಡೋ ಕಲಿತಿದ್ದ ಚಂಪ ತನ್ನ ದಿಟ್ಟತನ, ಸಾಹಸಗಳಿಂದ ಈ ವ್ಯಾಪಾರದಲ್ಲಿ ಸೇರಿದ್ದ ವಂಚಕರ ಸಮೂಹವನ್ನು ಪೋಲೀಸರಿಗೆ ಹಿಡಿದುಕೊಡುತ್ತಾಳೆ. ಗೆಳತಿಯರನ್ನು ಪಾರು ಮಾಡುತ್ತಾಳೆ. ಹೀಗೆ ಭೀಕರ ಸಾಮಾಜಿಕ ಸಮಸ್ಯೆ

ಯೊಂದರ ಸುತ್ತ ಈ ಕಾದಂಬರಿ ರಚಿತವಾಗಿದ್ದರೂ ತೀರಾ ಬಾಲಿಶವಾಗಿದೆ, ಅಪಕ್ವವಾಗಿದೆ. ಕನ್ಯಾಪಿತೃಗಳೆನಿಸಿಕೊಂಡವರು ಬಸ್ ಸ್ಟಾಪಿನಲ್ಲಿ ಕಂಡು ಕೆಲವೇ ಘಂಟೆಗಳಲ್ಲಿ ಪರಿಚಿತನಾದವನೊಬ್ಬನಿಗೆ (ಈತ ಎಂ.ಎಸ್ಸಿ., ಪಿ.ಎಚ್.ಡಿ. ಎಂದು ಸುಳ್ಳು ಬೇರೆ ಹೇಳುತ್ತಾನೆ.) ವಿವೇಚನೆಯಿಲ್ಲದೆ ತಮ್ಮ ಮಕ್ಕಳನ್ನು ಮದುವೆ ಮಾಡಿಕೊಡವ ಆಸ್ತಿ ಬರೆದು ಕೊಡುವ ಅವರ ನಡವಳಿಕೆಯಂತೂ ಹಾಸ್ಯಾಸ್ಪದವಾಗಿದೆ! ಇದು ಲೇಖಕರ ಎಳಸೆಯ ಕೃತಿಯೆಂದು ತಿಳಿದಾಗ ಬಹಳ ಆಶ್ಚರ್ಯವಾಯಿತು!

ಬಸವರಾಜ ಪಾಟೀಲರ ಬಂಗಾರದ ಹೆಣ್ಣು ಕಾದಂಬರಿಯ ಹಿಂಭಾಗದ ರಕ್ಷಾ ಪುಟದಲ್ಲಿರುವ ನಾಲ್ಕು ಮಾತುಗಳಲ್ಲಿಯೇ ಮುದ್ರಣದ ತಪ್ಪುಗಳಿವೆ. ನಾಯಕಿ ಪ್ರತಿಭಾ ಬಂಗಾರದ ಹೆಣ್ಣಾಗಿ ಮೈತಳೆದಿದ್ದಾಳೆ. ಇಲ್ಲಿ ನಾಯಕರು, ಖಳನಾಯಕರು ಎಲ್ಲರೂ ಇದ್ದಾರೆ. ಅಂತಹ ವಿಶೇಷವೇನೂ ಇಲ್ಲದ ಸರಳ ಕಾದಂಬರಿ. ಭಾಷೆಯ ಅಪ ಪ್ರಯೋಗ, ಮುದ್ರಣ ದೋಷ ಇವೆಲ್ಲದರಿಂದ ಈ ಕಾದಂಬರಿಯ ಓದು ಪ್ರಯಾಸವಾಗುತ್ತದೆ.

ಚಲನ ಚಿತ್ರವಾಗಲಿರುವ ಸಾಮಾಜಿಕ ಕಾದಂಬರಿ ಎಂದು ಸಾರಿಕೊಂಡು ಬಂದಿರುವ ಎಚ್. ಎಸ್. ಗೋಪಾಲರಾಯರ ಜೇನು-ನಂಜು ಲೇಖಕರ ಮೊದಲ ಕಾದಂಬರಿ. ಅಣ್ಣ – ತಮ್ಮಂದಿರ ನಡುವಿನ ವಿರಸವನ್ನು ನಿರೂಪಿಸುವ ಕತೆ ಇಲ್ಲಿದೆ. ಹುಟ್ಟುತ್ತಾ ಅಣ್ಣ ತಮ್ಮ ಬೆಳೆಯುತ್ತಾ ದಾಯಾದಿಗಳು ಎಂಬ ಗಾದೆಯ ಮಾತಿನ ಚಪ್ಪರದಮೇಲೆ ತಮ್ಮ ಕತೆಯ ಬಳ್ಳಿಯನ್ನು ಹಬ್ಬಿಸಿದ್ದಾರೆ. ಒಮ್ಮೆ ಓದಿಸಿಕೊಂಡು ಹೋಗುವ ಪುಸ್ತಕ.

ನಾಡಿಗೇರ್ ಮಾಧವರಾವ್ ಅವರ ಅಶ್ರುಧಾರಾ, ಮರದ ಕೆಳಗೆ ಕುಳಿತು ಕಡಲೆಕಾಯಿ ಮಾರುತ್ತಿದ್ದ ಮುದುಕಿಯ ಜೀವನದ ಬಗ್ಗೆ ಹೆಣೆದ ಕತೆ. ಇದು ಈ ಲೇಖಕರ ಪ್ರಥಮ ಕಾದಂಬರಿ. ದುಷ್ಟ ವ್ಯಕ್ತಿಗಳಿಂದ ಒಳ್ಳೆಯ ವ್ಯಕ್ತಿಗಳ ಬಾಳು ಹಾಳಾದುದನ್ನು ಲೇಖಕರು ಚಿತ್ರಿಸಿದ್ದಾರೆ. ಇದರ ಪರಿಣಾಮವಾಗಿ ಇಲ್ಲಿನ ಕೇಂದ್ರ ವ್ಯಕ್ತಿ ಗೌರಮ್ಮ ಹಳ್ಳಿಯಲ್ಲಿ ಒಕ್ಕಲು ಕುಳವಾಗಿದ್ದವಳು ದುಷ್ಟರ ಕುತಂತ್ರಗಳಿಂದ ದಿಕ್ಕಿಲ್ಲದವಳಾಗಿ ಕಡೆಗೆ ಕಡಲೆಕಾಯಿ ಮಾರಿ ಜೀವಿಸುತ್ತಿರುತ್ತಾಳೆ. ಅವಳು ಸತ್ತ ದಿನ ಅವಳ ಹಳ್ಳಿಯ ಶಾನುಭೋಗನಿಂದ ಅವಳ ಕತೆ ನಿರೂಪಿತವಾಗುತ್ತದೆ. ಸಾಧಾರಣ ವಸ್ತುವಿನ ಸರಳ ನಿರೂಪಣೆ ಇಲ್ಲಿದೆ.

ತೈಲೂರು ವೆಂಕಟಕೃಷ್ಣ ಅವರು ರಕ್ತಾಭಿಷೇಕ, ಅಗ್ನಿಕುಂಡ ಹಾಗೂ ಸಮ್ಮಿಲನ ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ರಕ್ತಾಭಿಷೇಕದ ನಾಯಕಿ ಪಾರ್ವತಿಯ ತಾಯಿ ಚಿಕ್ಕಂದಿನಲ್ಲಿ ಮನೆಯ ಕಿರುಕುಳ ತಡೆಯಲಾರದೆ ಊರ ಹೊರಗಿನ ಶಿವಲಿಂಗಕ್ಕೆ ರಕ್ತಾಭಿಷೇಕ ಮಾಡಿಕೊಂಡು ಸಾವಿಗೀಡಾಗುತ್ತಾಳೆ. ಈ ಭೀಕರ ಘಟನೆ ಪಾರ್ವತಿಯ ಮನದಲ್ಲಿ ಬೇರೂರಿ ಅವಳು ಬೆಳೆದಂತೆ ಅವಳ ಮಾನಸಿಕ ಏರುಪೇರಿಗೆ ಕಾರಣವಾಗುತ್ತದೆ. ಆಗಾಗ್ಗೆ ಅವಳಿಗೆ ಮಾನಸಿಕ ಅಸ್ವಾಸ್ಥ್ಯ ಉಂಟಾಗುತ್ತಿರುತ್ತದೆ. ಕೊನೆಗೂ ಅವಳಿಗೆ ಇದರಿಂದ ಶಾಂತಿ ಸಿಗುವುದಿಲ್ಲ. ಲೇಖಕರು ನಾಯಕಿಯ ಮಾನಸಿಕ ತುಮುಲವನ್ನು ಚಿತ್ರಿಸುವುದರಲ್ಲಿ ಸಾಕಷ್ಟು ಸಫಲರಾಗಿಲ್ಲ. ನಾಯಕಿಯ ಬಗ್ಗೆ ಇವರಿಗಿರುವ ತೀವ್ರವಾದ ಸಹಾನುಭೂತಿಯನ್ನು ಓದುಗರಿಗೆ ಮುಟ್ಟುವಂತೆ ಮಾಡಲು ಈ ಕಾದಂಬರಿಯ ಶೈಲಿ ಅಡ್ಡ ಬರುತ್ತದೆ.

ಬರಗಾಲದ ಭೀಕರ ಚಿತ್ರವನ್ನು ಕುರಿತು ಬರೆದ ಕಾದಂಬರಿ ಅಗ್ನಿಕುಂಡ. ಇಂತಹ ಒಂದು ಒಳ್ಳೆಯ ವಸ್ತುವನ್ನು ತೆಗೆದುಕೊಂಡರೂ ಲೇಖಕರು ಇದನ್ನು ಕೇವಲ ಕನಿಕರದ ದೃಷ್ಟಿಯಿಂದ ಕಂಡಿದ್ದಾರೆ. ಇದರಿಂದಾಗಿ ಈ ಕಾದಂಬರಿಯ ಪುಟಗಳು ಓದುಗರ ಕಣ್ಣುಗಳಲ್ಲಿ ನೀರು ತರಿಸಲು ಸಹಕಾರಿಯಾಗಿವೇ ಹೊರತು ಈ ಬಗೆಯ ಕಾದಂಬರಿಗೆ ಬರಬೇಕಾಗಿದ್ದ ಗಟ್ಟಿತನ ಮಾತ್ರ ಬಂದಿಲ್ಲ. ಬೊಮ್ಮನಾಯಕನ ಕುಟುಂಬ ಈ ಕಾದಂಬರಿಯ ಕೇಂದ್ರ. ಇವನ ಕುಟುಂಬದಲ್ಲಿ ನಡೆಯುವ ಎಲ್ಲ ಅನಿಷ್ಟಗಳಿಗೆ ಕಡೆಗೆ ಮಗುವಿನ ಮಾರಾಟ ಮತ್ತು ಇವನ ಕುಟುಂಬದ ಎರಡು ಹೆಣ್ಣು

ಮಕ್ಕಳನ್ನು ಸೇತರು ಸೂಳೆಗೇರಿಗೆ ಸೇರಿಸಿದ ಸಂದರ್ಭಗಳಲ್ಲಿಯೂ ಕೂಡ—ಲೇಖಕರು ಇದರ ತಪ್ಪೆಲ್ಲವನ್ನೂ ಪ್ರಕೃತಿಯ ರೌದ್ರಕೋಪದ ಮೇಲೆ ಹೊರಿಸುತ್ತಾರೆ. 'ನಾಡಿನ ಧರ್ಮ, ಕರ್ಮ, ಸತ್ಯದಿಂದಾಗಿ ಪ್ರಕೃತಿಯು ಸೌಮ್ಯವಾಗಿ ಒಲಿಯುತ್ತಾಳೆಂದು' ಹೇಳಿ ಕೈಕಟ್ಟಿ ಕೂಡುತ್ತಾರೆ. ಒಟ್ಟಿನಲ್ಲಿ ಇಂತಹ ಭೀಕರ ಪರಿಸ್ಥಿತಿಯನ್ನು ವೈಜ್ಞಾನಿಕ ದೃಷ್ಟಿಯಲ್ಲಿ ಪರಿಶೀಲಿಸದೆ ಎಲ್ಲವನ್ನೂ ವಿಧಿಗೆ ಬಿಟ್ಟಿದ್ದಾರೆ.

ಬಡತನ, ಬಡವರ ಭವಣೆಗಳನ್ನು ಕುರಿತು ಚಿತ್ರಿಸಿರುವ ಇವರ ಸಮ್ಮಿಳನ ಎಂಬ ಕಾದಂಬರಿ ಯಲ್ಲಿ ಆದರ್ಶದ ಸಂದೇಶವಿದೆ. ಶ್ರೀಮಂತ ಮನೆತನದವರ ಚಿತ್ರವೂ ಇಲ್ಲಿದೆ. ಹೀಗಾಗಿ ಶ್ರೀಮಂತ ಮನೆತನಕ್ಕೂ, ಬಡವರ ಹಾಗೂ ನಿರ್ಗತಿಕ ಮಕ್ಕಳಿಗೂ ಸಂಬಂಧ ಬೆಳೆಸಿದೆ ಈ ಕಾದಂಬರಿ. ಶ್ರೀಮಂತರು ಬಡಮಕ್ಕಳ ಉದ್ಧಾರ ಮಾಡಿದರೆ ದೇಶ ಉದ್ಧಾರವಾದೀತು ಎಂಬುದು ಒಟ್ಟು ಕತೆಯ ನೀತಿ ಎಂದು ಕಾಣುತ್ತದೆ.

ಎಂ. ಪಿ. ಮನೋಹರ ಚಂದ್ರನ್ ಅವರ ಆಪರೇಷನ್ ಸಂಜೀವಿನಿಯಲ್ಲಿ ಸೀಕ್ರೆಟ್ ಏಜೆಂಟ್ "000" ವಿನ ಅದ್ಭುತ ಚಾಣಾಕ್ಷತನವಿದೆ. ನಗೆ ಬರಹಗಾರರೆಂದು ಹೆಸರು ಗಳಿಸಿರುವ ಮನೋಹರ ಚಂದ್ರನ್ ಅವರು ತಮ್ಮ ಈ ಕಾದಂಬರಿಯನ್ನು ನಗೆಗಡಲಿನಲ್ಲಿ ತೇಲಿಸಿದ್ದಾರೆ. ನಮ್ಮಲ್ಲಿನ ಹುಳುಕು, ದೌರ್ಬಲ್ಯ, ಮೋಸ, ವಂಚನೆಗಳಿಗೆ ನಗೆಯ ಮುಲಾಮು ಲೇಪಿಸಿ ನಮ್ಮ ಕಣ್ಣ ಮುಂದಿಟ್ಟಿದ್ದಾರೆ. ಈ ಕಾದಂಬರಿಯ ಓದು ಅತ್ಯಂತ ಕುತೂಹಲಕಾರಿಯಾಗಿದ್ದು ತೃಪ್ತಿ ನೀಡುತ್ತದೆ.

ಭಾರತೀಯ ನಾರಿಯ ತ್ಯಾಗ, ಹಿರಿಮೆ ಮೊದಲಾದುವನ್ನು ಚಿತ್ರಿಸಿರುವ ಕಾದಂಬರಿಗಳು ದು. ನಿಂ. ಬೆಳಗಲಿಯವರ ದಾಕ್ಷಾಯಿಣಿ ಮತ್ತು ಆಳವಂದಾರ್ ಗೋಪಾಲಾಚಾರ್ ಅವರ ನಾದಿನಿ. ಇವುಗಳಲ್ಲಿ ದಾಕ್ಷಾಯಿಣಿ ಪರವಾಗಿಲ್ಲ. ಬಿಜಾಪುರದ ಪರಿಸರದ ಹಿನ್ನೆಲೆಯಲ್ಲಿ ರಚಿತವಾದ ಈ ಕಾದಂಬರಿ ಆ ಜಿಲ್ಲೆಯ ಮಣ್ಣಿನ ವಾಸನೆಯನ್ನು ಪಡೆದಿದೆ. ನಾದಿನಿಯಲ್ಲಿ ತನ್ನ ಗಂಡನನ್ನು ತನ್ನ ತಂಗಿಗೆ ದಾನಮಾಡಿ ಸಾಯುವ ಆದರ್ಶ ಅಕ್ಕನ ಚಿತ್ರವಿದೆ. ತ್ಯಾಗ, ಧರ್ಮಗಳ ಅರ್ಥವನ್ನು ಮನಸ್ಸಿಗೆ ಬಂದಂತೆ ಉಪಯೋಗಿಸಿಕೊಂಡು ಕಾದಂಬರಿ ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಈ ಬರೆಹ ಅರ್ಥಹೀನವೆಂದಷ್ಟೇ ಹೇಳಬಹುದು. ಪು. ೩೩-೪೭ ರವರೆಗೆ ಶೃಂಗೇರಿಯ ಮಠದ ಇತಿಹಾಸದ ಬಗ್ಗೆ ಸಾಕಷ್ಟು ದೀರ್ಘವಾದ ವಿವರವಿದೆ.

ಬಿ. ಎಸ್. ಸ್ವಾಮಿ ಅವರ ಕರ್ನಾಟಕ ಶ್ರೀ ಹದಿನೇಳನೆಯ ಶತಮಾನದ ಉಭಯ ಕವಿ ಷಡಕ್ಷರಿಯ ಜೀವನವನ್ನು ಕುರಿತದ್ದು. ಕಾವ್ಯಮಯ ಶೈಲಿಯ ವರ್ಣನೆ. ಮಠದಲ್ಲಿ ಷಡಕ್ಷರಿಯು ಕಳೆದ ಬಾಲ್ಯದ ಜೀವನ, ಮಠದ ಗುರು ಚಿಕ್ಕವೀರ ದೇಶಿ ಕೇಂದ್ರರ ಬಳಿ ನಡೆದ ಅವನ ವಿದ್ಯಾಭ್ಯಾಸ, ನಂತರ ಅವನು ಕೃತಿ ರಚಿಸಿ ಮಹಾಕವಿಯಾದುದು—ಇವುಗಳನ್ನು ಲೇಖಕರು ಇಲ್ಲಿ ಚಿತ್ರಿಸಿದ್ದಾರೆ. ಮಹಾಕವಿಯೊಬ್ಬನ ಜೀವನ–ಸಾಧನೆಯನ್ನು ನಿರೂಪಿಸುವ ಈ ಕೃತಿ ಓದಿಸಿಕೊಳ್ಳುತ್ತದೆ.

ಹೆಚ್ಚುವರಿ ಭೂಮಿಯನ್ನು ಹಂಚಿಕೊಡಬೇಕೆಂಬ ಕಾನೂನಿನ ಸುತ್ತ (land ceiling) ರಚಿತವಾದ ಕಾದಂಬರಿ ನರೇಂದ್ರಬಾಬು ಅವರ ಸ್ವಯಾರ್ಜಿತ. ಲೇವಾದೇವಿಯ ಮೂಲಕ ಗಳಿಸಿದ ಜಮೀನುಗಳು ಶಾಶ್ವತವಾಗಿ ತನ್ನದೇ ಆಗಿರುತ್ತದೆಂಬ ನಂಬಿಕೆಯಿಂದಿದ್ದ ವ್ಯಕ್ತಿಯೊಬ್ಬನಿಗೆ ಕ್ರಮ ಕ್ರಮವಾಗಿ ಜಮೀನಿನ ಮೇಲಿನ ಹಿಡಿತ ಹೊರಟುಹೋಗುತ್ತದೆ. ಕಾನೂನು, ಕಾಲ ಎರಡೂ ಇವನ ವಿರುದ್ಧವಾದುದರಿಂದ ತಾನು ಬದುಕಬೇಕೆಂಬ ಅಪೇಕ್ಷೆಯನ್ನು ಕಳೆದುಕೊಳ್ಳುತ್ತಾನೆ. ಆದರೆ ಅವನ ಆಯುಸ್ಸಿನ ರೇಟೆ ಬಲವಾಗಿರುತ್ತದೆ! ಒಟ್ಟಿನಲ್ಲಿ ಇದು ಸಿದ್ಧವಾದ ಚೌಕಟ್ಟಿನಲ್ಲಿ ಹೆಣೆದ ಕಾದಂಬರಿ.

ಒಂದು ತೋಟದ ಸಾಂಕೇತಿಕ ಹೆಸರನ್ನು ಸೂಚಿಸುವ ಶ್ರೀನಿವಾಸರ ಉಡುಪರ ವಿಜಯಲಕ್ಷ್ಮಿ ಗ್ರಾಮೀಣ ಹಿನ್ನೆಲೆಯಲ್ಲಿ ರಚಿತವಾಗಿದೆ. ತೋಟಗಾರಿಕೆ ಇಲ್ಲಿನ ವಸ್ತು. ಕೃಷ್ಣ, ಸಾಹಿತಿ ಶ್ರೀನಿವಾಸ, ಪಟ್ಟಾಭಿ, ಗೀತಾ, ರಾಧಾ–ಈ ಪಾತ್ರಗಳು ಲವಲವಿಕೆಯಿಂದ ವರ್ತಿಸಿವೆ.

ಸತ್ಯದ ಕೊಲೆ ಮತ್ತು **ಕ್ರಾಂತಿ** ಇವೆರಡೂ ದುರ್ಗದ ರಾಜೇಗೌಡರ ಕಾದಂಬರಿಗಳು. ಇವುಗಳಲ್ಲಿ ಸತ್ಯದ ಕೊಲೆಗಿಂತ ಕ್ರಾಂತಿ ಹೆಚ್ಚು ತೀವ್ರತೆಯನ್ನು ಒಳಗೊಳ್ಳುವ ಕೃತಿಯಾಗಿದೆ. ಇದುವರೆಗು ಅವರು ಬರೆದ ಕಾದಂಬರಿಗಳ ಮೂಲ ಮನೋಧರ್ಮವನ್ನೇ ವಸ್ತುವನ್ನಾಗಿ ಹೊಂದಿದ್ದರೂ, ಅವುಗಳಿಂದ ಭಿನ್ನವಾದ ಒಂದು ಹದವನ್ನು ಪ್ರಕಟಿಸುತ್ತದೆ. ರಾಜೇಗೌಡರ ಮುಖ್ಯ ಗುರಿ, ತಾವು ಬರೆಯುವುದು ಕಲಾತ್ಮಕ ಕಾದಂಬರಿಯಾಗಬೇಕು ಅನ್ನುವುದಕ್ಕಿಂತ, ತಮ್ಮ ಸುತ್ತ ಕಾಣುವ ಸಾಮಾಜಿಕ, ರಾಜಕೀಯ ಅಸಮತೆ, ವಿಷಮತೆ, ಅನ್ಯಾಯಗಳಿಗೆ ತೀವ್ರವಾದ ತಮ್ಮ ಪ್ರತಿಕ್ರಿಯೆ ಪ್ರತಿಭಟನೆಗಳನ್ನು ದಾಖಲುಮಾಡುವ ಮಾಧ್ಯಮವಾಗಬೇಕು ಎನ್ನುವುದು. ಈ ಉದ್ದೇಶ, ಈ ಕೃತಿಯಲ್ಲಿ ಸಫಲವಾಗಿದೆ. ಈ ಉದ್ದೇಶದ ಪ್ರತಿಪಾದನೆಯ ರಭಸದಲ್ಲಿ ಪಾತ್ರಗಳ ಬೆಳವಣಿಗೆಯ ಕಡೆಗಾಗಲಿ, ಅಸಾಂಗತ್ಯಗಳ ಕಡೆಗಾಗಲಿ, ಮುಖ್ಯಪಾತ್ರದ ನಿಲುವಿನ ವಿರೋಧಾಭಾಸಗಳ ಕಡೆಗಾಗಲಿ–ಅವರಿಗೆ ಗಮನವೇ ಇರುವುದಿಲ್ಲ. ಆದರೆ, ನಮ್ಮ ರಾಷ್ಟ್ರದ ಇಂದಿನ ಪರಿಸ್ಥಿತಿಯಲ್ಲಿ ಪ್ರಾಮಾಣಿಕವಾದ, ಸೂಕ್ಷ್ಮಸಂವೇದನಾ ಶೀಲವಾದ ವ್ಯಕ್ತಿಗಳು ಪಡುವ ಯಾತನೆ, ಅಸಹಾಯಕತೆ ಹಾಗೂ ದಲಿತವರ್ಗದ ರೊಚ್ಚುಗಳನ್ನು ತುಂಬ ಕಳಕಳಿಯಿಂದ ಚಿತ್ರಿಸುವ ಈ ಕಾದಂಬರಿ ಒಂದು ಬಗೆಯ ಎಚ್ಚರವನ್ನು ಹುಟ್ಟಿಸುವುದರಲ್ಲಿ ಸಾಕಷ್ಟು ಪರಿಣಾಮಕಾರಿಯಾಗುತ್ತದೆ.

ರಾವ್‌ಬಹದ್ದೂರ್ ಅವರ **ಕಾಂಚನಮೃಗ**, ಕಾಂಚನವು 'ಮನುಷ್ಯನನ್ನು ಮೃಗವಾಗಿಸಿ, ಎಳೆದಾಡಿಸಿ, ದಾರಿತಪ್ಪಿಸುತ್ತದೆ' ಎಂಬ ವಸ್ತುವಿನ ಸುತ್ತ ಹೆಣೆದ ಒಂದು ರೋಮಾಂಚಕಾರಿಯಾದ ಕಾದಂಬರಿ. ಲಾಭಕೋರರು, ಲಂಚಕೋರರು, ಶಾಸಕರು, ಜೇಬುಗಳ್ಳರು–ಮೊದಲಾದವರು ಹಣ ದೋಚಲು ಹಿಡಿಯುವ ನಾನಾ ಮಾರ್ಗಗಳು ಇಲ್ಲಿ ನಿರೂಪಿತವಾಗಿದೆ. ಹಣವೆಂಬ 'ಕಾಂಚನ ಮೃಗ'ದ ಸುತ್ತಲೂ ತಿರುಗುವ ಸಂವಹನಗಳನ್ನು ಬಳಸಿಕೊಂಡು ಇಲ್ಲಿ ಹೊಸ ಕೃಷಿಯೊಂದನ್ನು ಲೇಖಕರು ಮಾಡಿದ್ದಾರೆ. ಈ ಕಾದಂಬರಿಯ ಕೇಂದ್ರ ಪಾತ್ರವಾದ ಅನಾಥ ಬಾಲಿಕಾಶ್ರಮದ ಸಂಚಾಲಕಿ ರೋಶನ್ ಬೇಗಂಳ ದಿಟ್ಟತನದ ನಿರ್ಭಯ ವ್ಯಕ್ತಿತ್ವ ಬೆರಗುಗೊಳಿಸುತ್ತದೆ. ಈ ಮುಖದ ಹಿಂದಿರುವ ವಂಚನೆ, ಮೋಸ, ಎಲ್ಲರನ್ನೂ ತನ್ನ ಬುಟ್ಟಿಯಲ್ಲಿ ಬೀಳಿಸಿಕೊಳ್ಳುವ ಅವಳ ಚಾಕಚಕ್ಯತೆ–ಇವು ಚಮತ್ಕಾರವಾಗಿ ವ್ಯಕ್ತವಾಗಿವೆ. ಹೀಗೆ ದೋಚುವವರನ್ನು ಮತ್ತೆ ದೋಚುವವರು ನಮ್ಮ ಸುತ್ತಲೂ ಇರುತ್ತಾರೆಂಬ ಸತ್ಯ ಸಂಗತಿ ಇಲ್ಲಿ ಗೋಚರವಾಗಿದೆ. ಒಟ್ಟಿನಲ್ಲಿ ಓದುಗರಲ್ಲಿ ವೈಚಾರಿಕ ಜಾಗೃತಿಯನ್ನುಂಟುಮಾಡಿ ಕುತೂಹಲದಿಂದ ಓದಿಸಿಕೊಳ್ಳುವ ಇದನ್ನು ಒಂದು ಒಳ್ಳೆಯ ಕಾದಂಬರಿ ಎಂದು ಹೇಳಬಹುದು.

೨

ಈ ವರ್ಷ ಮಹಿಳೆಯರಿಂದ ಸಾಕಷ್ಟು ಕಾದಂಬರಿಗಳು ಬಂದಿದ್ದರೂ ಸಹ ಬಹುಪಾಲು ಕೃತಿಗಳು ಅತೃಪ್ತಿಯನ್ನುಂಟುಮಾಡಿವೆ. ಕೇವಲ ಒಂದೆರಡು ಕೃತಿಗಳು ಮಾತ್ರ ತಮ್ಮ ವಿಶಿಷ್ಟ ಗುಣಗಳಿಂದಾಗಿ ಮಹತ್ವ ಪಡೆದಿವೆ.

ಮಾತೆ ಮಹಾದೇವಿಯವರ **ತರಂಗಿಣಿ**, ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ಐತಿಹಾಸಿಕ ವ್ಯಕ್ತಿ ಅಕ್ಕಮಹಾದೇವಿಯ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ 900 ಪುಟಗಳ ಸುದೀರ್ಘ ಕಾದಂಬರಿ. ಅಕ್ಕಮಹಾದೇವಿಯ ಜೀವನದ ಹಿನ್ನೆಲೆಯಲ್ಲಿ ರಚಿತವಾಗಿರುವ ಬಸವರಾಜ ಕಟ್ಟೀಮನಿಯವರ 'ಗಿರಿಯ ನವಿಲು' ಮತ್ತು ಎಚ್. ತಿಪ್ಪೇರುದ್ರಸ್ವಾಮಿಯವರ 'ಕದಳಿ ಕರ್ಪೂರ' ಈ ಕಾದಂಬರಿಗಳನ್ನು ಬಿಟ್ಟರೆ, 'ತರಂಗಿಣಿ' ಬಹುಶಃ ಮೂರನೆಯ ಕಾದಂಬರಿ ಎಂದು ತೋರುತ್ತದೆ.

ಮರ್ತ್ಯ ಮಟ್ಟದಲ್ಲಿ ಜನಿಸಿ ಅಮರ್ತ್ಯ ಮಟ್ಟದಲ್ಲಿ ಸಮಾಗಮಗೊಂಡ ಅಕ್ಕಮಹಾದೇವಿಯ ಬಹುಮುಖ ವ್ಯಕ್ತಿತ್ವವನ್ನು ಲೇಖಕಿ ತರಂಗಿಣಿಯಲ್ಲಿ ಚಿತ್ರಿಸಿದ್ದಾರೆ. ಅನುಭಾವಿ, ತತ್ವಜ್ಞಾನಿ, ಯೋಗಿಣಿ, ಸಾಹಿತಿ, ಕ್ರಾಂತಿಕಾರಿಣಿ, ಸ್ವತಂತ್ರ ವಿಮರ್ಶಕ ಪ್ರಜ್ಞೆಯುಳ್ಳವಳು – ಆಗಿದ್ದ ಅಕ್ಕನ ವಿವಿಧ ಮುಖಗಳನ್ನು ಹಂತಹಂತವಾಗಿ ರೂಪಿಸುವಲ್ಲಿ ಲೇಖಕಿ ಸಾಧ್ಯವಾದಷ್ಟುಮಟ್ಟಿಗೆ ಅಕ್ಕಮಹಾದೇವಿಯ ವಚನಗಳನ್ನು ಪ್ರಮಾಣಬದ್ಧ ಆಧಾರಗಳನ್ನಾಗಿ ಬಳಸಿಕೊಂಡಿರುವುದು ಇಲ್ಲಿಯ ವಿಶಿಷ್ಟತೆ. ವಚನಗಳ ಅಸ್ತಿಭಾರದ ಮೇಲೆ ಅಕ್ಕಮಹಾದೇವಿಯ ಜೀವನ, ವ್ಯಕ್ತಿತ್ವವನ್ನು ಪುನರ್ನಿರ್ಮಿಸಲು ಹೊರಟಿರುವ ಲೇಖಕಿ ಸಫಲರಾಗಿದ್ದಾರೆ. ಹೀಗಾಗಿ ಅಕ್ಕಮಹಾದೇವಿಯನ್ನು ವ್ಯಕ್ತಿಯನ್ನಾಗಿ ಸೂಕ್ಷ್ಮವಾಗಿ ಕಡೆದಿದ್ದಾರೆ. ಪವಾಡಗಳನ್ನು ಅತಿಯಾಗಿ ಮೆರೆಸಿಲ್ಲ. ಇದು ಮೆಚ್ಚಬೇಕಾದ ಸಂಗತಿ. ಆದರೆ ಕೆಲವು ಕಡೆ ಬರುವ ದೀರ್ಘ ಉಪನ್ಯಾಸ, ಭಾಷಣ, ಚರ್ಚೆ – ಇವುಗಳನ್ನು ಲೇಖಕಿ ಕಡಿಮೆ ಮಾಡಿದ್ದಿದ್ದರೆ, ಕೃತಿ ಈಗಿರುವುದಕ್ಕಿಂತ ಅಡಕವಾಗಿದ್ದಿದ್ದರೆ ಇದು ಇನ್ನಷ್ಟು ಪ್ರಶಂಸಾರ್ಹವಾಗಿರುತ್ತಿತ್ತು. ಇದನ್ನು ಬಿಟ್ಟರೆ ಅಕ್ಕಮಹಾದೇವಿಯ ವ್ಯಕ್ತಿತ್ವದ ಚಿತ್ರಣ ಉತ್ತಮ ರೀತಿಯಲ್ಲಿ ವ್ಯಕ್ತವಾಗಿದೆ. ತೂಕಬದ್ಧವಾದ ಭಾಷೆ, ಪ್ರೌಢ ಶೈಲಿ, ಆಳವಾದ ಚಿಂತನೆ, ಗಂಭೀರ ವಿಚಾರಗಳ ಸರಣಿ, ಹಾಗೂ ಪ್ರಮಾಣಬದ್ಧವಾದ ಉತ್ತಮ ವ್ಯಕ್ತಿ ಚಿತ್ರಣ – ಇವುಗಳಿಂದಾಗಿ ಈ ಕಾದಂಬರಿ 'ಮಹಿಳಾ ವರ್ಷದಲ್ಲಿ' ಮಹಿಳೆಯೊಬ್ಬರಿಂದ ರಚಿತವಾದ ಒಂದು ಗಮನಾರ್ಹ ಕೃತಿ ಎಂದು ಹೇಳಬಹುದು.

ಎಂ. ಕೆ. ಇಂದಿರಾ ಅವರ ಕೂಚುಭಟ್ಟ, ವರ್ಣಲೀಲೆ ಮತ್ತು ಹಸಿವು ಈ ವರ್ಷದ ಕಾದಂಬರಿಗಳು.

ಓದಿ ಓದಿ ಮರುಳಾದ ಕೂಚುಭಟ್ಟನ ಕಥೆಯನ್ನು ಹಾಸ್ಯಮಯವಾಗಿ ಲೇಖಕಿ ಚಿತ್ರಿಸಿದ್ದಾರೆ. 'ಘಟವಾಳಿ' ವಾರಪತ್ರಿಕೆಯಲ್ಲಿ ಕೆಲಸದಲ್ಲಿದ್ದ ಭಾವನಾಜೀವಿ, ಕಾವ್ಯಪ್ರೇಮಿ ಸೀತಾರಾಮು ತನ್ನ ಕಲ್ಪನೆಯಲ್ಲಿದ್ದ ಹೆಣ್ಣಿನಂತಿರುವವಳನ್ನು ಬಿಟ್ಟು ಬೇರೆ ಯಾರನ್ನೂ ತಾನು ಮದುವೆಯಾಗುವುದಿಲ್ಲವೆಂಬ ಭ್ರಮೆಯಲ್ಲಿದ್ದ. ಅವನ ಈ ಭ್ರಮೆಯನ್ನು ಅವನ ಹಿತೈಷಿಗಳು ಜಾಣವೈದ್ಯನ ನೆರವಿನಿಂದ ಬಿಡಿಸುವ ಕ್ರಮದಲ್ಲಿ ಲೇಖಕಿಯ ಹಾಸ್ಯ ಪ್ರವೃತ್ತಿ ಗೋಚರವಾಗಿದೆ. ಒಟ್ಟಿನಲ್ಲಿ ಮನೋರಂಜನೆಯನ್ನು ನೀಡುವ ಈ ಕಾದಂಬರಿ ಓದುಗರನ್ನು ಮುದಗೊಳಿಸುತ್ತದೆ.

ವರ್ಣಲೀಲೆ, ಹೇಮಕೂಟ ಎಸ್ಟೇಟಿನ ಶ್ರೀಮಂತ ಜೈನ ಕುಟುಂಬವೊಂದಕ್ಕೆ ಸಂಬಂಧಿಸಿದ ಕತೆ. ಈ ಮನೆತನದ ಏಕಮಾತ್ರ ಪುತ್ರ ಕೀರ್ತಿ ತಾನು ವಿದೇಶಕ್ಕೆ ಹೋಗುವ ಮೊದಲು ತನ್ನ ಮನೆಯ ಕ್ಲಾರ್ಕನ ಮಗಳು ರಸವಂತಿಯನ್ನು ತಾನು ಮದುವೆಯಾಗುವುದಾಗಿ ಅವಳಿಗೆ ಮಾತು ಕೊಟ್ಟು ವಿದೇಶಕ್ಕೆ ತೆರಳುತ್ತಾನೆ. ಆದರೆ ತನ್ನ ತಂದೆ, ತಾಯಿಯರಿಗೆ ಈ ವಿಷಯವನ್ನು ತಿಳಿಸುವುದಿಲ್ಲ. ರಸವಂತಿಯ ತಂದೆ ತಮ್ಮ ಮತ್ತು ಕೀರ್ತಿಯ ಮನೆಯವರ ಅಂತಸ್ತು ಅಜಗಜಗಳ ಅಂತರವೆಂದು ತಿಳಿದು ಮಗಳಿಗೆ ಬೇರೆ ಕಡೆ ಮದುವೆ ಮಾಡಿ ಆ ಊರನ್ನೇ ಬಿಡುತ್ತಾರೆ. ವಿದೇಶದಿಂದ ಮರಳಿ ಬಂದ ಕೀರ್ತಿ ರಸವಂತಿಗೆ ಮದುವೆಯಾದ ವಿಷಯ ತಿಳಿದು ಮನೋದೌರ್ಬಲ್ಯಕ್ಕೊಳಗಾಗಿ ಇಡೀ ಮನೆತನದ ಕೀರ್ತಿಗೆ ಧಕ್ಕೆ ತರುವ ಸ್ಥಿತಿಗೆ ಬರುತ್ತಾನೆ ಮತ್ತು ಮನೆಯವರನ್ನು ತೀವ್ರ ಚಿಂತೆಗೆ ಗುರಿ ಮಾಡುತ್ತಾನೆ. ಕಡೆಗೆ ಇವನಿಗೆ ಪ್ರೇಮ, ಮದುವೆ, ಕಾಮ, ವ್ಯವಹಾರ, ಚತುರತೆ – ಇವುಗಳ ಬಗ್ಗೆ ಪಾಠ ಕಲಿಸಿ ಅವನ ಕದಡಿದ ಮನಸ್ಸನ್ನು ಒಂದು ಹದಕ್ಕೆ ತಂದ ಕೀರ್ತಿ ಇವನ ಸ್ನೇಹಿತ ಜಯದೇವ್ ಮತ್ತು ವೈನಾಡಿನ ಶ್ರೀಮಂತ ಅಮರನಾಥರ ಮಗಳು ನಿರ್ಮಲಾ – ಇವರುಗಳಿಗೆ ಸಲ್ಲುತ್ತದೆ. ದಿಟ್ಟ ವ್ಯಕ್ತಿತ್ವದ, ಧೀರ ನಿಲುವಿನ ನಿರ್ಮಲಾ ಕೀರ್ತಿಯ ಮನಸ್ಸು ಒಂದು ಹದಕ್ಕೆ ಬಂದಮೇಲೆ ಅವನನ್ನು ಮದುವೆಯಾಗಿ ಹೇಮಕೂಟದ ಒಡತಿಯಾಗುತ್ತಾಳೆ. ಇದಿಷ್ಟು ಕಾದಂಬರಿಯ ಚೌಕಟ್ಟು.

ಶ್ರೀಮಂತ ಕುಟುಂಬವೊಂದರ ವೈಭವ, ವಿಲಾಸ, ಅಟ್ಟಹಾಸ, ಅಲ್ಲಿ ನಡೆಯುವ ದೈನಂದಿನ ದರ್ಬಾರಿನ ಬದುಕು—ಇವುಗಳನ್ನು ಲೇಖಕಿ ರಸವತ್ತಾಗಿ ಚಿತ್ರಿಸಿದ್ದಾರೆ. ಮನೋಸ್ಥೈರ್ಯವಿಲ್ಲದ

ದುರ್ಬಲ ವ್ಯಕ್ತಿತ್ವದ ಕೀರ್ತಿಯ ಮನಸ್ಸು ದೃಢವಾಗುವಂತೆ ರೂಪಿಸುವುದರಲ್ಲಿ ಶ್ರಮಪಡುವ ಅವನ ಹಿತಕೋರುವ ಪಾತ್ರಗಳ ಪ್ರಭಾವ ಇಲ್ಲಿ ಹೆಚ್ಚಾಗಿದೆ. ರಸವಂತಿಯದು ಒಂದು ಚಿಕ್ಕ ಪಾತ್ರವೆನಿಸಿದರೂ, ಅವಳ ಪ್ರಭಾವ ಮಾತ್ರ ಇಡೀ ಕಾದಂಬರಿಯನ್ನಾವರಿಸುತ್ತದೆ. ಜಯದೇವ್, ನಿರ್ಮಲ, ಯಶೋಧರ, ಶಾವಂತಿ—ಮೊದಲಾದ ಪಾತ್ರಗಳು ತುಂಬು ಲವಲವಿಕೆಯಿಂದ ಕೂಡಿವೆ. ಜೈನಕಾವ್ಯಗಳಲ್ಲಿರುವಂತೆ ಇಲ್ಲಿಯೂ ಪಾತ್ರಗಳ ಹೆಸರು ಕಿವಿಗೆ ಇಂಪಾಗಿ ಆಪ್ಯಾಯಮಾನವಾಗಿದೆ. ಉದಾ : ಜಯವಂತಿ, ರಸವಂತಿ, ಚಂದಲಾ, ಸೋಮಲಾಂಬಿಕೆ, ಚಂದ್ರಭಾಗಾ, ಇಂದುಬಾಲಾ, ಶಾಂತಿನಾಥ, ಕಮಲಾನಾಥ, ಇತ್ಯಾದಿ. ಒಟ್ಟಿನಲ್ಲಿ ರಂಜನೀಯವಾಗಿ, ನೇರವಾಗಿ, ಕತೆಯನ್ನು ಹೆಣೆದುಕೊಂಡು ಹೋಗಿರುವುದರಿಂದ ಈ ಕಾದಂಬರಿ ಬುದ್ಧಿಗೆ ಶ್ರಮಕೊಡದೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ.

ಮನುಷ್ಯನಿಗೆ ಹೊಟ್ಟೆಯ ಹಸಿವೆಯೊಂದೇ ಅಲ್ಲದೆ, ಅವನು ಬೆಳೆಯುತ್ತಾ ಹೋದಂತೆ ಉಂಟಾಗುವ ನಾನಾ ಬಗೆಯ ಹಸಿವುಗಳೂ ಬೆಳೆಯುತ್ತಾ ಹೋಗುತ್ತವೆ. ಇಂತಹವುಗಳಿಗೆ ಆಯಾ ಕಾಲಕ್ಕೆ ಸರಿಯಾಗಿ ಆಹಾರ ಕೂಡಲೇಬೇಕು. ಇಲ್ಲದೇ ಹೋದರೆ ಮಾನವ ದಾನವನಾಗುತ್ತಾನೆ. ಎಂಬ ವಸ್ತುವಿನ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿ ಹಸಿವು. ಕಥಾನಾಯಕಿ ಕುಂಟಿ ಶಾರದಾ, ಮುರುಳೀವಾದಕ ಕುರುಡು ದಿವಾಕರನನ್ನು ಒಲಿದು ಮದುವೆಯಾಗುತ್ತಾಳೆ. ದಿವಾಕರನಿಗೆ ಹೆಂಡತಿ ಶಾರದೆಯೇ ಸರ್ವಸ್ವವಾಗುತ್ತಾಳೆ. ಶಾರದೆಯಾದರೋ ತನ್ನ ಗಂಡನ ಪರಿಪೂರ್ಣ ಒಲುಮೆಯಲ್ಲಿ ತನ್ನ ದೇಹದ ಹಸಿವು, ಕಾಮನೆ, ಆಸೆ, ಆಕಾಂಕ್ಷೆಗಳನ್ನು ತೃಪ್ತಿಪಡಿಸಿಕೊಂಡು ತನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುತ್ತಾಳೆ. ಆರೋಗ್ಯವಂತ ದೃಢಕಾಯದ ಗಂಡುಮಗುವಿನ ತಾಯಿಯಾಗುತ್ತಾಳೆ. ಹೀಗೆ ಕತೆ ಲೇಖಕಿಯು ಹಾಕಿಕೊಂಡ ಚೌಕಟ್ಟಿನೊಳಗೆ ಬೆಳೆದು ಮುಕ್ತಾಯವಾಗುತ್ತದೆ. ಆದರೆ ಶಾರದೆ ತಾನು ಒಲಿದ ದಿವಾಕರನನ್ನು ರಹಸ್ಯವಾಗಿ ಮದುವೆಯಾಗಲು ಬಯಸಿ ಅವನಿದ್ದ ಆಶ್ರಮದ ಸ್ವಾಮಿಗಳನ್ನು ಕಾಣಲು ಹೋಗುವುದು, ತನ್ನ ಪರಿಸ್ಥಿತಿಯನ್ನು ಸ್ವಾಮಿಗಳಿಗೆ ವರ್ಣಿಸುವುದು, ತನ್ನ ಮದುವೆಯ ಸುದ್ದಿಯನ್ನು ಗೆಳತಿಯರಿಗೂ ಕಡೆಗೆ ತನ್ನ ತಾಯಿಗೂ ಗೊತ್ತಾಗದಂತೆ ಇಡುವುದು, ಅದಕ್ಕೆ ಬೇಕಾಗುವ ಏರ್ಪಾಟನ್ನು ತಾನೇ ಮಾಡಿಕೊಂಡು, ಮದುವೆಯನ್ನು ರಹಸ್ಯವಾಗಿ ಮಾಡಿಕೊಳ್ಳುವುದು—ಇವೆಲ್ಲ ತುಂಬಾ ಅತಿ ಎನಿಸುವಷ್ಟರಮಟ್ಟಿಗೆ ಹೋಗಿದೆ. ಕೆಲವು ಕಡೆ ಸಿನಿಮೀಯಾ ಘಟನೆಗಳಂತೆ ರೂಪುಗೊಂಡಿದೆ. ಒಟ್ಟಿನಲ್ಲಿ 'ಹಸಿವು' ಓದುಗರ ಬೌದ್ಧಿಕ ಹಸಿವನ್ನು ತಣಿಸುವುದರಲ್ಲಿ ಮಾತ್ರ ವಿಫಲಗೊಂಡಿದೆ ಎಂದಷ್ಟೇ ಹೇಳಬಹುದು.

ಅನುಪಮಾ ನಿರಂಜನ ಅವರ ನಟಿ, ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಸಿನಿಮಾ ನಟಿಯಾದ ಕಥಾನಾಯಕಿಯ ರಂಗುರಂಗಿನ ಜೀವನವನ್ನು ನಿರೂಪಿಸುವ ಕಾದಂಬರಿ. ಉತ್ತರಾರ್ಧದಲ್ಲಿ ವಾಸ್ತವತೆಗಿಂತ ಕಲ್ಪನೆಗೆ ಹೆಚ್ಚಿನ ಒತ್ತು ಬಿದ್ದಿದೆ ಎನಿಸುತ್ತದೆ. ಮೃದುಲಳ ಕೌಟುಂಬಿಕ ಜೀವನ ಚಿತ್ರಣ, ಅವಳ ಆಶೋತ್ತರಗಳು ಶ್ರೇಷ್ಠಮಟ್ಟದ ನಟಿಯಾಗಬೇಕೆಂಬ ಅವಳ ಹೆಬ್ಬಯಕೆ, ಸಿನಿಮಾ ಪ್ರಪಂಚ, ಸ್ಟುಡಿಯೋದಲ್ಲಿನ ರಂಗುರಂಗಿನ ಜೀವನ ಇವೆಲ್ಲಾ ಅತ್ಯಂತ ಆಸಕ್ತಿಯಿಂದ ಓದಿಸಿಕೊಳ್ಳುತ್ತವೆ.

ಸಿ. ಎನ್. ಜಯಲಕ್ಷ್ಮೀ ದೇವಿಯವರ ಶಪ್ತವಾಪಿ ಒಂದು ಐತಿಹಾಸಿಕ ಕಾದಂಬರಿ. ಮಹಾರಾಷ್ಟ್ರ ಸಾಮ್ರಾಜ್ಯ ಸ್ಥಾಪಿಸಿದ ಶಿವಾಜಿಯನಂತರದ ಸಾಂಬಾಜಿ ಪಟ್ಟಕ್ಕೆ ಬಂದಾಗಿನ ಕಾಲದ ಸಾಮಂತ ರಾಜರನ್ನು ಒಳಗೊಂಡಿದೆ ಈ ಕಾದಂಬರಿ. ಇಲ್ಲಿನ ಕೇಂದ್ರವ್ಯಕ್ತಿ ವಿಶ್ವನಾಥ, ಕಳೆದು ಹೋಗಿದ್ದ ಚಂದ್ರಗಡವನ್ನು ಮತ್ತೆ ದಕ್ಕಿಸಿಕೊಳ್ಳಲು ಪ್ರಯತ್ನಪಟ್ಟು, ಕಡೆಗೆ ಕಾಪಾಲಿಕನೊಬ್ಬನ ಶಾಪಕ್ಕೆ ಗುರಿಯಾದ ಪುಷ್ಕರಣಿಯಲ್ಲಿ ದುರ್ಮರಣಕ್ಕೆ ಈಡಾಗುತ್ತಾನೆ. ಇವನು ಮದುವೆಯಾಗಬೇಕೆಂದಿದ್ದ ಭವಾನಿಯೂ ಸಹ ಕಾಪಾಲಿಕನ ಶಾಪಕ್ಕೆ ಬಲಿಯಾಗಿ ಪುಷ್ಕರಣಿಯಲ್ಲಿ ಸಾವನ್ನಪ್ಪುತ್ತಾಳೆ. ಹೀಗೆ 'ಶಪ್ತವಾಪಿ', ಐತಿಹಾಸಿಕ ವ್ಯಕ್ತಿಗಳ ಮನೆತನಕ್ಕೆ ಸಂಬಂಧಿಸಿದ ದುರಂತವೊಂದನ್ನು ಚಿತ್ರಿಸಿದೆ.

ಇಲ್ಲಿ ಬರುವ ಹಲವು ಪಾತ್ರಗಳು ಕಾಲ್ಪನಿಕ, ಮುಖ್ಯ ವಸ್ತು ಕಾಲ್ಪನಿಕ—ಎಂದು ಲೇಖಕಿ ತಿಳಿಸಿದ್ದರೂ ಇತಿಹಾಸವನ್ನು ಹಿನ್ನೆಲೆಯಾಗಿಟ್ಟುಕೊಂಡು ಕಾದಂಬರಿ ರಚನೆಯಾಗಿರುವುದರಿಂದ, ಅವುಗಳಲ್ಲಿ ವಾಸ್ತವತೆಯಿದೆಯೇನೋ ಎಂಬ ಭ್ರಮೆ ಉಂಟಾಗುತ್ತದೆ. ಕೆಲವು ಪಾತ್ರಗಳ ವಿಸ್ತಾರವಾದ ಪರಿಚಯ, ಮರಾಠಾ ಸಾಮ್ರಾಜ್ಯದ ಆಗು ಹೋಗುಗಳು, ವರ್ಣನೆಗಳು—ಇವುಗಳ ವಿವರಗಳಿಂದ ಕಾದಂಬರಿ ನಾನೂರು ಪುಟಗಳಷ್ಟು ಬೆಳೆದಿದೆ. ಇಲ್ಲಿನ ಭಾಷೆ ಸರಳವಾಗಿಲ್ಲ. ವರ್ಣನೆಯಲ್ಲಿ ಕಾವ್ಯಮಯ ಶೈಲಿ ಇದೆ. ಕಾದಂಬರಿಗೆ ಇಟ್ಟ ಹೆಸರು ಕೂಡ ಸಂಸ್ಕೃತ ಭೂಯಿಷ್ಠವಾಗಿದೆ.

ನೀಳಾದೇವಿ ಅವರ ಮೂಕರಾಗ ಕಾದಂಬರಿಯ ನಾಯಕಿ ಅನೂರಾಧಳ (ಮೂಕಿ ಮತ್ತು ಕಿವುಡಿ) ಹೃದಯದ ಭಾವನೆಗಳಿಗೆ ಓದುಗರು ಮೂಕರಾಗುತ್ತಾರೆ. ಓದುಗರ ಸಹಾನುಭೂತಿ, ಅನುಕಂಪಗಳನ್ನು ಗಳಿಸುತ್ತದೆ ಈ ಪಾತ್ರ. ತನ್ನಲ್ಲಿ ಆಸಕ್ತಿ, ಪ್ರೀತಿ, ವಿಶ್ವಾಸವಿರುವುದರಿಂದಲೇ ರಮೇಶ ತನ್ನನ್ನು ಅಮೇರಿಕದ ಕಿವುಡ - ಮೂಗರ ಶಾಲೆಗೆ ಸೇರಿಸಿದ ಎಂದು ಗ್ರಹಿಸಿದ್ದ ಅನೂರಾಧಳಿಗೆ, ಕ್ರಮೇಣ ರಮೇಶ ಮತ್ತು ಮರ್ಲಿನ್‌ರ ಸಂಬಂಧ ಗೊತ್ತಾಗಿ ಅವಳು ಭಾರತಕ್ಕೆ ಮರಳುತ್ತಾಳೆ. ಅನೂರಾಧಳಿಗೆ ಮದುವೆಯಾಗಿ ಅವಳದು ಸುಖ ಸಂಸಾರವಾಗುತ್ತದೆ. ರಮೇಶನೂ ಮರ್ಲಿನ್‌ಳನ್ನು ಮದುವೆಯಾಗಿ ಭಾರತಕ್ಕೆ ಬರುತ್ತಾನೆ. ರಮೇಶನ ಹೃದಯದ ಭಾವನೆಗಳನ್ನು ಓದಲು ಅಶಕ್ತಳಾದ ಮರ್ಲಿನ್ ತನ್ನ ಸ್ವಂತ ಸುಖವನ್ನರಸಿಕೊಂಡು ಭಾರತವನ್ನು ಬಿಟ್ಟು ಸ್ವದೇಶಕ್ಕೆ ಹೊರಟು ಹೋಗುತ್ತಾಳೆ. ಹತಾಶನಾದ ರಮೇಶ ತಾನು ಮಾಡಿದ್ದು ತಪ್ಪೆಂದು ಗ್ರಹಿಸುತ್ತಾನೆ. ಅನುರಾಧಳ ಮಾನಸಿಕ ವೇದನೆಗಳ ಚಿತ್ರಣವನ್ನು ಲೇಖಕಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಕಡೆಯವರೆಗೂ ಕುತೂಹಲವನ್ನು ಕೆರಳಿಸುತ್ತಾ ಓದಿಸಿಕೊಂಡು ಹೋಗಿರುವ ಈ ಕಾದಂಬರಿ ತೃಪ್ತಿದಾಯಕವಾಗಿದೆ.

ವಿಶಾಲಾಕ್ಷಿ ದಕ್ಷಿಣಾಮೂರ್ತಿಯವರ ಶ್ರೀವನಿತೆಯ ರಸನೆ ಹೆಣ್ಣಿನ ಆದರ್ಶ, ತ್ಯಾಗ, ದೈವಭಕ್ತಿಯನ್ನು ನಿರೂಪಿಸುವ ಒಂದು ರಂಜನೀಯ ಕಾದಂಬರಿ.

ಹೆಣ್ಣು ಗಂಡಿನ ನಡುವಿನ ಪ್ರೇಮ, ಮದುವೆ, ಸಂಸಾರ, ಕೌಟುಂಬಿಕ ಸಮಸ್ಯೆಗಳು. ಹೆಣ್ಣಿನ ಆದರ್ಶ, ಪತಿಭಕ್ತಿ, ದೈವಭಕ್ತಿ, ಆದರ್ಶ, ತ್ಯಾಗ, ಹಿರಿಮೆ ಗರಿಮೆಗಳನ್ನು-ಪ್ರಧಾನ ಗುರಿಯಾಗಿಟ್ಟುಕೊಂಡು ಚಿತ್ರಿಸಿರುವ ತೀರಾ ಸಾಧಾರಣವಾದ ಕಾದಂಬರಿಗಳು ಕೆಲವು ಬಂದಿವೆ. ಇವುಗಳು ಕೇವಲ ಮನೋರಂಜನೆಗಾಗಿ, ಬೇಸರ ಕಳೆಯುವ ಸಾಧನಗಳಾಗಿ ಸಾರ್ಥಕತೆಯನ್ನು ಕಂಡುಕೊಳ್ಳುತ್ತವೆ. ಈಚನೂರು ಜಯಲಕ್ಷ್ಮಿಯವರ ಪ್ರೇಮ ಬಂಧನ; ಹೆಚ್. ಜಿ. ರಾಧಾದೇವಿಯರ ಭ್ರಮರ ಬಂಧನ; ಆರ್ಯಾಂಬ ಪಟ್ಟಾಭಿಯವರ ಸಾಕ್ಷಾತ್ಕಾರ ಬಿ. ಎಸ್. ಚಂದ್ರಕಲಾ ಅವರ ಸಂಗೀತದ ಸುಳಿಯಲ್ಲಿ; ಎಂ. ಸಿ. ಪದ್ಮಾ ಅವರ ಪ್ರೇಮವಸಂತ ಅಶ್ವಿನಿಯವರ ಕಪ್ಪುಕೊಳ; ಮಹಾಲಕ್ಷ್ಮಿಯವರ ಮಂಗಳ ವಾದ್ಯ; ನಿರ್ಮಲಾ ಅವರ ಮುಂಬೆಳಗು ಮತ್ತು ಪಾರ್ವತಿ; ಎ. ಜಿ. ಎ. ಅಯ್ಯನರ್ ಅವರ ಸಮಾಗಮ; ವಿಜಯಲಕ್ಷ್ಮಿ ಅವರ ಒಂಟಿ ಮತ್ತು ವಿಮಲ ರಾಘವೇಂದ್ರ ಅವರ ಬಳ್ಳಿಗಾಸರೆ ಇತ್ಯಾದಿ ಇತ್ಯಾದಿ. ಪದ್ಮಜಾ ಅವರ ಬೆಂಕಿಯ ಸಂಗ ಮಾಮೂಲಿ ಧಾಟಿಯ ಒಂದು ಪತ್ತೇದಾರಿ ಕಾದಂಬರಿ. ಈ ಕಾದಂಬರಿಗಳು ಸಾಧಾರಣ ಮಟ್ಟದ ಓದುಗರನ್ನು ತೃಪ್ತಿಗೊಳಿಸುತ್ತವೆ. ಮತ್ತು ಇವು ಓದುಗರ ನಿರೀಕ್ಷೆಯನ್ನು ನಿರಾಶೆಗೊಳಿಸದೆ ಬೆಳೆದು ಮುಕ್ತಾಯವಾಗುವ ತೀರ ಸರಳವಾದ ಕಾದಂಬರಿಗಳು. ಇವುಗಳಲ್ಲಿ ಸಮಾಗಮ ಮತ್ತು ಪಾರ್ವತಿ-ಇವು 'ಅಂತರ ರಾಷ್ಟ್ರೀಯ ಮಹಿಳಾ ವರ್ಷದ ಕೊಡುಗೆ' ಮತ್ತು 'ಸವಿನೆನಪಿಗಾಗಿ'-ಎಂಬ ಲೇಬಲ್ ಹೊತ್ತು ಬಂದಿರುವುದು ನೋಡಿದರೆ ತೀರಾ ಆಶ್ಚರ್ಯವಾಗುತ್ತದೆ! ಇನ್ನು ಕೆಲವು ಕಾದಂಬರಿಗಳ ಭಾಷಾ ಪ್ರಯೋಗ, ಪದಗಳ ಬಳಕೆ ತೀರಾ ಅತೃಪ್ತಿದಾಯಕವಾಗಿವೆ.

ಮಹಿಳೆಯರಿಂದ ರಚಿತವಾದ ಮೇಲೆ ಗಮನಿಸಿದ ಕಾದಂಬರಿಗಳಲ್ಲಿ 'ಮಹಿಳಾ ವರ್ಷದ ಸವಿನೆನಪಿನ' ವಿಶಿಷ್ಟ ಕಾಣಿಕೆಯಾಗಿ ನಿಲ್ಲಬಲ್ಲ ಕಾದಂಬರಿಗಳು ಯಾವುವೂ ಇಲ್ಲವೆಂದೇ ಹೇಳಬೇಕು. ಆದರೆ ಮಾತೆ ಮಹಾದೇವಿಯವರ 'ತರಂಗಿಣಿ' ಇದಕ್ಕೆ ಅಪವಾದವಾಗಿದೆ.

೩

ಈ ವರ್ಷ ಇತರ ಭಾಷೆಗಳಿಂದ ಅನುವಾದಿತವಾಗಿ ಕನ್ನಡಕ್ಕೆ ಬಂದ ಕಾದಂಬರಿಗಳು ಕಳೆದ ವರ್ಷಕ್ಕೆ ಹೋಲಿಸಿದರೆ ಬಹಳ ಕಡಿಮೆ. ಒಂದೆರಡು ಕಾದಂಬರಿಗಳನ್ನು ಬಿಟ್ಟರೆ ಪರಭಾಷೆಯಿಂದ ಅಂತಹ ಅತ್ಯುತ್ತಮ ಕಾದಂಬರಿಗಳು ಕನ್ನಡಕ್ಕೆ ಈ ವರ್ಷ ಬಂದ ಹಾಗೆ ಕಾಣುವುದಿಲ್ಲ.

ಬನದ ಮಕ್ಕಳು, ಕ್ಯಾಪ್ಟನ್ ಫ್ರೆಡರಿಕ್ ಮ್ಯಾರಿಯಟ್‌ನ ಆಂಗ್ಲ ಕಾದಂಬರಿ The children of the new forest ಎಂಬುದರ ಕನ್ನಡ ಅನುವಾದ. ಇದರ ಕನ್ನಡ ಅನುವಾದಕರು ಎಂ. ಗೋಪಾಲಕೃಷ್ಣ ಅಡಿಗರು. ರಂಜನೀಯವಾಗಿ ಹಾಗೂ ರೋಮಾಂಚಕಾರಿಯಾಗಿ ಬೆಳೆಯುತ್ತಾ ಹೋಗಿರುವ ಈ ಕತೆ ಎಳೆಯರಿಗಾಗಿ ಬರೆದಿದ್ದರೂ ದೊಡ್ಡವರಿಗೂ ಸಹ ಕುತೂಹಲಕಾರಿಯಾಗಿಯೂ, ಬೋಧನೀಯವೂ ಆಗಿದೆ.

ಇಂಗ್ಲೆಂಡಿನ ಇತಿಹಾಸದಲ್ಲಿ ಹದಿನೇಳನೆಯ ಶತಮಾನದಲ್ಲಿ ನಡೆದ ಒಂದು ದುರಂತ ಈ ಕತೆಗೆ ಹಿನ್ನೆಲೆಯಾಗಿದೆ. ಇಂಗ್ಲಂಡಿನ ದೊರೆ ಒಂದನೆಯ ಚಾರ್ಲ್ಸ್ ರಾಜನ ವಿರುದ್ಧವಾಗಿ ಜನ ದಂಗೆಯೆದ್ದಾಗ ಅಂತರ್ಯುದ್ಧ ನಡೆಯಿತು. ರಾಜನ ಪರವಾಗಿ ಮತ್ತು ಅವನ ವಿರುದ್ಧವಾಗಿದ್ದ ಪಾರ್ಲಿಮೆಂಟ್‌ನ ಪರವಾಗಿ–ಹೀಗೆ ದೇಶ ಎರಡು ಭಾಗವಾಯಿತು. ಇದರ ಪರಿಣಾಮವಾಗಿ ರಾಜನ ಪರವಾಗಿ ಒಂದು ಸೈನ್ಯ ಮತ್ತು ಪಾರ್ಲಿಮೆಂಟಿನ ಪರವಾಗಿ ಒಂದು ಸೈನ್ಯ ಯುದ್ಧಕ್ಕೆ ನಿಂತವು.

ಇಂತಹ ಭೀಕರ ಪರಿಸ್ಥಿತಿಯ ಕ್ರಾಂತಿಕಾಲದ ಸಂದರ್ಭದಲ್ಲಿ ರಾಜನ ಅತಿನಿಷ್ಠ ಸ್ವಾಮಿಭಕ್ತ ಕರ್ನಲ್ ಬೆವರ್ಲಿಯ ಆರ್ನ್‌ವುಡ್ ಭವನವನ್ನು ಶತ್ರುಗಳು ಸುಟ್ಟು ಹಾಕಲು ಬೆವರ್ಲಿಯ ಅನುಯಾಯಿ ವೃದ್ಧವನಪಾಲಕ ಜೇಕಬ್ ಎಂಬುವನು ಬೆವರ್ಲಿಯ ನಾಲ್ಕು ಮಕ್ಕಳನ್ನು ಅಲ್ಲಿಂದ ಸುರಕ್ಷಿತವಾಗಿ ಕರೆದುಕೊಂಡು ಹೋಗಿ ಅವರಿಗೆ ತನ್ನ ಕಾಡಿನ ಮನೆಯಲ್ಲಿ ರಕ್ಷಣೆ ನೀಡುತ್ತಾನೆ. ಎಡ್ವರ್ಡ್, ಹಂಫ್ರಿ ಎಂಬ ಇಬ್ಬರು ಹುಡುಗರು ಮತ್ತು ಎಲಿಸ್ ಮತ್ತು ಎಡಿತ್-ಎಂಬ ಇಬ್ಬರು ಹುಡುಗಿಯರು ಜೇಕಬ್‌ನ ಮಾರ್ಗದರ್ಶನದಲ್ಲಿ ಹೊಸ ಬನದಲ್ಲಿ ಗುಪ್ತವಾಗಿ ಬೆಳೆಯುತ್ತಿರುತ್ತಾರೆ. ಅವರು ಜೇಕಬ್‌ನ ಮೊಮ್ಮಕ್ಕಳೆಂದು ನಟಿಸುತ್ತಾ ಬನದ ಮಕ್ಕಳಾಗಿ ಬೆಳೆದುಬಂದ ಕತೆ ರಮ್ಯವಾಗಿ ಚಿತ್ರಿತವಾಗಿದೆ. ಮಕ್ಕಳ ಕಷ್ಟಸುಖ, ಸಾಹಸ, ಗಂಡಾಂತರ, ಜೀವನದಲ್ಲಿ ಅವರಿಗಿದ್ದ ಉತ್ಸಾಹ, ಪ್ರೀತಿ–ಇವುಗಳೆಲ್ಲದರ ಹಿತಮಿತ ವರ್ಣನೆ ರೋಚಕವಾಗಿದೆ. ಎಡ್ವರ್ಡ್ ಮತ್ತು ಹಂಫ್ರಿ ತಮ್ಮ ತಮ್ಮ ಆಶೆ ಅಭಿಲಾಷೆಗಳನ್ನು ವ್ಯಕ್ತಪಡಿಸಿರುವ ರೀತಿ ಸಹಜವಾಗಿ ರೂಪುಗೊಂಡಿದೆ. ಎಡ್ವರ್ಡ್ ಜಿಂಕೆಯ ಬೇಟೆಯಲ್ಲಿ ತೋರುವ ಸಾಹಸ, ಯುದ್ಧದಲ್ಲಿ ಸೇರಿ ರಾಜನ ಪರವಾಗಿ ಹೋರಾಡಬೇಕೆಂಬ ಅವನ ಅಮಿತೋತ್ಸಾಹ ಮತ್ತು ಅವನ ಧೀರ ಪ್ರವೃತ್ತಿಗೆ ತಕ್ಕ ವಾತಾವರಣ ಸೃಷ್ಟಿಯಾಗುತ್ತಾ ಹೋಗುತ್ತದೆ. ಅವನು ಚಿಕ್ಕಂದಿನಲ್ಲಿ ಬೇಟೆಯ ಮೂಲಕ ತೋರುವ ಸಾಹಸ ಪ್ರವೃತ್ತಿ ಅವನು ಮುಂದೆ ವೀರನಾಗಿ ಹೋರಾಡಬಹುದೆಂಬುದರ ಸೂಚನೆಯಾಗಿದೆ. ಹಂಫ್ರಿಗೆ ಕಾಡು ಹಸುಗಳನ್ನು ಹಿಡಿಯುವುದು. ಬೇಸಾಯ ಮಾಡುವುದು ಎಂದರೆ ಬಹಳ ಇಷ್ಟ. ಅದಕ್ಕೆ ತಕ್ಕ ವಾತಾವರಣವನ್ನು ಅವನು ಸೃಷ್ಟಿಸಿಕೊಳ್ಳುತ್ತಾ ಹೋಗುತ್ತಾನೆ. ಹೆಣ್ಣು ಮಕ್ಕಳಿಗೆ ಗೃಹಕೃತ್ಯದ ಕೆಲಸ—ಹೀಗೆ ಅವರವರ ಅಭಿರುಚಿಗೆ ತಕ್ಕಂತಹ ಕೆಲಸದಲ್ಲಿ ಮಕ್ಕಳನ್ನು ತೊಡಗಿಸಿ ಅವರನ್ನು ಪ್ರೀತಿ, ವಿಶ್ವಾಸದ ಮಾರ್ಗದರ್ಶನದಲ್ಲಿ ತಂದ ಜೇಕಬ್‌ನ ಪಾತ್ರ ಮಹತ್ವವಾದುದು.

ಹೀಗೆ ಎರಡನೆಯ ಚಾರ್ಲ್ಸ್ ಇಂಗ್ಲೆಂಡಿನ ದೊರೆಯಾಗುವವರೆಗೆ ಹದಿಮೂರು ವರ್ಷಗಳ ಕಾಲ ಈ ಮಕ್ಕಳು ಸದಾ ಗಂಡಾಂತರ ಹಾಗೂ ಭಯದ ನೆರಳಿನಲ್ಲಿ ಬದುಕಿ ಬಾಳಿ ನಂತರ ಚಾರ್ಲ್ಸ್ ದೊರೆಯ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಸಾಹಸಿಯಾದ ಎಡ್ವರ್ಡ್‌ಗೆ ರಾಜಾಸ್ಥಾನದಲ್ಲಿ ಮನ್ನಣೆ ದೊರೆಯುತ್ತದೆ. ಸಾಧಾರಣವಾದ ಕತೆಯನ್ನು ರಮ್ಯವಾಗಿ ಹೆಣೆದಿರುವ ಕೌಶಲದಿಂದಾಗಿ ಕತೆಯ ಓಟ ಕುತೂಹಲಕಾರಿಯಾಗಿದೆ. ಕಾಡಿನ ರಮ್ಯ ಜೀವನ ಜೀವಂತವಾಗಿ ಚಿತ್ರಿತವಾಗಿದೆ. ಉಳಿದ ಪಾತ್ರಗಳಾದ ಪೇಶನ್ಸ್, ಹೆದರ್‌ಸ್ಟನ್. ಓಸ್ವಲ್ಡ ಇವು ಗಮನ ಸೆಳೆಯುತ್ತವೆ. ಆದರೆ

ಈ ಕತೆ ಮುಖ್ಯವಾಗಿ ರಾಜತ್ವವನ್ನು ವೈಭವಿಸುವ ಕತೆ. ದುಷ್ಟ ರಾಜನ ವಿರುದ್ಧವಾಗಿ ಬಂಡೆದ್ದ ಪ್ರಜಾನಾಯಕರೆ ಇಲ್ಲಿ ಪ್ರತಿಪಕ್ಷವಾದಂತೆ ತೋರುತ್ತಾರೆ. ಈ ಕತೆ ಇಂಗ್ಲೆಂಡಿನ ಅಂದಿನ ರಾಜಕೀಯ ಚರಿತ್ರೆಯ ದೃಷ್ಟಿಯಿಂದ ಮಹತ್ವದ್ದಾಗಬಹುದಾದರೂ, ಪ್ರಜಾಪ್ರಭುತ್ವದ ಇಂದಿನ ಕಾಲಕ್ಕೆ, ಇಂಥ ಕೃತಿಗಳ ಅನುವಾದ ಎಷ್ಟರಮಟ್ಟಿಗೆ ಸಮಂಜಸವಾಗುತ್ತದೆ ಎನ್ನುವ ಪ್ರಶ್ನೆ ಹಾಗೆಯೇ ಉಳಿದುಬಿಡುವ ಸಂಭವವಿದೆ.

ಮಿರ್ಜಾ ರುಸ್ವಾ ಅವರ ಉರ್ದು ಕಾದಂಬರಿಯ ಕನ್ನಡ ಅನುವಾದ **ಉಮ್ ರಾವ್ ಜಾನ್ ಅದಾ**. ಇದರ ಅನುವಾದಕರು ಶಾಂತರಸ. ಅನುವಾದ ಸರಳವಾಗಿದ್ದು ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. 'ಉಮ್ ರಾವ್ ಜಾನ್ ಅದಾ' ಎಂಬ ಲಕ್ನೋ ನಗರದ ವೇಶ್ಯೆಯೊಬ್ಬಳು ತನ್ನ ದುರ್ದೈವದ ಹಾಗೂ ವಿಷಾದದ ಕಥೆಯನ್ನು ತಾನೇ ಓದುಗರ ಮುಂದಿಡುತ್ತಾಳೆ. ಈಕೆಗೆ ಕಾವ್ಯ ದಲ್ಲಿ ಅಭಿರುಚಿಯಿದೆ. ಸಾಕಷ್ಟು ಓದಿಕೊಂಡಿದ್ದಾಳೆ. ಸ್ವತಃ ಕವಯಿತ್ರಿ ಕೂಡ. ಇವಳು ಹುಟ್ಟಿನಿಂದ ವೇಶ್ಯೆಯಲ್ಲ. ಮಧ್ಯಮ ವರ್ಗದ ಸುಸಂಸ್ಕೃತ ಮನೆಯಲ್ಲಿ ಹುಟ್ಟಿದವಳು. ಅವಳ ತಂದೆಗೆ ವೈರಿ ಯಾದ ದಿಲಾವರ್‌ಖಾನನು ಈ ಮುಗ್ಧೆಯನ್ನು ಅವಳ ಮನೆಯಿಂದ ಹೊರಗೆ ಕರೆತಂದು ಅವಳನ್ನು ವೇಶ್ಯೆಯ ಮನೆಯಲ್ಲಿ ನೂಕಿದ. ಅಂದಿನಿಂದ ಅವಳ ಬಾಳು ವೇಶ್ಯೆಯ ಮನೆಯಲ್ಲಿ ಪ್ರಾರಂಭ ವಾಯಿತು. ಈಗ ಅವಳ ಈ ಬಗೆಯ ಜೀವನದಿಂದ ಅವಳಿಗೆ ಪಶ್ಚಾತ್ತಾಪವಾಗಿದೆ. ಹೀಗೆ ವೇಶ್ಯೆ ಯೊಬ್ಬಳು ತನ್ನ ಬಾಯಿಂದ ತಾನೇ ಹೇಳಿಕೊಂಡ ಈ ಕತೆ ಹೃದಯ ವಿದ್ರಾವಕವಾಗಿದೆ. ಈ ಕಾದಂಬರಿಯಲ್ಲಿ ಕಳೆದ ಶತಮಾನದ ನವಾಬರ ಹಾಗೂ ಸಾಮಾನ್ಯ ಜನರ ಜೀವನ, ಅವರ ಪ್ರಣಯ, ವಿಲಾಸ, ಕವಿಗೋಷ್ಠಿ, ಗಾಯನಗೋಷ್ಠಿ, ಸಂಗೀತ, ವಾದ್ಯ, ನೃತ್ಯ—ಇವೇ ಮೊದ ಲಾದುವುಗಳ ವರ್ಣನೆಯ ಚಿತ್ರ ಸಾಕಷ್ಟು ಕಲಾತ್ಮಕವಾಗಿಯೂ, ಜೀವಂತವಾಗಿಯೂ ಇದೆ.

'ಸ್ವಾರಸ್ಯವಿಹುದಾವ ಕಥೆಗಳಲಿ ಏನೋ ತಿಳಿಯದು
ನನ್ನ ಕತೆ ಹೇಳಲೋ ಜಗದ ಕತೆ ಹೇಳಲೋ ಹೊಳೆಯದು'

ಎಂದು ತನ್ನ ಕಥೆಯನ್ನು ಪ್ರಾರಂಭಿಸಿದ ವೇಶ್ಯೆ ಕೊನೆಯಲ್ಲಿ ಸೂಳೆಯರಿಗೆಲ್ಲಾ ಉಪದೇಶ ನೀಡಿ ದ್ದಾಳೆ. "ಯಾರೂ ಎಂದೂ ನಿನ್ನನ್ನು ನಿಜವಾಗಿ ಪ್ರೀತಿಸುವರೆಂದು ತಿಳಿದು ಮೋಸಹೋಗಬೇಡ. ಇಂದು ನಿನ್ನ ಮೇಲೆ ಬಿದ್ದು ಸಾಯುವ ನಿನ್ನ ಪ್ರಿಯ ನಾಳೆ ಎಲ್ಲಿಯೋ? ಯಾರೊಡನೆಯೋ ? ಆತ ಕೊನೆಯವರೆಗೆ ನಿನ್ನೊಡನೆ ಇರಲಾರ; ಅಲ್ಲದೆ ನೀನು ಅದಕ್ಕೆ ತಕ್ಕವಳೂ ಅಲ್ಲ. ಆಗಿಲ್ಲ. ನಿಜವಾದ ಪ್ರೀತಿಯೆಂದರೆ ಎಂತಹುದು. ಒಬ್ಬನಿಗೆ ಹೃದಯವನ್ನಿತ್ತ ಬಳಿಕ ಮತ್ತೊಬ್ಬನನ್ನು ಕಣ್ಣೆತ್ತಿ ನೋಡ ಲಾರದವಳೇ ನಿಜವಾದ ಪ್ರೀತಿಯುಳ್ಳವಳು. ಅಂಥ ಗುಣ ನಿನ್ನಂಥ ಬಾಜಾರಿ ಹೆಣ್ಣಿಗೆ ದೇವರು ಕರುಣಿಸಲಾರ'' (ಪು. ೩೪೯) ಎಂದು ಹೇಳಿ, ತನ್ನ ಕಾಲ ಮುಗಿಯಿತು ಎಂದಿದ್ದಾಳೆ.

ಸಾವದಿನ ಸನಿಹಕ್ಕೆ ಬಂದಂತೆ ಕಾಣುತಿದೆ
ಓ ನನ್ನ ಜೀವನವೇ
ಸಾಕಷ್ಟು ಸಂತೃಪ್ತಿ ಪಡೆದಿದೆ ಬಗೆ ನಿನ್ನಿಂದ
ಓನನ್ನ ಜೀವನವೇ

ಎಂದು ತನ್ನ ಒಳಿತಿಗೆ ದೇವರಲ್ಲಿ ಪ್ರಾರ್ಥಿಸಿ ಎಂದು ಬಿನ್ನವಿಸಿಕೊಳ್ಳುತ್ತಾಳೆ. ಈ ರೀತಿ ವೇಶ್ಯೆಯರ ಜೀವನದ ಬಗೆಗಿನ ಹೃದಯ ಮಿಡಿಯುವ ಕತೆಯನ್ನು ನಿರೂಪಿಸಿ ಓದುಗರಿಗೆ ವಿಶಿಷ್ಟ ಅನುಭವವನ್ನು ತಂದು ಕೊಡುವ ಈ ಕಾದಂಬರಿಯ ಓದು ಸಾರ್ಥಕವೆನಿಸುತ್ತದೆ.

ಮಣಿಮಧುಕರ್ ಅವರ ಸಫೇದ್ ಮೇಮನೇ ಎಂಬ ಹಿಂದಿ ಕಾದಂಬರಿಯ ಕನ್ನಡ ಅನುವಾದ- **ಮರಳು ಕಾಡಿನ ಮುಗ್ಧರು**. ಇದನ್ನು ಕನ್ನಡಿಸಿದವರು ಎಸ್. ಡಿ. ಕೃಷ್ಣಮೂರ್ತಿಯವರು. ರಾಜಾಸ್ಥಾನದ ಮರಳುಕಾಡಿನ ಗ್ರಾಮಗಳಲ್ಲಿನ ದಲಿತ ವರ್ಗವನ್ನು ಚಿತ್ರಿಸುವ ಕಾದಂಬರಿ ಇದು.

ಹೆಚ್ಚಿನ ವಿಶೇಷತೆಯಿಲ್ಲದೆ ಓದಿಸಿಕೊಳ್ಳುತ್ತದೆ. ಈ ಕಾದಂಬರಿಯನ್ನು ಅನುವಾದ ಮಾಡದೆ ಇದ್ದಿದ್ದರೆ ಕನ್ನಡಕ್ಕೆ ಏನು ನಷ್ಟವಾಗುತ್ತಿತ್ತೊ ತಿಳಿಯದು.

ಭಾಸ್ಕರ ಗೋವಿಂದ ರಾವ ಗೋಖಲೆಯವರ ಸ್ವಾಮಿ ರಣಜಿತ್ ದೇಸಾಯಿಯವರ ಮರಾಠಿ ಕಾದಂಬರಿಯ ಕನ್ನಡಾನುವಾದ. ನಾಲ್ಕನೆಯ ಪೇಶ್ವೆಯಾದ ಮಾಧವರಾಯರ ಜೀವನದಮೇಲೆ ಬೆಳಕು ಚೆಲ್ಲುವ ಕಾದಂಬರಿ ಇದು. ೧೬ನೆಯ ವರ್ಷಕ್ಕೆ ಪೇಶ್ವೆಯಾಗಿ ರಾಜ್ಯದ ಹೊಣೆಯನ್ನು ಹೊತ್ತುಕೊಂಡರು. ನ್ಯಾಯವಾದಿ, ಧ್ಯೇಯವಾದಿ ಮತ್ತು ವ್ಯವಹಾರ ಕುಶಲರೂ ಆಗಿದ್ದ ಮಾಧವರಾಯರ ಜೀವನದ ಹಲವು ಮುಖಗಳನ್ನು ಲೇಖಕರು ಇಲ್ಲಿ ಚಿತ್ರಿಸಿದ್ದಾರೆ. ಇವರದು ಆದರ್ಶ ದಾಂಪತ್ಯ ಜೀವನ. ಇವರ ಧರ್ಮಪತ್ನಿ ರಮಾಬಾಯಿ ಇವರಿಗೆ ಎಲ್ಲ ರೀತಿಯಲ್ಲಿಯೂ ನೆರವಾಗಿದ್ದರು. ಪಾಸಿಪತ್ತ ಯುದ್ಧದಲ್ಲಿ ಕಳೆದುಕೊಂಡಿದ್ದ ಮರಾಠಾ ರಾಜ್ಯವನ್ನು ಮತ್ತೆಗಳಿಸಿ ಕೊಟ್ಟು ಸಾಮ್ರಾಜ್ಯ ಕಟ್ಟಿದವರು ಇವರು. ಐತಿಹಾಸಿಕ ವ್ಯಕ್ತಿಯೊಬ್ಬರ ಜೀವನವನ್ನು ಕುರಿತ ಈ ಕಾದಂಬರಿಯ ಅನುವಾದ ಗಂಭೀರವಾಗಿದ್ದು, ಸತ್ವಯುತವಾಗಿದೆ.

ರಚಯಿತ್ರಿ, ರಂಗನಾಯಕನಮ್ಮನವರ ತೆಲುಗು ಕಾದಂಬರಿಯ ಕನ್ನಡಾನುವಾದ. ಇದರ ಅನುವಾದಕರು ಯಂ. ಜಿ. ಭೀಮರಾವ್. ಹೆಂಡತಿಯಾದವಳು ತನಗಿಂತ ವಿದ್ಯೆಯಲ್ಲಿ ಕಡಿಮೆ ಇರಬೇಕೆಂದು ಗಂಡನಾದವನು ಬಯಸುತ್ತಾನೆ. ತನಗಿಂತ ಅಧಿಕ ವಿದ್ಯಾವತಿಯಾದವಳನ್ನು ಮದುವೆಯಾಗಿ ತನ್ನ ಅಭಿಮಾನಕ್ಕೆ ಪೆಟ್ಟು ಬಿದ್ದುದನ್ನು ಸಹಿಸದೆ ಮನಸ್ಸು ಕೆಡಿಸಿಕೊಂಡು ಒದ್ದಾಡುವ ಗಂಡಸಿನ ಚಿತ್ರ ಇಲ್ಲಿದೆ. ಕಡೆಯಲ್ಲಿ ತನ್ನ ತಪ್ಪಿನ ಅರಿವಾಗಿ ಕಣ್ತೆರೆವಾಗ ಅವನು ಶಾಂತಿಯನ್ನು ಪಡೆಯುತ್ತಾನೆ. ಇಂತಹ ವಸ್ತುವನ್ನು ಕುರಿತ ಕತೆ, ಕಾದಂಬರಿಗಳು ನಮ್ಮಲ್ಲೇ ಸಾಕಷ್ಟಿರುವಾಗ ಇದರ ಕನ್ನಡಾನುವಾದದ ಅಗತ್ಯವಿತ್ತೇ ಎಂದು ಪ್ರಶ್ನಿಸಬೇಕಾಗುತ್ತದೆ?

ಅಗ್ನಿದಿವ್ಯ, ವಿ. ಗ. ಕಾನಿಟ್ಕರ್ ಅವರ ಮರಾಠಿ ಕಾದಂಬರಿಯ ಕನ್ನಡ ಅನುವಾದ. ಇದರ ಅನುವಾದಕರು ರಂ. ಶಾ. ಅವರು. ಈ ಕಾದಂಬರಿಯ ಕಾಲ ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲ. ಸಿಪಾಯಿದಂಗೆಗೆ ಮೊದಲು. ಬ್ರಿಟಿಷರು ತಮ್ಮ ಕುಟಿಲ ರಾಜತಂತ್ರವನ್ನು ಭಾರತದಲ್ಲಿ ಹರಡುತ್ತಿದ್ದ ಕಾಲದಲ್ಲಿ ಮಿಶಿನರಿಗಳು ದೇಶೀಯರಿಗೆ ಧರ್ಮದೀಕ್ಷೆ ಕೊಟ್ಟು ಅವರನ್ನು ತಮ್ಮ ಕಡೆಗೆ ಸೆಳೆದುಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ನೀಲಕಂಠ ಶಾಸ್ತ್ರಿ ಎಂಬ ಚಿತ್ಪಾವನ ಬ್ರಾಹ್ಮಣ ವಿದ್ವಾಂಸನೊಬ್ಬ ಹಿಂದೂಧರ್ಮದಲ್ಲಿಲ್ಲದ ಆಕರ್ಷಣೆ ಕ್ರೈಸ್ತಧರ್ಮದಲ್ಲಿದೆ ಎಂದು ಭ್ರಮಿಸಿ ಮತಾಂತರ ಹೊಂದುತ್ತಾನೆ. ಕಡೆಗೆ ಅವನಿಗೆ ಲಂಡನ್ನಿನಲ್ಲಿ ಜನಜೀವನದ ಪ್ರತ್ಯಕ್ಷ ದರ್ಶನವಾದ ಮೇಲೆ ಅವನಿಗೆ ಭ್ರಮನಿರಸನವಾಗುತ್ತದೆ. ಮ್ಯಾಕ್ಸ್ ಮುಲ್ಲರನ ಮಾತು ಕೇಳಿದಮೇಲೆ 'ಮತಾಂತರವೆಂದರೆ ರಾಷ್ಟ್ರಾಂತರವೆಂಬ' ವ್ಯಾವಹಾರಿಕ ಸತ್ಯದ ಜ್ಞಾನೋದಯವಾಗಿ ಸ್ವದೇಶಕ್ಕೆ ಮರಳುತ್ತಾನೆ. ಹೀಗೆ ಮತಾಂತರ ಹೊಂದಿದ ವೈದಿಕ ಪಂಡಿತ ಕಡೆಗೆ ಧರ್ಮವೆಂಬ ಸೈತಾನನ ಪಿಶಾಚಕೃತ್ಯಕ್ಕೆ ಹೇಸಿ, ಮಾನಸಿಕ ತುಮುಲವನ್ನು ಅನುಭವಿಸುವುದರ ಚಿತ್ರಣ ಪರಿಣಾಮಕಾರಿಯಾಗಿದೆ.

ನೀಲಕಂಠ ಶಾಸ್ತ್ರಿಯನ್ನು ಮತಾಂತರಗೊಳಿಸುವಲ್ಲಿ ತೋರಿಬರುವ ಮಿಶನರಿ ಸ್ಮಿತ್‌ನ ಚಾಣಾಕ್ಷತನ ಚೆನ್ನಾಗಿ ವ್ಯಕ್ತವಾಗಿದೆ. ಹಿಂದೂ ಧರ್ಮದ ಪರವಾಗಿ ವಾದಿಸಲು ಹೋದ ಶಾಸ್ತ್ರಿ ತಾನೇ ಬೈಬಲ್ ಓದಲು ಒಪ್ಪಿಕೊಂಡ ಸಂದರ್ಭ ಹಾಗೂ ದುಃಖಿತರ, ಅನಾಥರ ಕಂಬನಿ ಒರೆಸುವ ಸಾಮರ್ಥ್ಯ ಕ್ರೈಸ್ತಮತಕ್ಕೆ ಇದೆ ಈ ಮತವೇ ಮಾನವತೆಗೆ ತೀರ ಹತ್ತಿರವಾದ ಮತ ಎಂಬ ವಿಶ್ವಾಸದಿಂದ ಶಾಸ್ತ್ರಿ ಮತಾಂತರ ಹೊಂದಿದ ಸಂದರ್ಭದ ವಿವರಗಳನ್ನು ಕಾದಂಬರಿ ಚೆನ್ನಾಗಿ ಚಿತ್ರಿಸಿದೆ. ಈ ಕಾಲದಲ್ಲಿ ಭಾರತದ ಜನ ಜೀವನದಲ್ಲಿ ಉಂಟಾಗಿದ್ದ ಏರುಪೇರಿನ ಸ್ಥಿತಿಯನ್ನು ಲೇಖಕರು ವಿವೇಚಿಸಿದ್ದಾರೆ. ಶಾಸ್ತ್ರಿಯ ಕುಟುಂಬದ ಹಿನ್ನೆಲೆ ಅವನು ಬೇರೆ ಧರ್ಮಕ್ಕೆ ಶರಣು ಹೋಗುವಷ್ಟು ಪೂರಕವಾಗಿದೆ. ತಂದೆಯ ಸನ್ಯಾಸತನ, ಕುಟುಂಬದ ಹೊಣೆಹೊತ್ತ ಚಿಕ್ಕಪ್ಪ,

ಚಿಕ್ಕವಯಸ್ಸಿನಲ್ಲಿ ಮೊದಲನೆ ಹೆಂಡತಿಯ ಸಾವು, ಕ್ಷಯರೋಗ ಪೀಡಿತ ತಾಯಿ ಸಾಯುವಾಗ ಮಗನಿಗೆ ಎರಡನೆಯ ಮದುವೆ ಮಾಡಿಸಿದ್ದು, ಸಂಪ್ರದಾಯದ ಗೆರೆ ದಾಟದಂತೆ ಕಟ್ಟುನಿಟ್ಟನ್ನು ಪಾಲಿಸುತ್ತಿದ್ದ ಮನೆಯ ಹಿರಿಯರ ನಡವಳಿಕೆಗಳು—ಇವುಗಳೆಲ್ಲದರಿಂದ ಶಾಸ್ತ್ರಿ ಮನೆಗೆ 'ಪರಕೀಯ'ನಂತಿದ್ದ.

ಶಾಸ್ತ್ರಿಯಂತಹ 'ಭೋಳೆ' ಸ್ವಭಾವದ ವ್ಯಕ್ತಿಯೊಬ್ಬ ಮಿಶನರಿಗಳ ಜಾಲಕ್ಕೆ ಸಿಕ್ಕಿಬಿದ್ದುದರ ಹಿನ್ನೆಲೆ ಸಮರ್ಥನೀಯವಾಗಿದೆ. ಹೀಗೆ "ಒಂದು ವ್ಯಕ್ತಿ, ಕುಟುಂಬ ಹಾಗೂ ದೇಶದ ವಿನಾಶಕ್ಕೆ ಕಾರಣವಾಗುವ ಬುದ್ಧಿ ಬೇಧದ ಭಯಾನಕ ಪರಿಣಾಮ'' ಮತ್ತು "ಜನಜೀವನದಲ್ಲಿ ಆ ಕಾಲದಲ್ಲಿ ಉಂಟಾದ ಅಲ್ಲೋಲ ಕಲ್ಲೋಲ ಪರಿಸ್ಥಿತಿ" ಇಲ್ಲಿ ವ್ಯಕ್ತವಾಗಿದೆ. "ಆಚರಣೆಯಲ್ಲಿರುವುದೇ ನಿಜವಾದ ಧರ್ಮ; ವ್ಯವಹಾರವೇ ಧರ್ಮ. ಅಲ್ಲಿ ಇಲ್ಲದ ಕಾರುಣ್ಯ, ಸಹಿಷ್ಣುತೆ, ಹೃದಯವಂತಿಕೆ ಯಾವ ಗ್ರಂಥದಲ್ಲಿದ್ದರೇನು ಪ್ರಯೋಜನ ?" ಎಂಬ ನಿತ್ಯ ಸತ್ಯವನ್ನು ಪ್ರತಿಬಿಂಬಿಸುವ ಅಗ್ನಿದಿವ್ಯ ಒಂದು ಸಾರ್ಥಕವಾದ ಹಾಗೂ ಗಮನಾರ್ಹವಾದ ಕೃತಿಯಾಗಿದೆ. ಪಾತ್ರಗಳು ವಾಸ್ತವ ನೆಲಗಟ್ಟಿನಮೇಲೆ ನಿಂತಿವೆ. ಅನುವಾದದ ಭಾಷೆ ಸರಳವಾಗಿದ್ದು ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಒಟ್ಟಿನಲ್ಲಿ 'ಇದು ಕನ್ನಡಕ್ಕೆ ಸ್ವಾಗತಾರ್ಹವಾದ ಕೊಡುಗೆ ಎನಿಸುತ್ತದೆ.

ಇದುವರೆಗೆ ಗಮನಿಸಿದ ಈ ಸಲದ ಕಾದಂಬರಿಗಳ ಸಮೀಕ್ಷೆಯಿಂದ, ಬಹುಪಾಲು ಕೃತಿಗಳು ಸಾಧಾರಣ ಮಟ್ಟವನ್ನು ಮೀರಿ ಬೆಳೆದಿಲ್ಲವೆಂಬ ಅಂಶ ಗೋಚರವಾಗುತ್ತದೆ. ಆದರೆ ಕೇವಲ ಕೆಲವು ಕೃತಿಗಳು ಮಾತ್ರ ಈ ಸಾಹಿತ್ಯಪ್ರಕಾರದ ಆರೋಗ್ಯಕರ ಬೆಳವಣಿಗೆಯ ದ್ಯೋತಕವಾಗಿರುವ ಅಂಶ ತೃಪ್ತಿದಾಯಕವಾಗಿದೆ.

ಸಾಹಿತ್ಯ ವಿಮರ್ಶೆ

ಕಿ. ರಂ. ನಾಗರಾಜ

೧೯೭೪ರಲ್ಲಿ ಪ್ರಕಟವಾದ ಮೂವತ್ತೈದು ವಿಮರ್ಶೆಯ ಪುಸ್ತಕಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ. ಕಳೆದ ಐದು ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳ ಸಂಖ್ಯೆಗಿಂತ ಈ ವರ್ಷ ಹೆಚ್ಚು. ವೈಯಕ್ತಿಕ ವಿಮರ್ಶಾ ಸಂಕಲನಗಳ ಜೊತೆಗೆ ವಿಶ್ವವಿದ್ಯಾನಿಲಯಗಳು ಏರ್ಪಡಿಸಿದ ವಿಚಾರ ಸಂಕಿರಣಗಳಲ್ಲಿ ಪ್ರಸಿದ್ಧಪಡಿಸಿದ ಪ್ರಬಂಧಗಳ ಸಂಕಲನಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ. ಜನ್ನ, ಬೇಂದ್ರೆ, ಕುವೆಂಪು–ಇವರುಗಳ ಅಧ್ಯಯನಕ್ಕೆ ಸಂಬಂಧಿಸಿದ ವಿವಿಧ ಲೇಖಕರ ಲೇಖನಗಳನ್ನೊಳಗೊಂಡ ಸಂಕಲನಗಳು ಇದರಲ್ಲಿ ಸೇರಿವೆ. ವಿಮರ್ಶೆಯನ್ನೇ ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡ ಕನ್ನಡ ಅಧ್ಯಯನ ಕೇಂದ್ರ ನಡೆಸಿದ 'ಸಾಹಿತ್ಯ ವಿಮರ್ಶೆಯ ನೆಲೆ-ಬೆಲೆ' ಎಂಬ ವಿಚಾರ ಸಂಕಿರಣದಲ್ಲಿ-ಸಾಹಿತ್ಯ ವಿಮರ್ಶೆ, ವಿಮರ್ಶೆಯ ತಾತ್ತ್ವಿಕ ವಿಚಾರಗಳ ಚರ್ಚೆ, ಕೃತಿನಿಷ್ಠ ವಿಶ್ಲೇಷಣೆ, ಇವುಗಳನ್ನು ಕುರಿತು ನಡೆದ ಅಧ್ಯಯನ ಗಮನೀಯವಾದದ್ದಾಗಿದೆ. ಅಲ್ಲದೆ ಬೇಂದ್ರೆಯವರ ಕೃತಿಗಳನ್ನು ಹಲವಾರು ದೃಷ್ಟಿಕೋನಗಳಿಂದ ಸಮೀಕ್ಷಿಸಲಾಗಿರುವ 'ಕವಿ ಬೇಂದ್ರೆ' ಈ ಹೊತ್ತಿನ ಸಾಹಿತ್ಯ ವಿಮರ್ಶೆಯ ಅನೇಕ ದೃಷ್ಟಿಗಳನ್ನು ಪ್ರತಿನಿಧಿಸುವ ಕೃತಿಯಾಗಿದೆ. ಅಂತೆಯೇ ಸ್ವಾತಂತ್ರ್ಯದ ಇಪ್ಪತ್ತೈದು ವರ್ಷಗಳ ನೆನಪಿಗಾಗಿ ಮೈಸೂರು ವಿಶ್ವವಿದ್ಯಾನಿಲಯ ಏರ್ಪಡಿಸಿದ್ದ ವಿಚಾರ ಸಂಕಿರಣದ ಲೇಖನಗಳನ್ನು 'ಬಿಡುಗಡೆ ಬೆಳ್ಳಿ' ಎಂಬ ಪುಸ್ತಕ ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ವಿವಿಧ ಪ್ರವೃತ್ತಿಗಳನ್ನು ಕುರಿತ ಸಮೀಕ್ಷೆಗಳನ್ನು ಒಳಗೊಂಡಿದೆ.

ಸಾಹಿತ್ಯ ವಿಮರ್ಶೆಯ ಈ ಭಾಗದಲ್ಲಿ–ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಸಾಹಿತ್ಯ ಚರಿತ್ರೆ'ಯ ಸಂಪುಟಗಳ ಸಮೀಕ್ಷೆಯೂ ಸೇರಿದೆ. ಅಲ್ಲದೆ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಎಂಬ ಯೋಜನೆಯ ಅಂಗವಾಗಿ ಪ್ರಕಟವಾಗಿರುವ ಬೆಂಗಳೂರು ವಿಶ್ವವಿದ್ಯಾಲಯದ ಹತ್ತು ಸಂಪುಟಗಳ ಸಾಹಿತ್ಯ ಚರಿತ್ರೆಯನ್ನು ಈ ಸಮೀಕ್ಷೆಯ ಕಕ್ಷೆಗೆ ಸೇರಿಸಿಕೊಳ್ಳಲಾಗಿದೆ. ಸಾಹಿತ್ಯ ಚರಿತ್ರೆಯ ಉದ್ದೇಶ, ನಿರೂಪಣಾ ವಿಧಾನ ಮತ್ತು ಸಂಖ್ಯೆ–ಇವುಗಳನ್ನು ಗಮನಿಸಿದರೆ 'ಸಾಹಿತ್ಯ ವಾರ್ಷಿಕ'ದಲ್ಲಿ ಅದಕ್ಕಾಗಿಯೇ ಪ್ರತ್ಯೇಕ ವಿಭಾಗವೊಂದು ಏರ್ಪಡುವ ಅಗತ್ಯವಿದ್ದಂತೆ ತೋರುತ್ತದೆ.

ಕನ್ನಡ ವಿಮರ್ಶೆಯ ನೆಲೆ-ಬೆಲೆ (ಸಂ. ಡಾ|| ಜಿ. ಎಸ್. ಶಿವರುದ್ರಪ್ಪ) ಕನ್ನಡ ವಿಮರ್ಶೆಯ ಸ್ವರೂಪ ಮತ್ತು ಅದರ ಸೈದ್ಧಾಂತಿಕ ನಿಲುವುಗಳನ್ನು ಹತ್ತು ಜನ ವಿಮರ್ಶಕರು ಚರ್ಚಿಸಿರುವ ಕೃತಿ. ಇದರಲ್ಲಿ ಹತ್ತು ಪ್ರಬಂಧಗಳ ಜೊತೆಗೆ ಎಸ್. ಎಲ್. ಭೈರಪ್ಪನವರ ಅಧ್ಯಕ್ಷ ಭಾಷಣ (ಸಮಾಲೋಕನ) ಇದರಲ್ಲಿದೆ. ಅರ್ಧ ಶತಮಾನದ ಇತಿಹಾಸವಿರುವ ಹೊಸಗನ್ನಡ ವಿಮರ್ಶೆಯನ್ನು ಮತ್ತು ಅದನ್ನು ರೂಪಿಸಿದ ಪ್ರೇರಣೆ ಪ್ರಭಾವಗಳನ್ನು ಈ ಲೇಖನಗಳು ಒಳಗೊಂಡಿವೆ. ಜೊತೆಗೆ ಕೃತಿನಿಷ್ಠ ಅಧ್ಯಯನದ ಒಂದು ಭಾಗವೂ ಇದರಲ್ಲಿದೆ. 'ಸ್ವಾತಂತ್ರ್ಯಪೂರ್ವ ವಿಮರ್ಶೆಯ ರೂಪರೇಖೆ' (ಅ. ರಾ. ಮಿತ್ರ) ಈ ಲೇಖನದಲ್ಲಿ ಧೋರಣೆಗಳ ಹಿನ್ನೆಲೆಯಲ್ಲಿ ವಿಮರ್ಶೆಯ ಸ್ವರೂಪವನ್ನು ಪರಿಚಯ ಮಾಡಿಕೊಡುವ ಅಂಶಗಳು ಕಡಿಮೆ. ಒಬ್ಬೊಬ್ಬ ವಿಮರ್ಶಕನ ಮೂಲಕ ಪ್ರಕಟಗೊಂಡಿರುವ ವಿಮರ್ಶನಾ ರೀತಿ ಯಾವ ಸ್ವರೂಪದ್ದೆಂಬ ಸಾಮಾನ್ಯ ಸಮೀಕ್ಷೆ ದೊರೆಯುತ್ತದಲ್ಲದೆ, ಅವುಗಳ ತಾತ್ವಿಕ ವಿಶ್ಲೇಷಣೆ ಇಲ್ಲಿ ಕಾಣುವುದಿಲ್ಲ. 'ನಿಶ್ಚಿತ ಚಿಂತನ ಮಾಧ್ಯಮ' ಇಲ್ಲದೆ ಇರುವುದರಿಂದ ಒಂದು ಕಾಲ ಘಟ್ಟದ ವಿಮರ್ಶೆಯ ಸಾಂಸ್ಕೃತಿಕ ಸ್ವರೂಪವನ್ನು ಈ ಬರಹ ಒಳಗೊಳ್ಳುವುದಿಲ್ಲ.

'ಜಯಾಪಜಯಗಳ ಪ್ರಶ್ನೆಯಿಲ್ಲ, ವಿಷಯ ಸ್ಪಷ್ಟವಾಗುವುದೊಂದೆ ಮುಖ್ಯ' ಎಂಬ ವಿನಂತಿಯಿಂದ ಸ್ವಾತಂತ್ರ್ಯೋತ್ತರ ವಿಮರ್ಶೆಯ ಪ್ರಜ್ಞೆಯ ಬಗೆಗೆ ಎಲ್. ಎಸ್. ಶೇಷಗಿರಿರಾಯರು ವಿಚಾರ ಮಾಡಿದ್ದಾರೆ. ಈ ಲೇಖನದಲ್ಲಿ ಶೇಷಗಿರಿರಾಯರು ಸೈದ್ಧಾಂತಿಕವಾಗಿ ಚರ್ಚೆ ಮಾಡಲು ಹೊರಟು ಅಂಥ ಚರ್ಚೆಯನ್ನು ಕೈಬಿಟ್ಟು ಒಂದು ವರದಿಯ ರೂಪಕ್ಕೆ ವಿಮರ್ಶೆಯ ತಾತ್ತ್ವಿಕ ಚರ್ಚೆಯನ್ನು ಇಳಿಸುತ್ತಾರೆ. ನವೋದಯ-ನವ್ಯ ಇವುಗಳ ವಿಮರ್ಶನ ನೆಲೆಗಳನ್ನು ಪ್ರತಿಕ್ರಿಯಾತ್ಮಕವಾದ ಧೋರಣೆಯ ಮೂಲಕವೇ ಅವರು ಇನ್ನೂ ನೋಡುತ್ತಿರುವಂತೆ ಕಾಣಿಸುತ್ತದೆ. ನವ್ಯ ನವ್ಯೇತರ ಮುಂತಾದ ಚರ್ಚೆ ಪ್ರಬಂಧಕಾರರ ದೃಷ್ಟಿಯಲ್ಲಿ ಎರಡು ಬಣಗಳ ಯುದ್ಧದಂತೆ ಕಂಡಿದೆ! ಅಡ್ಡಗೋಡೆಯ ಮೇಲೆ ದೀಪವಿಡುವ ತಾತ್ತ್ವಿಕ ಗೋಂದಲದಿಂದ ಕೂಡಿದ ಈ ಲೇಖನ ವಿಮರ್ಶೆಯ ಪ್ರಜ್ಞೆಯ ಮುಖ್ಯ ನೆಲೆಗಳನ್ನು ಚರ್ಚಿಸುವ ಪ್ರಯತ್ನವನ್ನೇ ಮಾಡುವುದಿಲ್ಲ.

ಪರಂಪರೆ ಮತ್ತು ವಿಮರ್ಶಕ (ಎಚ್. ತಿಪ್ಪೇರುದ್ರಸ್ವಾಮಿ) ಇದು ಒಂದು ರೀತಿಯಲ್ಲಿ ಉದ್ದೇಶವಿಲ್ಲದೆ ಖಂಡನೆಗೆ ತೊಡಗುವ ಲೇಖನ. ಕನ್ನಡದ ಪ್ರಾಚೀನ ಕವಿಗಳನ್ನು ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾದವರು ಓದಿಯೇ ಇಲ್ಲವೆಂಬ ಆಪಾದನೆಯ ಮೂಲಕ ಪರಂಪರೆ ಮತ್ತು ವಿಮರ್ಶಕನ ಸಮಸ್ಯೆಗಳನ್ನು ಚರ್ಚಿಸುತ್ತಾರೆ. ಪರಂಪರೆಯ ಅರಿವಿಲ್ಲ ಎಂಬ ಅವರ ಆಪಾದನೆಯ ಜೊತೆಗೆ 'ಸದಾ ತಮ್ಮತನದ ಸುತ್ತಲೇ ತಿರುಗುತ್ತಿರುವವರು, ಅಹಂಜಾಗೃತರು, ಧರ್ಮ, ಸಂಸ್ಕೃತಿ, ಪರಂಪರೆ ಈ ಮಾತುಗಳೇ ಅವರ ವಿಚಾರವಂತಿಕೆಗೆ ಅಲರ್ಜಿ' ಇತ್ಯಾದಿ ಮಾತುಗಳಿಂದ ಪರಂಪರೆಯನ್ನಾಗಲಿ ವಿಮರ್ಶನ ನಿಲುವುಗಳನ್ನಾಗಲಿ ವಸ್ತುನಿಷ್ಠವಾಗಿ ಅಧ್ಯಯನ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ಆಲೋಚನಾ ವಿಧಾನಕ್ಕೆ ಪ್ರತಿಬಂಧಕವನ್ನು ಒಡ್ಡಿಕೊಂಡಂತಾಗುತ್ತದೆ. ವಿಮರ್ಶಕ-ಪರಂಪರೆಯ ಬಗೆಗೆ ತೋರಿಸುವ ದೃಷ್ಟಿ ಯಾವಾಗಲೂ ಸಾಂಸ್ಕೃತಿಕವಾದದ್ದು. ಸಮಕಾಲೀನ ವಿಮರ್ಶೆಯೂ ಕೂಡ ಸಾಂಸ್ಕೃತಿಕ ಕ್ರಿಯಾ ಸಂಬಂಧಗಳಿಗೆ ಒಳಪಟ್ಟು ನಡೆಯುವುದರಿಂದಲೇ ವಿಮರ್ಶೆಯ ಚಲನಶೀಲ ಸ್ಥಿತಿಯನ್ನು ನಿರ್ಧರಿಸುತ್ತದೆ. ಪರಂಪರೆಯನ್ನು ಒಂದು ಸ್ಥಗಿತಗೊಂಡ ಸ್ಥಿತಿಯನ್ನಾಗಿ ಗುರುತಿಸಿಕೊಳ್ಳುವುದರಿಂದ ಇಂಥ ವಿಶ್ಲೇಷಣೆಗಳು ಹೊರಡುತ್ತವೆಂದು ಕಾಣುತ್ತದೆ. ನೈತಿಕ ದೃಷ್ಟಿಕೋನದಿಂದ ವಿಮರ್ಶೆಯ ನಿಲುವುಗಳನ್ನು ಪರಿಶೀಲಿಸಿದರೆ ಅತ್ಯಂತ ಅಪಾಯಕಾರಿಯಾದ ತೀರ್ಮಾನಗಳನ್ನು ಏರ್ಪಡುತ್ತವೆ. ಆಪಾದನೆಯ ಮೂಲಕ ನೈತಿಕ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ತಿಪ್ಪೇರುದ್ರಸ್ವಾಮಿಯವರು ಭಾವಿಸಿದ್ದರೆ ಅದು ಸಾಹಿತ್ಯ ವಿಮರ್ಶೆಯ ಕಕ್ಷೆಯಲ್ಲಿ ಯಾವ ಅರ್ಥವನ್ನೂ ಕೊಡಲಾರದೆಂಬುದನ್ನು ಇಲ್ಲಿ ಹೇಳಬೇಕಾಗಿದೆ. ಇಂಥ ಪ್ರಶ್ನೆಗಳನ್ನು ಒಡ್ಡುವುದಕ್ಕಿಂತ–ಇಂಥ ಪ್ರಶ್ನೆಗಳಿಗೆ ಕಾರಣವಾಗಿರುವ ಸ್ಥಿತಿಯನ್ನು ನಮ್ಮ ಸಾಹಿತ್ಯಾಭ್ಯಾಸದ ಸಂದರ್ಭದಲ್ಲಿ ಗುರುತಿಸಿಕೊಳ್ಳಬೇಕಾಗುತ್ತದೆ. ಸಾಹಿತ್ಯದ ಚರ್ಚೆಯಲ್ಲಿ–ಯಾವಾಗಲೂ ಸ್ಥಗಿತ ಮತ್ತು ಚಲನಶೀಲತೆಯ ನಡುವೆ ನಿರಂತರ ಘರ್ಷಣೆ ಇದ್ದೇ ಇರುತ್ತದೆಂಬ ಗ್ರಹಿಕೆಯಿಂದ ಹೊರಡಲು ಸಾಧ್ಯವೇ ಹೊರತು ಕಕ್ಷಿ-ಪ್ರತಿಕಕ್ಷಿಯ ಪಾಟೀಸವಾಲಿಗೆ ಹೊರಡುವುದು ಉಚಿತವಾದ ವಿಮರ್ಶಾಮಾರ್ಗ ಎನಿಸಿಕೊಳ್ಳುವುದಿಲ್ಲ.

ಪಾಶ್ಚಾತ್ಯ ವಿಮರ್ಶೆ–ಕನ್ನಡ ವಿಮರ್ಶೆ (ಮೊಕಾಶಿ ಪುಣೇಕರ) ಈ ಲೇಖನ ವಿಮರ್ಶೆಯಲ್ಲಿ ಏರ್ಪಟ್ಟಿರುವ ಪಾಶ್ಚಾತ್ಯ ಮತ್ತು ಕನ್ನಡ ಸಂದರ್ಭಗಳ ಚರ್ಚೆಯನ್ನು ಮಂಡಿಸುತ್ತದೆ. ಒಂದು ದೃಷ್ಟಿಯಿಂದ ಮೊದಲ ಮೂರು ಲೇಖನಗಳಲ್ಲಿ ಚರ್ಚಿತವಾಗಿರುವ ಪಾಶ್ಚಾತ್ಯ ಪ್ರಭಾವದ ಆಲೋಚನೆಗಳನ್ನು ಈ ಲೇಖನ ತಾತ್ತ್ವಿಕವಾಗಿ ವಿವೇಚಿಸುತ್ತದೆ. ಸೃಜನಶೀಲತೆಯ ಬರಗಾಲ ಮತ್ತು ವಿಮರ್ಶಾ ನಿರ್ಮಿತಿ ಇವುಗಳ ಸೂಕ್ಷ್ಮ ಸಂಬಂಧಗಳನ್ನು ಚರ್ಚಿಸಲಾಗಿದೆ. ಪಾಶ್ಚಾತ್ಯ ವಿಮರ್ಶೆಯ ಮತ್ತು ಕನ್ನಡ ವಿಮರ್ಶಕನ ನಿಲುವುಗಳಲ್ಲಿ ಏರ್ಪಟ್ಟಿರುವ ಸೂಕ್ಷ್ಮವಾದ ಕ್ರಿಯಾ ಸಂಬಂಧಗಳನ್ನೂ, ಪರಸ್ಪರ ವಿರೋಧಗಳನ್ನು ಚರ್ಚಿಸುವುದರ ಮೂಲಕ ಸೃಜನಶೀಲ ವಾತಾವರಣದ ಒಳನೋಟಗಳನ್ನು ಈ ಲೇಖನ ಪ್ರಕಟಿಸುತ್ತದೆ.

ವಿಮರ್ಶೆಯ ಭಾಷೆ-ಪರಿಭಾಷೆ (ಎಂ. ವಿ. ಸೀತಾರಾಮಯ್ಯ) ಈ ಲೇಖನ ವಿಮರ್ಶೆಯಲ್ಲಿ ಬಳಕೆಯಾಗುವ ಭಾಷಾ ಸ್ವರೂಪವನ್ನು ಕುರಿತು ವಿವರಿಸುತ್ತದೆ. ಭಾಷೆ ಮತ್ತು ಪರಿಭಾಷೆಗಳ ಬಗೆಗೆ ಏರ್ಪಡುವ ಯಾವುದೇ ಸೂಕ್ಷ್ಮ ಚರ್ಚೆ ಇಲ್ಲಿಲ್ಲ. ಪರಿಭಾಷೆಯ ನಿರ್ಮಿತಿಯ ಹಿನ್ನೆಲೆಯಲ್ಲಿ ನಡೆಸಲಾಗಿರುವ ವಿಶ್ಲೇಷಣೆಯ ಆರಂಭದ ಭಾಗ ಪ್ರಮುಖವಾಗಿ ಸಾಹಿತ್ಯಿಕ ನಿರ್ಮಿತಿಯ ತಾಂತ್ರಿಕ ಪರಿಭಾಷೆಗಷ್ಟೇ ಸೀಮಿತವಾಗಿದೆ. ಸಾಹಿತ್ಯದ ತಾಂತ್ರಿಕ ಪರಿಭಾಷೆಗೂ, ವಿಮರ್ಶನ ಪರಿಭಾಷೆಗೂ ವ್ಯತ್ಯಾಸವಿದೆ. ಪರಿಕಲ್ಪನೆ (concepts)ಗಳ ಚರ್ಚೆ ಕೇವಲ ತಾಂತ್ರಿಕ ಸ್ವರೂಪ ನಿರ್ಧಾರದ ಚರ್ಚೆ ಅಲ್ಲ. ಪರಿಕಲ್ಪನೆಗಳು ಸಮಕಾಲೀನ ಗ್ರಹಿಕೆಗಳ ಹಿನ್ನೆಲೆಯಲ್ಲಿ ಶೋಧನೆಗೆ ಗುರಿಯಾಗ ಬೇಕು. ಎಂ.ವಿ.ಸೀ. ಅವರ ಲೇಖನ ಪರಿಚಯಾತ್ಮಕವಾದ ಹಂತದಲ್ಲಿಯೇ ನಿಲ್ಲುವುದರಿಂದ ಅನೇಕ ಗೊಂದಲಗಳನ್ನು ಎದುರಿಸುತ್ತದೆ. ನವೋದಯ ಸಾಹಿತ್ಯದ ಪುನರ್ ವಿಮರ್ಶೆ ಪ್ರಾರಂಭ ವಾಗಿರುವ ಬಗೆಗೆ ಎಂ.ವಿ.ಸೀ.ಯವರು ಹೀಗೆ ಬರೆಯುತ್ತಾರೆ, 'ನವ್ಯ ಕಾವ್ಯದ ಪ್ರಭಾವಕ್ಕೆ ಒಳಗಾದ ಇಲ್ಲವೆ ನವೋದಯ ಸಾಹಿತ್ಯದಲ್ಲಿ ಆಸಕ್ತರಾದ ವಿಮರ್ಶಕರಿಂದ ನಡೆಯಬಹುದಾದ ವಿಮರ್ಶೆಯ ಪುನರ್‌ವಿಮರ್ಶೆಯ ಭಾಷೆ ಸಮರ್ಪಕವಾಗಿದ್ದೀತು ಎನಿಸುವುದಿಲ್ಲ. ಈ ಕೆಲಸ ಇನ್ನೂ ಕೆಲಕಾಲ ಕಳೆದಮೇಲೆ ನಡೆಯುವುದು ಒಳ್ಳೆಯದೆಂದು ತೋರುತ್ತದೆ.' ಲೇಖಕರ ಈ ಬಗೆಯ ಆತಂಕಕ್ಕೆ ಕಾರಣವೇನೋ ತಿಳಿಯುವುದಿಲ್ಲ. ಯಾವುದೇ ಕೃತಿ ಒಂದು ಸಮಕಾಲೀನ ಸಂದರ್ಭದಲ್ಲಿ ವ್ಯಾಖ್ಯೆಯನ್ನು ಪಡೆದುಕೊಳ್ಳುವುದು ಅನಿವಾರ್ಯ ಹಾಗೂ ಅಗತ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ವಿಮರ್ಶಕ ತನ್ನ ಕಾಲದ ವಿಮರ್ಶಾ ಸಂದರ್ಭದಲ್ಲಿ ನಿಂತು ಪುನರಾಲೋಚನೆಗೆ ಕಾರಣನಾಗಬೇಕಲ್ಲದೆ ತನ್ನ ಸಾಂಸ್ಕೃತಿಕ ಜವಾಬ್ದಾರಿಯನ್ನು ಯಾವುದೋ ಕಾಲಕ್ಕೆ ವರ್ಗಾಯಿಸಬೇಕೆಂದು ಭಾವಿಸುವುದು ಸಮಕಾಲೀನ ವಿಮರ್ಶೆ ಮತ್ತು ಪರಿಭಾಷೆಯ ಚರ್ಚೆಯನ್ನು ಪರಿಗಣನೆಗೆ ತಂದುಕೊಳ್ಳದೆ ಹೇಳುವ ಮಾತಾಗುತ್ತದೆ. ನವ್ಯ ವಿಮರ್ಶೆಯ ಭಾಷೆಯಲ್ಲಿ ಜೀವ ಪ್ರಪಂಚದ ವೈವಿಧ್ಯವಿಲ್ಲ ಎಂಬ ತೀರ್ಮಾನಕ್ಕೆ ಯಾವ ಕಾರಣದಿಂದ ಬರುತ್ತಾರೋ ತಿಳಿಯುವುದಿಲ್ಲ. ನವ್ಯ ವಿಮರ್ಶೆ ವಿಮರ್ಶಕ ಏನು ಹೇಳುತ್ತಿದ್ದಾನೆ ಎನ್ನುವುದರ ಕಡೆಗೆ ಓದುಗನ ಲಕ್ಷ್ಯ ಹೋಗುವಂತೆ ಮಾಡುತ್ತದೆ ಈ ಭಾಷೆ— ಎಂದು ಒಪ್ಪಿಕೊಂಡು ಭಾಷೆ ನಿರ್ಗುಣವಾಗಿದೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಹೀಗೆ ಒಂದೇ ವಿಷಯವನ್ನು ಕುರಿತು ಎರಡು ವಿರುದ್ಧ ಆಲೋಚನೆಗಳು ವ್ಯಕ್ತವಾಗುವುದರಿಂದ ಈ ಲೇಖನಕ್ಕೆ ಏಕ ಸೂತ್ರತೆಯಾಗಲಿ, ಗಟ್ಟಿಯಾದ ತಾರ್ಕಿಕ ಸಂಬಂಧವಾಗಲಿ ಇಲ್ಲವಾಗಿದೆ.

ಸಮಕಾಲೀನ ವಿಮರ್ಶಕರ ಸಮಸ್ಯೆಗಳು (ಡಿ. ಎ. ಶಂಕರ) ಸಮಕಾಲೀನ ವಿಮರ್ಶಕನ ಈ ಹೊತ್ತಿನ ಸಮಸ್ಯೆಗಳನ್ನು ಈ ಲೇಖನ ಚರ್ಚಿಸಿದೆ. ರಸಪರವಾದ ಧೋರಣೆಯನ್ನು ಕಟ್ಟಿಕೊಂಡು ಹೊರಡುವ ವಿಮರ್ಶೆಗೆ ಸಮಕಾಲೀನ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ. ಅಂಥ ವಿಮರ್ಶೆ ಅನಿವಾರ್ಯವಾಗಿ ವ್ಯಕ್ತಿನಿಷ್ಠ ವರ್ಣನಾತ್ಮಕ ಧಾಟಿಯನ್ನು ಪಡೆಯುತ್ತದೆಂಬ ವಿಶ್ಲೇಷಣೆಯನ್ನು ಮಾಡುತ್ತಾರಾದರೂ ಸಮಕಾಲೀನ ವಿಮರ್ಶನ ಧೋರಣೆ ಯಾವ ಸ್ವರೂಪದ್ದಾಗಬೇಕೆಂಬ ನೋಟ ಇಲ್ಲಿ ದೊರೆಯುವುದಿಲ್ಲ. ನಮ್ಮ ಈ ಹೊತ್ತಿನ ವಿಮರ್ಶೆ ಯಲ್ಲಿ ಏರ್ಪಡುವ ಅನೇಕ ಸಮಸ್ಯೆಗಳನ್ನು ಹಳಗನ್ನಡ-ನಡುಗನ್ನಡ ಕೃತಿಗಳ ಅಭ್ಯಾಸಕ್ಕೆ ಸಂಬಂಧಿಸಿದ ಸಮಸ್ಯೆಯಾಗಿ ಸ್ವೀಕರಿಸುತ್ತಾರೆ. ಹೀಗೆ ಸ್ವೀಕರಿಸಿದ ಸಮಸ್ಯೆಯನ್ನು ವಿಶ್ಲೇಷಿಸುತ್ತ ಹಳಗನ್ನಡ ಕವಿಗಳ ಧೋರಣೆಯನ್ನು ಧರ್ಮ ಒಪ್ಪಿದ ಅಥವಾ ಸಮಾಜ ಒಪ್ಪಿದ ಮೌಲ್ಯಗಳನ್ನು ಕಾಂತಾಸಮ್ಮಿತಿಯಿಂದ ಭಾಷೆಯಲ್ಲಿ ಹೇಳಹೊರಟವರು ಎಂಬ ಸರಳನೆಲೆಯಲ್ಲಿ ಗುರುತಿಸಿಕೊಳ್ಳು ತ್ತಾರೆ. ಹೀಗಾಗಿ ಹಳಗನ್ನಡ-ನಡುಗನ್ನಡ ವಿಶ್ಲೇಷಣೆಗೆ ಹೊಂದಿಬರುವ ವಿಮರ್ಶನಾ ವಿಧಾನ ವನ್ನು ಎಲ್ಲೂ ಸ್ಪಷ್ಟಪಡಿಸುವುದಿಲ್ಲ. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ವಿಮರ್ಶೆ ಲಾಭ ದಾಯಕವಾಗಬೇಕೆಂದು ಹೇಳುವ ಶಂಕರ ಅವರ ಲೇಖನ ಸಮಸ್ಯೆಗಳ ಸ್ವರೂಪವನ್ನು ನಮ್ಮ ಮುಂದೆ ಮಂಡಿಸುವುದರಲ್ಲಿ ವಿಶಿಷ್ಟವಾದ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಆದರೆ ಆ ಪ್ರಶ್ನೆಗಳ ಸಂದರ್ಭದಲ್ಲಿ ಏರ್ಪಡುವ ಸಮಸ್ಯೆಗಳ ಕಡೆಗೆ ಅವರ ಗಮನವಿದ್ದಂತೆ ತೋರುವುದಿಲ್ಲ. ಕುಮಾರ

ವ್ಯಾಸ ಭಾರತದಲ್ಲಿ ಅಕ್ಷಯ ವಸ್ತ್ರಪ್ರಸಂಗ (ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ) ''ದ್ವಾಪರ ಯುಗದ ಧರ್ಮ ಪ್ರಜ್ಞೆಯು ಟೊಳ್ಳು ತೋರಿಸಿಕೊಟ್ಟ ಘಟನೆ''ಯನ್ನಾಗಿ ಕುಮಾರವ್ಯಾಸ ಭಾರತದ ಅಕ್ಷಯ ವಸ್ತ್ರ ಪ್ರಸಂಗವನ್ನು ಲೇಖಕರು ಇಲ್ಲಿ ಸಮೀಕ್ಷಿಸಿದ್ದಾರೆ. ಈ ಲೇಖನ 'ನೈತಿಕ' ಮೌಲ್ಯಗಳನ್ನು ಮಾತ್ರ ಒಪ್ಪಿ ಹೊರಟಿರುವ ವಿಶ್ಲೇಷಣೆ. ನೈತಿಕ ಮತ್ತು ಅನೈತಿಕ ಸಂದರ್ಭಗಳನ್ನು ಕುಮಾರವ್ಯಾಸ ಭಾರತದ ಈ ಪ್ರಸಂಗದ ಹಿನ್ನೆಲೆಯಲ್ಲಿ ಅವರು ವಿವೇಚಿಸಿದ್ದಾರೆ. ದ್ವಾಪರ ಯುಗದ ಧರ್ಮ ಪ್ರಜ್ಞೆಯ ಸ್ವರೂಪವನ್ನು ಮತ್ತು ಅದಕ್ಕೆ ಕುಮಾರವ್ಯಾಸ ಭಾರತ ತೋರುವ ಪ್ರತಿಕ್ರಿಯೆಯನ್ನಾಗಿ ಈ ಲೇಖನ ಬೆಳೆಯುತ್ತದೆ. ಕನ್ನಡ ಭಾರತವನ್ನು ದ್ವಾಪರಯುಗದ ಧರ್ಮ ಪ್ರಜ್ಞೆಯ ಚರ್ಚೆಗೆ ಬಳಸಿಕೊಳ್ಳುವುದು ಕಾವ್ಯ ವಿಮರ್ಶೆಯ ಅಸಂಬದ್ಧ ಗ್ರಹಿಕೆಗೆ ಕಾರಣವಾಗಿದೆ. ಇದು ನಮ್ಮ ಕವಿಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಉಂಟಾಗುವ ದೊಡ್ಡ ಅನ್ಯಾಯ. ಮಹಾಕಾವ್ಯಗಳಲ್ಲಿ ಅಭಿವ್ಯಕ್ತವಾಗಿರುವ totalality of object ಅನ್ನು ಗಣನೆಗೆ ತಂದುಕೊಳ್ಳದೆ ಒಂದು ಪ್ರಸಂಗದ ಧರ್ಮಾಧರ್ಮ ವಿವೇಚನೆಗೆ ವಿಮರ್ಶೆ ಕೆಲಸ ಮಾಡುವುದು ಸಮಕಾಲೀನ ವಿಮರ್ಶೆಯ ನೆಲೆಗಳನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದರಿಂದ ಉಂಟಾಗಿರುವ ಗೊಂದಲವಾಗಿದೆ. ಇದರಿಂದ ವಿಮರ್ಶೆಯ ಉದ್ದೇಶಕ್ಕೆ ಒಂದು ಅಸಂಗತ ಮಿತಿಯನ್ನು ಕಲ್ಪಿಸಿಕೊಂಡಂತೆ ಆಗಿದೆ. ಯಾವುದೋ ಯುಗದ ಕಾಲ್ಪನಿಕ ಆಶಯಗಳನ್ನು ಒಂದು ಸಾಂಸ್ಕೃತಿಕ ನಿರ್ಮಿತಿಯ ಜೊತೆಗೆ ಸಮೀಕರಿಸಿಕೊಳ್ಳುವುದೇ ಈ ಬರಹದ ಧಾಟಿ ಆದ್ದರಿಂದ ಈ ಲೇಖನ ಸಂಪೂರ್ಣವಾಗಿ ವಿಮರ್ಶನ ನಿಲುವುಗಳಿಂದ ದೂರವಾಗಿದೆ. ಕುಮಾರವ್ಯಾಸನ ಈ ಪ್ರಸಂಗವನ್ನು ಭಕ್ತಿಪಂಥದ ನಿಲುವುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಮುಖ್ಯವಾಗುತ್ತದೆ. ಗದುಗಿನ ಭಾರತಕ್ಕಿರುವ ಪ್ರಾದೇಶಿಕ ಸತ್ತ್ವ ಕೃತಿಯ ಮಹತ್ವದ ನೆಲೆಯಾಗಿದೆಯಲ್ಲದೆ ದ್ವಾಪರದ ಸತ್ಯಕ್ಕೆ ಈ ಕಾವ್ಯ ಪ್ರತಿಕ್ರಿಯೆಯನ್ನು ತೋರಿದೆ ಎಂದು ಭಾವಿಸುವುದು ದೂರಾನ್ವಯವಾಗುತ್ತದೆ. ಕೃತಿ ಕೊಡುವ ಬದುಕಿನ ಒಳನೋಟಗಳನ್ನು ದೂರದ ಅಮೂರ್ತ ದ್ವಾಪರದೊಡನೆ ಗಂಟು ಹಾಕಿರುವುದು ಕೊಂಕಣವನ್ನು ಸುತ್ತಿ ಮೈಲಾರಕ್ಕೆ ಹೋದಂತಾಗಿದೆ. ಪಂಪ, ಕುಮಾರವ್ಯಾಸ ಮುಂತಾದ ಕವಿಗಳ ಮೇಲೆ ವ್ಯಾಸಭಾರತವೇ ಮೊದಲಾಗಿ ಅನೇಕ ಕೃತಿಗಳು ಪ್ರಭಾವವನ್ನು ಬೀರಿದ್ದರೂ ಸಮಕಾಲೀನ ಸತ್ಯಗಳ ಬಗೆಗೆ ಅವರ ಶೋಧನೆಯೇ ಮಹತ್ವದ್ದಾಗುತ್ತದೆ. ಲೇಖಕರ ಆಲಂಕಾರಿಕವಾದ ಭಾಷೆ-ವಿಮರ್ಶೆಯನ್ನು ಬಿಟ್ಟು ಘಟನೆಯನ್ನು ನಿರೂಪಿಸುವ, ಕಥಾತ್ಮಕವಾದ ನೈತಿಕ ನೆಲೆಯಲ್ಲಿ ನಿಂತ ಪುರಾಣಿಕ ಧಾಟಿಯನ್ನು ಮಾತ್ರ ಈ ಲೇಖನ ಪ್ರಕಟಿಸುತ್ತದೆ.

ಲಂಕೇಶರ ರೊಟ್ಟಿ (ಜಿ. ಎಸ್. ಸದಾಶಿವ) ಅನಂತಮೂರ್ತಿಯವರ ಭಾರತಿಪುರ (ಟಿ. ಜಿ. ರಾಘವ) ಕುವೆಂಪು ಅವರ ಬೆರಳ್‌ಗೆ ಕೊರಳ್ (ಕ. ವೆಂ. ರಾಜಗೋಪಾಲ) ಈ ಮೂರು ಲೇಖನಗಳು ಕೃತಿನಿಷ್ಠ ಪ್ರಾಯೋಗಿಕ ವಿಮರ್ಶೆಯನ್ನು ನಡೆಸುತ್ತವೆ. ಅಚ್ಚುಕಟ್ಟಾಗಿ ರೂಪುಗೊಂಡಿರುವ ಈ ಲೇಖನಗಳಲ್ಲಿ ಕೃತಿಯ ಗಂಭೀರವಾದ ಅಧ್ಯಯನವನ್ನು ಕಾಣುತ್ತೇವೆ.

ಎಸ್. ಎಲ್. ಭೈರಪ್ಪನವರ ಅಧ್ಯಕ್ಷ ಭಾಷಣ ಅನೇಕ ವಿವಾದಾಸ್ಪದ ಸಂಗತಿಗಳನ್ನು ಒಳಗೊಂಡಿದೆ. ಭಾರತೀಯ ಮತ್ತು ಪಾಶ್ಚಾತ್ಯ ಪ್ರಭಾವಗಳಿಗೆ ಸಂಬಂಧಿಸಿದ ಚರ್ಚೆ ಪಾಶ್ಚಾತ್ಯ ಪ್ರಭಾವ ಉಂಟಾದಾಗಿನಿಂದಲೂ ಇದ್ದದ್ದೇ. ಈ ಚರ್ಚೆ ಕೇವಲ ಸಾಹಿತ್ಯಕಷ್ಟೇ ಸೀಮಿತವಾದದ್ದಲ್ಲ. ಇಂಥ ಚರ್ಚೆಯನ್ನು ಸರಳಗೊಳಿಸಿ ಹೇಳುವುದು ಅಷ್ಟು ಉಚಿತವೆನಿಸುವುದಿಲ್ಲ. ಲಂಕೇಶರ ರೊಟ್ಟಿ ಕತೆಯನ್ನು ಕಾಫ್ಕನ ಪ್ರಭಾವಕ್ಕೆ ಗಂಟುಹಾಕುವುದು, ಭಾರತಿಪುರವನ್ನು ಎಗ್ಸಿಸ್ಟೆನ್ಸಿಯಲಿಸಂ ಜೊತೆಗೆ ಸೇರಿಸಿ ಚರ್ಚೆ ನಡೆಸುವುದರಿಂದ ಯಾವ ಪ್ರಯೋಜನವೂ ಆಗಲಾರದು. ಭಾರತೀಯತೆಯನ್ನು ಶುದ್ಧ ಸ್ವರೂಪದಲ್ಲಿ ಕಲ್ಪಿಸಿಕೊಳ್ಳುವುದರಿಂದ ಹುಟ್ಟುವ ಸರಳ ಆಲೋಚನೆಗಳು ಇಲ್ಲಿ ಕಾಣಿಸುತ್ತದೆ. ಒಂದು ಕೃತಿಯಲ್ಲಿ ಪ್ರಕಟಗೊಂಡಿರುವ ವಿವರಗಳನ್ನು ಶುದ್ಧ ಭಾರತೀಯವೆಂಬ ತರ್ಕಕ್ಕೆ ಇಲ್ಲವೆ ತತ್ವಶಾಸ್ತ್ರದ ಚೌಕಟ್ಟಿಗೆ ಒಳಪಡಿಸಿಕೊಂಡು ಆಲೋಚಿಸುವ ಈ ಮಾರ್ಗ ಸಮಕಾಲೀನ ಸಾಹಿತ್ಯದ ನೆಲೆಯನ್ನು ಸಂಪೂರ್ಣವಾಗಿ ನಿರಾಕರಿಸುವಂಥದ್ದು. ಇಂಥ ನಿರಾಕರಣೆಯಿಂದ ಭೈರಪ್ಪನವರು ನೇರವಾಗಿ ಜೀವನ ವಿರೋಧಿ ನಿಲುವುಗಳನ್ನು ತಲುಪುತ್ತಾರೆ. ಲಂಕೇಶರ

'ರೊಟ್ಟಿ'ಯಾಗಲಿ ಅನಂತಮೂರ್ತಿಯವರ 'ಭಾರತೀಪುರ'ವಾಗಲಿ ನಮ್ಮ ಈ ಹೊತ್ತಿನ ಬದುಕಿನ ಒಳನೋಟಗಳನ್ನು ಮತ್ತು ಅದರ ಸ್ವರೂಪವನ್ನು ಯಾವ ರೀತಿಯಲ್ಲಿ ತಿಳಿಸುತ್ತವೆಂಬ ಸಾಂಸ್ಕೃತಿಕ ಚರ್ಚೆಯನ್ನು ವಿರೋಧಿಸಿ ನಿಲ್ಲುವ ಧೋರಣೆ ಅವರ ಇಡೀ ಭಾಷಣದ ಮುಖ್ಯ ಧಾಟಿಯಾಗಿದೆ. ಆವೇಶಭರಿತವಾದ ಮತ್ತು ಚರ್ಚೆಗೆ ಅವಕಾಶ ಮಾಡಿಕೊಡದ ನಿಲುವುಗಳಲ್ಲಿ ನಿಂತು ವಿಮರ್ಶೆಯ ಆರೋಗ್ಯದ ಬಗೆಗೆ ಮಾತನಾಡುವುದು ವಿರೋಧಾಭಾಸದ ಸಂಗತಿ.

ವಿಚಾರ ಸಂಕಿರಣದ ಯೋಜನೆಯಲ್ಲಿ, ವಿವಿಧ ಲೇಖಕರಿಗೆ ವಹಿಸಿರುವ ವಿಷಯಗಳ ಆಯ್ಕೆಯ ಚೌಕಟ್ಟಿನಲ್ಲಿ ವಿಮರ್ಶೆಯ ಸಂದರ್ಭವನ್ನು ಹೊಸದಾಗಿ ಸಮೀಕ್ಷಿಸಿರುವ ನಡೆಸಿದ ಈ ಪ್ರಯತ್ನ ಗಮನಾರ್ಹವಾದದ್ದು.

ಜನ್ನ (ಸಂ. ವಿ. ಸೀತಾರಾಮಯ್ಯ) ಇಂಡಿಯಾ ಬುಕ್‌ಹೌಸ್ ಪ್ರಕಟಿಸುತ್ತಿರುವ ಕವಿಕಾವ್ಯ ಪರಂಪರೆ ಮಾಲೆಯ 'ಜನ್ನ' ವಿ. ಸೀತಾರಾಮಯ್ಯನವರ ಸಂಪಾದಕತ್ವದಲ್ಲಿ ಸಿದ್ಧವಾದದ್ದು. ಸಂಪಾದಕರು ಇದಕ್ಕೆ ಬರೆದಿರುವ ಮುನ್ನುಡಿ, ಕೊನೆಯಲ್ಲಿ ಮಾಡಿರುವ ಸಮೀಕ್ಷೆಯ ಜೊತೆಗೆ ಮೂವರು ಲೇಖಕರು ಜನ್ನ ಮತ್ತು ಜನ್ನನ ಕೃತಿಗಳನ್ನು ವಿಶ್ಲೇಷಿಸಿದ್ದಾರೆ. ಇಲ್ಲಿನ ವಿಶ್ಲೇಷಣಾ ವಿಧಾನ ಮತ್ತು ಸಂಪಾದಕರ ಆಶಯ ಒಂದು ಪಾರಂಪರಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೆಲೆಗೊಳ್ಳದೆ ಕೃತಿನಿಷ್ಠ ಸ್ವರೂಪವನ್ನು ಮಾತ್ರ ಪ್ರಕಟಿಸಿದೆ, ಒಂದು ರೀತಿಯಲ್ಲಿ ಅಂಥ ವಿಶ್ಲೇಷಣೆಯನ್ನು ಈ ಲೇಖನಗಳು ಪ್ರತಿಪಾದಿಸುತ್ತವೆ ಕೂಡ. ಕೃತಿನಿಷ್ಠ ಅಧ್ಯಯನ ಸಾಂಸ್ಕೃತಿಕ ವಿಶ್ಲೇಷಣೆಗೆ ಸಾಧನ-ಸಾಮಗ್ರಿ ಆಗಬಲ್ಲದು. ಸಾಹಿತ್ಯ ಚರಿತ್ರೆಯ ಸಾಂಸ್ಕೃತಿಕ ವಿಶ್ಲೇಷಣೆಯೆಂದರೆ ಚರಿತ್ರೆಯ ಸಂಗತಿಗಳಿಗಷ್ಟೇ ಸೀಮಿತಗೊಳಿಸಿಕೊಳ್ಳುವಂಥದ್ದಲ್ಲ, ನಮ್ಮ ಸಾಂಸ್ಕೃತಿಕ ದೃಢ ವಾಸ್ತವಗಳನ್ನು ಸಾಹಿತ್ಯಿಕ ದಾಖಲೆಗಳ ಮೂಲಕ ವಿಶ್ಲೇಷಿಸುವುದರಿಂದ ಸತ್ವಪೂರ್ಣ ಅರ್ಥ ಒದಗಿಬರುವುದು ಸಾಧ್ಯವಾಗುತ್ತದೆ.

ಸಂಕಲನದ ಮೊದಲನೆಯ ಲೇಖನ 'ಜನ್ನನ ಹಿನ್ನೆಲೆ, ಜೀವನ ಮತ್ತು ವ್ಯಕ್ತಿತ್ವ' (ಸಿ. ಪಿ. ಕೃಷ್ಣಕುಮಾರ್) ಈ ಲೇಖನ ಸಾಹಿತ್ಯ ಚರಿತ್ರೆಯ ಪುನಾರಚನೆಯ ಸಂದರ್ಭದಲ್ಲಿ ಯಾವ ರೀತಿಯ ಸಹಾಯಕ ಸಾಮಗ್ರಿಯನ್ನು ಒದಗಿಸುವುದಿಲ್ಲ. ಜನ್ನನ ಬಗೆಗೆ ಈಗಾಗಲೇ ವ್ಯಕ್ತವಾಗಿರುವ ಅನೇಕ ಆಲೋಚನೆಗಳನ್ನು ಯಾವ ಚರ್ಚೆಯೂ ಇಲ್ಲದೆ ಒಪ್ಪಿಕೊಂಡು ಹೊರಡುವ ಸಮೀಕ್ಷೆ ಇದಾಗಿದೆ.

ಬಿ. ಎಚ್. ಶ್ರೀಧರ ಅವರ 'ಯಶೋಧರ ಚರಿತೆಯ ಅವತಾರಗಳು' ಎಂಬ ಲೇಖನ ಒಂದು ಕೇಂದ್ರವಿಲ್ಲದೆ ವಿಶ್ಲೇಷಣೆಗೆ ತೊಡಗುವ ಲೇಖನ. ಸಂಸ್ಕೃತ ಭೂಯಿಷ್ಠ ಪದಪುಂಜಗಳಿಂದ ತುಂಬಿ ಲೇಖನ ತುಂಡು ತುಂಡಾಗಿದೆ. ಇದರಿಂದಾಗಿ ಪಾತ್ರಗಳ 'ಮತಿ', 'ಸ್ಥಿತಿ,' 'ಗತಿ' ಇವುಗಳ ಬಗೆಗೆ ಮಾತು ಸಿಗುತ್ತದಲ್ಲದೆ ಕಾರಣ ದೊರಕುವುದಿಲ್ಲ. ಆಧ್ಯಾತ್ಮಿಕ ಪರಿಭಾಷೆ, ಸಾಹಿತ್ಯಿಕ ಪರಿಭಾಷೆ, ನೈತಿಕ ಪರಿಭಾಷೆ—ಇವುಗಳಿಂದ ಯಶೋಧರ ಚರಿತ್ರೆಯನ್ನು ಸಮರ್ಥಿಸುವ ಲೇಖನವಾಗಿದೆಯಲ್ಲದೆ ಬೇರೆ ಯಾವ ವ್ಯಾಖ್ಯೆಯೂ ಇಲ್ಲಿ ಕಾಣುವುದಿಲ್ಲ. ವಿಮರ್ಶೆಯ ಶಿಸ್ತು ಅರ್ಥಪೂರ್ಣವಾಗದೆ ಹೋದರೆ ಹೇಗೆ ಬೌದ್ಧಿಕ ಸರ್ಕಸ್ ಮಾತ್ರವಾಗಬಲ್ಲದು ಎಂಬುದಕ್ಕೆ ಈ ಲೇಖನ ಸಾಕ್ಷಿಯಾಗಿದೆ. ಇದಕ್ಕೆ ಉದಾಹರಣೆಯಾಗಿ ಈ ಭಾಗವನ್ನು ಗಮನಿಸಬಹುದು, 'ಜೀವದಯಾದಿ ಮಹಾ ಧರ್ಮಸಂಸ್ಕಾರವು ಹೆಚ್ಚು ಜನರಲ್ಲಿ ನೆಲೆಗೊಳಿಸಲು ಪ್ರಯತ್ನಿಸುವುದೇ ನಿಜವಾದ ರಾಷ್ಟ್ರೀಯ ಶಿಕ್ಷಣ. ಈ ದೃಷ್ಟಿಯಿಂದ ಜನ್ನನ ಯಶೋಧರ ಚರಿತ್ರೆಯು ಸಮಾಜ ಶಿಕ್ಷಣದ ಸಾಧನವೆಂದು ಹೇಳಬಹುದು.' ಇಂಥ ಘೋಷಣೆಗಳಿಂದ ಈ ಲೇಖನ ತುಂಬಿತುಳುಕುತ್ತದೆ. ಅಹಿಂಸೆ, ಅಸ್ತಿತ್ವ ನಿತ್ಯ-ಅನಿತ್ಯ, ಮುಂತಾದ ಪದಗಳ ಬಳಕೆ ಲೇಖಕರ ಆಲೋಚನಾ ಮಾರ್ಗವನ್ನು ಸ್ಪಷ್ಟಪಡಿಸಲು ಕಾರಣವಾಗದೆ ಹೊರಗೇ ಉಳಿಯುತ್ತದೆ.

ಅನಂತನಾಥ ಪುರಾಣ (ಎಂ. ಎ. ಸಿಂಗಮ್ಮ) ಈ ಲೇಖನ ಒಂದು ನೇರವಾದ, ಸರಾಗ ವಾದ ಗೈಡ್ ಇದ್ದಂತೆ ಇದೆ. ಅನಂತನಾಥ ಪುರಾಣವನ್ನು ಕುರಿತು ಯಾವ ಮೌಲಿಕ ಚರ್ಚೆಯೂ ಇಲ್ಲಿಲ್ಲ. ಈ ಲೇಖನವು ಅನಂತನಾಥ ಪುರಾಣ, ಕಥಾಸಾರ, ವಿಮರ್ಶೆ, ಚಂಡ ಶಾಸನನ ಕಥೆ, ಕಥಾಸಾರ ಎಂಬ ಭಾಗಗಳಿಂದ ಕೂಡಿ ಕಥಾ ಶ್ರವಣಕ್ಕೆ ಪೊಗದಸ್ತಾದ ಅವಕಾಶವವನ್ನು ಮಾಡಿ ಕೊಟ್ಟಿದ್ದಾರೆ. ಕವಿ ಮತ್ತು ಕಾವ್ಯ ಮತ್ತು ಪರಂಪರೆ ಇವುಗಳ ಹಿನ್ನೆಲೆಯಲ್ಲಿ ರೂಪುಗೊಳ್ಳಬೇಕೆಂಬ ಆಶಯವನ್ನು ಹೊತ್ತಿರುವ ಮಾಲೆಯ ಉದ್ದೇಶಕ್ಕೂ ಲೇಖನ ಉಂಟುಮಾಡುವ ಪರಿಣಾಮಕ್ಕೂ ನಡುವೆ ಏರ್ಪಟ್ಟಿರುವ ಬಿರುಕುಗಳು ಇಂಥ ಕಡೆ ಸ್ಪಷ್ಟವಾಗಿ ಗುರುತಿಸಬಹುದು.

ಒಂದು ಪರಂಪರೆಯ ಹಿನ್ನೆಲೆಯಲ್ಲಿ ಸಂಪಾದಕರು Project ಮಾಡುವ ಸಾಹಿತ್ಯಿಕ ಧೋರಣೆಗಳು ಇಂಥ ಕೃತಿಗಳ ಹಿನ್ನೆಲೆಯಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಸಂಪಾದಕರ ಮುನ್ನುಡಿ ಮತ್ತು ಸಮೀಕ್ಷೆಯ ಸಂದರ್ಭದಲ್ಲಿ ವಿ. ಸೀ. ಯವರು ಕೃತಿಯ ಬಗೆಗೆ ಧೋರಣೆಗಳ ಮಂಡನೆಯನ್ನೂ ಮಾಡುತ್ತಾರೆ ಆದರೆ ಲೇಖನಗಳು ಕಾವ್ಯಪರಂಪರೆಯ ನಿರ್ದಿಷ್ಟ ನೆಲೆ-ಬೆಲೆಗಳನ್ನು ತನ್ನ ವಿವೇಚನೆಯ ಸಂದರ್ಭದಲ್ಲಿ ತೋರುವುದಿಲ್ಲ. (ಇಂಥ ಪರಿಸ್ಥಿತಿಯಿಂದ ಉಂಟಾಗುವ ಅಸಹಾಯಕತೆಯನ್ನು ವಿ. ಸೀ. ಯವರು ಆರಂಭದಲ್ಲಿ ತೋಡಿಕೊಂಡಿದ್ದಾರೆ) ಸಮೀಕ್ಷೆಯನ್ನು ನಡೆಸುವ ಸಂದರ್ಭದಲ್ಲಿ ಪುಸ್ತಕದಲ್ಲಿ ಚರ್ಚೆಯಾದ ಮೂರು ಲೇಖನಗಳನ್ನು ಮತ್ತು ಆ ಲೇಖನಗಳ 'ಧೋರಣೆ'ಯನ್ನು ಚರ್ಚಿಸಲು ಸಂಪಾದಕರು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಸಂಪಾದಕರು ಪ್ರತಿಕ್ರಿಯಿಸಬೇಕೆನಿಸಿದಾಗ ಆಯಾ ಲೇಖನದ ಸಂದರ್ಭದಲ್ಲಿಯೇ ಅಡಿ ಟಿಪ್ಪಣಿಯ ಮೂಲಕ ಪ್ರವೇಶಿಸುತ್ತಾರೆ. ಸಾಹಿತ್ಯ ಪ್ರಪಂಚದ ಮತ್ತು ನಾಡಿನ ಸಂಸ್ಕೃತಿಯ ಚರಿತ್ರೆ ಗೊತ್ತಾಗ ಬೇಕೆಂಬ ಆಶಯವನ್ನು ಹೊಂದಿದ ಸಂಪಾದಕರು ಆ ಬಗ್ಗೆ ತೋರಿಸುವ ಕಾಳಜಿಯನ್ನು ಪುಸ್ತಕದ ರೂಪಣದ ಸಂದರ್ಭದಲ್ಲಿ ತೋರಿಸಿಲ್ಲ.

ನಮ್ಮ ಒಂದು ಸಹಸ್ರ ವರ್ಷಗಳ ಸಾಹಿತ್ಯಿಕ ಸಂದರ್ಭವನ್ನು ಆಧುನಿಕ ಸಂಪಾದಕ ಯಾವ ದೃಷ್ಟಿಕೋನದಿಂದ ಗ್ರಹಿಸುತ್ತಾನೆಂಬುದು ಮಹತ್ವದ ವಿಚಾರ. ಹೀಗೆ ಅರ್ಥಪೂರ್ಣ ವಿಶ್ಲೇಷಣಾ ಕ್ರಮವೊಂದು ವ್ಯಕ್ತಗೊಳ್ಳದೆ ಜನ್ನನ ಸಂದರ್ಭ ಮತ್ತು ಅವನ ಕೃತಿಯಲ್ಲಿ ಸಂಭವಿಸಿರುವ ಒಳನೋಟದ ವಿವರಗಳು ಯಾವ ನಿರ್ದಿಷ್ಟ ಉದ್ದೇಶವನ್ನೂ ಪೂರೈಸುವುದಿಲ್ಲ.

ಸಣ್ಣ ಕತೆಯ ಸೊಗಸು (ವಿಜಯಾ) ಲೇಖಕರು ಸಣ್ಣ ಕತೆಗಳನ್ನು ಓದಿ, ಮೆಚ್ಚಿ, ಅದನ್ನು ಪರಿಚಯ ಮಾಡಿಕೊಡುವ ಈ ಪುಸ್ತಕ ಒಂದು ಅರ್ಥದಲ್ಲಿ ಅನೇಕ 'ಗೊಂದಲ'ಗಳಿಂದ ಮುಕ್ತವಾದ ಬರಹ. ಇಂಥ ಜನಪ್ರಿಯ ವಿವರಣೆಯ ಹಿನ್ನೆಲೆಯಲ್ಲಿ ನೋಡಿದರೂ ಕೂಡ ಸಾಂಪ್ರದಾಯಕ ವಿಮರ್ಶಾ ಪದ್ಧತಿಗೆ ಇಲ್ಲಿ ಅಗ್ರಸ್ಥಾನ. ಪುಸ್ತಕದ ಆರಂಭಕ್ಕೆ ಯು. ಆರ್. ಅನಂತಮೂರ್ತಿ ಯವರ ಪತ್ರವೊಂದು ಪ್ರಕಟವಾಗಿದೆ. ಪುಸ್ತಕದ ಕೊನೆಯ ಹೊದಿಕೆಯಲ್ಲಿ ಕಂಬಾರರು ಬ್ಲರ್ಬ್ ಬರೆದಿದ್ದಾರೆ. ಕಂಬಾರರು 'ಅಡಿಗೆ ಮನೆಯ ಮಾತುಕತೆಯಷ್ಟೇ ಸರಳವಾಗಿ ನಿರೂಪಿಸಿದ್ದಾರೆ. ಸ್ವಂತ ಅನುಭವವೊಂದನ್ನೇ ಪ್ರಮಾಣವಾಗಿಟ್ಟುಕೊಂಡು ನಿರ್ಭಿಡೆಯಿಂದ ಮಾತನಾಡಿರುವುದು ಇಲ್ಲಿಯ ಸೊಗಸು' ಎಂದಿದ್ದಾರೆ. ಆದರೆ ಸಾಹಿತ್ಯಿಕ ಪಂಥಗಳ ಬಗ್ಗೆ, ಸಾಹಿತ್ಯಿಕ ಪರಿಮಿತಿಗಳ ಬಗ್ಗೆ, ಧಾಟಿ, ಧೋರಣೆ, ಅಭಿವ್ಯಕ್ತಿ, ತಂತ್ರ ಮುಂತಾದ ಮಾತುಗಳು ಎಲ್ಲಂದರಲ್ಲಿ ಅಲ್ಲಾವುದ್ದೀನ ನಂತೆ ಪ್ರತ್ಯಕ್ಷವಾಗುತ್ತವೆ.

ಲೇಖಕನ ಕರ್ತವ್ಯವೇನು ? ಓದುಗನ ಕರ್ತವ್ಯವೇನು ? ಮೌಲ್ಯದ ವಿವೇಚನೆ, ಶೈಲಿಯ ವಿಶ್ಲೇಷಣೆ ಹೀಗೆ ಹಲವಾರು ಸಮಸ್ಯೆಗಳಲ್ಲಿ ಮುಳುಗಿಸುವ ಈ ಬರಹದ ರೀತಿ ಗುರಿತಪ್ಪುತ್ತದೆ. ಪರಿಕಲ್ಪನೆಗಳ ಮೂಲಕವೇ ಮಾತನಾಡಲು ಸಾಧ್ಯ ಅಥವಾ ಮಾತನಾಡಬೇಕು ಎಂಬ ಒತ್ತಾಸೆ ಲೇಖಕರ ಹಿಂದೆ ಇದ್ದಂತೆ ತೋರುತ್ತದೆ. ಪರಿಕಲ್ಪನೆಗಳನ್ನು ಬಳಸಬಾರದೆಂಬ ದುರಾಗ್ರಹ

ಸಮ್ಮರದಲ್ಲ. ಆದರೆ ಅವುಗಳ ಅರ್ಥಪೂರ್ಣ ಗ್ರಹಿಕೆಯಿಂದ (ಸೊಗಸ)ನ್ನು ಪರಿಚಯಮಾಡಿಕೊಟ್ಟಿದ್ದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಕವಿ ಬೇಂದ್ರೆಯವರ ಸಾಹಿತ್ಯವನ್ನು ಕುರಿತು ಈ ವರ್ಷ ಮೂರು ಪುಸ್ತಕಗಳು ಪ್ರಕಟವಾಗಿವೆ. ಇದರಲ್ಲಿ 'ಕವಿ ಬೇಂದ್ರೆ'–ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ನಡೆಸಿದ ವಿಚಾರ ಸಂಕಿರಣದಲ್ಲಿ ಅನೇಕ ವಿಮರ್ಶಕರು ಮಂಡಿಸಿದ ಲೇಖನಗಳಿವೆ. ಒಬ್ಬ ಕವಿಯನ್ನು ಬೇರೆಬೇರೆ ದೃಷ್ಟಿಕೋನಗಳಿಂದ ನೋಡಿರುವ ಇಲ್ಲಿನ ಲೇಖನಗಳು ಸಮಕಾಲೀನ ಕನ್ನಡ ವಿಮರ್ಶೆಯ ಬೇರೆ ಬೇರೆ ನೆಲೆಗಳನ್ನು ಸ್ಪಷ್ಟವಾಗಿ ಪರಿಚಯ ಮಾಡಿಕೊಡುತ್ತದೆ. ಈ ಸಂಕಲನದ ಬಹುತೇಕ ಲೇಖಕರು ಹೊಸ ಪೀಳಿಗೆಯ ವಿಮರ್ಶಾ ವಿವೇಕವನ್ನು ಪ್ರಕಟಪಡಿಸಿದ್ದಾರೆ. ಇಂಥ ಸಂಕಿರಣಗಳು ಈ ಹೊತ್ತಿನ ಸಾಹಿತ್ಯ ವಿಮರ್ಶೆಯ ಅರ್ಥಪೂರ್ಣ ನಿರ್ಮಿತಿಗೆ ಎಷ್ಟು ಸಹಾಯಕವೆಂಬುದನ್ನು ಆರೋಗ್ಯಕರ ವಿಮರ್ಶೆಯನ್ನು ಬಯಸುವವರೆಲ್ಲ ಬಲ್ಲರು. ಶ್ರೀ ಕೀರ್ತಿನಾಥ ಕುರ್ತುಕೋಟಿಯವರ 'ಭೃಂಗದ ಬೆನ್ನೇರಿ,' ಗದಗಕರ ಮತ್ತು ಕೊಟ್ಟಲಗಿ ಇವರುಗಳು ಪ್ರಕಟಿಸಿರುವ 'ಬೇಂದ್ರೆ ಸಾಹಿತ್ಯ ಸೌರಭ' ಎಂಬ ಕೃತಿಗಳನ್ನೂ ಇಲ್ಲಿ ಸಮೀಕ್ಷಿಸಲಾಗಿದೆ.

ಕವಿ ಬೇಂದ್ರೆ (ಸಂ. ಡಾ॥ ಜಿ. ಎಸ್. ಶಿವರುದ್ರಪ್ಪ) ಕನ್ನಡದ ಮಹತ್ವದ ಕವಿಗಳಲ್ಲಿ ಒಬ್ಬರಾದ ದ. ರಾ. ಬೇಂದ್ರೆಯವರನ್ನು ಕುರಿತು ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದಲ್ಲಿ ಓದಿದ ಹತ್ತು ಲೇಖನಗಳು ಈ ಸಂಕಲದಲ್ಲಿದೆ. ಬೇಂದ್ರೆ ಮತ್ತು ಕನ್ನಡ ಕಾವ್ಯ, ಅವರ ಕಾವ್ಯದ ಮೂಲ ಪ್ರೇರಣೆಗಳು, ಕಾವ್ಯ ವಿಕಾಸದ ಹಂತಗಳು, ಕಾವ್ಯದಲ್ಲಿ ಭಾಷೆ, ಸಾಮಾಜಿಕ ಪ್ರಜ್ಞೆ, ಛಂದಸ್ಸಿನ ಅಭ್ಯಾಸ, ನಾಟಕಗಳು, ಕಾವ್ಯಮೀಮಾಂಸೆ, ಸಾಹಿತ್ಯ ವಿಮರ್ಶೆ, ಮರಾಠಿ ಸಾಹಿತ್ಯ—ಹೀಗೆ ಅನೇಕ ದೃಷ್ಟಿ ಕೋನಗಳಿಂದ ಬೇಂದ್ರೆಯವರ ಕೃತಿಗಳ ಅಭ್ಯಾಸ ಇಲ್ಲಿನ ಲೇಖನಗಳಲ್ಲಿ ಕಾಣಬಹುದು. ಇಂಥ ಸಂಕಿರಣದಲ್ಲಿ ವ್ಯಕ್ತಗೊಳ್ಳುವ ಅಭಿಪ್ರಾಯಗಳು – ಎಲ್ಲರಿಗೂ ಅಂಗೀಕಾರವಾಗಬೇಕು ಎನ್ನುವ ಮಾತು ಉಚಿತವಾದದ್ದಲ್ಲ. ಎಲ್ಲ ಲೇಖಕರೂ ತಮ್ಮ ಲೇಖನಕ್ಕೆ ಸಂಬಂಧಿಸಿದ ಚೌಕಟ್ಟಿನಲ್ಲಿ ಬೇಂದ್ರೆಯವರ ಕಾವ್ಯದ ಧೋರಣೆಗಳನ್ನು ಚರ್ಚಿಸಿದ್ದಾರೆ. ಸಾಂಪ್ರದಾಯಕವಾದ—ಒಪ್ಪಿತ ನಿಲುವುಗಳ ಮೂಲಕ ನಮ್ಮ ಕವಿಗಳ ವಿಶ್ಲೇಷಣೆ ಈವರೆವಿಗೆ ಸಾಕಷ್ಟು ನಡೆದಿದೆ. ಒಬ್ಬೊಬ್ಬರು ತಮ್ಮ ಆಲೋಚನೆಗೆ ತಕ್ಕ ತಾತ್ತ್ವಿಕ ಸೂತ್ರಗಳನ್ನು ಕಲ್ಪಿಸಿಕೊಂಡು ಚರ್ಚಿಸ ಹೊರಟಿರುವ ರೀತಿ ನಮ್ಮ ಕವಿಗಳ ಸಮೀಕ್ಷೆ ಬೇರೆ ಬೇರೆ ದೃಷ್ಟಿಕೋನಗಳಿಂದ ನಡೆಯುತ್ತಿದೆ ಎಂಬುದಕ್ಕೆ ಉದಾಹರಣೆಯಾಗಿದೆ. ಬೇಂದ್ರೆಯವರಂಥ ಮಹತ್ವದ ಕವಿಗಳ ಸಂದರ್ಭದಲ್ಲಿಯಂತೂ ಅನೇಕ ದೃಷ್ಟಿಕೋನಗಳಿಂದ ಚರ್ಚೆ ನಡೆಸಲು ಸಾಧ್ಯವಿದೆ. ಹೀಗಿರುವಾಗ ಹೊಸ ಆಯಾಮಗಳಿಂದ ನೋಡುವ ದೃಷ್ಟಿಯನ್ನು ನಮ್ಮ ಸಮಕಾಲೀನ ವಿಮರ್ಶಾ 'ವಿವೇಕ' ಏಕೆ ಒಪ್ಪುವ ಸ್ಥಿತಿಯಲ್ಲಿಲ್ಲ ಎಂಬುದೂ ಕೂಡ ನಮ್ಮ ವಿಮರ್ಶಾ ವಾತಾವರಣದ ಮೇಲೆ ಬೆಳಕು ಚೆಲ್ಲುವಂತಿದೆ.

ಈ ಸಂಕಲನದಲ್ಲಿನ ಬಹುತೇಕ ಲೇಖನಗಳು ಸೀಮಿತ ವಿಮರ್ಶಾ ನಿಲುವುಗಳ ಗಡಿಯನ್ನು ದಾಟಿ ಅರ್ಥಪೂರ್ಣ ವಿಮರ್ಶಾ ಸತ್ವವನ್ನು ರೂಪಿಸುವ ಉದ್ದೇಶವನ್ನು ಹೊಂದಿದ್ದಾಗಿದೆ. ಎಲ್ಲ ಸಕ್ರಿಯ ವಿಮರ್ಶಾ ವಾತಾವರಣದಲ್ಲಿಯೂ ಭಿನ್ನಾಭಿಪ್ರಾಯಕ್ಕೆ ಅವಕಾಶವಿದ್ದೇ ಇದೆ. ಬೇಂದ್ರೆಯವರನ್ನು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ವಿಶ್ಲೇಷಿಸುವ ಹೊತ್ತಿನಲ್ಲಿ ಮುಕ್ತವಾದ, ಆರೋಗ್ಯಕರವಾದ ಚರ್ಚೆಗೆ ಈ ಸಂಕಲನದ ಲೇಖಕರು ಅವಕಾಶವನ್ನು ಕಲ್ಪಿಸಿಕೊಂಡಿದ್ದಾರೆಂಬುದು ಜೀವಂತ ಜನಾಂಗ ಮತ್ತು ಜೀವಂತ ಕಾವ್ಯ ಇವುಗಳ ಅಸ್ತಿತ್ವವನ್ನು ಸಾರಿ ಹೇಳುತ್ತದೆ.

ಭೃಂಗದ ಬೆನ್ನೇರಿ (ಬೇಂದ್ರೆ - ಕಾವ್ಯ - ದರ್ಶನ.) [ಕೀರ್ತಿನಾಥ ಕುರ್ತಕೋಟಿ] ಕೃತಿ ಕೊಡುವ ಅನುಭವಕ್ಕೆ ನಿಷ್ಠವಾಗಿ ರೂಪಿತವಾಗಿರುವ ಕೃತಿಯೆಂದು ಲೇಖಕರೆ ಹೇಳಿ

ಕೊಂಡಿದ್ದಾರೆ. ಲೇಖಕರು ಇದನ್ನು ಶುದ್ಧವಾದ ಕಾವ್ಯ ವಿಮರ್ಶೆ ಹೌದೆ ಅಲ್ಲವೆ ಎಂಬ ಬಗ್ಗೆ ತಾವೇ ಸಂದೇಹ ವ್ಯಕ್ತಪಡಿಸಿದ್ದಾರೆ. ವಿಮರ್ಶೆಯ ಮಾನದಂಡಗಳನ್ನು ಕೃತಿಯೇ ಒಳಗೊಂಡಿರುತ್ತದೆಂಬ ನಿಲುವನ್ನು ಲೇಖಕರು ತಳೆದಿದ್ದಾರೆ. ಪ್ರತಿಯೊಂದು ಕವಿತೆಯೂ ಒಂದು ಸೃಷಿ ಕಾವ್ಯ. ಅದರ ಗುಣಧರ್ಮವೇನೆಂಬುದನ್ನು ಅದು ಕೊಡುವ ಬೆಳಕಿನಲ್ಲಿಯೇ ಪರೀಕ್ಷಿಸಬೇಕೆಂಬ ತೀರ್ಮಾನದಿಂದ ವಿಮರ್ಶೆಗೆ ಹೊರಡುತ್ತಾರೆ. ನವ್ಯ ವಿಮರ್ಶೆ ಸಾಹಿತ್ಯ ವಿಮರ್ಶೆಯಲ್ಲಿ ಪ್ರಬುದ್ಧತೆಯನ್ನು ತಂದುಕೊಟ್ಟಿತು. ಅದಕ್ಕಿಂತ ಮೊದಲಿದ್ದ ವಿಮರ್ಶೆ ಅನಿಶ್ಚಿತವಾಗಿತ್ತು ಎಂಬಂತೆ ಮಾತನಾಡುವ ಕುರ್ತಕೋಟಿಯವರು ವಿಮರ್ಶೆಯ ಬಗೆಗೆ ಯಾವ ನಿಲುವನ್ನು ಹೊಂದಿದ್ದಾರೆಂಬುದು ಖಚಿತವಾಗುವುದಿಲ್ಲ. ಕೃತಿಯ ಮೌಲ್ಯಮಾಪನಕ್ಕೆ ವಿಮರ್ಶೆಯ ಸೂತ್ರವನ್ನು ಸೃಷ್ಟಿಯ ನಿಯಮಗಳಂತೆ ತ್ರಿಕಾಲಾಬಾಧಿತ ಅಪೌರುಷೇಯ ಎಂದು ಹೇಳುವ ಕುರ್ತಕೋಟಿಯವರು ಮತ್ತೊಂದು ಕಡೆ 'ಮೌಲ್ಯಮಾಪನಕ್ಕೆ ನಿಶ್ಚಿತವಾದ ತ್ರಿಕಾಲಾಭಾಧಿತವಾದ ಪ್ರಮಾಣಗಳು, ಸೂತ್ರಗಳು ಯಾವ ಕಾಲಕ್ಕೂ ದೊರಕುವುದಿಲ್ಲ. ಒಂದು ಕೃತಿಯ ಅಂತಸ್ಸತ್ವ ಸಂಪೂರ್ಣವಾಗಿ ಅಭಿವ್ಯಕ್ತಗೊಂಡಿದೆಯೋ ಇಲ್ಲವೋ ನೋಡುವುದು ಸರಿಯಾದ ವಿಮರ್ಶೆ' (ಯುಗಧರ್ಮ ಮತ್ತು ಸಾಹಿತ್ಯ ವಿಮರ್ಶೆ) ಇಂಥ ಕಡೆ ತಾತ್ವಿಕವಾದ ಖಚಿತತೆಯನ್ನು ಕಾಣಲು ಸಾಧ್ಯವಾಗುವುದಿಲ್ಲ. ಪಾಶ್ಚಾತ್ಯ ಮತ್ತು ಭಾರತೀಯ ಸಾಹಿತ್ಯಚಿಂತನೆ ಅವರ ವಿಮರ್ಶೆಯ ಸ್ವರೂಪದಲ್ಲಿ ಕಾಣಬಹುದಾದ ಮುಖ್ಯ ಅಂಶವಾದರೂ ಆ ಆಲೋಚನೆಗಳು ವೈಜ್ಞಾನಿಕ ನೆಲೆಯನ್ನು ಪಡೆದಿಲ್ಲ. ಹೀಗಾಗಿ ಕುರ್ತಕೋಟಿಯವರ ವಿಮರ್ಶೆಗೆ ನಿರರ್ಗಳ ಸಮೀಕ್ಷೆಯ ಛಾಪು ಅನಾಯಾಸವಾಗಿ ಬಂದು ಬೀಳುತ್ತದೆ.

ಬೇಂದ್ರೆಯವರ ತಾತ್ತ್ವಿಕ ನಿಲುವುಗಳು, ಸೃಜನಶೀಲತೆ ಮತ್ತು ಅವರ ಸಂವೇದನೆಯ ಸ್ವರೂಪವನ್ನು ವಿಮರ್ಶಿಸಲು ಸಾಹಿತ್ಯ ವಿಮರ್ಶೆ ಸಾಂಸ್ಕೃತಿಕ ಅಧ್ಯಯನದ ಹಿನ್ನೆಲೆಯಲ್ಲಿ ಚರ್ಚೆಗೆ ಗುರಿಯಾಗುವುದು ಮುಖ್ಯವಾಗುತ್ತದೆ. ಬೇಂದ್ರೆಯವರ ಕಾವ್ಯದ ಬಗೆಗೆ ಕುರ್ತಕೋಟಿಯವರ ಅಭ್ಯಾಸ ಅರ್ಥಪೂರ್ಣವಾದದ್ದಲ್ಲವೆಂದು ಹೇಳುವುದು ಈ ಮಾತಿನ ಉದ್ದೇಶವಲ್ಲ. ಯಾವುದೇ ವಿಮರ್ಶೆಯ ನಿಲುವುಗಳಿಗೂ ಬದ್ಧರಾಗದೇ ಹೊರಡುವ ಕುರ್ತಕೋಟಿಯವರ ವಿಶ್ಲೇಷಣೆ ಸರಳಗೊಂಡಿದೆ. ಈ ಸರಳ ಮಾರ್ಗವೆ ವಿಶಿಷ್ಟವಾದ ಜಟಿಲ ಸ್ವರೂಪವನ್ನು ಪಡೆದುಕೊಂಡಿದೆ. ಕುರ್ತಕೋಟಿಯವರ ವಿಶ್ಲೇಷಣೆಯಲ್ಲಿ ಅವರು ಒಪ್ಪಿಕೊಂಡಿರುವ ನಿರ್ದಿಷ್ಟವಾದ ನೆಲೆ ಯಾವುದೆಂಬುದು ತಿಳಿಯುವುದಿಲ್ಲ. ವಿಮರ್ಶೆಯ 'ಅಶಾಸ್ತ್ರೀಯ' ರೀತಿಯನ್ನು ಅವರ ಭಾಷೆಯ ಬಳಕೆಯ ಮೂಲಕ ಕಂಡುಕೊಳ್ಳಬಹುದು. ಅನೇಕ ಕಡೆ ಪರಸ್ಪರ ವಿರೋಧವಾದ ಅಭಿಪ್ರಾಯಗಳು ಮೇಲಿಂದ ಮೇಲೆ ತಲೆಹಾಕುತ್ತವೆ. ಕಾವ್ಯ ವಿಮರ್ಶೆಯ ಸಂದರ್ಭದಿಂದ ಆಚೆಗೆ ನಿಲ್ಲುವ ಅನೇಕ ಸಾಲುಗಳು 'ವಾಕ್ಯ ಮಾಣಿಕ್ಯ'ದಂತೆ ಕಾಣುತ್ತವೆ. ಬೇಂದ್ರೆಯವರ ಕಾವ್ಯ ಯಾವ ಉದ್ದೇಶಕ್ಕೂ ಕಟ್ಟು ಬೀಳದೆ ಇರುವ ಮುಖ್ಯ ಸಮಸ್ಯೆಯನ್ನು ಕುರ್ತಕೋಟಿಯವರು ಒಪ್ಪುತ್ತಾರೆ. ಅಂಥ ಸಮಸ್ಯೆಗಳಿಗೆ ಕಾರಣವಾಗುವ ತಾತ್ವಿಕ ಸ್ವರೂಪವನ್ನು ತೋರಿಸಲು ಅವರು ಪ್ರಯತ್ನವನ್ನು ಮಾಡುವುದಿಲ್ಲ. ಯಾವ ಉದ್ದೇಶಕ್ಕೂ ಕಟ್ಟುಬೀಳದೆ ಇರುವ ಸಮಸ್ಯೆ ಬೇಂದ್ರೆಯವರ ಸೃಷ್ಟಿಕ್ರಿಯೆಯ ಸಮಸ್ಯೆಗಿಂತ ಸಂವಹನದ ಸಮಸ್ಯೆಯೇ ಅದಕ್ಕೆ ಕಾರಣವೆಂಬುದು ಮನವರಿಕೆಯಾಗುತ್ತದೆ. 'ಕಾವ್ಯದ ಸೃಷ್ಟಿ ನಿರುದ್ದಿಶ್ಯವಾಗಿದ್ದರೂ ಕಲೆಯ ಮತ್ತು ಜೀವನದ ಮೌಲ್ಯಗಳನ್ನೊಳಗೊಳ್ಳುವುದು ಸಾಧ್ಯವಿದೆ ಎಂಬ ಸಂಗತಿ ಬೇಂದ್ರೆಯವರ ಕಾವ್ಯದಿಂದ ಗೊತ್ತಾಗುತ್ತದೆ'. ಇಂಥ ಮಾತುಗಳ ಹಿಂದೆ ಸೂಕ್ಷ್ಮವಾಗಿ ವ್ಯಕ್ತವಾಗುವ ಪರಸ್ಪರ ವಿರೋಧದ ಅಂಶಗಳನ್ನು ಗಮನಿಸಬೇಕು. ಏಕೆಂದರೆ ಭಾಷೆಯ ಮೂಲಕವೇ ಆಗಬೇಕಾದ ಸೃಷ್ಟಿಕ್ರಿಯೆ ಮತ್ತು ಸಂವಹನದ ಸಮಸ್ಯೆ ಇವುಗಳು ಸೃಜನಶೀಲತೆಯ ಸಮಸ್ಯೆಗಳನ್ನು ಒಳಗೊಂಡಿರುವುದಾಗಿದೆ. ಬೇಂದ್ರೆಯವರ ಜಾನಪದೀಯ ಸತ್ವದಿಂದ ವ್ಯಕ್ತಗೊಳ್ಳುವ ಸಮುದಾಯದ ಪ್ರಜ್ಞೆಯ ಒಳನೋಟಗಳು ಕನ್ನಡದ ಸಾಂಸ್ಕೃತಿಕ

ಸಂದರ್ಭದಲ್ಲಿ ಅತ್ಯಂತ ಮಹತ್ವದ ಅರ್ಥವನ್ನು ಪಡೆದುಕೊಂಡಿವೆ. ಕಾವ್ಯದ ಸಾಂಸ್ಕೃತಿಕ ಆಯಾಮಗಳು ಎಂದರೆ ಒಂದು ಕೃತಿ ಸಿದ್ಧವಾಗುವ ಪರಿಸರದ ಒತ್ತಡಗಳನ್ನು ಮತ್ತು ಕವಿಯ ಆಂತರಿಕ ಒತ್ತಡಗಳನ್ನು ಮೈಗೂಡಿಸಿಕೊಂಡೇ ಸೃಷ್ಟಿಯಾಗುತ್ತದೆ. ಸೃಜನಶೀಲತೆಯನ್ನು ವಿವರಿಸುವ ಹಲವಾರು ವ್ಯಾಖ್ಯೆಗಳು ಪ್ರಚಲಿತವಿದೆ. ಯಾವುದೇ ವ್ಯಾಖ್ಯೆ ಅಥವಾ ಆ ವ್ಯಾಖ್ಯೆಗಳಲ್ಲಿನ ಕೆಲವು ಅಂಶಗಳನ್ನಾದರೂ ಮಹತ್ವದ ಕವಿಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಗುರುತಿಸಿಕೊಳುವುದು ಮಹತ್ವದ್ದಾಗುತ್ತದೆ. ಹೀಗಾಗಿ ಕುರ್ತುಕೋಟಿಯವರ ಬರಹ ಸಾಹತ್ಯ ವಿಮರ್ಶೆಯ ಗಟ್ಟಿನೆಲದ ಮೇಲೆ ನಿಲ್ಲದೆ ಒಂದು ರಮ್ಯ ಅನುಭವದ ಪ್ರತಿಪಾದನೆಯಂತೆ ಮಾತ್ರ ತೋರುತ್ತದೆ.

ಬೇಂದ್ರೆ ಸಾಹಿತ್ಯ ಸೌರಭ (ಕೊಟ್ಟಲಗಿ–ಗದಗಕರ) ಬೇಂದ್ರೆಯವರ ಶ್ರೇಷ್ಠ ಕೃತಿಗಳನ್ನು ಎಷ್ಟು ಅರ್ಥಹೀನವಾಗಿ, ಶುಷ್ಕವಾಗಿ ವಿವರಿಸಬಹುದೆಂಬುದಕ್ಕೆ ಈ ಪುಸ್ತಕ ಉದಾಹರಣೆಯಾಗಿದೆ. ಕೊಟ್ಟಲಗಿಯವರು ಒಂಭತ್ತು ಲೇಖನಗಳನ್ನು ಗದಗಕರ ಅವರ ಎರಡು ಲೇಖನಗಳನ್ನು ಇದರಲ್ಲಿ ಬರೆದಿದ್ದಾರೆ. ಮೂರ್ತಿ ಮತ್ತು ಕಾಮಕಸ್ತೂರಿಯ ವಿಮರ್ಶೆಯನ್ನು ಬರೆಯ ಹೊರಟಿರುವ ಕೊಟ್ಟಲಗಿಯವರ ಈ ಮಾತುಗಳನ್ನು ನೋಡಿ: “ಮೂರ್ತಿ’ ಕಾವ್ಯವನ್ನು ತತ್ವಚಿಂತನೆಯ ಪರಿಚಯವಿಲ್ಲದವರು ಸಾಮಾನ್ಯವಾಗಿ ಅರ(ಗಿ)ಸಿಕೊಳ್ಳುವುದು ಅಶಕ್ಯ. ಆದರಲ್ಲಿ ಅಡಕವಾದ ತತ್ವವನ್ನು ತಿಳಿದುಕೊಳ್ಳುವುದೂ ಕಠಿಣ. ಸ್ವತಃ ಕವಿಗಳೇ ಈ ಕವನಕ್ಕೆ ವಿಸ್ತಾರವಾದ ಮಲ್ಲಿನಾಥಿಯನ್ನು ಬರೆದು ಅಡಕವಾದ ತತ್ವವನ್ನು ಜನರಿಗೆ ತಿಳಿಸಬೇಕು” ಮತ್ತು “ತಿಳಿಯುವಂಥ ಸಾಮಾನ್ಯ ಭಾಷೆಯಲ್ಲಿ ಕವಿಗಳು ಕಾವ್ಯವನ್ನು ರಚಿಸಬೇಕು ಎಂಬ ಮಾತನ್ನು ಹಲವು ವಿಮರ್ಶಕರು ಹಿಂದೆ ಆಡಿ ತೋರಿಸಿದ್ದಾರೆ. ಈ ರೀತಿಯಾಗಿ ಮಾಡಿದರೆ ಒಂದು ನಾಡಿನಲ್ಲಿ ಮಹಾನ್ ಕವಿಯ ಜನ್ಮವಾಗುವುದೇ ಬಿಗಿಯಾಗಿ–ದುರ್ಲಭವಾಗಿಬಿಟ್ಟೀತು.” ಈ ಅಪಲಾಪಗಳಿಂದಾಗಿ ವಿಮರ್ಶನ ನಿಲುವುಗಳಿಂದ ಕೃತಿಕಾರರು ದೂರನಿಂತಿದ್ದಾರೆ ಎಂಬುದನ್ನು ಸಂಕಲನದ ಯಾವ ಲೇಖನದ ಮೂಲಕ ಬೇಕಾದರೂ ನೋಡಬಹುದು.

ಗದಗಕರ ಅವರ ಮಾತುಗಳು ಹೀಗಿವೆ: “ಶ್ರೀ ಬೇಂದ್ರೆಯವರು ರೂಪಕರಾಜ್ಯದ ರಮಾರಮಣರು ಎಂಬುದನ್ನು ಅರಿಯುವುದಕ್ಕೆ ‘ಚಿತ್ತಿಯ ಮಳೆಯ ಸಂಜೆ’ ಎಂಬುದನ್ನು ಓದಬೇಕು. ಚಿತ್ತಿಯ ಮಳೆಯ ಸಂಜೆಯನ್ನು ಸಾಧ್ಯವಾದಷ್ಟು ಪ್ರಯತ್ನಿಸಿ ಕಣ್ಣೆದುರು ನಿಲ್ಲಿಸಿಕೊಳ್ಳಬೇಕು”. ‘ಕಾವ್ಯ ರಚನೆಯಲ್ಲಿ ಕವಿಯ ಪರಿಶ್ರಮವನ್ನು ಪಟ್ಟಂತೆ ವಾಚಕರು ಅರ್ಥಮಾಡಿಕೊಂಡು ಸುಖಿಸಬೇಕಾದರೆ ಅವರೂ ಅಷ್ಟೇ ಶ್ರಮಿಸಬೇಕು, ದಿವ್ಯದೃಷ್ಟಿಯಿಂದ ನೋಡುವ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು. ಇಲ್ಲದೇ ಹೋದರೆ ಕಾವ್ಯವು ಆಕಾಶಮಲ್ಲಿಗೆಯಾಗಿ, ಅದರ ಸುಗಂಧವನ್ನು ಮೂಸಿ ಆಮೋದಿಸುವ ರಸಿಕರಿಲ್ಲದೆ, ಕೇವಲ ಕಲ್ಪನೆಯ ಕಮಲವಾಗಿಯೇ ಉಳಿಯಬೇಕಾಗುವುದು.’ ಕವಿತೆಯ ಸಂವಹನೆಯಿಂದ ಉಂಟಾಗುವ ಪರಿಣಾಮವನ್ನು ಕೊಟ್ಟಲಗಿಯವರು ಹೀಗೆ ಹೇಳುತ್ತಾರೆ: ‘ವಾಚಕನಿಗೆ ಅರ್ಥವಾಯಿತೋ ಇಲ್ಲವೋ ಎನ್ನುವುದಕ್ಕಿಂತ, ಕಾವ್ಯವಾಚನದಿಂದ ಅವನ ಮೇಲೆ ಯಾವ-ಎಂಥ ಪರಿಣಾಮವಾಯಿತೆನ್ನುವುದು ಮುಖ್ಯಮಾತು. ಕವಿಗಳು ತಮ್ಮ ಶಬ್ದ ಸಾಮರ್ಥ್ಯದಿಂದ, ಕಲ್ಪನಾವೈಭವದಿಂದ, ವಾಚಕರನ್ನು ಭಾವಲೋಕದಲ್ಲಿ ವಿಹರಿಸಿಕೊಂಡು ಬರುತ್ತಾರೆ. ಆ ಭಾವಲೋಕದ ಕಲ್ಪನಾ ಸಾಮ್ರಾಜ್ಯದ ದೀಪ್ತಿಯಿಂದ ವಾಚಕನು ದಿಙ್ಮೂಢನಾಗುತ್ತಾನೆ. ಅವನ ವಾಣಿ ತೊದಲಿಸುತ್ತದೆ. ಗಂಟಲಾರುತ್ತದೆ’ ಬೇಂದ್ರೆಯವರ ‘ಎನ್ನಪಾಡೆನಗಿರಲಿ’ ಎಂಬ ಸಾಲುಗಳನ್ನು ಕೊಟ್ಟಲಗಿಯವರು ಹೀಗೆ ವಿವರಿಸುತ್ತಾರೆ: ‘ನಿಮ್ಮೆದೆಯು ಅವನ ಕಾವ್ಯದಿಂದ ದ್ರವಿಸಿದರೆ–ಒಸರಿದ ಆ ರಸವನ್ನೇ ತನಗೆ ನೀಡಬೇಂದು ಬೇಡಿಕೊಳ್ಳುತ್ತಾನೆ.’ ಈ ವಿಮರ್ಶಾ (?) ಜೋಡಿ ಗೊಂದಲ, ಅಮೂರ್ತತೆಗೆ ಸಿಲುಕಿ ಬೇಂದ್ರೆಯವರ ಕೃತಿಗಳನ್ನು ಗ್ರಹಿಸಲಾರದ ದೂರದಲ್ಲಿದ್ದಾರೆ.

ಕುವೆಂಪು ಸಾಹಿತ್ಯ ದರ್ಶನ ಮತ್ತು ಸಂದೇಶ (ದೇಜಗೌ) ಕುವೆಂಪು ಸಾಹಿತ್ಯದ 'ದರ್ಶನ ವನ್ನು ಕುರಿತ ವಿವರಣಾತ್ಮಕ ಪುಸ್ತಕ 'ಕುವೆಂಪು ಕೃತಿಗಳ ವ್ಯಾಸಂಗಕ್ಕೆ ದಿಕ್ಸೂಚಿ' ಎಂದು ಲೇಖಕರು ಮುನ್ನುಡಿಯಲ್ಲಿ ಹೇಳಿದ್ದಾರೆ. ಕುವೆಂಪು ಅವರ ಸಾಧನೆಯನ್ನು ಪರಿಚಯಮಾಡಿಕೊಡುವುದೇ ಈ ಪುಸ್ತಕದ ಮುಖ್ಯ ಉದ್ದೇಶ. ಕೃತಿಯ ಉದ್ದಕ್ಕೂ ಕೃತಿಯನ್ನು ಒಪ್ಪಿ ಹೊರಟಿರುವ ಮುಖಮಾತ್ರ ಕಾಣುತ್ತದೆ. ಕೃತಿಯ ಆಂತರಿಕ ಸ್ವರೂಪವನ್ನಾಗಲಿ ಆ ಮೂಲಕ ಗ್ರಹಿಸಿಕೊಳ್ಳಬೇಕಾದ ಸಾಂಸ್ಕೃತಿಕ ಸ್ವರೂಪವನ್ನಾಗಲಿ ಈ ಕೃತಿ ಮರೆಮಾಡುತ್ತದೆ. ಕುವೆಂಪು ಅವರ ಕೃತಿಗಳು ನಿರ್ಧಾರಿತ ಮೌಲ್ಯಗಳ ದೃಷ್ಟಿಯಲ್ಲಿ ಮಾತ್ರ ವಿವರಣೆಯಾದರೆ ಆ ಕೃತಿಯ ಚಲನಶೀಲತೆಯನ್ನು ಗ್ರಹಿಸದೇಹೋಗುವ ಅಪಾಯ ಏರ್ಪಡುತ್ತದೆ. ಇದರಿಂದ ಕೃತಿಯ ಸಂದರ್ಭದಲ್ಲಿ ಉಂಟಾಗುವ ಸಮಸ್ಯೆಗಳನ್ನು ಸರಳ ಗೊಳಿಸಿದಂತೆ ಆಗುತ್ತದೆ. ಕುವೆಂಪು ಸಾಹಿತ್ಯದಲ್ಲಿ ಪ್ರಕಟವಾಗಿರುವ ಸಾಂಸ್ಕೃತಿಕವಾಗಿ ಮಹತ್ವ ವಾದ ಸಕ್ರಿಯ ನಿಲುವುಗಳ ನೆಲೆ-ಬೆಲೆಗಳನ್ನು ಕಂಡುಕೊಳ್ಳುವುದು ವಿಮರ್ಶೆಯ ಮಹತ್ವದ ಜವಾಬ್ದಾರಿ. ದೇಜಗೌ ಅವರ ಭಾಷೆಗೆ ಇರುವ 'ವರ್ಣಕ' ಶಕ್ತಿಯನ್ನು ಗಮನಿಸಿದರೆ ಅವರಿಗೆ ವಿಮರ್ಶಾ ನಿಲುವುಗಳೇ ಬೇಕಿಲ್ಲ ಎಂದು ತೋರುತ್ತದೆ. ಆದರೆ ಆರಂಭ ಮಾತ್ರ ವಿಮರ್ಶಾ ನಿಲುವುಗಳನ್ನು ಗಮನಿಸಿ ಹೊರಟಿದೆ. ದೇಜಗೌ ಅವರು 'ನಿಸರ್ಗಪ್ರೇಮ' ಎಂಬ ಭಾಗದಲ್ಲಿ ಹೀಗೆ ಬರೆಯುತ್ತಾರೆ. 'ಪ್ರಕೃತಿ ಮಾತೆ ಶಿಶು ಕುವೆಂಪುವಿಗಾಗಿ ಬೈಗು ಬೆಳಗುಗಳನ್ನು ಶಶಿ ತಾರೆಗಳನ್ನು ಹೂ ತಳಿರುಗಳನ್ನು ಕಾನು ಬಾನುಗಳನ್ನು ಮಲೆ ಶಿಲೆಗಳನ್ನು ಮಳೆ ಚಳಿಗಳನ್ನು ಸುಗ್ಗಿ ಬೇಸಗೆಗಳನ್ನು ಸಿಡಿಲು ಗುಡುಗುಗಳನ್ನು ಸೃಷ್ಟಿಸಿದಂತೆ ಕಾಣುತ್ತದೆ. ಶಿಶು ಸಹಜವಾದ ಮುಗ್ಧತೆಯುಳ್ಳ ಆ ಮಗುವಿನ ದೃಷ್ಟಿಯಲ್ಲಿ ಗುಡುಗು ದೇವರ ಲೋಕದ ಬಾಲಕರಾಡುವ ಉಕ್ಕಿನ ಚೆಂಡು, ಹೂ ಬಣ್ಣ ಬಣ್ಣದ ಸಿಂಗಾರ ಮಾಡಿಕೊಂಡು ಬಂದ ಗಂಧರ್ವರು. ಬೆಳ್ಮುಗಿಲು ಬಾನಲ್ಲಿ ಹರಡಿರುವ ಲಾಲಿ ಕುಲಾಲಿ ಮಿಠಾಯಿ ಅಥವಾ ತಿಳಿಬೆಳದಿಂಗಳ ಸವಿ ನೊರೆ ಹಾಲೊಳು ತೇಲುವ ಚಿರೋಟಿಗಳು, ಹೊಂಬಿಸಿಲು ಸೂರ್ಯದೇವನ ಚುಂಬನ ಗಗನದೊಳಲೆಯುವ ಚಂದಿರನು ದೇವರ ಪೆಪ್ಪರಮೆಂಟು' ಹೀಗೆ ಸಾಗುತ್ತದೆ ಇಲ್ಲಿನ ಬರಹ. ಹೀಗೆಯೇ ಕಾವ್ಯ, ಆಧ್ಯಾತ್ಮ, ತಪಸ್ಸು, ಪ್ರಾರ್ಥನೆ, ದೇವರು, ಜಾತಿ. ಮತ ಇತ್ಯಾದಿ ವಿಚಾರಗಳು ಮತ್ತು ಅಂಥ ಆಲೋಚನೆಗಳಿಗೆ ಕುವೆಂಪು ಹೇಗೆ ಸ್ಪಂದಿಸಿದ್ದಾರೆ ಎಂಬುದನ್ನು ಅನೇಕ ಉದಾಹರಣೆಗಳ ಮೂಲಕ ವಿವರಿಸಿಕೊಂಡು ಹೋಗಿದ್ದಾರೆ. ಕೆಲವು ಕಡೆ ಗಳಲ್ಲಂತೂ ಓದುಗನು ಕಕ್ಕಾಬಿಕ್ಕಿಯಾಗುವ ಸಂದರ್ಭಗಳು ಇಲ್ಲದಿಲ್ಲ. 'ಮಾನವ ಪ್ರಪಂಚ ಮತ್ತು ದೇವರು ಇವರ ನಡುವಣ ರಹಸ್ಯಾತ್ಮಕ ಸಂಬಂಧವನ್ನರಿಯುವ, ಅಲ್ಪತೆ ಮಹತ್ವಕ್ಕೇರುವ, ವಿಶ್ವ ವ್ಯಾಪಿಯೂ ಅವಿಭಾಜ್ಯವೂ ಶಾಶ್ವತವೂ ಅನಂತವೂ ಅನಾದಿಯೂ ಆದ ಮಹಾ ತತ್ವವನ್ನು ಅಥವಾ ಪರಶಕ್ತಿಯನ್ನು ತಿಳಿಯುವ ಆ ಶಕ್ತಿಯೊಡನೆ ಅವಿನಾಭಾವ ಸಂಬಂಧವನ್ನು ಬೆಳೆಸುವ ಪ್ರಯತ್ನವೇ ಆಧ್ಯಾತ್ಮ ಸಾಧನೆ' ಇಂಥ ನಿರ್ಣಯಗಳಿಂದ ವಿಶ್ಲೇಷಣೆಗೆ ಹೊರಡುವುದು– ಕಾವ್ಯಕ್ಕೆ ಇರುವ ಸತ್ವವನ್ನು ಮರೆಮಾಡಿ ನಮ್ಮ ನಿರ್ಣಯಗಳ ಆಧಾರದ ಮೇಲೆ ಕವಿಯನ್ನು ಮತ್ತು ಕೃತಿಯನ್ನು ವಿಶ್ಲೇಷಿಸಿದಂತೆ ಆಗುತ್ತದೆ. ಹೀಗಾಗಿ ಕವಿ ಮತ್ತು ಕೃತಿ ಇವುಗಳ ಸಂಬಂಧ ಒಂದು ವಿಧದ ಕೃತಕ ಬಂಧನಕ್ಕೆ ಗುರಿಯಾಗುತ್ತವೆ. ಇಂಥ ಬಂಧನಗಳಿಂದ ನಮ್ಮ ಸಾಂಸ್ಕೃತಿಕ ಮಹತ್ವದ ಕವಿಗಳನ್ನು ಮತ್ತು ಅವರ ರಚನೆಗಳನ್ನು ಮುಕ್ತಗೊಳಿಸುವುದು ಕೂಡ ವಿಮರ್ಶೆಯ ಜವಾಬ್ದಾರಿ ಮತ್ತು ನೆಲೆ-ಬೆಲೆಗಳ ಮುಖ್ಯ ಅಂಶವೂ ಆಗುತ್ತದೆ.

ಕುವೆಂಪು ವ್ಯಕ್ತಿತ್ವ ಮತ್ತು ಸಾಹಿತ್ಯ (ಮು. ಶಿವನಂಜಯ್ಯ) ಸಾಹಿತ್ಯ ಕೃತಿಯಲ್ಲಿ ಕವಿಯ ವ್ಯಕ್ತಿತ್ವದ ಸ್ಥಾನವನ್ನು ಕುರಿತ ಚರ್ಚೆಗೆ ಕೊನೆಯಿಲ್ಲ. ಈ ಜಟಿಲ ಸಮಸ್ಯೆಯನ್ನು ವಾದ ಮಾಡಿ ಬಿಡಿಸಲು ಸಾಧ್ಯವಿಲ್ಲ. ಇಂಥ ಚರ್ಚೆ ಏನಿದ್ದರೂ ಕೃತಿಯನ್ನು ವ್ಯಕ್ತಿನಿಷ್ಠ ದಾಖಲೆ ಎಂದು ಪರಿಗಣಿಸುವುದರಿಂದ ಉಂಟಾಗುವಂಥದ್ದು. ಕೃತಿ ವ್ಯಕ್ತಿನಿಷ್ಠ ದಾಖಲೆ ಮಾತ್ರ ಆಗದೆ ಅದಕ್ಕೊಂದು ಪರಿಸರಾತ್ಮಕವಾದ ಎಂದರೆ ಸಾಮಾಜಿಕವಾದ ನೆಲೆ ಇದ್ದೇ ಇರುತ್ತದೆ. ಹೀಗಾಗಿ ಇಂಥ ಚರ್ಚೆಯು ಒದಗಿಸಿಕೊಡುವ ಸಾಹಿತ್ಯಕ (?) ಮಾನದಂಡಗಳನ್ನು ಗಂಭೀರವಾಗಿ ಪರಿಗಣಿ

ಸುವ ಬಗೆಗೇ ತಕರಾರಿದೆ. ಅದರಲ್ಲೂ ನಮ್ಮ ಸಾಂಸ್ಕೃತಿಕ ಸಂದರ್ಭದ ಮಹತ್ವದ ಕಲಾವಿದ ಕುವೆಂಪು ಅವರ ಸಾಹಿತ್ಯದ ವಿಶ್ಲೇಷಣೆಗೆ ವ್ಯಕ್ತಿನಿಷ್ಠ ದೃಷ್ಟಿಯಿಂದ ಹೊರಡುವುದು ಉಚಿತ ಮಾರ್ಗ ವಾಗಲಾರದು. ಮು. ಶಿವಸಂಜಯ್ಯ ಅವರು ಹೀಗೆ ಬರೆಯುತ್ತಾರೆ: 'ಕುವೆಂಪು ಅವರಂಥ ಋಷಿ ಕವಿಗಳನ್ನು ನಾವು ವಿಮರ್ಶಿಸುವಾಗ ಋಷಿ ಕವಿಗಳಿಂದ ಒದಗಬಹುದಾದ ಅಪಾಯ ತಾಗು ವುದಿಲ್ಲ...ಕೆಲವರ ಧೂರ್ತ ವಿನಯಕ್ಕೆ ಮತ್ತೆ ಕೆಲವರ ಅರ್ಥ ವ್ಯವಸ್ಥೆಯ ಏರುಪೇರಿನೊಡನೆಯೇ ಬದಲಾಗುವ ಜೀವನ ಧೋರಣೆಗಳಿಗೆ ವಯೋ ವ್ಯತ್ಯಾಸದಿಂದ ಉಂಟಾಗುವ ಏಲು ಪೈಲುಗಳಿಗೆ ಸಂಪೂರ್ಣ ಹೊರತಾದ ವ್ಯಕ್ತಿ ಕುವೆಂಪು. ಇಂಥ ಪ್ರತಿಭಾ ಶಕ್ತಿಗಳ, ಮಹದ್ ವ್ಯಕ್ತಿಗಳ ಹುಟ್ಟು ವಿರಳವಾಗುತ್ತದೆ' - ಇಂಥ ಮಾತುಗಳ ಅಸಂಗತ ಧಾರಾಳತನದಿಂದ ಶಿವಸಂಜಯ್ಯನವರು ಏನು ಹೇಳಲು ಹೊರಟಿದ್ದಾರೆಂದು ತಿಳಿಯುವುದಿಲ್ಲ. ತಮ್ಮ ಗೊಂದಲಗಳ ನಡುವೆ ಲೇಖಕರು ಹುದುಗಿ ಹೋಗುತ್ತಾರೆ. ಒಪ್ಪಿತ ನಿಲುವಿನ ಮೂಲಕ ಲೇಖಕರು ಹೊರಡುವುದರಿಂದ ಪುಸ್ತಕ ಯಾನ ಪ್ರಮುಖ ಸಂಬಂಧಗಳ ಮೇಲೂ ಬೆಳಕು ಚೆಲ್ಲುವುದಿಲ್ಲ.

ಕುವೆಂಪು ಅವರ ಆಸ್ತಿಕತೆಯನ್ನು ಕುರಿತು ಲೇಖಕರು ಜನಪ್ರಿಯ ಭಾಷಣಕಾರನ ಧಾಟಿಗೆ ಇಳಿಯುವುದನ್ನು ನೋಡಿ: 'ಕುವೆಂಪು ನಮಗೆ ಪ್ರಿಯನಾಗುವುದು ಅವರ ಸಾಹಿತ್ಯ, ಬೌದ್ಧಿಕ ಅಭಿಪ್ರಾಯಗಳನ್ನು ಕೇವಲ ಉಗುಳಿ ಬಾಯೊರಿಸಿಕೊಳ್ಳುವ ಮಟ್ಟಕ್ಕೆ ಬಿಡದೆ ಬದುಕಿನಲ್ಲೂ ಕ್ರಿಯಾತ್ಮಕವಾಗಿ ಅಳವಡಿಸುತ್ತಿರುವುದರಿಂದ ಸಾತ್ವಿಕವಾದಿ ಎಂದುಕೊಂಡು ಆಂತರಿಕ ಪುಕ್ಕಲಿ ನಿಂದಲೋ ಸಾಮಾಜಿಕ ಹೆದರಿಕೆಯಿಂದಲೋ ಕೋಣೆಯ ಕದ ಹಾಕಿ ದೇವರನ್ನು ದೆವ್ವಗಳನ್ನು ಆರಾಧಿಸುವವರಿಗಿಂತ ಕುವೆಂಪು ಅವರಂಥ ಆಸ್ತಿಕರು ಗೌರವ ಭಾಜನರಾಗುತ್ತಾರೆ.' ಕುವೆಂಪು ಅವರ ಧೋರಣೆಗಳನ್ನು ವಿವರಿಸುವಾಗ ಆಸ್ತಿಕ ಎಂಬ ಪರಿಕಲ್ಪನೆಯ ಇತಿಮಿತಿಗಳಳ್ನು ಗಮನಕ್ಕೆ ತಂದುಕೊಳ್ಳದಿರುವುದರಿಂದ ಇಂಥ ನಿಲುವು ಲೇಖಕರಿಗೆ ಸಾಧ್ಯವಾಗಿದೆ. ಕುವೆಂಪು ಅವರ ವ್ಯಕ್ತಿ - ಕೃತಿಗಳ ಆಲೋಚನೆಗಳನ್ನು ನಿರೂಪಿಸಲು ಹೊರಟಿರುವ ಈ ಸಂಕಲನದ ಹತ್ತು ಲೇಖನಗಳಲ್ಲಿ ಲೇಖಕರು ಹೇಳುವಂತೆ, 'ವ್ಯಕ್ತಿತ್ವದ ಸಾಹಿತ್ಯದ ಸೂಕ್ಷ್ಮ ಅಂತಸ್ಸಂಬಂಧವನ್ನು' ಕಾಣಲು ಸಾಧ್ಯವಿಲ್ಲ ವಾಗಿದೆ. ಕುವೆಂಪು ಅವರಿಗೆ ಎದುರಾದ ಸಾಮಾಜಿಕ ಸಮಸ್ಯೆಗಳ ಸ್ವರೂಪವನ್ನು ಲೇಖಕರು ತಮ್ಮ ರೀತಿಯಲ್ಲಿ ವಿವರಿಸುವುದನ್ನು ಬಿಟ್ಟರೆ ಬೇರಾವ ಅಂಶವೂ ನಮ್ಮ ಗಮನಕ್ಕೆ ಬರುವುದಿಲ್ಲ. ಕುವೆಂಪು ಅವರ ಆಲೋಚನೆಗಳನ್ನು ಕುರಿತ ಮೂಲಭೂತ ಗ್ರಹಿಕೆಯಾಗಲಿ ವಿಮರ್ಶನ ನಿಲುವಾಗಲಿ ಇಲ್ಲದ ಜಾಳು ಜಾಳಾದ ಈ ಬರಹದ ಕೆಲವು ಮುಕ್ತಕಗಳನ್ನು ಇಲ್ಲಿ ಉದಹರಿಸುತ್ತೇವೆ.

> ಬೆರಳ್‌ಗೆ ಕೊರಳ್ ಬಗೆಗೆ: "ಚಾತುರ್ವರ್ಣ್ಯಂ ಮಯಾ ಸೃಷ್ಟ್ಯಂ
> ಗುಣ ಕರ್ಮ ವಿಭಾಗಶಃ ಎಂದು ಗೀತಾಚಾರ್ಯ ಹೇಳಿದ್ದನ್ನು
> ಒಪ್ಪಿಕೊಂಡು ಅದರ ಪೂರ್ಣ ಸತ್ಯವನ್ನು ಕುವೆಂಪು ಧ್ವನಿಸಿದ್ದಾರೆ."
>
> 'ರಾಮಾಯಣ ದರ್ಶನಂ'ನಲ್ಲಿ 'ಪ್ರಾದೇಶಿಕ ಅನುಭವಗಳು' ಎಂಬ
> ಲೇಖನದಲ್ಲಿ (ಪು. ೭೯) 'ರಾಮಾಯಣ ದರ್ಶನಂ' ಕೃತಿಯ
> ಒಂದು ಭಾಗವನ್ನು ಉದಹರಿಸಿ "ಮಲೆನಾಡಿನ ಅನುಭವ
> ವಿರದವರಿಗೆ ಇದು ಅರ್ಥವಾಗುವುದಿಲ್ಲ" ಎಂದು ಟೀಕು ಬರೆಯುತ್ತಾರೆ.

ನಮ್ಮ ಮಹತ್ವದ ಕವಿಗಳ ಪುನರ್‌ಮೌಲ್ಯ ಅಥವಾ ಅರ್ಥಪೂರ್ಣ ವಿಶ್ಲೇಷಣೆ ಈ ಸ್ವರೂಪ ದ್ದಾದರೆ ಹೇಗೆ?

ಕಾವ್ಯ ಸ್ವಾರಸ್ಯ (ಡಿ.ವಿ.ಜಿ.) ಡಿ.ವಿ.ಜಿ.ಯವರು ಸಾಹಿತ್ಯ ಮತ್ತು ಸೌಂದರ್ಯದ ತತ್ವ ಗಳನ್ನು ಕುರಿತು ಬರೆದ ಲೇಖನಗಳ ಸಂಕಲನ. ಅವರ ಎರಡು ಪ್ರಖ್ಯಾತ ಕೃತಿಗಳಾದ 'ಸಾಹಿತ್ಯ ಶಕ್ತಿ ಮತ್ತು 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಎಂಬ ಕೃತಿಗಳಲ್ಲಿ ವ್ಯಕ್ತವಾಗಿರುವ ಧೋರಣೆ ಗಳೇ ಇಲ್ಲಿಯೂ ಪ್ರಕಟಗೊಂಡಿದೆ. ರಸದ ಬಗೆಗೆ ತಮ್ಮ ವ್ಯಾಖ್ಯಾನವನ್ನು ಮಂಡಿಸುತ್ತ 'ಸುಖ

ಕಾರಕ ದ್ರವ್ಯವೇ ರಸ' ರಸಾನುಭವ ನಮಗೆ ಹೊರಗಿನಿಂದಲೂ ಆಗುತ್ತದೆ ಒಳಗಿನಿಂದಲೂ ಆಗುತ್ತದೆ ಎಂಬ ಕೆಲವು ತೀರ್ಮಾನಗಳನ್ನು ಉಪನಿಷತ್ತುಗಳ ಆಧಾರದಮೇಲೆ ನಿರೂಪಿಸುತ್ತಾರೆ. ಹೀಗಾಗಿ ರಸ, ರಸಭ್ರಾಂತಿ ಮತ್ತು ಕಾವ್ಯದ ಕೆಲಸ ಇವುಗಳ ಚರ್ಚೆ ಆಧ್ಯಾತ್ಮಿಕ ಚಿಂತನೆಗಳ ಹಿನ್ನೆಲೆಯಲ್ಲಿ ವಿವರಣೆಗೆ ಗುರಿಯಾಗಿದೆ. ವ್ಯಾಸ ಮತ್ತು ವಾಲ್ಮೀಕಿಯರ ನಿರ್ಮಿತಿಯ ಹಿನ್ನೆಲೆಯಲ್ಲಿ ರಸಸಿದ್ಧಾಂತ ವ್ಯಾಖ್ಯಾನಗೊಳ್ಳುತ್ತದಲ್ಲದೆ ಮತ್ತಾವ ನೆಲೆಯೂ ಇಲ್ಲಿ ಚರ್ಚೆಗೆ ಗುರಿಯಾಗುವುದಿಲ್ಲ. ಸಾಹಿತ್ಯ ಸಂಹಿತೆ ಎಂಬ ಲೇಖನ ಕೆಲವು ಮೂಲಭೂತ ಗ್ರಹಿಕೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಡೆಸಿದೆ. ದೃಷ್ಟಿ ಮತ್ತು ವಸ್ತು ಇವುಗಳಿಗಿರುವ ಸಂಬಂಧ, ಆ ಸಂಬಂಧದಲ್ಲಿ ಏರ್ಪಡುವ ವಿವಿಧ ಕ್ರಿಯೆಗಳ ಸ್ವರೂಪವನ್ನು ಸಮರ್ಥಿಸುವ ಧಾಟಿಯಲ್ಲಿ ಆರಂಭವಾಗುವ ಪ್ರಬಂಧ ಉಪನಿಷತ್ತಿನ ವ್ಯಾಖ್ಯೆಯನ್ನು ಸಮರ್ಥಿಸುವ ಕಡೆಗೆ ವಾಲುತ್ತದೆ. ಹೀಗಾಗಿ ಡಿ.ವಿ.ಜಿ.ಯವರ ಆಲೋಚನೆಗಳು ವಿಲಕ್ಷಣವಾದ ರೀತಿಯಲ್ಲಿ ಸಮನ್ವಯಗೊಳಿಸುವ ಪ್ರಯತ್ನ ನಡೆಸುತ್ತದೆ. ಇಂಥ ಚರ್ಚೆಯಿಂದ ಅವರು ತಲುಪುವ ತೀರ್ಮಾನಗಳು. ಅರ್ಥಪೂರ್ಣವಾದ ಚರ್ಚೆಗೆ ಅವಕಾಶ ಮಾಡಿಕೊಡದೆ ಬಂಧನವನ್ನು ಒಡ್ಡುತ್ತವೆ. ಡಿ.ವಿ.ಜಿ.ಯವರ ಪ್ರಕಾರ 'ಉಪನಿಷತ್ತು ಹೇಳಿರುವ ಪಂಚ ಸಂಹಿತೆಗಳು ವಿಶ್ವ ಪ್ರಕೃತಿಯ ಸಂಧಿ ಕೇಂದ್ರಗಳು. ಅವು ಭಗವನ್ಮಹಿಮೆಯಿಂದಾದವು...ಕಿಂಚಿತ್ ಸಂಹಿತೆಗಳು ಪುರುಷ ತಪಃ ಫಲಿತವಾಗಿ ನಡೆಯುತಕ್ಕವು. ಅವನಲ್ಲಿ ತಪಸ್ಸಿಲ್ಲದಾಗ ಅವು ನಿಂತು ಹೋಗುತ್ತವೆ. ಕಾವ್ಯ ರಚನೆಯೂ ಕಾವ್ಯ ಸುಖಾನುಭವವೂ ಹೀಗೆ ಪುಣ್ಯಯೋಗಗಳು." ನಾವು ಇಂಥ ತೀರ್ಮಾನಗಳ ಬಗೆಗೆ ಯಾವ ಚರ್ಚೆಯನ್ನೂ ಮಾಡಲಾರೆವು.

ಮಹಾಭಾರತದ ಪಾತ್ರಗಳನ್ನು ಕುರಿತ ಮೌಲಿಕ ವಿಶ್ಲೇಷಣೆ ಈ ಕೃತಿಯ ಮಹತ್ವದ ಭಾಗ. ಮಹಾಭಾರತದ ಪಾತ್ರಗಳ ಒಳತೋಟಿಯನ್ನು ಧರ್ಮಾಧರ್ಮಗಳ ಸೂಕ್ಷ್ಮಗಳ ಚರ್ಚೆಯನ್ನು ವ್ಯಾಸಭಾರತದ ಆಧಾರದಮೇಲೆ ನಿರೂಪಿಸಲಾಗಿದೆ. ಡಿ.ವಿ.ಜಿ.ಯವರ ತಾತ್ವಿಕ ಆಲೋಚನೆಗಳ ಹಿನ್ನೆಲೆಯಲ್ಲಿ ಚರ್ಚೆಗೆ ಗುರಿಯಾಗಿರುವ ಇಲ್ಲಿನ ಪ್ರಬಂಧಗಳಲ್ಲಿ ಕನ್ಸರ್‌ವೇಟಿವ್ ಆದ ಆಲೋಚನೆಗಳು ತುಂಬಿದ್ದರೂ ಅದರ ಹಿಂದಿರುವ ಮನುಷ್ಯ ಪ್ರಪಂಚದ ಅನೇಕ ಸೂಕ್ಷ್ಮವಾದ ಗ್ರಹಿಕೆಗಳನ್ನು ಗುರುತಿಸಲು ಸಾಧ್ಯವಿದೆ. ಕೆಲವೊಮ್ಮೆ ಹಠಾತ್ತನೆ ವ್ಯಕ್ತಗೊಳ್ಳುವ ದೇವರು, ಧರ್ಮ, ಅದೃಷ್ಟ, ವಿಧಿ ಮುಂತಾದ ಆಲೋಚನೆಗಳು ನಿರ್ದಿಷ್ಟ ತರ್ಕಕ್ಕೆ ಸಿಲುಕದೆ ಓದುಗರನ್ನು ಭ್ರಮೆಗೆ ಗುರಿಪಡಿಸುವ ಸಾಧ್ಯತೆ ಇಲ್ಲಿದೆ.

ಪರಾಮರ್ಶೆ (ಸಿ. ಪಿ. ಕೆ.) ಸಿ.ಪಿ.ಕೆ.ಯವರು ಆಗಾಗ ಬರೆದ ಲೇಖನಗಳು ಈ ಪುಸ್ತಕದಲ್ಲಿವೆ. ಈ ಎಲ್ಲ ಲೇಖನಗಳು ಕನ್ನಡ ಸಾಹಿತ್ಯದ ಅನೇಕ ಕೃತಿಗಳನ್ನು, ಕೃತಿಗಳ ಕೆಲವು ಸಂದರ್ಭಗಳನ್ನು ವಿವರಿಸುತ್ತಾರೆ. ಬಸವಣ್ಣನವರನ್ನು ಕುರಿತ ಲೇಖನದಲ್ಲಿ 'ಬಸವಣ್ಣನವರ ಕನಸಿನ ಸಮಾಜ ಲೌಕಿಕವಾದುದಲ್ಲ. ಧರ್ಮದ ತಳಹದಿಯಮೇಲೆ ರೂಪುಗೊಂಡಿದ್ದು'—ಎಂಬುದನ್ನು ಮುಖ್ಯವಾಗಿ ಲಕ್ಷಿಸಬೇಕು ಎನ್ನುತ್ತಾರೆ. ಕನಸಿನ ಲೌಕಿಕ ಸಮಾಜ ಮತ್ತು ಧರ್ಮದ ತಳಹದಿಯ ಮೇಲೆ ರೂಪುಗೊಂಡ ಸಮಾಜ ಇವುಗಳ ನಡುವೆ ಯಾವ ಅರ್ಥವನ್ನು ಸಿ.ಪಿ.ಕೆ.ಯವರು ಇಟ್ಟುಕೊಂಡಿದ್ದಾರೋ ಅರ್ಥವಾಗುವುದಿಲ್ಲ. ಬಸವಣ್ಣನವರನ್ನು ಕ್ರಾಂತಿಕಾರರೆಂದು ಒಪ್ಪಿಕೊಂಡು ಹೊರಡುವ ಸಿ.ಪಿ.ಕೆ.ಯವರು ಸಮತಾವಾದ. ಸಮಾಜವಾದ, ಪ್ರಜಾಪ್ರಭುತ್ವ, ಈ ಎಲ್ಲ ಮೌಲ್ಯಗಳ ಸಾಕ್ಷಾತ್ಕಾರಕ್ಕಾಗಿ ಶ್ರಮಿಸಿದರೆಂದು ಹೇಳುತ್ತಲೇ ಲೌಕಿಕ ಸಮಾಜವನ್ನು ಬಸವಣ್ಣನವರು ತಿರಸ್ಕರಿಸಿದರೆಂದು ಹೇಳಲು ಹೇಗೆತಾನೆ ಸಾಧ್ಯವಾಗುತ್ತದೆ. ಹನ್ನೆರಡನೆಯ ಶತಮಾನದ ಆಂತರಿಕ ಮತ್ತು ಸಾಮಾಜಿಕ ಒತ್ತಡಗಳ ಸ್ವರೂಪವನ್ನು ಸಾರಾಸಗಟಾಗಿ ವಿವರಿಸಿಕೊಂಡಿರುವ ರೀತಿಯಿಂದ ಆ ಶತಮಾನದ ಸಾಮಾಜಿಕ ಒಳನೋಟಗಳನ್ನು ವೈಜ್ಞಾನಿಕವಾಗಿ ಗುರುತಿಸಿಕೊಳ್ಳದೆ ಚರ್ಚೆ ಬೆಳೆಯುತ್ತದೆ. 'ಬಸವಣ್ಣನವರು ಬುದ್ಧನಂತೆ ಹಿಂದೂ ಧರ್ಮದಿಂದ ಸಿಡಿದುಹೋಗಲಿಲ್ಲ. ಅದರ ಚೌಕಟ್ಟಿನಲ್ಲಿದ್ದುಕೊಂಡೇ ಅದನ್ನು ಶುದ್ಧೀಕರಿಸುವ, ತನ್ಮೂಲಕ ಸಮಾಜವನ್ನು ಮೇಲೆತ್ತುವ

ಮಹಾಕಾರ್ಯದಲ್ಲಿ ಉದ್ಯುಕ್ತರಾದರು'—ಇಂಥ ತೀರ್ಮಾನಗಳು ಹನ್ನೆರಡನೆಯ ಶತಮಾನದ ಆಂದೋಲನ ಸರಳೀಕೃತ ವಿವರಣೆಗೆ ಗುರಿಯಾಗಿರುವ ಅಪಾಯವನ್ನು ಇಲ್ಲಿ ಕಾಣಬಹುದು. ಸರ್ವಜ್ಞ, ಷಡಕ್ಷರಿ ಇವರುಗಳನ್ನು ಕುರಿತ ಲೇಖನಗಳು ವಿವರಣಾತ್ಮಕವಾಗಿ ಬೆಳದಿವೆ. ಕನ್ನಡ ನಾಟಕಗಳ ಮೇಲೆ ಸಂಸ್ಕೃತ ಸಾಹಿತ್ಯದ ಪ್ರಭಾವ, ಪಂಪ ಮತ್ತು ಜಿನಸೇನ ಎಂಬ ಲೇಖನಗಳಲ್ಲಿ ತೌಲನಿಕ ಆಲೋಚನೆಗಳು ಪ್ರಕಟಗೊಂಡಿವೆ.

ಸಾಹಿತ್ಯ ಪ್ರೇರಣೆ (ಮಾಸ್ತಿ ವೆಂಕಟೇಶ ಅಯ್ಯಂಗಾರ್) ಮಾಸ್ತಿಯವರ 'ಭಾವ' ಎಂಬ ಆತ್ಮಕಥನಕ್ಕೆ ಈ ಪುಸ್ತಕ ಒಂದು ಪರಿಶಿಷ್ಟದಂತೆ ಇದೆ. ತಮ್ಮ ಲೇಖನ ವ್ಯವಸಾಯದ ಅನೇಕ ಮಜಲುಗಳನ್ನು ಈ ಕೃತಿಯ ಮೂಲಕ ಪರಿಚಯ ಮಾಡಿಕೊಟ್ಟಿದ್ದಾರೆ. ತಮ್ಮ ಕೃತಿಗಳು ಹುಟ್ಟಿ ಬಂದ ಸಂದರ್ಭ ಸನ್ನಿವೇಶಗಳನ್ನು ಅದಕ್ಕೆ ಒದಗಿಬಂದ ಪ್ರೇರಣೆಗಳನ್ನು ಮಾಸ್ತಿಯವರು ಇಲ್ಲಿ ವಿವರಿಸುತ್ತಾರೆ. ಮಾಸ್ತಿಯವರ ಕೃತಿಗಳನ್ನು ಅಭ್ಯಾಸಮಾಡುವವರಿಗೆ ಇದೊಂದು ಪೂರಕ ಸಾಮಗ್ರಿಯಾಗಬಹುದು. ಕೃತಿಕಾರನೇ ತನ್ನೆಲ್ಲ ಕೃತಿಗಳ ಮೂಲ ಪ್ರೇರಣೆಯನ್ನು ಕುರಿತು ಬರೆದಿರುವ ಈ ಬರಹ ಏನಲ್ಲದಿದ್ದರೂ ಒಂದು ವಿಶಿಷ್ಟ ರೂಪದ ದಾಖಲೆಯ ಸ್ಥಾನ ಪಡೆದುಕೊಳ್ಳುತ್ತದೆ. ಕನ್ನಡ ನವೋದಯದ ಸಂದರ್ಭದಲ್ಲಿ ಏರ್ಪಟ್ಟ ಸಾಹಿತ್ಯಿಕ ಚರ್ಚೆ ಮತ್ತು ಆ ಸಂದರ್ಭದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ನಡೆದ ಅನೇಕ ಚರ್ಚಾ ಪ್ರಸಂಗಗಳು ಈ ಕೃತಿಯಲ್ಲಿ ಸೇರಿಕೊಂಡಿವೆ. ಆ ಕಾರಣ ದಿಂದ ನವೋದಯದ ಸಾಂಸ್ಕೃತಿಕ ಚರಿತ್ರೆಗೆ ಇಲ್ಲಿನ ಅನೇಕ ವಿವರಗಳು ಸಾಮಗ್ರಿಯನ್ನು ಒದಗಿಸುತ್ತದೆ.

ಕನ್ನಡದಲ್ಲಿ ಷಟ್ಪದಿ ಸಾಹಿತ್ಯ (ಕರ್ನಾಟಕ ವಿಶ್ವವಿದ್ಯಾಲಯ) ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಈ ಪುಸ್ತಕದಲ್ಲಿ ಷಟ್ಪದಿ ಸಾಹಿತ್ಯವನ್ನು ಕುರಿತು ಏಳು ಲೇಖನಗಳಿವೆ. ಈ ಏಳೂ ಲೇಖನಗಳು ಷಟ್ಪದಿ ಸಾಹಿತ್ಯದ ಮುಖ್ಯ ಸ್ವರೂಪವನ್ನು ಮತ್ತು ಅದರ ಅನೇಕ ಹಂತಗಳನ್ನು ಚರ್ಚಿಸಿವೆ. ಷಟ್ಪದಿ ಉಗಮ ಮತ್ತು ವಿಕಾಸ (ಎಂ. ಎಂ. ಕಲಬುರ್ಗಿ) ಷಟ್ಪದಿಯನ್ನು ಕುರಿತ ಚಾರಿತ್ರಿಕ ಅಧ್ಯಯನವನ್ನು ನಡೆಸಿದೆ. ಷಟ್ಪದಿಯಲ್ಲಿ ಕಾಣಿಸಿಕೊಂಡ ವಿವಿಧ ಘಟ್ಟಗಳನ್ನು ಮತ್ತು ಅದರ ಅವಸ್ಥಾಂತರಗಳನ್ನು ಪರಿಚಯ ಮಾಡಿಕೊಡಲಾಗಿದೆ. ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಏರ್ಪಟ್ಟಿರುವ ಪ್ರಯೋಗಶೀಲತೆಯನ್ನು ಷಟ್ಪದಿಯ ಸಂದರ್ಭದಲ್ಲಿ ವಿವರಿಸಿರುವ ಈ ಪ್ರಯತ್ನ ಗಮನೀಯವಾದದ್ದು. 'ಷಟ್ಪದಿ ಛಂದಸ್ಸಿನಲ್ಲಿ ಲಕ್ಷ್ಮೀಶ ಕವಿಯ ಸಾಧನೆ' (ಜಿ. ಎಸ್. ಸಿದ್ಧ ಲಿಂಗಯ್ಯ) ಈ ಲೇಖನ ಛಂದಸ್ಸಿನ ಬಗೆಗೆ ವೈಜ್ಞಾನಿಕವೆನ್ನಬಹುದಾದ ಆಲೋಚನೆಯನ್ನು ಒಳ ಗೊಂಡಿದೆ. ಲಕ್ಷ್ಮೀಶನ ಛಂದೋ ಪ್ರಯೋಗಗಳ ಬಗೆಗೆ ವಿಚಾರವನ್ನು ಬೆಳೆಸಿರುವ ಈ ಲೇಖನ ದಲ್ಲಿ ಕಾವ್ಯ ಮತ್ತು ಛಂದಸ್ಸುಗಳ ಸಂಬಂಧ, ಅದರ ಕ್ರಿಯಾತ್ಮಕ ನಿಲುವುಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ. ಛಂದಸ್ಸು ಕಾವ್ಯದ ಸಂದರ್ಭ ಮತ್ತು ಅದರ ಎಲ್ಲ ಅನುಭವಗಳೊಡನೆ ಅರ್ಥ ವನ್ನು ಪಡೆದುಕೊಳ್ಳುವ ಸಾವಯವವಾದ ನೆಲೆಯೆಂದು ಭಾವಿಸುವ ಈ ಲೇಖನದ ಧೋರಣೆ ಅನೇಕ ದೃಷ್ಟಿಗಳಿಂದ ಕುತೂಹಲಕಾರಿಯಾಗಿದೆ. ಲಕ್ಷ್ಮೀಶನ ನಾದಲೋಲತೆಗೆ ದಾಸ ಪರಂಪರೆಯನ್ನು ಹಿನ್ನೆಲೆಯಾಗಿ ಗುರುತಿಸಿಕೊಂಡಿರುವ ಚಾರಿತ್ರಿಕ ವಿವಕ್ಷೆ ಗಮನಾರ್ಹವಾದದ್ದು. ನಾದಲೋಲತೆ ಮತ್ತು ಕಾವ್ಯಪರಂಪರೆಯ ಸತ್ವಗಳಿಂದ ಪ್ರೇರಿತನಾದ ಲಕ್ಷ್ಮೀಶ ಕವಿಯ ಕುಮ್ಮಿಚಟ್ಟುಗಳನ್ನು ಅರ್ಥವಿಸಲು ಸಿದ್ಧಲಿಂಗಯ್ಯನವರು ಇಲ್ಲಿ ಪ್ರಯತ್ನಿಸುತ್ತಾರೆ.

ಛಂದಸ್ಸನ್ನು ಕಾವ್ಯದ ಅಂತರ್ಗತ ದೃಷ್ಟಿಗೆ ಪೂರಕವಾಗಿ ವಿಶ್ಲೇಷಿಸಿರುವ ಈ ಮಾದರಿ ನಮ್ಮ ಕವಿಗಳ ಛಂದೋಪ್ರಯೋಗಗಳ ಅಧ್ಯಯನಕ್ಕೆ ಅರ್ಥಪೂರ್ಣ ವಾತಾವರಣವನ್ನು ನಿರ್ಮಿಸಿಕೊಡು ತ್ತದೆ. ಹೀಗಾಗಿ ಛಂದಸ್ಸಿನ ಶಾಸ್ತ್ರೀಯತೆ ಕಾವ್ಯಾನುಸಂಧಾನಕ್ಕೆ ಸಹಾಯಕವಾಗುವುದನ್ನು ಇಂಥ ಲೇಖನಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗಿರುವುದು ಅಗತ್ಯ.

ಹರಿಶ್ಚಂದ್ರ ಕಾವ್ಯ ಒಂದು ಅಧ್ಯಯನ (ದೇವೇಂದ್ರಕುಮಾರ ಹಕಾರಿ) ರಾಘವಾಂಕನ ಇತರ ಕೃತಿಗಳು (ಬಿ. ಬಿ. ಮಲ್ಲಾಪುರ) ಕುಮಾರವ್ಯಾಸ; ಒಂದು ಸಮೀಕ್ಷೆ (ಎಚ್. ಎಂ. ಶಂಕರನಾರಾಯಣರಾವ್) 'ಷಟ್ಪದಿ ರೂಪಕ್ಕೆ ಚಾಮರಸನ ಕೊಡುಗೆ' (ಗುರುಲಿಂಗ ಕಾಪಸೆ) 'ಇತರ ಷಟ್ಪದಿ ಗ್ರಂಥಗಳ ಗಮನಾರ್ಹ ಅಂಶಗಳು' (ಕೆ. ಎಂ. ಕೃಷ್ಣರಾವ್)—ಈ ಎಲ್ಲ ಲೇಖನಗಳ ಧಾಟಿ ಒಂದೇ ಸ್ವರೂಪದವು. ಕಥೆಯನ್ನು ಹೇಳುತ್ತ 'ಚಿತ್ತಾಕರ್ಷಕವಾಗಿದೆ, ಮನೋವೇದಕವಾಗಿದೆ, ನಾಟಕೀಯತೆ ಉಂಟಾಗುವಂತೆ ಮಾಡಿದ್ದಾನೆ, ಬೆಳಕು ಬೀರಿದ್ದಾನೆ, ಉಜ್ವಲತೆಯನ್ನು ಕಂಡು ಕೊಂಡಿದ್ದಾನೆ, ನೂರಕ್ಕೆ ನೂರು ಸತ್ಯ, ಸಂದೇಹವೇ ಇಲ್ಲ, ಮಹೋನ್ನತ ಸಿದ್ಧಿಯ ಯುಗ ಪುರುಷ, ಬೇರೆಡೆ ದೊರೆಯುವುದು ವಿರಳ'—ಇತ್ಯಾದಿ ವಿಶೇಷಣಗಳ ಮೂಲಕ ನಮ್ಮ ಷಟ್ಪದಿ ಕವಿಗಳ ಸಾಧನೆಯನ್ನು ಹಾಡಿ ಹೊಗಳಿರುವುದನ್ನು ಬಿಟ್ಟರೆ ಈ ಬರಹಗಳು ನಮ್ಮನ್ನು ಮತ್ತಾವುದೇ ಆಲೋಚನೆಗಳ ಹತ್ತಿರಕ್ಕೆ ಕರೆದೊಯ್ಯುವುದಿಲ್ಲ. ಹೇಳಿದ್ದೇ ಹೇಳುವ ಏಕತಾನತೆ ಯಿಂದ ಕೂಡಿದ ಇಂಥ ಬರಹಗಳು ವಿಮರ್ಶಾ ವಿವೇಕವನ್ನು ಬೆಳೆಸುವ ದೃಷ್ಟಿಯಿಂದ ಅಸಮರ್ಥ ವಾಗಿವೆ.

ಕವಿ ರಾಘವಾಂಕ (ಕೆ. ವೆಂಕಟರಾಮಪ್ಪ) ರಾಘವಾಂಕನನ್ನು ಕುರಿತು ಲೇಖಕರು ಆಗಾಗ ನೀಡಿದ ಉಪನ್ಯಾಸಗಳನ್ನು ಒಟ್ಟಾಗಿ ಸೇರಿಸಿ ಈ ಪುಸ್ತಕವನ್ನು ಬರೆದಿರುವುದಾಗಿ ತಮ್ಮ ಅರಿಕೆಯಲ್ಲಿ ಹೇಳಿದ್ದಾರೆ. ರಾಘವಾಂಕನ ಕಾವ್ಯಗಳ ಕಥೆಯನ್ನು ನಿರರ್ಗಳವಾಗಿ ಹೇಳುತ್ತ ಹೋಗಿರುವುದು ಕೃತಿಯ ಎಲ್ಲ ಕಡೆ ಕಾಣಬರುವ ಏಕೈಕ ಅಂಶ. ರಾಘವಾಂಕನ ಕಾವ್ಯಗಳ ಸಂಗ್ರಹ ಕಥಾನುವಾದ ವನ್ನು ಬಿಟ್ಟರೆ ಈ ಪುಸ್ತಕದಲ್ಲಿ ಬೇರೇನನ್ನೂ ನಿರೀಕ್ಷಿಸುವಂತಿಲ್ಲ.

ನವ್ಯತೆ (ವಿ. ಕೃ. ಗೋಕಾಕ್) ಗೋಕಾಕರು ಕಳೆದ ಇಪ್ಪತ್ತೈದು ವರ್ಷಗಳಿಂದ ನವ್ಯತೆಯ ಬಗೆಗೆ ನಡೆಸಿರುವ ಆಲೋಚನೆಗಳ ದಾಖಲೆ ಈ ಪುಸ್ತಕದಿಂದ ದೊರೆಯುತ್ತದೆ. ಅನೇಕ ಲೇಖನ ಗಳು ಪುನರುಕ್ತಿಯಿಂದ ಕೂಡಿದೆ. ಗೋಕಾಕರ ವಿದ್ವತ್ತಿನ ಸ್ವರೂಪವನ್ನು ಈ ಕೃತಿಯ ಎಲ್ಲ ಕಡೆಯಲ್ಲೂ ಗುರುತಿಸಬಹುದು. ಕಾವ್ಯ ತತ್ವಗಳನ್ನು ಕುರಿತ ಚರ್ಚೆ ಆಧ್ಯಾತ್ಮವಾದಿ ವಿವರಣೆ ಮತ್ತು ಸೌಂದರ್ಯ ತತ್ವದ ಮೂಲಕ ವ್ಯಾಖ್ಯಾನಗೊಂಡಿದೆ. ಈ ಎರಡೂ ವಿವರಣೆಗಳು ಸಮಕಾಲೀನ ಸಾಹಿತ್ಯದ ಸಂದರ್ಭಕ್ಕೆ ಹೊರತಾದ ನೆಲೆಯಲ್ಲಿ ನಿಂತಿದೆ ಎನಿಸುತ್ತದೆ. ತಾರ್ಕಿಕವಾದ ಸುಸಂಬದ್ಧತೆಯನ್ನು ಇಲ್ಲಿ ಕಾಣಲು ಸಾಧ್ಯವಿಲ್ಲ ನವ್ಯತೆಯನ್ನು ಪ್ರತಿಪಾದಿಸುವ ಮತ್ತು ವಿರೋಧಿಸುವ ಎರಡೂ ಧೋರಣೆಗಳು ಯಾವ ಕೇಂದ್ರದಿಂದ ಪ್ರಕಟಗೊಳ್ಳುತ್ತದೆಂಬುದನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ನವ್ಯ ಸಾಹಿತ್ಯದ ಚರ್ಚೆಯಲ್ಲಿ ಎದುರಾದ ಪ್ರಶ್ನೆಗಳಿಗೆ ನಾನು ಕೊಟ್ಟಿರುವ 'ಉತ್ತರ'ಗಳೇ ಇಲ್ಲಿಯ ಲೇಖನಗಳೆಂದು ಗೋಕಾಕರೇ ಹೇಳಿದ್ದಾರೆ. ಪ್ರಜಾ ಪ್ರಭುತ್ವ, ಸಮಾಜವಾದ ಈ ಹಿನ್ನೆಲೆಯಲ್ಲಿ ರಾಜಕೀಯ ಸ್ವರೂಪವನ್ನು ಚರ್ಚೆ ಮಾಡುವ ಗೋಕಾಕರ ವಿಚಾರಗಳು ವ್ಯಕ್ತಿನಿಷ್ಠ ಆಲೋಚನೆಗಳಿಗೆ ಇಂಬು ಕೊಡುವಂಥದ್ದು.

ನವ್ಯ ಕಾವ್ಯದ ವಾದವಿವಾದಗಳ ಗೊಂದಲ ಕಡಿಮೆಯಾಗಿರುವ ಈ ಸಂದರ್ಭದಲ್ಲಿ ಆ ಬಗೆಗೆ ಏರ್ಪಟ್ಟ ಚರ್ಚೆಯ ಸ್ವರೂಪವನ್ನು ಇಲ್ಲಿನ ಲೇಖನಗಳಿಂದ ತಿಳಿಯಬಹುದು.

ಪ್ರತಿಭಾ ಸಂದರ್ಶನ (ಎಚ್ಚೆಸ್ಕೆ) ಪತ್ರಿಕೆಗಳಿಗಾಗಿ ಮಾಡಿದ ಎಂಟು ಸಂದರ್ಶನಗಳು ಈ ಸಂಕಲನದಲ್ಲಿ ಸೇರಿವೆ. ವಿಮರ್ಶೆಯ ದೃಷ್ಟಿಯಿಂದ ಈ ಲೇಖನಗಳನ್ನು ಸಮೀಕ್ಷಿಸಲು ಸಾಧ್ಯವಿಲ್ಲ. ಲೇಖಕರ ಪರಿಚಯ, ಕೃತಿಗಳ ಬಗೆಗೆ ಒಟ್ಟಾರೆ ಸಮೀಕ್ಷೆ ಈ ಲೇಖನದ ಉದ್ದೇಶ. ಇಲ್ಲಿನ ಬರವಣಿಗೆ ಸಲೀಸು. ಒಂದು ಲೇಖನಕ್ಕಿಂತ ಮತ್ತೊಂದು ಲೇಖನ ಬೇರೆ ಎನಿಸುವುದಿಲ್ಲ. ಏಕತಾನತೆಯಿಂದ ಕೂಡಿದೆ. ಎಚ್ಚೆಸ್ಕೆಯವರು ತಾವೇ ಸಿದ್ಧಪಡಿಸಿಕೊಂಡ ಶೈಲಿ ಒಂದು ಸಿದ್ಧ ಶೈಲಿಯ ಸ್ಥಿತಿಯನ್ನು ಮುಟ್ಟಿದೆ. ಹೀಗಾಗಿ ಎಚ್ಚೆಸ್ಕೆಯವರು ಏನು ಹೇಳಲು ಹೊರಟಿದ್ದಾರೆ

ಎಂಬುದು ವಿಪರೀತ ವಿವರಗಳಲ್ಲಿ ಮುಳುಗಿ ಹೋಗುತ್ತದೆ. ಸರಳ ವಿವರಗಳ ಮಟ್ಟದಲ್ಲಿಯೇ ನಿಲ್ಲುವ ಈ ಲೇಖನಗಳು ಬದುಕು, ಸಮಾಜ ಇವುಗಳಿಗೆ ಪೂರಕವಾದ ಸಾಕ್ಷ್ಯಗಳಾಗಿ ಉಳಿಯುತ್ತವೆ.

ಬಸವ ಪುರುಷ (ಸಂ. ಹಾ. ಮಾ. ನಾಯಕ) ಬಸವಣ್ಣನವರ ಎಂಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳ ಸಂಕಲನ. ಹದಿಮೂರು ಮಂದಿ ಲೇಖಕರು ವಚನ ಸಾಹಿತ್ಯದ ನಾನಾ ಮುಖಗಳನ್ನೂ ಕುರಿತು ಸಮೀಕ್ಷೆ ನಡೆಸಿದ್ದಾರೆ. ಕೆಲವು ಲೇಖನಗಳಲ್ಲಿ ಗಂಭೀರವಾದ ಚರ್ಚೆ ನಡೆದಿದೆ. ಮತ್ತೆ ಕೆಲವು ಲೇಖನಗಳು ಸಾಂಪ್ರದಾಯಕ ವಿವರಣೆಗಳ ಮೂಲಕ ಸಿದ್ಧ ವಿಚಾರಗಳನ್ನು ತುಂಬಿಕೊಂಡಿದೆ. ವಚನ ಸಾಹಿತ್ಯದ ಉಗಮ ಮತ್ತು ವಿಕಾಸದಬಗೆಗೆ ಟಿ. ವಿ. ವೆಂಕಟಾಚಲಶಾಸ್ತ್ರಿಗಳ ಲೇಖನ ವಿಪುಲ ಸಾಮಗ್ರಿಯಿಂದ ತುಂಬಿದೆ. ವಚನಗಳನ್ನು ಶುದ್ಧ ಸಾಹಿತ್ಯಕ ದೃಷ್ಟಿಯಿಂದ ಮಾತ್ರ ನೋಡಿದರೆ ಎಂಥ ವಿಶ್ಲೇಷಣೆ ದೊರಕುತ್ತದೆ ಎಂಬುದಕ್ಕೆ ಈ ಬರಹವೇ ಉದಾಹರಣೆ. ವಚನ ಯುಗದ ಗ್ರಹಿಕೆಗಳ ಸಾಮಾನ್ಯೀಕರಣ ಲೇಖನದ ಉದ್ದಕ್ಕೂ ಪ್ರಕಟಗೊಂಡಿದೆ.

ವಚನಕಾರರ ಭಾಷಾ ಸಿದ್ಧಿ (ಜಿ. ಎಸ್. ಸಿದ್ಧಲಿಂಗಯ್ಯ) ಲೇಖನ ಸಾಮಾಜಿಕ ವಿಮರ್ಶೆಯ ನೆಲೆಯನ್ನು ಒಪ್ಪುತ್ತದೆ. ಭಾಷೆಯ ರಾಚನಿಕ ಸ್ವರೂಪ ಮತ್ತು ಅಭಿವ್ಯಕ್ತಿಯ ಚರ್ಚೆ, ಕನ್ನಡ ಗದ್ಯದ ಸ್ವರೂಪ ಮತ್ತು ವಚನಗಳ ವಿನ್ಯಾಸವನ್ನು ವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ.

ಬಿ. ಎಚ್. ಶ್ರೀಧರ ಅವರ 'ವಚನಕಾರ ಬಸವೇಶ್ವರ' ಮತ್ತು ಎಸ್. ವಿ. ಪರಮೇಶ್ವರ ಭಟ್ಟರ 'ಬಸವಣ್ಣನವರ ಮನಸ್ಸು ಅವರ ವಚನಗಳಲ್ಲಿ ಹರಿದ ರೀತಿ'—ಈ ಎರಡೂ ಲೇಖನಗಳು ಆಧ್ಯಾತ್ಮವಾದೀ ವಿವರಣೆಯಿಂದ ಕೂಡಿದೆ. ಶ್ರೀಧರ ಅವರ ಲೇಖನದಲ್ಲಿ ಅನುಭಾವದ ಬಗೆಗೆ ಚರ್ಚೆಯಿದೆಯಾದರೂ ವಚನಗಳಲ್ಲಿ ಅನುಭಾವದ ಅಭಿವ್ಯಕ್ತಿ ಸ್ವರೂಪವನ್ನು ಕುರಿತ ಚರ್ಚೆ ಇಲ್ಲ. ಶ್ರೀಧರ ಅವರು ಸ್ಥಾವರ ಮತ್ತು ಜಂಗಮ ಎರಡು ಪರಿಕಲ್ಪನೆಗಳಿಗೆ ಕೊಟ್ಟಿರುವ ಅರ್ಥವೂ ಕೂಡ ಸೀಮಿತವಾಗಿದೆ. ಸೂತ ಸಂಹಿತೆಯಲ್ಲಿನ ಸ್ಥಾವರ ಮತ್ತು ಜಂಗಮದ ವಿವರಣೆಯ ಜೊತೆಗೆ ವಚನಕಾರರ ಸ್ಥಾವರ ಜಂಗಮದ ಪರಿಕಲ್ಪನೆಗಳ ಜೊತೆಗೆ ಗಂಟುಹಾಕಲಾಗಿದೆ. ಕನ್ನಡದ ಸಂದರ್ಭದಲ್ಲಿ ಈ ಪರಿಕಲ್ಪನೆಗಳಿಗೆ ಏರ್ಪಡುವ ಮೌಲಿಕ ವ್ಯಾಖ್ಯೆಯನ್ನು ಸಂಪೂರ್ಣವಾಗೆ ಕಡೆಗಣಿಸಲಾಗಿದೆ.

ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ (ಸುಧಾಕರ) ತಮ್ಮ ವಿಶ್ಲೇಷಣೆಗೆ ಮೊದಲು ಸಮಾಜವನ್ನು ತಮ್ಮದೇ ಆದ ರೀತಿಯಲ್ಲಿ ಸಮರ್ಥಿಸಿಕೊಂಡಿದ್ದಾರೆ. ಈ ಸಮರ್ಥನೆಗೆ ಅನುಗುಣವಾಗಿ ಚರ್ಚೆಯನ್ನು ಬೆಳಸುತ್ತಾರೆ. ಸಾಮಾಜಿಕ ಪ್ರಜ್ಞೆಗೂ ಸಮಾಜ ಸುಧಾರಣೆಗೂ ವ್ಯತ್ಯಾಸ ಕಾಣಬರುವುದಿಲ್ಲ.

ಬಸವಣ್ಣನವರ ವಚನಗಳಲ್ಲಿ ಕಾವ್ಯ ಸೌಂದರ್ಯ (ಜಿ. ಎಸ್, ಶಿವರುದ್ರಪ್ಪ) ವಚನಗಳು ಕಾವ್ಯವೇ ಶಾಸ್ತ್ರವೇ ಎಂಬ ಚರ್ಚೆಗೆ ಎಂದಿನಿಂದಲೂ ಗುರಿಯಾಗಿದೆ. ಈ ಚರ್ಚೆಗೆ ವೈಜ್ಞಾನಿಕ ದೃಷ್ಟಿಯನ್ನು ಕೊಡುವುದು ಈ ಪ್ರಬಂಧದ ಉದ್ದೇಶ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕಾಣಿಸಿಕೊಂಡಿರುವ ಅಪರೂಪದ ಅಭಿವ್ಯಕ್ತಿ ಪ್ರಕಾರವನ್ನು ಶಾಸ್ತ್ರ, ಸಾಹಿತ್ಯ ಇವುಗಳ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳುವುದಕ್ಕೆ ಸ್ಪಷ್ಟವಾದ ಮಾನದಂಡಗಳನ್ನು ಚರ್ಚೆಯ ಮೂಲಕ ನಿರೂಪಿಸುತ್ತಾರೆ. ಬಸವಣ್ಣನವರ ವಚನಗಳಿಗೆ ಶಾಸ್ತ್ರ, ಪುರಾಣ, ಆಗಮ ಪರಂಪರೆಯ ಹಿನ್ನೆಲೆಯಿದ್ದರೂ ಕನ್ನಡ ಕಾವ್ಯ ಪರಂಪರೆಯ ಅರಿವೇ ಇಲ್ಲದಂತೆ ವರ್ತಿಸಿರುವ ಸಂಗತಿಯನ್ನು ಚರ್ಚಿಸುತ್ತ ವಚನ ನಿರ್ಮಿತಿ ಕಾವ್ಯೇತರ ಮನೋಧರ್ಮದಿಂದ ರಚಿತವಾದಂತೆ ತೋರುವುದು ನಮ್ಮ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಮಹತ್ವದ ಸಂಗತಿಯೆಂಬುದನ್ನು ಚರ್ಚಿಸಿದ್ದಾರೆ. ವಚನಗಳು ವ್ಯಕ್ತಿ, ಸಮಾಜ. ಧರ್ಮ ಈ ಮೂರು ಅಂಶಗಳನ್ನು ಅನಿವಾರ್ಯವಾಗಿ ಒಳಗೊಂಡ ಸ್ವರೂಪವನ್ನು ಈ ಪ್ರಬಂಧ ಚರ್ಚಿಸಿದೆ. ಪರಂಪರಾಗತವಾಗಿ ವ್ಯಕ್ತಿಗೊಂಡಿರುವ ಕಾವ್ಯ ಸೌಂದರ್ಯಕ್ಕಿಂತ ವಚನಗಳ

ಸೌಂದರ್ಯಾಭಿವ್ಯಕ್ತಿ ಹೇಗೆ ಭಿನ್ನವಾಗಿದೆ ಎಂಬುದನ್ನು, ವಿಶ್ಲೇಷಿಸುತ್ತ 'ಜೀವನವೇ ಕಾವ್ಯವಾದಾಗ ಸಂಭವಿಸುವ ಸೌಂದರ್ಯ'ವನ್ನೂ ಗುರುತಿಸಿರುವ ರೀತಿ ಮೌಲಿಕವಾದದ್ದಾಗಿದೆ.

ಬಸವೇಶ್ವರರ ಧ್ಯೇಯಾದರ್ಶಗಳ ಸಾಧನೆಗೆ ಅವರ ಸಮಕಾಲೀನರಿಂದ ಸಂದ ಕಾಣಿಕೆ (ಎಸ್. ಬಸವಾರಾಧ್ಯ) ಬಸವಣ್ಣನವರ ಸಮಕಾಲೀನರನ್ನು ಪರಿಚಯ ಮಾಡಿಕೊಡುವ ಲೇಖನ. ಹನ್ನೆರಡನೆಯ ಶತಮಾನದಲ್ಲಿ ಏರ್ಪಟ್ಟ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಎಲ್ಲ ಶರಣರನ್ನು ಅವರ ವಚನಗಳ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ಸಾಹಿತ್ಯ ಚರಿತ್ರೆಯ ಪುನಾರಚನೆಗೆ ಇಲ್ಲಿನ ಸಾಮಗ್ರಿ ಉಪಯುಕ್ತ.

'ವಿಶ್ವವಿಭೂತಿಗಳ ಸಾಲಿನಲ್ಲಿ ಬಸವೇಶ್ವರರು' (ಹಂಪ. ನಾಗರಾಜಯ್ಯ) ಬಸವಣ್ಣನವರ ವ್ಯಕ್ತಿತ್ವವನ್ನು ವಿಶೇಷಣಗಳ ಸರಮಾಲೆಯಲ್ಲಿ ಹೊಗಳುವ ಬರಹ. ಲೇಖಕರು ಭಾಷಣದ ಧಾಟಿಯಲ್ಲಿ ಬಸವಣ್ಣನವರನ್ನು ಮತ್ತು ಅವರ ಸಾಧನೆಯನ್ನು ತಮ್ಮ ರೀತಿಯಲ್ಲಿ ವಿವರಿಸಿದ್ದಾರೆ. "ಭೂಮಿಯಿಂದ ಭೂಮದವರೆಗೆ ಸಹಸ್ರೋಪಸಹಸ್ರ ಸಂಖ್ಯೆಯ ವಿಪುಲ ಬಾಹುಗಳಿಂದ ಬಹುರೂಪಿಯಾಗಿ ಬಹುಮುಖಿಯಾಗಿ ಬೆಳೆದು, ತ್ರಿಕಾಲ ತ್ರಿಲೋಕಗಳನ್ನೂ ತನ್ನ ನಿಡುದೋಳ ತೆಕ್ಕೆಯಲ್ಲಿ ತಬ್ಬಿಕೊಂಡು ಅಳಿವಿಲ್ಲದೆ ಅವಿನಾಶಿಯಾಗಿ ತ್ರಿವಿಕ್ರಮನಂತೆ ಬೆಳೆದು ನಿಂತ ವ್ಯಕ್ತಿತ್ವವನ್ನು ವಿಭೂತಿಯೆಂದು ಕರೆಯುವರು...... ಸಾಮಾನ್ಯ ತಂತಿ ಶಕ್ತಿಯ ಸಂಚಾರಕ್ಕೆ ಪ್ರಣಾಲಿಕೆಯಾದಾಗ ವಿಭೂತಿಯಾಗುವಂತೆ ಭೂತಿಯೂ ವಿಭೂತಿಯಾಗುತ್ತದೆ. ಮಣ್ಣು ಭೂತಿ. ಆದರೆ ಅದರಿಂದಲೇ ಮಾಡಿದ ಗಣಪತಿ ವಿಭೂತಿ. ಕಲ್ಲು ಭೂತಿ. ಆದರೆ ಕಲ್ಲಿನಿಂದಲೇ ಮಾಡಿದ ಗೊಮ್ಮಟ ಮೂರ್ತಿ ವಿಭೂತಿ"–ಇಡೀ ಲೇಖನದುದ್ದಕ್ಕೂ ಹೀಗೆ ಪದಗಳ ಮೇಲೆ ಸರ್ಕಸ್ ನಡೆಯುತ್ತಾ ಹೋಗುತ್ತದೆ. 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ಧೋರಣೆಯನ್ನು ಮುಂದು ಮಾಡಿಕೊಂಡು ಹೊರಟ ಬಸವಣ್ಣನವರ ಮಾತುಗಳ ಹಿನ್ನೆಲೆಯಲ್ಲಿ ಈ ಲೇಖನವನ್ನು ಅವಲೋಕಿಸಿದರೆ ಲೇಖಕರ ಗ್ರಹಿಕೆ ಯಾವ ಸ್ವರೂಪದ್ದೆಂಬುದು ಅರ್ಥವಾಗದೆ ಇರುವುದಿಲ್ಲ.

ಬಸವಣ್ಣನವರ ವಚನಗಳಲ್ಲಿ ಅನುಭಾವ (ಪ್ರಭುಶಂಕರ) ಲೇಖನ ಅನುಭಾವದ ಸಂದರ್ಭದಲ್ಲಿ ಏರ್ಪಡುವ ಆತ್ಮ ವಿಮರ್ಶೆಯ ಸ್ವರೂಪವನ್ನು ಪರಿಚಯ ಮಾಡಿಕೊಡುತ್ತದೆ.

ಬಸವಣ್ಣನವರ ಐತಿಹಾಸಿಕತೆ (ಎಚ್. ತಿಪ್ಪೇರುದ್ರಸ್ವಾಮಿ) ಅಲ್ಲಮಪ್ರಭು (ಎಂ. ಎಸ್. ಸುಂಕಾಪುರ) ಸಿದ್ಧರಾಮ (ಸಿದ್ಧಯ್ಯ ಪುರಾಣಿಕ) ಅಕ್ಕಮಹಾದೇವಿ (ಸರಸ್ವತಿ ದೇವಿಗೌಡರ) – ಈ ಲೇಖನಗಳು ಇದರಲ್ಲಿವೆ.

ಬಿಡುಗಡೆ ಬೆಳ್ಳಿ (ಸಂ. ಹಾ. ಮಾ. ನಾಯಕ) ಭಾರತದ ಸ್ವಾತಂತ್ರ್ಯೋತ್ಸವದ ಬೆಳ್ಳಿ ಹಬ್ಬದ ನೆನಪಿಗಾಗಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ನಡೆಸಿದ ವಿಚಾರ ಸಂಕಿರಣದ ಚಟುವಟಿಕೆಗಳನ್ನು ಈ ಪುಸ್ತಕ ಒಳಗೊಂಡಿದೆ. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ, ರಾಷ್ಟ್ರೀಯ ಪ್ರಜ್ಞೆ, ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ-ಧಾಟಿ ಧೋರಣೆಗಳು, ಆಧುನಿಕ ಕನ್ನಡ ಸಾಹಿತ್ಯ-ಸಾಮಾಜಿಕ ಪ್ರಜ್ಞೆ–ಭಾಷಾಪ್ರಯೋಗಕ್ಕೆ ಸಂಬಂಧಪಟ್ಟ ಲೇಖನಗಳಿವೆ. ಸುಮಾರು ಇಪ್ಪತ್ತೈದು ಜನ ಲೇಖಕರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ನಮ್ಮ ಸಾಹಿತ್ಯಕ ಸಂದರ್ಭಗಳಲ್ಲಿ ಏರ್ಪಟ್ಟಿರುವ ವಿವಿಧ ನಿಲುವುಗಳನ್ನು ಈ ಲೇಖನಗಳು ಪರಿಚಯಮಾಡಿಕೊಡುತ್ತವೆ. ನಮ್ಮ ಕಾವ್ಯಮೀಮಾಂಸೆ ಇಂಗ್ಲಿಷ್ ಸಾಹಿತ್ಯ ವಿಮರ್ಶೆ ಇವುಗಳ ಬಗೆಗೆ ಚಿಂತನೆಗಳನ್ನು ಪ್ರತ್ಯೇಕವಾಗಿಯೂ, ಇವೆರಡಕ್ಕೂ ಸಂಬಂಧಿಸಿದ ಕೆಲವು ಲೇಖನಗಳನ್ನೂ ಇದರಲ್ಲಿ ಕಾಣಬಹುದು. ಕನ್ನಡ ಸಾಹಿತಿ ಮತ್ತು ಕನ್ನಡ ಓದುಗರು—ಇವರ ಸಮಸ್ಯೆಗಳ ಬಗ್ಗೆ ಚರ್ಚೆ ಕಾಣಸಿಗುವುದಿಲ್ಲ. ಸಾಹಿತಿಗಳು ಮತ್ತು ವಿಮರ್ಶಕರ ತಾತ್ವಿಕ ವಿಚಾರಗಳನ್ನು ಚರ್ಚಿಸುವ ಸಂದರ್ಭದಲ್ಲಿ ಓದುಗನಿಗೂ ನಮ್ಮ ಸಾಹಿತ್ಯಕ್ಕೂ ನಡುವೆ ಏರ್ಪಟ್ಟಿರುವ ಸಾಂಸ್ಕೃತಿಕವಾದ ಬಿರುಕು ಯಾವ ಸ್ವರೂಪದ್ದೆಂದು ಚರ್ಚಿತವಾಗುವುದಿಲ್ಲ.

ವಿಕಿರಣ (ಬಿ. ಎನ್. ನಾಗರಾಜ ಭಟ್ಟ) ಜಾನಪದದಿಂದ ಹಿಡಿದು ಕಾರ್ನಾಡರ 'ಹಯವದನ' ನಾಟಕದ ತನಕ ಏಳು ಲೇಖನಗಳನ್ನೊಳಗೊಂಡ ಸಂಕಲನ. ಈ ಲೇಖನಗಳ ಹಿನ್ನೆಲೆಯಲ್ಲಿ ನಿರ್ದಿಷ್ಟ ಆಲೋಚನಾ ಕ್ರಮ ಕಾಣಲು ಸಾಧ್ಯವಿಲ್ಲ. ಪಂಪನಲ್ಲಿ ಪಾತ್ರಪ್ರಜ್ಞೆ ಎಂಬ ಲೇಖನ ಕಾವ್ಯ ವಿಮರ್ಶೆಯ ಯಾವ ನೆಲೆಯಿಂದ ಹೊರಡುತ್ತದೆಂಬುದನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಒಂದು ರೀತಿಯಲ್ಲಿ ವಿವರಣಾತ್ಮಕವಾದ ನೈತಿಕ ವಿಮರ್ಶೆಯನ್ನು ಇಲ್ಲಿನ ಲೇಖನಗಳು ಪ್ರಕಟ ಪಡಿಸುತ್ತವೆ. ಜಲಗಾರ ಮತ್ತು ಸಮಕಾಲೀನ ಸಮಸ್ಯೆ ಎಂಬ ಲೇಖನ ಸಮಕಾಲೀನ ಸಮಸ್ಯೆಯ ಸ್ವರೂಪದ ಕಡೆಗೆ ಬೆಳಕು ಬೀರುವುದಿಲ್ಲ.

ಪ್ರತಿಭಾ ಸಂದರ್ಶನ (ರಾಮಚಂದ್ರಶರ್ಮ) ಬಿ. ಸಿ. ರಾಮಚಂದ್ರಶರ್ಮರ ಈ ಪುಸ್ತಕ ಅನೇಕ ದೃಷ್ಟಿಗಳಿಂದ ಮಹತ್ವವಾಗಿರುವ ದಾಖಲೆಗಳನ್ನು ಒಳಗೊಂಡಿದೆ. ಹದಿನೇಳು ವರ್ಷಗಳ ಹಿಂದೆ "ಕನ್ನಡ ಕಾವ್ಯ ಕ್ಷೇತ್ರದಲ್ಲಿ ನವ್ಯಕಾವ್ಯ ಸುಂಟರಗಾಳಿಯ ಹಾಗೆ ಎದ್ದ ಸಂದರ್ಭದಲ್ಲಿ" ಕನ್ನಡದ ಮಹತ್ವದ ಹತ್ತುಮಂದಿ ಕವಿಗಳ ಸಂದರ್ಶನ ಇದರಲ್ಲಿದೆ. ಈ ಸಂದರ್ಶನಗಳ ಮೂಲಕ ನಮ್ಮ ನವೋದಯ ಕವಿಗಳ ಸಾಹಿತ್ಯಿಕ ಧೋರಣೆಗಳು, ಅದರಲ್ಲೂ ಕಾವ್ಯದ ಬಗೆಗಿನ ಅವರ ನಿಲುವುಗಳನ್ನು ಕಾಣಬಹುದು. ಇಂಥ ಪುಸ್ತಕದ ವಿಶ್ಲೇಷಣೆ ಅತ್ಯಂತ ಇಕ್ಕಟ್ಟಿನದು. ಏಕೆಂದರೆ ನವೋದಯ ಕವಿಗಳ ಧೋರಣೆಗಳು ಒಟ್ಟು ಸಂದರ್ಭದಲ್ಲಿ ಚರ್ಚೆಗೆ ಗುರಿಯಾಗುವುದರಿಂದ ಮಾತ್ರ ಅವರ ನಿಲುವುಗಳ ತಾತ್ತ್ವಿಕ ಸ್ವರೂಪ ಸ್ಪಷ್ಟವಾಗುತ್ತದೆ. ಅಂಥ ಚರ್ಚೆ ಇತ್ತೀಚಿನ ದಿನಗಳಲ್ಲಿ ಬಹುಮುಖವಾಗಿ ನಡೆದಿದೆ. ಆ ಚರ್ಚೆಗಳನ್ನು ನೋಡಿದಾಗ "ನವ್ಯಕಾವ್ಯ" ದ ಆರಂಭದ ಹಂತದ ಕೆಲವು ಗ್ರಹಿಕೆಗಳು ವಿಶೇಷವಾದ ಚರ್ಚೆಗೆ ಗುರಿಯಾಗಿವೆ. ಈ ಸಂದರ್ಶನಗಳ ಮೂಲಕವೂ ನವೋದಯದ ಕೆಲವು ಗ್ರಹಿಕೆಗಳನ್ನು ಕಂಡುಕೊಳ್ಳುವುದು ಸಾಧ್ಯವಾಗಿದೆ. ಸಂದರ್ಶನದ ವ್ಯಾಪ್ತಿಯಲ್ಲಿ ಸಾಹಿತ್ಯಿಕ ಚರ್ಚೆ ನಿರ್ದುಷ್ಟವಾಗಿ ಏರ್ಪಡಲು ಸಾಧ್ಯವಿಲ್ಲವೋ ಏನೋ? ನವೋದಯ ಕವಿಗಳನ್ನು ನಿರ್ದೇಶಿಸುವಾಗ (ಕವಿ ಮತ್ತು ಕಾವ್ಯ) ಸಂದರ್ಶಕರು ಒಂದು ರೀತಿಯ ಆಕರ್ಷಕವಾದ ತಲೆಬರಹಗಳನ್ನು ಕೊಟ್ಟಿದ್ದಾರೆ. ಇದರ ಹಿನ್ನೆಲೆಯಲ್ಲಿ ಸಂದರ್ಶಕರು ಲೇಖಕರ ಧೋರಣೆಗಳನ್ನು ಗಮನಿಸಿಕೊಂಡಂತೆ ಕಂಡರೂ ಸಂದರ್ಶನದ ಒಳಗಡೆ ಅದರ ಬಗೆಗೆ ಒತ್ತು ಕಡಿಮೆ. ನವ್ಯ ಕವಿಗಳನ ಧೋರಣೆಗಳನ್ನು ಕುರಿತು ಶರ್ಮರು ರೂಪಿಸಿಕೊಂಡಿರುವ ಪ್ರಶ್ನೆಗಳ ಮೂಲಕ ಆರಂಭಕಾಲದ (ನವ್ಯ ಕಾವ್ಯದ) ನಿಲುವುಗಳ ಸ್ವರೂಪವನ್ನು ಗುರುತಿಸಿಕೊಳ್ಳಬಹುದು. ಕಾವ್ಯದ ಬಗೆಗೆ ಏರ್ಪಟ್ಟಿರುವ ಸಾಮಾಜಿಕ ಆಲೋಚನೆಗಳು, ತಂತ್ರ, ಭಾಷೆ, ವಸ್ತು ಮತ್ತು ಅದಕ್ಕೆ ಸಂಬಂಧಿಸಿದ ರೂಪನಿಷ್ಠ ಗ್ರಹಿಕೆಗಳ ಪರಿಚಯ ಆಗುತ್ತದೆ. ಆದರೆ ಒಂದು ಚಾರಿತ್ರಿಕ ಘಟ್ಟದಲ್ಲಿ, ಇನ್ನೂ ವ್ಯವಸ್ಥಿತ ಆಲೋಚನಾ ಕ್ರಮ ಬೆಳೆಯದ ಸಂದರ್ಭದಲ್ಲಿ ಏಳಬಹುದಾದ ಮೂಲಭೂತ ಎನ್ನಿಸಿಕೊಳ್ಳುವ ಪ್ರಶ್ನೆಗಳು ಅದರಲ್ಲಿವೆ. ಸಂದರ್ಶನಕ್ಕೆ ಗುರಿಯಾಗಿರುವ ಬಹುತೇಕ ಲೇಖಕರು ಕಾವ್ಯಾನುಭವ, ಸೌಂದರ್ಯನಿಷ್ಠತೆ, ಮೌಲ್ಯ, ಸ್ಫೂರ್ತಿ, ಮೊದಲಾದ ವಿಷಯಗಳ ಬಗ್ಗೆ ಪ್ರತಿಕ್ರಿಯೆಯನ್ನು ತೋರಿದ್ದಾರೆ. ಇಂಥ ಪ್ರತಿಕ್ರಿಯೆಗಳ ಅಭ್ಯಾಸದಿಂದ ನವೋದಯದ ಸಾಹಿತ್ಯಕ ಮತ್ತು ಸಾಮಾಜಿಕ ಚರ್ಚೆಗಳನ್ನು ಗುರುತಿಸಿಕೊಳ್ಳಬಹುದು. ಸಾಮಾಜಿಕ ಸ್ಥಿತ್ಯಂತರಗಳ ಘಟ್ಟದಲ್ಲಿ ಚರ್ಚೆಗೆ ಗುರಿಯಾಗುವ ಸಾಹಿತ್ಯದ ಉದ್ದೇಶ ಮತ್ತು ಪರಿಣಾಮಗಳ ಬಗೆಗಾಗಲಿ, ಸೌಂದರ್ಯನಿಷ್ಠ ನಿಲುವುಗಳ ಬಗೆಗಾಗಲಿ, ಖಚಿತವಾದ ನಿಲುವುಗಳನ್ನು ಸಂದರ್ಶಕರು ಹೊಂದಿದ್ದಂತೆ ಕಾಣುವುದಿಲ್ಲ. ನವ್ಯಕಾವ್ಯದ ಸಮರ್ಥನೆಯ ಹಿನ್ನೆಲೆಯಲ್ಲಿ ಅವರು ಹಾಕುವ ಕೆಲವು ಪ್ರಶ್ನೆಗಳು ಪ್ರತ್ಯೇಕಗೊಂಡ ಪ್ರಶ್ನೆಗಳಾಗಿ ಕಾಣುತ್ತದೆಯೇ ಹೊರತು ಸುಸಂಘಟಿತ ವಿಮರ್ಶಾ ನಿಲುವುಗಳಿಂದ ರೂಪಿತವಾದದ್ದು ಎನಿಸುವುದಿಲ್ಲ.

ನವೋದಯದಿಂದ ನವ್ಯಕ್ಕೆ ಆದ ಬದಲಾವಣೆಗೆ ಸಾಮಾಜಿಕವಾಗಿ ಆದ ಬದಲಾವಣೆಯೇ ಕಾರಣ ಎಂದು ಶರ್ಮರು ಪ್ರಸ್ತಾಪಿಸಿದ್ದಾರೆ. ಕಾವ್ಯದಿಂದ ದೊರಕುವ ಅನುಭವದ ಬಗ್ಗೆ ನವೋದಯ ಮಾರ್ಗ ವ್ಯಕ್ತಪಡಿಸಿದ ಆಲೋಚನೆಗಳಿಗೂ ನವ್ಯ ಕಾವ್ಯದ ನೆಲೆಯಿಂದ ಹೊರಡುವ

ಆಲೋಚನೆಗಳಿಗೂ ಇಲ್ಲಿನ ದಾಖಲೆಗಳು ಚರ್ಚೆಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಕಾವ್ಯದ ವಸ್ತು, ಶೈಲಿ, ಇವುಗಳ ಬಗೆಗೆ ಶರ್ಮರು ಅನೇಕ ಪ್ರಶ್ನೆಗಳನ್ನು ಮುಂದು ಮಾಡಿದರೂ ಕೂಡ–ಬದಲಾಗಬೇಕಾಗಿರುವ, ಬದಲಾಗಿರುವ ಕಾವ್ಯದ ಓದುಗರ ಸ್ವರೂಪವನ್ನು ಕುರಿತು ಯಾವ ಚರ್ಚೆಯನ್ನೂ ಅವರು ಬೆಳಸುವದಿಲ್ಲ. ನವೋದಯ ರೂಪಿಸಿಕೊಂಡ ಸಾಹಿತ್ಯ ವಿಮರ್ಶೆಯ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ವಿಶ್ಲೇಷಣಾ ವಿಧಾನಗಳನ್ನು ಹೊಸ ಸಾಹಿತ್ಯದ ಧೋರಣೆ ಹೇಗೆ ರೂಪಿಸಿಕೊಳ್ಳಬೇಕೆಂಬ ಕಾಳಜಿ ಶರ್ಮರಿಗೆ ಈ ಸಂದರ್ಶನದ ಸಂದರ್ಭಗಳಲ್ಲಿ ಮುಖ್ಯ ವಾದಂತೆ ತೋರುವುದಿಲ್ಲ. ಇದರಿಂದ ಹೇಳಬಹುದಾದ ವಿಚಾರ ಇಷ್ಟು : ನವ್ಯ ಕಾವ್ಯದ ಆರಂಭದ ಹತ್ತು ವರ್ಷಗಳಲ್ಲಿ ನಡೆದ ತಂತ್ರ ನಿಷ್ಠ ವಿಮರ್ಶೆಯ ವಿಧಾನಗಳ ಮೇಲೆ ಇದು ಬೆಳಕು ಚೆಲ್ಲುತ್ತದೆ. ಜೊತೆಗೆ ನವೋದಯದ ವಾತಾವರಣದಿಂದ ಸಿದ್ಧವಾದ ವಿಮರ್ಶಾ ವಿಧಾನಗಳನ್ನು ಹೊಸ ರೀತಿಯ ತಂತ್ರನಿಷ್ಠ ವಿಮರ್ಶೆಯ ಜೊತೆಗೆ ಸೇರಿಸುವುದರ ಮೂಲಕ ಸಾಹಿತ್ಯ ವಿಮರ್ಶೆಯಲ್ಲಿ ವ್ಯಕ್ತವಾದ ಅವಿಚಾರಿತ ಸೌಂದರ್ಯನಿಷ್ಠ ನಿಲುವುಗಳು ಎಷ್ಟರಮಟ್ಟಿಗೆ ಸೇರಿಕೊಂಡಿತು ಎಂಬ ಅಂಶ ಗಮನೀಯವಾದದ್ದು. ತಂತ್ರನಿಷ್ಠ ವಿಮರ್ಶೆ ಮುಖ್ಯವಾದಂತೆಲ್ಲ ಕಾವ್ಯ ವಿಮರ್ಶೆ ಹೆಚ್ಚು ತಾತ್ವಿಕವಾದ ಉದ್ದೇಶ-ಪರಿಣಾಮಗಳನ್ನು ಮುಖ್ಯ ನೆಲೆಯನ್ನಾಗಿ ಸ್ವೀಕರಿಸದೇ ಹೋದ ವಿಚಾರವನ್ನು ಇಲ್ಲಿ ಗಮನಿಸಬಹುದಾಗಿದೆ. ಶರ್ಮರ ಈ ಸಂದರ್ಶನಗಳು ನವ್ಯ ಎಂಬ ಹೊಸ Trend ಏರ್ಪಟ್ಟ ಕಾಲದಲ್ಲಿ ಕಾಣಿಸಿಕೊಂಡ ಅನೇಕ ಪ್ರಶ್ನೆಗಳು, ವಾದ ವಿವಾದಗಳು ಖಂಡನೆ ಮಂಡನೆಗಳನ್ನು ಇದರಲ್ಲಿ ಕಾಣಬಹುದು. ಈ ದೃಷ್ಟಿಯಿಂದ ಈ ಪುಸ್ತಕಕ್ಕೆ ಚಾರಿತ್ರಿಕ ಮಹತ್ವವಿದೆ. ಇಷ್ಟಾದರೂ ಶರ್ಮರ ಸಾಹಿತ್ಯಿಕ ಧೋರಣೆಗಳ ಬಗೆಗೆ ತಾತ್ವಿಕ ನಿಲುವು ಯಾವುದೆಂಬುದು ಸ್ಪಷ್ಟವಾಗುವುದಿಲ್ಲ. ಈ ಸಂದಿಗ್ಧತೆಯನ್ನು ಸಂದರ್ಶಕರ ಮೇಲೆ ಹೊರಿಸಲು ಸಾಧ್ಯವಿಲ್ಲ. ಸಾಂಸ್ಕೃತಿಕವಾಗಿ ಸಂದಿಗ್ಧತೆ ಏರ್ಪಟ್ಟಾಗ ಅಂಥ ಸಂದರ್ಭಗಳಲ್ಲಿ ಎದುರಾಗುವ ಪ್ರಶ್ನೆಗಳಿಗಷ್ಟೇ ಸೀಮಿತಗೊಳಿಸಿಕೊಂಡು ನೋಡಿದರೂ ಕೂಡ ಇದಕ್ಕೆ ಗಮನಾರ್ಹ ಸ್ಥಾನವಿದೆ.

ಸಂತೆಯೊಳ್ಳೊಂದು ಮನೆ (ದೇಶಪಾಂಡೆ ಸುಬ್ಬರಾಯ) ಇದರಲ್ಲಿ ಎಂಟು ಲೇಖನಗಳಿವೆ. ಸೋಲ್ಜೆನೆತ್ಸಿನ್‌ನ ಮಾತುಗಳನ್ನು ಉದಾಹರಿಸಿ 'ರಣರಂಗಕ್ಕೆ ನುಗ್ಗುವ ಈ ಮಾತುಗಳೆಂದರೆ ನನಗೆ ಬಹಳ ಇಷ್ಟ' ಎನ್ನುತ್ತಾರೆ. ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿರುವ ಡಾ॥ ರಾಘವೇಂದ್ರರಾವ್ ಅವರು ನಮ್ಮ ಸಾಹಿತ್ಯ ವಿಮರ್ಶೆಯನ್ನು ಪರಂಪರೆಯ ಬಂಧನಗಳಿಂದ ಪಾರುಮಾಡಿಸಿ ಪ್ರಗತಿ ಶೀಲ ಸಮಾಜದ ರಚನೆಗೆ ಬಳಸಬೇಕೆಂಬ ಆಲೋಚನೆಯನ್ನು ಮಾಡಿದ್ದಾರೆ. ರಾಘವೇಂದ್ರರಾಯರ ಮಾತಿನ ಬಗೆಗೆ ನಮ್ಮ ತಕರಾರು ಖಂಡಿತ ಇಲ್ಲ. ಆದರೆ ಪುಸ್ತಕದಲ್ಲಿನ ಲೇಖನಗಳು ಈ ಹಿನ್ನೆಲೆಯಲ್ಲಿ ರೂಪುಗೊಳ್ಳುವುದಿಲ್ಲ. ಲೇಖಕನಿಗೆ ತಾನು 'ವಿಲಕ್ಷಣ'ವಾಗಿ ಬರೆಯುತ್ತಿದ್ದೇನೆಂಬ 'ಸ್ವಾಭಿಮಾನ' ಇದೆ. ಯಾವುದೇ ಕೃತಿಯನ್ನು ಸಾಂಸ್ಕೃತಿಕ ವಿಶ್ಲೇಷಣೆಗೆ ಅವರು ಗುರಿಪಡಿಸುವುದಿಲ್ಲ. ಅದಕ್ಕೆ ಬದಲಾಗಿ ಆವೇಶಪೂರಿತ ಹೇಳಿಕೆಗಳ ಮಟ್ಟದಲ್ಲಿ ಲೇಖನಗಳು ಬೆಳೆಯುತ್ತವೆ. ಸಾಹಿತ್ಯ ವಿಮರ್ಶೆಯಲ್ಲಿ ಪ್ರಕಟವಾಗುವ ಅಸಂಗತ ಆಸಕ್ತಿಗಳ ಬಗೆಗೆ ಲೇಖಕರ ಕ್ರೋಧ, ಪ್ರಕಟವಾಗಿದ್ದರೂ, ಅದರಲ್ಲಿನ ಟೊಳ್ಳುತನವನ್ನು ಬಯಲುಗೊಳಿಸುವ ವಿಶ್ಲೇಷಣೆಯ ಕಡೆಗೆ ಸಂಘಟನಾತ್ಮಕ ಪ್ರಯತ್ನ ನಡೆಯುವುದಿಲ್ಲ. ಹೀಗಾಗಿ ಧೋರಣೆಗಳ ಸಂದರ್ಭದಲ್ಲಿ ವ್ಯಕ್ತವಾಗುವ ಸಾಂಸ್ಕೃತಿಕ ಸಮಸ್ಯೆಗಳನ್ನು ಸರಳಗೊಳಿಸುವ ಪ್ರಯತ್ನವಾಗಿ ಮಾತ್ರ ನಿಲ್ಲುತ್ತದೆ. ಸಾಹಿತ್ಯಕ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಪರಸ್ಪರ ವಿರೋಧಗಳ ಸ್ವರೂಪವನ್ನಾಗಲಿ ಮತ್ತು ಸಾಮಾಜಿಕ ಸಮಸ್ಯೆಗಳ ಸ್ವರೂಪವನ್ನಾಗಲಿ ಗಮನಕ್ಕೆ ತಂದುಕೊಳ್ಳದೆ ಚರ್ಚೆಗೆ ಹೊರಡುವುದರಿಂದ ಕೆಲವೊಮ್ಮೆ ವ್ಯಕ್ತಿ ಪ್ರಧಾನ ಆಶಯಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡಂತೆ ಕಾಣಿಸುತ್ತದೆ. 'ಕಾವ್ಯ ಹೀಗೇ ಇರಬೇಕು ಎನ್ನುವ ಸಂಕುಚಿತ ದುರಾಗ್ರಹ ನನ್ನಲ್ಲಿಲ್ಲ. ಕಾವ್ಯವೆನ್ನುವ ತಲೆಬರಹದಲ್ಲಿ ಬಂದ ಬರಹಗಳೆಲ್ಲ 'ಗೀಚು' ಎಷ್ಟು, 'ಗದ್ಯ' ಎಷ್ಟು, 'ಕಾವ್ಯ' ಎಷ್ಟು ಎನ್ನುವುದನ್ನು (ವಿಶ್ಲೇಷಿಸಿ) ನೋಡುವುದು ನನ್ನ ಚಟ. ಈಗೀಗ ಕಾವ್ಯದ ಹೆಸರಿನಲ್ಲಿ ಬರುತ್ತಿರುವ 'ಅಕ್ಷರ ವ್ಯಭಿಚಾರ'ವನ್ನು

ಗಮನಿಸಿದರೆ ಈ ಚಟವನ್ನೇ ಇನ್ನೂ ಸ್ವಲ್ಪ ಗಂಭೀರ ರೀತಿಯಲ್ಲಿಯೇ ಬಳಸಿಕೊಳ್ಳುವುದು ಅವಶ್ಯವೆನಿಸುತ್ತದೆ.' (ಲೇಖನದ ಭಾಗ)

ಎನ್ಕೆಯವರ ನಾಟಕವನ್ನು ಕುರಿತು ಹೀಗೆ ಬರೆಯುತ್ತಾರೆ 'ಒಂದು ದೃಷ್ಟಿಯಿಂದ ಕುಮಾರನ ಪಾತ್ರಕ್ಕೆ ತೀವ್ರ ಪ್ರತಿಕ್ರಿಯೆಯಾಗಿ ಬಂದ ಪಾತ್ರ ಮಾಲೀಕ. ತುಳಸೀದಾಸನ ಪಾತ್ರ ಮಾಧ್ಯಮ ತಂದ ಸತ್ವದ ಪರಾಕಾಷ್ಠೆಗೇರಿ, ಬದುಕಿನಲ್ಲಿ ಹೊಸ ತಿರುವನ್ನು ನಡದು ಪೂರ್ಣತ್ವವನ್ನು ಪಡೆಯುವ ಕುಮಾರನ ಪರಿವರ್ತನೆಗೆ ತದ್ವಿರುದ್ಧವಾಗಿ ಅದೇ ಪಾತ್ರದ ಮಾಧ್ಯಮದಿಂದಲೇ ಪಾತಾಳಕ್ಕಿಳಿದು ನೀಚತ್ವ ಮೆರೆಯುವ ಈತ' ಇಂಥ ಅಸಂಗತ ಮತ್ತು ಅಸ್ಪಷ್ಟ ವಿವರಣೆಗಳ ಗದ್ದಲ ಈ ಪುಸ್ತಕದ ತುಂಬಾ ಕಾಣಬಹುದಾದ ಅಂಶ. ಕಾವ್ಯ ಅರಳುತ್ತದೆ, ಧಿಗ್ಗನೆದ್ದೆದ್ದು ಕುಣಿಯುವ ಸ್ವಾರ್ಥ ಮುಂತಾದ ಪರಸ್ಪರ ಸಂಬಂಧವಿಲ್ಲದ ಮಾತುಗಳನ್ನು ಜೋಡಿಸುತ್ತಾ ಹೋಗುವುದು ಇಲ್ಲಿನ ಬರಹದ ಸ್ವರೂಪ. ಸೀರಿಯಸ್ಸಾದ ಕಾಳಜಿಗಳನ್ನು ಹೊಂದಿರುವಂತೆ ಘೋಷಿಸಿಕೊಳ್ಳುವ ವೇಶಪಾಂಡೆ ಸುಬ್ಬರಾಯರ ವಿಮರ್ಶಾ ವಿಧಾನದಲ್ಲಿ ಸಮತೋಲ ತಪ್ಪಿದೆ. ಸಾಹಿತ್ಯ ವಿಶ್ಲೇಷಣೆ ಮತ್ತು ಸಾಹಿತ್ಯದ ಸಾಂಸ್ಕೃತಿಕ ಜವಾಬ್ದಾರಿಯನ್ನು ಸ್ಲೋಗನ್‌ಗಳಲ್ಲಿ ಮುಳುಗಿಸಿದರೆ ಏನನ್ನೂ ಹೇಳಿದಂತಾಗುವುದಿಲ್ಲ.

ನವ್ಯ ವಿಮರ್ಶೆ (ಗಿರಡ್ಡಿ ಗೋವಿಂದರಾಜ) ಈ ಸಂಕಲನದಲ್ಲಿರುವ ಏಳು ಲೇಖನಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳೆಂದು ಹೇಳುತ್ತಾ, ಈ ಲೇಖನಗಳಲ್ಲಿ ಏಕ ಸೂತ್ರತೆಯಿಲ್ಲವೆಂದು ಪುಸ್ತಕದ ಆರಂಭದಲ್ಲಿ ಹೇಳಿದ್ದಾರೆ. ಆದರೆ ಅವರಿಗೇ ತಿಳಿಯದಂತೆ ಸಾಧಾರಣ ಉದ್ದೇಶವೊಂದು ಆ ಲೇಖನಗಳಲ್ಲಿ ಒಳಗೊಂಡಿರುವುದನ್ನು ಗಮನಕ್ಕೆ ತಂದುಕೊಂಡಿದ್ದಾರೆ. ಪುನರ್ ಮೌಲ್ಯಮಾಪನಕ್ಕೆ ಇಲ್ಲಿನ ಲೇಖನಗಳನ್ನು ನಿದರ್ಶನವೆಂದು ಕರೆದುಕೊಂಡಿದ್ದಾರೆ.

ನವ್ಯ ವಿಮರ್ಶೆ ಎಂಬ ಲೇಖನ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಬೇರೆ ಬೇರೆ ಪ್ರಸ್ಥಾನಗಳನ್ನು ಪರಿಚಯ ಮಾಡಿಕೊಡುವ ಲೇಖನ. ಆಯಾ ಪ್ರಸ್ಥಾನಗಳಲ್ಲಿ ಏರ್ಪಟ್ಟಿರುವ ಮುಖ್ಯವಾದ ಆಲೋಚನೆಗಳು ಮತ್ತು ಅದರ ಸ್ವರೂಪವನ್ನು ಈ ಲೇಖನ ಸಂಗ್ರಹಿಸಿಕೊಡುತ್ತದೆ. ಆ ಉದ್ದೇಶಕ್ಕಿಂತ ಬೇರೆಯಾದ ವಿಶ್ಲೇಷಣೆ ಇಲ್ಲಿ ದೊರೆಯುವುದಿಲ್ಲ. 'ಕಾವ್ಯ ಮತ್ತು ಭಾಷೆ' ಎಂಬ ಲೇಖನ ಭಾಷಾ ಶಾಸ್ತ್ರ, ಸಮಾಜಶಾಸ್ತ್ರ ಇವುಗಳ ಹಿನ್ನೆಲೆಯಲ್ಲಿ ಕಾವ್ಯ ಭಾಷೆಯ ಬಗೆಗೆ ಚರ್ಚೆ ನಡೆಸುತ್ತದೆ. ಅಲಂಕಾರ ಮತ್ತು ಅದರ ಸ್ಥಾನದ ಹಿನ್ನೆಲೆಯಲ್ಲಿ ನಡೆಯುವ ಈ ಪ್ರಬಂಧದ ಚರ್ಚೆ ಶೈಲಿ ತತ್ವದ ಆಧಾರದಮೇಲೆ ರೂಪುಗೊಂಡದ್ದಾಗಿದೆ. ಶೈಲಿ ತತ್ವದ ಅಭ್ಯಾಸಕ್ಕೆ ಈ ಲೇಖನ ಕೆಲವು ಮಹತ್ವದ ಸೂಚನೆಗಳನ್ನು ಕೊಡುತ್ತದೆ. 'ಜನ್ನನ ಯಶೋಧರ ಚರಿತೆ' ಎಂಬ ಲೇಖನ ಧಾರ್ಮಿಕ ಮೌಲ್ಯ ಮತ್ತು ಮಾನವೀಯ ಸಮಸ್ಯೆಗಳನ್ನು ಆ ಕೃತಿ ನಿರಾಕರಿಸುತ್ತದೆ ಎನ್ನುವ ಕೇಂದ್ರದಿಂದ ಹೊರಟು ಕೆಲವು ಪ್ರಶ್ನೆಗಳನ್ನು ಎತ್ತುತ್ತದೆ. ಒಂದು ಚಾರಿತ್ರಿಕ ಸಂದರ್ಭದಲ್ಲಿ ಸೃಷ್ಟಿಯಾಗುವ ಇಂಥ ಕೃತಿಯ ಸಾಮಾಜಿಕ ವಿಶ್ಲೇಷಣೆಯೇ ಮುಖ್ಯವಾದದ್ದು. ಮತೀಯ ವಾಸನೆಯನ್ನು ಕಳೆದುಕೊಂಡು 'ಶುದ್ಧ ಮೌಲ್ಯ' ಪ್ರಕಟಿಸುವ ಹಳೆಯ ಕನ್ನಡ ಕೃತಿಗಳು ಕನ್ನಡದಲ್ಲಿ ಇಲ್ಲವೇಯಿಲ್ಲವೆಂದರೂ ಸಲ್ಲುತ್ತದೆ. ಶುದ್ಧ ಮೌಲ್ಯವನ್ನು ನಿರೀಕ್ಷಿಸಿ ವಿಮರ್ಶೆಗೆ ತೊಡಗುವ ಲೇಖಕರ ಆಶಯ ತೂಕ ತಪ್ಪಿದೆ, ಜೀವನ ವಿಮುಖತೆಯ ಪ್ರಶ್ನೆಯನ್ನು ಸಾಮಾಜಿಕ ಸಂದರ್ಭದ ಪ್ರಶ್ನೆಯಾಗಿ, ಧಾರ್ಮಿಕ ಸ್ವರೂಪದ ಪ್ರಶ್ನೆಯಾಗಿ ಗುರುತಿಸಿಕೊಳ್ಳಬೇಕಲ್ಲದೆ ಅದಕ್ಕೆ ಉತ್ತರವನ್ನು ಕೃತಿಯ ಸಂದರ್ಭದಲ್ಲೇ ಕಂಡುಕೊಳ್ಳುವುದು ಅಷ್ಟು ಉಚಿತವಾಗಲಾರದು. 'ಕಾವ್ಯ ಮತ್ತು ಸಾಮಾಜಿಕ ಪ್ರಜ್ಞೆ' ಎಂಬ ಲೇಖನದಲ್ಲಿ ನವೋದಯದ ಸಂದರ್ಭದಲ್ಲಿ ಕಾಣುವ ಸಾಮಾಜಿಕ ಪ್ರಜ್ಞೆಯನ್ನು ಪರಿಚಯ ಮಾಡಿಕೊಡಲಾಗಿದೆ. ಧೋರಣೆಗಳನ್ನು ಸೀಮಿತಗೊಳಿಸಿಕೊಳ್ಳುವುದರಿಂದ ಅವರ ಚರ್ಚೆಯಲ್ಲಿ ತಾತ್ವಿಕ ಸಮಸ್ಯೆಗಳು ಮುಂದಾಗುವುದಿಲ್ಲ.

ನಾಟಕವನ್ನು ಕುರಿತ ಲೇಖನದ ಧಾಟಿ ರಂಗಪ್ರಯೋಗ ಮತ್ತು ಸಾಹಿತ್ಯಕೃತಿಯಾಗಿ ಒಂದು ನಾಟಕವನ್ನು ಪರಿಭಾವಿಸುವುದರ ಚರ್ಚೆಯಾಗಿದೆ.

ಇತ್ತೀಚಿನ ಕನ್ನಡ ಕಾವ್ಯ ಮತ್ತು ಪರಿಸರ (ಸೋಮಶೇಖರ ಇಮ್ರಾಪುರ) ಸಮಕಾಲೀನ ಕನ್ನಡ ಸಾಹಿತ್ಯ ಮತ್ತು ಅದರ ಸಮಸ್ಯೆಗಳನ್ನು ಕುರಿತ ಏಳು ಲೇಖನಗಳು ಇಲ್ಲಿವೆ. ಇದರಲ್ಲಿ ಮಣ್ಣಿನ ವಾಸನೆ, ಸಾಹಿತ್ಯಕ ಶೂದ್ರರು ಮತ್ತು ಆಂದೋಲನ, ಸಾಹಿತ್ಯಕ ಕ್ರಾಂತಿ ಹಾಗೂ ಪರಿಸರ, ಪು.ತಿ.ನ, ಅಡಿಗ, ಶಿವರುದ್ರಪ್ಪ ಇವರುಗಳ ಕೃತಿಗಳ ಸಮೀಕ್ಷೆಯು ಇದರೊಂದಿಗೆ ಸೇರಿವೆ. ಸಮಕಾಲೀನ, ಸಾರ್ವಕಾಲಿಕ, ಮಣ್ಣಿನ ವಾಸನೆ, ಸಂಕೀರ್ಣತೆ, ಮುಂತಾದ ಪದಗಳನ್ನು ಧಾರಾಳವಾಗಿ ಬಳಸಿಕೊಳ್ಳುವುದರ ಮೂಲಕ 'ಇತ್ತೀಚಿನ ಕನ್ನಡ ಕಾವ್ಯ' ಎಂಬ ಲೇಖನ ಸಿದ್ಧವಾಗಿದೆ. ಸುಮಾರು ಎರಡು ಪುಟಗಳವರೆಗೆ ಹರಡಿಕೊಳ್ಳುವ ಹೆಸರುಗಳ ಪಟ್ಟಿ ಈ ಲೇಖನದಲ್ಲಿ ಬೆಳೆಯುತ್ತದೆ. ನವೋದಯ, ನವ್ಯ, ಪ್ರಗತಿಶೀಲ ಇವುಗಳ ಚಾರಿತ್ರಿಕ ಸಂದರ್ಭದಲ್ಲಿ ರೂಪುಗೊಂಡಿರುವ ತಾತ್ವಿಕ ಜಿಜ್ಞಾಸೆಯನ್ನು ಈ ಪುಸ್ತಕದಲ್ಲಿ ಕಾಣುವುದಿಲ್ಲ. ಆವೇಶಪೂರಿತ ಭಾಷಣದ ಧಾಟಿ ಎಲ್ಲ ಲೇಖನಗಳ ಹಿನ್ನೆಲೆಯುಲ್ಲೂ ಯಥಾಶಕ್ತಿ ಕಾಣಿಸಿಕೊಂಡಿದೆ. 'ಸಾಹಿತ್ಯಕ ಕ್ರಾಂತಿ ಹಾಗೂ ಪರಿಸರ' ಎಂಬ ಲೇಖನ ಸಮಸ್ಯೆಯ ಪರಿಶೀಲನೆಗೆ ಸ್ವಲ್ಪಮಟ್ಟಿಗೆ ಆಲೋಚನೆಗೆ ಅವಕಾಶ ಮಾಡಿಕೊಟ್ಟಿದೆ. ಹೀಗಾಗಿ ಇಮ್ರಾಪುರರ ವಿಮರ್ಶೆಗೆ ಅಸ್ಖಲಿತ ಛಾಪು ಬಿದ್ದಿದೆ. ನಿರ್ದಿಷ್ಟ ಉದ್ದೇಶವನ್ನು ಹೊಂದದೆ ಪ್ರತಿಪಾದಿತವಾಗುವ ವಿಮರ್ಶೆಯು ಇಂಥ ಬರವಣಿಗೆ ಸಮಕಾಲೀನ ಪರಿಸ್ಥಿತಿಯ ಗೊಂದಲವನ್ನು ತಮ್ಮ ಮನಸ್ಸಿಗೆ ಬಂದಂತೆ ಸ್ವೇಚ್ಛೆಯಾಗಿ ರೂಪುಗೊಂಡಿರುವುದರಿಂದ ಇಲ್ಲಿನ ಚಿಂತನೆಗೆ ಖಚಿತತೆ ಏರ್ಪಡುವುದಿಲ್ಲ. ಸಾಹಿತ್ಯ ವಿಮರ್ಶೆಯ ಗಟ್ಟಿಯಾದ ನೆಲೆಗಳನ್ನು ಇಮ್ರಾಪುರರು ಹಾದುಹೋದರೂ ಅವರಿಗೆ ಅಲ್ಲಿ ನಿಂತು ಚರ್ಚಿಸಬೇಕೆಂಬ ಕಾಳಜಿ ಇದ್ದಂತೆ ತೋರುವುದಿಲ್ಲ. ಹೀಗಾಗಿ ಹರಿದು ಹಂಚಿ ಹೋಗಿರುವ ಅಸ್ತವ್ಯಸ್ತ ಹೇಳಿಕೆಗಳ ಮೊತ್ತವಾಗಿ ನಿಂತುಬಿಡುವ ಅಪಾಯ ಈ ಎಲ್ಲ ಲೇಖನಗಳ ಹಿನ್ನೆಲೆಯಲ್ಲಿಯೂ ಕಾಣುವ ಸಾಮಾನ್ಯ ಅಂಶವಾಗಿದೆ.

ಸ್ಪಂದನ (ಬಿ. ವಿ. ವೈಕುಂಠರಾಜು) ಈ ಪುಸ್ತಕದಲ್ಲಿ ಐದು ಭಾಗಗಳಿವೆ. ಕವಿ-ಕಾವ್ಯ, ರಂಗಭೂಮಿ, ಚಿತ್ರರಂಗ, ಜಾತಿ-ಧರ್ಮ, ಕಲೆ ಮತ್ತು ಸಾಹಿತ್ಯ ಮತ್ತು ಕೆಲವು ಟಿಪ್ಪಣಿಗಳು.

ಮೊದಲನೆಯ ಭಾಗದಲ್ಲಿ ಪಂಪನ ಬಗೆಗೆ ಒಂದು ಆಲೋಚನೆ ಇದೆ. ಪಂಪ ಕನ್ನಡ ಎಂ.ಎ. ಓದುವವರ ಸ್ವತ್ತಾಗಿ ಮಾತ್ರ ಉಳಿದಿದ್ದಾನೆ ಎಂಬ ವಾದವನ್ನು ಲೇಖಕರು ಹೂಡಿದ್ದಾರೆ. ಈ ವಾದದ ಮೂಲಕ ಪಂಪ ಕೇವಲ ಪೂಜಾರ್ಹ ವ್ಯಕ್ತಿಯಾಗಿ ಉಳಿದಿದ್ದಾನೆಂಬ ತೀರ್ಮಾನಕ್ಕೆ ಬರುತ್ತಾರೆ. ಈ ಕವಿಯ ಕಾವ್ಯ ನಮಗೀಗ ಬೇಕು. ಅವನ ಕಾವ್ಯ ಮತ್ತು ಅದನ್ನು ಸಮರ್ಥವಾಗಿ ಪರಿಚಯ ಮಾಡಿಕೊಡುವವರು ನಮಗೆ ಬೇಕು. ಇದಕ್ಕಾಗಿ ಲೇಖಕರು ಪಂಪನ ಒಡೆತನದ ವಿಕೇಂದ್ರೀಕರಣ ಅಗತ್ಯವೇನೋ ಎಂಬ ಮಾತುಗಳನ್ನು ಹೇಳಿದ್ದಾರೆ. ಪಂಪ ಎಂ.ಎ. ಓದುವವರ ಸ್ವತ್ತಾಗಿದ್ದಾನೆ ಮತ್ತು ಸಾಂಸ್ಕೃತಿಕವಾಗಿ ಅವನು ನಮ್ಮ ಪಾಲಿಗೆ ಇಲ್ಲವಾಗಿದ್ದಾನೆ ಎಂಬ ಕಳಕಳಿ ಲೇಖಕರಿಗೆ ತೀವ್ರವಾಗಿದೆ. ಇದಕ್ಕೆ ಕಾರಣವನ್ನು ಎಂ.ಎ. ವಿದ್ಯಾರ್ಥಿಯ ಮೇಲೋ ವಿದ್ವಾಂಸರ ಮೇಲೋ ಹಾಕಿದರೆ ಈ ಸಮಸ್ಯೆಯಿಂದ ತಪ್ಪಿಸಿಕೊಂಡಂತಾಗುವುದಿಲ್ಲ. ಏಕೆಂದರೆ ನಮ್ಮ ಕೃತಿಗಳಿಗೂ ವಿದ್ಯಾವಂತ ವರ್ಗಕ್ಕೂ ನಡುವಣ ಕಂದರ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳು ಸಾಮಾಜಿಕವಾದದ್ದು. ಎಷ್ಟೋ ಕನ್ನಡಿಗರಿಗೆ ಅದರಲ್ಲೂ ವಿದ್ಯಾವಂತ ಕನ್ನಡಿಗರಿಗೆ ಪಂಪನ ಕೃತಿಗಳು ಸಂವಹನಗೊಳ್ಳುವುದು ಸಾಧ್ಯವಿಲ್ಲವೋ ಹಾಗೆಯೇ ನಮ್ಮ ಸಮಕಾಲೀನ ಕೃತಿಕಾರರ ಸಂದರ್ಭದಲ್ಲಿಯೂ ಇಂಥ ಸ್ಥಿತಿ ಒದಗಿರುವುದನ್ನು ನಾವು ಕಾಣಬಹುದಾಗಿದೆ. ನಮ್ಮ ಶಿಕ್ಷಣ ಪದ್ಧತಿ ಮತ್ತು ಅವುಗಳ ಸಮಸ್ಯೆಯನ್ನು ವಿಶ್ಲೇಷಿಸಿಕೊಳ್ಳುವುದರ ಮೂಲಕ ವಿದ್ಯಾವಂತ ವರ್ಗದಲ್ಲಿ ಏರ್ಪಟ್ಟಿರುವ ಸಂವಹನ ವಿಚ್ಛೇದನವನ್ನು ಗುರುತಿಸಿಕೊಳ್ಳಬೇಕಾದದ್ದು ಮುಖ್ಯವಾಗು

ತ್ತದೆ. ಹಾಗೆ ಗುರುತಿಸಿಕೊಂಡಾಗ ಪಂಪನ ಕಾವ್ಯ ಯಾರ ಸ್ವತ್ತೂ ಆಗಿಲ್ಲವೆಂಬುದು ತಿಳಿಯು ತ್ತದೆ. ಪಂಪನನ್ನೇನಾದರೂ ಸೀಮಿತ ವರ್ಗದ ವಾತಾವರಣ ಬಂಧನಕ್ಕೆ ಗುರಿಪಡಿಸಿದ್ದರೆ ಅಂಥ ಸಮಸ್ಯೆಗಳ ಮೂಲಭೂತ ಚರ್ಚೆಯನ್ನು ಮಾಡುವುದು ಮುಖ್ಯವಾಗುತ್ತದೆಯೇ ಹೊರತು ಆಪಾದನೆಯ ಮೂಲಕ ಅಲ್ಲ. ವಿಕೇಂದ್ರೀಕರಣ ಹೇಗಾಗಬೇಕೆಂದು ಲೇಖಕರು ಹೇಳುವುದಿಲ್ಲ. ಪಠ್ಯಪುಸ್ತಕಗಳಲ್ಲೆಲ್ಲಾ ಪಂಪನ ಕಾವ್ಯದ ಕೆಲವು ತುಣುಕುಗಳನ್ನು ಸೇರಿಸಿದರೆ ಸಮಸ್ಯೆಯನ್ನು ಬಗೆಹರಿಸಿದಂತೆ ಆಗುತ್ತದೆಯೇ ? ಇದು ಸಂವಹನಕ್ಕೆ ಸಂಬಂಧಪಟ್ಟ ಗಂಭೀರ ಸಮಸ್ಯೆಯಾದುದ ರಿಂದ ಸರಳಗೊಳಿಸಿ ನೋಡುವುದು ಸಾಧ್ಯವಾಗುವುದಿಲ್ಲ. ಈ ಹೊತ್ತಿನ ಸಾಹಿತ್ಯದ ಸಂವಹನದ ಸಮಸ್ಯೆಗಳು ಮತ್ತು ಸಾಂಸ್ಕೃತಿಕವಾಗಿ ಏರ್ಪಟ್ಟಿರುವ ಬಿರುಕುಗಳನ್ನು ಇಂಥ ಸಮಸ್ಯೆಗಳ ಹಿನ್ನೆಲೆಗೆ ತಂದುಕೊಂಡು ಚರ್ಚೆ ನಡೆಯುವುದು ಮುಖ್ಯವಾದದ್ದಾಗುತ್ತದೆ.

ಪು.ತಿ.ನ. ಅವರ ರಸಸರಸ್ವತಿ ಮತ್ತು ಇತರ ಕವನಗಳು—ಈ ಲೇಖನ ಅವರ ಕಾವ್ಯದ ಸ್ವರೂಪವನ್ನು ಯಾವ ದೃಷ್ಟಿಯಿಂದ ವಿಮರ್ಶಿಸುತ್ತಿದೆ ಎನ್ನುವುದು ತಿಳಿಯುವಂತಿಲ್ಲ. ನಾಟಕ-ರಂಗಪ್ರಯೋಗ-ವಿಮರ್ಶೆ ಈ ಲೇಖನ ನಾಟಕವನ್ನು ಕೃತಿಯಾಗಿ ಪ್ರಯೋಗವಾಗಿ ಮತ್ತು ಆ ಪ್ರಯೋಗದ ವಿಮರ್ಶೆ ಇವುಗಳ ಹಿನ್ನೆಲೆಯಲ್ಲಿ ಚರ್ಚೆಯಾಗಿರುವ ಲೇಖನ. ಈ ಚರ್ಚೆ ಎಂದಿನಿಂದಲೂ ಚರ್ಚೆಗೆ ಗುರಿಯಾಗಿದೆ

ಕಂಡದ್ದು ಕಂಡ ಹಾಗೆ (ಪಿ. ಲಂಕೇಶ್) ಇದು ಲಂಕೇಶರ ವಿಚಾರ ವಿಮರ್ಶೆಗಳ ಸಂಕಲನ. ಸೃಜನಶೀಲ ಬರಹಗಾರ ತನ್ನ ಸುತ್ತಣ ಬದುಕನ್ನು ಹೇಗೆ ಕಾಣುತ್ತಾನೆ ಎಂಬುದಕ್ಕೆ ಇಲ್ಲಿನ ಬರಹ ಮಹತ್ವದ ದಾಖಲೆಗಳಾಗಬಲ್ಲುದು. ಸಾಹಿತ್ಯ, ನಾಟಕ, ಕಾನೂನು, ಮತ್ತು ಸಾಹಿತ್ಯಕ ವಾದ ವಿವಾದಗಳನ್ನು ಕುರಿತ ಇಲ್ಲಿನ ಬರಹಗಳಲ್ಲಿ ಸಮಕಾಲೀನ ಸಾಹಿತ್ಯದ ಕೆಲವು ಜ್ವಲಂತ ಸಮಸ್ಯೆಗಳನ್ನು ಅವರು ಚರ್ಚಿಸುತ್ತಾರೆ. 'ನಾನೇಕೆ ಬರೆಯುತ್ತೇನೆ' ಎಂಬ ಲೇಖನ ಜೀವಪರವಾದ ಧೋರಣೆಗಳನ್ನು ಎತ್ತಿ ಹಿಡಿಯುವ ಲೇಖಕನ ಆಲೋಚನೆಯ ಗತಿಯನ್ನು ಪರಿಚಯ ಮಾಡಿಕೊಡುತ್ತದೆ. ಆತ್ಮೀಯ ಧಾಟಿ, ಪ್ರೀತಿಯ ಬಗೆಗೆ ವ್ಯಾಖ್ಯೆ—ಈ ಲೇಖನದ ಮುಖ್ಯ ಅಂಶವಾಗಿದೆ. ಸಾರ್ವಜನಿಕ ಸಮಸ್ಯೆಗಳು, ಕಾನೂನು, ಸಮಕಾಲೀನ ರಂಗಭೂಮಿ—ಇವುಗಳ ನಡೆಸಿರುವ ಚರ್ಚೆ ಪುಸ್ತಕದ ಮಹತ್ವದ ಭಾಗವಾಗಿದೆ.

'ಅಡಿಗರ' ಮನವಿ'ಗೊಂದು ಉತ್ತರ' ಎಂಬ ಬರಹದಲ್ಲಿ ಆತ್ಮಸಾಕ್ಷಿಯ ಬಗೆಗೆ ಲಂಕೇಶರು ನಡೆಸಿರುವ ಚರ್ಚೆ ಗಮನೀಯವಾದದ್ದಾಗಿದೆ. ಈ ದಾಖಲೆ ನೋವನ್ನು ಅಕೆಡೆಮಿಕ್ ಆಗಿ ನೋಡುವುದರ ಮೂಲಕ ಅಕ್ಷರ ವ್ಯಭಿಚಾರ ಮತ್ತು ಅದರಿಂದ ಉಂಟಾಗುವ ಭಯಂಕರ ಪರಿಣಾಮದ ಸ್ವರೂಪವನ್ನು ಅತ್ಯಂತ ತೀಕ್ಷ್ಣವಾಗಿ ಪ್ರತಿಭಟಿಸುತ್ತದೆ. ಬದುಕಿನ ಸೆಲೆಯಿಂದ ಹೊರಟ ನೈತಿಕತೆಗೆ ಮಾತ್ರ ಜೀವವಿರುತ್ತದೆ ಮಿಕ್ಕದ್ದು ನಮ್ಮ ಸುರಕ್ಷಿತೆಗಾಗಿ ಕಟ್ಟಿಕೊಂಡ ಕೋಟೆ ಮಾತ್ರ ಆಗುತ್ತದೆ ಎನ್ನುವ ವಿವರಣೆಯನ್ನು ಕೃತಿಯ ಬಹುಪಾಲು ಲೇಖನಗಳು ಪ್ರತಿಪಾದಿಸುತ್ತದೆ ಆಂತರಿಕ ಮತ್ತು ಸಾಮಾಜಿಕ ಒತ್ತಡಗಳನ್ನು ತೀಕ್ಷ್ಣವಾಗಿ ಅಭಿವ್ಯಕ್ತಿಸುವ ಲಂಕೇಶರ ಆಲೋಚನೆಗಳು ಜಡ್ಡುಹಿಡಿದ 'ಮಾಮೂಲಿ' ಸ್ಥಿತಿಯನ್ನು ವಿರೋಧಿಸುವುದರ ಜೊತೆಗೆ ಜೀವಂತಿಕೆಯ ನೆಲೆಗಳನ್ನು ಅನ್ವೇಷಿಸುವ ಪ್ರಯತ್ನವೂ ಆಗಿರುವುದರಿಂದ ಈ ಕೃತಿ ಪ್ರಸ್ತುತ ಸಂದರ್ಭದ ಮಹತ್ತ್ವದ ಪುರಾವೆಯಾಗಿದೆ.

ಕವಿ-ಕಾವ್ಯ-ದರ್ಶನ (ಪಂಚಾಕ್ಷರಿ ಹಿರೇಮಠ) ಇದರಲ್ಲಿನ ಲೇಖನಗಳು ವಿಮರ್ಶೆಯೆನಿಸಿ ಕೊಳ್ಳುವುದಿಲ್ಲ. ಅದಕ್ಕಿಂತ ಬೇರೆಯಾದದ್ದು. ಲೇಖಕರು ಇದನ್ನು ಸಾಹಿತ್ಯಿಕ ಪ್ರಬಂಧಗಳು ಎಂದು ಕರೆದಿದ್ದಾರೆ. ಕಾಳಿದಾಸ, ಶೂದ್ರಕ, ಮಲ್ಲೇಶ್ವರಿ, ಉರ್ದುಕಾವ್ಯ, ಮಹಮದ್ ಇಕ್ಬಾಲ್—ಈ ಮೊದಲಾದ ಕೃತಿಗಳಲ್ಲಿ ಕೆಲವು ಸನ್ನಿವೇಶಗಳ ನಿರೂಪಣೆಯೇ ಈ ಪ್ರಬಂಧಗಳ ಗುರಿ. ಲೇಖಕರ ಭಾಷಾ ಬಳಕೆ ಸರಳವಾಗಿದೆ, ನೇರವಾಗಿದೆ. ಆದರೆ ಈ ಕೃತಿಗಳಲ್ಲಿ ವಿಶ್ಲೇಷಣೆ

ಕ್ರಮದಲ್ಲಿ ಭಾವುಕವಾದ ಮನಸ್ಸು ಕೆಲಸಮಾಡುತ್ತಿದೆ ಎನಿಸುತ್ತದೆ. ವಾತಾವರಣದ ನಿರ್ಮಾಣದ ಹಿನ್ನೆಲೆಯಲ್ಲಿ ಇಂಥ ಭಾವ ಪ್ರಬಂಧಗಳ ಸಾರ್ಥಕ್ಯ ಇದ್ದಂತೆ ತೋರುತ್ತದೆ.

ಭಾವ ಬಿಂದು (ಮಹೇಶ್ವರಪ್ಪ) ಕೆಲವು ಸಂಘ ಸಂಸ್ಥೆಗಳ ಆಶ್ರಯದಲ್ಲಿ ಮಾಡಿದ ಭಾಷಣಗಳು, ವಿದ್ಯಾರ್ಥಿಯಾಗಿದ್ದಾಗ ಸೆಮಿನಾರಿನಲ್ಲಿ ಮಂಡಿಸಿದ ಲೇಖನಗಳಿಂದ ಕೂಡಿದ ಈ ಪುಸ್ತಕದಲ್ಲಿ ಎಂಟು ಲೇಖನಗಳಿವೆ. 'ಕಾಳಿದಾಸನು ಚಿತ್ರಿಸಿದ ಶಕುಂತಳೆ' ಎಂಬ ಲೇಖನದಲ್ಲಿ ನಾಟಕೀಯ ಸಂದರ್ಭದಿಂದ ಹೊರತಾದ ಶಕುಂತಳೆಯ ಪಾತ್ರವನ್ನು ಕಥೆಯ ರೂಪದಲ್ಲಿ ಹೇಳುತ್ತಾರೆ. 'ಕುಮಾರರಾಮನ ಸಾಂಗತ್ಯದಲ್ಲಿ ಯುದ್ಧವರ್ಣನೆಯ ವೈಶಿಷ್ಟ್ಯ' ಲೇಖನವು ಕೂಡ ಯಾವ ಉದ್ದೇಶವನ್ನೂ ಪೂರೈಸುವುದಿಲ್ಲ. ಇದುವರೆವಿಗೆ ವ್ಯಕ್ತವಾಗಿರುವ ವಿಚಾರಗಳನ್ನೇ ಸಪ್ಪೆಯಾಗಿ ಪುನರಪಿ ಪ್ರತಿಪಾದಿಸುವ ಇಲ್ಲಿನ ಲೇಖನಗಳಲ್ಲಿ ಯಾವ ವಿಮರ್ಶನ ಸ್ವರೂಪವನ್ನೂ ಕಾಣಲಾಗುವುದಿಲ್ಲ.

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ - (ಭಾಗ-೨) (ಪ್ರಧಾನ ಸಂಪಾದಕರು: ಡಾ. ಜಿ.ಎಸ್. ಶಿವರುದ್ರಪ್ಪ) ಈ ಸಂಪುಟ ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಎರಡನೆಯ ಭಾಗ. ಕ್ರಿ. ಶ. 850 ರಿಂದ ಕ್ರಿ. ಶ. ೧೧೫೦ ರ ತನಕದ ಕನ್ನಡ ಸಾಹಿತ್ಯದ ಚಾರಿತ್ರಿಕ ವಿಶ್ಲೇಷಣೆಯನ್ನು ಇದು ಒಳಗೊಂಡಿದೆ. ರಾಜಕೀಯ ಚರಿತ್ರೆ, ಧಾರ್ಮಿಕ, ಸಾಮಾಜಿಕ ಮತ್ತು ಭಾಷೆಯ ಹಿನ್ನೆಲೆಯನ್ನು ಸಾಹಿತ್ಯ ಸಮೀಕ್ಷೆಗೆ ಪೂರ್ವಭಾವಿಯಾಗಿ ಸಂಯೋಜಿಸಲಾಗಿದೆ. ಸಾಹಿತ್ಯ ಚರಿತ್ರೆಯ ರಚನೆಯ ಸಮಸ್ಯೆಗಳು ನಮ್ಮ ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಏರ್ಪಡುವ ಸಮಸ್ಯೆಗಳ ಒಂದು ಭಾಗ. ಸಾಹಿತ್ಯ ಚರಿತ್ರೆಗಳು ನಮ್ಮ ಸಾಂಸ್ಕೃತಿಕ ಚರಿತ್ರೆಯ ಪುನಾರಚನೆಗೆ ಮಹತ್ವದ ಸಾಮಗ್ರಿಗಳಾಗಬೇಕಾದ ಅಗತ್ಯವಂತೂ ಕನ್ನಡದ ಸಂದರ್ಭದಲ್ಲಿ ಮುಖ್ಯವಾದದ್ದಾಗಿದೆ. ಈವರೆವಿಗೆ ಚರಿತ್ರೆಯ ಸಾಂಪ್ರದಾಯಿಕ ವಿಭಾಗ ಕ್ರಮಗಳು ಕೃತಕವಾದದ್ದಾಗಿದ್ದರಿಂದ ಅರ್ಥಪೂರ್ಣವೆನಿಸಬಹುದಾದ ಸಾಹಿತ್ಯ ಚರಿತ್ರೆಗಳು ಸೃಷ್ಟಿಯಾಗಲೇ ಇಲ್ಲ. ಬಹುತೇಕ ಸಾಹಿತ್ಯ ಚರಿತ್ರೆಗಳು ಪಠ್ಯ ಪುಸ್ತಕದ ಮಿತಿಯಲ್ಲಿ ಅಥವಾ ಅಂಥ ಉದ್ದೇಶಗಳಿಗಷ್ಟೇ ಸೀಮಿತವಾದದ್ದಾಗಿತ್ತು. ಹೀಗಾಗಿ ಚರಿತ್ರೆಯ ಅಧ್ಯಯನ ಒಂದು ಇಕ್ಕಟ್ಟಿನ ಕೊರಕಲಿಗೆ ಬಿದ್ದು ಅಸ್ತವ್ಯಸ್ತಗೊಂಡಿದೆ. ಸಾಹಿತ್ಯದ ದಾಖಲೆಗಳಿಂದ ಸಾಂಸ್ಕೃತಿಕ ಚರಿತ್ರೆಯನ್ನು ಪುನಾರಚನೆ ಮಾಡುವುದು ಸುಲಭದ ಕಾರ್ಯವಲ್ಲ. ಅಂಥ ಪ್ರಯತ್ನದತ್ತ ಹೊರಡುವುದು ಸ್ವಾಗತಾರ್ಹ. ಇಂಥ ಪ್ರಯತ್ನವನ್ನು 'ಕನ್ನಡ ನಾಡಿನ ಲೇಖಕರ ಸಹಕಾರ'ದಿಂದ ಸಾಧಿಸಲು ಹೊರಟಿರುವ ಪ್ರಯತ್ನ ಅನೇಕ ದೃಷ್ಟಿಗಳಿಂದ ಗಮನಾರ್ಹವೂ ಆಗಿದೆ. ಹೀಗೆ ಅನೇಕ ಲೇಖಕರು (ಅದರಲ್ಲೂ ಆಯಾ ಶಿಸ್ತುಗಳಲ್ಲಿ ವಿಶೇಷ ಅಭ್ಯಾಸ ಮಾಡಿದವರು) ಈ ಸಂಪುಟದ ರಚನೆಯಲ್ಲಿ ಪಾಲುಗೊಂಡಿದ್ದಾರೆ.

ಪ್ರಸ್ತುತ ಸಂಪುಟ ಕನ್ನಡ ನಾಡಿನ ಪ್ರಮುಖ ಸಾಂಸ್ಕೃತಿಕ ಘಟ್ಟಗಳಲ್ಲಿ ಒಂದಾದ ಹತ್ತನೆಯ ಶತಮಾನ ಮತ್ತು ಅದಕ್ಕಿಂತ ಸ್ವಲ್ಪ ಹಿಂದಿನ ಕಾಲವನ್ನು ವಿಶ್ಲೇಷಣೆಗೆ ಗುರಿಪಡಿಸಿದೆ. ಮೂವತ್ತೇಳು ಲೇಖಕರು ವಿವಿಧ ವಿಭಾಗಗಳನ್ನು ಕುರಿತು ಚಾರಿತ್ರಿಕ ಅಧ್ಯಯನವನ್ನು ನಡೆಸಿದ್ದಾರೆ. ಸಾಮಗ್ರಿಯ ದೃಷ್ಟಿಯಿಂದ ಮತ್ತು ಅವುಗಳ ಜೋಡಣಾಕ್ರಮಕ್ಕೆ ವಿಶೇಷ ಒತ್ತು ಕೊಟ್ಟಿರುವ ಲೇಖನಗಳಿಂದ ಹಿಡಿದು–ಸಾಂಸ್ಕೃತಿಕ ಅಧ್ಯಯನದ ಗತಿಯನ್ನು ಅನುಲಕ್ಷಿಸಿರುವ ಲೇಖನಗಳ ತನಕ ಇಲ್ಲಿನ ಹರವು ಬೆಳೆದಿದೆ. ಆ ಲೇಖನಗಳೆಲ್ಲದರ ಮೌಲಿಕ ವಿಶ್ಲೇಷಣೆ ಇಲ್ಲಿ ಸಾಧ್ಯವಿಲ್ಲ.

ಪ್ರಧಾನ ಸಂಪಾದಕರು (ಡಾ. ಜಿ. ಎಸ್. ಶಿವರುದ್ರಪ್ಪ) ಈ ಚರಿತ್ರೆಯ ನಿರ್ಮಿತಿಯ ಹಿನ್ನೆಲೆಗೆ ಇರುವ ನಿಲುವುಗಳನ್ನು 'ಮುನ್ನುಡಿ' ಯಲ್ಲಿ ನಿರೂಪಿಸಿದ್ದಾರೆ. "ಸಾಹಿತ್ಯವನ್ನು ತನಗೆ ತಾನೇ ಪ್ರತ್ಯೇಕವಾದ ಘಟಕವೆಂಬಂತೆ ಭಾವಿಸದೆ, ಅದು ಯಾವ ಸಾಮಾಜಿಕ ಪರಿಸ್ಥಿತಿಯ ಒತ್ತಡದಿಂದ ಸಂಭವಿಸಿತೋ ಆ ಸಮಾಜದ ಸಮಸ್ತ ಆಯಾಮಗಳಿಂದ ಸಾಹಿತ್ಯವನ್ನು ಅಧ್ಯಯನ

ಮಾಡಿದಾಗಲೇ ಅದು ನಿಜವಾದ ಸಮಗ್ರತೆಯನ್ನು ಪಡೆಯುತ್ತದೆ' ಎಂಬ ಮಾತು ಇಲ್ಲಿ ಗಮನಾರ್ಹ. ಹೀಗೆ ಸಮಗ್ರತೆಯನ್ನು ಸಾಧಿಸುವ ಉದ್ದೇಶದಿಂದ ರೂಪುಗೊಂಡಿರುವ ಈ ಚರಿತ್ರೆ ಪುನರ್‌ಮೌಲ್ಯದ ಅನೇಕ ಸಮಸ್ಯೆಗಳನ್ನು ಇಲ್ಲಿನ ಹಲವಾರು ಬರವಣಿಗೆಗಳು ಎದುರಿಸಿವೆ.

'ವಿಕ್ರಮಾರ್ಜುನ ವಿಜಯ-ಒಂದು ಸಮೀಕ್ಷೆ' (ಡಾ॥ ಜಿ. ಎಸ್. ಎಸ್.) 'ಆದಿಪುರಾಣದ ಕಥಾವಸ್ತು' (ಎಂ. ವಿ. ಶ್ರೀನಿವಾಸಮೂರ್ತಿ) 'ಆದಿಪುರಾಣದ ಪಾತ್ರಗಳು' (ಕ. ವೆಂ. ರಾಜಗೋಪಾಲ), 'ಆದಿಪುರಾಣದಲ್ಲಿ ಧರ್ಮ ಮತ್ತು ಕಾವ್ಯಧರ್ಮ' (ಕಾಳೇಗೌಡ ನಾಗವಾರ) 'ಪಂಪನ ಶೈಲಿ' (ಕೆ. ವಿ. ನಾರಾಯಣ) 'ಗದಾಯುದ್ಧದ ಪಾತ್ರಗಳು' (ಕೆ. ಎಲ್. ಗೋಪಾಲಕೃಷ್ಣಯ್ಯ) 'ದುರ್ಗಸಿಂಹನ ಪಂಚತಂತ್ರ' (ಕೆ. ಮರುಳಸಿದ್ದಪ್ಪ)—ಇವುಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳನ್ನು ಗಮನಕ್ಕೆ ತಂದುಕೊಂಡ ಬರಹಗಳಾಗಿವೆ.

'ಈ ಯೋಜನೆ ಕೇವಲ ಅಧ್ಯಯನ ಕೇಂದ್ರದ್ದು ಮಾತ್ರವಲ್ಲ ; ಇಡೀ ಕರ್ನಾಟಕದ್ದು' ಎಂಬ ದೃಷ್ಟಿ ಸಾಹಿತ್ಯಚರಿತ್ರೆಯ ನಿರ್ಮಿತಿಯ ಅರ್ಥಪೂರ್ಣತೆಯ ಹಿನ್ನೆಲೆಯಲ್ಲಿ ಗಮನಿಸಬೇಕು. ನಾಡಿನ ಎಲ್ಲ ಭಾಗಗಳ ವಿದ್ವಾಂಸರ ದೃಷ್ಟಿ-ಧೋರಣೆಗಳು ಇಂಥ ದೊಡ್ಡ ಯೋಜನೆಗೆ ಸಹಾಯಕವಾಗುತ್ತಿದೆಯೆಂಬುದು ಗಮನೀಯ ವಿಚಾರ. ಸಾಂಸ್ಕೃತಿಕವಾಗಿ ಮಹತ್ತ್ವದ್ದೆನಿಸುವ ಈ ಯೋಜನೆ ಸಾಹಿತ್ಯ ಚರಿತ್ರೆಯ ಮೂಲಭೂತ ಸಮಸ್ಯೆಗಳನ್ನು ಚರ್ಚಿಸಲು ತಕ್ಕ ಆವರಣವನ್ನು ಕಲ್ಪಿಸಿಕೊಟ್ಟಿದೆ. ಮೌಲಿಕ ಚರ್ಚೆಗೆ ತಕ್ಕ ಬುನಾದಿಯನ್ನು ಹಾಕಿಕೊಡುವುದರ ಮೂಲಕ ನಮ್ಮ ಸಾಹಿತ್ಯಕ ಚರ್ಚೆ ಹೆಚ್ಚು 'ಸಮಗ್ರ' ಗೊಳ್ಳುವುದಕ್ಕೆ ಈ ಪ್ರಯತ್ನ ಕಾರಣವಾಗಿದೆ.

ಕಾರ್ಯನಿರ್ವಾಹಕ ಸಂಪಾದಕರು (ರಂ. ಶ್ರೀ. ಮುಗಳಿ) ಅಭ್ಯಾಸದ ದೃಷ್ಟಿಯಿಂದ ಮಾಡಿಕೊಂಡಿರುವ ವಿಭಾಗ ಕ್ರಮದ ಅನಿವಾರ್ಯತೆಯನ್ನು ಎತ್ತಿಹಿಡಿದಿದ್ದಾರೆ. (ಪು. ೩೫೦) 'ಕ್ಷಾತ್ರಯುಗ' ವೆಂದು ನಿರ್ದೇಶಿಸಲಾಗಿರುವ ಈ ಯುಗದಲ್ಲಿ 'ಧಾರ್ಮಿಕ ಪ್ರಜ್ಞೆ'ಯೂ ಜಾಗೃತವಾಗಿತ್ತು ಎಂದು ಹೇಳಲಾಗಿದೆ. ಸಾಹಿತ್ಯ ಕೃತಿಗಳ ಮೇಲುಮೈಯನಷ್ಟೇ ಗಮನಿಸಿದರೆ ಸಿಕ್ಕಬಹುದಾದ ವಿಶ್ಲೇಷಣೆಯನ್ನು ಇಂಥಲ್ಲಿ ಕಾಣಬಹುದು. ಕೃತಿಯ ಅಂತರ್ಯದಲ್ಲಿ ಏರ್ಪಟ್ಟಿರುವ ಕ್ರಿಯಾ ಸಂಬಂಧಗಳ ಮೂಲಕ ಯುಗದ ರಾಜಕೀಯ ಸಂದರ್ಭ, ಆರ್ಥಿಕ ಸಂದರ್ಭ, ಸಾಮಾಜಿಕ ಸಂದರ್ಭ ಮತ್ತು ತಾತ್ತ್ವಿಕ ಸಂದರ್ಭಗಳನ್ನು ಗುರುತಿಸಿಕೊಳ್ಳುವುದು ಮುಖ್ಯವಾದದ್ದಾಗುತ್ತದೆ. ಒಂದು ಕೃತಿ-ಈ ಎಲ್ಲ ಸಂದರ್ಭಗಳಲ್ಲಿ ಏರ್ಪಡುವ ಪರಿಸರಾತ್ಮಕ ಪ್ರಕ್ರಿಯೆಯ ದಾಖಲೆಯಾಗುವುದರಿಂದ ಇಂಥ ವಿಶ್ಲೇಷಣೆ ಅಗತ್ಯವಾಗುತ್ತವೆ ಮತ್ತು ವೈಜ್ಞಾನಿಕವಾದದ್ದಾಗುತ್ತದೆ. ಪಾತ್ರಗಳ-ಸನ್ನಿವೇಶಗಳ ಸೀಮಿತ ವ್ಯಾಖ್ಯಾನದ ಮೂಲಕ 'ಸೌಂದರ್ಯನಿಷ್ಠ' ನಿಲುವುಗಳಿಗೆ ತಲುಪಿರುವ ವಿವರಣೆ ಕಾರ್ಯನಿರ್ವಾಹಕ ಸಂಪಾದಕರ ಒಟ್ಟಾರೆ ಧೋರಣೆಯಾಗಿದೆ. ಹೀಗಾಗಿ...ಕಾರ್ಯನಿರ್ವಾಹಕ ಸಂಪಾದಕರ ನಿಲುವುಗಳು ಸಮರ್ಥ ಚಾರಿತ್ರಿಕ ಧೋರಣೆಗಳನ್ನು ಹೊಂದದ, ಸಮಸ್ಯೆಗಳನ್ನು ಸರಳೀಕರಿಸಿಕೊಂಡಿರುವ ವಿಧಾನಗಳಿಂದಾಗಿ ಕೃತಿಯಲ್ಲಿನ ಲೇಖನಗಳಿಗೂ ಅವರ ಧೋರಣೆಗೂ ನಡುವೆ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. 'ಹೆಚ್ಚಿನ ಸಾಮಗ್ರಿ ದೊರೆಯುವವರೆಗೆ ಕಂತಿಯ ಬಗೆಗೆ ಯಾವ ತೀರ್ಮಾನವನ್ನೂ ಮಾಡುವುದು ಸಾಧ್ಯವಿಲ್ಲ' ಎಂದು 'ಸಮಾರೋಪ'ದ ಕೊನೆಯಲ್ಲಿ ಹೇಳುತ್ತಾರೆ. ಸಾಮಗ್ರಿ ದೊರೆಯುವುದು ಎಂದರೆ ಅರ್ಥವೇನು ? ಹೀಗೆ ದೊರೆಯದ ಸಂದರ್ಭದಲ್ಲಿ...ಸಾಹಿತ್ಯ ಚರಿತ್ರಕಾರ ದೊರೆತಿರುವ ದಾಖಲೆಗಳನ್ನು ಹೇಗೆ ಪರಿಶೀಲಿಸಬೇಕು ? ಕವಿಯೊಬ್ಬನಿಗೆ ಕವಯಿತ್ರಿ ಕೊಟ್ಟ ಉತ್ತರಗಳೆನ್ನಲಾದ ಇಂಥ ಕೃತಿ ರಚನೆಗೆ ಕಾರಣಗಳೇನು ? ಇಂಥ ಕೃತಿಯೊಂದನ್ನು ಸಾಹಿತ್ಯ ಚರಿತ್ರೆ ತನ್ನ ಕಕ್ಷೆಗೆ ಹೇಗೆ ತೆಗೆದುಕೊಳ್ಳಬೇಕು ? ಇಂಥ ಪ್ರಶ್ನೆಗಳು ಮುಂದಾಗುತ್ತವೆ. ಆಕರ ವಿಜ್ಞಾನದ ಅನೇಕ ಸಮಸ್ಯೆಗಳು ಹುಟ್ಟುವುದು ಇಂಥ ಸಂದರ್ಭಗಳಲ್ಲೇ. 'ಸಮಾರೋಪ'ದ ಆರಂಭದಲ್ಲಿ ಆಕರಗಳು ಮತ್ತು ಸಾಮಗ್ರಿ ದೊರೆಯಬೇಕೆಂಬ ಕಳಕಳಿಯನ್ನು ಕಾರ್ಯನಿರ್ವಾಹಕ ಸಂಪಾದಕರು ವ್ಯಕ್ತಪಡಿಸಿ

ದ್ದಾರೆ. ಕೊನೆಯಲ್ಲಿ ದೊರೆತಿರುವ ದಾಖಲೆಯನ್ನು ಪರಿಶೀಲಿಸಲು ಮತ್ತಷ್ಟು ದಾಖಲೆ ದೊರೆಯ ಬೇಕೆನ್ನುತ್ತಾರೆ. ಇದು ದಾಖಲೆಗಳ ಬಗೆಗೆ ಸಾಮಗ್ರಿಯ ಬಗೆಗೆ ಡಾ. ಮುಗಳಿಯವರು ಪರಸ್ಪರ ವಿರುದ್ಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ ಎನಿಸುವುದಕ್ಕೆ ಎಲ್ಲ ಅವಕಾಶಗಳೂ ಇದೆ. ಚರಿತ್ರೆಯ ಪುನಾರಚನೆಯ ಸಮಸ್ಯೆಗಳ ಗುರುತರ ಹೊಣೆಗಾರಿಕೆಯನ್ನು ಅನುಲಕ್ಷಿಸಿಯೇ ಇಂಥ ಚರ್ಚೆಯನ್ನು ಬೆಳೆಸುವುದು ಮುಖ್ಯವಾಗಿದೆ. ಸಾಹಿತ್ಯ ಚರಿತ್ರೆ - ಸಾಂಸ್ಕೃತಿಕ ಚರಿತ್ರೆಯ ಭಾಗ ಎನ್ನುವುದನ್ನು ಗಮನಿಸಿಕೊಂಡರೆ–ನಮ್ಮ ಸಂದರ್ಭದ ಪುನಾರಚನೆಗೆ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಮಹತ್ವದ ಕೊಡುಗೆಯಾಗಿ ನಿಲ್ಲುತ್ತದೆ.

ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯಚರಿತ್ರೆ
(ಪ್ರಧಾನ ಸಂ : ಹಾ. ಮಾ. ನಾಯಕ)

ಜಾಗತಿಕ ಮತ್ತು ಭಾರತೀಯ ಸಾಹಿತ್ಯಗಳ ಹಿನ್ನೆಲೆಯಲ್ಲಿ ರಚಿತವಾಗಿರುವ ಕನ್ನಡ ಸಾಹಿತ್ಯ ಚರಿತ್ರೆ ಇದು. ಜಾಗತಿಕ ಮತ್ತು ಭಾರತೀಯ ಸಂದರ್ಭಗಳ ವಿಸ್ತಾರವಾದ ಲೇಖನಗಳೇನೋ ಈ ಕೃತಿಯಲ್ಲಿದೆ. ಆದರೆ ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದ ಜೊತೆಗೆ ಸಂಬಂಧೀ ಸ್ವರೂಪವನ್ನು ಪಡೆದುಕೊಳ್ಳಲು ಸಾಧ್ಯವಾಗದೆ ಇಂಥ ವಿಭಾಗಕ್ರಮಕ್ಕೆ ಸಾವಯುವ ಸಂಬಂಧ ಏರ್ಪಡದೇ ಹೋಗಿದೆ. ಪ್ರಾದೇಶಿಕ ಸಂಸ್ಕೃತಿಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ದಾಖಲೆಗಳನ್ನು ಗುರುತಿಸು ವುದರಿಂದ ಸಾಂಸ್ಕೃತಿಕ ಅಧ್ಯಯನಕ್ಕೆ ವಿಶೇಷ ಅರ್ಥ ಒದಗಿ ಬಂದೀತು. ಪ್ರಾದೇಶಿಕ ಭಾಷೆ-ಸಂಸ್ಕೃತಿ–ಜೀವನ ವಿಧಾನಗಳ ಹಿನ್ನೆಲೆಯಲ್ಲಿ ನಮ್ಮ ಸಾಂಸ್ಕೃತಿಕ ವಿಶ್ಲೇಷಣೆ ನಡೆಯಬೇಕಾದದ್ದು ವೈಜ್ಞಾನಿಕವಾಗಿ ಅರ್ಥಪೂರ್ಣವೆನಿಸುತ್ತದೆ. ಏಕೆಂದರೆ ಜಾಗತಿಕ, ಭಾರತೀಯ ಎಂಬಂಥ ದೃಷ್ಟಿಯೇ ತೀರಾ ವ್ಯಾಪಕವಾದದ್ದು. ಇಂಥ ವ್ಯಾಪಕ ನಿಲುವುಗಳ ಅಧ್ಯಯನ ಅನಪೇಕ್ಷಿತವೆಂದೇನೂ ಅಲ್ಲ. ಆದರೆ ಇಂಥ ನಿಲುವುಗಳು ಕನ್ನಡ ಸಾಹಿತ್ಯದ ನಿಲುವುಗಳ ಮೇಲೇನಾದರೂ ಒತ್ತಡಗಳನ್ನು ತಂದಿದ್ದರೆ ಅಂಥ ಅಧ್ಯಯನ ನಡೆಯಲೇಬೇಕು. ಸಂಸ್ಕೃತ-ಪ್ರಾಕೃತ ಪ್ರಭಾವಗಳು ಕೇವಲ ಪ್ರಭಾವಗಳಾಗಿ ಬಂದಿದೆಯೇ ? ಅದು ಭಾಷಿಕ ಸ್ವರೂಪದ್ದೇ ? ಸಾಂಸ್ಕೃತಿಕ ಸ್ವರೂಪದ್ದೇ ? 'ಉಪರಾಷ್ಟ್ರೀಯತೆ' ಮತ್ತು ಪ್ರಾದೇಶಿಕ ಸತ್ತ್ವಗಳ ಹಿನ್ನೆಲೆಯಲ್ಲಿ ಈ ಪ್ರಭಾವಗಳ ಸಮಸ್ಯೆ ಯೇನು ? ಇಂಥ ಅನೇಕ ಚರ್ಚೆಗಳು ಏರ್ಪಡುತ್ತವೆ. ಇಂಥ ಚರ್ಚೆಗೆ ಈ ಸಂಪುಟದ ಸಂದರ್ಭ ದಲ್ಲಿ ಏರ್ಪಟ್ಟಿರುವ ನಿಲುವುಗಳ ಬಗೆಗೆ ಸಂಪಾದಕರು (ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ) ಯಾವ ಆಲೋಚನೆಯನ್ನೂ ರೂಪಿಸಿಲ್ಲ. ಸಂಪುಟ ವಿಸ್ತಾರಗೊಂಡಿರುವುದಕ್ಕೆ ದೊರಕುವ ಕಾರಣವನ್ನು ಬಿಟ್ಟರೆ 'ಸಾಹಿತ್ಯ ಚರಿತ್ರೆ'ಯ ನೆಲೆಗಟ್ಟನ್ನು ಮತ್ತು ಅದರ ರಚನಾ ವಿನ್ಯಾಸಕ್ಕೆ ತಾವು ಸಿದ್ಧಗೊಳಿಸಿ ಕೊಂಡಿರುವ ನೆಲೆಯನ್ನು ತಿಳಿಯಲು ಸಾಧ್ಯವಿಲ್ಲವಾಗಿದೆ. ಕೃತಿಯಲ್ಲಿನ ಉಲ್ಲೇಖಗಳ ಬಗ್ಗೆ, ಅವುಗಳ ಜೋಡಣಾಕ್ರಮದ ಬಗ್ಗೆ, ವಾಕ್ಯವೇಷ್ಟನಗಳ ಬಗೆಗೆ ಹೇಳುವ ಮಾತಿಗಷ್ಟೇ ಸಂಪಾದಕರು ಮಾತುಗಳು ಸೀಮಿತವಾಗಿದೆ.

ಸಾಂಸ್ಕೃತಿಕ ಚರಿತ್ರೆಯ ಪುನಾರಚನೆಗೆ ಸಾಹಿತ್ಯಕ ದಾಖಲೆಗಳು ಎಷ್ಟರಮಟ್ಟಿಗೆ ಸಹಾಯಕ ವಾಗಬಲ್ಲುವೆಂಬ ಮೂಲಭೂತ ನಿಲುವುಗಳ ಮೂಲಕ ಮಾತ್ರ ಸಾಹಿತ್ಯ ಚರಿತ್ರೆಯ ವೈಜ್ಞಾನಿಕ ಅಧ್ಯಯನ ಸಾಧ್ಯವಾಗುತ್ತದೆ.

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಸಂಪಾದಕರು ಡಾ॥ ಜಿ. ಎಸ್. ಶಿವರುದ್ರಪ್ಪ ಮತ್ತು
ಡಾ॥ ಎಂ. ಚಿದಾನಂದ ಮೂರ್ತಿ

'ವಿಶ್ವವಿದ್ಯಾಲಯ ಉನ್ನತ ಮಟ್ಟದ ಶಿಕ್ಷಣ ಕೇಂದ್ರವಾದರೂ, ಅದು ತನ್ನ ಸುತ್ತಣ ಜನ ಸಾಮಾನ್ಯಕ್ಕೂ, ಪರಿಣತರ ಸಹಕಾರದಿಂದ ತಿಳಿವನ್ನು ವಿಸ್ತರಿಸುವ ಮತ್ತು ಒಯ್ದು ಮುಟ್ಟಿಸುವ

ಜವಾಬ್ದಾರಿಯಿಂದ ಬದ್ಧವಾಗಿದೆ' ಎಂದು ಈ ಸಂಪುಟಗಳಿಗೆ ಮುನ್ನುಡಿಯನ್ನು ಬರೆಯುತ್ತಾ ಉಪ ಕುಲಪತಿಗಳು ಹೇಳಿದ್ದಾರೆ. ಸಂಪುಟಗಳ ಸಂಪಾದಕರ ಮಾತುಗಳ ಮೂಲಕ ಈ ಸಂಪುಟದ ಉದ್ದೇಶಗಳನ್ನು ತಿಳಿಯಬಹುದಾಗಿದೆ. 'ಒಂದು ಸಾವಿರ ವರ್ಷಕ್ಕೂ ಮೀರಿದ ಕನ್ನಡ ಸಾಹಿತ್ಯದ ಇತಿಹಾಸವನ್ನು ಸರಳವಾಗಿ, ನಿರ್ದಿಷ್ಟವಾಗಿ, ಮತ್ತು ಆಕರ್ಷಕವಾಗಿ ಸಾಮಾನ್ಯರಿಗೆ ಪರಿಚಯ ಮಾಡಿಕೊಡಬೇಕೆಂಬುದೇ ಈ ಸಂಪುಟಗಳ ಉದ್ದೇಶ' ಎಂದು ಹೇಳಿದ್ದಾರೆ. ಈ ಉದ್ದೇಶ ಈ ಸಂಪುಟಗಳ ನಿರ್ಮಿತಿಯಲ್ಲಿ ಬಹುಮಟ್ಟಿಗೆ ಸಫಲವಾಗಿದೆ ಎನ್ನಬಹುದು. 'ಕನ್ನಡ ಕವಿ-ಕೃತಿಗಳನ್ನು ಮೂಲದಲ್ಲೇ ಓದಬೇಕೆನ್ನುವ ಒಂದು ರುಚಿ'ಯನ್ನು ಹುಟ್ಟಿಸಬೇಕೆಂಬ ಉದ್ದೇಶ ಇದರ ಹಿನ್ನೆಲೆಗೆ ಇದೆ. ಸಾಹಿತ್ಯದ ಅಭ್ಯಾಸಿಗಳಿಗೆ ಉಪಯುಕ್ತವಾಗಿರುವ ಈ ಸಂಪುಟಗಳು ಗಮನಾರ್ಹ ಪ್ರಕಟನೆ ಗಳಾಗಿವೆ.

ಮೊದಲ ಸಂಪುಟಕ್ಕೆ ಅನುಬಂಧವಾಗಿ ಶ್ರೀ ಎಸ್. ಶಿವಣ್ಣ ಅವರು ಸಿದ್ಧಪಡಿಸಿರುವ 'ಗ್ರಂಥ ಸಂಖ್ಯಾವಿವರ ಸೂಚಿ' ಮತ್ತು ಕೆಲವು ಸಂಪುಟಗಳಲ್ಲಿರುವ 'ಗ್ರಂಥಸೂಚಿ' ಅಭ್ಯಾಸಿಗಳಿಗೆ ಉಪ ಯುಕ್ತವಾದದ್ದಾಗಿದೆ.

ಕನ್ನಡ ಸಾಹಿತ್ಯ ಸಮೀಕ್ಷೆ (ಡಾ. ಜಿ. ಎಸ್. ಶಿವರುದ್ರಪ್ಪ) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಸಂಪುಟಗಳ ಮೊದಲ ಭಾಗವಾದ ಈ ಕೃತಿ ಕನ್ನಡ ಸಾಹಿತ್ಯದ ಒಟ್ಟು ಸಮೀಕ್ಷೆಯನ್ನು ಒಳಗೊಂಡಿದೆ. ಕಾಲದಿಂದ ಕಾಲಕ್ಕೆ ಕನ್ನಡ ಸಾಹಿತ್ಯದಲ್ಲಿ ಏರ್ಪಟ್ಟ ಸ್ಥಿತ್ಯಂತರಗಳ ಸ್ವರೂಪವನ್ನು ಅದರ ಎಲ್ಲ ಮಗ್ಗುಲುಗಳಿಂದಲೂ ಚರ್ಚೆ ನಡೆಸಿರುವ ಈ ಪುಸ್ತಕದ ವಿನ್ಯಾಸ–ಹೊಸ ಸ್ವರೂಪದ್ದು. ರೂಪ, ಪ್ರೇರಣೆ, ತಂತ್ರ, ಭಾಷೆ ಮತ್ತು ಕಾವ್ಯ ಕಲ್ಪನೆಗಳ ಚಾರಿತ್ರಿಕ ಪರಿಚಯವನ್ನು ಇಲ್ಲಿ ಕಾಣಬಹುದು. ಚರಿತ್ರಕಾರನು ಎದುರಿಸಬೇಕಾಗಿರುವ ಅನೇಕ ಸಮಸ್ಯೆಗಳನ್ನು ಗಮನದಲ್ಲಿಟ್ಟು ಕೊಂಡು ರಚಿತವಾಗಿರುವ ಈ ಪುಸ್ತಕದಲ್ಲಿ ಕನ್ನಡ ಸಾಹಿತ್ಯ ಮತ್ತು ಕನ್ನಡ ಸಂಸ್ಕೃತಿಯ ಹಿನ್ನೆಲೆ ಯಲ್ಲಿ ಸಾಹಿತ್ಯವನ್ನಿಟ್ಟು ನೋಡುವ ಪ್ರಯತ್ನವನ್ನು ನಡೆಸಿದೆ. ಯಾವುದೇ ಕಾಲ ಘಟ್ಟದ ಸಾಹಿತ್ಯಕ ಸ್ಥಿತ್ಯಂತರ ಕೇವಲ ರೂಪಕ್ಕಷ್ಟೇ ಸೀಮಿತಗೊಳ್ಳದೆ ಪರಿಸರ ಮತ್ತು ಸಾಮಾಜಿಕ ಸಂದರ್ಭಕ್ಕೆ ಪೂರಕವಾದದ್ದಾಗಿರುತ್ತದೆಂಬ ವಿಶ್ಲೇಷಣೆ ಎಲ್ಲ ಕನ್ನಡ ಸಾಹಿತ್ಯದ ಎಲ್ಲ ಕಾಲ ಘಟ್ಟಗಳ ಚರ್ಚೆಯಲ್ಲೂ ಪ್ರಕಟಗೊಂಡಿದೆ. ಹತ್ತು ಸಂಪುಟಗಳ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಗೆ ಇದೊಂದು ಭೂಮಿಕೆಯನ್ನು ಕಲ್ಪಿಸಿದೆ.

ಸಾಹಿತ್ಯದ ವಿಭಾಗ ಕ್ರಮದ ಚರ್ಚೆಯನ್ನು ಪರಿಚಯ ಮಾಡಿಕೊಡುತ್ತಾ ಲೇಖಕರು 'ಅಂದಂದಿನ ಸಾಹಿತ್ತಿಕ ಚಳುವಳಿಯ ಕೇಂದ್ರದಲ್ಲಿ ನಿಂತ ಪ್ರಮುಖ ಕವಿಗಳನ್ನು ಆಧಾರವಾಗಿಸಿರಿ ಕೊಂಡು ಮಾಡುವ ವಿಭಾಗ' ಹೆಚ್ಚು ನಿರ್ದುಷ್ಟವಾಗುತ್ತದೆ ಎಂಬುದನ್ನು ಸೂಚಿಸುತ್ತಾರೆ. 'ಸಾಹಿತ್ಯವನ್ನು ನಿಯಂತ್ರಿಸಿದ' ಮಹತ್ವದ ಕವಿಗಳನ್ನು ಅನುಲಕ್ಷಿಸಿ ಮಾಡುವ ಅಧ್ಯಯನವನ್ನು ಇಲ್ಲಿ ಎತ್ತಿಹಿಡಿಯಲಾಗಿದೆ. (ಅನೇಕ ಸಂಪುಟಗಳು ಇಂಥ ನಿಲುವನ್ನು ಗಮನಕ್ಕೆ ತಂದುಕೊಳ್ಳದಿರುವುದು ಆಶ್ಚರ್ಯಕರವಾಗಿದೆ).

ವಚನಕಾರರ ಆಂದೋಲನ ಮುಂದಿನ ಕನ್ನಡ ಕಾವ್ಯ ಮಾರ್ಗದ ಮೇಲೆ ಉಂಟುಮಾಡಿದ ಪ್ರಭಾವ – ಪರಿಣಾಮಗಳನ್ನು ವಿಶ್ಲೇಷಿಸಿರುವ ವಿಧಾನ ಕನ್ನಡ ಸಾಹಿತ್ಯ ಚರಿತ್ರೆಯ ಸಮಸ್ಯೆಗಳನ್ನು ಹೇಗೆ ವಿಶ್ಲೇಷಿಸಿಕೊಳ್ಳಬಹುದೆಂಬುದಕ್ಕೆ ಸಮರ್ಥ ಮಾರ್ಗಸೂಚಿಯೂ ಆಗಿದೆ. ವಚನಕಾರರ ಅನಂತರದಲ್ಲಿ ಒಂದ ಪರಿಹರನ 'ಗಿರಿಜಾ ಕಲ್ಯಾಣ' 'ಸ್ವತಂತ್ರ ಯುಗಪ್ರವರ್ತಕ' ಮನೋಧರ್ಮ ವನ್ನು ಹೇಗೆ ಪ್ರತಿನಿಧಿಸುತ್ತದೆ ಎಂಬುದರ ವಿಚಾರ ಗಮನೀಯವಾದದ್ದಾಗಿದೆ. " 'ಗಿರಿಜಾ ಕಲ್ಯಾಣ' ಚೌಕಟ್ಟಿನಲ್ಲಿ ಮತ್ತು 'ಚಂಪು'ವನ್ನು ಹೋಲುತ್ತದೆಯೇ ಹೊರತು, ಚಂಪೂ ಯುಗದ ಕವಿಗಳ ದೃಷ್ಟಿ – ಧ್ಯೇಯ – ಧೋರಣೆಗಳನ್ನಲ್ಲ ಎಂಬುದನ್ನು ಮರೆಯಬಾರದು" ಈ ಮಾತುಗಳು

ನಮ್ಮ ಕವಿಗಳು ಪುನರ್‌ಮೌಲ್ಯ ನಡೆಯಬೇಕಾಗಿರುವ ರೀತಿಯನ್ನೂ ಆ ದಿಶೆಯಲ್ಲಿ ಗ್ರಹಿಸಿಕೊಳ್ಳ ಬೇಕಾಗಿರುವ ನಿಲುವುಗಳನ್ನೂ ಪ್ರಕಟಪಡಿಸುತ್ತದೆ.

ಧರ್ಮದ ಪ್ರೇರಣೆಗೆ ಕನ್ನಡ ಸಾಹಿತ್ಯ ಕಟ್ಟುಬಿದ್ದಿದೆ – ಎಂಬ ಸರಳಗೊಳಿಸಿದ ಆಲೋಚನೆ ಗಳನ್ನು ಲೇಖಕರು ಸಾದ್ಯಂತವಾದ ಚರ್ಚೆಗೆ ಗುರಿಪಡಿಸಿದ್ದಾರೆ. ಅದನ್ನು ಮೂರು ವಿಭಾಗಗಳಲ್ಲಿ ಚರ್ಚೆ ನಡೆಸಿದ್ದಾರೆ. ಧಾರ್ಮಿಕ, ಭಕ್ತಿ ಮತ್ತು ಅನುಭಾವದ ನೆಲೆಗಳಲ್ಲಿ ಕನ್ನಡ ಸಾಹಿತ್ಯವನ್ನು ಅಭ್ಯಸಿಸುವ ಅಗತ್ಯವನ್ನು ಈ ಚರ್ಚೆ ಒಳಗೊಂಡಿದೆ.

'ಕನ್ನಡ ಕವಿಗಳ ವಸ್ತು, ತಂತ್ರ ಮತ್ತು ಭಾಷಾಪ್ರಜ್ಞೆ' ಎಂಬ ಭಾಗ ಕೃತಿಯ ಮಹತ್ವದ ಭಾಗವಾಗಿದೆ. ಈ ಭಾಗದಲ್ಲಿ 'ಮಾರ್ಗ' ಮತ್ತು 'ದೇಸಿ'ಯ ಬಗೆಗೆ ಏರ್ಪಟ್ಟಿರುವ ಚರ್ಚೆ, ಸಂಸ್ಕೃತ ಮತ್ತು ಕನ್ನಡ ಇವುಗಳ ಸಂಬಂಧದ ಚರ್ಚೆಯನ್ನು ಕಾಣಬಹುದಾಗಿದೆ.

'ಮೌಲ್ಯ ಪ್ರಜ್ಞೆ ಮತ್ತು ಸಾಮಾಜಿಕ ಅರಿವು' ಈ ಭಾಗದಲ್ಲಿ ಕನ್ನಡ ಸಂಸ್ಕೃತಿ ಮತ್ತು ಅದರ ಅಭಿವ್ಯಕ್ತಿ ಕನ್ನಡ ಸಾಹಿತ್ಯದಲ್ಲಿ ಹೇಗೆ ಕಾಣಿಸಿಕೊಂಡಿದೆ ಎಂಬ ಚರ್ಚೆಯನ್ನು ಕಾಣಬಹುದು. ವೀರ, ಭಕ್ತಿ ಮತ್ತು ಸಮನ್ವಯಗಳ ಸಂದರ್ಭಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಒದಗಿಬಂದ ಒತ್ತಡಗಳ ಹಿನ್ನೆಲೆ ಮತ್ತು ಅದರ ಸ್ವರೂಪವನ್ನು ವಿಚಾರ ಮಾಡಲಾಗಿದೆ. ಕನ್ನಡ ಕವಿಗಳ ಅಧ್ಯಯನದಿಂದ-ಸಾಮಾಜಿಕ ಒಳನೋಟಗಳ ಪ್ರವೇಶಕ್ಕೆ ಒದಗಿಬರುವ ಸಾಮಗ್ರಿಯ ಕಡೆಗೆ ಸೂಚನೆ ಇದೆ.

ಕನ್ನಡ ಸಾಹಿತ್ಯದ ಚಲನಶೀಲತೆಯ ಸ್ವರೂಪವನ್ನು ಅದರ ಎಲ್ಲ ಸಂದರ್ಭಗಳ ಹಿನ್ನೆಲೆಯಲ್ಲಿ ಪರಿಚಯ ಮಾಡಿಕೊಡುವ ಈ ಪುಸ್ತಕ 'ಸಾಹಿತ್ಯ ಚರಿತ್ರೆ'ಯ ನಿರ್ಮಿತಿಯ ಕೆಲವು ಸಾಂಸ್ಕೃತಿಕ ಸಮಸ್ಯೆಗಳನ್ನು ಸ್ಥೂಲವಾಗಿ ಪರಿಚಯಮಾಡಿಕೊಡುತ್ತದೆ. ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕ ವಾಗಬಹುದಾದ ಅನೇಕ ಸೂಚನೆಗಳು ಇದರಲ್ಲಿದೆ. ಚರಿತ್ರೆಯ ಅಧ್ಯಯನ ಕೇವಲ ತಾಂತ್ರಿಕ ವಾದದ್ದು ಎಂಬ ಜಡ್ಡು ದೃಷ್ಟಿಯನ್ನು ಈ ಬರಹ ವಿರೋಧಿಸುತ್ತದೆ. ಸಾಹಿತ್ಯದ ಅಭ್ಯಾಸಿಗೆ-ಇದೊಂದು ಹೊಸ ಅನುಭವವನ್ನು ಕಟ್ಟಿಕೊಡುತ್ತದೆ.

ಚಂಪೂ ಕವಿಗಳು (ಪಿ. ವಿ. ನಾರಾಯಣ) ಜನಪ್ರಿಯ ಸಾಹಿತ್ಯ ಚರಿತ್ರೆಯ ವ್ಯಾಪ್ತಿಯಲ್ಲಿ ಬರೆಯಲಾಗಿರುವ ಈ ಪುಸ್ತಕದಲ್ಲಿ ಚಂಪುವಿನ ವಿವರಣೆ, ಜೈನ ಚಂಪೂ ಕವಿಗಳು, ಬ್ರಾಹ್ಮಣ ಚಂಪೂ ಕವಿಗಳು, ವೀರಶೈವ ಚಂಪೂ ಕವಿಗಳು, ಚಂಪೂ ಪ್ರಕಾರದಲ್ಲಿ ಆದ ಬದಲಾವಣೆ ಮತ್ತು ಕನ್ನಡಕ್ಕೆ ಚಂಪೂ ಕವಿಗಳ ಕೊಡುಗೆ ಎಂಬ ಐದು ಭಾಗಗಳಿವೆ. ಜೈನ, ವೀರಶೈವ, ಬ್ರಾಹ್ಮಣ ಎಂಬ ವಿಭಾಗ ಕ್ರಮ ಈ ಹೊತ್ತು ಚಾಲ್ತಿಯಲ್ಲಿರುವ ವಿಭಾಗ ಕ್ರಮ ಅಲ್ಲ. ಅಂಥ ವಿಭಾಗಕ್ರಮ ಕನ್ನಡ ಸಾಹಿತ್ಯ ವನ್ನು ಚಾರಿತ್ರಿಕ ನೆಲೆಯಲ್ಲಿ ಗುರುತಿಸಿಕೊಳ್ಳಲು ಯಾವರೀತಿಯೂ ಸಹಾಯಕವಾಗುವುದಿಲ್ಲ. ಸಾಹಿತ್ಯ ಚರಿತ್ರೆಯ ರಚನೆಯ ಸಂದರ್ಭದಲ್ಲಿ ಇಂಥ ಮೂಲಭೂತ ಪ್ರಶ್ನೆಯನ್ನು ಲೇಖಕರು ಬಗೆಹರಿಸಿಕೊಳ್ಳಬೇಕಿತ್ತು. '76 ರಲ್ಲಿ ಸಾಹಿತ್ಯವನ್ನು ನೋಡುವ ಸಂದರ್ಭದಲ್ಲಿ ಸಾಹಿತ್ಯ ಚರಿತ್ರಕಾರನ ದೃಷ್ಟಿ ಸಮಕಾಲೀನ ನೆಲೆಗಟ್ಟಿನಲ್ಲಿ ನಿಲ್ಲುವುದು ಅತ್ಯಂತ ಮುಖ್ಯವಾದದ್ದಾಗುತ್ತದೆ. ಹಾಗಲ್ಲದೆ ಈಗಾಗಲೇ ಅರ್ಥವನ್ನು ಕಳೆದುಕೊಂಡಿರುವ, ಪಾಕ್ಷಿಕ ವಿಭಾಗವೆಂದು ಪರಿಗಣಿಸ ಲಾಗಿರುವ ಜಾತಿ ಪರವಾದ ವಿಭಾಗ ಕ್ರಮ ಇಡೀ ಕೃತಿಗೆ ಒಂದು ಪೂರ್ವಾಗ್ರಹ ಬಂಧನವನ್ನು ಹಾಕಿದೆ. ಇಷ್ಟು ಕೃತಿಯ ವಿಭಾಗ ಕ್ರಮದ ಬಗೆಗೆ ಹೇಳಬಹುದಾದ ಮಾತು.

ಯಾವುದೇ ಸಾಹಿತ್ಯಕ ಸಂಪ್ರದಾಯಕ್ಕೆ ತನ್ನದೇ ಆದ ಐತಿಹಾಸಿಕ ಪ್ರಕ್ರಿಯೆ ಇದ್ದೇ ಇರುತ್ತದೆ. ಶೈಲಿಗೂ ಸಂಸ್ಕೃತಿಗೂ ನಡುವಣ ಸಂಬಂಧ ಸಾಹಿತ್ಯದಲ್ಲಾಗಲೀ ಬದುಕಿನ ಇತರ ಬಾಬ್ತುಗಳಲ್ಲಾಗಲೀ ಪ್ರಕಟಗೊಳ್ಳುತ್ತದೆ. ಚಂಪೂ ಸಂಪ್ರದಾಯಕ್ಕೆ ಕಾರಣವಾದ ಸಾಮಾಜಿಕ ಒತ್ತಡ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳು ಕಾರಣವಾಗುತ್ತದಲ್ಲದೆ ಕೇವಲ ಸಾಹಿತ್ಯದ ಮಾದರಿಯಾಗಿ ಒಂದು ರೂಪವನ್ನು ವಿಶ್ಲೇಷಿಸುವುದು ಮೂಲಭೂತ ಪ್ರಶ್ನೆಗಳನ್ನು ಮರೆಸಿದಂತೆ

ಆಗುತ್ತದೆ. ಜೈನರಲ್ಲಿ ಯಾವ ಚಂಪೂಕವಿ ಶ್ರೇಷ್ಠ? ವೀರಶೈವರಲ್ಲಿ ಯಾವ ಚಂಪೂಕವಿ ಶ್ರೇಷ್ಠ? ಬ್ರಾಹ್ಮಣರಲ್ಲಿ ಯಾವ ಚಂಪೂ ಕವಿ ಶ್ರೇಷ್ಠ? ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರ ಕೊಡುತ್ತಾ ಹೋಗುವುದು ಸಾಹಿತ್ಯ ಚರಿತ್ರೆಯ ವೈಜ್ಞಾನಿಕ ದೃಷ್ಟಿ ಆಗಲಾರದು. ಲೇಖಕರ ಕೆಲವು ಸಾಲುಗಳನ್ನು ಅವರ ಧೋರಣೆಯ ಹಿನ್ನೆಲೆಗೆ ಉದಾಹರಣೆಯಾಗಿ ಗಮನಿಸಬಹುದು: (೧) ಕನ್ನಡ ಸಾಹಿತ್ಯದಲ್ಲಿ ಚಂಪೂ ಪ್ರಕಾರದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದ ಬ್ರಾಹ್ಮಣ ಕವಿಗಳೇ ಇಲ್ಲ. ಏಕೆಂದರೆ ಇದು ಜೈನಕ್ಕೆ ಹೊಂದಿಕೊಂಡ ಸಂಪ್ರದಾಯ. (೨) ವೀರಶೈವ ಕವಿಗಳ ವಿಷಯದಲ್ಲಿಯೂ ಇದು ನಿಜ. ಇವರಲ್ಲಿ ಹರಿಹರನೇ ಅತ್ಯಂತ ಶ್ರೇಷ್ಟನೂ ಮೊಟ್ಟ ಮೊದಲಿಗನೂ ಆದ ಚಂಪೂಕವಿ. (೩) ಚಂಪೂ ಸಂಪ್ರದಾಯವನ್ನು ಅದರಲ್ಲಾದ ಬದಲಾವಣೆಗಳನ್ನು ಜೈನಮತದ ಹಿನ್ನೆಲೆಯಲ್ಲೇ ನೋಡಬೇಕು. (೪) ಬ್ರಾಹ್ಮಣ ವೀರಶೈವ ಕವಿಗಳಿಗೆ ಈ ಪ್ರಕಾರವು ಪ್ರಾಸಂಗಿಕವಾಗಿ ದೊರೆತದ್ದು, ಅವರಲ್ಲಿ ಚಂಪೂ ಕಾವ್ಯಗಳನ್ನು ಬರೆದವರು ಯಾರೂ ಅದರಿಂದಲೇ ಮೊದಲ ಶ್ರೇಣಿಯ ಕವಿಗಳೆನಿಸಿಕೊಳ್ಳಲಿಲ್ಲ.

ಒಂದು ಕಾವ್ಯ ಸಂಪ್ರದಾಯ ತನ್ನ ಸತ್ವವನ್ನು ಕಳೆದುಕೊಳ್ಳುತ್ತದೆ ಏಕೆ? ಬೇರೊಂದು ಸತ್ವದ ಕಾವ್ಯ ಸಂಪ್ರದಾಯ ತನ್ನ ಹಿಂದಿನ ಸಂಪ್ರದಾಯದ ಸತ್ವವನ್ನು ಹೇಗೆ ಗ್ರಹಿಸಿಕೊಳ್ಳುತ್ತದೆ ಎಂಬುದರ ಪರೀಕ್ಷೆಗೆ ಇಲ್ಲಿನ ಬರವಣಿಗೆ ಪ್ರಯತ್ನವನ್ನೇ ಮಾಡುವುದಿಲ್ಲ. ಒಬ್ಬೊಬ್ಬ ಕವಿಯ ವರ್ಣನೆಗಳನ್ನು ಕುರಿತ ರಸ ವಿಮರ್ಶೆ (?) ವ್ಯಕ್ತವಾಗಿದೆ ಅಷ್ಟೆ. ಹನ್ನೆರಡನೆಯ ಶತಮಾನದ ವಚನಕಾರರ ಆಂದೋಲನದ ಅನಂತರದಲ್ಲಿ ಶೈಲಿಯಲ್ಲಿ ಆದ ಮಾರ್ಪಾಟು ಸಾಮಾಜಿಕ ಸಮಸ್ಯೆಗಳ ಜೊತೆಗೆ ಹೇಗೆ ಹೊಂದಿಕೊಂಡಿದೆ ಎಂಬುದನ್ನು ಗಮನಿಸಿಕೊಂಡಿದ್ದರೆ ಮಾತ್ರ ಲೇಖಕರು ಅಸ್ತವ್ಯಸ್ತತೆಯಿಂದ ಪಾರಾಗಬಹುದಿತ್ತು. ನಮ್ಮ ಸಾಹಿತ್ಯವನ್ನು ಕುರಿತ ಸಾಂಪ್ರದಾಯಿಕವಾದ ಚಾರಿತ್ರಿಕ ವಿವರಣೆ ಬೇಕಾದಷ್ಟಿದೆ. ಅಂಥ ಸವಕಲು ಜಾಡನ್ನು ಬಿಟ್ಟು ನಮ್ಮ ಹೊಸ ಓದುಗರಿಗೆ ಅರ್ಥಪೂರ್ಣವಾದ ಮತ್ತು ಸಂಗತವಾದ ಸಾಂಸ್ಕೃತಿಕ ಮಹತ್ವದ ಸಾಹಿತ್ಯ ಚರಿತ್ರೆಯನ್ನು ಬಯಸುವುದು ಅಪೇಕ್ಷಣೀಯ. 'ಅಂದಂದಿನ ಸಾಹಿತ್ಯಕ್ಕೆ ಪ್ರೇರಣೆ'ಯನ್ನು ಈ ಕೃತಿ ಮನದಟ್ಟು ಮಾಡಿಕೊಡುವುದರಲ್ಲಿ ಫಲಕಾರಿಯಾಗಿಲ್ಲ. ಮೌಲ್ಯಮಾಪನದ ದೃಷ್ಟಿಯಲ್ಲಿ ಏರುಪೇರು ಉಂಟಾಗಿರುವುದಕ್ಕೆ ಚಂಪೂ ಸಂಪ್ರದಾಯದ ಸರಳಗೊಳಿಸಿದ ವಿವರಣೆಯೇ ಮುಖ್ಯ ಕಾರಣ.

ಶಾಸನ ಮತ್ತು ಗದ್ಯ (ಹು. ಕಾ. ಜಯದೇವ್) ಚಾರಿತ್ರಿಕ ದಾಖಲೆಗಳ ಅಧ್ಯಯನದ ಸಮಸ್ಯೆಗಳು ಸಾಹಿತ್ಯದ ವಿದ್ಯಾರ್ಥಿಗಷ್ಟೇ ಸೀಮಿತಗೊಳ್ಳದೆ ನಮ್ಮ ಸಾಂಸ್ಕೃತಿಕ ಬದುಕಿನ ಹಲವು ಹನ್ನೊಂದು ನೆಲೆಗಳೊಂದಿಗೆ ಅನೇಕ ರೀತಿಯ ಸಂಬಂಧಗಳನ್ನು ಪಡೆದುಕೊಂಡಿದೆ. ಇಂಥ ದಾಖಲೆಗಳ ಪರಿಚಯದ ನೋಟ ಈ ಪುಸ್ತಕದಲ್ಲಿದೆ, ಶಾಸನದ ಮೂಲಕ ಗುರುತಿಸಿಕೊಳ್ಳಬಹುದಾದ ಸಾಮಾಜಿಕ ಒಳನೋಟಗಳನ್ನು ಲೇಖಕರು ಅಲ್ಲಲ್ಲಿ ಪರಿಚಯ ಮಾಡಿಕೊಡುತ್ತಾರಾದರೂ ಅವುಗಳನ್ನು ಕುರಿತ ಚರ್ಚೆಯನ್ನು ಇಲ್ಲಿ ಕಾಣಲಾಗುವುದಿಲ್ಲ. ಶಾಸನಗಳ ಅಧ್ಯಯನದಿಂದ ಚರಿತ್ರೆಯ ಪುನಾರಚನೆಗೆ ಎಂಥ ಸಹಾಯ ಒದಗಿಬರುತ್ತದೆಂಬುದನ್ನು ತಿಳಿಸಬಹುದಿತ್ತು. ಶಾಸನಗಳನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ತಾತ್ವಿಕ (ಸಾಂಸ್ಕೃತಿಕ ಅಧ್ಯಯನ) ದೃಷ್ಟಿಯಿಂದ ನಡಸುವ ಶೋಧನೆ ಕರ್ನಾಟಕದ ಚರಿತ್ರೆ ಮತ್ತು ಅದರ ಅವಸ್ಥಾಂತರದ ಅರ್ಥ ಗ್ರಹಣಕ್ಕೆ ಮುಖ್ಯವಾದದ್ದು ಕೂಡಾ.

ಲೇಖಕರು—'ಶಾಸನಗಳ ಮಹತ್ವ; ಇತಿಹಾಸ, ಸಂಸ್ಕೃತಿ ಮತ್ತು ಭಾಷೆ' ಎಂಬ ಭಾಗ್ಯದಲ್ಲಿ ಶಾಸನವನ್ನು ಹೇಗೆ ನೋಡಬೇಕೆಂಬುದರ ಬಗೆಗೆ ಚರ್ಚೆಯನ್ನೂ ಆರಂಭಿಸುತ್ತಾರೆ. 'ಪ್ರಾಚೀನ ಭಾರತದ ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವರಗಳನ್ನು ತಿಳಿಯಬೇಕೆನ್ನುವವರಿಗೆ ಶಾಸನಗಳನ್ನು ಬಿಟ್ಟರೆ ವಿಧಿಯಿಲ್ಲ'—ಆದರೆ ಈ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ (ಇವೆಲ್ಲವನ್ನೂ ಸೇರಿಸಿ ಸಾಂಸ್ಕೃತಿಕ ಎಂದು ಕರೆಯಬಹುದು) ನೆಲೆಗಳನ್ನು ಕೃತಿಯ ಸಂದರ್ಭದಲ್ಲಿ

ಆಗುತ್ತದೆ. ಜೈನರಲ್ಲಿ ಯಾವ ಚಂಪೂಕವಿ ಶ್ರೇಷ್ಠ? ವೀರಶೈವರಲ್ಲಿ ಯಾವ ಚಂಪೂ ಕವಿ ಎಲ್ಲಿಯೂ ಚರ್ಚೆಯಾಗಿಲ್ಲ. ಉದಾಹರಿಸಿರುವ ಭಾಗಗಳಿಂದ ಓದುಗರಿಗೇನೋ text ದೊರೆತಂತಾಗಿದೆ. ಶಾಸನಗಳನ್ನು–ಅದರ ಚಾರಿತ್ರಿಕ ನೆಲೆಗಳಿಗೆ ಪೂರಕವಾಗಿ—ಅನುಕ್ರಮವಾಗಿ ಜೋಡಿಸಿಕೊಳ್ಳುವುದರಿಂದ ಮಾತ್ರ 'ಸಾಮಾನ್ಯ'ನಿಗೆ ಶಾಸನಗಳ ಪರಿಚಯ ಮಾಡಿಸಿಕೊಡಲು ಸಾಧ್ಯವಾಗುತ್ತದೆ. ಸಾಮಗ್ರಿಗಳ ಮೇಲೆ ಲೇಖಕರಿಗಿರುವ ಖಚಿತತೆ—ಖಚಿತ ಐತಿಹಾಸಿಕ ವಿವೇಚನೆಗೆ ಬಳಕೆಯಾಗಬಹುದಿತ್ತು. ಇಂಥ ವಿಶ್ಲೇಷಣೆಯಿಂದ ಚರಿತ್ರೆಯನ್ನು ನಾವು ಗ್ರಹಿಸಿಕೊಳ್ಳಬೇಕಾಗಿರುವ ತಿಳಿವನ್ನು ಕೊಡುತ್ತದೆ. ಸಾಹಿತ್ಯ ಚರಿತ್ರೆಯ ಆಶಯಗಳು ಚರಿತ್ರೆಯ ಆಶಯಗಳಿಗಿಂತ ಬೇರೆಯಾದುದೇನೂ ಅಲ್ಲ. ಶಾಸನಗಳಲ್ಲಿ 'ಸಾಹಿತ್ತಿಕ ಮೌಲ್ಯ' ಎಂಬ ಭಾಗದಲ್ಲಿ 'ಶುದ್ಧ ಸಾಹಿತ್ಯ' ಮತ್ತು 'ಶಾಸನ ಸಾಹಿತ್ಯ' ಇವೆರಡರ ನಡುವಣ ಸಂಬಂಧದ ಚರ್ಚೆಯನ್ನು ಎತ್ತುತ್ತಾರೆ. ಆದರೆ ಚರ್ಚೆಗೆ ಇರುವ ಆ ಅವಕಾಶವೇ ಶಾಸನ ಸಾಹಿತ್ಯದ ಚರಿತ್ರೆಯೂ ಆಗುತ್ತದೆ. ನಿಜಕ್ಕೂ ಮಹತ್ವದ ಅಂಶವೆಂದರೆ ಲೇಖಕರಿಗೆ ಸಾಂಸ್ಕೃತಿಕ ಚರಿತ್ರೆಯ ಸಮಸ್ಯೆಗಳ ಬಗೆಗೆ ತೆರೆದ ಮನಸ್ಸು ಇದೆ ಎಂಬುದು.

'ಗದ್ಯ'ವನ್ನು ಕುರಿತ ಭಾಗ ಆರಂಭದಲ್ಲಿ ಕುತೂಹಲ ಹುಟ್ಟಿಸುತ್ತವೆ. 'ಕೈಫಿಯತ್, ಬಖೈರುಗಳ ಗದ್ಯ'—ಎಂಬ ಭಾಗ ಅನೇಕ ಮಹತ್ವದ ದಾಖಲೆಗಳ ಪರಿಚಯವನ್ನು ಮಾಡಿಕೊಡುತ್ತದೆ. ಅವುಗಳ ಉದ್ದೇಶ–ಸ್ವರೂಪಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡಲಾಗಿದೆ. ಕನ್ನಡ ಕಾವ್ಯಗಳ ಆಂತರ್ಯದಲ್ಲಿ ಕಾಣಿಸಿಕೊಂಡಿರುವ ಗದ್ಯದ ವಿಶ್ಲೇಷಣೆಗೆ ಲೇಖಕರು ಕಲ್ಪಿಸಿಕೊಟ್ಟಿರುವ ವ್ಯಾಪ್ತಿ ತಿಳಿಯುವಂತಿಲ್ಲ. ಮುದ್ದಣ, ಕೆಂಪುನಾರಾಯಣ ಮುಂತಾದ ಗದ್ಯ ಕೃತಿಕಾರರ ಬಗೆಗೆ ಹೆಚ್ಚಿಗೆ ಮಾಹಿತಿ ದೊರಕುವುದಿಲ್ಲ.

ಶಾಸ್ತ್ರ ಸಾಹಿತ್ಯ (ಎಂ. ವಿ. ಸೀತಾರಾಮಯ್ಯ) ಎಂ. ವಿ. ಸೀ. ಯವರು ತಮ್ಮ ಪುಸ್ತಕವನ್ನು 'ಶಾಸ್ತ್ರ' ಎಂಬುದರ ಪರಿಕಲ್ಪನೆಯನ್ನು ವಿಶ್ಲೇಷಿಸುವುದರ ಮೂಲಕ ಆರಂಭಿಸುತ್ತಾರೆ. ಶಾಸ್ತ್ರವನ್ನು ಸಾಹಿತ್ಯವೆಂದು ಕರೆಯಬಹುದೆ ಎಂಬ ಚರ್ಚೆಯನ್ನು ಮಾಡುತ್ತಾರೆ. ಶಾಸ್ತ್ರ ಗ್ರಂಥಗಳನ್ನು 'ಸಾಹಿತ್ಯ' ಎಂದು ಕರೆಯಲು ಅಡ್ಡಿಯಿಲ್ಲವೆಂಬ ತೀರ್ಮಾನಕ್ಕೆ ಬರುತ್ತಾರೆ. ಶಾಸ್ತ್ರವನ್ನು 'ಇಹಪರ ಸೌಖ್ಯಕ್ಕೆ ಸಾಧನ' ಎಂಬ ಕೇಂದ್ರದಿಂದ ವಿಶ್ಲೇಷಿಸಲಾಗಿದೆ. ಶಾಸ್ತ್ರ ಮತ್ತು ಕಾವ್ಯ ಇವುಗಳನ್ನು ಪ್ರತ್ಯೇಕವಾಗಿ ನೋಡಲು 'ಸೌಂದರ್ಯ'ವನ್ನು ಆಧಾರವಾಗಿ ಮಾಡಿಕೊಳ್ಳುತ್ತಾರೆ. ಇದರಿಂದ ಲೇಖಕರ ಶಾಸ್ತ್ರದ ಕಲ್ಪನೆ scholastic ಆಗಿ ತೋರುತ್ತದೆ. ಕಲೆ–ಶಾಸ್ತ್ರ ಇವುಗಳ ಬಗೆಗೆ ಮಾತನಾಡುತ್ತ 'ಕಲೆಗಳ ಸೌಂದರ್ಯ ಹಿಡಿತಕ್ಕೆ ಸಿಕ್ಕುವ ವಿಷಯವಲ್ಲ, ಶಾಸ್ತ್ರದ ವಿಷಯ ಖಚಿತವಾದದ್ದು. ಎಲ್ಲರಿಗೂ ಒಂದೇ ವಿಧವಾದ ಸತ್ಯ ತಿಳಿಸತಕ್ಕದ್ದು'. ಸತ್ಯ ಒಂದೇ ಆದರೂ ಸತ್ಯದ ವ್ಯಾಪ್ತಿ ಬೇಕಾದಷ್ಟಿದೆಯಲ್ಲ ಇದಕ್ಕೆ ಕಾರಣವೇನು? ಇಂಥ ಚರ್ಚೆಗೆ ಕಾರಣವೆಂದರೆ ಶಾಸ್ತ್ರದ ಹಿನ್ನೆಲೆಯಲ್ಲಿ ಲೇಖಕರು ಕಲ್ಪಿಸಿಕೊಂಡಿರುವ 'ಮನೋ ವಿಶ್ಲೇಷಣೆ'ಯ ಸ್ವರೂಪ ಮೂಲಭೂತವಾಗಿ ತೂಕ ತಪ್ಪಿದೆ. ಏಕೆಂದರೆ–ಲೇಖಕರು 'ಇಂದ್ರಿಯಾನುಭವವೆಂಬ ಒಂದೇ ಮೂಲದಿಂದ ಎಲ್ಲವೂ ಹುಟ್ಟಿರುವುದಲ್ಲದೆ, ಕಾರ್ಯ ನಿರ್ವಹಣೆಯ ಕಾಲದಲ್ಲಿ ಒಂದರ ಪ್ರಭಾವ ಇನ್ನೊಂದರ ಮೇಲೆ ಉಂಟಾಗಿ, ಇದರ ಲಕ್ಷಣ ಅದರ ಸ್ವರೂಪದ ಮೇಲೂ, ಅದರ ಲಕ್ಷಣ ಇದರ ಸ್ವರೂಪದ ಮೇಲೂ ಕಾಣಿಸಿಕೊಳ್ಳಬಹುದು' – ಎಂದಿದ್ದಾರೆ. ಇಂದ್ರಿಯಾನುಭವ ಎಂಬ ಒಂದೇ ಮೂಲ – ಎಂದರೆ ಅದರಿಂದ ಏಳುವ ಪ್ರಶ್ನೆಗಳು ಅಸಂಖ್ಯ. ಜ್ಞಾನವನ್ನು ಕುರಿತ ಚರ್ಚೆ ಐಂದ್ರಿಯಕ ಮತ್ತು ವಿವೇಚನೆಗಳ ಅಂತರ್‌ಸಂಬಂಧಕ್ಕೆ ಸೇರಿದ್ದು. ಈ ಸಂಬಂಧದಿಂದ ಮಾತ್ರ ವೈಜ್ಞಾನಿಕ ಸತ್ಯವನ್ನು ಕಾಣುತ್ತೇವೆಯೇ ಹೊರತು – ಭಾಗಶಃ ವ್ಯಾಖ್ಯಾನದಿಂದಲ್ಲ.

ಬಾಹ್ಯ ಪ್ರಪಂಚ ದರ್ಶನ ಮತ್ತು ಅನುಭವ ಸಾಧನ ಎಂಬ ಎರಡು chart ಗಳು ಪುಸ್ತಕದ ಕಡೆಯಲ್ಲಿದೆ. ಅದನ್ನು ಹೇಳುವುದು ಮತ್ತು ಮಾಡುವುದು ಎಂಬ ಎರಡು ಭಾಗಗಳಾಗಿ ವರ್ಗೀಕರಿಸಲಾಗಿದೆ. ಬಾಹ್ಯ ಪ್ರಪಂಚದ ಚಟುವಟಿಕೆಗಳಲ್ಲಿ ಹೇಳುವ ಮತ್ತು ಮಾಡುವ ಎರಡು ಪರಿಕಲ್ಪನೆಗಳ ಮೂಲಭೂತ ಗ್ರಹಿಕೆಗಳು ತಿಳಿಯುವಂತಿಲ್ಲ. ಶಾಸ್ತ್ರ ಮತ್ತು ಕಲೆ ಇವುಗಳ ಸ್ವರೂಪವನ್ನು ಪ್ರತ್ಯೇಕವಾಗಿ ಸೂಚಿಸಲಾಗಿದೆ. ಕಲೆಯ ಗುರಿ ಸೌಂದರ್ಯಾನುಭವ, ಆತ್ಮಸಂತೋಷವೆಂತಲೂ, ಅದರಲ್ಲೂ ತನಗಾಗಿ ತೃಪ್ತಿಗೊಳ್ಳುವ ಒಂದು ಭಾಗ ಮತ್ತು ಇತರರ ಪ್ರಯೋಜನಕ್ಕಾಗಿ ಒಂದು ಭಾಗವೂ ಏರ್ಪಡುತ್ತದೆ. ವಿಜ್ಞಾನಿಯ ಮತ್ತು ಶಾಸ್ತ್ರಕಾರನ ಗುರಿ ಸತ್ಯಾನ್ವೇಷಣೆ. ಪ್ರಾಚೀನ ಶಾಸ್ತ್ರಗಳು, ಆಧುನಿಕ ವಿಜ್ಞಾನ, ಯಂತ್ರ ಶಾಸ್ತ್ರ ಇತ್ಯಾದಿ;... ಇಲ್ಲಿ ಸೃಜನಶೀಲತೆಯ ವಿಚಾರಗಳನ್ನು ಯಾವ ವೈಜ್ಞಾನಿಕ ಕಕ್ಷೆಯ ಒಳಕ್ಕೂ ಗುರಿಪಡಿಸದ ವಿವರಣೆಯೊಂದು ಬೆಳೆಯುತ್ತದೆ. ಶಾಸ್ತ್ರಗಳ ಅಧ್ಯಯನ ಯಾವಾಗಲೂ ಚಲನೆಯನ್ನು ಪಡೆದಿರಬೇಕಲ್ಲದೆ-ಸ್ಥಗಿತ ನಿಲುವುಗಳ ಮಂಡನೆಗಾಗಿ ಅಲ್ಲ. ಎಂ. ವಿ. ಸೀ. ಯವರ ವಿಷಯ ಸಂಗ್ರಹಣೆ ವ್ಯಾಪಕವಾದದ್ದಾಗಿದೆ. ಆದರೆ ಶಾಸ್ತ್ರದ ಬಗೆಗೆ ಅವರ ಗ್ರಹಿಕೆಗಳನ್ನು ಒಪ್ಪಿಕೊಳ್ಳಲು ಅವರೇ ನಿರ್ಮಿಸಿಕೊಂಡಿರುವ ಕೆಲವು ನಿಲುವುಗಳಿಂದ ಸೀಮಿತಗೊಳ್ಳುತ್ತದೆ. ಶಾಸ್ತ್ರ ಮತ್ತು ಸೃಜನಶೀಲತೆ ಇವುಗಳ ಆಂತರಿಕವಾದ ಸೂಕ್ಷ್ಮವಾದ ಕ್ರಿಯಾ ಸಂಬಂಧಗಳ ಹಿನ್ನೆಲೆಯಲ್ಲಿ ನಮ್ಮ ಶಾಸ್ತ್ರ ಸಾಹಿತ್ಯವನ್ನು ಗುರುತಿಸಿಕೊಳ್ಳಬಹುದಲ್ಲದೆ ಕೇವಲ ಶಾಸ್ತ್ರೀಯ ಸ್ವರೂಪಕ್ಕಷ್ಟೇ ಸೀಮಿತಗೊಳಿಸಿಕೊಳ್ಳುವುದರಿಂದ ಕನ್ನಡ ಶಾಸ್ತ್ರ ಸಾಹಿತ್ಯದ ವಿಶ್ಲೇಷಣೆಗೆ ಅಶಾಸ್ತ್ರೀಯವಾಗುವ ಸಾಧ್ಯತೆಯಿದೆ.

ಶಾಸ್ತ್ರ ಸಾಹಿತ್ಯದ ಶಿಸ್ತು ಮತ್ತು ಅದರ ರೂಪುರೇಷೆಗಳನ್ನು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಮಾತ್ರ ವಿವರಿಸಿರುವ ಈ ಕೃತಿ - ಶಾಸ್ತ್ರೀಯ ಸತ್ವಗಳಿಂದ ಕನ್ನಡ ಸಾಹಿತ್ಯದ ಆಲೋಚನಾ ವಿಧಾನದ ರೂಪಣಕ್ಕೆ, ನಿಯಂತ್ರಣಕ್ಕೆ ಎಷ್ಟು ಒತ್ತಾಸೆಯನ್ನು ತಂದುಕೊಟ್ಟಿದೆ? ಅದರ ಯಥಾರ್ಥತೆಯ ಸ್ವರೂಪದಿಂದ ಆಗಿರುವ ಪರಿಣಾಮ ವಿಶ್ಲೇಷಣೆಗೆ ಗುರಿಯಾಗಬೇಕಾಗುತ್ತದೆ. ಸಂಯೋಜನೆಯ ಉದ್ದೇಶಗಳಿಂದ ಹೊರತುಪಡಿಸುವ ಶಾಸ್ತ್ರವಿವೇಚನೆ ಚಾರಿತ್ರಿಕವಾದ ನೆಲೆಗಳಿಂದ ಪ್ರತ್ಯೇಕಿಸಿದ ವಿವೇಚನೆಯಾಗುತ್ತದೆ.

ವಚನ ಸಾಹಿತ್ಯ (ಎಂ. ಚಿದಾನಂದಮೂರ್ತಿ) ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಪ್ರಮುಖ ಘಟ್ಟಗಳಲ್ಲಿ ಒಂದಾದ ಹನ್ನೆರಡನೆಯ ಶತಮಾನದ ಹಿನ್ನೆಲೆಯಲ್ಲಿ ಈ ಕೃತಿಯ ಪರಿಶೀಲನೆ ಸಾಧ್ಯ. ಸಾಹಿತ್ಯ ಚರಿತ್ರೆಗಿರುವ ಕೆಲವಾದರೂ ಮಹತ್ವದ ಒತ್ತಡಗಳನ್ನು ಪರಿಗಣಿಸಿ ಹೊರಡುವುದರಿಂದ ಈ ಕೃತಿಯ ಸಂದರ್ಭದಲ್ಲಿ ಏರ್ಪಟ್ಟಿರುವ ಚರ್ಚೆ ಸಾಹಿತ್ಯ ಚರಿತ್ರೆಯ ಮೂಲಭೂತ ಪ್ರಶ್ನೆಗಳನ್ನು ಎದುರಿಸಲು ಸಿದ್ಧವಾಗಿದೆ.

'ವಚನಕಾರರು 'ಕವಿ'ಗಳಲ್ಲ, ಅವರು ಬರೆದದ್ದು ಕಾವ್ಯವಲ್ಲ. ಅವರ ಶ್ರೋತೃ ವರ್ಗವು ಕಾವ್ಯಾಸ್ವಾದನ ಮಾಡುವ ಪಂಡಿತ ವರ್ಗವಲ್ಲ. ಅವರು ಮುಖ್ಯವಾಗಿ ಸಾಮಾಜಿಕ ಪ್ರಜ್ಞೆಯುಳ್ಳ ನೀತಿ ಬೋಧಕರು; ಸಮಾಜ ವಿಮರ್ಶಕರು ತಮ್ಮ 'ಅನುಭಾವ'ವನ್ನು ಜನತೆಯ ಜೊತೆ ಹಂಚಿಕೊಳ್ಳಲು ಬಯಸಿದರು. ವಚನ ವಾಙ್ಮಯ ಹುಟ್ಟಿದ್ದೇ ಸಾಮಾಜಿಕ ಆಂದೋಲನದ ಅಂಗವಾಗಿ, ಅದರ ಮಾಧ್ಯಮವಾಗಿ'. ಹೀಗೆ ವಚನಕಾರರ ಧೋರಣೆಗಳನ್ನು ವಸ್ತುನಿಷ್ಠವಾದ ಧೋರಣೆಗಳ ಮೂಲಕ ಸಾಹಿತ್ಯ ಚರಿತ್ರೆಯ ನಿಲುವುಗಳನ್ನು ಗುರುತಿಸಿಕೊಳ್ಳುತ್ತಾರೆ. 'ವೀರಗಲ್ಲುಗಳಲ್ಲಿ ಸಾಮಾನ್ಯರ ಕಥೆ ದೊರಕುತ್ತದೆ. ಸುಖ ಪಡಲು ಅವರು; ದುಡಿದು ಸಾಯಲು ಇವರು ಇದು ಅಂದಿನ ಕರ್ನಾಟಕದ ಕಥೆ'–ಹೀಗೆ ಕರ್ನಾಟಕದ ಸಾಮಾನ್ಯನನ್ನು ಪರಿಚಯ ಮಾಡಿಕೊಡುತ್ತಾರೆ.

ಒಂದು ಕಡೆ ಹನ್ನೆರಡನೆಯ ಶತಮಾನದ ಆಂದೋಲನಕ್ಕೆ ಯಾರು ಪ್ರಚೋದಕರು ಎಂಬ ಶೋಧನೆಗೆ ಹೊರಟಿದ್ದಾರೆ. ಯಾವುದೇ ಆಂದೋಲನಕ್ಕೆ ಬಾಹ್ಯ ಪ್ರಚೋದನೆ ಇದ್ದೇ ತೀರಬೇಕಿಲ್ಲ.

ಆದರಲ್ಲೂ ಸಾಮಾಜಿಕ, ರಾಜಕೀಯ ಮತ್ತು ತಾತ್ವಿಕವಾದ ಆಂದೋಲನವೊಂದಕ್ಕೆ ಸಾಮಾಜಿಕ ಸಂದರ್ಭದಲ್ಲಿ ಏರ್ಪಡುವ ಆಂತರಿಕ ಪರಸ್ಪರ ವಿರೋಧಗಳೇ ಕಾರಣವಲ್ಲದೆ ಬೇರೆ ಅಲ್ಲ. ಆದ್ದರಿಂದ ಕರ್ನಾಟಕದಲ್ಲಿ ಏರ್ಪಟ್ಟ ಈ ಆಂದೋಲನವನ್ನು ಸಾಂಸ್ಕೃತಿಕ ಸಂದರ್ಭದಲ್ಲಿಯೇ ಗುರುತಿಸುವುದು ಮುಖ್ಯ. 'ಅಂದಿನ ರಾಜಕೀಯ ಪರಿಸ್ಥಿತಿ ವಚನಕಾರರ ಆಂದೋಲನಕ್ಕೆ ಸಹಾಯಕವಾಗಿತ್ತೆಂಬುದನ್ನು ಸ್ಪಷ್ಟಪಡಿಸುವುದು ಈ ಎಲ್ಲ ವಿವರಣೆಯ ಉದ್ದೇಶ-ಇದೇ ಆಂದೋಲನ ಆರನೆಯ ವಿಕ್ರಮಾದಿತ್ಯನಂಥ ಬಲಿಷ್ಠ ಚಕ್ರವರ್ತಿಯ ಕಾಲದಲ್ಲಿ ಯಶಸ್ವಿಯಾಗುತ್ತಿತ್ತೆ ಎಂಬ ಪ್ರಶ್ನೆಗೆ ಬಹುಶಃ ಇಲ್ಲ ಎಂಬುದೇ ಉತ್ತರವಾಗುತ್ತದೆ'. ಆಂದೋಲನ ರೂಪುಗೊಳ್ಳುವುದು ರಾಜ ಬಲಿಷ್ಠನಾಗಿದ್ದಾನೆ ಅಥವಾ ಬಲಿಷ್ಠನಾಗಿಲ್ಲ ಎಂಬಷ್ಟೇ ಕಾರಣದಿಂದ ಅಲ್ಲದೇ ರಾಜತ್ವದ ಕ್ರೌರ್ಯಗಳಿಗೆ ವಿರುದ್ಧವಾಗಿ ಸಿಡಿದ ಜನತೆ ಹೇಗೆ ಸಂಘಟಿತರಾದರು ಎಂಬುದು ಮುಖ್ಯವಾದದ್ದು. ಸಾಮಾಜಿಕ ಆಂದೋಲನವೊಂದು ಜಾಗೃತಗೊಳ್ಳುವುದಕ್ಕೆ ಮುಂದಾದಾಗ ಅದಕ್ಕಿದ್ದ ಉದ್ದೇಶ ಮತ್ತು ಪರಿಣಾಮಗಳ ಸ್ವರೂಪದ ಅಧ್ಯಯನಕ್ಕೆ ದೊರಕುವ ದಾಖಲೆಗಳೇ ಮುಖ್ಯವಾದದ್ದು. ಇಂಥ ಹಿನ್ನೆಲೆಯಲ್ಲಿ ಲೇಖಕರು ಯೋಚಿಸುತ್ತಾರೆ ಮತ್ತು ಒದಗಿಬರುವ ಸಮಸ್ಯೆಗಳನ್ನು ಅವರೂ ಎದುರಿಸುತ್ತಾರೆ.

'ವಚನ'ಗಳ ಉಗಮದ ಚರ್ಚೆಯಿಂದ ಹಿಡಿದು ಅದರ ಅನೇಕ 'ಸಾಂಸ್ಕೃತಿಕ' ಸಮಸ್ಯೆಗಳನ್ನು ಪರಿಚಯ ಮಾಡಿಕೊಡುವ ಈ ಪುಸ್ತಕದಲ್ಲಿ ಡಾ॥ ಚಿದಾನಂದಮೂರ್ತಿಯವರ ಸಂಶೋಧನೆ ಮತ್ತು ಸಾಹಿತ್ಯಕ ವಿಶ್ಲೇಷಣೆ ಇವುಗಳನ್ನು ಸಮಸಮವಾಗಿ ಹೊಂದಾಣಿಕೆಗೊಳಿಸುವ ಪ್ರಯತ್ನವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಕೀರ್ತನಕಾರರು (ಎಚ್. ಎಸ್. ವೆಂಕಟೇಶಮೂರ್ತಿ) 'ಅತ್ಯಂತ ವೈಯಕ್ತಿಕ ನೆಲೆಯ ಒಂದು ಕೃತಿಯೂ ಒಂದು ಸಾಮಾಜಿಕ ಅಂಶವಾಗಿರುತ್ತದೆ'—ಎಂದು ಒಪ್ಪಿ ಹೊರಡುವ ಲೇಖಕರು (ಪು. ೭೨) ಅಲ್ಲೇ 'ಒಂದು ಕೃತಿ ಸಾಮಾಜಿಕ ಧೋರಣೆಯನ್ನು ವ್ಯಕ್ತಪಡಿಸಿದಾಗ ಮಾತ್ರ ಆ ಕೃತಿಯ ವಿಮರ್ಶೆ ಸಾಮಾಜಿಕ ಧೋರಣೆಯನ್ನು ಅವಲಂಬಿಸಬೇಕು'–ಹೀಗೆ ಹೇಳುವಲ್ಲಿ ಲೇಖಕರು ಪರಸ್ಪರ ವಿರುದ್ಧವಾದ ನೆಲೆಯಲ್ಲಿ ನಿಂತಿದ್ದಾರೆ ಎನಿಸುತ್ತದೆ. ಕೀರ್ತನಕಾರರ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಪ್ರಕಟವಾಗದೇ ಉಳಿದುಕೊಳ್ಳುವ ಈ ಸಾಹಿತ್ಯಿಕ ಚರ್ಚೆ ಕನ್ನಡ ವಿಮರ್ಶೆಯ ಕೆಲವು ಸಮಸ್ಯೆಗಳನ್ನು ಇದ್ದಕ್ಕಿದ್ದಂತೆ ಜಾರಿ ಮಾಡುತ್ತಾರೆ. 'ಒಬ್ಬ ವ್ಯಕ್ತಿ ಸ್ಥೂಲವಾಗಿ ಸಮಾಜದ ಒಂದು ಅವಿಭಾಜ್ಯ ಘಟಕವೆನ್ನುವೆವಾದರೂ ಸೂಕ್ಷ್ಮವಾಗಿ ಮತ್ತು ಗುಟ್ಟಾಗಿ ಆತ ಏಕಾಕಿ ಮತ್ತು ಒಂಟಿ ಎಂಬುದನ್ನು ಎಷ್ಟೇ ಅಪ್ರಿಯವೆನಿಸಬಹುದಾದರೂ ಮರೆಯಲಿಕ್ಕಾಗುವುದಿಲ್ಲ'-ಈ ಮಾತುಗಳ ಹಿನ್ನೆಲೆಯಲ್ಲಿ ಲೇಖಕರು ಏನು ಹೇಳುತ್ತಿದ್ದಾರೆಂಬುದು ಸ್ಪಷ್ಟವಾಗುತ್ತಿಲ್ಲ. ಏಕೆಂದರೆ ಕೀರ್ತನಕಾರರ ಕೀರ್ತನೆಗಳಲ್ಲಿ ವೈಯಕ್ತಿಕ ವೇದನೆ ಮತ್ತು ಸಾಮಾಜಿಕ ಸ್ಪಂದನಗಳನ್ನು ವಿಭಾಗಿಸಿ ವಿಶ್ಲೇಷಣೆಗೆ ಆರಿಸಿಕೊಳ್ಳುತ್ತಾರೆ. ಹೀಗಾಗಿ ಸಾಹಿತ್ಯಕ ಮೌಲ್ಯದ ವಿಶ್ಲೇಷಣೆಯ ಸಂದರ್ಭದಲ್ಲಿ ಚರ್ಚಿತವಾಗುವ ಈ ಪ್ರಶ್ನೆ ಕೀರ್ತನಕಾರರ ಅಭಿವ್ಯಕ್ತಿಯ ಚಾರಿತ್ರಿಕ ಸ್ವರೂಪವನ್ನು ಪರಿಚಯಿಸುವುದಿಲ್ಲ. ಕೇವಲ ಸಾಹಿತ್ಯಕ ಶಿಸ್ತು ಕೀರ್ತನೆಗಳ ಅಭ್ಯಾಸಕ್ಕೆ ಅನೇಕ ಅಡ್ಡಿಗಳನ್ನು ತಂದೊಡ್ಡುತ್ತವೆ ಎಂದು ಭಾವಿಸಲು ಅವಕಾಶವಿದೆ. ಭಕ್ತಿಪಂಥದ ಧೋರಣೆಗಳಿಗೂ ಸಾಮಾಜಿಕ ಸಂದರ್ಭಕ್ಕೂ ನಿಕಟವಾದ ಸಂಬಂಧ ಇದೆ. ಭಕ್ತಿ ಪಂಥದ ಮೂಲಕ ಸಾಮಾಜಿಕ, ರಾಜಕೀಯ ಮತ್ತು ತಾತ್ವಿಕ ಧೋರಣೆಗಳು ಹೇಗೆ ನಿಯಂತ್ರಣಕ್ಕೆ ಗುರಿಯಾಗುತ್ತಿದ್ದವೆಂಬುದು ಕೂಡ ಮುಖವಾದದ್ದು. ಈ ಸಾಹಿತ್ಯ ಚರಿತ್ರೆಯ ಉದ್ದೇಶದ ಹಿನ್ನೆಲೆಯಲ್ಲಿ ರಚಿತವಾಗಿರುವ ಪುಸ್ತಕ.

ಷಟ್ಪದಿ ಸಾಹಿತ್ಯ (ಕೆ. ಮರುಳಸಿದ್ದಪ್ಪ) 'ಕನ್ನಡ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಮೂರು ಕಾವ್ಯ ಸಂಪ್ರದಾಯಗಳನ್ನು ಗುರುತಿಸಬಹುದಾಗಿದೆ. ವಿದ್ವತ್ ಸಂಪ್ರದಾಯ ದೇಸಿ ಸಂಪ್ರದಾಯ ಮತ್ತು ವಾಕ್ ಸಂಪ್ರದಾಯ'–ಈ ಭೂಮಿಕೆಯಿಂದ ಷಟ್ಪದಿ ಸಾಹಿತ್ಯ ಚರಿತ್ರೆಯ ವಿಶ್ಲೇಷಣೆ ಇಲ್ಲಿ ನಡೆದಿದೆ.

ಕನ್ನಡ ನಾಡಿನ ದೇಸಿ ಸಂಪ್ರದಾಯಕ್ಕೆ ಸೇರಿದ ಷಟ್ಪದಿಯು ಸಾಮಾನ್ಯ ಜನತೆಯ ಅಗತ್ಯ ಮತ್ತು ಹಾರೈಕೆಯಿಂದ–ರೂಪುಗೊಂಡದ್ದೆಂಬ ಅಂಶವನ್ನು ಷಟ್ಪದಿ ಕೃತಿಗಳ ವಿಶ್ಲೇಷಣೆಯಿಂದ ಲೇಖಕರು ಸಮರ್ಥಿಸಿದ್ದಾರೆ. ಮಹತ್ವದ ಕವಿಗಳು ಮತ್ತು ಕಾವ್ಯಗಳನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಚರ್ಚಿಸಲಾಗಿದೆ. ಸಾಹಿತ್ಯ ಚರಿತ್ರೆಯ ತೀರಾ ಇಕ್ಕಟ್ಟಿಗೆ ಸಿಲುಕಿದ ವಿಭಜನಾಕ್ರಮವನ್ನು ಇಲ್ಲಿನ ಧೋರಣೆಗಳು ಸ್ಪಷ್ಟವಾಗಿ ವಿರೋಧಿಸುತ್ತದೆ.

ಷಟ್ಪದಿ ಪರಂಪರೆಯ ಏರಿಳಿತಗಳನ್ನು, ಕಾಲದಿಂದ ಕಾಲಕ್ಕೆ ಏರ್ಪಟ್ಟ ಪ್ರಮುಖ ನೆಲೆಗಳನ್ನು—ಮುಖ್ಯರಾದ ಷಟ್ಪದಿ ಕವಿಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಷಟ್ಪದಿ ಕವಿ ಎಂದ ಮಾತ್ರಕ್ಕೆ ಕಾವ್ಯದ ಛಂದೋಶರೀರಕ್ಕಷ್ಟೇ ಸೀಮಿತಗೊಳಿಸಿಕೊಳ್ಳದೆ ಕನ್ನಡ ಸಾಹಿತ್ಯದ ಚಾರಿತ್ರಿಕ ಸಂದರ್ಭದಲ್ಲಿ ಕವಿಗಳನ್ನು ಗುರುತಿಸಿಕೊಂಡಿರುವುದು ಪುಸ್ತಕಕ್ಕೆ ಅರ್ಥಪೂರ್ಣ ತಳಹದಿಯನ್ನು ಒದಗಿಸಿಕೊಟ್ಟಿದೆ. ಷಟ್ಪದಿ ಕವಿಗಳು-ಕಾವ್ಯಗಳ ಉದ್ದೇಶ ಮತ್ತು ಪರಿಣಾಮಗಳ ಹಿನ್ನೆಲೆಗಳಲ್ಲಿ ಕವಿಗಳ ಸಾಧನೆಯನ್ನು ಗುರುತಿಸಿಕೊಡುವ ಇಲ್ಲಿನ ವಿಶ್ಲೇಷಣೆಗೆ ದೇಸಿ ಸತ್ವದ ಗ್ರಹಿಕೆಗಳ ಮೂಲದಿಂದ ಹೊರಟಿರುವ ಆಶಯಗಳು ಮುಖ್ಯವಾದದ್ದು ಎನಿಸುತ್ತದೆ. ಛಂದೋವಿಧಾನದಲ್ಲಿ ಆಗಿರುವ ಮಾರ್ಪಾಡುಗಳು ಬದುಕಿನ ಸಂದರ್ಭದ ಜೊತೆಗೆ ಸೂಕ್ಷ್ಮವಾದ ಸಂಬಂಧವನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಗುರುತಿಸಿಕೊಂಡಿರುವ ಲೇಖಕರು ಕನ್ನಡ ಕವಿಗಳನ್ನು ನಾಡಿನ ಸಾಂಸ್ಕೃತಿಕ ಆಶಯಗಳ ಹಿನ್ನೆಲೆಯಲ್ಲಿ ನೋಡುವ ಪ್ರಯತ್ನವನ್ನು ಮಾಡುತ್ತಾರೆ. ಇಂಥ ವಿಶ್ಲೇಷಣೆಗೆ ಪೂರಕವಾಗಿ ಆರಿಸಿಕೊಂಡಿರುವ ಕಾವ್ಯ ಭಾಗಗಳು, ಪ್ರಸಂಗ, ಸನ್ನಿವೇಶ ಮತ್ತು ಸಂಘರ್ಷ ಸಂದರ್ಭಗಳ ಆಯ್ಕೆಯಲ್ಲಿಯೂ ಕೂಡ ಷಟ್ಪದೀ ಪರಂಪರೆಯ ನಿರ್ದಿಷ್ಟ ಉದ್ದೇಶಗಳನ್ನು ಪ್ರಕಟಪಡಿಸುವುದಕ್ಕಾಗಿಯೇ ಆರಿಸಿಕೊಂಡಿರುವುದು ಗಮನಿಸಬೇಕಾದ ಅಂಶವಾಗಿದೆ.

ಒಬ್ಬೊಬ್ಬ ಕವಿಯ ಚಾರಿತ್ರಿಕ ಹಿನ್ನೆಲೆ ಮತ್ತು ಆತನ ಕೃತಿಗೂ ಮತ್ತು ಕಾಲಧರ್ಮಕ್ಕೂ ನಡುವಣ ಸಂಬಂಧವನ್ನು ಚರ್ಚಿಸುವುದರ ಜೊತೆಗೆ ಕವಿಯ ಶೈಲಿ ಮತ್ತು ಉದ್ದೇಶಗಳನ್ನು ಆಯಾ ಸಂದರ್ಭದಲ್ಲಿಯೇ ಪರಿಚಯ ಮಾಡಿಕೊಡುತ್ತ ಹೋಗುತ್ತಾರೆ. ಕನ್ನಡ ಕವಿಗಳ ಇತಿಮಿತಿಗಳನ್ನು ಕುರಿತ ವಿಮರ್ಶನ ನಿಲುವುಗಳು ಅಲ್ಲಲ್ಲೇ ಚರ್ಚೆಗೆ ಗುರಿಯಾಗುತ್ತದೆ. ಷಟ್ಪದಿ ಸಾಹಿತ್ಯ ಜನತೆಯ ಆಶೋತ್ತರಗಳ ಹಿನ್ನೆಲೆಯಲ್ಲಿ ರೂಪುಗೊಂಡದ್ದೆಂಬ ಲೇಖಕರ ದೃಷ್ಟಿಗೆ ಪುಸ್ತಕದ ಉದ್ದಕ್ಕೂ ಬೆಳೆಯುವ ನಿರೂಪಣಾಕ್ರಮ ಸ್ಪಷ್ಟವಾದ ಪುರಾವೆಯನ್ನು ಒದಗಿಸುತ್ತವೆ. ಕಾವ್ಯಗಳಲ್ಲಿ ಕಂಡು ಬರುವ ವರ್ಣನೆಗಳು ಮತ್ತು ಘಟನಾವಳಿಗಳು ಕವಿಯು ಜೀವಿಸಿದ ಕಾಲದ ಅನುಭವದಿಂದ ಪ್ರಕಟಗೊಂಡದ್ದೆಂಬ ನಿಲುವಿನಲ್ಲಿ ನಮ್ಮ ಕವಿಗಳ ವಿಶ್ಲೇಷಣೆ ನಡೆಯುತ್ತದೆ. ರಾಘವಾಂಕನ ನಾಟ್ಯ ಪ್ರತಿಭೆ, ಕುಮಾರವ್ಯಾಸನ ಕಾವ್ಯಕ್ಕೆ ಒದಗಿಬಂದಿರುವ ಭಕ್ತಿ ಪರಂಪರೆಯ ಒತ್ತಾಸೆ, ಲಕ್ಷ್ಮೀಶನ ಕಥನ ಸ್ವರೂಪ–ಈ ಹಿನ್ನೆಲೆಯಲ್ಲಿ ಕವಿಗಳ ಮೌಲಿಕ ಅಭ್ಯಾಸವು ಸೇರುತ್ತದೆ.

ಷಟ್ಪದಿ ಪರಂಪರೆಯನ್ನು ಕನ್ನಡ ಸಾಹಿತ್ಯ ಮಾರ್ಗದಲ್ಲಿ ಏರ್ಪಟ್ಟ ಒಂದು ಸಾಹಿತ್ಯ ಸ್ವರೂಪ ಎಂಬುದನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ನಡೆಸಲಾಗಿರುವ ಚರ್ಚೆಯನ್ನು ಇಲ್ಲಿ ಗಮನಿಸಬಹುದು, ಅದೆಂದರೆ ಹನ್ನೆರಡನೆಯ ಶತಮಾನದ ಶಿವಶರಣರ ವಚನಗಳು ಮುಂದಿನ ಕನ್ನಡ ಕಾವ್ಯ ಪರಂಪರೆಯ ಮೇಲೆ ಉಂಟುಮಾಡಿದ ಗಂಭೀರವಾದ ಪ್ರಭಾವವನ್ನು ಷಟ್ಪದಿ ಸಾಹಿತ್ಯಕ್ಕೆ ಹಿನ್ನೆಲೆಯನ್ನಾಗಿ ಮಾಡಿಕೊಂಡಿರುವುದನ್ನು ಇಲ್ಲಿ ಕಾಣಬಹುದು. 'ಸಮಾಜದ ದಲಿತ ವರ್ಗವನ್ನು ತನ್ನಲ್ಲಿ ಹುದುಕಿಕೊಂಡು ಧನ್ಯವಾಗ ಹೊರಟ ಈ ಧರ್ಮ ಜನ ಸಾಮಾನ್ಯರಿಗೆ ಮುಟ್ಟುವ ಪರಿಭಾಷೆಯನ್ನು ಕಲ್ಪಿಸಿಕೊಟ್ಟಿದೆ.' ದೇಸೀ ಛಂದಸ್ಸಿನ ಪುನರುಜ್ಜೀವನಕ್ಕೆ ಒದಗಿಬಂದ ಐತಿಹಾಸಿಕ ಸಂದರ್ಭವನ್ನು ವಿಶ್ಲೇಷಿಸಿಕೊಂಡಿರುವುದು ಸಾಹಿತ್ಯ ಚರಿತ್ರೆಯ ಉದ್ದೇಶದ ದೃಷ್ಟಿಯಿಂದ ಮಹತ್ವದ್ದಾಗುತ್ತದೆ.

ಕೆಲವು ಷಟ್ಪದಿಕಾರರು ಮತ್ತು ಮುಕ್ತಾಯ ಎಂಬ ಭಾಗ ಇದ್ದಕ್ಕಿದ್ದಂತೆ ಸಂಗ್ರಹಶೀಲವಾಗಿದೆ. ಪುಸ್ತಕದ ಆರಂಭಕ್ಕೆ ಕಾಣಿಸಿಕೊಂಡ ಚಾರಿತ್ರಿಕ ಹಿನ್ನೆಲೆಯ ದೃಷ್ಟಿ ಕೊನೆಯ ಹಂತದಲ್ಲಿ ಸರಳಗೊಳ್ಳುತ್ತದೆ.

ಸಾಂಗತ್ಯ ಕವಿಗಳು (ಹಂ. ಪ. ನಾಗರಾಜಯ್ಯ) ಸಾಹಿತ್ಯ ಚರಿತ್ರೆಯ ಕಕ್ಷೆಯಲ್ಲಿ ಈ ಪುಸ್ತಕವನ್ನು ವಿಮರ್ಶಿಸಲು ಅನೇಕ ತೊಡಕುಗಳಿವೆ. ವಿಭಾಗ ಕ್ರಮದಲ್ಲಿಯೇ ಪ್ರಮುಖ ದೋಷವಿದೆ. ಸಾಂಗತ್ಯ ಕವಿಗಳನ್ನು ಜಾತಿವಾರು ವಿಂಗಡಿಸಲಾಗಿದೆ.

ಸಾಂಗತ್ಯದ ಕುಂದನ್ನು ಕುರಿತು ಲೇಖಕರು ಹೀಗೆ ಬರೆಯುತ್ತಾರೆ: 'ಸುಕುಮಾರ ಭಾವಗಳನ್ನು ಸಮರ್ಥವಾಗಿ ವ್ಯಂಜಿಸುವಂತೆ ವೀರ ರೌದ್ರಗಳ ಗುರುಭಾರವನ್ನು ಹೊರಲಾರದೆಂದು ತೋರುತ್ತದೆ. ಶಕ್ತನಾದ ಕವಿ ಈ ಛಂದಸ್ಸಿನಲ್ಲೂ ಶಕ್ತಿ ಉಕ್ಕುವಂತೆ, ವೀರ ಹೊಮ್ಮುವಂತೆ, ರೌದ್ರ ಅನುಭವ ವೇದ್ಯವಾಗುವಂತೆ ಬರೆಯಬಹುದೇನೊ! ಅಂಥ ಪ್ರಯತ್ನ ಹಡಗಿನಲ್ಲಿ ದಾಟಬೇಕಾದ ಕಡಲನ್ನು ಹರಿಗೋಲಿನಲ್ಲಿ ದಾಟಲು ಹೊರಟಂತೆ ಎಂಬ ಶಂಕೆಯಿದೆ'—ಒಂದು ಛಂದೋವಿಧಾನದ ಬಗೆಗೆ ಲೇಖಕರ ನಿಲುವುಗಳು ಅತ್ಯಂತ ಸಾಮಾನ್ಯೀಕರಿಸಿದ ನೆಲೆಯಿಂದ ವಿವರಣೆಗೆ ಹೊರಟಿರುವುದರಿಂದ ಅನೇಕ ಗೊಂದಲಗಳಿಗೆ ಪಕ್ಕಾಗಿದೆ. ಒಂದೇ ನೆಲೆಯಲ್ಲಿ ನಿಂತು ಎರಡೂ ರೀತಿಯ (ಸಾಧ್ಯಾಸಾಧ್ಯತೆಗಳು) ಅಭಿಪ್ರಾಯಗಳನ್ನು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ನಿರೂಪಿಸುವುದು ಚರಿತ್ರಕಾರನ ಮಾರ್ಗವಾಗಲಾರದು.

ಸಾಂಗತ್ಯ ಒಳಗೊಳ್ಳುವ ವಸ್ತುವಿನ ಬಗೆಗೆ ಲೇಖಕರ ದೃಷ್ಟಿ ಹೀಗಿದೆ: "ಸಾಂಗತ್ಯ ಕಾವ್ಯಗಳ ವಸ್ತು ಬಹುವಾಗಿ ಐತಿಹಾಸಿಕ-ಕಾಲ್ಪನಿಕ-ಧಾರ್ಮಿಕ ನಿರೂಪಣೆ ಆಗಿರುತ್ತದೆ. ಅದು ಜಿನನ ಅಥವಾ ಜಿನಭಕ್ತನ ಮಹಿಮೆಯ ಸಂಗತಿ ಆಗಿರಬಹುದು, ಶಿವನ ಅಥವಾ ಶಿವಭಕ್ತನ ಪವಾಡವಾಗಿರಬಹುದು. ವಿಷ್ಣುವಿನ ಅಥವಾ ವಿಷ್ಣುಭಕ್ತನ ಲೀಲೆಯಾಗಿರಬಹುದು. ಕವಿಗಳ ಧರ್ಮ ಬೇರೆಯಾದರೂ ಅವರೆಲ್ಲರ ಮನೋಧರ್ಮ ಒಂದೆ ಆಗಿರುವುದು, ಮತ ಬೇರೆಯಾದರೂ ಅಭಿಮತ ಒಂದೇ ಆಗಿರುವುದು. ದಾರಿ ಬೇರೆಯಾದರೂ ಗುರಿ ಒಂದೇ ಆಗಿರುವುದು ಕಂಡುಬರುತ್ತದೆ. ಅದೇ ಸತ್ಯಂ ಶಿವಂ ಸುಂದರಂ; ಸತ್ಯದ ಸಾಕ್ಷಾತ್ಕಾರ, ಸೌಂದರ್ಯದ ಅನ್ವೇಷಣೆ, ಶುಭದ ಸೃಷ್ಟಿ."

ಚರಿತ್ರೆಯ ಬರವಣಿಗೆ ಎಷ್ಟು ಸಲೀಸಾಗಬಹುದು, ಸಾರಾಸಗಟಾಗಬಲ್ಲುದು ಎಂಬುದಕ್ಕೆ ಇದು ಒಂದು ನಿದರ್ಶನ ಅಷ್ಟೆ. ಇಂಥ ಬರವಣಿಗೆ ಪುಸ್ತಕದ ತುಂಬಾ ಕಿಕ್ಕಿರಿದಿದೆ. 'ಪಾತ್ರ ಸೃಷ್ಟಿಯಲ್ಲಿ ಸನ್ನಿವೇಶ ನಿರ್ಮಾಣದಲ್ಲಿ ಕವಿಶಕ್ತಿ ಪರಿಮಳಿಸಿದೆ', 'ಇಲ್ಲಿನ ಸಮುದ್ರ ವರ್ಣನೆಯಂತೂ ಸಹಜತೆಯಲ್ಲಿ ಅದ್ದಿ ತೆಗೆದಂತೆ ಹಿತವಾಗಿದೆ.' 'ಕನ್ನಡ ಕವಿಗಳಲ್ಲಿ ನಾದಲೋಲ, ಉಪಮಾಲೋಲ, ರೂಪಕಸಾಮ್ರಾಜ್ಯ ಚಕ್ರವರ್ತಿ' ಮೊದಲಾದ ಬಿರುದುಗಳಲ್ಲಿ ಒಬ್ಬೊಬ್ಬ ಹಿರಿಯ ಕವಿಗೆ ಒಂದೊಂದು ಸಂದಿದೆ, ಆದರೆ ರತ್ನಾಕರವರ್ಣಿಗೆ ಮಾತ್ರ ಇವೆಲ್ಲವೂ ಒಟ್ಟಿಗೆ ಸಲ್ಲುತ್ತವೆ', 'ಪಂಪನ ಆದಿಪುರಾಣದಲ್ಲಿ ಭರತ ಆನುಷಂಗಿಕವಾಗಿಬಿಡುತ್ತಾನೆ, ಬಾಹುಬಲಿಯ ಹೈಮಾಚಲ ವ್ಯಕ್ತಿತ್ವದ ಮುಂದೆ'. ಕಂಸಗಳಲ್ಲಿ ಲೇಖಕರು ಸೂಚಿಸುವ (E.C.), ಸಂಖ್ಯೆಗಳನ್ನು (ಪದ್ಯದ, ಆಶ್ವಾಸದ) ನಿರ್ದೇಶಿಸುವಾಗ ಗೊಂದಲ, ಇವುಗಳಿಂದ ಪುಸ್ತಕ 'ಟಿಪ್ಪಣಿ' ಗಳ ಸ್ವರೂಪವನ್ನು ಪಡೆದುಕೊಂಡಿದೆ. ಸಾಂಗತ್ಯ ಕವಿಗಳ ಕಾವ್ಯಗಳನ್ನು ಕುರಿತು ನಡೆದಿರುವ ಯಾವ ಚರ್ಚೆಯೂ ಇಲ್ಲಿ ಇಲ್ಲ.

ಚರಿತ್ರೆಯ ರೂಪುರೇಷೆಗಳ ಬಗೆಗೆ ಸ್ಪಷ್ಟವಾದ ಕಲ್ಪನೆಯಿಲ್ಲದೆ ಸ್ವೇಚ್ಛೆಯಾದ ಈ 'ಕೃತಿ'ಯ ಮೂಲಕ ಸಾಂಗತ್ಯ ಕವಿಗಳ ಧೋರಣೆ ಮತ್ತು ಪರಿಣಾಮದ ಸ್ವರೂಪವನ್ನು ಕಾಣಲಾಗುವುದಿಲ್ಲ. ಮತೀಯ ದೃಷ್ಟಿಯಿಂದ ನಿರ್ಮಿಸಿರುವ ಖಂಡನೆ-ಮಂಡನೆಗಳು ಹೇರಳವಾಗಿ ಕಾಣಸಿಕ್ಕುತ್ತದೆ. ಸಾಂಗತ್ಯದ ಇಳಿಗಾಲದ ಬಗ್ಗೆ ಟಿಪ್ಪಣಿಸುತ್ತಾ '೧೮-೧೯ ನೆಯ ಶತಮಾನಗಳಲ್ಲಿ

ಮತ್ತೆ ಇದರ ಇಳಿಗಾಲವನ್ನು ಕಾಣುತ್ತೇವೆ, ಸಮರ್ಥ ಜೈನಕವಿಗಳ ಅಭಾವವೇ ಇದಕ್ಕೆ ಕಾರಣ' ಇಂಥ ನಿಲುವುಗಳು ಸಾಹಿತ್ಯ ಚರಿತ್ರೆಯಲ್ಲಿ ಹೇಗೆ ಅಂಗೀಕಾರಾರ್ಹವೋ ತಿಳಿಯದು.

ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ (ಕಾಳೇಗೌಡ ನಾಗವಾರ) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆಯ ಉದ್ದೇಶವನ್ನು ಈ ಕೃತಿ ಸ್ಪಷ್ಟವಾಗಿ ಗುರುತಿಸಿಕೊಂಡಿದೆ. ಸಾಹಿತ್ಯ ಚರಿತ್ರೆಯನ್ನು ನಿರೂಪಿಸುವ ಈ ಪುಸ್ತಕದ ಕ್ರಮ ಈ ಖಚಿತವಾದ ಕೇಂದ್ರದಿಂದ ಹೊರಡುತ್ತದೆ. ತ್ರಿಪದಿ ಕನ್ನಡ ಜನತೆಯ ಅತ್ಯಂತ ಪ್ರೀತಿಯ ಪುಟ್ಟು ಎಂದು ಭಾವಿಸಿ ನಾಡ ಜನಪದ ತಾನು ಕಂಡ ಬದುಕನ್ನು ಹೇಗೆ ಕಂಡುಕೊಂಡಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಜನತಾ ಕವಿ ಸರ್ವಜ್ಞನಲ್ಲಿ ತ್ರಿಪದಿ ಹೇಗೆ ಅಭಿವ್ಯಕ್ತಿಯನ್ನು ಪಡೆದುಕೊಂಡಿತೆಂಬುದಕ್ಕೆ ಒಂದು ಬಗೆಯ ಪೂರ್ವ ಪೀಠಿಕೆಯನ್ನು ಸಿದ್ಧಪಡಿಸಿದೆ. ಸರ್ವಜ್ಞನ ತ್ರಿಪದಿಗಳ ಬಗೆಗೆ ನಡೆಯುವ ಅರ್ಥಪೂರ್ಣ ವಿವೇಚನೆ ಯಾವಾಗಲೂ ಕುತೂಹಲ ದಾಯಕವಾದದ್ದು. ಸರ್ವಜ್ಞನಿಗೆ ಹಿನ್ನೆಲೆಗೆ ಇದ್ದ ಕನ್ನಡ ನಾಡಿನ ಸಾಂಸ್ಕೃತಿಕ ಪರಿಸ್ಥಿತಿ, ಜೀವನ ಮೌಲ್ಯ ಮತ್ತು ಸಾಮಾಜಿಕ ಪ್ರಶ್ನೆಗಳು—ಈ ಮೂಲಕ ಏರ್ಪಟ್ಟ ಸಾಹಿತ್ಯದ ಅವಸ್ಥಾಂತರ—ಇವು ಗಳನ್ನು ಸರ್ವಜ್ಞ ಗ್ರಹಿಸಿದ ರೀತಿಯನ್ನು ಇಲ್ಲಿ ವಿವೇಚಿಸಲಾಗಿದೆ. ಒಬ್ಬ ಕವಿಯನ್ನು ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಚರ್ಚಿಸಲು ತಕ್ಕ ನೆಲೆ ಇದೆಂಬುದರ ಬಗೆಗೆ ಹೆಚ್ಚು ಚರ್ಚೆ ಇರಲಾರದೆಂದು ಕಾಣುತ್ತದೆ. ತನ್ನ ಸಮಾಜಕ್ಕೆ ಸಂಬಂಧಿಸಿದ ಆಲೋಚನೆಗಳನ್ನು ಹೇಳುವಾಗ ಸರ್ವಜ್ಞ ಹೇಗೆ ತುಂಬು ಎಚ್ಚರವನ್ನು ತೋರಿದ್ದಾನೆಂಬುದನ್ನು ಅವನ ವಚನಗಳನ್ನು ಆಧಾರವನ್ನಾಗಿರಿಸಿಕೊಂಡು ಚರ್ಚೆ ನಡೆದಿದೆ. ನಾಡಿನ ಪ್ರಾದೇಶಿಕ ಸತ್ವವನ್ನು ತನ್ನ ಆಲೋಚನಾ ವಿಧಾನಕ್ಕೆ ಪೂರಕವಾಗಿ ಬಳಸಿಕೊಳ್ಳುತ್ತಾನೆಂಬುದನ್ನು ಅವನ ಆಸಕ್ತಿಗಳ ನೆಲೆಯಿಂದ ಚರ್ಚಿಸಲಾಗಿದೆ. ದೇವರು-ಭಕ್ತ-ಮೌಢ್ಯ ಈ ಹಿನ್ನೆಲೆಯಲ್ಲಿ ನಡೆಯುವ ಸರ್ವಜ್ಞನ ಚರ್ಚೆ ಮತ್ತು ಆ ಚರ್ಚೆಯಲ್ಲಿ ಒಂದಕ್ಕೊಂದು ವಿರೋಧವಾಗಿರುವ ಅಂಶವನ್ನು ತೋರಿಸುತ್ತಲೇ ಸರ್ವಜ್ಞನ ವಚನಗಳ ಗ್ರಂಥ ಸಂಪಾದನೆಯ ಸಮಸ್ಯೆಗಳ ಕಡೆಗೆ ಬೆಳಕು ಚೆಲ್ಲಿದ್ದಾರೆ. ಓದು-ಬರೆಹಗಳಿಲ್ಲದ ಸಮಾಜದ ಸಂದರ್ಭದಲ್ಲಿ ವಚನ ರಚನೆಮಾಡಿದ ಸರ್ವಜ್ಞನ ವಚನಗಳನ್ನು ಜನತಾ ಕವಿಯ ರಚನೆಗಳೆಂದು ಗುರುತಿಸಿಕೊಂಡಿರುವುದು ಮಹತ್ವದ ವಿಶ್ಲೇಷಣೆಗೆ ಅವಕಾಶವನ್ನು ಮಾಡಿಕೊಟ್ಟಿದೆ.

'ರಗಳೆ'ಯನ್ನು ಛಂದಸ್ಸಿನ ಒಂದು ವಿಧಾನ ಎನ್ನುವುದಕ್ಕಿಂತ ಹೆಚ್ಚಿನ ಅರ್ಥದಲ್ಲಿ ನಮ್ಮ ಸಾಹಿತ್ಯ ಚರಿತ್ರೆ ಭಾವಿಸುತ್ತದೆ. ರಗಳೆಯ ಹಿಂದೆ ಇದ್ದ 'ಮಾರ್ಗದ' ಸ್ಥಿತಿಗೆ ಪ್ರತಿಭಟನಾತ್ಮಕವಾಗಿ ಏರ್ಪಟ್ಟ ಈ ಧಾಟಿ ಸಾಮಾಜಿಕ ಕಾರಣಗಳಿಂದ ಉತ್ಪನ್ನವಾದದ್ದು. ಈ ನೆಲೆಯಿಂದ ಬೆಳೆಯುವ ಈ ಭಾಗ ಹರಿಹರನ ಹೋರಾಟದ ಸ್ವರೂಪವನ್ನು ಪರಿಚಯಮಾಡಿಕೊಟ್ಟಿದೆ. ಕನ್ನಡ ಕಾವ್ಯದ ಬದಲಾದ ಗತಿ-ಸ್ಥಿತಿಗೂ ಭಕ್ತಿಯ ನಿಲುವುಗಳಿಗೂ ನಿಕಟ ಸಂಬಂಧವಿದೆ. ಈ ಸಂಬಂಧದ ಚರ್ಚೆ ಇನ್ನೂ ಹೆಚ್ಚು ದೃಢವಾದ ನೆಲೆಯಿಂದ ಚರ್ಚೆಗೆ ಗುರಿಯಾಗಬೇಕಿತ್ತು ಎನ್ನಿಸುತ್ತದೆ. ಭಕ್ತಿಪಂಥ ಮತ್ತು ಸಾಮಾಜಿಕ ಸ್ವರೂಪ, ಕಾವ್ಯದ ಅಭಿವ್ಯಕ್ತಿ ವಿಧಾನ ಮತ್ತು ಆಲೋಚನಾ ವಿಧಾನದ ಸಮಸ್ಯೆಗೆ ಸಂಬಂಧಿಸಿದ್ದಾಗುವುದರಿಂದ ಇಂಥ ಚರ್ಚೆ ಮೌಲಿಕವಾದ್ದಗುತ್ತದೆ. ಹರಿಹರನಿಗೆ ಹಿಡಿದ ಭಕ್ತಿಯ ಹುಚ್ಚು ವ್ಯಕ್ತಿನಿಷ್ಠವಾದದ್ದೋ, ಪಂಥನಿಷ್ಠವಾದದ್ದೊ ಎಂಬುದು ಮುಖ್ಯವಾದ ಚರ್ಚೆ. ಇಂಥ ಚರ್ಚೆಯನ್ನು ಲೋಕಾಭಿರಾಮದ ಧಾಟಿಯಲ್ಲಿ ಲೇಖಕರು ಮಾಡಿಕೊಡುವುದರಿಂದ ಸಮಸ್ಯೆಯನ್ನು ಸರಳಗೊಳಿಸಿದಂತೆ ಆಗಿದೆ.

ಜನಪದ ಸಾಹಿತ್ಯದ ವಿಶ್ಲೇಷಣೆ ಮಾನವ ಜನಾಂಗಕ್ಕೆ ಸಂಬಂಧಿಸಿದ ಹಲವು ಮೂಲ ಆಧಾರಗಳ ಗಣಿ ಎಂಬುದರ ಹಿನ್ನೆಲೆಯಲ್ಲಿ ನಡೆದಿದೆ. ಬದುಕಿನ ಭಾವ ಸಂಬಂಧಗಳ ಸೂಕ್ಷ್ಮವಾದ ಒಳನೋಟಗಳು ಜನಪದ ಸಾಹಿತ್ಯದಲ್ಲಿ ವ್ಯಕ್ತವಾಗಿರುವುದನ್ನು ವಿಪುಲವಾದ ಉದಾಹರಣೆಗಳೊಂದಿಗೆ ನಿರೂಪಣೆಗೆ ಗುರಿಯಾಗಿದೆ. ಜನಪದದಲ್ಲಿ ವ್ಯಕ್ತಗೊಂಡಿರುವ ಸೂಕ್ಷ್ಮ ಪ್ರತಿಭಟನೆಯ ಸ್ವರೂಪ ವನ್ನು ಹೇಗೆ ಗುರುತಿಸಿಕೊಳ್ಳಬೇಕೆಂಬುದರ ಬಗ್ಗೆ ನಿರ್ದೇಶನವಿದೆ. 'ಜಾನಪದ ಅಧ್ಯಯನ' ಎಂಬ

ಭಾಗದಲ್ಲಿ-ಜಾನಪದದ ಅಧ್ಯಯನದ ಸಮಸ್ಯೆಗಳ ಬಗೆಗೆ ಲೇಖಕರ ಧೋರಣೆ ಸ್ಪಷ್ಟವಾಗುವುದಿಲ್ಲ. ಅಧ್ಯಯನದಿಂದ ಲೇಖಕರು ಮಹತ್ತ್ವದ ಫಲಗಳನ್ನು ನಿರೀಕ್ಷಿಸುತ್ತಾರೆ. ಆದರೆ ಅದಕ್ಕೆ ಕಾರಣವಾಗುವ ವೈಜ್ಞಾನಿಕ ಸ್ವರೂಪದ ಬಗೆಗೆ ಯಾವ ಸೂಚನೆಗಳೂ ಇಲ್ಲ. ಅಂಥ ಅಧ್ಯಯನದ ನಿಲುವುಗಳ ಬಗೆಗೆ ಮಾಹಿತಿ ಒದಗಿಸಬಹುದಿತ್ತು.

ಹೊಸಗನ್ನಡ ಸಾಹಿತ್ಯ (ಎಲ್. ಎಸ್. ಶೇಷಗಿರಿರಾವ್) ಆಧುನಿಕ ಕನ್ನಡ ಸಾಹಿತ್ಯವನ್ನು ಚಾರಿತ್ರಿಕವಾಗಿ ಪರಿಚಯ ಮಾಡಿಕೊಡುವ ಈ ಪುಸ್ತಕ ಒಂದು ದೀರ್ಘ ವರದಿಯ ರೂಪದಲ್ಲಿದೆ. ಹೊಸಗನ್ನಡ ಸಾಹಿತ್ಯ ಸಮೀಕ್ಷೆಗೆ ಹಿನ್ನಲೆಯಾಗಿ ಪ್ರಾಚೀನ ಕನ್ನಡ ಸಾಹಿತ್ಯವನ್ನು ಲೇಖಕರು ಗುರುತಿಸಿಕೊಳ್ಳುವುದೇ ತಮಾಷೆಯಾಗಿದೆ. 'ಪಂಪನ ಕಾಲದಿಂದ ಕನ್ನಡ ಸಾಹಿತ್ಯದಲ್ಲಿ ನಾವು ಕಾಣುವುದು, ಪರಮಾತ್ಮ-ಸಾವಿನಾಚೆಗಿನ ಬಾಳು ಇವುಗಳ ಹಿನ್ನಲೆಯಲ್ಲೇ ವಿಶ್ವದಲ್ಲಿ ಮನುಷ್ಯನ ಸ್ಥಾನ, ಅವನ ಬಾಳಿನ ಅರ್ಥ ಇವುಗಳನ್ನು ನಿರ್ಣಯಿಸುವ ಮನೋಧರ್ಮ' ಈ ಮಾತುಗಳನ್ನು ಹೇಗೆ ಗ್ರಹಿಸಬೇಕೋ ಅರ್ಥವಾಗುವುದಿಲ್ಲ. ಕನ್ನಡ ಸಮಾಜದ ವ್ಯವಸ್ಥೆ ಮತ್ತು ಸಾಹಿತ್ಯಕ ಸಂಬಂಧಗಳ ಐತಿಹಾಸಿಕವಾದ ಕ್ರಿಯಾ ಸಂಬಂಧವನ್ನು ಲೇಖಕರು ಸರಳಗೊಳಿಸಿ ನೋಡಿರುವುದ ರಿಂದ ಇಂಥ ತೀರ್ಮಾನಗಳು ಏರ್ಪಟ್ಟಿವೆ.

ಹೊಸಗನ್ನಡ ಸಾಹಿತ್ಯದ ರೂಪ ಸಂಬಂಧಿ ವಿಚಾರಗಳು ಹೊಸವರ್ಗದ ಆಶೋತ್ತರಗಳ ಹಿನ್ನೆಲೆಯಲ್ಲಿ ರೂಪುಗೊಳ್ಳಬೇಕಿತ್ತು. ವಿಮರ್ಶೆಯ ಪರಿಕಲ್ಪನೆಗಳು ನಿರ್ದಿಷ್ಟ ಗುರಿ ಇಲ್ಲದೆ ಇಡೀ ಪುಸ್ತಕದ ತುಂಬಾ ಹರಡಿಕೊಂಡಿದೆ. ಕೃತಿಗಳ ಪಟ್ಟಿ, ಸ್ಮರಣೆ, ಒಂದೊಂದೇ ಸಾಲಿನಲ್ಲಿ ಒಬ್ಬೊಬ್ಬ ಲೇಖಕರ ಪರಿಚಯ ಅನೇಕ ಕಡೆಗಳಲ್ಲಿ ಬೆಳೆದಿದೆ. 'ಪತ್ರಿಕಾ ವಿಮರ್ಶೆ'ಯಂತೆ ಸಾಹಿತ್ಯ ಚರಿತ್ರೆಯ ವಿವರಣೆಗಳು ಬೆಳೆಯುತ್ತದೆ. ಸಾಹಿತ್ಯದ ಭಾಷೆಯ ಬದಲಾವಣೆ ಮತ್ತು ಸಂವೇದನೆಯ ಬದಲಾವಣೆಗೆ ಸಾಮಾಜಿಕ ಒತ್ತಡಗಳು ಕಾರಣವಾದದ್ದರ ವಿಶ್ಲೇಷಣೆ ಕಾಣಬರುವುದಿಲ್ಲ. ಉದಾರ ವಾದೀ ಧೋರಣೆಗಳಿಂದ ಕೂಡಿದ ಈ ಬರಹ ನಮ್ಮ ಸಾಹಿತ್ಯ ಸಂದರ್ಭದಲ್ಲಿ ಕಾಣಿಸಿಕೊಂಡಿರುವ ಸಾಂಸ್ಕೃತಿಕ ಒಳನೋಟಗಳನ್ನು ಪ್ರಕಟಪಡಿಸುವುದರಲ್ಲಿ ಅಸಮರ್ಥವಾಗಿದೆ.

ಹೊಸಗನ್ನಡದ ಅರ್ಧಶತಮಾನಕ್ಕೂ ಮೀರಿದ ಸಾಹಿತ್ಯವನ್ನು, ಸಂಕ್ಷಿಪ್ತವಾಗಿ ಹಿಡಿದಿರಿಸು ವುದು ತುಂಬ ಪ್ರಯಾಸದ ಕೆಲಸ; ಆದುದರಿಂದಲೇ, ಶ್ರೀ ಶೇಷಗಿರಿರಾಯರು, ಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು, ಇಡೀ ಹೊಸಗನ್ನಡ ಸಾಹಿತ್ಯವನ್ನು ತಕ್ಕಮಟ್ಟಿಗೆ ಪರಿಚಯ ಮಾಡಿ ಕೊಡುವ ಉದ್ದೇಶದಲ್ಲಿ ಸಫಲರಾಗಿದ್ದಾರೆ.

ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯ [ಸಂ : ಶಂಕರ ಪಾಟೀಲ] 'ಕರ್ಮವೀರ' ವಾರಪತ್ರಿಕೆಯ ಸುವರ್ಣಮಹೋತ್ಸವದ ಅಂಗವಾಗಿ ನಡೆದ ವಿಚಾರಗೋಷ್ಠಿಯಲ್ಲಿ ಓದಿದ ಪ್ರಬಂಧಗಳು ಇಲ್ಲಿ ಸಂಕಲನಗೊಂಡಿವೆ. 'ಆಧುನಿಕ ರಾಷ್ಟ್ರೀಯತೆಯ ಗುಣಧರ್ಮ' [ಡಾ. ಆರ್. ವಾಯ್. ಧಾರವಾಡಕರ] ವೆಂಬ ಪ್ರಬಂಧ 'ರಾಷ್ಟ್ರೀಯತೆ'ಯ ಪರಿಕಲ್ಪನೆ ಹೇಗೆ ಇತ್ತೀಚಿನ ಬೆಳವಣಿಗೆ ಯೆಂಬುದನ್ನು ತೋರಿಸಿದ್ದಾರೆ. ಈಗಿನ ಕಾಲದಲ್ಲಿ 'ರಾಷ್ಟ್ರೀಯತೆ'ಯೂ ತನ್ನ ವ್ಯಾಪ್ತಿಯನ್ನು ಕಡಿಮೆಮಾಡಿಕೊಳ್ಳಬೇಕೆಂದು ವಾದಿಸಿದ್ದಾರೆ. ಆದರೆ ಮುಂದಿನ ಪ್ರಬಂಧ 'ರಾಷ್ಟ್ರೀಯತೆಯ ಐತಿಹಾಸಿಕತೆ' [ಡಾ. ಶ್ರೀನಿವಾಸ ರಿತ್ತಿ] ಇದು ತುಂಬಾ ಹಳೆಯ ಪರಿಕಲ್ಪನೆಯೆಂದು ವಾದಿಸು ತ್ತಾರೆ. ಅಲ್ಲಿ ಅವರು ಬಳಸಿರುವ ಪಟ್ಟುಗಳು ಹಳೆಯವು. 'ವಿವಿಧತೆಯಲ್ಲಿ ಏಕತೆ' ಎಂಬುದೂ ಅವುಗಳಲ್ಲಿ ಒಂದು. ರಾಷ್ಟ್ರದ ಕಲ್ಪನೆಗೂ ರಾಷ್ಟ್ರೀಯತೆಯ ಕಲ್ಪನೆಗೂ ವ್ಯತ್ಯಾಸವೇ ಇಲ್ಲವೆಂಬಂತೆ ವಾದಿಸುತ್ತಾರೆ. ಭೂಮಿಯ ಬಗೆಗೆ, ನದಿಯ ಬಗೆಗೆ ಪ್ರೇಮವನ್ನು ಹೇಳುವ ಸಂಸ್ಕೃತ ಶ್ಲೋಕ ಗಳನ್ನು ಉದಾಹರಿಸಿ ರಾಷ್ಟ್ರೀಯತೆಯ ಪ್ರಾಚೀನತೆಯನ್ನು ಸಮರ್ಥಿಸುತ್ತಾರೆ. ತರ್ಕಕ್ಕಾಗಿ, ಭೂಮಿಯಮೇಲೆ ಇರುವ ಜನಪದ ತ್ರಿಪದಿಯೊಂದನ್ನು ಉಲ್ಲೇಖಿಸಿ ಅಂತರರಾಷ್ಟ್ರೀಯತೆಯ ಕಲ್ಪನೆಯ ಬೇರುಗಳನ್ನು ಗುರುತಿಸ ಹೊರಟರೆ ಏನಾಗಬಹುದು? ಈ ಪ್ರಬಂಧದ ಗೊಂದಲ

ಗಳನ್ನು ನಿವಾರಿಸುವಂತಿದೆ ಆ ಮುಂದಿನ ಲೇಖನ 'ಉಪರಾಷ್ಟ್ರೀಯತೆ : ಕನ್ನಡ ಸಾಹಿತ್ಯದಲ್ಲಿ [ಡಾ. ಜಿ. ಎಸ್. ಶಿವರುದ್ರಪ್ಪ]. ರಾಷ್ಟ್ರದ ಕಲ್ಪನೆ ಇದ್ದರೂ ಪ್ರಾಂತೀಯ ಸಂಸ್ಕೃತಿಗಳ ಭಿನ್ನತೆಯಿಂದ 'ಪ್ರಾಂತೀಯತೆ' ಉಂಟಾಯಿತು. ಆದನ್ನೇ 'ಉಪರಾಷ್ಟ್ರೀಯತೆ' ಎಂದು ಕರೆಯಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಈ 'ಉಪರಾಷ್ಟ್ರೀಯತೆ'ಯ ಕಲ್ಪನೆಯ ಬೆಳವಣಿಗೆಯನ್ನು ಗುರುತಿಸುವ ಚೊಕ್ಕವಾದ ಪ್ರಯತ್ನವೊಂದು ಈ ಲೇಖನದಲ್ಲಿದೆ. ಕನ್ನಡ ಸಾಹಿತ್ಯದ ಅವಸ್ಥಾಂತರಗಳಲ್ಲಿ ಈ ಕಲ್ಪನೆಗೆ ಸಿಕ್ಕ (ಅಥವಾ ಸಿಗದ) ಅಭಿವ್ಯಕ್ತಿಯನ್ನು ಕುರಿತು ವಿಚಾರಿಸಿದ್ದಾರೆ. ಆ ಮುಂದಿನ ಲೇಖನ 'ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯ' (ಆನಂದಕಂದ) ವಿವರಣಾತ್ಮಕವಾಗಿ ಉಲ್ಲೇಖಗಳೊಡನೆ ಪರಿಶೀಲನೆಯಲ್ಲಿ ತೊಡಗಿದೆ. ಸಾಮಗ್ರಿಯೊಡನೆ ರಾಷ್ಟ್ರೀಯ ವಾಙ್ಮಯವನ್ನು ಚರ್ಚಿಸಿದ್ದಾರೆ.

ಜೀವನ ಚರಿತ್ರೆ ಮತ್ತು ಪ್ರಬಂಧ ಸಾಹಿತ್ಯ

ಕೆ. ವಿ. ನಾರಾಯಣ

ಈ ವರ್ಷ ಪ್ರಕಟವಾದ ಜೀವನ ಚರಿತ್ರೆ ಮತ್ತು ಪ್ರಬಂಧಗಳನ್ನು ಈ ಬರೆಹದಲ್ಲಿ ವಿಮರ್ಶಿಸಲು ಉದ್ದೇಶಿಸಲಾಗಿದೆ.

ವಿನೋಬಾ : ಜೀವನ-ದರ್ಶನ (ಜಿ. ವಿ. ನಾರಾಯಣ ಮೂರ್ತಿ) ಆಚಾರ್ಯ ವಿನೋಬಾ ಭಾವೆಯುವರ 'ಜೀವನ ಮತ್ತು ವಿಚಾರಮಾರ್ಗ'ಗಳನ್ನು ಪರಿಚಯಿಸಲು ಈ ಗ್ರಂಥವನ್ನು ಬರೆಯಲಾಗಿದೆ. ಗಾಂಧೀಜಿಯುವರ ನಿಕಟ ಅನುವರ್ತಿಗಳಾಗಿದ್ದು, ಅವರ ವಿಚಾರಗಳಿಗೆ ನಿಜವಾದ ಉತ್ತರಾಧಿಕಾರಿಗಳೆಂದು ವರ್ಣಿಸಲಾದ ವಿನೋಬಾ ಅವರ ಬದುಕಿನ ಮುಖ್ಯ ವಿವರಗಳು ಇಲ್ಲಿ ಸಿಗುತ್ತವೆ. ಆ ವಿವರಗಳ ಜತೆಗೆ ವಿನೋಬಾ ಅವರ ಮಾತುಗಳಲ್ಲೇ ಅವರ ವಿಚಾರಗಳನ್ನು ಹೆಣೆಯಲಾಗಿದೆ. ಈ ಪುಸ್ತಕದಲ್ಲಿ ಲೇಖಕರು ಮುಖ್ಯವಾಗಿ ಕಾಲಾನುಕ್ರಮಣಿಕಾರನ ಪಾತ್ರವನ್ನು ವಹಿಸಿದ್ದಾರೆ; ಜತೆಗೆ ಕಳೆದ ದಿನಗಳನ್ನು ರೋಮಾಂಚಕವೆಂಬಂತೆ ಆಸೆಗಣ್ಣುಗಳಿಂದ ನೋಡುವ ಧಾಟಿಯನ್ನೂ ಹಿಡಿದಿದ್ದಾರೆ. ಆದ್ದರಿಂದ ಇತ್ತ ವಿನೋಬಾ ಅವರ ಜೀವನ ಚರಿತ್ರೆಯೂ ಆಗದೆ ಅತ್ತ ಆಕರ ಗ್ರಂಥವೂ ಆಗದೆ ಮಧ್ಯದಲ್ಲಿ ಎಲ್ಲೋ ನಿಂತಂತಿದೆ. ಇದಕ್ಕೆ ಸಾಮಗ್ರಿಯ ಕೊರತೆಯಂತೂ ಕಾರಣವಾಗಿಲ್ಲ. ಅದು ಸಾಕಷ್ಟು ಈ ಗ್ರಂಥದಲ್ಲೇ ಇದೆ. ಸ್ವಾತಂತ್ರ್ಯ ಪಡೆದ ಭಾರತದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ಕೇವಲ ತತ್ತ್ವಗಳ ಮಟ್ಟದಲ್ಲೇ ಅಲ್ಲದೆ ಆಚರಣೆಯಲ್ಲೂ ಪ್ರವೃತ್ತರಾದವರು ವಿನೋಬಾ. ಅವರ ವಿಚಾರಗಳು ಕೇವಲ ವ್ಯಕ್ತಿಮೂಲವಾದವುಗಳಾಗಿರದೇ, ಚರಿತ್ರೆಯ ಈ ಘಟ್ಟದ ಅನಿವಾರ್ಯಗಳೂ ಹೌದು. ಇದು ವಿನೋಬಾ ಅವರೂ ಬಲ್ಲರು. ಮೇಲಿಂದ ಮೇಲೆ ಅವರು ತಮ್ಮ ವಿಚಾರಗಳನ್ನು ಸಾಮ್ಯವಾದದೊಡನೆ ಹೋಲಿಸುವ, ತಮ್ಮ ಮಾರ್ಗವನ್ನು ಸ್ಪಷ್ಟಪಡಿಸುವ ಮಾತುಗಳನ್ನಾಡಿದ್ದಾರೆ. ಈ ಗ್ರಂಥದ ಲೇಖಕರು ವಿನೋಬಾ ಅವರ ವಿಚಾರಗಳನ್ನು ಸಿದ್ಧವಾದ ಸರಕೆಂಬಂತೆ ಒಪ್ಪಿ ನಿರೂಪಿಸುತ್ತಾರೆ. ಆದ್ದರಿಂದ ಭಾರತದ ಚರಿತ್ರೆಯಲ್ಲಿ ಆ ವಿಚಾರಗಳ ಸಾಧನೆ, ಸೋಲು ಮುಂತಾದವು ಮುಖ್ಯವಾಗುವುದಿಲ್ಲ. ಪುಸ್ತಕದ ಕೊನೆಯಲ್ಲಿ ೧೯೬೪ ರವರೆಗೆ ಭೂದಾನದಿಂದ ಬಂದ ಭೂಮಿ, ಅದರಲ್ಲಿ ಹಂಚಲು ಬಾರದದು, ಹಂಚಿದ್ದು, ಉಳಿದುದು ಮುಂತಾದ ವಿವರಗಳಿವೆ. ಆ ವಿವರಗಳಿಗೂ ೧೯೫೮ರ ವಿವರ (ಪು. ೨೯೯) ಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ. ಎಂದರೆ ಈ ವರ್ಷಗಳಲ್ಲಿ ಆದ ಪ್ರಗತಿ ಏನು? ವಿನೋಬಾ ಅವರ ವಿಚಾರಗಳು ಕಾಲದ ಪರೀಕ್ಷೆಗೆ ಒಳಗಾಗುತ್ತಿವೆ. ಅವರೂ ಅದನ್ನು ಅನುಭವಿಸಿದ್ದಾರೆ. 'ಗ್ರಾಮದಾನ'ವನ್ನು ಕುರಿತ ಮೊದಲ ನಿಲುವನ್ನು ಅವರೇ ಬದಲಾಯಿಸಿಕೊಂಡದ್ದೂ ಸ್ಪಷ್ಟವಿದೆ.

ವಿನೋಬಾ ಅವರ ವಿಚಾರಗಳನ್ನೂ ಇರುವಂತೆಯೇ ತೆಗೆದುಕೊಂಡದ್ದರಿಂದ ಓದುಗನಿಗೆ ಹಲವು ಸಮಸ್ಯೆ ಉಳಿಯುತ್ತದೆ. ಉದಾಹರಣೆಗೆ 'ಇಂದು ವಿನೋಬಾ 'ಅಚಿಂತನ' ವ್ರತ ಹಿಡಿದಿದ್ದಾರೆ. ಇದು 'ಅತಿಮಾನಸ' ಶಕ್ತಿ. ಇದಕ್ಕೆ ಪರಿಮಿತಿಯೇ ಇಲ್ಲ. ಮಾತಿಗಿಂತ ಮೌನ ಪ್ರಭಾವಶಾಲಿಯಲ್ಲವೇ?' [ಪು. ೨೯೯] ಈ ಮಾತು ಹೇಗೆ ನಿಜವೆಂಬುದು ನಮಗೆ ತಿಳಿಯುವುದಿಲ್ಲ.

ಇನ್ನೂ ಗಮನಿಸದೆ ಹೋದ ವಿಚಾರವೆಂದರೆ, ವಿನೋಬಾ ಅವರು ತಮ್ಮ ಕಾರ್ಯಕ್ರಮಗಳಿಗೆ ಹೆಸರು ನೀಡುವ ವಿಧಾನವನ್ನು ಕುರಿತದ್ದು. ಅವರು ಎಲ್ಲ ಕಾರ್ಯಕ್ರಮಗಳನ್ನು ವೈದಿಕ ಸಂಸ್ಕೃತಿಯ ನೆಲೆಯಲ್ಲೇ ಹೆಸರಿಸಿದ್ದಾರೆ. ಒಂದಿಲ್ಲೊಂದು ಉಲ್ಲೇಖಗಳಿಂದ ತಮ್ಮ ವಿಚಾರಗಳ ಮೊಳಕೆ

ಪ್ರಾಚೀನವೆಂದು ಹೇಳಲು ಯತ್ನಿಸಿದ್ದಾರೆ. ಈ ಗ್ರಂಥದಲ್ಲಿ ಅಂತಹ ಉಲ್ಲೇಖಗಳು ಹಲವಿವೆ. 'ಏಕಾದಶವ್ರತ', 'ಭೂದಾನಯಜ್ಞ', 'ಶಾಂತಿಸೇನೆ', 'ರಾಮರಾಜ್ಯ', 'ಸ್ಥಿತಪ್ರಜ್ಞ' ಹೀಗೆ ಹಲವಾರು. ತಮ್ಮನ್ನು 'ನಾರದ'ರೆಂದೂ ಕರೆದುಕೊಂಡದ್ದಿದೆ. ಹೀಗೆ ತಮ್ಮ ಕಾರ್ಯಕ್ರಮಗಳನ್ನು ಹೆಸರಿಸುವಲ್ಲಿ ತೋರಿಸಿದ ಚಾರಿತ್ರಿಕ ಅರಿವು ಅವುಗಳ ಲಕ್ಷಣವೂ ಆಗಿರುವಂತೆ, ಮಿತಿಯೂ ಆಗಿದೆ ಎಂಬುದನ್ನು ಲೇಖಕರು ಗುರುತಿಸಬಹುದಿತ್ತೇನೋ.

ಏನೇ ಇರಲಿ. ಲೇಖಕರ ಸರಳವಾದ ಬರವಣಿಗೆ ನೆರವಿಗೆ ನಿಂತು ಒಳ್ಳೆಯ ಪುಸ್ತಕವೊಂದು ಹೊರಬಂದಿದೆ. ಇದು ನೆಲೆಯಾಗಿ ಇನ್ನೂ ಆಳವಾದ ಚಿಂತನೆ ನಡೆಯಬೇಕಾಗಿದೆ.

ಟಾಲ್‌ಸ್ಟಾಯ್ ಜೀವನ ಚಿತ್ರ (ಎಂ. ಎಸ್. ರೂಪರಾಜ್) ಈ ಪುಸ್ತಕದ ಮೊದಲ ಮಿತಿ ಎಂದರೆ ಅದರ ಪುಟಗಳು. ೧೩೩ ಪುಟಗಳಲ್ಲಿ ಕಳೆದ ಶತಮಾನದ ರಷಿಯಾದ ಮಹಾನ್ ಲೇಖಕ-ಚಿಂತಕನ ಸಮಗ್ರ ಜೀವನದ ಪರಿಚಯಕ್ಕೆ ಹೊರಡುವುದು ಸಾಹಸವೇ ಸರಿ. ಟಾಲ್‌ಸ್ಟಾಯ್ ಜೀವನದ ಇಣುಕು ನೋಟ ಮಾತ್ರ ಇಲ್ಲಿ ಸಿಗುತ್ತದೆ. ಆಂತರಿಕ ಕ್ಷೋಭೆಗೆ ಒಳಗಾಗಿ ತನ್ನನ್ನು ಮತ್ತೆ ಮತ್ತೆ ಜೀವಂತಗೊಳಿಸಿಕೊಂಡು ಸಮಾಜಸಂಮುಖ ಚಿಂತನೆಯಲ್ಲಿ, ಆಚರಣೆಯಲ್ಲಿ ತೊಡಗಿಸಿಕೊಂಡ ಈ ವ್ಯಕ್ತಿಯ ವಿಚಾರಗಳ ಬೆಳವಣಿಗೆಯ ಆಂಶಿಕ ನೋಟವೊಂದನ್ನು ನೀಡಲು ಮಾತ್ರ ಲೇಖಕರಿಗೆ ಸಾಧ್ಯವಾಗಿದೆ. ಅವನ ಜೀವನದ ಕೆಲವು ಮುಖ್ಯ ಘಟನೆಗಳನ್ನು ಉಲ್ಲೇಖಿಸುತ್ತಾ, ವೈಚಾರಿಕ ಬೆಳವಣಿಗೆಯನ್ನು ಗುರುತಿಸಲಾಗಿದೆ. ಹೀಗಾದರೂ ಸಾಹಿತಿಯಾಗಿ ಟಾಲ್‌ಸ್ಟಾಯ್ ಬಗ್ಗೆ ಇಲ್ಲಿ ಪರಿಚಯ ತೀರಾ ಕಡಿಮೆ. ಒಂದೆರಡು ಕೃತಿಗಳನ್ನು ಬಿಟ್ಟರೆ ಉಳಿದವು ನಮೂದುಗಳಾಗಿ ಮಾತ್ರ ಉಳಿಯುತ್ತವೆ. ರಷಿಯಾದ ಚರಿತ್ರೆಯೊಡನೆ ಹೆಣೆದುಕೊಂಡ ಬದುಕನ್ನು ನಡೆಸಿದ ಟಾಲಸ್ಟಾಯ್ ಮಹಾಶಯನ ಬಗ್ಗೆ ಈ ಗ್ರಂಥ ಆಸಕ್ತಿಯನ್ನು ಓದುಗನಲ್ಲಿ ಉಂಟುಮಾಡುವಲ್ಲಿ ಗೆಲ್ಲುತ್ತದೆ.

ರಷಿಯನ್ ಹೆಸರುಗಳ ಉಚ್ಚಾರಣೆಯಲ್ಲಿ ಇಂಗ್ಲೆಂಡಿನ ಉಚ್ಚಾರಣೆಗಳನ್ನೇ ಅನುಸರಿಸಲಾಗಿದೆ. ಬರವಣಿಗೆ ಒಮ್ಮೊಮ್ಮೆ ಭೂತಕಾಲದ ಕ್ರಿಯಾಪದಗಳನ್ನು ಬಳಸಿದರೆ ಮತ್ತೊಮ್ಮೆ ಭವಿಷ್ಯತ್ ಕಾಲಸೂಚಕ ಕ್ರಿಯಾಪದಗಳನ್ನು ಬಳಸುತ್ತಾರೆ. ಉದಾಹರಣೆಗೆ (೧) 'ಅನಂತರ ಅವನನ್ನು ಧಾರ್ಮಿಕ ಶ್ರದ್ಧೆ ಆವರಿಸಿತು ; ಧರ್ಮಗ್ರಂಥಗಳನ್ನು ಓದಿದ ; ಉಪವಾಸ ಮಾಡಿದ ; ಪ್ರವಚನ ಒಂದನ್ನು ಬರೆದನಾದರೂ ಅದನ್ನೆಂದೂ ಉಪದೇಶಿಸಲು ಹೋಗಲಿಲ್ಲ' (ಪು. ೧೪). (೨) 'ಕ್ರಿಮಿಯಾ ಯುದ್ಧಭೂಮಿಯಿಂದ ಹೊರಬಿದ್ದನಂತರ, ಆತನ ವಿವಾಹಕ್ಕೆ ಮೊದಲು, ರೈತ ಹೆಣ್ಣಿನೊಡನೆ ಟಾಲ್‌ಸ್ಟಾಯ್ ಅನೈತಿಕ ಸಂಬಂಧ ಇಟ್ಟುಕೊಳ್ಳುತ್ತಾನೆ. ಈಕೆಗೆ ಹುಟ್ಟಿದ ಮಗ ಟಿಮೋತಿ ಮುಂದೆ ಟಾಲ್‌ಸ್ಟಾಯ್‌ನ ಕಿರಿಯ ಮಕ್ಕಳ ಸಾರೋಟನ್ನು ಓಡಿಸಿ ಜೀವನ ಸಾಗಿಸಬೇಕಾಗುತ್ತದೆ' (ಪು. ೩೩). ಈ ವ್ಯತ್ಯಯಗಳು ಪುಸ್ತಕದ ಉದ್ದಕ್ಕೂ ಇವೆ. ಇಂಗ್ಲಿಷಿನಿಂದ ವಾಕ್ಯಗಳನ್ನು ಅನುವಾದಿಸುವಾಗ ಅಲ್ಲಲ್ಲಿ ಅಸಹಜವಾದ ರಚನೆಗಳೂ ಸೇರಿಕೊಂಡಿವೆ.

ಅರವಿಂದ ಮಕರಂದ (ರಂ. ಶ್ರೀ. ಮುಗಳಿ) ಈ ಪುಸ್ತಕದ ಪೂರ್ವಾರ್ಧದಲ್ಲಿ ಅರವಿಂದರ ಜೀವನ ಚಿತ್ರವೂ ಉತ್ತರಾರ್ಧದಲ್ಲಿ ಅವರ ವಿಚಾರಗಳ ನಿರೂಪಣೆಯೂ ಇದೆ. ಭಾರತೀಯ ನವೋದಯದ ಒಂದು ವಿಶಿಷ್ಟ ವ್ಯಕ್ತಿತ್ವವಾದ ಅರವಿಂದರ ಜೀವನದ ಬಗ್ಗೆ ಕನ್ನಡದಲ್ಲಿ ಈಗಾಗಲೇ ಬಂದಿರುವ ಜೀವನ ಚಿತ್ರಗಳ ಜತೆಗೆ ಇದೂ ಸೇರುತ್ತದೆ. ಇಲ್ಲಿ ಅವರ ಜೀವನದ ಘಟನೆಗಳನ್ನು ಆಧರಿಸಿ ಸಿದ್ಧಪುರುಷನೊಬ್ಬನ ಜೀವನದ ಆರೋಹಣಕ್ರಮವನ್ನು ಕಟ್ಟಲು ಯತ್ನಿಸಲಾಗಿದೆ. ಲೇಖಕರ ಸ್ಪಷ್ಟವಾದ ನಿರೂಪಣಾಕ್ರಮ ಮತ್ತು ಸರಳ ಶೈಲಿಗಳು ಉದ್ದೇಶವನ್ನು ಸಫಲಗೊಳಿಸಿವೆ. ಉತ್ತರಾರ್ಧದಲ್ಲಿ ಅರವಿಂದ ಮತ್ತು ಮಾತಾಮಾತೆಯವರ ವಿಚಾರಧಾರೆಗಳನ್ನು ಲೇಖಕರು ಚೆನ್ನಾಗಿ ಅಭ್ಯಾಸ ಮಾಡಿರುವ ಸೂಚನೆಗಳು ಸಿಗುತ್ತವೆ. ಆದ್ದರಿಂದಲೇ ವಿಚಾರಗಳ ವಿಂಗಡಣೆ

ಮತ್ತು ನಿರೂಪಣೆಯಲ್ಲಿ ಸ್ಪಷ್ಟತೆ ಇದೆ. ಅರವಿಂದರ ವಿಚಾರಗಳನ್ನು ವಿಮರ್ಶಿಸುವ ಕೆಲಸ ಇಲ್ಲಿ ನಡೆದಿಲ್ಲವಾದರೂ, ಅದು ಗ್ರಂಥದ ಉದ್ದೇಶವೂ ಅಲ್ಲವೆಂಬುದನ್ನು ಗಮನಿಸಬಹುದು.

ಮಿರ್ಜಾ ಇಸ್ಮಾಯಿಲ್ (ವಿ. ಎಸ್. ನಾರಾಯಣರಾವ್) ಇದೊಂದು ಕುತೂಹಲಕಾರಿಯಾದ ಪುಸ್ತಕ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಂಸ್ಥಾನಿಕರುಗಳ ಆಡಳಿತಾಧಿಕಾರಿಯಾಗಿದ್ದ ವ್ಯಕ್ತಿಯ ಜೀವನ ಚಿತ್ರ ಇದು. ಲೇಖಕರು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮೈಸೂರಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ತಳೆದ ನಿಲುವುಗಳನ್ನು ಒಪ್ಪುವವರಲ್ಲ. ಹಾಗಾಗಿ ಪುಸ್ತಕದ ಮೊದಲ ಕೆಲವು ಅಧ್ಯಾಯಗಳು ಸೂಚ್ಯವಾಗಿ ಮಿರ್ಜಾ ಅವರ ನಿಲುವುಗಳನ್ನು ಟೀಕಿಸುತ್ತವೆ. ಅಲ್ಲಿಯೇ ಕೆಲವು ಅಧ್ಯಾಯಗಳು ಮಿರ್ಜಾ ಅವರನ್ನು ಬಿಟ್ಟು ಮತ್ತೇನನ್ನೋ ವಿವರಿಸುವುದರಲ್ಲಿ ತಲ್ಲೀನವಾಗಿವೆ. (ನೋ. 'ಮೈಸೂರಿನ ಮೋಹ', 'ಮೈಸೂರಿನ ಕೈಗಾರಿಕೋದ್ಯಮ', 'ರಾಷ್ಟ್ರೀಯ ಜಾಗೃತಿ') ಇದು ಮಿರ್ಜಾ ಅವರ ನಿಲುವುಗಳನ್ನು ಒಪ್ಪದಿದ್ದೂ, ಅವರ ಜೀವನ ಚಿತ್ರವನ್ನು ಬರೆಯಲು ಹೊರಟಿದ್ದರ ಪರಿಣಾಮವಿರಬಹುದೇ ಎಂದೂ ಸಂದೇಹ ಬರುತ್ತದೆ. ಆದ್ದರಿಂದ ಹಲವಾರು ಪರಸ್ಪರ ವಿರೋಧವನ್ನುಳ್ಳ ಸಂಗತಿಗಳು ಹಾಗೆಯೇ ಉಳಿಯುತ್ತವೆ. 'ಮಹಾತ್ಮಾ ಗಾಂಧಿ ಮತ್ತು ಮಿರ್ಜ' ಎಂಬೊಂದು ಅಧ್ಯಾಯದಲ್ಲಿ ಅವರಿಬ್ಬರ ಸಂಬಂಧದ ಸೌಹಾರ್ದಮಯತೆಯನ್ನು ಪತ್ರಗಳ ಆಧಾರದಿಂದ ವಿವರಿಸಿ ಮಿರ್ಜಾ ಅವರನ್ನು ರಾಷ್ಟ್ರೀಯವಾದಿ ಎನ್ನುತ್ತಾರೆ. ಹಿಂದಿನ ಕೆಲವು ಅಧ್ಯಾಯಗಳಲ್ಲಿ ರಾಷ್ಟ್ರೀಯವಾದಿ ಚಳುವಳಿಯನ್ನು ಮಿರ್ಜಾ ಹತ್ತಿಕ್ಕಲು ನಡೆಸಿದ ಯತ್ನವನ್ನೂ ನಿರೂಪಿಸುತ್ತಾರೆ. ಈ ದ್ವಂದ್ವ ಮಿರ್ಜಾ ಅವರು ಮುಸ್ಲಿಂ ಪರವಾದ ಧೋರಣೆ ಉಳ್ಳವರೇ ಅಲ್ಲವೇ ಎಂಬ ಸಂಗತಿಯಲ್ಲೂ ಉಳಿದಿದೆ. ಓದುಗನಿಗೆ ತಿಳಿಯದೇ ಹೋಗುವ ಸಂಗತಿ ಎಂದರೆ ಈ ವಿರೋಧಗಳು ಮಿರ್ಜಾ ಅವರ ವ್ಯಕ್ತಿತ್ವದಲ್ಲೇ ಇದ್ದವೇ ಅಥವಾ ಲೇಖಕರು ಅದನ್ನು ಆರೋಪಿಸುತ್ತಿದ್ದಾರೋ ಎಂಬುದು.

ಹಲವಾರು ಸಂಗತಿಗಳು ಪುನರಾವರ್ತನಗೊಳ್ಳುತ್ತವೆ. ಉಲ್ಲೇಖಗಳು ಖಚಿತವಾಗಿಲ್ಲ ಉದಾ.ಗೆ ಪುಟ ೪೦ರಲ್ಲಿ ಗಾಂಧೀಜಿಯವರು ಮೈಸೂರಿಗೆ ನಾಲ್ಕೈದು ಸಾರಿ ಬಂದಿದ್ದರು ಎಂದು ಹೇಳಿ ನಾಲ್ಕು ಇಸ್ವಿಗಳನ್ನು ಉಲ್ಲೇಖಿಸಿದರೆ ಪು. ೧೩೭ರಲ್ಲಿ ಆರು ಸಾರಿ ಬಂದಿದ್ದರು ಎನ್ನುತ್ತಾರೆ— ಈ ಜೀವನ ಚರಿತ್ರೆಗೆ ವಸ್ತುವಾದ ವ್ಯಕ್ತಿಯೂ ಕುತೂಹಲಕಾರಿ; ಅತನ ಜೀವನ ಚಿತ್ರ ಬರೆಯುತ್ತಿರುವ ಲೇಖಕರ ನಿಲುವೂ ಕುತೂಹಲಕಾರಿ.

ಅಭಿನಯ ಶಾರದೆ [ಮಳವಳ್ಳಿ ಸುಂದರಮ್ಮ ಅವರ ಆತ್ಮಕಥೆ]–[ಹ. ವೆಂ. ಸೀತಾರಾಮಯ್ಯ] ಇದು ಕನ್ನಡ ರಂಗಭೂಮಿಯ ನಟಿಯಾಗಿ ಹೆಸರು ಪಡೆದ ಸುಂದರಮ್ಮನವರ ನೆನಪುಗಳ ಸಂಗ್ರಹ. ಅವರಿಂದ ಕೇಳಿ, ಲೇಖಕರು ನಿರೂಪಿಸಿದ್ದಾರೆ. ಸುಂದರಮ್ಮನವರ ಸಮಕಾಲೀನ ರಂಗಭೂಮಿಯ ಬಗ್ಗೆ ಶ್ರೀ ಬಿ. ಪುಟ್ಟಸ್ವಾಮಯ್ಯನವರು ವಿಸ್ತಾರವಾದ ಪ್ರಬಂಧವೊಂದನ್ನು ಬರೆದಿದ್ದಾರೆ. ಅದೂ ಇಲ್ಲಿದೆ. ಕರ್ನಾಟಕದ ಸಂಸ್ಕೃತಿಯ ಒಂದು ಅಡ್ಡಕೊಯ್ತವನ್ನು ಪ್ರತಿನಿಧಿಸುವ ಚಿತ್ರವೊಂದರ ನಿರ್ಮಿತಿಗೆ ಹಲವಾರು ವಿವರಗಳು ಅವಶ್ಯಕ. ಆ ಬಗೆಯ ವಿವರಗಳನ್ನು ಸುಂದರಮ್ಮನವರ ನೆನಪುಗಳು ದೊರಕಿಸಿಕೊಟ್ಟಿವೆ. ಕಂಪೆನಿ ನಾಟಕಗಳ ಏಳು ಬೀಳು, ನಟರ ವೈಯಕ್ತಿಕ ಜೀವನ, ಪ್ರೇಕ್ಷಕರ ವರ್ಣನೆ, ಅಭಿರುಚಿ, ಕಲಾ ಪ್ರೋತ್ಸಾಹ ಮುಂತಾದ ಹತ್ತಾರು ಸಂಗತಿಗಳ ಬಗ್ಗೆ ನೆನಪುಗಳು ಹರಡಿಕೊಂಡಿವೆ. ಮೆಲುಕು ಹಾಕುವ ಧಾಟಿಯಿಂದ ಸಹಜವಾಗಿ ಬರುವ ರೋಚಕತೆ ಇಲ್ಲಿಯೂ ಉಳಿದಿದೆ. ಇದರಿಂದ ವಸ್ತುನಿಷ್ಠತೆ ಕಡಿಮೆಯಾಗಿದ್ದರೂ ಓದಿಸಿ ಕೊಳ್ಳುವ ಗುಣ ಹೆಚ್ಚಿದೆ. ಒಟ್ಟಾರೆ ಪೂರಕ ಸಾಮಗ್ರಿಯಾಗಿ ಈ ಗ್ರಂಥ ಇತಿಹಾಸಕಾರನಿಗೆ ನೆರವು ನೀಡಬಲ್ಲುದು.

ಪಿ. ಆರ್. ತಿಪ್ಪೇಸ್ವಾಮಿ (ಡಾ. ಜೀ. ಶಂ. ಪರಮಶಿವಯ್ಯ) ಇದೊಂದು ೧೯ ಪುಟಗಳ ಪುಸ್ತಿಕೆ. ಚಿತ್ರಕಲಾವಿದನಾಗಿ ಮತ್ತು ಚಿತ್ರಕಲಾವಿದರುಗಳ ಗೆಳೆಯನಾಗಿ ಹೆಸರುಮಾಡಿರುವ ತಿಪ್ಪೇಸ್ವಾಮಿಯವರ ಜೀವನಚಿತ್ರ ಇಲ್ಲಿದೆ. ಪುಟಗಳು ಕಡಿಮೆ. ಆದ್ದರಿಂದ ಇದೊಂದು ರೇಖಾ

ಚಿತ್ರದ ಮಾದರಿಯಲ್ಲಿದೆ. ತಿಪ್ಪೇಸ್ವಾಮಿಯವರ ಹಲವಾರು ಚಟುವಟಿಕೆ, ಸಾಧನೆಗಳ ಸಂಕ್ಷಿಪ್ತ ಪರಿಚಯ ಮತ್ತು ಅವರ ವ್ಯಕ್ತಿತ್ವ ಧೋರಣೆಗಳ ನಿರೂಪಣೆ ಇಲ್ಲಿದೆ.

ರಾಬರ್ಟ್ ಓವೆನ್ (ಕುಮಾರ ವೆಂಕಣ್ಣ) ಇಂಗ್ಲೆಂಡಿನಲ್ಲಿ ಕಳೆದ ೧೮-೧೯ನೇ ಶತಮಾನಗಳಲ್ಲಿ ನಡುವೆ ಆಗಿಹೋದ ವ್ಯಕ್ತಿಯೊಬ್ಬನ ಜೀವನ ಚರಿತ್ರೆ ಇದು. ಇಲ್ಲಿ ಹತ್ತಿಯ ಗಿರಣಿಯ ಮಾಲೀಕನಾದರೂ ಕಾರ್ಮಿಕರ ಒಳಿತಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಅಡ್ಡಿಗಳಿದ್ದರೂ ಜಾರಿಗೆ ತಂದ ಓವೆನ್ ಮಹಾಶಯನ ಜೀವನವನ್ನು ಚಿತ್ರಿಸಿದ್ದಾರೆ. ನಿರೂಪಣೆಗಾಗಿ ಆರಿಸಿದ ಶೈಲಿ ನಾಟಕೀಯವಾದುದು. ಘಟನೆಯನ್ನು ಹೇಳದೆ ಅದರಲ್ಲಿ ಭಾಗಿಗಳಾದವರ ಮಾತುಕತೆಗಳನ್ನೂ ಊಹೆಯ ಮೂಲಕ ರಚಿಸಿದ್ದಾರೆ. ರೋಚಕವಾಗಿಸಲು ಈ ಯತ್ನ. ಕಡಿಮೆ ಘಟನೆಗಳನ್ನು ಆಯಲಾಗಿದೆ. ಅವುಗಳಲ್ಲಿ ಹಲವು ಓವೆನ್ ಸಾಮಾನ್ಯನಾಗಿದ್ದವನು ಶ್ರೀಮಂತನಾದುದರ ಚಿತ್ರಕೊಡುತ್ತವೆ ಇನ್ನೂ ಕೆಲವು ಅವನ ಪ್ರೇಮಪ್ರಕರಣವನ್ನು ನಿರೂಪಿಸುತ್ತವೆ. ನಿಜವಾಗಿ ಅವನು ಕಾರ್ಮಿಕರಿಗಾಗಿ ಮಾಡಿದ ಒಳಿತುಗಳ ನಿರೂಪಣೆ ಕೊನೆಯ ಕೆಲವು ಪುಟಗಳಲ್ಲಿ ಬಂದಿದೆ. ಇಲ್ಲಿ ತನ್ನ ಸಮಕಾಲೀನ ಇಂಗ್ಲೆಂಡಿನ ಬಂಡವಾಳಷಾಹಿ ಮತ್ತು ವಸಾಹತುಷಾಹಿ ನಿಲುವುಗಳಿಗೆ ಮಾನವೀಯ ಗುಣಗಳನ್ನು ಕಸಿಮಾಡಲು ಯತ್ನಿಸಿದ ಓವೆನ್ ಒಬ್ಬ ನಾಯಕನಂತೆ ಚಿತ್ರಿತವಾಗಿದ್ದಾನೆ. ಇದು ಅವನನ್ನು ತಿಳಿಯಲು ಹೆಚ್ಚು ಸಹಾಯಮಾಡುವ ಗ್ರಂಥವಂತೂ ಇಲ್ಲ. ಹಾಗಿದ್ದರೂ 'ತಾನು ಮಾಡುವ ಉಪಕಾರವೂ ಅಪಕಾರವಾಗಬಹುದೆಂದು' ಓವೆನ್ ಬೆದರುವ ಸನ್ನಿವೇಶವೊಂದು ನಿರೂಪಿತವಾಗಿದೆ. (ಪು. ೮೫-೮೯) ಅದು ಲೇಖಕರ ಒಂದು ಸಾಧನೆ. ಪು. ೧೨೧ರಲ್ಲಿ 'ಸಾಮ್ಯೂವೇಲ್ ಟೈಲರ್' 'ಕಾಲ್‌ರಿಜ' ಎಂದು ಬೇರೆಯಾಗಿ ಉಲ್ಲೇಖಿತರಾದ ಕವಿಗಳು ಒಬ್ಬನೇ.

ಈ ವರ್ಷದ ಜೀವನ ಚರಿತ್ರೆಗಳಲ್ಲಿ ವೈವಿಧ್ಯ ಕಡಿಮೆ. ಈ ಸಾಹಿತ್ಯ ಪ್ರಕಾರ ಅಪೇಕ್ಷಿಸುವ ತೀವ್ರವಾದ ಸಂಶೋಧನಾಸಕ್ತಿ, ನಿರೀಕ್ಷಣಾ ಸಾಮರ್ಥ್ಯ ಇನ್ನೂ ನಮ್ಮಲ್ಲಿ ಬರಬೇಕಾದ ಗುಣವೋ ಏನೋ ?

ಪ್ರಬಂಧಗಳು

ರಸಿಕತೆ (ಎಂ. ವಿ. ಸೀತಾರಾಮಯ್ಯ) ಇಲ್ಲಿ ಲೇಖಕರ ಹನ್ನೆರಡು ಪ್ರಬಂಧಗಳು ಸಂಗ್ರಹವಾಗಿವೆ. ಇಲ್ಲಿ ಎಲ್ಲವೂ ಲಲಿತಪ್ರಬಂಧಗಳಲ್ಲ; ಅಲ್ಲದೆ ಇವುಗಳನ್ನು ಬರೆದ ಕಾಲದಲ್ಲೂ ತುಂಬ ಅಂತರವಿದೆ. ಲಲಿತ ಪ್ರಬಂಧಗಳಿಗಿರಬೇಕಾದ ಗುಣಗಳಲ್ಲಿ ಕೆಲವು ಸಹಜವಾಗಿಯೇ ಲೇಖಕರಿಗೆ ದೊರಕಿವೆ. ಸಾಹಿತ್ಯದ ಅಧ್ಯಯನದ ಪ್ರಭಾವ ಈ ಪ್ರಬಂಧಗಳ ರಚನೆಗೆ ಬಹುಶ್ರುತತೆಯನ್ನು ತಂದುಕೊಟ್ಟಿವೆ. 'ಧೂಮಲೀಲೆ', 'ಋತುಸಂಹಾರ' ಈ ಪ್ರಬಂಧಗಳನ್ನು ಗಮನಿಸಿದರೆ ಮೇಲಿನ ಮಾತು ಸ್ಪಷ್ಟವಾಗುತ್ತದೆ. 'ಗುಮಾಸ್ತೆ ಗುಂಡಪ್ಪ' ಒಂದು ಒಳ್ಳೆಯ ಜೀವನ ಚಿತ್ರ. ಹೆಚ್ಚು ಪ್ರಬಂಧಗಳು ಅನುಭವಗಳನ್ನು ನಿರೂಪಿಸಿ ಆ ಮೂಲಕ ಜೀವನ ದೃಷ್ಟಿಯೊಂದನ್ನು ಹೇಳುವ ಧಾಟಿಯನ್ನು ಹಿಡಿದಿವೆ. ಆದ್ದರಿಂದ ಚಿಂತನಶೀಲಗುಣವೆಂಬುದು ರಚನೆಗಳಲ್ಲಿ ಎದ್ದು ಕಾಣುವಂಥದು. 'ಕೂಳಿನಬುತ್ತಿ' 'ರೋಗಾನುಭವ' ಈ ಪ್ರಬಂಧಗಳಲ್ಲಿ ಅದು ಹೆಚ್ಚು ಪ್ರಮಾಣದಲ್ಲಿದೆ. ಆದರೆ ಲಲಿತ ಪ್ರಬಂಧಗಳಲ್ಲಿ ಅವಶ್ಯಕವೆಂದು ಭಾವಿಸಲಾದ ನವಿರಾದ ಹಾಸ್ಯ ವಸ್ತುಜನ್ಯವಾಗದೆ ಅಲ್ಲಲ್ಲಿ ಎಳೆದು ತಂದಂತೆ ಭಾಸವಾಗುತ್ತದೆ. ಅಲ್ಲಲ್ಲಿ ನೀಡಲಾಗುವ ಹೋಲಿಕೆಗಳಲ್ಲಿ ಕೆಲವು ಯುಕ್ತವಲ್ಲವೇನೋ ಎಂದೂ ಅನ್ನಿಸುತ್ತದೆ. ಪು. ೫೧ರಲ್ಲಿ 'ಡೋಲಿನ ಢಮ ಢಮವನ್ನು ಕೇಳಿದೊಡನೆಯೇ ನಾನು-ಎಂಜಲೆಲೆ ಬಿದ್ದ ಶಬ್ದವನ್ನೂ ಕೇಳಿದ ನಾಯಿಯಂತೆ' ಎಂಬ ಹೋಲಿಕೆ ನೋಡಿ. ಅಲಭ್ಯವಾಗುತ್ತಿರುವ ಲಲಿತಪ್ರಬಂಧವೆಂಬ ಸಾಹಿತ್ಯ ಪ್ರಕಾರದಲ್ಲಿ ಆಸಕ್ತಿ ಹುಟ್ಟುವಂತೆ ಮಾಡುವಲ್ಲಿ ಇಲ್ಲಿನ ಕೆಲವು ಪ್ರಬಂಧಗಳಾದರೂ ಯಶಸ್ವಿಯಾಗುತ್ತವೆ.

ಮಣಿಹಾರ (ಟಿ. ಕೇಶವಭಟ್ಟ) ಇದೊಂದು ಪ್ರಬಂಧ ಸಂಕಲನ. ಇಲ್ಲಿರುವ ಹದಿಮೂರರಲ್ಲಿ ಮೊದಲ ನಾಲ್ಕು ಮತ್ತು ಕೊನೆಯ ಎರಡು ಮಾತ್ರ ಲಲಿತ ಪ್ರಬಂಧಗಳು. ಉಳಿದವು ಸಾಹಿತ್ಯ ವಿಮರ್ಶೆಗೆ ಸೇರುತ್ತವೆ. ಬದುಕನ್ನು ನಿರೀಕ್ಷಿಸುವುದರಿಂದ ಬರುವ ಹತ್ತಾರು ಅನುಭವಗಳನ್ನು ಯಾವುದೋ ಒಂದು ಪ್ರಚೋದಕದ ನೆರವಿನಿಂದ ಕಟ್ಟಿ ರಚಿಸಿದ ಪ್ರಬಂಧಗಳಿವೆ. ಈ ಅನುಭವಗಳು ಓದಿನಿಂದ, ಪ್ರಯಾಣದಿಂದ, ಜೀವನದಲ್ಲಿ ಪ್ರವೃತ್ತವಾಗುವುದರಿಂದ ಬಂದವು. ಆದರೆ ಎಲ್ಲ ಕಡೆಯೂ ಅನುಭವಗಳು ಸಮರಸತೆಯನ್ನು ಪಡೆಯುತ್ತವೆಯೆಂದು ಹೇಳಲುಬಾರದು. 'ನನ್ನ ಮಾವಯ್ಯ' ಚೆನ್ನಾದ ರಚನೆ. ಓದಿ ಉಲ್ಲಾಸಗೊಳ್ಳಬಹುದು. 'ನಮ್ಮ ದೋಣಿಪಯಣ'ದಲ್ಲಿ ಲೇಖಕರು ಹೇಳಿದುದಕ್ಕಿಂತ ಹೇಳದೇ ಇರುವುದೇ ಹೆಚ್ಚು ಮಹತ್ವದ್ದು ; ಎಂದರೆ ಅದೊಂದು ಅನುಭವವಾಗಿ ವಾಚ್ಯದ ನೆಲೆಯಲ್ಲಿ ಚಿತ್ರಿತವಾಗಿದೆ. ಆದರೆ ನದಿಯಮೇಲಿನ ದೋಣಿಯ ಪಯಣದ ವಿವಿಧ ಘಟ್ಟಗಳು ಬದುಕನ್ನೆ ಪ್ರತಿಮಿಸಬಹುದಷ್ಟೆ. ಕೊನೆಯ ಎರಡು ಪ್ರಬಂಧಗಳು ಕೇವಲ ಓದಿನಿಂದಬಂದವು. ಅಲ್ಲಿ ವ್ಯುತ್ಪತ್ತಿಯೇ ಮೆರೆದಿದೆ. ಬರೆದವರ ಜೀವನ ದೃಷ್ಟಿ ಗೈರುಹಾಜರಾಗಿದೆ.

ಬಿಳಲುಗಳು (ಸೂ. ಸುಬ್ರಹ್ಮಣ್ಯಂ) ಇಲ್ಲನ ಹದಿನೆಂಟು ಪ್ರಬಂಧಗಳನ್ನು ಲೇಖಕರು 'ಲಲಿತ ಹಾಗೂ ವಿಚಾರಾತ್ಮಕ' [ಇಂಗ್ಲಿಷಿನಲ್ಲಿ light and not-so-light] ವೆಂದು ಕರೆದಿದ್ದಾರೆ. ಸುಮಾರು ಇಪ್ಪತ್ತೆರಡು ವರ್ಷಗಳ ಅಂತರದಲ್ಲಿ ಬರೆದ ರಚನೆಗಳಿವು. ಸಾಹಿತ್ಯವನ್ನು ಆಸಕ್ತಿಯ ವಲಯವನ್ನಾಗಿ ಆರಿಸಿದ ಈ ಲೇಖಕರ ಈ ರಚನೆಗಳ ಗುಣವೆಂದರೆ ಹೇಳಬೇಕಾಗಿರುವುದನ್ನು ಸ್ಪಷ್ಟವಾಗಿ, ಅವಶ್ಯಕವಿದ್ದಷ್ಟು ಮಾತುಗಳಲ್ಲಿ ಮಾತ್ರ ಹೇಳಿಬಿಡುವುದು, ಹಾಗಿದ್ದರೂ ಎಲ್ಲಿಯೂ ಅಸ್ಪಷ್ಟತೆಗೆ ಎಡೆಯಿಲ್ಲ. ವಿಚಾರಾತ್ಮಕ ಪ್ರಬಂಧಗಳಲ್ಲಿ ಸಾಮಗ್ರಿಯನ್ನು ಸಂಗ್ರಹಿಸಿ ಅಳವಡಿಸುವಲ್ಲಿ ಆ ಬಗೆಯ ರಚನೆಗೆ ಬೇಕಾದ ತರ್ಕಬದ್ಧತೆ ಮತ್ತು ಸ್ಪಷ್ಟತೆಗಳನ್ನು ಸಾಧಿಸಿದ್ದಾರೆ. ಉಳಿದ ಪ್ರಬಂಧಗಳಲ್ಲೂ ವಿವಿಧ ಮೂಲಗಳಿಂದ ಸಂಗ್ರಹಿಸಿದ ಸಾಮಗ್ರಿಯೇ ಬಂಡವಾಳ. 'ಅ....ಅ.... ಆಕ್ಷಿ' ಎಂಬ ರಚನೆಯಲ್ಲಿ ಸೀನುವುದರ ಬಗ್ಗೆ ಹರಟೆ ಇರದೆ ವಿವಿಧ ಜನಾಂಗಗಳ ನಂಬಿಕೆಗಳನ್ನು ಯಥಾವತ್ತಾಗಿ ಬಳಸಿದ್ದಾರೆ. ಇದು ಇವರ ಮೊದಮೊದಲ ಪ್ರಬಂಧ [ಟೋಪಿ, ಮೂಗಿನ ಮಹತ್ವ] ಗಳಲ್ಲೇ ಕಂಡುಬಂದ ಗುಣ. ಈ ಸಂಕಲನದಲ್ಲೇ ಬೇರೆಯಾಗಿ ನಿಲ್ಲುವ ರಚನೆ 'ಒಂದು ಅನುಭವ', ಅದು ಮತ್ತಾವುದೋ ಮೂಲದಿಂದ ಸ್ಫೂರ್ತವೆಂದು ಹೇಳಿದ್ದಾರೆ. ಆದರೂ ಅದರ ವಿವರಗಳು ಮತ್ತು ನಿರೂಪಣೆ ತುಂಬ ಚೆನ್ನಾಗಿದೆ ; ಚಿಂತಿಸಲು ಪ್ರೇರೇಪಿಸುತ್ತದೆ.

ಕೆಲವು ಕಡೆ ಮಾತ್ರ ಲೇಖಕರು ಸಂಬದ್ಧವಲ್ಲದ ಮಾತುಗಳನ್ನು ಹೇಳುವುದುಂಟು. ಪು.೧೮ರಲ್ಲಿ ಬರುವ ಎರಡನೆ ಪ್ಯಾರಾದ ಮೊದಲ ಸಾಲುಗಳು 'ಮೂಗು ಮುಖದ ಹೃದಯ ; ಕಣ್ಣುಗಳೇ ಶ್ವಾಸಕೋಶಗಳು'.

ಮಹಿಳೆ ಮತ್ತು ಉದ್ಯೋಗ (ವೈ. ಕೆ. ಸಂಧ್ಯಾ) ಅಂತರರಾಷ್ಟ್ರೀಯ ಹೆಣ್ಣು ಸಂವತ್ಸರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಸ್ಪರ್ಧೆಯಲ್ಲಿ ಗೆದ್ದ ಪ್ರಬಂಧವಿದು. ಸರಾಗವಾಗಿ ಹೇಳುವಲ್ಲಿ ಲೇಖಕಿ ಯಶಸ್ವಿಯಾಗಿದ್ದಾರೆ. ಹಾಗೆಯೇ ಬೇಕಾದ ಸಾಮಗ್ರಿಯನ್ನು ಕಲೆಹಾಕುವುದೂ ಕೂಡ ಅವರಿಗೆ ಸುಲಭವಾಗಿದೆ. ಆದರೆ ಅದನ್ನು ಬಳಸಿಕೊಳ್ಳುವಲ್ಲಿ ಅಲ್ಲ. ಇದು ಒಂದು ಸಾಮಾಜಿಕ ಸಮಸ್ಯೆಯನ್ನು ಕುರಿತ ಪ್ರಬಂಧ ಆದ್ದರಿಂದ ಆ ಸಮಸ್ಯೆಯ ಬಗ್ಗೆ ಇಲ್ಲಿ ತಳೆದಿರುವ ನಿಲುವುಗಳನ್ನು ಚರ್ಚಿಸಲು ಅವಕಾಶವಿದೆ. ಅದಕ್ಕೂ ಮೊದಲು ಸರಾಗವಾಗಿ ಹೇಳುತ್ತಾ ಹೋಗುವಾಗ ಜಾಗ್ರತೆಯೂ ಬೇಕು. ಇಲ್ಲದಿದ್ದರೆ ಎಡವಲೂಬಹುದು. ಪ್ರಾರಂಭದಲ್ಲಿ ಭಾರತದ ಸಂಸ್ಕೃತಿಯನ್ನು ಹಾಡಿ ಹೊಗಳುತ್ತಾ ಆ ಸಂಸ್ಕೃತಿ ಹೆಣ್ಣನ್ನು ಪೂಜ್ಯವಸ್ತುವೆಂದು ಭಾವಿಸಿತ್ತೆಂದು ಹೇಳುತ್ತಾರೆ. (ಪು. ೧) ಮುಂದುವರಿದು 'ಪ್ರತಿಯೊಂದು ವಿಷಯದಲ್ಲೂ ಅಂದಿನ ಸಮಾಜ ಸ್ತ್ರೀ-ಪುರುಷರಲ್ಲಿ ತಾರತಮ್ಯವನ್ನು ತೋರಿಸುತ್ತಿತ್ತು' (ಪು-೩) ಎನ್ನುತ್ತಾರೆ. 'ಸರ್ವಾಂಗ ಸುಂದರ

ವೆಂದು ಹೇಳಿದ ಈ ಸಂಸ್ಕೃತಿಯಲ್ಲಿ ಲೇಖಕಿಯವರೇ ಗುರುತಿಸಿದ ಮೇಲಿನ ಪರಸ್ಪರ ವಿರೋಧಕ್ಕೆ ಉತ್ತರವೇನು ? ಮುಂದೆ ಹೆಣ್ಣು ದುಡಿಯಲು ಇರುವ ಕಾರಣಗಳು, ದುಡಿಯುವ ಹೆಣ್ಣಿನ ಸಮಸ್ಯೆಗಳು, ಹೆಣ್ಣು ದುಡಿಮೆಗಾಗಿ ಆಯ್ದ ಕ್ಷೇತ್ರಗಳು, ಎಂಬ ಮುಖ್ಯ ತಲೆಬರಹಗಳಡಿಯಲ್ಲಿ ವಿಷಯವನ್ನು ಚರ್ಚಿಸಿದ್ದಾರೆ. ಬೇಕಾದ ಅಂಕಿ ಅಂಶ, ವಿವರಗಳನ್ನು ನೀಡಿದ್ದಾರೆ. ಆದರೆ ಲೇಖಕಿಯವರು ಚರಿತ್ರೆಯ ಬೆಳವಣಿಗೆಯ ಹಿನ್ನೆಲೆಯಲ್ಲಿ ವಿವರಗಳನ್ನಿಟ್ಟು ನೋಡದಿರುವುದು ಒಂದು ದೊಡ್ಡ ಕೊರತೆ. ಊಳಿಗಮಾನ್ಯ ಪದ್ಧತಿಯಿಂದ ಬಂಡವಾಳಷಾಹಿ ವ್ಯವಸ್ಥೆಗೆ ಸಮಾಜ ಬದಲಾದಾಗ ಉಂಟಾದ ಹೊಸಕಾರ್ಯಕ್ಷೇತ್ರಗಳನ್ನು ತುಂಬಲು ಮಹಿಳೆ ಮನೆಗಳಿಂದ ಹೊರಗೆ ಬಂದಳು. ಈ ಸಾಮಾಜಿಕ ಅನಿವಾರ್ಯತೆಯನ್ನು ನಾವು ಮರೆಯುವಂತಿಲ್ಲ. ಹೀಗಾಗಿ ಹೆಣ್ಣು ಮುಕ್ತಳಾದಳು ಎಂದು ಕಣ್ಣು ಅರಳಿಸುವಂತಿಲ್ಲ. ಆಕೆ ಈಗ ಎರಡು ಬಗೆಯ ಶೋಷಣೆಗೆ ಒಳಗಾಗಿದ್ದಾಳೆ ಮನೆಯೊಳಗೆ, ಮನೆ ಹೊರಗೆ. ಲೇಖಕಿ ಇದನ್ನು ಹೆಣ್ಣಿನ ದ್ವಿಪಾತ್ರವೆಂದೂ, ಅವೆರಡನ್ನೂ ನಿರ್ವಹಿಸುವುದೇ ಅವಳ ಸಾಧನೆ ಎನ್ನುತ್ತಾರೆ. ಇದನ್ನು ಒಪ್ಪಬಹುದೇ ? ಉದ್ಯೋಗದಲ್ಲಿರುವ ಹೆಣ್ಣಿಗೆ ಗಂಡಿಗಿಂತ ಕೆಲವು ಸೌಲಭ್ಯಗಳಿವೆಯೆಂದು (ಪು. ೪೨) ಕೊಂಡು ಉಲ್ಲಾಸ ಹೊಂದುತ್ತಾರೆ ಲೇಖಕಿ. ಮನೆಹೊರಗೆ ಹೆಣ್ಣಿನ ದುಡಿಮೆ ಅವಶ್ಯವಾಗಿರುವ ವ್ಯವಸ್ಥೆ ತೋರಿಸುವ ಆಮಿಷಗಳೇ ಆ ಸೌಲಭ್ಯಗಳೆಂದು ತೋಚುವುದಿಲ್ಲ. ನಾನಿಲ್ಲಿ ಹೆಣ್ಣಿನ ದುಡಿಮೆಯನ್ನು ವಿರೋಧಿಸುತ್ತಿಲ್ಲ. ಆದರೆ, ಸಮಸ್ಯೆಯ ಎಲ್ಲ ಮುಖಗಳನ್ನು ಬಿಡಬಾರದೆಂದು ಸೂಚಿಸುತ್ತಿದ್ದೇನೆ. ಅಲ್ಲದೆ ದುಡಿಯುವ ಎಲ್ಲ ಹೆಣ್ಣುಗಳನ್ನು ಸಾರಾಸಗಟಾಗಿ ಒಂದೇ ಗುಂಪಿಗೆ ಸೇರಿಸುವಂತಿಲ್ಲ. ಮೇಲುವರ್ಗದ ದುಡಿಯುವ ಹೆಣ್ಣು ತಾನು ಆರ್ಥಿಕವಾಗಿ ಮುಕ್ತಳಾದರೂ, ಮನೆಯೊಳಗೆ ಮತ್ತಾವುದೋ ಹೆಣ್ಣನ್ನು ಕೆಲಸದವಳನ್ನು ಶೋಷಿಸುತ್ತಾಳೆ. ಇಬ್ಬರೂ ದುಡಿಯುವ ಹೆಣ್ಣುಗಳೇ, ಆದರೆ ಇಬ್ಬರೂ ಬೇರೆ ಬೇರೆ ಅಲ್ಲವೇ ? ಒಟ್ಟಿನಲ್ಲಿ ಈ ಪ್ರಬಂಧದ ವೈಚಾರಿಕ ನೆಲೆ ಸಾಕಷ್ಟು ಬದಲಾವಣೆಯನ್ನು ಅಪೇಕ್ಷಿಸುತ್ತದೆ.

ಯುವಭಾರತಿ (ವಿವಿಧ ಲೇಖಕರು) ಬೆಂಗಳೂರು ವಿಶ್ವವಿದ್ಯಾಲಯ ೧೯೭೪ರಲ್ಲಿ ನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ಪ್ರಬಂಧ ಲೇಖನವೂ ಒಂದು. ಅದರಲ್ಲಿ ಗೆದ್ದ ಪ್ರಬಂಧಗಳು (ಹದಿನೆಂಟು) ಇಲ್ಲಿವೆ. ಈ ಪ್ರಬಂಧಗಳನ್ನು ಪದವಿಪೂರ್ವ ವಿಭಾಗದಿಂದ ಹಿಡಿದು ಸ್ನಾತಕೋತ್ತರ ವಿಭಾಗದ ವರೆಗಿನ ವಿದ್ಯಾರ್ಥಿಗಳು ರಚಿಸಿದ್ದಾರೆ. ಪಿ.ಯು.ಸಿ.ಯ ಪ್ರಬಂಧಗಳು ಸರಳವಾಗಿವೆ. ಅಷ್ಟೇನೂ ಮಹತ್ವದ ವಿಚಾರಗಳಿಲ್ಲ; ಅದೂ ಸಹಜವೇ. ಪದವಿ ಮತ್ತು ಸ್ನಾತಕೋತ್ತರ ವಿಭಾಗದ ಪ್ರಬಂಧಗಳಲ್ಲಿ ಸಾಮಗ್ರಿಯ ಕೊರತೆಯಿಲ್ಲ. ಆದರೆ ಸಮಸ್ಯೆಯನ್ನು ವಿಶ್ಲೇಷಿಸುವಾಗ ಬೇಕಾದ ತಾತ್ತ್ವಿಕ ನೆಲೆಯಲ್ಲಿ ಮಾತ್ರ ಕೊರತೆಯಿದೆ. ಅದು ಆಯಾ ಪ್ರಬಂಧಗಳ ಮಿತಿಗಳು. ಪತ್ರಿಕೆಗಳು, ಸಾರ್ವಜನಿಕ ಅಭಿಪ್ರಾಯಗಳು, ಆಳುವ ಪಕ್ಷ ಇವು ರೂಪಿಸಿದ ವಿಚಾರಗಳು ಅಧಿಕಾರಯುತವಾಗಿವೆ. ಅವುಗಳಿಗೆ ಬೇರೊಂದು ಮುಖವಿರಬಹುದೆಂದು ಈ ಪ್ರಬಂಧಗಳು ತಿಳಿದಿಲ್ಲ. ವಿದ್ಯಾರ್ಥಿಗಳದು ಬೆಳೆಯುವ ಚಿಂತನೆಯಾದ್ದರಿಂದ ಇವು ಅವರ ಸಧ್ಯದ ಘಟ್ಟಗಳು ಮಾತ್ರ ಎಂದು ತಿಳಿಯಬಹುದು. ಹಾಗಾದರೂ ನಮ್ಮ ವಿದ್ಯಾರ್ಥಿಗಳ ಚಿಂತನೆಯನ್ನು ಆವರಿಸಿದ ಹೊರವಾತಾವರಣದ ಬಲಾತ್ಕಾರವನ್ನು ಮರೆಯುವಂತಿಲ್ಲ.

ಹೆಣ್ಣು ಸಮಾಜದ ಕಣ್ಣು (ವಿವಿಧ ಲೇಖಕಿಯರು) 'ಇದು ಅಂತರ ರಾಷ್ಟ್ರೀಯ ಮಹಿಳಾ ವರ್ಷದ ಕೊಡುಗೆ.' ಪ್ರಕಾಶಕರು ಇದನ್ನು ವೈಚಾರಿಕ ಪ್ರಬಂಧಗಳ ಮಹತ್ವಪೂರ್ಣ ಸಂಕಲನವೆಂದಿದ್ದಾರೆ. ಇಲ್ಲಿ ಒಂಬತ್ತು ಜನ ಹೆಂಗಸರು ಬರೆದ ಲೇಖನಗಳಿವೆ. ಹೆಚ್ಚು ಲೇಖನಗಳ ನಿಲುವು ಒಂದೇ—ಹೆಂಗಸು ಪ್ರಾಚೀನ ಕಾಲದಲ್ಲಿ ಪೂಜ್ಯಳಾಗಿದ್ದಳು; ಈಗ ಅವಳು ಸಂಕಷ್ಟಗಳಿಗೆ ಗುರಿಯಾಗಿದ್ದಾಳೆ. ಆದರೆ ಅವಳು ಧೈರ್ಯಗೆಡಬಾರದು. ಸ್ತ್ರೀ ಸಾಮಾನ್ಯಳಲ್ಲ ('ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ') ಆದರೆ ಈಗ ಅವಳು ಶೋಷಿತಳು. ಇಲ್ಲಿ ಬರೆದ ಯಾರಿಗೂ ಯಾಕೆ ಹೀಗಾಯಿತು ಎಂಬುದು ತಲೆಕೆಡಿಸುವ ಪ್ರಶ್ನೆಯಾಗಿಲ್ಲ. ಎಲ್ಲರೂ 'ಹೀಗಾಯಿತು' ಎಂಬು

ದನ್ನು ಹೇಳುವುದರಲ್ಲಿ ಲೀನರಾಗಿದ್ದಾರೆ. ಆದ್ದರಿಂದಲೇ ಸಮಸ್ಯೆಯ ನಿಜವಾದ ಕಾರಣಗಳನ್ನು ನಿರೂಪಿಸುವಲ್ಲಿ ಸೋತಿದ್ದಾರೆ. ಸಮಸ್ಯೆಯ ಮೂಲ ತಿಳಿಯದೆ ಅದನ್ನು ಬಿಡಿಸಲು ಸೂಚಿಸುವ ಮಾರ್ಗಗಳು : 'ಪಾಶ್ಚಾತ್ಯರ ಅನುಕರಣೆ ಮಾಡುವುದನ್ನು ನಿಲ್ಲಿಸಿ, ಪರಂಪರೆಗೆ ವ್ಯತಿರಿಕ್ತವಾಗದ ರೀತಿಯಲ್ಲಿ ನ್ಯಾಯಬದ್ಧ ಹಕ್ಕುಗಳಿಗಾಗಿ ಸ್ತ್ರೀಯರು ಒಗ್ಗಟ್ಟಿನಿಂದ ದುಡಿಯಬೇಕು' (ಪು. ೨೬) 'ಪ್ರತಿಯೊಬ್ಬ ಮಹಿಳೆಯೂ ಉನ್ನತವಾದ ನೈತಿಕ ಗುಣಮಟ್ಟಗಳನ್ನು ಕಾಯ್ದುಕೊಳ್ಳುವುದು ಅನಿವಾರ್ಯ' (ಪು. ೮೨)–ಹೀಗೆ! ನಿರುಪಯುಕ್ತವೆನಿಸುತ್ತದೆ. ಇಲ್ಲಿನ ಚಿಂತನೆಗಳು ಅಚಾರಿತ್ರಿಕ. ಏಕೆಂದರೆ ಎಲ್ಲ ಕಾಲದ ಹೆಣ್ಣು ಒಂದೇ ಎಂಬಂತೆ ಭಾವಿಸುತ್ತಾರೆ. ಮತ್ತು ಎಲ್ಲ ಹೆಣ್ಣುಗಳ ಸಮಸ್ಯೆಯೂ ಒಂದೇ ಎಂದು ತಿಳಿದಿದ್ದಾರೆ. ಇದು ವೇದಿಕೆಯ ಧಾಟಿಯಾಗಬಹುದೇ ಹೊರತು ಪ್ರಯೋಜನಕಾರಿ ಚಿಂತನೆಯಾಗಲಾರದು.

083847

ನಗೆ ಬರಹಗಳು ಮತ್ತು ಪ್ರವಾಸ ಕಥನ

ಸಿ. ವೀರಣ್ಣ

ಈ ವರ್ಷ ಪ್ರಕಟವಾಗಿ ನಮಗೆ ದೊರೆತಿರುವ ನಗೆ ಬರಹಗಳ ಸಂಕಲನಗಳು ಸಂಖ್ಯೆಯಲ್ಲಿ ಕಡಿಮೆಯಾಗಿರುವಂತೆ ಗುಣಮಟ್ಟದಲ್ಲೂ ಕಡಿಮೆಯೇ.

ಶ್ರಮದಾನ : ಎಂ. (ಎಸ್. ನರಸಿಂಹಮೂರ್ತಿ) ಬದುಕಿನ ಸಾಮಾನ್ಯ ಘಟನೆಗಳನ್ನು ಯಾವುದೋ ಒಂದು ವಕ್ರ ದೃಷ್ಟಿಗೆ ಒಳಪಡಿಸಿ ನೋಡಿದರೆ ನಗೆ ಚಿಮ್ಮುತ್ತದೆ ಎಂಬುದು ಸಾಮಾನ್ಯ ಸೂತ್ರವಾದರೂ ಅದನ್ನು ತೀರಾ ಸರಳಗೊಳಿಸಿ ಬರದದ್ದೆಲ್ಲಾ ಹಾಸ್ಯ ಎನ್ನುವ ಸಂಪ್ರದಾಯ ನಮ್ಮ ನಗೆ ಬರಹಗಾರರಲ್ಲಿ ಬೆಳೆದು ಬಂದಿರುವಂತಿದೆ. ಅನೇಕ ಹೊಸ ವಿಷಯಗಳನ್ನು ಈ ಕೃತಿಯಲ್ಲಿ ಆಯ್ದುಕೊಂಡಿದ್ದೇವೆಂದು ಲೇಖಕರು ಭಾವಿಸಿದ್ದರೂ ಹಳೆಯ ವರಸೆಯಲ್ಲೇ ಪಟ್ಟುಗಳನ್ನು ಹಾಕಿರುವುದನ್ನು ಕಾಣಬಹುದು. ಎಷ್ಟೋ ಬರಹಗಳು ಯಾವ ಪರಿಣಾಮನ್ನುಂಟುಮಾಡದೆ ಹೋಗುತ್ತವೆ.

ಮುತ್ತಿನ ಚೆಂಡು: (ಟಿ.ಸುನಂದಮ್ಮ) ಅನೇಕ ನಗೆ ಬರಹಗಳನ್ನು ಪ್ರಕಟಮಾಡಿರುವ ಶ್ರೀಮತಿ ಟಿ. ಸುನಂದಮ್ಮನವರ ಐದನೆಯ ಸಂಕಲನ ಇದು ಮಧ್ಯಮ ವರ್ಗದ ಹೆಂಗಸರ ಪೊಳ್ಳು ತನದ ಒದ್ದಾಟವನ್ನು 'ಸರಸು' ಎಂಬ ಹೆಸರಿನ ನಾಯಿಕೆಯನ್ನು ಸೃಷ್ಟಿಸಿಕೊಂಡು ಅನೇಕ ಬರಹಗಳಲ್ಲಿ ವಿಲಂಬಿಸಲಾಗಿದೆ. ಇನ್ನೂ ಉಳಿದ ಕೆಲವು ಲೇಖನಗಳು ಇಂತಹ ಜಾತಿಯವೇ ಈ ಮಾಮೂಲು ರಾಗ ನಗೆ ಬರಹಗಾರರ ವೈಶಿಷ್ಟ್ಯವನ್ನು ಕಳೆದು ಸ್ವಂತಿಕೆಯನ್ನು ಕಾಯ್ದುಕೊಳ್ಳದಂತೆ ಮಾಡಿದೆ.

ದೌರ್ಗಂಧಿಕಾಪಹರಣ : (ಬಿ. ಜಿ. ಎಲ್. ಸ್ವಾಮಿ) ಕನ್ನಡದ ಎಲ್ಲಾ ನಗೆ ಬರಹಗಾರರಿಗಿಂತ ಭಿನ್ನವಾದ ವಾತಾವರಣವನ್ನು ತಮ್ಮ ಬರಹಗಳಲ್ಲಿ ಮೂಡಿಸಿದ ಬಿ.ಜಿ.ಎಲ್. ಸ್ವಾಮಿಯವರು ತಮ್ಮ 'ಕಾಲೇಜು ರಂಗ'ದ ಸಾಲಿಗೆ ಮತ್ತೊಂದನ್ನು ಸೇರಿಸಿದ್ದಾರೆ. 'ಕಾಲೇಜು ರಂಗ'ಕ್ಕೆ ವಾಸ್ತವದ ನೆಲೆಗಟ್ಟು ಸ್ವಲ್ಪಮಟ್ಟಿಗಾದರೂ ಭದ್ರವಾಗಿದ್ದರೆ ಇಲ್ಲಿ ಅದು ತುಂಬಾ ಶಿಥಿಲಗೊಂಡಿದೆ. ಬರವಣಿಗೆಯಲ್ಲಿ ವಾಸ್ತವವಲ್ಲ ಎನ್ನಿಸುವಂತಹವುಗಳನ್ನು ಬರಹಗಾರರು ಸೃಷ್ಟಿಮಾಡಿದರೆ ಓದುಗ ಬರೆದವರನ್ನೇ ಸಂಶಯದಿಂದ ನೋಡುವಂತಾಗುತ್ತದೆ. ವಾಸ್ತವದ ನೆಲೆಯಲ್ಲಿರುವುದರ ಅವಾಸ್ತವ ಸ್ವರೂಪವನ್ನು ಬಿಚ್ಚಿ ತೋರಿಸಿ ಚುಚ್ಚುವುದೇ ಲೇಖಕನ ಕೆಲಸ. ಅಂತಹ ಸಮತೋಲನ ಒಂದನ್ನು ಬಿ. ಜಿ. ಎಲ್. ಸ್ವಾಮಿಯವರು ಕಾಯ್ದುಕೊಂಡರೆ ನಮ್ಮ ಉತ್ತಮ ನಗೆ ಬರಹಗಾರರಲ್ಲಿ ಒಬ್ಬರಾಗುತ್ತಾರೆ.

ಕೊರವಂಜಿ ಕಂಡ ನಗು ಸಮಾಜ ; (ರಾ. ಶಿ.) ಕನ್ನಡ ಸಾಹಿತ್ಯದಲ್ಲಿ ಗಂಭೀರ ಹಾಸ್ಯದ ಹೊನಲನ್ನು ಕೊರವಂಜಿ ಮೂಲಕ ಹುಟ್ಟು ಹಾಕಿ ಅನೇಕ ಬರಹಗಾರರನ್ನು ಸೃಷ್ಟಿಸಿದವರು ರಾ. ಶಿ. ಕೊರವಂಜಿಯನ್ನು ಕಾಡಿಗೆ ಕಳುಹಿಸಿದ ನಂತರ ಅವರಿಂದ ಬಂದ ಕೊರವಂಜಿಯ ಕಾಣಿಕೆ ಇದು. ಇಲ್ಲಿನ ಲೇಖನಗಳ ವಸ್ತು ಸಮಾಜದಲ್ಲಿ ದಿನನಿತ್ಯ ಕಾಣುವ ದೊಡ್ಡವರೆಂದುಕೊಂಡವರ ಸಣ್ಣತನಕ್ಕೆ, ಬೂಟಾಟಿಕೆಗೆ ಹಿಡಿದ ಕನ್ನಡಿಯಾಗಿದೆ. ಇದಲ್ಲದೆ ಮಧ್ಯಮವರ್ಗ ಅತ್ತ ಏರದೆ ಇತ್ತ ಇಳಿಯದೆ ಒದ್ದಾಡಿ ನರಳುವುದನ್ನು ವ್ಯಂಗ್ಯಕ್ಕೆ ಗುರಿಪಡಿಸಲಾಗಿದೆ. ನಗೆ ಬರಹಗಳ ಹಿಂದೆಯೂ ಗಂಭೀರವಾದ ಆಲೋಚನೆಗಳಿಗೆ ಅವಕಾಶವಿರುವಂತಹ ಬರವಣಿಗೆ ರಾ. ಶಿ. ಯವರದು. ಇಂತಹ ಬರವಣಿಗೆಗಳು ನಗೆಯನ್ನು ತರುವುದು ಮಾತ್ರವಲ್ಲ ಮನಸ್ಸನ್ನೂ ತಟ್ಟಬಲ್ಲವು. ಇಷ್ಟಾಗಿ ಇಲ್ಲಿನ ಕೆಲವು ಬರಹಗಳು ಕೊರವಂಜಿಯ ಪರಿತಕ್ಕೆ ದೂರವಾಗಿ ಇವೆ ಎನ್ನಿಸುತ್ತವೆ.

ಈ ವರ್ಷ ಪ್ರಕಟವಾಗಿ ನಮಗೆ ದೊರೆತಿರುವ ಪ್ರವಾಸ ಸಾಹಿತ್ಯದ ಕೃತಿಗಳು ಎರಡು.

ಸವಿ ಸಂಚಾರ : (ಶಂಕರ ಪಾಟೀಲ) ಇಪ್ಪತ್ತು ಬೇರೆ ಬೇರೆ ಸ್ಥಳಗಳನ್ನು ಸಂದರ್ಶಿಸಿದ ವಿವರಗಳು ಇಲ್ಲಿ ಇವೆ. ಈ ಲೇಖನಗಳ ಬಹುಪಾಲು ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳನ್ನು ಕುರಿತವು. 'ಮುದ್ದಣನ ನಾಡಿನಲ್ಲಿ', 'ಶ್ರವಣ ಬೆಳುಗೊಳದ ಪೂರ್ವೋತ್ತರ', 'ಧರ್ಮ ಸಮನ್ವಯದ ಧರ್ಮಸ್ಥಳ'–ಇಂತಹ ಲೇಖನಗಳೆಲ್ಲಾ ಉತ್ಪ್ರೇಕ್ಷೆಯ ಉದ್ಗಾರಗಳಾಗಿವೆಯೇ ಹೊರತು ಅನುಭವದ ವಿವರಗಳಾಗಿ ಮೂಡಿಬಂದಿಲ್ಲ. 'ಮುದವ ನೀಡಿತು ಮಲೆನಾಡು' ಎಂಬ ಲೇಖನದಲ್ಲಿ ಮಲೆನಾಡಿನ ಊರುಗಳ ಪಟ್ಟಿ ಕಾಣಿಸುತ್ತದೆಯೇ ವಿನಾ ಮಲೆನಾಡಿನ ಮುದ ನಮಗೆ ಸಿಕ್ಕುವುದಿಲ್ಲ.

ಉತ್ತರ ಭಾರತಕ್ಕೆ ಲೇಖಕರು ಪ್ರವಾಸ ಹೋಗಿದ್ದುದನ್ನು ಕುರಿತಂತಹ ಬರವಣಿಗೆಯೂ ಇದರಲ್ಲಿ ಸೇರಿದೆ. ಲೇಖಕರು ವರದಿಗೆ ಹೆಚ್ಚು ಗಮನಕೊಡದಿದ್ದರೆ ಇನ್ನಷ್ಟು ಉಪಯುಕ್ತವಾದ ಕೃತಿಯನ್ನಾಗಿಸಬಹುದಿತ್ತು.

ಆಫ್ರಿಕಾ ಯಾತ್ರೆ : (ದೇ. ಜವರೇಗೌಡ) ''ಘಾನಾದಲ್ಲಿ ಸೇರಿದ ಕಾಮನ್‌ವೆಲ್ತ್ ವಿಶ್ವವಿದ್ಯಾಲಯಗಳ ಒಕ್ಕೂಟದ ಸಭೆಯಲ್ಲಿ ಭಾಗವಹಿಸಿದ ಕುಲಪತಿ ದೇ ಜ ಗೌ ರವರು ತಮ್ಮ ಪ್ರವಾಸಾವಧಿಯಲ್ಲಿ ನೈಜೀರಿಯಾ ಮತ್ತು ಘಾನಾ ದೇಶಗಳ ವಿಸ್ತೃತ ಅಧ್ಯಯನವನ್ನು ನಡೆಸಿರುವರು. ಅವರ 'ಆಫ್ರಿಕಾ ಯಾತ್ರೆ' ಆಫ್ರಿಕನ್ನರ ಶ್ರಮದ ದುಡಿತ, ಪ್ರಾಚ್ಯ ಸಂಸ್ಕೃತಿ, ಜನಪದ ಕತೆ, ಸಾಮಾಜಿಕ ಜೀವನ ಇವುಗಳ ಬಗೆಗೆ ಪರಿಚಯಮಾಡಿಕೊಟ್ಟಿದೆ". ಎಂಬ ಡಾ. ಎಸ್. ವಿದ್ಯಾಶಂಕರ್ ಅವರ ಮಾತು ಒಪ್ಪತಕ್ಕದ್ದಾಗಿದೆ.

ಗ್ರಂಥ ಸಂಪಾದನೆ

ಹಂಪ. ನಾಗರಾಜಯ್ಯ

ಈ ವಿಭಾಗದಲ್ಲಿ ಒಟ್ಟು ೧೮ ಕೃತಿಗಳನ್ನು ಸಮೀಕ್ಷಿಸಿದೆ. ಇವುಗಳಲ್ಲಿ ಕಡೆಯ ಎರಡು ಕೃತಿಗಳು, ಪಂಪಭಾರತ ಕಥಾಲೋಕ ಮತ್ತು ಮಹಾವೀರ, ಸಂಪಾದಿತ ಕೃತಿಗಳಲ್ಲ, ಅನುವಾದಿತ ಕೃತಿಗಳು. ಅವೆರಡನ್ನು ಬಿಟ್ಟರೆ ಇನ್ನುಳಿದ ೧೬ ಕೃತಿಗಳು ಸಂಪಾದಿತ ಗ್ರಂಥಗಳು. ಇವುಗಳಲ್ಲಿ ಒಂದು ಛಂದಸ್ಸಿಗೆ ಸಂಬಂಧಿಸಿದೆ (ಛಂದೋಂಬುಧಿ), ಒಂದು ವ್ಯಾಕರಣಕ್ಕೆ ಸಂಬಂಧಿಸಿದೆ (ಶಬ್ದಮಣಿ ದರ್ಪಣ), ಒಂದು ಶಬ್ದಕೋಶ ಶಾಸ್ತ್ರಕ್ಕೆ ಸಂಬಂಧಿಸಿದೆ (ಕರ್ನಾಟ ಶಬ್ದಮಂಜರಿ). ಈ ಮೂರು ಶಾಸ್ತ್ರ ಗ್ರಂಥಗಳನ್ನು ಬಿಟ್ಟರೆ ಉಳಿದ ೧೩ ಕಾವ್ಯಗಳು. ಈ ಕಾವ್ಯಗಳಲ್ಲಿ ನಾಲ್ಕು ಜೈನ ಧರ್ಮಕ್ಕೆ ಮತ್ತು ಏಳು ವೀರಶೈವ ಧರ್ಮಕ್ಕೆ ಸಂಬಂಧಿಸಿವೆ.

ಗ್ರಂಥ ಸಂಪಾದನೆಯ ದೃಷ್ಟಿಯಿಂದ ಕಳಪೆ ಕೃತಿಗಳು ಹೆಚ್ಚು.

ಛಂದೋಂಬುಧಿ (ಸಂ : ಕೃಷ್ಣಭಟ್ಟ) ಮತ್ತೆ ಮುದ್ರಣವಾಗುವ ಅವಕಾಶ ಒದಗಿಬಂದಿದೆ. ಕಳೆದ ವರ್ಷವಷ್ಟೆ ಪ್ರಕಟವಾದ ಕನ್ನಡ ಛಂದಸ್ಸಂಪುಟದಲ್ಲಿ ಇದು ಸಮಾವೇಶವಾಗಿತ್ತು, ಅದರ ವಿಮರ್ಶೆ ಕೂಡ ನಮ್ಮ ೧೯೭೪ರ ಸಾಹಿತ್ಯವಾರ್ಷಿಕದಲ್ಲಿದೆ. ಅದರ ಬೆನ್ನ ಹಿಂದೆಯೇ ಹೊರಬರುತ್ತಿರುವ ಈ ಕೃತಿ ಅದಕ್ಕಿಂತ ಹೆಚ್ಚು ಪರಿಷ್ಕಾರ ಪಡೆದಿರಬಹುದೆಂಬ ನಿರೀಕ್ಷೆ ಸಹಜವೇ ಆದರೂ ಓದುಗರಿಗೆ ಇಲ್ಲಿಯೂ ಹಲವು ನಿರಾಶೆಗಳು ಕಾದಿವೆ :

೧. ಪ್ರಸ್ತುತ ಗ್ರಂಥ ಸಂಪಾದನೆಗೆ ಬಳಸಿಕೊಂಡಿರುವ ಹಸ್ತಪ್ರತಿಗಳು ಯಾವುವು, ಅವುಗಳ ಸ್ವರೂಪವೇನು—ಇದು ಸರಿಯಾಗಿ ತಿಳಿಯುವುದಿಲ್ಲ. ಪರಿಶಿಷ್ಟ ಎಂಟರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಲಿಖಿತ ಗ್ರಂಥಾಲಯದಲ್ಲಿರುವ ಛಂದೋಂಬುಧಿಯ ಪ್ರತಿಗಳಲ್ಲಿ ಮತ್ತು ಮೈಕ್ರೊಫಿಲ್ಮ್ ಪ್ರತಿಗಳಲ್ಲಿ ಕಂಡುಬರುವ ಪ್ರಕಾರ, ಭಿನ್ನಪಾಠ, ಅಧಿಕಪಾಠ ಸಂದರ್ಭಗಳನ್ನು ಕೊಟ್ಟಿದ್ದಾರೆ. ಹಾಗಿದ್ದಲ್ಲಿ ಈ ಪ್ರತಿಗಳಲ್ಲದೆ ಬೇರೆ ಪ್ರತಿಗಳನ್ನು ಅವಶ್ಯ ನೋಡಿದ್ದಾರೆಂದಾಯಿತು. ಆದರೆ ಆ ಪ್ರತಿಗಳು ಯಾವುವು, ಅವುಗಳಿಂದ ಎಷ್ಟರಮಟ್ಟಿನ ನೆರವು ಪಡೆದಿದ್ದಾರೆ—ಎಂಬುದು ಖಚಿತವಾಗುವುದಿಲ್ಲ. ಗ್ರಂಥದ ಕಟ್ಟಕಡೆಯಲ್ಲಿ (ಏಕೆಂದರೆ ಗ್ರಂಥಾರಂಭದಲ್ಲೂ ಒಂದು ಗ್ರಂಥಋಣಪಟ್ಟಿ ಇದೆ) ಬರುವ ಗ್ರಂಥಋಣ ಪಟ್ಟಿಯಲ್ಲಿ ಛಂದೋಂಬುಧಿಯ ಹದಿಮೂರು ಪ್ರತಿಗಳ ಉಲ್ಲೇಖವಿದೆ : ಇವುಗಳಲ್ಲಿ ಅಯ್ದು ಈಗಾಗಲೇ ಅಚ್ಚಾಗಿರುವ ಪ್ರತಿಗಳು, ಇನ್ನೆಂಟು ಹಸ್ತಪ್ರತಿಗಳು ; ಈ ಎಂಟರಲ್ಲೂ ನಾಲ್ಕು, ಪರಿಶಿಷ್ಟ ಎಂಟರಲ್ಲಿ ಪ್ರಸ್ತಾಪಿತವಾಗಿರುವ ಪ್ರತಿಗಳೇ ಆಗಿವೆ—ಅಂತೂ ಇದು ಕಡೆಗೂ ಇತ್ಯರ್ಥವಾಗದೆಯೇ ಉಳಿಯುತ್ತದೆ.

೨. ಪರಿಶಿಷ್ಟ ಎಂಟು ಅಕ್ರಮವಾಗಿದೆ :

ಅ. ಪಾಠಾಂತರಗಳನ್ನು ಕೊಡುವುದು ಆಯಾ ಪದ್ಯಗಳು ಬರುವ ಪುಟದ ಅಡಿಭಾಗದಲ್ಲಿಯೇ ಹೊರತು ಪರಿಶಿಷ್ಟದಲ್ಲಿ ಅಲ್ಲ.

ಆ. ಕೆಲವು ಪಾಠಾಂತರಗಳನ್ನು ಪಠ್ಯದ ಪದ್ಯಗಳ ಅಡಿಯಲ್ಲಿ ಕೊಟ್ಟು, ಮತ್ತೆ ಕೆಲವನ್ನು ಇಲ್ಲಿ ಪ್ರತ್ಯೇಕವಾಗಿ ಕೊಡುವುದು ಅಶಾಸ್ತ್ರೀಯ. ಇವು (ಅ. ಆ.) ಒಟ್ಟಿಗೆ ಬಂದು ಕಡೆ ಇರಬೇಕು, ಆಯಾ ಸ್ಥಾನದಲ್ಲೇ ಬರಬೇಕು.

ಅಲ್ಲದೆ ಈ ಎಂಟನೆಯ ಪರಿಶಿಷ್ಟದಲ್ಲಿ ಭಿನ್ನಪಾಠ ಯಾವುದು, ಅಧಿಕಪಾಠ ಯಾವುದು, ಗ್ರಂಥದಲ್ಲಿನ ಮೂಲ ಪಠ್ಯಭಾಗಕ್ಕೆ ಇದು ಎಲ್ಲಿ ಸೇರ್ಪಡೆಯಾಗಬೇಕು ಎಂಬುದು ಕೂಡಾ ಸ್ಪಷ್ಟವಾಗಿಲ್ಲ.

೩. ಗ್ರಂಥಋಣ ಎಂಬುದು ಗೋಜುಗೋಜಾಗಿದೆ. ಗ್ರಂಥಾರಂಭದಲ್ಲಿ ಕೃತಸ್ಮರಣೆ ಪಕ್ಕದಲ್ಲೇ ಒಂದು ಗ್ರಂಥಋಣವಿದೆ. ಮತ್ತೆ ಪುಟ ೨೦೦ ರಿಂದ ೨೦೩ ರವರೆಗೆ ಗ್ರಂಥಾಂತ್ಯದಲ್ಲಿ ಇನ್ನೊಂದು ಗ್ರಂಥಋಣವಿದೆ. ಇವೆರಡರಲ್ಲೂ ಕೆಲವು ಪುನರಾವೃತ್ತಿಯಾಗಿವೆ. ಇಲ್ಲಿಯೂ ಒಂದು ವ್ಯವಸ್ಥೆಯಿಲ್ಲ. ಅಜಿತಪುರಾಣ, ಅನಂತನಾಥ ಪುರಾಣ, ಚಂದ್ರಪ್ರಭ ಪುರಾಣ ಮೊದಲಾದು ವಕ್ಕೆ ಅವುಗಳ ಸಂಪಾದಕರು, ಪ್ರಕಾಶಕರು, ಪ್ರಕಟನ ವರ್ಷ-ವಗೈರೆ ವಿವರಗಳಿಲ್ಲ. ಕವಿರಾಜ ಮಾರ್ಗ, ಕಾವ್ಯಾವಲೋಕನ, ಕವಿಜನಾಶ್ರಯಮು—ಮೊದಲಾದುವಕ್ಕೆ ಈ ವಿವರಗಳಿವೆ. ಮತ್ತೆ ಕೆಲವಕ್ಕೆ ಪ್ರಕಟನ ವರ್ಷ ಕೊಟ್ಟಿದ್ದು ಇನ್ನು ಕೆಲವಕ್ಕೆ ಕೊಟ್ಟಿಲ್ಲ (ಛಂದೋಮಂಜರಿ, ಕಾವ್ಯಕಲಾನಿಧಿ ಪ್ರಕಟಿತ ಛಂದೋಬುಧಿ ಇತ್ಯಾದಿ).

೪. ಸಂಕ್ಷಿಪ್ತ ಸಂಜ್ಞೆಗಳು (ಪುಟ viii) ಕ್ರಮಪ್ರಾಪ್ತ ಗತಿಯಲ್ಲಿಲ್ಲ. ಉಲ್ಲೇಖಿಸಿರುವ ಅನ್ಯ ಗ್ರಂಥಗಳ ಹೆಸರುಗಳನ್ನು ಒಂದಕ್ಷರ, ಎರಡಕ್ಷರ, ಮೂರಕ್ಷರ, ನಾಲ್ಕಕ್ಷರ—ಹೀಗೆ ತೋಚಿದಂತೆ ಸಂಕೇತಿಸಿ (ಸಂಕ್ಷಿಪ್ತಗೊಳಿಸಿ) ಕೊಟ್ಟಿದ್ದಾರೆ.

೫. ಕೆಲವು ಪದ್ಯಗಳ ಪಾಠಾಂತರಗಳನ್ನು ಗುರುತಿಸಿಲ್ಲ, ಮತ್ತೆ ಕೆಲವನ್ನೂ ಗಮನಿಸಿಲ್ಲ. ಪ್ರಥಮಾಧಿಕಾರದಿಂದ ಆಯ್ದು ಉದಾಹರಣೆಗಳನಿತ್ತು ಈ ಸಂಗತಿಯನ್ನು ವಿಶದಪಡಿಸುತ್ತೇನೆ.

i. ಒಂದನೆಯ ಪದ್ಯದ ನಾಲ್ಕನೆಯ ಸಾಲಿನಲ್ಲಿ ಬರುವ 'ಬೇಟ್ಟವರದುನ್ನತಿಯಂ' ಎಂಬುದಕ್ಕೆ 'ಬೇಟ್ವ ವರಮಂ ದಯೆಯಿಂ' ಎಂಬ ಪಾಠಾಂತರವಿದೆ.

ii. ಎರಡನೆಯ ಪದ್ಯದ ನಾಲ್ಕನೆಯ ಸಾಲಿನಲ್ಲಿ ಬರುವ 'ಕೂರ್ತು ನಮಗೀಗೆ' ಎಂಬುದಕ್ಕೆ 'ಕೂರ್ತೆಮಗೀಗೆ' ಎಂಬ ಪಾಠಾಂತರವಿದೆ.

iii. ನಾಲ್ಕನೆಯ ಪದ್ಯದ ಕಡೆಯ ಸಾಲಿನಲ್ಲಿ 'ಕೂರ್ತು ಬೀರಸಿರಿಯಿಗೆ' ಎಂಬುದಕ್ಕೆ 'ತಾನೆ ವೀರಸಿರಿಯಕ್ಕೆ' ಎಂಬ ಪಾಠಾಂತರವಿದೆ,

iv. ಪದ್ಯ ೭, ಸಾಲು ೨ ; 'ಪುರಾಣಮಾರ್ಗ' ಎಂಬುದಕ್ಕೆ ಇರುವ ಇನ್ನೊಂದು ಪಾಠ 'ಪುರಾಣ ಪೂರ್ವ'

v. ಪದ್ಯ ೮

ಬಲ್ಲರ ಬಗೆಯಂ ಕಲ್ತುಮ
ನೆಲ್ಲಮನಂಗೊಂಡೊಱಲ್ದು ಪೇೞಲ್ ಕೀತಂ ।
ಬಲ್ಲನೆನಲ್ಕೆಱವಿಕ್ಕಿದ
ಬೆಲ್ಲದವೊಲಪೂರ್ವಮಾಗೆ ಪೇೞ್ದಂ ಕೃತಿಯಂ ॥

ಇದಕ್ಕಿರುವ ಭಿನ್ನಪಾಠ

ಬಲ್ಲರ ಬಗೆಯಂ ಕೇಳ್ದವ
ರೆಲ್ಲಂ ಕೈಕೊಂಡರಲ್ದು ಕೇಳ್ದಿಂತೀತಂ ।
ಬಲ್ಲನೆನಲ್ಕೆಱವಿಕ್ಕಿದ
ಚೆಲ್ವೆನಿಸಲಪೂರ್ವಮಾಗೆ ಪೇೞ್ದಂ ಕೃತಿಯಂ ॥

vi ಪದ್ಯ ೧೦

ಪ್ರಾಸಾನುಪ್ರಾಸಂಗಳ
ಲೇಸಾಗಿರೆ ಸುಕ್ಕಡಂಗಿ ಕನ್ನಡದಿಂ ಪೇ ।
ಟ್ವಾಸುಕವಿಯುನಾಶುಕವಿಯು
ನಾಸುಕವಿಪ್ರಕರಮಱಿದು ಮೆಚ್ಚುಗುಮಲ್ತೆ ॥

ಇದಕ್ಕೆ ಬೇರೆ ಪಾಠಾಂತರಗಳಿರುವ ಪದ್ಯ :

ಪ್ರಾಸಾನುಪ್ರಾಸಕ್ಕದು
ಲೇಸಾಗಿರೆ ಸುಕ್ಕಡಂಗಿ ಕನ್ನಡದಿಂ ಪೇ ।
ಳ್ದಾಸುಕರ ಕವಿಯ ಬಲ್ಮೆಯು
ನಾಸುಕವಿ ಪ್ರಕರಮಱಿದು ಮೆಚ್ಚುಗುಮಲ್ತೇ ॥

ಈ ಪಾಠಾಂತರಗಳನ್ನು ಸಂಪಾದಕರು ಗುರುತಿಸದೇ ಹೋದದ್ದು ಅಸಮರ್ಥನೀಯವಾಗಿದೆ, ಏಕೆಂದರೆ ಇವು ಅವರು ಕೊಡುವ ಗ್ರಂಥಋಣ ಪಟ್ಟಿಯಲ್ಲಿನ ಹಸ್ತಪ್ರತಿಗಳಲ್ಲೇ ದೊರೆಯುತ್ತವೆ.

೬. ಕೆಲವು ಪದ್ಯಗಳ ನಡುವೆ ಅಲ್ಪವಿರಾಮ ಚಿಹ್ನೆ ಹಾಕಿರುವುದು ಅಶುದ್ಧ ಕ್ರಮ. ಪದವಿಭಾಗ, ಗಣವಿಭಾಗ, ಅಂಶವಿಭಾಗ ಮೊದಲಾದುವನ್ನು ಸೂಚಿಸುವುದಿದ್ದರೂ ಉದ್ದಕ್ಕೂ ಒಂದು ನಿಯಮದಂತೆ ಇದನ್ನು ಪಾಲಿಸಬೇಕು. ಇನ್ನೂ ದೋಷವೆಂದರೆ ಒಂದೇ ಪದ್ಯದಲ್ಲಿ ಒಂದೋ ಎರಡೋ ಸಾಲಿಗೆ ಪದವಿಭಾಗ ಸೂಚನೆ ಕೊಟ್ಟು ಉಳಿದ ಪಾದಗಳಲ್ಲಿ ಅದನ್ನು ಕೈಬಿಟ್ಟಿರುವುದು.

೭. ಅಲ್ಲಲ್ಲಿ ಸಂಪಾದಕರು ಮೂಲ ಪದ್ಯಗಳಿಗೆ ಹೊಸಗನ್ನಡದಲ್ಲಿ ವ್ಯಾಖ್ಯಾನಿಸುವುದುಂಟು. ಕವಿಕೃತ ಪದ್ಯಗಳ ಜತೆಗೇ ಸಂಪಾದಕ ರಚಿತ ವಿವರಣೆಯೂ ಮುದ್ರಣ ವ್ಯತ್ಯಾಸವಿಲ್ಲದೆ ಬೆರೆತಿರುವುದು ಸರಿಯಲ್ಲ. ಸಂಪಾದಕರ ವಿವರಣೆಗಳು ಪ್ರತ್ಯೇಕವಾಗಿರಬೇಕು. ಇವೆರಡರ ನಡುವೆ ಒಂದು ತೆಳು ಅಡ್ಡಗೆರೆ ತರುವುದು ವಾಡಿಕೆ. ಅಥವಾ ಅಡಿ ಟಿಪ್ಪಣಿಯಲ್ಲೋ ಬೇರೆ ಪ್ರಮಾಣದ ಅಕ್ಷರ ವಿಧಾನದಿಂದಲೋ ಸೂಚಿಸಬಹುದು. ಛಂದೋಂಬುಧಿಯ ಪದ್ಯಗಳೂ ಸಂಪಾದಕರ ವಿವರಣೆಯೂ ೧೨ ಪಾಯಿಂಟ್ ರೋಮನ್‌ನಲ್ಲೇ ಇರುವುದನ್ನಾದರೂ ತಪ್ಪಿಸಬಹುದಿತ್ತು. ನಾಗವರ್ಮನ ವಚನ ಭಾಗವೂ ಬಂದಾಗ ಇದರ ಔಚಿತ್ಯವೇನೆಂಬುದು ಮನವರಿಕೆಯಾಗುತ್ತದೆ.

೮. ಕೆಲವು ಪದ್ಯಗಳಿಗೆ ವಿವರಣೆ ಕೊಡುವುದು, ಮತ್ತೆ ಕೆಲವಕ್ಕೆ ಕೊಡದಿರುವುದು – ಈ (ಅ)ವ್ಯವಸ್ಥೆಯ ಹಿಂದೆ ಕೂಡ ಒಂದು ಗೊತ್ತಾದ ಸಕ್ರಮ ನಿಯಮ ಪ್ರವರ್ತಿಸಿಲ್ಲ. ಏಕೆಂದರೆ ವಿವರಣೆ ಬಯಸುವ ಕೆಲವು ಪದ್ಯಗಳಿಗೆ ವಿವರಣೆಯೇ ಇಲ್ಲ ಮತ್ತು ವಿವರಣೆ ಬೇಡದ ಕೆಲವು ಸರಳ ಪದ್ಯಗಳಿಗೆ ವಿವರಣೆಯಿದೆ.

೯. ಅನೇಕ ಪದ್ಯಗಳಿಗೆ ಆಯಾ ಪದ್ಯದ ವೃತ್ತಜಾತಿಯನ್ನು ಹೆಸರಿಸಿದ್ದರೂ ಕೆಲವು ಪದ್ಯಗಳಿಗೆ ತಿಳಿಸಿಲ್ಲ.

೧೦. ಪೀಠಿಕೆಯಲ್ಲಿ ಅನಾವಶ್ಯಕ ವಿವರಗಳನ್ನು ಕಲೆಹಾಕಿ ಹೇಳಿದ್ದಾರೆ. ಕೆಲವು ಕಡೆ ಅತಿ ವಿಸ್ತಾರದ ದೋಷಗಳಿವೆ. ಒಮ್ಮೊಮ್ಮೆ ಅನಗತ್ಯವಾಗಿ ಸಂಸ್ಕೃತ ಪದ್ಯಗಳನ್ನು ಉದಾಹರಿಸುತ್ತಾರೆ. ಸಂಗೀತದ ವಿವರಣೆ ಅಪ್ರಸ್ತುತವೆಂಬಷ್ಟು ಹೆಚ್ಚು ಬಂದಿದೆ.

೧೧. ಶಬ್ದಕೋಶ ಹೇಗಿರಬಾರದೊ ಹಾಗಿದೆ: ತೊಡರದೆ, ತೊದಳೇಂ, ದ್ಯೋತಿಸಿರೆ, ಪತ್ತಿದರ್ಾಗಳ್, ಪರ್ಬಿಕ್ಕೆ, ಪುದಿದಿರ್ಕೆ, ಪುದುಂಗೊಳೆ, ಸಮನಿಸಲ್ – ಎಂಬ ಶಬ್ದಗಳು ಶಬ್ದಕೋಶದ ವ್ಯವಸ್ಥೆಗೆ ಅಳವಟ್ಟಾಗ ತೊಡರು, ತೊದಳು, ದ್ಯೋತಿಸು, ಪತ್ತು, ಪರ್ಬು, ಪುದಿ, ಪುದು/ಪುದುಂಗೊಳ್, ಸಮನಿಸು ಎಂಬಂತೆ ಇರಬೇಕಾಗುತ್ತದೆ.

೧೨. ಇದು ಆಗಸ್ಟ್ ೧೯೭೫ ರಲ್ಲಿ ಪ್ರಕಟವಾಗಿದೆ; ಮೇ ೧೯೭೪ ರಲ್ಲಿ ಮೈಸೂರಿನಲ್ಲೇ ಪ್ರಕಟವಾದ ಛಂದಸ್ಸಂಪುಟದ ಉಲ್ಲೇಖ ಇದರಲ್ಲಿ ಬಂದಿಲ್ಲ.

೧೩. ಅಪಾರ ಮುದ್ರಣ ದೋಷಗಳಿವೆ. ಇವು ಕರಡು ತಿದ್ದಾಣಿಕೆಯಲ್ಲಿ ಎಚ್ಚರ ತೋರದಿದ್ದುದರಿಂದ ಸಂಭವಿಸಿರುವ ಸ್ಖಾಲಿತ್ಯಗಳೇ ಹೊರತು ಅಚ್ಚುಕೂಟದವರ ಅಥವಾ ಪ್ರಕಾಶಕರ ತಪ್ಪಲ್ಲ.

೧೪. ಪುಸ್ತಕದ ಬೆಲೆ (೨೫/-) ಹೆಚ್ಚಾಯಿತೆಂಬುದೇ ಹೊರತು ಮುದ್ರಣ, ಕಾಗದ, ಹೊದಿಕೆ ಮುದ್ದಾಗಿವೆ.

೧೫. ಸಂಪಾದಕರಿಗೆ ಗ್ರಂಥ ಸಂಪಾದನಾ ಶಾಸ್ತ್ರದ ಪ್ರವೇಶ ಪರಿಶ್ರಮಗಳಿಲ್ಲವೆಂದು ಚೆನ್ನಾಗಿ ಸಾಬೀತಾಗುತ್ತದೆ.

೧೬. ಒಟ್ಟಾರೆ ಇದೊಂದು ಜನಪ್ರಿಯ ಆವೃತ್ತಿಯಾಗಿಯೇ ಉಳಿಯುತ್ತದೆ.

ಬಾಹುಬಲಿ ಪಂಡಿತನ ಧರ್ಮನಾಥ ಪುರಾಣವನ್ನು (ಸಂ : ಎನ್. ಬಸವಾರಾಧ್ಯ) ನಾಲ್ಕು ಹಸ್ತಪ್ರತಿಗಳಿಂದ ಸಂಪಾದಿಸಲಾಗಿದೆ. ಇವುಗಳಲ್ಲಿ ಕ, ಗ, ಚ ಪ್ರತಿಗಳ ಮೂಲ ಮೂಡಬಿದ್ರಿಗೆ ಸೇರಿದ್ದು. ಮೂಡಬಿದ್ರಿಯ ದಿವಂಗತ ಲೋಕನಾಥ ಶಾಸ್ತ್ರಿಗಳಿಂದ ಬಂದ ಗ್ರಂಥದಿಂದ ಎತ್ತಿದ ಪ್ರತಿಯೇ ಕ ಪ್ರತಿ. ಮೂಡಬಿದ್ರಿಯ ಜೈನಧರ್ಮ ಶಾಲೆಯಲ್ಲಿನ ಓಲೆಯ ಪ್ರತಿಯಿಂದ ಮೈಕ್ರೊಫಿಲಂ ಮಾಡಿದ ಪ್ರತಿ 'ಗ'. ಮೂಡಬಿದ್ರಿಯ ವೀರವಾಣಿ ಸಿದ್ಧಾಂತ ಭವನದ ಓಲೆಪ್ರತಿಯ ಮೈಕ್ರೋಫಿಲಂ ಪ್ರತಿ 'ಚ'. ಎಂ. ಸಿ. ಪದ್ಮನಾಭಶರ್ಮರು ಜಿನವಾಣಿ ಪತ್ರಿಕೆಯಲ್ಲಿ ಪ್ರಕಟಿಸಿದ ಅಪ್ಪಾಶ್ವಾಸಗಳ ಪ್ರತಿ 'ಜ', ಅಂದರೆ 'ಜ' ಮುದ್ರಿತ ಪ್ರತಿ.

ಈ "ನಾಲ್ಕು ಪ್ರತಿಗಳಲ್ಲಿ ಕ ಪ್ರತಿ ಶುದ್ಧವಾದುದು, ಸಮಗ್ರವಾದುದು. ಆದರೂ ಸಹ ಕೆಲವೆಡೆ ಗ್ರಂಥಪಾತವಾಗಿದೆ. ಅಂಥ ಕಡೆಗಳಲ್ಲಿ ಇನ್ನುಳಿದ ಪ್ರತಿಗಳಿಂದ ಅದನ್ನು ತುಂಬಲಾಗಿದೆ. ಈ ಕಾವ್ಯದ ಪಾಠಾಂತರಗಳನ್ನು ನಿರ್ಧರಿಸುವಲ್ಲಿ ಯಾವುದೇ ಒಂದು ಪ್ರತಿಯನ್ನು ನಿರಂತರವಾಗಿ ಅನುಸರಿಸಿಲ್ಲ. ಆದರೆ ಕ ಪ್ರತಿಯ ಪಾಠಾಂತರಗಳನ್ನು ವಿಶೇಷವಾಗಿ ಅನುಸರಿಸಲಾಗಿದೆ. ಸಂದರ್ಭೋಚಿತವಾಗಿ ಇತರ ಪ್ರತಿಗಳ ಪಾಠಗಳನ್ನೂ ಕೊಡಲಾಗಿದೆ. ಒಟ್ಟಿನಲ್ಲಿ ಕವಿಯ ಮೂಲ ಪಾಠ ಏನಿದ್ದಿರಬಹುದು ಎಂಬ ಬಗ್ಗೆ ಆಲೋಚನೆ ಮಾಡಿ ವಿಚಾರ ಮಾಡಿ ಆ ಪಾಠಗಳನ್ನೇ ಇಲ್ಲಿ ಉಳಿಸಿಕೊಳ್ಳಲು ಯತ್ನಿಸಲಾಗಿದೆ" ಎಂದು ಸಂಪಾದಕರು ತಿಳಿಸಿದ್ದಾರೆ. ಇದರಲ್ಲಿ ಪುನರುಕ್ತಿ ದೋಷವಿದ್ದರೂ, ಅವರ ಈ ಆಶಯ ಬಹುಮಟ್ಟಿಗೆ ಈಡೇರಿದೆಯೆನ್ನಬಹುದು.

ಧರ್ಮನಾಥಪುರಾಣಕ್ಕೆ ಬಳಸಿಕೊಂಡ ನಾಲ್ಕು ಪ್ರತಿಗಳಲ್ಲಿ ಮೂರು ಪ್ರತಿಗಳು ಮೂಡಬಿದ್ರಿಯವೆಂಬುದು ಗಮನಾರ್ಹ. ಇದರಿಂದಾಗಿ ಕ ಗ ಚ ಪ್ರತಿಗಳಲ್ಲಿ ಪಾಠಾಂತರಗಳು ಅತಿ ಕಡಮೆ. ಇವು ಮೂರೂ ಪ್ರತಿಗಳು ಒಂದೇ ಮೂಲ ಪ್ರತಿಯ ನಕಲುಗಳೆಂದು ಧಾರಾಳವಾಗಿ ತಿಳಿಯಲವಕಾಶವಿದೆ. ಕ ಮತ್ತು ಚ ಪ್ರತಿಗಳೆರಡೂ ಶಕ ೧೩೪೨ (ಅಂದರೆ ಕ್ರಿ. ಶ. ೧೪೨೦) ರಲ್ಲಿ ಪ್ರತಿಯಾಗಿವೆ. ಇವೆರಡೂ ಕಾರ್ಕಳದ ಲಲಿತಕೀರ್ತಿ ಭಟ್ಟಾರಕರ ಶಿಷ್ಯ ದೇವರಶೆಟ್ಟಿ ಬರೆಸಿಕೊಟ್ಟ ಪ್ರತಿಗಳು. ಸ್ವಾರಸ್ಯವೆಂದರೆ ಕ ಮತ್ತು ಚ ಪ್ರತಿಗಳು ಪ್ರತ್ಯೇಕವಾಗಿರದೆ ಒಂದೇ ಆಗಿದೆಯೆಂಬುದು. ಇದನ್ನು ಆಂತರಿಕ ಪ್ರಮಾಣಾಧಾರಗಳಿಂದ ಅಸ್ಖಲಿತವಾಗಿ ಸ್ಥಾಪಿಸಬಹುದು.

ಮೂಡಬಿದ್ರೆಯಲ್ಲಿದ್ದ ಲೋಕನಾಥ ಶಾಸ್ತ್ರಿಗಳಿಂದ (ಕ) ಓಲೆಗರಿ ಪ್ರತಿಯನ್ನು ಮೈಸೂರಿನವರು ತರಿಸಿಕೊಂಡು ಅದರ ಪ್ರತಿ ಮಾಡಿಕೊಂಡರು, ಹೀಗೆ ಬರೆದುಕೊಂಡ ಕಾಗದದ ಪ್ರತಿಯೇ 'ಕ' ಪ್ರತಿ. ಪ್ರತಿ ಎತ್ತಿದ್ದ ಆದಮೇಲೆ ಮೂಲ ಓಲೆಗರಿ ಪ್ರತಿಯನ್ನು ಮೈಸೂರಿನವರು ಮೂಡಬಿದ್ರಿಗೇ ಹಿಂತಿರುಗಿಸಿದರು. ಇತ್ತೀಚೆಗೆ, ಮತ್ತೆ ಆಧುನಿಕ ಉಪಕರಣಗಳ ನೆರವು ದೊರೆತ ಮೇಲೆ

ಮೈಸೂರಿನವರು ಪುನಃ ಮೂಡಬಿದ್ರಿಗೆ ಹೋಗಿ, ಈ ಹಿಂದೆ ಆಗಲೇ ತರಿಸಿ ಕಾಗದದ ಪ್ರತಿ ಮಾಡಿಕೊಂಡು ಹಿಂತಿರುಗಿಸಿದ್ದ ಅದೇ ಓಲೆ ಪ್ರತಿಯ ಮೈಕ್ರೋಫಿಲಂ ತೆಗೆದುಕೊಂಡು ಬಂದರು, ಹೀಗೆ ಮೈಕ್ರೋಫಿಲಂ ಎತ್ತಿದ ಪ್ರತಿಯೇ 'ಚ' ಪ್ರತಿ. ಆದ್ದರಿಂದ ಚ ಪ್ರತಿಯನ್ನು ಪ್ರತ್ಯಂತರ ವೆಂದು ಕರೆಯಬಹುದು. ಇದನ್ನು ಸಂಪಾದಕರು ಗುರುತಿಸಲು ಸೋತಿದ್ದಾರೆ. ಅಲ್ಲದೆ ಚ ಪ್ರತಿಯ ಬಗ್ಗೆ 'ಈ ಪ್ರತಿಯನ್ನು ಕಾರ್ಕಳದ ಭಟ್ಟಾರಕರಾಗಿದ್ದ ಲಲಿತಕೀರ್ತಿಯವರ ಶಿಷ್ಯ ದೇವರ ಶೆಟ್ಟಿ ಬರೆದು ಶಾಂತಿನಾಥ ಮಂದಿರಕ್ಕೆ ದಾನವಾಗಿ ಕೊಟ್ಟಂತೆ ಹೇಳಿದೆ' ಎಂದು ತಿಳಿಸಿದ್ದಾರೆ (ಪುಟ ೩೫). ಇಲ್ಲಿ 'ದೇವರ ಶೆಟ್ಟಿ ಬರೆದು' ಎಂಬುದು ತಪ್ಪು, ಅದು 'ದೇವರ(ರು) ಶೆಟ್ಟಿ ಬರಸಿ ಕೊಟ್ಟ' ಎಂದಿರಬೇಕು. 'ಗ' ಪ್ರತಿಯೂ ಬಹುಮಟ್ಟಿಗೆ ಕ ಪ್ರತಿಯದೇ ಮತ್ತೊಂದು ನಕಲೆಂದೂ ತೋರುತ್ತದೆ. ಹೀಗಾಗಿ ಧರ್ಮನಾಥ ಪುರಾಣದ ಸಂಪಾದನೆಗೆ ಆಧಾರ ಮೂರೇ ಪ್ರತಿಗಳು :

ಅ. ಕ ಅಥವಾ ಚ ಪ್ರತಿ

ಆ. ಗ ಪ್ರತಿ

ಇ. ಜ ಪ್ರತಿ

ಜತೆಗೆ ಎಂ. ಸಿ. ಪದ್ಮನಾಭ ಶರ್ಮರು ಪ್ರಕಟಿಸಿದ (ಅಸಮಗ್ರ) ಪ್ರತಿಗೆ ಉಪಯೋಗಿಸಿಕೊಂಡ ಮೂಲ ಪ್ರತಿಗಳು ಯಾವುವು ? ಅವರು ಅದನ್ನು ತಿಳಿಸಿದ್ದಾರೆಯೇ ಇಲ್ಲವೇ ಎಂಬುದನ್ನು ಈ ಸಂಪಾದಕರು ಹೇಳಬೇಕಿತ್ತು.

'ಬಾಹುಬಲಿ ಪಂಡಿತ ತನ್ನ ಕಾವ್ಯಕ್ಕೆ ಯಾವ ಕೃತಿಯನ್ನು ಆಧರಿಸಿದ್ದಾನೆಂಬುದನ್ನು ಹೇಳಿಕೊಂಡಿಲ್ಲ' ಎಂದು ಸಂಪಾದಕರು ಪ್ರಸ್ತಾವನೆಯಲ್ಲಿ (ಪುಟ ೩೩) ನಿರೂಪಿಸಿದ್ದಾರೆ. ಇದು ತಪ್ಪು. ಬಾಹುಬಲಿ ಪಂಡಿತ ತನ್ನ ಕಾವ್ಯದ ಆಕರವನ್ನು —

ಮೊದಲೊಳ್ ತದ್ಧರ್ಮ ಶರ್ಮಾಭ್ಯುದಯಮನೊಲವಿಂದೋದಿ ಕರ್ಣಾ
ಟದಿಂ ಪತ್ತ್ರದನೀಗಳ್ ಪೇಳ್ವೆನೆಂಬುಜ್ಜುಗದೊಳಿರುತಿರಲ್ ಭವ್ಯ ಸಂದೋಹಮಂ ಸ ।
ಮ್ಮದಮಾಗಲ್ ಜೀಯ ನೀವೀಕೃತಿಯನಿರದೆ ಪೇಳಲ್ಕೆವೇಳ್ಕೆಂದೊಡೆ ಸೌ
ಹೃದ ಪೂರ್ತೋತ್ಕಂಪಮಾಗುತ್ತಿರೆ ವಿರಚಿಸಿದಂ ಚಾತುರೀ ಜನ್ಮಗೇಹಂ ॥ (೧-೫೮)

ಎಂಬ ಪದ್ಯದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾನೆ.

ಗ್ರಂಥ ಸಂಪಾದನೆ ಚೆನ್ನಾಗಿದೆಯಾದರೂ ಅನೇಕ ದೋಷಗಳು ಉಳಿದು ಬಿಟ್ಟಿವೆ ; ಹತ್ತನೆಯ ಆಶ್ವಾಸದಿಂದ ಕೇವಲ ಎರಡು ಮೂರು ಉದಾಹರಣೆಗಳನ್ನು ಕೊಡುವುದರಿಂದ ನನ್ನ ಹೇಳಿಕೆ ಸ್ಪಷ್ಟ ವಾಗುತ್ತದೆ: ಪದ್ಯ ೧೨೬ರಲ್ಲಿ 'ಸಿರಿಸಿಂಬಿ ತಂಪುಗಂ' ಎಂದಿದೆ, ೧೩೨ರ ವಚನದಲ್ಲಿ 'ಸಿರಿಸಿಂಬಿ... ಕಂಪಿಗಂ' ಎಂದಿದೆ. ತಂಪುಗಂ – ಕಂಪಿಗಂ ಇವೆರಡರಲ್ಲಿ ಯಾವುದಾದರೂ ಒಂದು ರೂಪ ಸರಿಯಿರ ಬಹುದೆಂಬ ಸಂದೇಹ ಬರುತ್ತದೆ ; ಸಂಪಾದಕರು ಅರ್ಥಕೋಶದಲ್ಲಿ ತಂಪು (ಗಂ) ಶಬ್ದಕ್ಕೆ 'ಒಂದು ಬಗೆಯ ಹೆಂಡ' ವೆಂದು ಅರ್ಥಕೊಟ್ಟಿದ್ದಾರೆ, ಕಂಪು (ಗಂ) ಶಬ್ದಕ್ಕೆ ಕೊಟ್ಟಿಲ್ಲ, ಇದು ಕೂಡ ಓದುಗರ ಅನುಮಾನವನ್ನು ಬಲಗೊಳಿಸುತ್ತದೆ. ೧೩೪ನೆಯ ಪದ್ಯ ಹೀಗಿದೆ ;

ದೇಯದ ನೀಲದುಂಗುರುದ ಕಾಂತಿಗಳಿಂ ಕರಿದಾಗಿ ಶೋಭೆಯುಂ
ಬೀಯದ ಪಾಣಿ ಶೋಣಮಣಿ ಕಂಕಣ ಸತ್ಕಿರಣಂಗಳಿಂದೆ ಕೆಂ ।
ಪಾಯುತ ಮಾಗಿ ತೋಱಿದೊಡೆ ಮಾನಸದೊಳ್ ಪುದಿಯಲ್ಕೆ ಕೌತುಕಂ
ಮಾಯದ ಮದ್ಯಮೆಂದಬಳೆ ಪಿರದೆ ನೋಡಿದಳೊಂದು ಜಾವಮಂ ॥

ಇಲ್ಲಿಯ ಕಡೆಯ ಸಾಲಿನಲ್ಲಿ ಬರುವ ಪಿರದೆ ಶಬ್ದಕ್ಕೆ ಏನು ಅರ್ಥ ? ಅಂಥದೊಂದು ಶಬ್ದ ಅಸ್ತಿತ್ವದಲ್ಲಿರುವಂತೆ ತೋರುತ್ತಿಲ್ಲ. ಇಲ್ಲಿ ಅರ್ಥಕ್ಕೆ ಚ್ಯುತಿಯುಂಟಾಗಿದೆಯಷ್ಟೇ ಅಲ್ಲ ಛಂದಸ್ಸಿಗೂ

ಭಂಗವಾಗಿದೆ. ಈ ಪದ್ಯ ಉತ್ಪಲಮಾಲಾ ಜಾತಿಗೆ ಸೇರಿದ್ದು. ಇದರಲ್ಲಿ ಗುರು ಲಘು ವಿನ್ಯಾಸ ಪ್ರತಿಪಾದದಲ್ಲೂ ಹೀಗಿರಬೇಕು.—

—∪∪—∪—∪∪∪—∪∪—∪∪—∪—∪—

ಆದರೆ 134ನೆಯ ಪದ್ಯದ ನಾಲ್ಕನೆಯ ಪಂಕ್ತಿ ಹೀಗಿದೆ : —∪∪—∪—∪∪∪ ∪∪∪ —∪∪—∪—∪—ಹೀಗಾಗಿ ಇಲ್ಲಿನ ನಾಲ್ಕನೆಯ ಗಣ ∪∪∪ (ಪಿರದೆ) ಎಂದಿರುವುದರ ಬದಲು —∪∪ ಎಂದಿರಬೇಕು. ಈಗ ಬರುವ ಪ್ರಶ್ನೆ ಇದಕ್ಕೆ ಪಾಠಾಂತರವಿದೆಯೆ ಎಂಬುದು. ಪಿರದೆ ಎಂಬುದಕ್ಕೆ ಪಿಂದೆ ಎಂದು ಕ ಪ್ರತಿಯಲ್ಲಿ ಪಾಠಾಂತರವಿದೆ. 'ಪಿರ' ಎಂಬ ಎರಡು ಲಘ್ವಕ್ಷರಗಳ ಸ್ಥಾನದಲ್ಲಿ 'ಪಿಂ' ಎಂಬ ಒಂದು ಗುರು ಇರುವುದು ಸರಿಯಾಗಿದೆ. ಪಿರದೆ ಎಂಬುದನ್ನು ಕ ಪ್ರತಿಯ ಪಾಠಾಂತರ ಒಪ್ಪಿಕೊಂಡು ಪಿಂದೆ ಎಂದು ಮಾಡಿದರೆ ಅರ್ಥದ ಹೊಂದಾಣಿಕೆಯೇನೋ ಆಗುತ್ತದೆ, ಆದರೆ ಆಗಲೂ ಛಂದೋಭಂಗವೇ ಆಗುತ್ತದೆ. ಪಿರದೆ (∪∪∪) ಎಂಬುದರ ಸ್ಥಾನದಲ್ಲಿ ಪಿಂದೆ (—∪) ಎಂದು ಇಟ್ಟುಕೊಂಡಾಗ ಇನ್ನೊಂದು (ಲಘು) ಅಕ್ಷರ ಲೋಪವಾದಂತಾಗುತ್ತದೆ. ಆದ್ದರಿಂದ ಅನ್ಯಾಧಾರಗಳಿಲ್ಲದಿರುವ ಇಂಥ ಪರಿಸ್ಥಿತಿಯಲ್ಲಿ ಉಳಿದಿರುವ ಮಾರ್ಗವೆಂದರೆ ಪದ್ಯದ ಒಟ್ಟು ಅರ್ಥವನ್ನು ಅನುಸಂಧಾನಿಸಿ ಮೂಲಪಾಠವನ್ನು ಊಹಿಸುವುದು. ಈ ಪ್ರಯತ್ನದಲ್ಲಿ ಪಾಂಡಿತ್ಯದ ಜತೆಗೆ ಪ್ರತಿಭೆಯೂ ಬೇಕಾಗುತ್ತದೆ. ಪದ್ಯದ ಒಟ್ಟು ಓಟಕ್ಕೆ, ಅರ್ಥಕ್ಕೆ, ಛಂದಸ್ಸಿಗೆ, ಕವಿಯ ಆಶಯಕ್ಕೆ ಕುಂದಾಗದಂತೆ ನೋಡಿಕೊಳ್ಳಬೇಕು. ಪಿರದೆ ಎಂಬ ಸ್ಥಾನದಲ್ಲಿ [ಪೀ] ರದೆ ಎಂದಿದ್ದಿರಬೇಕೆಂದು ಒಂದು ಊಹಾಪಾಠವನ್ನು ನಿರ್ಣಯಿಸಬಹುದೆಂದು ನನಗೆ ತೋರುತ್ತದೆ. ಈ ಊಹಾಪಾಠದಿಂದ ಮೇಲಿನ ಪದ್ಯದ ಅರ್ಥಕ್ಕೆ ಒಂದು ನೂತನ ಆಯಾಮ ದೊರೆತು ಪದ್ಯ ಮತ್ತೂ ಪರಿಭಾವ್ಯವಾಗುತ್ತದೆ.

ಪದ್ಯ ೧೩೭ರ ಅನಂತರದಲ್ಲಿನ ವಚನದಲ್ಲಿ 'ಕಳ್ಳಂ ಕುಡಿದಡಗಂ ತಿಂದದ ಜಿಮಹಿಮೆಯಂ ಮೆಚ್ಚಿ ಮೆಚ್ಚಿ ಬಿಚ್ಚಿತಂ ನಡಿದೊರ್ವರ್ವರ ನಗೆವೊಗಮುಂ ನೋಡಿ' ಎಂದು ಇದೆ. ಇಲ್ಲಿನ ವಾಚ್ಯಾರ್ಥವನ್ನೇ ಹಿಡಿದು ಹೊರಟರೂ 'ನಡಿದೊ...' ಎಂಬುದು 'ನುಡಿದೊ...' ಅಥವಾ 'ಕಡಿದೊ...' ಇಲ್ಲವೇ 'ಕುಡಿದೊ...' ಎಂದಿರಬೇಕೇ ಹೊರತು 'ನಡಿದೊ...' ಎಂದಿರಲು ಸಾಧ್ಯವಿಲ್ಲ. ಇಂಥ ಇನ್ನೂ ಕೆಲವು ಪಾಠಕ್ಲಿಷ್ಟತೆಗಳಿವೆ. ವಿಶಿಷ್ಟ ಪದ ಸೂಚಿಯಲ್ಲಿ ಪ್ರಯೋಜನಾಂಶ ಕಂಡು ಬರುವುದಿಲ್ಲ. ಈ ಉದಾಹರಣೆಗಳನ್ನು ನೋಡಿ :

ಅಕಳಂಕವ್ರತಿ	—	ಒಬ್ಬ ಜೈನಮುನಿ
ಉಗ್ರವಂಶ	—	ಒಂದು ವಂಶ
ಊರ್ಜಯಂತ	—	ಒಂದು ಪರ್ವತ
ಕಾಳಿಂದೀ	—	ಒಂದು ನದಿ
ಕೊಂಡಕುಂದ	—	ಒಬ್ಬ ಮುನಿ
ನಾಥ ವಂಶ	—	ಒಂದು ವಂಶ
ಪಾವಾಪುರಿ	—	ಒಂದು ಊರು
ಭಾನುರಾಜ	—	ಒಬ್ಬ ರಾಜ

ಈ ರೀತಿ ಹೇಳುತ್ತಾ ಹೊರಡುವುದಾದರೆ ಅದಕ್ಕೆ ಮಿತಿಯೇ ಇರುವುದಿಲ್ಲ. ಅಲ್ಲದೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಜತೆಗೆ ವಿಶಿಷ್ಟ ಪದ ಸೂಚಿ ನೋಡದೆಯೇ ಓದುಗರಿಗೇ ಅರ್ಥವಾಗುವಂತೆ ಕವಿಯೇ ಸ್ಪಷ್ಟಪಡಿಸಿದ್ದಾನೆ. ಶಬ್ದಾರ್ಥ ವಿವರಣೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ ಕೊಡುವಂತಿದ್ದರೆ ಮಾತ್ರ ವಿಶಿಷ್ಟ ಪದ ಸೂಚಿಯ ಅಗತ್ಯ ಬೀಳುತ್ತದೆ. ೧-೩೦

ನೆಯ ಪದ್ಯದಲ್ಲಿ ಬಾಹುಬಲಿ ಪಂಡಿತ ಕವಿ ಹೇಳಿರುವ ಹಲವು ಕನ್ನಡ ಕವಿಗಳನ್ನು ಮತ್ತೆ ಅಕಾರಾದಿಯಾಗಿ ಈ ಪಟ್ಟಿಯಲ್ಲಿ ಕೊಟ್ಟು ಪ್ರತಿಯೊಂದಕ್ಕೂ 'ಒಬ್ಬ ಕನ್ನಡ ಕವಿ' ಎಂದು ವಿವರಿಸಿರುವುದು ಹಾಸ್ಯಾಸ್ಪದವಾಗುತ್ತದೆ; ಕಡೆಗೆ ಈ ಕವಿಗಳ ಕಾಲ-ಕೃತಿಗಳನ್ನಾದರೂ ಕೊಟ್ಟಿದ್ದರೆ ಇದರ ಉಪಯುಕ್ತತೆಯನ್ನು ಪ್ರಶ್ನಿಸುವಂತಾಗುತ್ತಿರಲಿಲ್ಲ. ಇದೇ ರೀತಿ ಪಾರಿಭಾಷಿಕ ಪದಸೂಚಿಯೂ ಅಸಮಗ್ರವಾಗಿದೆ. ಧರ್ಮನಾಥ ಪುರಾಣವನ್ನು ಹಲವು ಮಗ್ಗಲುಗಳಿಂದ ವಿಮರ್ಶಿಸಿದ್ದರೆ ಪ್ರಸ್ತಾವನೆಯಾದರೂ ಸರಿಯಾಗುತ್ತಿತ್ತು. ಉದಾಹರಣೆಗೆ ಸಮಕಾಲೀನ ಜನಜೀವನವನ್ನು ಬಾಹುಬಲಿ ಪಂಡಿತಕವಿ ಕಂಡರಿಸಿರುವ ಭಾಗಗಳನ್ನು ಗುರುತಿಸಬಹುದಿತ್ತು. ಇದರಲ್ಲಿ ಬರುವ ಹೆಂಡದಂಗಡಿಯ ಸಂಬಂಧವಾದ ವಿಸ್ತಾರವಾದ ಹೃದ್ಯವಾದ ಜೀವಂತ ವರ್ಣನೆ, ಇದಕ್ಕೆ ಮೂಲವಾದ ಉತ್ತರ ಪುರಾಣ ಮತ್ತು ಚಾವುಂಡರಾಯ ಪುರಾಣಗಳಲ್ಲಿ ಇಲ್ಲ, ಇದು ಬಾಹುಬಲಿ ಪಂಡಿತನ ಸ್ವಂತಿಕೆಯನ್ನು ಸಾರುವ ಸುರೆಯ ಸರೋವರ. ತನ್ನ ಕಾಲದ ಬದುಕಿಗೆ ಕವಿ ಇಲ್ಲಿ ಕಣ್ಣು ತೆರೆದಿದ್ದಾನೆ. ಪಂಪನ ವಿಕ್ರಮಾರ್ಜುನ ವಿಜಯವನ್ನು ಬಿಟ್ಟರೆ ಇಡೀ ಕನ್ನಡ ಸಾಹಿತ್ಯದಲ್ಲಿಯೇ ಇಂಥ ಇನ್ನೊಂದು ಚಿತ್ರವಿಲ್ಲ. ಕಳ್ಳನ್ನು ಕುಡಿಯುವುದನ್ನು ಮನುಷ್ಯ ಸಾವಿರಾರು ವರ್ಷಗಳ ಹಿಂದೆಯೇ ಕಲಿತಿದ್ದಾನೆ. ನಾಗರಿಕತೆಯ ಬೆಳವಣಿಗೆಯ ಜತೆಜತೆಯಲ್ಲೇ ಮಧುಪಾನ ವಿಧಾನವೂ ವ್ಯತ್ಯಾಸಗಳನ್ನು ಪಡೆದುಕೊಳ್ಳುತ್ತಾ ಉಳಿದು ಬಂದಿದೆ. ಜನಜೀವನದಲ್ಲಿ ಆಳವಾಗಿ ಬೇರುಬಿಟ್ಟ ಈ ಪದ್ಧತಿಯನ್ನು ನಿರ್ಮಮಕಾರವಾಗಿ, ಅಹಿಂಸಾ ಪ್ರತಿಪಾದಕನಾದ ಬಾಹುಬಲಿಕವಿ, ದಾಖಲು ಮಾಡಿರುವ ಕ್ರಮ ವಿಸ್ಮಯಕಾರಿಯಾಗಿದೆ. ಏಕೆಂದರೆ ಬಾಹುಬಲಿ ಪಂಡಿತಕವಿ ಅಷ್ಟಾದಶ ವರ್ಣನೆಯ ಗೀಳಿಗೆ ಒಳಗಾಗಿ ವರ್ಣಿಸಿಲ್ಲ,—ಒಂದು ಕಾವ್ಯವನ್ನು ವಿಮರ್ಶಿಸುವಾಗ ಇಂಥ ಅಂಶಗಳತ್ತ ದೃಷ್ಟಿ ಹರಿಸಬೇಕಾಗುತ್ತದೆ.

ವಿಜಯಣ್ಣನ ದ್ವಾದಶಾನುಪ್ರೇಕ್ಷೆ (ಸಂ: ಕೆ. ಆರ್. ಶೇಷಗಿರಿ) ಈ ವರ್ಷದ ಸಂಪಾದಿತ ಕೃತಿಗಳಲ್ಲಿ ಅಚ್ಚುಕಟ್ಟಾಗಿ, ಶುದ್ಧವಾಗಿ ಸಂಪಾದಿತವಾಗಿರುವ ಕೃತಿ. ವಿಜಯಣ್ಣನ ಗ್ರಂಥವನ್ನು ಅರ್ಥಮಾಡಿಕೊಳ್ಳಲು ಪೂರಕವಾಗಬಲ್ಲ ಸಾಮಗ್ರಿಯನ್ನೆಲ್ಲ ಶ್ರಮಪಟ್ಟು ಪೀಠಿಕೆಯಲ್ಲೂ ಅನುಬಂಧಗಳಲ್ಲೂ ಸಂಗ್ರಹಿಸಿಕೊಟ್ಟಿದ್ದಾರೆ. ಪೀಠಿಕೆಯಂತೂ Compact ಆಗಿ ಬಂದಿದೆ: ಸಾಹಿತ್ಯ, ಧರ್ಮ, ವಸ್ತು–ಆಕರ, ಛಂದಸ್ಸು–ಹೀಗೆ ಬೇರೆ ಬೇರೆ ದೃಷ್ಟಿಕೋನಗಳಿಂದ ದ್ವಾದಶಾನುಪ್ರೇಕ್ಷೆಯನ್ನು ಸಮೀಕ್ಷಿಸಲಾಗಿದೆ. ಗ್ರಂಥದ ಪರಿಷ್ಕರಣಕ್ಕೆ ಹನ್ನೊಂದು ಪ್ರತಿಗಳನ್ನು ನೋಡಿದ್ದರೂ ಮುಖ್ಯವಾಗಿ ಆರು ಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಅವುಗಳಲ್ಲಿ ಅ, ಇ, ಉ ಪ್ರತಿಗಳು ಮುಖ್ಯವಾದುವು. ಅನುಬಂಧ ಮೂರರಲ್ಲಿ ಕೊಟ್ಟಿರುವ ಅನುಪ್ರೇಕ್ಷೆಯ ಕಂದ ಪದ್ಯಗಳು (ಪದ್ಯಗಳು ೧ ರಿಂದ ೧೫, ಪುಟ ೨೬೦–೨೬೨) ಅಜ್ಞಾತ ಮೂಲಕ್ಕೆ ಸೇರಿಲ್ಲ. ಅವನ್ನು ಶಾಂತರಸ ವಿರಚಿತ 'ಯೋಗರತ್ನಾಕರ' ಎಂಬ ಕಾವ್ಯದಿಂದ ಎತ್ತಿಕೊಳ್ಳಲಾಗಿದೆ. ಇದನ್ನು ಸಂಪಾದಕರು ಗುರುತಿಸಲಾಗಿಲ್ಲ; ಅದರ ಪ್ರಥಮಾಂಗದಲ್ಲಿನ ಪದ್ಯ ೨೪ ರಿಂದ ೩೮ರ ವರೆಗಿನ ಪದ್ಯಗಳೇ ಇವು, ಇದರ ನೆರವಿನಿಂದ ಮೊದಲ ಪದ್ಯವನ್ನು ಸರಿಯಾಗಿ ಪೂರ್ಣಗೊಳಿಸಬಹುದು. ಪೂರ್ವ ಕಥೆಗಳಲ್ಲಿ ಪುಟ ೨೨೫ ರಲ್ಲಿ ಪದ್ಯ ೬೭೯ ರಲ್ಲಿ ಬರುವ ನಾಗದತ್ತ (ನಾಗಕುಮಾರ) ನ ಕಥೆ ಕೊಡಬೇಕಿತ್ತು.

ಸಾಂಗತ್ಯ ಛಂದಸ್ಸಿನಲ್ಲಿ ರಚಿತವಾದ ಆರಂಭದ ಕೃತಿಗಳಲ್ಲಿ ಒಂದಾದ ವಿಜಯಣ್ಣನ ದ್ವಾದಶಾನುಪ್ರೇಕ್ಷೆಗೆ ಆ ದೃಷ್ಟಿಯಿಂದ ಒಂದು ವಿಶಿಷ್ಟವಾದ ಸ್ಥಾನವಿದೆ (ಹಂಪ ನಾಗರಾಜಯ್ಯ: ಸಾಂಗತ್ಯ ಕವಿಗಳು, ೧೯೭೫, ಪುಟ ೨೭–೨೯).

ಇಮ್ಮಡಿ ಗುರುಸಿದ್ಧ ವಿರಚಿತ ಹಾಲಾಸ್ಯ ಪುರಾಣಂ (ಸಂ: ಜಿ. ಮಂಜುನಾಥನ್) ಛಂದಸ್ಸಿನ ದೃಷ್ಟಿಯಿಂದ ಬಹು ಗಮನಾರ್ಹ ಚಂಪೂ ಕೃತಿ. ನಾಲ್ಕು ಕಾಂಡಗಳು ಹಾಗೂ ೬೬ ಅಶ್ವಾಸಗಳಿರುವ (೩೬೩೭ ಪದ್ಯಗಳು + ತ್ರಿಪದಿ + ರಗಳೆ) ಹಿರಿಯ ಗಾತ್ರದ ಕಾವ್ಯ. ಶುದ್ಧ ಕಾವ್ಯದ ಆಧಾರದಿಂದ ನೋಡಿದಾಗ ಇದು ತೀರ ಕಳಪೆ ಕೃತಿ, ಆದರೆ ವಿವಿಧ ಜಾತಿಯ ವೃತ್ತಗಳ ಪ್ರಯೋಗದಲ್ಲಿ ಹಾಗೂ ಪ್ರಾಸಸ್ಥಾನವನ್ನುಳಿಸಿ ಕೊಂಡಿರುವ ಕ್ರಮದಲ್ಲಿ ಈ ಕೃತಿಗೆ ಮೇಲಾದ ಮನ್ನಣೆಯಿದೆ.

ಈ ಕವಿಗೆ ಷಡಕ್ಷರ ಕವಿಯ ಮೇಲ್ಪಂಕ್ತಿಯನ್ನು ಪರಿಪಾಲಿಸುವುದರಲ್ಲಿ ಅನನ್ಯ ಆನಂದವಿರುವಂತೆ ತೋರುತ್ತದೆ. ಸತ್ವಕ್ಕಿಂತ ಚಮತ್ಕಾರವೇ ಬಂಡವಾಳವಾಗಿರುವ ಇಷ್ಟು ದೊಡ್ಡ ಪ್ರಮಾಣದ ಗ್ರಂಥವನ್ನು ಸಂಪಾದಿಸುವುದಕ್ಕೆ ಎಣೆಯಿಲ್ಲದಷ್ಟು ತಾಳ್ಮೆ ಬೇಕು. ಕೇವಲ ಎರಡು ಓಲೆಯ ಹಸ್ತ ಪ್ರತಿಗಳನ್ನಿಟ್ಟುಕೊಂಡು ಸಂಪಾದಕರು ವಿಶೇಷ ಶ್ರದ್ಧೆಯಿಂದ ಈ ಕೃತಿಯನ್ನು ವ್ಯವಸ್ಥಿತ ರೀತಿಯಲ್ಲಿ ಸಿದ್ಧಪಡಿಸಿದ್ದಾರೆ, ಅಷ್ಟೇ ಪ್ರಯೋಜನಕಾರಿಯಾದ ಪೀಠಿಕೆಯನ್ನೂ ಕೊಟ್ಟಿದ್ದಾರೆ. ಛಂದಸ್ಸನ್ನೇ ವಿಶೇಷ ವಿಷಯವಾಗಿ ಅಭ್ಯಾಸಮಾಡಬಯಸುವ ಜಿಜ್ಞಾಸುಗಳಿಗೆ ಹಾಲಾಸ್ಯ ಪುರಾಣದಲ್ಲಿ ಸಾಕಷ್ಟು ಗ್ರಾಸವಿದೆ.

ಕೇಶಿರಾಜನ ಶಬ್ದಮಣಿದರ್ಪಣವನ್ನು (ಸಂ : ತ. ಸು. ಶಾಮರಾಯ-ನಂಜೇಗೌಡ) ಮತ್ತೆ ಸಂಪಾದಿಸಲಾಗಿದೆ. ಈಗಾಗಲೇ ಹಲವು ಮುದ್ರಣಗಳನ್ನು, ಸಂಪಾದಕರನ್ನು, ಸಂಗ್ರಹಗಳನ್ನು ಕಂಡಿರುವ ಈ ವ್ಯಾಕರಣಕ್ಕೆ ಸದಾ ಬೇಡಿಕೆಯಿದೆಯೆಂದು ಪ್ರಕೃತ ಕೃತಿಯನ್ನು ಹೊಸಗನ್ನಡ ತಾತ್ಪರ್ಯ ಹಾಗೂ 'ವಿಶೇಷ ವಿಷಯ'ದ ವಿವರಣೆಯೊಡನೆ ಸಿದ್ಧಪಡಿಸಲಾಗಿದೆ. ಮುದ್ರಣಾದಿ ಕೆಲವು ದೋಷಗಳು ಇಲ್ಲಿ ಉಳಿದಿದ್ದರೂ ವಿದ್ಯಾರ್ಥಿಗಳಿಗೆ ಇದರಿಂದ ಪ್ರಯೋಜನವಿದೆಯೆಂಬುದು ನಿಜ ; ಎರಡು ಸಾವಿರ ಪ್ರತಿಗಳನ್ನು ಮುದ್ರಿಸಿ ಬೆಲೆಯನ್ನು ಹತ್ತು ರೂಪಾಯಿಗೆ ಇಳಿಸಿದ್ದರೆ ಇದರ ವಿದ್ಯಾರ್ಥಿ ಜನಪ್ರಿಯತೆ ದ್ವಿಗುಣಿತವಾಗುತ್ತಿತ್ತು.

ಉರಿಲಿಂಗ ಪೆದ್ದಿಗಳ ವಚನಗಳು ಹಾಗೂ ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು ಒಬ್ಬರಿಂದ (ಸಂ : ಎಚ್. ಪಿ. ಮಲ್ಲೇದೇವರು) ಸಂಪಾದಿತವಾಗಿವೆ. ಎರಡರಲ್ಲೂ ಮುದ್ರಣ ಸ್ಖಾಲಿತ್ಯಗಳು ಹೇರಳವಾಗಿ ಉಳಿದಿವೆ. ಉರಿಲಿಂಗ ಪೆದ್ದಿಗಳ ವಚನಗಳನ್ನು ಹಲವು ಮುದ್ರಿತ ಪ್ರತಿಗಳ ಹಾಗೂ ಮೂರು ಹಸ್ತಪ್ರತಿಗಳ ಆಧಾರದಿಂದ ಸಂಕಲನ ಮಾಡಲಾಗಿದೆ. ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು ಮೂರು ; ವಚನಗಳು, ಮುಕ್ತ್ಯಾಂಗನಾ ಕಂಠಮಾಲೆ ಮತ್ತು ಒಂದು ಪುಟ್ಟ 'ಜಂಗಮರಗಳೆ'. ವಚನಗಳನ್ನು ಆರು ತಾಡೆಯೋಲೆ ಪ್ರತಿಗಳಿಂದಲೂ, ಮುಕ್ತ್ಯಾಂಗನಾ ಕಂಠಮಾಲೆಯನ್ನು ಒಂದು ತಾಳೆಯೋಲೆ ಹಾಗೂ ಮೂರು ಮುದ್ರಿತ ಪ್ರತಿಗಳಿಂದಲೂ ಸಂಕಲಿಸಿದ್ದಾರೆ. ಪ್ರಸ್ತಾವನೆ ಎರಡೂ ಕೃತಿಗಳಲ್ಲಿ ಓದುಗರಿಗೆ ಸಹಾಯಕವಾಗಿವೆ. ಇಷ್ಟಿದ್ದೂ ಸಂಪಾದಕರ ಒಟ್ಟು ಧೋರಣೆಯಲ್ಲಿ ಶಾಸ್ತ್ರ ಶುದ್ಧಿಗಿಂತ ಜನಪ್ರಿಯಧಾಟಿಗೇ ಒಲವು ಕಂಡುಬರುತ್ತದೆ.

ಅಜ್ಞಾತ ಕವಯಿತ್ರಿಯೊಬ್ಬಳ ಚಂದನಾಂಬಿಕೆಯ ಕಥೆ (ಸಂ : ಎಂ. ಎ. ಜಯಚಂದ್ರ-ಧವಳಶ್ರೀ) ಪ್ರಥಮಬಾರಿಗೆ ಬೆಳಕು ಕಾಣುತ್ತಿರುವ ತ್ರಿಪದಿಕಾವ್ಯ. ಅಲ್ಲಲ್ಲಿ ತ್ರುಟಿತವಾಗಿದ್ದ ಏಕೈಕ ಹಸ್ತಪ್ರತಿಯಿಂದ ಈ ಕಾವ್ಯವನ್ನು ಸಿದ್ಧಪಡಿಸಿದ್ದಾರೆ. ಕೃತಿ ಪೂರ್ತಿ ಅಚ್ಚಾದ ಮೇಲೆ ಸಂಪಾದಕರ ಮನೆಯಲ್ಲೇ ಇದ್ದ ಇನ್ನೊಂದು ಕಾಗದದ ಹಸ್ತಪ್ರತಿ ದೊರೆತು, ತ್ರುಟಿತ ಭಾಗಗಳಿಗೆ ಸಂವಾದಿಯಾದ ಸರಿಪಾಠ ಭಾಗವನ್ನು ಅದರಿಂದ ಎತ್ತಿ ಅನುಬಂಧದಲ್ಲಿ ಕೊಟ್ಟಿದ್ದಾರೆ. ಸಂಪಾದಕರು ಮೊದಲೇ ಇನ್ನೂ ಶ್ರಮವಹಿಸಿದ್ದರೆ ಆರಾದಲ್ಲಿದ್ದ ಇದರ ಮತ್ತೊಂದು ಹಸ್ತಪ್ರತಿಯನ್ನೂ ದೊರಕಿಸಿಕೊಂಡು ಶುದ್ಧಪಾಠವನ್ನು ನಿರ್ಣಯಿಸಿಕೊಡಬಹುದಿತ್ತು, ಈಗ ಇವರು ಕೊಟ್ಟಿರುವ ಕೆಲವು ಊಹಾಪಾಠಗಳು ಪ್ರಶ್ನಾರ್ಹವಾಗಿಯೇ ಉಳಿಯುತ್ತವೆ. ಇದೇನೇ ಇದ್ದರೂ ಪೀಠಿಕೆ, ಅನುಬಂಧ, ಮುದ್ರಣ, ಗ್ರಂಥದ ಹೊರಮೈ-ಎಲ್ಲ ಒಪ್ಪವಾಗಿವೆ.

ಚಂದನಾಂಬಿಕೆಯ ಕಥೆಗೆ ಕನ್ನಡ ಸಾಹಿತ್ಯದಲ್ಲಿ, ಅದರಲ್ಲಿಯೂ ತ್ರಿಪದಿಯ ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನವಿದೆ. ಇದುವರೆಗೆ ಕನ್ನಡದಲ್ಲಿ ತ್ರಿಪದಿಯಲ್ಲಿ ರಚಿತವಾಗಿರುವ ಕೆಲವೇ ಕಾವ್ಯಗಳಲ್ಲಿ ಈ ಕೃತಿಗೆ ಅಗ್ರಸ್ಥಾನ ಸಲ್ಲಬಹುದಾಗಿದೆ. ಸರ್ವಜ್ಞ (ಪರಮಾರ್ಥ-ಪರಮಾತ್ಮ) ವಿರಚಿತ-ಅಂಕಿತ ತ್ರಿಪದಿಗಳಲ್ಲಿ ಬುದ್ಧಿಗಮ್ಯ ಚಮತ್ಕಾರ ಪದ್ಯಗಳೂ, ಆಯಾಕ್ಷಣದ ಪರಿಭಾವನೆಯ ಕಿರಣಗಳೂ ಕಂಡುಬರುತ್ತವೆ, ಒಟ್ಟು ಕೃತಿಯನ್ನು ಕೂಡಿಸಿದ ಅಚ್ಯುತವಾದ ಒಂದು ಕಾವ್ಯ ತಂತು ಅದರಲ್ಲಿಲ್ಲ. ಬಿಡಿಬಿಡಿಯಾದ ಮುಕ್ತಕಗಳ ಮಹತ್ವ ಅದಕ್ಕಿದ್ದರೂ ಇಡಿಯಾದ ಒಂದು 'ಅಖಂಡ

ಕಾವ್ಯದ' ಆನಂದ ಅದರಲ್ಲಿಲ್ಲ. ಚಂದನಾಂಬಿಕೆಯ ಕಥೆಯಲ್ಲಿ ಈ ಕೊರತೆಗಳು ನಿವಾರಿತವಾಗಿವೆ, ಒಂದು ಉತ್ತಮ ಕಾವ್ಯದ ಲಕ್ಷಣಗಳು ಕಂಡುಬರುತ್ತಿವೆ. ಇದರ ಕಾಲ ಸರಿಯಾಗಿ ತಿಳಿಯದಿದ್ದರೂ ಅಂಶಬದ್ಧವಾದ ತ್ರಿಪದಿಯ ಲಯವಿನ್ಯಾಸ, ಭಾಷೆ ಮೊದಲಾದ ಆಂತರಿಕ ಪ್ರಮಾಣಾಧಾರಗಳಿಂದ ಈ ಕೃತಿಯನ್ನು ೧೫ನೆಯ ಶತಮಾನದ್ದೆಂದು ಊಹಿಸಬಹುದು.

ಅಜ್ಞಾತ ಜಂಗಮ (ದೇಶಿಕ) ಕರ್ತೃಕ **ಲಿಂಗಚಿದಮೃತ ಬೋಧೆ** (ಸಂ : ಎಂ. ಎಸ್. ಸುಂಕಾಪುರ)ಯಲ್ಲಿ ವೀರಶೈವ ಸಿದ್ಧಾಂತ ಪರಿಚಯಕ್ಕೆ ಬೇಕಾದ ಸಾಮಗ್ರಿಯನ್ನು ಸಂಕಲಿಸುವ ಪ್ರಯತ್ನವಿದೆ. ಮಗ್ಗೆಯ ಮಾಯಿದೇವನ ಶತಕದಿಂದ ಮೂವತ್ತೊಂದು ವೃತ್ತಗಳನ್ನು ಆಯ್ದು ಅವುಗಳಿಗೆ ಒಂದೊಂದಕ್ಕೂ ಬಸವಾದಿ ಪ್ರಮಥರ ವಚನಗಳಿಂದ ಸಂವಾದಿ ಮಾತುಗಳನ್ನು ಕೊಟ್ಟು ವಿವರಿಸಿದೆ. ಹೀಗಾಗಿ ಇದರಲ್ಲಿ ಸಂಕಲನ ಕಾರ್ಯವಿದೆಯೇ ಹೊರತಾಗಿ ಕೃತಿಕಾರನ ಸ್ವೋಪಜ್ಞ ಭಾಗವಿಲ್ಲ. ಇದರ ಸಂಪಾದನೆಗೆ ಬಳಸಿಕೊಂಡ ಹಸ್ತಪ್ರತಿಯ ವಿವರವಿಲ್ಲ.

ಇದುವರೆಗೆ ಅಪ್ರಕಟಿತವಾಗಿದ್ದ **ಸಾನಂದಚರಿತೆಯನ್ನು** (ಸಂ : ಎಸ್. ಬಸಪ್ಪ) ಮೊದಲ ಬಾರಿಗೆ ಮೂರು ಪ್ರತಿಗಳ ನೆರವಿನಿಂದ ಹೊರತರಲಾಗಿದೆ. ಕೆರೆಯ ಪದ್ಮರಸನ ಈ ಕೃತಿಗೆ ಶಿವಾದ್ವೈತಸಾಕಾರ ಸಿದ್ಧಾಂತವೆಂಬ ಹೆಸರೂ ರೂಢಿಯಲ್ಲಿದೆ. ಇದು ಪ್ರಧಾನವಾಗಿ ಶಿವಾದ್ವೈತ ಸಿದ್ಧಾಂತವನ್ನು ೪೬ ಮಹತ್ವದ ಪ್ರಕರಣಗಳಲ್ಲಿ ನಿರೂಪಿಸುತ್ತದೆ. ಜೈನ ಪುರಾಣ-ಚರಿತೆಗಳಲ್ಲಿ ಪಂಚ ನಮಸ್ಕಾರದ (ಣಮೋಕಾರದ) ಮಹಿಮೆಯನ್ನು ಕಾಣುವಂತೆ, ಇದರಲ್ಲಿ ಪಂಚಾಕ್ಷರಿ ಮಹಿಮೆ ವ್ಯಕ್ತವಾಗಿದೆ. ಒಂಬತ್ತು ಸಂಧಿಗಳ ಈ ಕೃತಿಯ ಸಂಪಾದನೆ ಉತ್ತಮವಾಗಿದ್ದರೂ ಓದುಗನಿಗೆ ನೆರವಾಗಬಲ್ಲ ಸಹಾಯಕ ಸಾಮಗ್ರಿಯನ್ನು ಗ್ರಂಥಾಂತ್ಯದ ಅನುಬಂಧದಲ್ಲಿ ಸಿದ್ಧಪಡಿಸಿ ಕೊಡಬೇಕಾಗಿತ್ತು.

ಚಾವುಂಡರಾಯನ ತ್ರಿಷಷ್ಟಿ ಲಕ್ಷಣ ಮಹಾಪುರಾಣ ಅಥವಾ ಚಾವುಂಡರಾಯ ಪುರಾಣದ (ಸಂ ; ಡಾ॥ ಬಿ. ಎಸ್. ಕುಲಕರ್ಣಿ) ಪ್ರಕಟನೆಯನ್ನು ೧೯೭೫ರ ಒಂದು ವಿಶೇಷ ಕೊಡುಗೆಯೆಂದು ತಿಳಿಯಬಹುದು. ಇದರ ಪ್ರಕಟನೆಯಿಂದಾಗಿ ಬಹುಕಾಲದಿಂದ ವಿದ್ವಾಂಸರು ನಿರೀಕ್ಷಿಸುತ್ತಿದ್ದ ಚಾವುಂಡರಾಯ ಪುರಾಣ ಕಡೆಗೂ ಒಮ್ಮೆ ಹೊರಬಂದಂತಾಗಿದೆ. ಕನ್ನಡ ಗದ್ಯಗ್ರಂಥಗಳ ಸಾಲಿನಲ್ಲಿ ಇದಕ್ಕಿರುವ ಸ್ಥಾನವನ್ನೂ, ಕನ್ನಡ ಜೈನ ಪುರಾಣಗಳ ರಚನೆಯಲ್ಲಿ ಆಗಬೇಕಾದ ತೌಲನಿಕ ಅಧ್ಯಯನ ದಲ್ಲಿ ಇದರ ಮೌಲಿಕ ಪಾತ್ರವನ್ನೂ ಈಗಾಗಲೇ ಸೂರಿಗಳು ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕದ ಚರಿತ್ರೆಯಲ್ಲಿ, ಸಾಂಸ್ಕೃತಿಕ-ಸಾಹಿತ್ಯಕ ಪರಂಪರೆಯಲ್ಲಿ ಚಾವುಂಡರಾಯನ ಸ್ಥಾನ ದೊಡ್ಡದು. ಈತನ ಬಗ್ಗೆ ಉಪಲಬ್ಧವಿರುವ ಶಾಸನ ಸಾಮಗ್ರಿಯ ಜತೆಗೆ, ಚಾವುಂಡರಾಯ ಪುರಾಣದ ವಿವರಣೆಯನ್ನೂ ಸೇರಿಸಿಕೊಂಡು ಚಾವುಂಡರಾಯನ ಒಂದು ಸಮಗ್ರ ವ್ಯಕ್ತಿತ್ವವನ್ನು ಪುನಾರಚಿಸಿಕೊಳ್ಳುವುದು ಸಾಧ್ಯ. ಗೊಮ್ಮಟಶಿಲ್ಪದ ಕಾಣಿಕೆಯಷ್ಟೇ ಚಾವುಂಡರಾಯ ಪುರಾಣದ ಕೊಡುಗೆಯೂ ಮಹತ್ವಪೂರ್ಣವಾಗಿದೆ. ಸ್ವಾರಸ್ಯದ ಸಂಗತಿಯೆಂದರೆ ಈ ಗ್ರಂಥದಲ್ಲಿ ಎಲ್ಲಿಯೂ ಬಾಹುಬಲಿ (ಗೊಮ್ಮಟ) ವಿಗ್ರಹದ ಪ್ರಸ್ತಾಪವಿಲ್ಲ, ಇದರಿಂದ ಈ ಗ್ರಂಥರಚನೆಯಾದ ಮೇಲೆ ಗೊಮ್ಮಟಮೂರ್ತಿ ಪ್ರತಿಷ್ಠಾಪನೆಯಾಗಿರಬೇಕೆಂದು ತಿಳಿಯಬಹುದು.

ಕನ್ನಡ ಜೈನ ಕವಿಗಳು ಸಮಂತಭದ್ರ-ಪೂಜ್ಯಪಾದ-ಕವಿಪರಮೇಷ್ಠಿ–ಈ ಮೂವರನ್ನು ಸ್ಮರಿಸಿ ಸ್ತುತಿಸಿದ್ದಾರೆ. ಇವರಲ್ಲಿ ಸಮಂತಭದ್ರರ ಹಾಗೂ ಪೂಜ್ಯಪಾದರ ಕೃತಿಗಳು ಸಿಕ್ಕಿವೆ, ಅಚ್ಚಾಗಿವೆ. ಕವಿಪರಮೇಷ್ಠಿಗಳ ಕೃತಿ ಇದುವರೆಗೂ ಲಭಿಸಿಲ್ಲ. ಅದರ ನಾಲ್ಕು ಪದ್ಯಗಳನ್ನು ಚಾವುಂಡರಾಯ ಉದಾಹರಿಸಿರುವುದು ತುಂಬ ಗಮನಾರ್ಹವಾಗಿದೆ. ಅನೇಕ ಜೈನಾಚಾರ್ಯರ ಪ್ರಸ್ತಾಪ ಇಲ್ಲಿ ಬರುತ್ತದೆ, ಅವರೆಲ್ಲರ ವಿಚಾರವಾಗಿ ಡಾ॥ ಆ. ನೇ. ಉಪಾಧ್ಯೆಯವರು ಪರಿಚಯಾತ್ಮಕ ಲೇಖನ ಬರೆದಿದ್ದಾರೆ.

ಇಷ್ಟು ಪ್ರಮುಖವಾದ ಕೃತಿಯೊಂದನ್ನು ಡಾ॥ ಬಿ. ಎಸ್. ಕುಲಕರ್ಣಿಯವರು ಪ್ರಥಮ ಬಾರಿಗೆ ಪ್ರಕಟಿಸಿ ಅಭಿನಂದನೆಗೆ ಪಾತ್ರರಾಗಿದ್ದಾರೆ. ಇದನ್ನು ಎರಡು ತಾಳೆ ಓಲೆಯ ಹಾಗೂ ಎರಡು ಕಾಗದದ ಹಸ್ತಪ್ರತಿಗಳನ್ನು ಬಳಸಿಕೊಂಡು ಸಂಸ್ಕರಿಸಿದ್ದಾರೆ. ಇವರು ಬಳಸಿರುವ ನಾಲ್ಕೂ ಪ್ರತಿಗಳು (ಅ.ಬ.ಕ.ಡ.) ಅರ್ವಾಚೀನವಾದುವು. ಸ್ವಾದಿ ಜೈನ ಮಠಕ್ಕೆ ಸೇರಿದ 'ಅ' ಪ್ರತಿಯನ್ನು 'ಸುಮಾರು ಮೂರು ನೂರು ವರ್ಷಗಳ ಪೂರ್ವದಲ್ಲಿ ರಚಿತವಾದ'ದ್ದೆಂದೂ, 'ಬ' ಪ್ರತಿಯನ್ನು 'ಸುಮಾರು ೩೫೦ ವರುಷಗಳಷ್ಟು ಪ್ರಾಚೀನವಾದು'ದೆಂದೂ ಸಂಪಾದಕರು ಹೇಳಿದ್ದಾರೆ. ಇದನ್ನು ಯಾವ ಆಧಾರದಿಂದ ನಿರ್ಧರಿಸಿದರೆಂಬುದನ್ನು ಅವರು ಸ್ಪಷ್ಟಪಡಿಸಬೇಕಾಗಿತ್ತು. ಈ ಪ್ರತಿಗಳ ಮೇಲೆ ಖಚಿತವಾದ ದಿನಾಂಕ ಇಸವಿ ಮೊದಲಾದ ನಿರ್ದೇಶನವಿರದಿದ್ದರೂ ಬೇರೆ ಆಧಾರಗಳನ್ನು ಹಿಡಿದು ಪತ್ತೆ ಮಾಡಲು ಸಾಧ್ಯವೇ ಎಂಬುದನ್ನು ಪರಾಮರ್ಶಿಸಬೇಕು. ನನ್ನ ಈ ಸೂಚನೆಯನ್ನು ಇವರು ಬಳಸಿಕೊಂಡ ಪ್ರತಿಯಿಂದಲೇ ಒಂದು ಉದಾಹರಣೆಯನ್ನು, ಕೊಟ್ಟು ಸಮರ್ಥಿಸುತ್ತೇನೆ;

'ಅ' ಪ್ರತಿಯು (ಸ್ವಾದಿ ಜೈನಮಠಕ್ಕೆ ಸೇರಿದ್ದು) ಕಡೆಯಲ್ಲಿ ಈ ಹೇಳಿಕೆಯನ್ನು ಪಡೆದಿದೆ; "ಶ್ರೀ ತಾರಣ ಸಂವತ್ಸರದ ಕಾರ್ತಿಕಮಾಸದ ಶುಕ್ಲ ಪಕ್ಷದ ಪಂಚಮಿಯಲ್ಲು ಬೈಲೂರ ಅಣಂತನ ಸೆಟ್ಟಿ ಚಂದ್ರನಾಥ ಚೈತ್ಯಾಲಯದಲ್ಲಿ ಶ್ರುತಸ್ಕಂದದ ನೋಂಪಿಯ ಉದ್ಯಾಪನೆಯನು ಮಾಡಿ ಇಪ್ಪತ್ತುನಾಲ್ಕು ಪುರಾಣವೆನಿಸಿದ ಚಾವುಂಡರಾಯಪುರಾಣಮಂ ಸಂಗ್ರಹಿಸಿ ತನಗೆ ಕೇವಲ ಜ್ಞಾನ ಪ್ರಾಪ್ತಿ ನಿಮಿತ್ತಮಾಗಿ ದೇಶಿಗಣದ ಬಾಹುಬಲಿದೇವರ ಶಿಷ್ಯರಾದ ಅನಂತಕೀರ್ತಿ ದೇವರಿಗೆ ಶಾಸ್ತ್ರ ದಾನವನು ಮಾಡಿದನು" ಎಂದಿದೆ.

ಇದು ಹೊಸ ಅನ್ವೇಷಣೆಗೆ ದಾರಿ ತೆರೆಯುವ ಸಾಮಗ್ರಿಯಾಗಿದೆ. ಇಲ್ಲಿ ಪ್ರಸ್ತಾಪಿತವಾಗಿರುವ ಬಾಹುಬಲಿ ಮತ್ತು ಅನಂತಕೀರ್ತಿ ಆಚಾರ್ಯರ ಕಾಲವನ್ನು ಗುರುತಿಸಿದ್ದೇ ಆದರೆ ಆಗ ಈ ಪ್ರತಿಯಾ ಕಾಲ ನಿರ್ಧರಿಸಬಹುದು. ಬಾಹುಬಲಿದೇವರೆಂಬ ಹೆಸರಿನ ಆಚಾರ್ಯರು ನನಗೆ ತಿಳಿದಂತೆ ಹಲವರಿದ್ದಾರೆ. ಇವರಲ್ಲಿ ಯಾಪನೀಯ ಸಂಘದ ಕಣ್ಡೂರು ಗಣದವರು ೯೮೦ ರಲ್ಲಿದ್ದವರು (JBBRAS, x, ಪುಟ ೨೦೪). ಹನ್ನೊಂದನೆಯ ಶತಮಾನದವರು ಇಬ್ಬರಿದ್ದಾರೆ. B. K. I. I, Part II, No. ೧೨೩, ೨೦೯ ಮತ್ತು E.I., XVIII, ಪುಟ ೨೦೧). ಮೂಲಸಂಘ ದೇಸಿ ಗಣ ಕೊಂಡ ಕುಂದಾನ್ವಯ ಪುಸ್ತಕಗಚ್ಛ ಇಂಗಳೇಶ್ವರ ಬಳಿಯ ಬಾಹುಬಲಿ ೧೨ನೆಯ ಶತಮಾನದವರು (SII., IV, No. ೭೯೮). ಮಣಿಗುಂದಗೆಯ ಶಾಸನೋಕ್ತ ಬಾಹುಬಲಿ ಸಿದ್ಧಾಂತ ದೇವರು ೧೩ನೆಯ ಶತಮಾನದವರು (AR on SIE, ೧೯೨೬, ಅನುಬಂಧ C, No. ೪೩೯). ಆದರೆ ಇವರು ಯಾರೂ 'ಅ' ಪ್ರತಿಯಲ್ಲಿ ಉಕ್ತರಾದ ಬಾಹುಬಲಿ ದೇವರಲ್ಲ. ಆರ್ಯ ಶುಭೇಂದು ಕಂದ ವಿಜಯ ಕೀರ್ತಿ ದೇವರ ಪ್ರಿಯ ಶಿಷ್ಯರಾದ ಬಾಹುಬಲಿದೇವರ ವಿಚಾರ ೧೮-೪-೧೩೯೦ರ ಶಾಸನವೊಂದರಲ್ಲಿದೆ [EC, I, ೭೫ (೩೯)] ಇದು ಗಮನಾರ್ಹ. ಇದರಂತೆ 'ಸ್ವಸ್ತಿಶ್ರೀ ಮೂಲಸಂಘ ದೇಸಿಗಣ ಹನಸೋಗೆಯ ಶ್ರೀ ಬಾಹುಬಲಿ ಮಲಧಾರಿದೇವರ ಪ್ರತಿಮೆ' ಎಂದು ಸುಮಾರು ೧೪೩೦ರ ಅವಧಿಯ ಇನ್ನೊಂದು ಶಾಸನದಲ್ಲಿದೆ (EC., II, ೪೮೩). ಇವರೇ ಚಾವುಂಡರಾಯ ಪುರಾಣದ 'ಅ' ಪ್ರತಿಯಲ್ಲಿ ಉಕ್ತರಾದವರೆಂದು ಭಾವಿಸಲು ಅವಕಾಶವಿದೆ. ಹಾಗಿದ್ದಲ್ಲಿ ಇವರ ಶಿಷ್ಯ ಅನಂತಕೀರ್ತಿಯವರ ಕಾಲ ಸು. ೧೪೬೦ ಎಂದಿಟ್ಟುಕೊಳ್ಳಬಹುದು, ಅದರಿಂದಾಗಿ 'ಅ' ಪ್ರತಿಯ ಕಾಲ ೧೪೬೦ಕ್ಕಿಂತ ಈಚಿನದೆಂದು ಸಾಬೀತಾಗುತ್ತದೆ. ಆದರೆ ಇದು ಸರಿಯೆ ಎಂಬುದನ್ನೂ, 'ಶ್ರೀತಾರಣ ಸಂವತ್ಸರದ ಕಾರ್ತಿಕ ಮಾಸದ ಶುಕ್ಲಪಕ್ಷದ ಪಂಚಮಿ' ಯಾವ ಯಾವ ಇಸವಿಗೆ ಬೀಳುತ್ತದೆಂಬುದನ್ನೂ ಮತ್ತೆ ಪರಿಶೀಲಿಸಬೇಕಾಗುತ್ತದೆ. ತಾವು ಬಳಸಿಕೊಂಡ ಪ್ರತಿಗಳ ವಿಚಾರದಲ್ಲಿ ಸಂಪಾದಕರು ಈ ಕ್ರಮದಲ್ಲಿ ಸಂಶೋಧಿಸಿದ್ದರೆ ಹೆಚ್ಚು ಪ್ರಯೋಜನವಾಗುತ್ತಿತ್ತು.

ಉ|ಟ ಕಾರಗಳ ಬಳಕೆಯನ್ನು ಇನ್ನೂ ಸರಿಯಾಗಿ ನೋಡಬೇಕಿತ್ತು. ಪಾಠಾಂತರಗಳನ್ನು ಗುರುತಿಸಿರುವ ರೀತಿ ಅಶಾಸ್ತ್ರೀಯವಾಗಿದೆ, ಯಾವ ಪ್ರತಿಯ ಪಾಠಾಂತರ ಯಾವುದೆಂಬುದು

ಗೊತ್ತಾಗುವುದಿಲ್ಲ. ಕೃತಿಯ ಮೌಲ್ಯ ವಿವೇಚನೆ ಇನ್ನೂ ವಿಮರ್ಶಾತ್ಮಕವಾಗಿರಬೇಕಿತ್ತು. ಕಾಗದ ಮುದ್ರಣ, ರಕ್ಷಾಕವಚ ಚೆನ್ನಾಗಿವೆ.

ಕುಮಾರವ್ಯಾಸನ ವಿರಾಟಪರ್ವ (ಸಂ : ಕೃಷ್ಣಾ ಜೋಯಿಸ್) ಮತ್ತೆ ಮುದ್ರಣವಾಗಿದೆ. ಇದು ಕೇವಲ ಹಿಂದಿನ ಮುದ್ರಣಗಳ ಪುನರ್ ಮುದ್ರಣವಲ್ಲ. ಒಟ್ಟು ಇಪ್ಪತ್ತು ಪ್ರತಿಗಳ ಸಹಾಯದಿಂದ ಇದನ್ನು ವಿಶ್ವಾಸಾರ್ಹ ರೀತಿಯಲ್ಲಿ ಸಂಪಾದಿಸಲಾಗಿದೆ. ಪ್ರಸ್ತಾವನೆ ಪರಿಶಿಷ್ಟಗಳು ಚೊಕ್ಕವಾಗಿವೆ. ಅದರಲ್ಲಿಯೂ ಎರಡನೆಯ ಪರಿಶಿಷ್ಟದಲ್ಲಿ ವ್ಯಾಸಭಾರತದ ಸಂವಾದಿ ಮೂಲ ಶ್ಲೋಕಗಳನ್ನು ಕೊಟ್ಟಿರುವುದು ತೌಲನಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ.

ಒಟ್ಟು ಕುಮಾರವ್ಯಾಸ ಭಾರತದ ಶುದ್ಧಪಾಠ ನಿರ್ಣಯಕ್ಕೆ, ಅದರ ಹತ್ತೂ ಪರ್ವಗಳ ಉತ್ತಮ ಗ್ರಂಥ ಸಂಪಾದನೆಯ ಕಾರ್ಯ ಮೊದಲು ಆಗಬೇಕು. ಆ ದಿಕ್ಕಿನಲ್ಲಿ ಇದರ ಸ್ಥಾನವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕುಮಾರವ್ಯಾಸನ ಕಾಲನಿರ್ಣಯದ ವಿಚಾರವಾಗಿ ಸಂಪಾದಕರು ಇದುವರೆಗಿನ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಈ ಸಂಬಂಧವಾಗಿ ವಿದ್ವಾಂಸರು ಅವಶ್ಯ ಗುರುತಿಸಬೇಕಾದ ಹೊಸ ವಿಚಾರವೊಂದನ್ನು ಸಾಳ್ವಭಾರತದ ಪೀಠಿಕೆಯಲ್ಲಿ (ಹಂಪನಾ : ಸಾಳ್ವ ಭಾರತ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೬) ತಿಳಿಸಿದ್ದೇನೆ. ಸಾಳ್ವಕವಿಯ ಮೇಲೆ ಕುಮಾರವ್ಯಾಸನ ಪ್ರಭಾವ ಸ್ಪಷ್ಟವಾಗಿ ಕಂಡುಬರುತ್ತದೆ. ಸಾಳ್ವನ ಕಾಲವನ್ನು ೧೪೮೫ ಎಂಬುದಾಗಿ ಪ್ರಸ್ತಾವನೆಯಲ್ಲಿ ಸಾಧಾರವಾಗಿ ಸಾಧಿಸಿ ತೋರಿಸಿದ್ದೇನೆ. ಸಾಳ್ವನಂಥ ಕವಿಯ ಮೇಲೆ ಪ್ರಭಾವ ಬೀರುವುದಕ್ಕೆ ಸ್ವಲ್ಪ ಹಿಂದೆಯೇ ಆ ಕವಿ ಆಗಿಹೋಗಿರಬೇಕು. ಇದರಿಂದ ಕುಮಾರವ್ಯಾಸನ ಕಾಲವನ್ನು ೧೪೮೫ ಕ್ಕೂ ಮೊದಲು, ಬಹುಶಃ ೧೪೫೦ ಎಂದು ಭಾವಿಸಲು ಅವಕಾಶವಿದೆ.

ವಿರಕ್ತ ತೋಂಟದಾರ್ಯನ ಕರ್ನಾಟ ಶಬ್ದಮಂಜರಿಯು (ಸಂ : ಶಿವಾನಂದ) ಈ ಎರಡನೆಯ ಮುದ್ರಣ, ಹಿಂದೆ ಅಚ್ಚಾದ (೧೯೯೧) ಪ್ರತಿಯ ಜತೆಗೆ ಇನ್ನೊಂದು ಮಾತೃಕೆಯನ್ನು ಬಳಸಿಕೊಂಡು ಸಿದ್ಧವಾಗಿದೆ. ಇದಕ್ಕೆ ಲಗತ್ತಿಸಿರುವ ಅರ್ಥಕೋಶ ಉಪಯುಕ್ತವಾಗಿದೆ.

ಸಿದ್ಧರಾಮನ ವಚನಗಳು (ಸಂ : ತಿಪ್ಪೇರುದ್ರಸ್ವಾಮಿ) ಒಂದು ಸಂಗ್ರಹ ಮಾತ್ರ, ಕೃತಿಯ ಹೆಸರು, ಇದರಲ್ಲಿ ಸಿದ್ಧರಾಮನ ವಚನಗಳು ಪೂರ್ಣವಾಗಿ ಇರಬಹುದೆಂಬ ತಪ್ಪು ಕಲ್ಪನೆಗೆ ಎಡೆಗೊಡುತ್ತದೆ. ಸಂಗ್ರಹದಲ್ಲಿನ ಕೆಲವು ವಚನಗಳನ್ನು ಬಿಟ್ಟು, ಬಿಟ್ಟಿರುವ ಕೆಲವು ಉತ್ತಮ ವಚನಗಳಿಂದ ಕೆಲವನ್ನಾದರೂ ಸೇರಿಸಬೇಕಿತ್ತೆನಿಸುತ್ತದೆ; ಇದು ಸಂಪಾದಕರ ದೃಷ್ಟಿಕೋನವನ್ನು ಅವಲಂಬಿಸಿದ ವಿಷಯ. ಪೀಠಿಕೆ ಪ್ರಯೋಜನಕಾರಿಯಾಗಿದೆ.

ಅಜ್ಞಾತ ಕವಿ ಕರ್ತೃಕವಾದ ರುಂಡ ಭೈರವನ ಕಾಳಗ (ವಿ. ಕೆ. ಹೆಗಡೆ) ಸಾಧಾರಣವಾಗಿ ಸಂಪಾದಿತವಾಗಿದೆ. ಇದು ವಾಲಗಳ್ಳಿ ವರದವಿಠ್ಠಲ ಅಥವಾ ಬತ್ತಲೇಶ್ವರ ರಾಮಾಯಣದಲ್ಲಿಯ ಯುದ್ಧಕಾಂಡದಲ್ಲಿ ಬರುವ ಆಖ್ಯಾನ. 'ಸಹೃದಯ ಓದುಗರ ಕರಕಮಲಗಳಲ್ಲಿ ನಮ್ಮ ಈ ಕನ್ನಡ ಕರಾವಳಿ ಗ್ರಂಥ ಪ್ರಕಾಶನದ ನಾಲ್ಕನೆಯ ಕುಸುಮವಾದ ರುಂಡ ಭೈರವನ ಕಾಳಗ ಎಂಬ ತಾಡವೋಲೆ ಕೃತಿಯನ್ನು ಇಡಲು ತುಂಬಾ ಸಂತೋಷವೆನಿಸುತ್ತದೆ' ಎಂದು ಅರಿಕೆ ಮಾಡಿದ್ದಾರೆ. ಅಂದರೆ ಇದನ್ನು ಓಲೆಗರಿ ಹಸ್ತಪ್ರತಿಯಿಂದ ಸಿದ್ಧಪಡಿಸಲಾಗಿದೆಯೆಂಬುದು ಇಲ್ಲಿನ ಆಶಯ, ಆಶಯಕ್ಕೆ ತಕ್ಕ ಭಾಷೆಯನ್ನು ಬಳಸಿಲ್ಲ. 'ಈ ಪ್ರತಿಯು ಐದಾರು ತಾಡವೋಲೆ ಹಾಗೂ ಕೈ ಬರಹದ ಪ್ರತಿಗಳಿಂದ ತಯಾರು ಮಾಡಲ್ಪಟ್ಟಿದೆ' ಎನ್ನುತ್ತಾರೆ (iv). ಅಂದರೆ ಇದನ್ನು ಎಷ್ಟು ಪ್ರತಿಗಳಿಂದ ಸಿದ್ಧಪಡಿಸಿದ್ದಾರೆಂಬುದು ಅವರಿಗೇ ತಿಳಿಯದು. ಈ ವಾಕ್ಯದ ಕೆಳಗೆ ಒಂಬತ್ತು ಪ್ರತಿಗಳ ವಿವರ ಹೇಳಿ, ಅನಂತರ (v) 'ಇವುಗಳಲ್ಲದೆ......ಇತ್ಯಾದಿ ೧೦–೧೨ ಪ್ರತಿಗಳನ್ನು ನಿರೀಕ್ಷಿಸಲಾಗಿದೆ..... ಹೀಗೆ ಹಲವಾರು ಪ್ರತಿಗಳ ಸಹಾಯದಿಂದ ಈ ಪ್ರತಿಯನ್ನು ಸಿದ್ಧಪಡಿಸಲಾಗಿದೆ' ಎಂದು ತಿಳಿಸಿದ್ದಾರೆ. ಅಸ್ಪಷ್ಟ ಭೂಮಿಕೆಯ ಮೇಲೆ ನಿಂತ ಸಂಪಾದಕರ ವಿವರಣೆಯಲ್ಲಿ ವಿರೋಧಾಭಾಸಗಳಿವೆ.

ಗ್ರಂಥದ ಅಭ್ಯಾಸದಿಂದ ಕೇವಲ ಕ ಖ ಗ ಘ ಚ ಎಂಬ ಅಯ್ದು ಪ್ರತಿಗಳನ್ನು ಮಾತ್ರ ಬಳಸಿಕೊಂಡಿರುವುದಾಗಿ ತಿಳಿದುಬರುತ್ತದೆ. 'ಅ' ಪ್ರತಿಯನ್ನು ಕುರಿತು 'ಇದರಿಂದ ಹಲವಾರು ಪಾಠಾಂತರ ಗುರುತಿಸಲು ಸಹಾಯವಾಗಿದೆ' ಎನ್ನುತ್ತಾರೆ, ಎಲ್ಲೆಲ್ಲಿ ಎಂಬುದು ತಿಳಿಯುವುದೇ ಇಲ್ಲ. ಮುದ್ರಣ ಕೆಟ್ಟದಾಗಿದೆ.

ಅಜ್ಞಾತಕವಿ ಕರ್ತೃಕವಾದ (ಕೆಂಪನಂಜಯ್ಯ ?) ಕಪೋತ ಚರಿತ್ರೆ (ಸಂ : ಭೋಜರಾಜ ಪಾಟೀಲ) ಮನುಷ್ಯನ ಸ್ವಭಾವಾದಿಗಳನ್ನು ಪಕ್ಷಿಗಳ ಮೂಲಕ ಧ್ವನಿಸಿರುವ ರೂಪಕ ಕಥೆ. ಈ ಜನಪ್ರಿಯ ಪುಟ್ಟ ಸಾಂಗತ್ಯ ಕಾವ್ಯವನ್ನು ಸಂಪಾದಿಸುವ ಕಾರ್ಯದಲ್ಲಿ, ಈಗಾಗಲೇ ಒಮ್ಮೆ ಪ್ರಕಟವಾಗಿದ್ದ ಮುದ್ರಿತ ಪ್ರತಿಯ ಜತೆಗೆ ಇನ್ನಿತರ ೧೯ ಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಪಾಠಾಂತರಗಳ ಆಯ್ಕೆಯಲ್ಲಿ ಇನ್ನೂ ಕಾಳಜಿ ವಹಿಸಬೇಕಿತ್ತು. ಜತೆಗೆ ಅವರು ನೋಡದೆ ಹೋದ ಹುಲ್ಲೂರು ಶ್ರೀನಿವಾಸ ಜೋಯಿಸರ ಮುದ್ರಿತ ಪ್ರತಿಯನ್ನು ದೊರಕಿಸಿಕೊಂಡಿದ್ದರೆ ಇನ್ನೂ ಪ್ರಯೋಜನವಾಗುತ್ತಿತ್ತು. ಇವರ ಕರ್ತೃವಿನ ಹೆಸರಿನ ವಿಚಾರದಲ್ಲಿ ಸಂದೇಹಕ್ಕೆ ಎಡೆಯಿದ್ದರೂ ಆತ ಚಿತ್ರದುರ್ಗ (ಚಿನ್ಮೂಲಾದ್ರಿ) ಮಠದ ಶಿಷ್ಯನೆಂಬುದರಲ್ಲಿ ಸಂಶಯವಿಲ್ಲವೆಂಬುದನ್ನು ಗಮನಿಸಬಹುದಿತ್ತು.

ಪಂಪಭಾರತ ಕಥಾಲೋಕ (ಆರ್. ಎಲ್. ಅನಂತರಾಮಯ್ಯ) ಪಂಪನ ವಿಕ್ರಮಾರ್ಜುನ ವಿಜಯದ ಹೊಸಗನ್ನಡ ರೂಪಾಂತರ. ಇಲ್ಲಿ ಪಂಪಭಾರತದ ಮೂಲ ನಿರೂಪಣೆಯನ್ನು ಆದಷ್ಟೂ ಸೋರದಂತೆ ತಿಳಿಯಾದ ಕನ್ನಡದಲ್ಲಿ, ಕಾವ್ಯದ ಪರಿಚಯ ಚೆನ್ನಾಗಿ ಆಗುವಂತೆ, ಸಂಗ್ರಹಿಸಿ ಕೊಡಲಾಗಿದೆ. ಇದಿಷ್ಟೇ ಆಗಿದ್ದರೆ ಈ ಗ್ರಂಥಕ್ಕೆ ಪ್ರಾಮುಖ್ಯ ಬರುವುದು ಕಷ್ಟವಾಗುತ್ತಿತ್ತು, ಪಂಪ ಭಾರತ ಕಥಾಸಾರವನ್ನು ಬಹಳ ಹಿಂದೆಯೇ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿತ್ತು. ಆದರೆ ಈ 'ಕಥಾಲೋಕ'ದ ಎರಡನೆಯ ಭಾಗದಲ್ಲಿ ಪಂಪನ ಹಾಗೂ ಅವನ ಕಾವ್ಯದ ವಿಚಾರವಾಗಿ ಮಮಕಾರ ದೂರವಾದ ವಿವೇಚನೆಯೂ ಇದೆ, ಅಲ್ಲದೆ ಮೂರನೆಯ ಭಾಗದಲ್ಲಿ ಕಾವ್ಯದಿಂದ ಆರಿಸಿಕೊಟ್ಟ ಕೆಲವು ಒಳ್ಳೆಯ ಪದ್ಯಗಳೂ ಇವೆ. ಮೂರು ವರ್ಷಗಳ ಹಿಂದೆ ಪ್ರಕಟವಾದ ಡಾ॥ ಡಿ.ಎಲ್.ಎನ್. ರವರ 'ಪಂಪಭಾರತ ದೀಪಿಕೆ' ತೋರಿದ ದಾರಿಯನ್ನು ಹಿಡಿದು ಇನ್ನೂ ಮುಂದೆ ಹೊರಟಿರುವ ಈ ಆಲೋಕ ಪಂಪಭಾರತದ ಅಭ್ಯಾಸಿಗಳಿಗೆ ಉಪಯುಕ್ತ ಕೈಗನ್ನಡಿ. ಇದು ಪಂಪಭಾರತದ ವ್ಯಾಸಂಗಕ್ಕೆ ಒದಗಬೇಕಾದ ಪೂರ್ವಭಾವಿ ಸಿದ್ಧತೆಯನ್ನು ಯಥೋಚಿತವಾದ ರೀತಿಯಲ್ಲಿ ಪೂರೈಸಿಕೊಡುತ್ತವೆ. ಹೊಸಗನ್ನಡದ ಬರವಣಿಗೆಯಲ್ಲಿ ಹಳಗನ್ನಡದ ಕೆಲವು ಮಾತುಗಳನ್ನು ಅಲ್ಲಲ್ಲಿ ಉಳಿಸಿಕೊಂಡಿರುವುದು ಉಚಿತವಾಗಿದೆ. ಇದರ ಮುಂದಿನ ಮುದ್ರಣಕ್ಕೆ ಕೆಲವು ಸೂಚನೆಗಳು :

i. 'ಪಂಪಭಾರತದಲ್ಲಿ ಜೈನಧರ್ಮದ ಸುಳುಹು' (ಪುಟ ೩೧೭) ಅಸಮಗ್ರವಾಗಿದೆ, ಇಂಥ ಇನ್ನಿತರ ಉದಾಹರಣೆಗಳನ್ನು ಗಮನಿಸಬಹುದು.

ii. ಗಾದೆ ಮಾತುಗಳು, ನುಡಿಗಟ್ಟುಗಳು (ಪುಟ ೩೪೯) ಸಾಲದು. ಇದಕ್ಕೆ ಪೂರಕವಾಗಿ ವಿವೇಕಾಭ್ಯುದಯ (೧೯೭೦) ದಲ್ಲಿ ಪ್ರಕಟವಾಗಿರುವ 'ಪಂಪನ ವಾಕ್ಯ ಮಾಣಿಕ್ಯಕೋಶ'ವನ್ನು ನೋಡಬಹುದು.

iii. ಪಂಪನ ಹಿತಮಿತ ಶೈಲಿಗೆ ಇನ್ನೂ ಉತ್ತಮ ಉದಾಹರಣೆಗಳನ್ನು ಕೊಡಬಹುದಿತ್ತು.

iv. ಎರಡನೆಯ ಭಾಗದಲ್ಲಿ ಬರುವ ಕೆಲವು ವಿವರಣೆಗಳು ವಿವಾದಾಸ್ಪದವಾಗಿವೆ. ಪಂಪ ಪೂರ್ವದಲ್ಲಿ ಕನ್ನಡದಲ್ಲಿ ಎಷ್ಟರಮಟ್ಟಿಗೆ ಕಾವ್ಯರಚನೆ ನಡೆದಿತ್ತೊ ತಿಳಿಯದು ಎಂದು (ಪುಟ ೨೬೩) ಹೇಳಿರುವುದು ಸರಿಯಲ್ಲ. ಕವಿರಾಜಮಾರ್ಗದ ಮಾತು ಹಾಗಿರಲಿ, ಒಮ್ಮಡಿ ಗುಣವರ್ಮನ ಶೂದ್ರಕ ಮತ್ತು

ಪರಿವಂಶಗಳನ್ನು ಮರೆಯುವಂತಿಲ್ಲ. ಭಾರತದ ಕಥೆಯನ್ನು ಇಡಿಯಾಗಿ ಅಥವಾ ಬಿಡಿಯಾಗಿ ಬೇರೆಯಾರಾದರೂ ಬರೆದಿದ್ದರೆ ಎಂಬುದು ಗೊತ್ತಾಗುವುದಿಲ್ಲವೆನ್ನುತ್ತಾರೆ. ಶಬ್ದಮಣಿದರ್ಪಣದಲ್ಲಿ ಉದಾಹೃತವಾಗಿರುವ ಮಹಾಭಾರತ ಕಥಾಸಂಬಂಧಿಯಾದ ಪದ್ಯಭಾಗಗಳನ್ನು ತನಿಯಾಗಿ ಅವಲೋಕಿಸಿದಾಗ ಅಂಥ ಪ್ರಯತ್ನಗಳು, ಕಡೆಗೆ ಬಿಡಿಯಾಗಿಯಾದರೂ ನಡೆದಿದ್ದುವೆಂಬುದು ಮನದಟ್ಟಾಗುತ್ತದೆ.

ಆದರೆ ನಿರರ್ಗಳವಾಗಿ ಓದಿಸಿಕೊಂಡು ಹೋಗುವ ಗದ್ಯ ರೂಪಾಂತರದ ಗುಣದ ಮುಂದೆ ಇವೆಲ್ಲಾ ಗೌಣವಾಗಿಬಿಡುತ್ತವೆ.

ಆಚಣ್ಣನ ವರ್ಧಮಾನ ಪುರಾಣವನ್ನು ಸಂಪೂರ್ಣ ಹೊಸಗನ್ನಡ ಅನುವಾದದೊಡನೆ ತ. ಸು. ಶಾಮರಾಯ ಮತ್ತು ಪ. ನಾಗರಾಜಯ್ಯ ಅವರುಗಳು ಸಂಪಾದಿಸಿದ ಕೃತಿಯನ್ನು ಭಾರತೀಯ ಜ್ಞಾನಪೀಠ ಪ್ರಕಟಿಸಿದೆ. ಅದರಲ್ಲಿ ಬರುವ ಮಹಾವೀರನ ಕಥೆಯನ್ನೇ ಪ್ರತ್ಯೇಕವಾಗಿ ತೆಗೆದು 'ಮಹಾವೀರ' ಎಂಬ ಹೆಸರಿನಿಂದ ಈಗ ಪ್ರಕಟಿಸಿದ್ದಾರೆ, ಆಚಣ್ಣನ ಚಂಪೂಕಾವ್ಯದ ಕಥಾನುಸಂಧಾನಕ್ಕೆ ಇದೊಂದು ಪ್ರವೇಶಿಕೆಯಂತಿದೆ.

ಸಂಶೋಧನ ಕೃತಿಗಳು
(ಭಾಷೆ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ)

ಎಂ. ಚಿದಾನಂದಮೂರ್ತಿ

ಈ ಸಮೀಕ್ಷೆಯಲ್ಲಿ ಹನ್ನೆರಡು ಗ್ರಂಥಗಳು ಒಳಗೊಂಡಿವೆ. ಇವು ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿವೆ. ಇವೆಲ್ಲವೂ ಸಂಶೋಧನಾತ್ಮಕವಾಗಿವೆಯೆಂಬುದೊಂದೇ ಇವುಗಳಲ್ಲಿರುವ ಸಮಾನಗುಣ. ಇವುಗಳಲ್ಲಿ ಮೂರು ಪಿಎಚ್.ಡಿ. ನಿಬಂಧಗಳು ; ಮೂರು. ನೇರವಾಗಿ ಶಾಸನ ಶಾಸ್ತ್ರಕ್ಕೆ ಸಂಬಂಧಿಸಿದುವು. ಮೂರು ಭಾಷೆಗೆ ಸಂಬಂಧಿಸಿದುವು. ಎರಡು ಸಂಸ್ಕೃತಿಗೆ ಸಂಬಂಧಿಸಿದುವಾಗಿದ್ದರೆ, ಒಂದು ಒಬ್ಬರೇ ಲೇಖಕರ ಬಿಡಿ ಬರಹಗಳ ಸಂಕಲನವಾಗಿದೆ.

ಬಹು ದೊಡ್ಡ ವಿದ್ವಾಂಸರಾಗಿದ್ದು ಸಾವಿರಾರು ವಿದ್ಯಾರ್ಥಿಗಳಿಗೆ ಇತಿಹಾಸವನ್ನು ಬೋಧಿಸಿ ಗಣ್ಯ ಸಂಶೋಧಕರೆಂದೂ ಅಧ್ಯಾಪಕರೆಂದೂ ಕೀರ್ತಿವಂತರಾಗಿದ್ದ ಡಾ. ಎಸ್. ಶ್ರೀಕಂಠಶಾಸ್ತ್ರಿಗಳವರ ಕನ್ನಡ ಬಿಡಿ ಲೇಖನಗಳ ಸಂಕಲನವೇ ಸಂಶೋಧನ ಲೇಖನಗಳು (ಸಂ.ಬಾ.ರಾ. ಗೋಪಾಲ್ ಮತ್ತು ಟಿ. ವಿ. ವೆಂಕಟಾಚಲಶಾಸ್ತ್ರೀ). ಅವರ ಬರಹಗಳು ಬೇರೆ ಬೇರೆ ಸಂಭಾವನಾ ಗ್ರಂಥಗಳಲ್ಲಿ, ವಿದ್ವತ್ ಪತ್ರಿಕೆಗಳಲ್ಲಿ, ದಿನ ಪತ್ರಿಕೆಗಳಲ್ಲಿ, ವಾರ್ಷಿಕ ಸಾಪ್ತಾಹಿಕ ಪತ್ರಿಕೆಗಳಲ್ಲಿ ಚದುರಿಹೋಗಿದ್ದುವು. ಸಂಶೋಧನೆಯಲ್ಲಿ ಆಸಕ್ತರಾಗಿರುವವರಿಗೆ ಅವರ ಕೆಲವು ಬರಹಗಳು ಲಭ್ಯವಾಗುವುದು ಅಸಾಧ್ಯವಾಗಿದ್ದಿತು. ಹೀಗಿರುವಾಗ ಅವರ ಎಲ್ಲ ಕನ್ನಡ ಲೇಖನಗಳನ್ನೂ ಒಂದೆಡೆಗೆ ತಂದು ಸಂಪಾದಕರು ದೊಡ್ಡ ಉಪಕಾರವನ್ನು ಮಾಡಿದ್ದಾರೆ.

ಇಲ್ಲಿಯ ಪ್ರಬಂಧಗಳೆಲ್ಲ ಒಂದೇ ಮಟ್ಟದವಲ್ಲ, ಸಹಜವಾಗಿಯೇ. ಪ್ರೌಢ ಪ್ರಬಂಧಗಳಂತೆಯೇ ಜನಪ್ರಿಯ ಬರಹಗಳು ಇಲ್ಲಿವೆ, ಕೆಲವು ಕಡೆ ವಿಷಯಗಳು ಪುನರಾವರ್ತನಗೊಳ್ಳುತ್ತವೆ. ಇಷ್ಟಾದರೂ ಈ ಸಂಕಲನ ಒಂದು ಚಿಕ್ಕ ವಿಶ್ವಕೋಶದಂತಿದೆ. ಇಲ್ಲಿಯ ವಿಷಯ ವೈವಿಧ್ಯ ಎಂಥವರನ್ನೂ ಬೆರಗುಗೊಳಿಸುತ್ತದೆ. ಪ್ರಪ್ರಾಚೀನ ವಿಷಯದಂತೆಯೇ ಅತ್ಯಾಧುನಿಕ ವಿಷಯವೂ ಡಾ. ಶಾಸ್ತ್ರಿಯವರ ವಿವೇಚನೆಗೆ ವಸ್ತುವಾಗುತ್ತದೆ. ನಿಜವಾದ ಇತಿಹಾಸಕಾರನಂತೆ ಮೂಲ ಸಾಮಗ್ರಿಗಳನ್ನು ಕಂಡುಹಿಡಿದು ಸಮಸ್ಯೆಯನ್ನು ವಿಶ್ಲೇಷಿಸಿ ಸತ್ಯವನ್ನು ಕಾಣಲು ಯತ್ನಿಸುತ್ತಾರೆ. ತಮ್ಮನ್ನು ತಾವು ಸತ್ಯಾನ್ವೇಷಕನೆಂದು ಭಾವಿಸಿರುವ ಡಾ. ಶಾಸ್ತ್ರಿಯವರು ನಿಷ್ಠುರವಾಗಿಯೇ ಮಾತನಾಡಬಲ್ಲರು. ಅವರ ಆಳವಾದ ವಿಸ್ತಾರವಾದ ಅಧ್ಯಯನ ಯಾರನ್ನೂ ಬೆರಗುಗೊಳಿಸುತ್ತದೆ. ಸಿಂಧೂ ಸಂಸ್ಕೃತಿಯನ್ನು ಕುರಿತ ಅವರ ಬರಹಗಳನ್ನಾಗಲಿ ಚಾಮುಂಡೇಶ್ವರಿ ಕುರಿತ ದೀರ್ಘ ಪ್ರಬಂಧವನ್ನಾಗಲಿ ಇಲ್ಲಿ ಹೆಸರಿಸಬಹುದು. ಡಾ. ಶಾಸ್ತ್ರಿಗಳ ಅನೇಕ ಪ್ರಬಂಧಗಳ ದೊಡ್ಡ ಕೊರತೆಯೆಂದರೆ ಅವುಗಳ ಮುಕ್ತಾಯದ ಭಾಗ. ಇದು ಶೈಲಿಯ ಪ್ರಶ್ನೆಯಲ್ಲ. ಬೇರೆ ಬೇರೆ ಸಂಗತಿಗಳನ್ನು ಒಂದರ ಮೇಲೊಂದರಂತೆ ಪೇರಿಸುತ್ತ ಹೋಗುವ ಅವರು ಕೊನೆಗೆ ಏನು ತೀರ್ಮಾನ ಹೇಳುತ್ತಾರೆ ಅಥವಾ ಯಾವ ಸಂಗತಿಯನ್ನು ಓದುಗರ ಮನಸ್ಸಿನಲ್ಲಿ ನಾಟಿಸಬೇಕೆಂದಿದ್ದಾರೆ ಎಂಬುದೇ ಕೊನೆಗೆ ಅಜ್ಞಾತವಾಗಿ ಉಳಿಯುತ್ತದೆ. 'ರಾಮಾಯಣದ ಮೇಲೆ ಹೊಸ ಬೆಳಕು' ಎಂಬ ಪ್ರಬಂಧವೇ ಅದಕ್ಕೆ ಉದಾಹರಣೆಯಾಗುತ್ತದೆ. ಅವರ ಪಾಂಡಿತ್ಯವೇ ಪ್ರಬಂಧಗಳಲ್ಲಿ ಮುಂದೆ ನಿಂತುಬಿಡುತ್ತದೆ. ಕೆಲವೆಡೆ 'ಶಾಸನಗಳಿಂದ ತಿಳಿದುಬರುತ್ತದೆ' ಎಂದು ಹೇಳಿಬಿಡುತ್ತಾರೆ. ಆದರೆ ವಾಸ್ತವ ಸಂಗತಿ ಹಾಗಿರುವುದಿಲ್ಲ. ಕಾಲಚೂರ್ಯ ಬಿಜ್ಜಳನು "ಕ್ರಿ. ಶ. ೧೧೬೮ ರಲ್ಲಿ ರಾಜ್ಯ ತ್ಯಜಿಸಿದನೇ ವಿನಾ ಕೊಲ್ಲಲ್ಪಡಲಿಲ್ಲ ಎಂಬುದೂ ಶಾಸನಗಳಿಂದ ಸ್ಪಷ್ಟವಾಗುವುದು" ಎಂದು ಹೇಳುತ್ತಾರೆ. ಶಾಸನ

ಗಳಿಂದ ಆ ಸಂಗತಿ ಸ್ಪಷ್ಟವಾಗುವುದಿಲ್ಲವೆಂಬುದನ್ನು ನಾವು ಬಲ್ಲೆವು. "ಲಕ್ಷ್ಯಗಳನ್ನು ಗಮನಿಸಿದರೂ ಸುಮಾರು ಒಂಬತ್ತನೆಯ ಶತಾಬ್ದದಲ್ಲಿಯೇ ಬೆದಂಡೆ ಚತ್ತಾಣ ತ್ರಿಪದಿ ಮದನವತಿ ಅಕ್ಕರ ಒನಕೆ ವಾಡು ಸಾಂಗತ್ಯ ಏಳೆ ಚೌಪದಿ ಇತ್ಯಾದಿ ರೂಪಗಳಿದ್ದವೆಂದು ಕವಿರಾಜಮಾರ್ಗ ಮುಂತಾದ ಗ್ರಂಥಗಳಿಂದ ಕಂಡುಬರುತ್ತದೆ.'' ಈ ವಾಕ್ಯ ಅವರ ಅವಸರದ ಬರವಣಿಗೆಗೆ ಸಾಕ್ಷಿ. ಆ ವಾಕ್ಯದ 'ಮುಂತಾದ' ಎನ್ನುವ ಪದಕ್ಕೆ ಔಚಿತ್ಯವೇ ಇಲ್ಲ. 'ಸಾಂಗತ್ಯ' ಹದಿನೈದನೆಯ ಶತಮಾನದಷ್ಟು ಈಚಿನದು. ಬೆಂಗಳೂರಿನ ಧರ್ಮರಾಯನ ಹಬ್ಬಕ್ಕೂ ಬೌದ್ಧ ಧರ್ಮಕ್ಕೂ ಸಂಬಂಧವಿಲ್ಲವೆಂದು ಒಂದು ಕಡೆ ಹೇಳಿದರೆ (ಪು. ೨೭೬), ಸಂಬಂಧವಿದೆಯೆಂದು ಇನ್ನೊಂದೆಡೆ ಹೇಳುತ್ತಾರೆ (ಪು, ೪೭೩) ಬೇರೆ ಬೇರೆ ಕಾಲಗಳಲ್ಲಿ ಬರೆದ ಲೇಖನಗಳಾದರೂ,ತಮ್ಮ ಮುಂಚಿನ ಅಭಿಪ್ರಾಯವನ್ನು ಮಾರ್ಪಡಿಸಿಕೊಂಡರೆಂಬುದಕ್ಕೆ ಸೂಚನೆಗಳಿಲ್ಲ: ಮತ್ತು ಬಹುತೇಕ ಇಂತಹ ಪ್ರಮುಖ ಹೇಳಿಕೆಗಳನ್ನು ಆಧಾರಗಳಿಂದ ಸಮರ್ಥಿಸುವುದಿಲ್ಲ. ವಿಜಯನಗರದ ಪತನಕ್ಕೂ ಪುರಂದರದಾಸರಿಗೂ ಸಂಬಂಧವಿತ್ತೆಂಬ ತಮ್ಮ ನಿಲುವನ್ನು ಕೊನೆಗೂ ಆಧಾರಗಳಿಂದ ಸಮರ್ಥಿಸದೆ ಹಾಗೇ ಉಳಿಸಿಬಿಟ್ಟರು. ಶಾಸ್ತ್ರಿಯವರು ಬಹು ದೊಡ್ಡ ವಿದ್ವಾಂಸರೆಂಬುದರಲ್ಲಿ ಅನುಮಾನವಿಲ್ಲ. ಆದರೆ ಶಾಸ್ತ್ರೀಯ ಸಂಶೋಧನೆ ಆ ವಿದ್ವತ್ತಿಗೆ 'ಸರಿಸಮನಾಗಿ' ಅವರಿಗೆ ಒಲಿದಿತ್ತೇ ಎಂಬುದು ಸಂದೇಹಾಸ್ಪದವಾಗುತ್ತದೆ. ('ಸರಿಸಮನಾಗಿ' ಎಂಬ ಮಾತು ಮುಖ್ಯ). ಕರ್ನಾಟಕ ಇತಿಹಾಸ, ಸಂಸ್ಕೃತಿಗಳಲ್ಲಿ ಆಸಕ್ತರಾಗಿರುವವರು ಅತ್ಯವಶ್ಯ ಓದಬೇಕಾದ ಗ್ರಂಥವೊಂದನ್ನು ಹೊರತಂದ ಸಂಪಾದಕರು ನಿಜವಾಗಿಯೂ ಅಭಿನಂದನಾರ್ಹರಾಗಿದ್ದಾರೆ.

ಯುಗಯಾತ್ರೀ ಭಾರತೀಯ ಸಂಸ್ಕೃತಿ ಗ್ರಂಥದ ಮೂರನೆಯ ಸಂಪುಟವು ಹಿಂದಿನ ಎರಡು ಸಂಪುಟಗಳಂತೆಯೇ ಅತ್ಯಂತ ಆಕರ್ಷಕವಾಗಿ ಹೊರಬಂದಿದೆ. ಕಲ್ಕತ್ತದ ರಾಮಕೃಷ್ಣ ಮಿಷನ್ ಪ್ರಕಟಿಸಿದ *The Cultural Heritage of India* ಗ್ರಂಥದ ಅನುವಾದ ಇದು ಎಂಬುದನ್ನು ಎಲ್ಲರೂ ಬಲ್ಲರು. ಈ ಸಂಪುಟದಲ್ಲಿ ಮುಖ್ಯವಾಗಿ ಭಾರತೀಯ ತತ್ವ ಶಾಸ್ತ್ರಕ್ಕೆ ಸಂಬಂಧಿಸಿದ ಮೂವತ್ತೊಂಬತ್ತು ಲೇಖನಗಳಿವೆ. ದರ್ಶನಗಳು, ವೇದಾಂತ, ಧಾರ್ಮಿಕ ದರ್ಶನಗಳು, ದಾರ್ಶನಿಕ ವಿಜ್ಞಾನಗಳು ಎಂಬ ನಾಲ್ಕು ವರ್ಗಗಳ ಕೆಳಗೆ ಲೇಖನಗಳನ್ನು ಅಳವಡಿಸಲಾಗಿದೆ. ಮೂಲ ಲೇಖನಗಳನ್ನು ಬರೆದ ವಿದ್ವಾಂಸರು ಗಣ್ಯರು ಮತ್ತು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಿಣತರು. ಮೂಲ ಗ್ರಂಥದ ಬಗ್ಗೆ ವಿಶ್ವದ ಪಂಡಿತವರ್ಗ ಮುಕ್ತಕಂಠದಿಂದ ಪ್ರಶಂಸೆ ಮಾಡಿದೆ. ಅಂತಹ ಗ್ರಂಥವೊಂದನ್ನು ಕನ್ನಡಕ್ಕೆ ತಂದು ಮೈಸೂರು ವಿಶ್ವವಿದ್ಯಾನಿಲಯ ಮತ್ತು ಅನುವಾದಮಾಡಿಸಿ ಪ್ರಕಟಿಸಿರುವ ಪ್ರಸಾರಾಂಗದ ನಿರ್ದೇಶಕ ಡಾ. ಪ್ರಭುಶಂಕರರು ಕನ್ನಡದ ಶಾಸ್ತ್ರ ವಾಙ್ಮಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ.

ಮೂಲ ಲೇಖನಗಳ ಭಾಷೆ ಸುಲಭವಾಗಿದ್ದರೂ ವಿಷಯದ ಗಹನತೆಯಿಂದ ಅವನ್ನು ಓದಿ ಅರ್ಥಯಿಸಿಕೊಳ್ಳುವುದು ಸುಲಭವೇನೂ ಅಲ್ಲ. ಅವುಗಳನ್ನು ಕನ್ನಡಕ್ಕೆ ಅನುವಾದಿಸುವ ಕಠಿನ ಕಾರ್ಯವನ್ನು ಎಲ್ಲ ಅನುವಾದಕರೂ ಯಶಸ್ವಿಯಾಗಿ ಪೂರ್ಣ ಜವಾಬ್ದಾರಿಯಿಂದ ನಿರ್ವಹಿಸಿದ್ದಾರೆ. ಎಲ್ಲ ವಿಷಯದಲ್ಲೂ ಮೂಲಕ್ಕೆ ಯಾವುದೇ ಚ್ಯುತಿ ಬಂದಿಲ್ಲ. ಇಷ್ಟು ತೃಪ್ತಿಕರವಾದ ಪುಸ್ತಕದ ಕೊನೆಯಲ್ಲಿ ಶಬ್ದಸೂಚಿ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ! ಓದುಗರಿಗೆ ಶಬ್ದ ಸೂಚಿಗಳು ಎಷ್ಟು ಅಗತ್ಯವೆಂಬುದನ್ನು ನಾವಿನ್ನೂ ಮನಗಾಣಬೇಕಾಗಿದೆ.

ಸಂಸ್ಕೃತ ಸಾಹಿತ್ಯಕ್ಕೆ ಕಾಶ್ಮೀರದ ಕೊಡುಗೆ ಎಂಬ ಡಾ. ಕೆ. ಎಸ್. ನಾಗರಾಜನ್ ಅವರ ಪುಸ್ತಕ ಸ್ವಾಗತಾರ್ಹವಾಗಿದೆ. ಕಾಶ್ಮೀರದ ಹೊರಚೆಲುವಿನಂತೆಯೇ ಅದರ ಸಾಂಸ್ಕೃತಿಕ ಕೊಡುಗೆಯೂ ದೊಡ್ಡದು. ಭಾರತದ ರಾಜಕೀಯ ಇತಿಹಾಸದಲ್ಲಿ ಹೇಗೋ ಅದರ ಸಾಂಸ್ಕೃತಿಕ ಇತಿಹಾಸದಲ್ಲಿಯೂ ಕಾಶ್ಮೀರದ ಸ್ಥಾನ ಮಹತ್ವದ್ದು. ಸಂಸ್ಕೃತ ಸಾಹಿತ್ಯಕ್ಕೆ ಕಾಶ್ಮೀರದ ಕಾಣಿಕೆ ಗಾತ್ರದಲ್ಲಿ ಮತ್ತು ಯೋಗ್ಯತೆಯಲ್ಲಿ ಅದ್ವಿತೀಯವಾದುದು. ಅದನ್ನೇ ತಮ್ಮ ಸಂಶೋಧನೆಯ ವಸ್ತುವಾಗಿ

ಮಾಡಿಕೊಂಡು ಪಿಎಚ್.ಡಿ. ಪ್ರಶಸ್ತಿಯನ್ನು ಪಡೆದ ಲೇಖಕರು ತಮ್ಮ ಮೂಲ ಇಂಗ್ಲಿಷ್ ನಿಬಂಧದ ಸಾರವನ್ನು ಈ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಇದರಿಂದ ಆ ವಿಷಯದ ಬಗ್ಗೆ ಇದೊಂದು ಅಧಿಕೃತ ಬರಹ ಎಂದು ನಾವು ತಿಳಿಯಬೇಕಾಗುತ್ತದೆ.

ಕಾಶ್ಮೀರದ ಇತಿಹಾಸ, ಅಲ್ಲಿಯ ಸಂಸ್ಕೃತ ಸಾಹಿತ್ಯ ಮತ್ತು ಶಾಸ್ತ್ರಕ್ಕೆ ಕಾಶ್ಮೀರದ ವಿದ್ವಾಂಸರ ಕೊಡುಗೆ ಇವುಗಳ ಸಮೀಕ್ಷೆ ಇಲ್ಲಿ ಬಂದಿದೆ. ಕಾಲದಿಂದ ಕಾಲಕ್ಕೆ ಕಾಶ್ಮೀರದಲ್ಲಿ ನಡೆದ ರಾಜಕೀಯ ಘಟನೆಗಳು ಮತ್ತು ಮತಾಂತರಗಳು ಆ ದೇಶದ ಸಾಂಸ್ಕೃತಿಕ ಜೀವನವನ್ನು ಹೇಗೆ ರೂಪಿಸಿವೆ, ಮಾರ್ಪಡಿಸಿವೆ ಎಂಬುದನ್ನು ಸಾಧಾರವಾಗಿ ಪ್ರತಿಪಾದಿಸಿದ್ದಾರೆ. ಸಂಸ್ಕೃತದ ಐತಿಹಾಸಿಕ ಸಾಹಿತ್ಯಕ್ಕೆ ಕಾಶ್ಮೀರದ ಕೊಡುಗೆ ಗಮನಾರ್ಹ. ಬೇರೆಬೇರೆ ಕಾಲಗಳಲ್ಲಿ ರಾಜತರಂಗಿಣಿಗಳನ್ನು ಬರೆದ ಕಲ್ಹಣ, ಜೋನರಾಜ, ಶ್ರೀಧರ, ಪ್ರಾಜ್ಯಭಟ್ಟ (ಮತ್ತು ಅವನ ಶಿಷ್ಯ ಶುಕ)—ಇವರು ಬರೆದಿರುವ ಕೃತಿಗಳ ಸಹಾಯದಿಂದ ಕಾಶ್ಮೀರದ ಇತಿಹಾಸವನ್ನು ಸಮರ್ಪಕವಾಗಿ ಬರೆಯಲು ಸಾಧ್ಯವಾಗಿದೆ. ಕರ್ನಾಟಕದ ಸಂಸ್ಕೃತ ಕವಿ ಬಿಲ್ಹಣ ಮೂಲತಃ ಕಾಶ್ಮೀರದವನು. (ಇವನು ಇದ್ದುದು ಪು. ೪೯ ರಲ್ಲಿ ಹೇಳಿರುವಂತೆ ಏಳನೆಯ ವಿಕ್ರಮಾದಿತ್ಯನ ಕಾಲದಲ್ಲಲ್ಲ, ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ). ಆಲಂಕಾರಿಕರಲ್ಲಂತೂ ಮುಖ್ಯರಾದವರು ಬಹುತೇಕ ಕಾಶ್ಮೀರದವರೇ; ಕಾಶ್ಮೀರದ ಶೈವಸಿದ್ಧಾಂತದ ಬಗ್ಗೆ ಇರುವ ಅಧ್ಯಾಯ ಬಹು ಉಪಯುಕ್ತವಾಗಿದೆ. ಡಾ. ನಾಗರಾಜನ್ ಅವರು ಸರಳವಾಗಿ ನಿರರ್ಗಳವಾಗಿ ಬರೆಯಬಲ್ಲರು. ಶಾಸ್ತ್ರೀಯ ವಿಷಯಗಳನ್ನು ಕರಾರುವಾಕಾಗಿ ನಿರೂಪಿಸುವ ನೈಪುಣ್ಯ ಅವರಿಗಿದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಈ ವರ್ಷ (೧೯೭೬) ನಡೆಸಿದ ಶಾಸನ ಡಿಪ್ಲೊಮ ತರಗತಿಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಿದ್ಧವಾದ ಶಾಸನಗಳ ಸಂಕಲನವೇ **ಶಾಸನ ಸಂಗ್ರಹ** (ಸಂ : ಎ. ಎಂ. ಅಣ್ಣೀಗೇರಿ ಮತ್ತು ಆರ್. ಶೇಷಶಾಸ್ತ್ರಿ). ಇದರಲ್ಲಿ ಇಪ್ಪತ್ತು ಶಾಸನಗಳಿವೆ. ಪ್ರಾಚೀನವಾದ ಹಲ್ಮಿಡಿ ಶಾಸನದಿಂದ ಹದಿನೈದನೆಯ ಶತಮಾನದ ಲಕ್ಷ್ಮೀಧರಾಮಾತ್ಯನ ಶಾಸನದ ವರೆಗೆ ಇವುಗಳ ಕಾಲ ಹಬ್ಬಿದೆ. ಇದರಲ್ಲಿ ದಾನಶಾಸನ, ವೀರಗಲ್ಲು, ಮಾಸ್ತಿಗಲ್ಲುಗಳೂ ಇರುವುದರಿಂದ ವೈವಿಧ್ಯವೂ ಈ ಆಯ್ಕೆಯಲ್ಲಿದೆ. ಜೊತೆಗೆ ಮಂಗಲೇಶ, ಮೂರನೆಯ ಕೃಷ್ಣರ ಶಾಸನಗಳೂ, ಜಿನವಲ್ಲಭನ ಬುಕ್ಕರಾಯನ ಶಾಸನಗಳೂ ಇಲ್ಲಿರುವುದರಿಂದ ಇದೊಂದು ಗಮನಾರ್ಹವೆನಿಸುವ ಶಾಸನಗಳ ಸಂಕಲನವಾಗಿದೆ.

ಶಾಸನ ಅಚ್ಚು ಮಾಡಿರುವಲ್ಲಿ ಕೆಲವೆಡೆ ದೋಷಗಳು ಉಳಿದಿವೆ. ಉದಾ : ಹಲ್ಮಿಡಿಶಾಸನದಲ್ಲಿ 'ಅಳು ಕದಮ್ಬನ್' (ಅಳಕದಮ್ಬನ್). ಗೊಮ್ಮಟ ಸ್ತುತಿ ಶಾಸನದಲ್ಲೂ ಇಂತಹ ಒಂದೆರಡು ದೋಷಗಳು ಉಳಿದಿವೆ. ಆದರೆ ಒಟ್ಟಿನಲ್ಲಿ ಶಾಸನಗಳನ್ನು ಎಚ್ಚರಿಕೆಯಿಂದ ಅಚ್ಚು ಮಾಡಿಸಿದ್ದಾರೆ.

ಪ್ರಾರಂಭದಲ್ಲಿ ೩೪ ಪುಟಗಳ ಒಂದು ಪ್ರಸ್ತಾವನೆಯಿದೆ. ಶಾಸನಗಳ ಪರಿಚಯ ಮಾಡಿಕೊಳ್ಳ ಬಯಸುವವರಿಗೆ ಇದು ಕೆಲವು ಉಪಯುಕ್ತ ಸಂಗತಿಗಳನ್ನು ತಿಳಿಸುತ್ತದೆ. ಶಾಸನಗಳ ವರ್ಗೀಕರಣ, ಕೃತಕ ತಾಮ್ರಪಟಗಳು, ಕಾಲಗಣನೆ, ಲಿಪಿಯ ಬೆಳವಣಿಗೆ, ಶಾಸನಗಳ ರಾಜಕೀಯ ಸಾಂಸ್ಕೃತಿಕ ಮಹತ್ವ ಇತ್ಯಾದಿ ಸಂಗತಿಗಳನ್ನು ಉಚಿತ ಉದಾಹರಣೆ ಸಮೇತ ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಈಚಿನ ದಿನಗಳಲ್ಲಿ ಇತಿಹಾಸ, ಶಾಸನಗಳಲ್ಲಿ ಜನರ ಆಸಕ್ತಿ ಬೆಳೆಯುತ್ತಿದೆಯೆಂಬುದು ಸಮಾಧಾನದ ಸಂಗತಿ. ಶಾಸನಗಳ ಮೂಲ ಪಾಠವನ್ನು ನೋಡಬಯಸುವವರು ಎಪಿಗ್ರಾಫಿಯ ಕರ್ನಾಟಿಕ ಇತ್ಯಾದಿ ಸಂಪುಟಗಳಿಗೆ ಹೋಗಬೇಕು. ಆದರೆ ಅವು ದೊರಕುವುದು ದುರ್ಲಭ. ಆ ದೃಷ್ಟಿಯಿಂದ ಈ ಪುಸ್ತಕ ಶಾಸನಾಸಕ್ತಿಯನ್ನು ಬೆಳಸಿಕೊಂಡವರ ಕುತೂಹಲವನ್ನು ಕೆರಳಿಸುತ್ತದೆ. ಮತ್ತು ಅವರು ಕೆಲವು ಶಾಸನಗಳ ಮೂಲ ಪಾಠವನ್ನು ಅನಾಯಾಸವಾಗಿ ಪಡೆಯಬಲ್ಲರು.

ಎಂ. ಎಂ. ಕಲಬುರ್ಗಿಯವರು ಆಗಾಗ ಬೇರೆ ಬೇರೆ ಪತ್ರಿಕೆಗಳಲ್ಲಿ ಬರೆದ ಚಿಕ್ಕ ಟಿಪ್ಪಣಿಗಳ, ಲೇಖನಗಳ ಸಂಕಲನ **ಶಾಸನ ವ್ಯಾಸಂಗ**. ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಶಾಸನಗಳಿಗೆ

ಸಂಬಂಧಿಸಿವೆಯಾದ್ದರಿಂದ ಪುಸ್ತಕಕ್ಕೆ ಆ ಹೆಸರು ಕೊಟ್ಟಿದೆ. ಇಲ್ಲಿ ಚರ್ಚಿತವಾಗಿರುವ ಸಂಗತಿಗಳಲ್ಲಿ ವೈವಿಧ್ಯವಿದೆ: ಶಬ್ದಗಳ ನಿಷ್ಪತ್ತಿ, ಶಾಸನಗಳಲ್ಲಿ ಕವಿಗಳ ಪದ್ಯಗಳು, ಶಾಸನಗಳಲ್ಲಿ ಛಂದೋಪ್ರಯೋಗ, ಸುಪ್ರಸಿದ್ಧ ವ್ಯಕ್ತಿಗಳ ಉಲ್ಲೇಖ ಇತ್ಯಾದಿ. ಒಂದೊಂದು ಸಣ್ಣ ಸಮಸ್ಯೆಯನ್ನು ತೆಗೆದುಕೊಂಡು, ಅದನ್ನು ವಿಶ್ಲೇಷಿಸುವ, ಬಿಡಿಸುವ ಯತ್ನ ಒಂದೊಂದು ಲೇಖನದಲ್ಲೂ ಉಂಟು. ಹಿಂದೆ ನಡೆದಿರುವ ಚರ್ಚೆಗಿಂತ ಮುಂದೆ ಹೋಗುವ ಯತ್ನವನ್ನು ಮಾಡಿದೆ. ಅನೇಕ ಹೊಸ ಸಂಗತಿಗಳನ್ನು ಮೊತ್ತಮೊದಲ ಬಾರಿಗೆ ಎತ್ತಿ ತೋರಿದೆ. ಹೀಗಾಗಿ ಸಂಶೋಧನೆಯಲ್ಲಿ ಆಸಕ್ತರಾಗಿರುವವರಿಗೆ ಇದೊಂದು ಸಂದರ್ಭ ಗ್ರಂಥವಾಗಿ ಪರಿಣಮಿಸಿದೆ.

'ಕಪ್ಪೆ ಅರಭಟ್ಟನ್' ಎಂಬ ಮೊದಲ ಲೇಖನದಲ್ಲಿ ಆ ಹೆಸರಿನ ನಿಷ್ಪತ್ತಿ ಬಗ್ಗೆ ಚರ್ಚಿಸಿದ್ದಾರೆ. 'ಕಪ್ಪೆ' ಮತ್ತು 'ಕಪ್ಪಡಿ' ಗಳನ್ನು ಸಮಾನಾರ್ಥಕಗಳೆಂದು ಭಾವಿಸುವುದು ಅನುಚಿತವಾಗಿದೆ. 'ಕಪ್ಪಡಿ' ಎಂಬುದು ಸಂಸ್ಕೃತ 'ಕಾರ್ಪಟಿ'ಯ ತದ್ಭವ. 'ಕಾರ್ಪಟಿ' ಎಂದರೆ ಯಾತ್ರಾರ್ಥಿ ಎಂದರ್ಥ ("ಸ್ವಾಮಿ ಯಾತ್ರೆಗೆ ಬಂದ ಕಪ್ಪಡಿಗಳ" ಎಂಬ ಶಾಸನೋಲ್ಲೇಖ ಗಮನಿಸಿ. 'ಕಪ್ಪಡಿ ಸಂಗಮ' ಎಂಬಲ್ಲಿಯೂ ಅಂತಹ ಯಾತ್ರಾರ್ಥಿಗಳು ಬರುತ್ತಿದ್ದ ನದಿಯ ಸಂಗಮ ಎಂಬರ್ಥವಿದೆ) 'ಕಪ್ಪೆ'ಗೆ ಏನರ್ಥವೋ ತಿಳಿಯದು. ಒಂದು ವೇಳೆ ಅವೆರಡೂ ಒಂದೇ ಎಂದು ತೀರ್ಮಾನವಾದರೂ 'ಕಪ್ಪೆ ಅರಭಟ್ಟ' ಎನ್ನುವಲ್ಲಿನ 'ಅರ' ಎಂಬುದು 'ಅರಸು' ಪದದ ಸವೆದರೂಪ ಎಂಬ ನನ್ನ ಅಭಿಪ್ರಾಯಕ್ಕೆ ಚ್ಯುತಿ ಬರುವುದಿಲ್ಲ. ಶಾಸನಗಳಲ್ಲಿ ಆದಿಗುಣವರ್ಮ, ಪಂಪ, ಮಲ್ಲಿಕಾರ್ಜುನ, ಚಂದ್ರರಾಜನ ಪದ್ಯಗಳನ್ನು ಗುರುತಿಸಿದ್ದಾರೆ. ಅಲ್ಲಲ್ಲಿ ಸಣ್ಣ ಸಂಗತಿಗಳನ್ನು ದೊಡ್ಡದಾಗಿ ಹೇಳಿಕೊಳ್ಳುವುದು ಸ್ವಲ್ಪ ವಿಲಕ್ಷಣವಾಗಿ ತೋರುತ್ತದೆ. ಪಂಪನ ಆದಿಪುರಾಣದ ಪದ್ಯ ಬೇಲೂರು ಶಾಸನದಲ್ಲಿ ದೊರಕುತ್ತದೆ. ಹೀಗೆ ಕವಿಗಳ ಪದ್ಯ ದೊರಕುವುದು ಸಾಮಾನ್ಯ. ಆದರೆ, ಆ ಆದಿಪುರಾಣದ ಒಂದು ಪದ್ಯದ ಉಲ್ಲೇಖದಿಂದ ನಾಲ್ಕು (ಅಷ್ಟು ಮುಖ್ಯವಲ್ಲದ) ತೀರ್ಮಾನಗಳಿಗೆ ಬರುವುದನ್ನು ಗಂಭೀರವಾಗಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. 'ಮದನತಿಲಕ'ದ ಪದ್ಯದ ಬಗೆಗೂ ಇದೇ ಮಾತು ಹೇಳಬಹುದು. ಒಂದು ಸಂಗತಿಯನ್ನು ಗಮನಿಸಿ, ಅದಕ್ಕೆ ಎಷ್ಟು ಮಹತ್ವವೋ ಅಷ್ಟು ಕೊಟ್ಟರೆ ಸಾಕು. ಆದಿಗುಣವರ್ಮನ ಪದ್ಯಗಳನ್ನು, ಪಂಪನ ಪದ್ಯಗಳನ್ನು ಬೇರೆ ಬೇರೆ ಶಾಸನಗಳಲ್ಲಿ ಗುರುತಿಸಿರುವುದು ಒಳ್ಳೆಯ ಸಂಗತಿ; ಅದನ್ನು ನಾವು ಮೆಚ್ಚುತ್ತೇವೆ. 'ಅಬ್ಬಣಬ್ಬೆ' ಪಂಪನ ತಾಯಿಯ ಹೆಸರು ಎಂಬುದನ್ನು ಮೊದಲು ಸೂಚಿಸಿದ ಪ್ರಾಶಸ್ತ್ಯ ಕಲಬುರ್ಗಿಯವರಿಗೆ ಸಲ್ಲುತ್ತದೆ. ಪಂಪನ ಇನ್ನೊಂದು 'ಶಾಸನ'ವಿರಬೇಕು, ಜಿನವಲ್ಲಭನ ಶಾಸನ ಪಂಪ ಗತಿಸಿದ ನಂತರ ಹುಟ್ಟಿತು ಎಂಬ ಅಭಿಪ್ರಾಯಗಳ ಬಗ್ಗೆ ನನ್ನ ತೀವ್ರ ಸಂದೇಹಗಳಿವೆ. (ಇದನ್ನು ಕುರಿತು ಸದ್ಯದಲ್ಲಿಯೇ ನನ್ನದೊಂದು ಲೇಖನ ಪ್ರಕಟವಾಗಲಿದೆ.) ಕೊಂಡಗುಳಿ ಕೇಶಿರಾಜನನ್ನು ಶಾಸನದಲ್ಲಿ ಮೊದಲು ಗುರುತಿಸಿದ ಎ. ಶಿವಾನಂದರ ಹೆಸರನ್ನು ಉಲ್ಲೇಖಿಸಬೇಕಿತ್ತು. 'ಉಳಿಯುಮೇಶ್ವರ ಚಿಕ್ಕಯ್ಯ' ಎಂಬುದರ ಪೂರ್ವಾರ್ಧ 'ಹುಳಿಯುಮೇಶ್ವರ' ಎಂಬುದೇ ಆಗಿದೆ ಎಂಬ ಅವರ ಸೂಚನೆ ಸರಿಯಾಗಿದೆ. 'ಸೂರಿ' ಎಂಬ ಕವಿಯು ಕವಡೆಯ ಬೊಪ್ಪನ ಹೆಸರು ಬರುವ ಚಂಪೂಕಾವ್ಯವೊಂದನ್ನು ಬರೆದಿರುವ ಸಾಧ್ಯತೆಯಿದೆ ಎಂಬ ಅವರ ಊಹೆ ಮನನೀಯವಾಗಿದೆ. 'ಶಾಸನದಲ್ಲಿ ಭಾಮಿನಿ' ಎಂಬ ಲೇಖನ ಎಷ್ಟು ಕುತೂಹಲವನ್ನು ಕೆರಳಿಸುತ್ತದೆಯೋ ಅಷ್ಟೇ ನಿರಾಸೆ ಉಂಟುಮಾಡುವಂತಿದೆ. 'ಭಾಮಿನಿ'ಯನ್ನು ಕಾಣಲು ಕಲಬುರ್ಗಿಯವರು ಮಾಡಿರುವ ಪ್ರಯತ್ನ ಗ್ರಂಥ ಸಂಪಾದನಾ ಶಾಸ್ತ್ರದ ತತ್ವಗಳಿಗೆ ಅನುಗುಣವಾಗಿಲ್ಲ. ಪಾಠವನ್ನು ಸಾಕಷ್ಟು ತಿರುಚಿದ್ದಾರೆ ಎನ್ನಿಸುತ್ತದೆ. "ನೊಲವಿ....ರ [ಪಾಲಿಸಿರ ಭೂ]" ಇವರಲ್ಲಿ ಚಿಕ್ಕಿಗಳಿರುವ ಭಾಗ ಹಾಳಾಗಿಹೋಗಿದೆ; [ ] ದಲ್ಲಿರುವ ಭಾಗ ಶಾಸನ ಸಂಪಾದಕರ ಊಹೆಯ ಪಾಠ. ಇಷ್ಟನ್ನೂ "ಶೂಲವಿಧಿಯ ಕಪಾಲ ಸಿರ ಭೂ" ಎಂದು ತಿದ್ದುವ ಬಗೆಯಾದರೂ ಹೇಗೆ?

ಕಲಬುರ್ಗಿಯವರ ನಿರಂತರ ಅಭ್ಯಾಸ, ಸಂಶೋಧನಾಸಕ್ತಿಗಳ ಕುರುಹಾಗಿರುವ "ಶಾಸನ ಪ್ರಸಂಗ" ಶಾಸನ ವಿದ್ಯಾರ್ಥಿಗಳು ಸ್ವಾಗತಿಸಬೇಕಾದ ಒಂದು ಗ್ರಂಥ.

ಧಾರವಾಡ ಜಿಲ್ಲೆಯ ಶಾಸನಸೂಚಿ ಎಂ. ಎಂ. ಕಲಬುರ್ಗಿಯವರ ಇನ್ನೊಂದು ಉಪಯುಕ್ತ ಕೃತಿ. ಹಳೆಯ ಮೈಸೂರಿನ ಶಾಸನಗಳು ಬೇರೆ ಬೇರೆ ಜಿಲ್ಲೆಯ ಸಂಪುಟಗಳಲ್ಲಿ ಒಟ್ಟಿಗೆ ದೊರಕುತ್ತವೆ. ಹೊಸದಾಗಿ ಸಿಕ್ಕ ಶಾಸನಗಳು ಮುಂದಿನ ಸಪ್ಲಿಮೆಂಟರಿಗಳಲ್ಲಿ ಮತ್ತು ರಿಪೋರ್ಟುಗಳಲ್ಲಿ ಪ್ರಕಟವಾಗಿವೆ. ಆದರೆ ಉತ್ತರ ಕರ್ನಾಟಕದ ಶಾಸನಗಳು ಹಾಗೆ ದೊರಕುವುದಿಲ್ಲ. ಅವು ಬೇರೆ ಬೇರೆ ಪತ್ರಿಕೆಗಳಲ್ಲಿ ಚದುರಿಹೋಗಿವೆ. ಕೆಲವೊಮ್ಮೆ ಒಂದೇ ಸಂಪುಟದಲ್ಲಿ ಬೇರೆ ಬೇರೆ ಜಿಲ್ಲೆಯ ಶಾಸನಗಳು ಸಮಾವೇಶವಾಗಿರುವುದುಂಟು. ಅವು ಆಯಾ ಜಿಲ್ಲೆಯ ಹೆಸರಲ್ಲಿ ಒಂದೊಂದು ಸಂಪುಟವಾಗಿ ಹೊರಬರುವ ಅಗತ್ಯವಿದೆ. ಉತ್ತರ ಕರ್ನಾಟಕದ ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳ ಜಿಲ್ಲಾವಾರು ಸಂಪುಟಗಳ ಪ್ರಕಟಣೆಗೆ ಈ ಶಾಸನಸೂಚಿಯು ಮುನ್ಸೂಚನೆಯಂತಿದೆ,

ಈ ಶಾಸನಸೂಚಿಯ ಕೆಲಸ ಸಹಜವಾಗಿಯೇ ಶ್ರಮದಾಯಕವಾದುದು. 'ಕರ್ನಾಟಕದ ಒಟ್ಟು ಶಾಸನಗಳ ಹತ್ತರಲ್ಲಿ ಒಂದು ಪಾಲು ಶಾಸನಗಳು ಧಾರವಾಡ ಜಿಲ್ಲೆಯಲ್ಲಿವೆ.' ಇಷ್ಟು ಶಾಸನಶ್ರೀಮಂತ ಜಿಲ್ಲೆಯ ಶಾಸನಗಳ ಸೂಚಿ ತಯಾರಿಕೆಗೆ ಬೇರೆ ಬೇರೆ ಮೂಲಗಳಿಗೆ ಅಲೆದು, ವಿಷಯವನ್ನು ಸಂಗ್ರಹಿಸಿದ್ದಾರೆ. ಇಲ್ಲಿ ಯಾವುದೇ ಶಾಸನದ ಮೂಲಪಾಠವಾಗಲಿ, ಕೊನೆಗೆ ಅದರ ಸಾರಾಂಶವಾಗಲಿ ದೊರಕುವುದಿಲ್ಲ. ಆದರೆ ಶಾಸನದ ಮುಖ್ಯ ಉದ್ದೇಶವೇನೆಂಬುದನ್ನು ಒಂದೆರಡು ವಾಕ್ಯಗಳಲ್ಲಿ ಹೇಳಲಾಗಿರುತ್ತದೆ. ಒಂದೊಂದು ಶಾಸನಕ್ಕೂ ಇಷ್ಟು ವಿವರಗಳಿರುತ್ತವೆ– ಶಾಸನ ದೊರಕಿದ ಗ್ರಾಮ ಮತ್ತು ಗ್ರಾಮದಲ್ಲಿ ಯಾವ ಜಾಗ; ಎಲ್ಲಿ ಪ್ರಕಟಿತ; ಅದರ ಕಾಲ ಮತ್ತು ಯಾವ ರಾಜನ ಆಳಿಕೆಯಲ್ಲಿ; ಅದರಲ್ಲಿ ಬಂದಿರುವ ವಿಷಯ:– ಎಂದರೆ, ಹೆಚ್ಚಿನ ಸಂಶೋಧನೆ ನಡೆಸುವವರಿಗೆ ಇದೊಂದು ದಿಕ್ಸೂಚಿಯಾಗುತ್ತದೆ. ಧಾರವಾಡ ಜಿಲ್ಲೆಯ ಒಂದು ನಿರ್ದಿಷ್ಟ ಅವಧಿಯ ಶಾಸನಗಳು ಬೇಕೆಂದರೆ, ಒಂದು ರಾಜವಂಶದ ಶಾಸನಗಳು ಬೇಕೆಂದರೆ, ಒಂದು ನಿರ್ದಿಷ್ಟ ವರ್ಗದ ಶಾಸನಗಳು ಬೇಕೆಂದರೆ ಅವುಗಳನ್ನೇ ಆರಿಸಿಕೊಂಡು ಮೂಲಗಳಿಗೆ ಹೋಗಿ ಅಭ್ಯಾಸಮಾಡಬಹುದು. ಇಷ್ಟು ಅನುಕೂಲತೆಗಳನ್ನು ಶಾಸನ ಸಂಶೋಧಕರಿಗೆ ಒದಗಿಸಿ ಕೊಟ್ಟ ಕಲಬುರ್ಗಿಯವರು ಅಭಿನಂದನಾರ್ಹರು. ಕೃತಿಯನ್ನು ಎಚ್ಚರಿಕೆಯಿಂದ ಸಿದ್ಧಪಡಿಸಲಾಗಿದೆ. ಮುದ್ರಣ ಬಹು ಆಕರ್ಷಕವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ ಮೂರು ಪಿಎಚ್.ಡಿ. ನಿಬಂಧಗಳು ಇಲ್ಲಿವೆ. ಅವುಗಳಲ್ಲಿ ರಾ. ಯ. ಧಾರವಾಡಕರ ಅವರ ಹೊಸಗನ್ನಡ ಸಾಹಿತ್ಯದ ಉದಯಕಾಲ ಗಮನಾರ್ಹವಾದುದು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ, ಮತ್ತು ಇಪ್ಪತ್ತನೆಯ ಶತಮಾನದ ಆರಂಭ ಈ ಕಾಲದ, ಮುಖ್ಯವಾಗಿ ಉತ್ತರ ಕರ್ನಾಟಕ ಪ್ರಾಂತದ, ಭಾಷಿಕ ಅಥವಾ ಸಾಹಿತ್ಯಕ ಚಟುವಟಿಕೆಗಳ ಒಂದು ಒಳ್ಳೆಯ ಸಮೀಕ್ಷೆ ಇಲ್ಲಿದೆ. ಈ ಸಮೀಕ್ಷೆಗಾಗಿ ಧಾರವಾಡಕರರು ಸಾಕಷ್ಟು ಶ್ರಮಿಸಿದ್ದಾರೆ; ತಮಗೆ ಗೊತ್ತಿರುವ ಆಕರಗಳನ್ನೆಲ್ಲ ಬಳಸಿಕೊಂಡಿದ್ದಾರೆ. ಉತ್ತರ ಕರ್ನಾಟಕದ ಅಂದಿನ ಹೀನ ಸ್ಥಿತಿಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಅಚ್ಚಗನ್ನಡ ಪ್ರದೇಶವಾದ ಅಲ್ಲಿ ಮಾನ್ಯತೆ ಇದ್ದುದು ಮರಾಠಿಗೆ. ಮರಾಠಿ ಶಾಲೆಗಳ ಉಪಾಧ್ಯಾಯರಿಗೆ ಗೌರವವೂ ಹೆಚ್ಚು, ಸಂಬಳವೂ ಹೆಚ್ಚು. ಭಾಷೆಯೆಂದರೆ ಮರಾಠಿ. ಕನ್ನಡವನ್ನು ಕೇಳುವವರು ದಿಕ್ಕಿಲ್ಲ. ಇಂತಹ ಸಂದರ್ಭದಲ್ಲಿ-ದೇಶೀಯ ಭಾಷೆಗೆ ಅನ್ಯಾಯವಾಗುತ್ತಿದ್ದ ಸಂದರ್ಭದಲ್ಲಿ-ರಸೆಲ್ ಸಾಹೇಬರು ಕೈಗೊಂಡ ನಿರ್ಣಯ ಅಲ್ಲಿ ಒಂದು ಹೊಸತಿರುವನ್ನೇ ಹೇಗೆ ಕೊಟ್ಟಿತೆಂಬುದನ್ನು ಲೇಖಕರು ವಿಸ್ತಾರವಾಗಿ ಚರ್ಚಿಸಿದ್ದಾರೆ. ಕನ್ನಡತ್ವ-ಭಾರತೀಯತ್ವಗಳು ಜನರ ಮನಸ್ಸಿನಲ್ಲಿ ಮೂಡಿದುದನ್ನು ಆಧಾರಸಹಿತ ತೋರಿಸಿದ್ದಾರೆ. ಹುಯಿಲ ಗೋಳ ಭುಜಂಗರಾವ್, ಡೆಪ್ಯುಟಿ ಚನ್ನಬಸವಪ್ಪ, ರೊದ್ದ ಶ್ರೀನಿವಾಸರಾವ್ ಮೊದಲಾದ ಅಧಿಕಾರಿಗಳ ಸೇವೆ ಅನುಪಮವಾದುದು. ಜೊತೆಗೆ ಅನೇಕ ಅನುಭಾವಿಗಳು, ಸಾಹಿತಿಗಳು, ವಿದೇಶೀಯ ವಿದ್ವಾಂಸರ ಕಾಣಿಕೆಗಳೇನೆಂಬುದನ್ನು ವಿಸ್ತಾರವಾಗಿ ವಿವೇಚಿಸಿದ್ದಾರೆ. ಬಿ. ಎಂ. ಶ್ರೀ. ಯವರಿಗೆ ಮುನ್ನವೇ ಕನ್ನಡದಲ್ಲಿ ಬಂದಿದ್ದ ಸತ್ವಪೂರ್ಣ ಬರಹಗಳನ್ನು ಕಂಡಾಗ ಆಶ್ಚರ್ಯವೆನ್ನಿಸುತ್ತದೆ. ವೃತ್ತ ಕಂದಗಳಲ್ಲಿಯೇ ತಮ್ಮ ಸಾಮಾಜಿಕ

ಸಮಸ್ಯೆಗಳನ್ನು, ಸುತ್ತಮುತ್ತಣ ಲೋಪದೋಷಗಳನ್ನು ಆ ಕಾಲದ ಕವಿಗಳು ವಿವೇಚಿಸಿದ್ದಾರೆ. ಮೋಸದ ಜಂಗಮರು, ತೋರಿಕೆಯ ಉಪಾಧ್ಯಾಯರು, ಜಿಪುಣ ವ್ಯಾಪಾರಿ ಇವರ ವಿಡಂಬನೆಗಳು ಬಂದಿವೆ. ಸಂಬಳ ಸಾಲದೆ ಜೀವನ ಸಾಗಿಸುವುದೇ ಕಷ್ಟವಾಗಿರುವ ಶಾಲೆಯ ಉಪಾಧ್ಯಾಯರ ಬಡತನದ ಗೋಳು, ಹೆಂಡತಿಯ ವಿಯೋಗ ಇಂತಹ ಅನುಭವಗಳು ಪದ್ಯರೂಪದಲ್ಲಿ ಬಂದಿವೆ. ಧಾರವಾಡಕರರ ಭಾಷೆ ಅಲ್ಲಲ್ಲಿ ಆಲಂಕಾರಿಕವಾಗುವುದು ಇಂತಹ ಗಂಭೀರ ಕೃತಿಗಳಿಗೆ ಒಗ್ಗದ ಶೈಲಿಯಾಗುತ್ತದೆ. ಆದರೂ ಕೃತಿಕಾರರು ಅಪಾರ ಶ್ರಮದಿಂದ ವಿಷಯ ಸಂಗ್ರಹಿಸಿದ್ದಾರೆ; ಎಚ್ಚರಿಕೆಯಿಂದ ತಾವು ಸಂಗ್ರಹಿಸಿದ ವಿಷಯಗಳನ್ನು ವಿಶ್ಲೇಷಿಸಿ ವಸ್ತುನಿಷ್ಠ ದೃಷ್ಟಿಯಿಂದ ಪರಿಶೀಲಿಸಿದ್ದಾರೆ. ಇಂದು ಅಲಭ್ಯವಾಗಿರುವ ಅನೇಕ ಕೃತಿಗಳಿಂದ ಉದಾಹರಣೆಗಳನ್ನು ಎತ್ತಿ ಕೊಟ್ಟಿದ್ದಾರೆ. ಶ್ರೀನಿವಾಸ ಹಾವನೂರ, ಧಾರವಾಡಕರರ ಗ್ರಂಥಗಳು ನಮಗೆ ನವೋದಯದ ಹಿಂದಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಸ್ಥಿತಿಯನ್ನರಿಯಲು ಅಧಿಕೃತ ಆಕರಗಳಾಗಿವೆ. ದಕ್ಷಿಣ ಕರ್ನಾಟಕ ಅಥವಾ ಹಳೆಯ ಮೈಸೂರು (ಮಂಗಳೂರು ಭಾಗ ಸೇರಿದಂತೆ) ಪ್ರಾಂತಕ್ಕೆ ಸಂಬಂಧಿಸಿದಂತೆ ಇಂತಹ ಸಂಶೋಧನೆಯನ್ನು ಯಾರಾದರೂ ಎತ್ತಿಕೊಂಡು ಮುಗಿಸಿಯಾರೇ ಎಂಬ ಆಸೆಯನ್ನು ಹುಟ್ಟಿಸುತ್ತದೆ. ಅನೇಕ ಚಿತ್ರಗಳಿರುವ ಈ ಗ್ರಂಥದ ಮುದ್ರಣವಿನ್ಯಾಸ ಸಮರ್ಪಕವಾಗಿದೆ.

ಎಂ. ಬಿ. ಕೊಟ್ರಶೆಟ್ಟಿ ಅವರ ಸಿದ್ಧರಾಮ ಶಿವಯೋಗಿ ಅವರು ಪಿಎಚ್.ಡಿ. ಪದವಿಗಾಗಿ ಅರ್ಪಿಸಿದ ನಿಬಂಧ. ಸಿದ್ಧರಾಮನ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಮೊದಲ ನಾಲ್ಕು ಅಧ್ಯಾಯಗಳು ಮೀಸಲಾಗಿವೆ. ಎರಡನೆಯ ಅಧ್ಯಾಯ ಅವನ ಸಾಹಿತ್ಯಕ್ಕೂ ನಾಲ್ಕನೆಯದು ತತ್ವ ವಿವೇಚನೆಗೂ ಐದನೆಯದು ಶಿವಯೋಗ ಸಮೀಕ್ಷೆಗೂ ಮೀಸಲು. ಕೊನೆಯಲ್ಲಿ ಅವನ ವ್ಯಕ್ತಿತ್ವ, ಪ್ರಭಾವ ಮುದ್ರೆಗಳ ವಿವೇಚನೆ ಇದೆ.

ಯಾವುದೇ ವಿಷಯವನ್ನು ಪಿಎಚ್.ಡಿ. ಗೆ ಆರಿಸಿಕೊಳ್ಳುವಾಗ ಆ ವಿಷಯದ ಬಗ್ಗೆ ಎಷ್ಟು ಕೆಲಸ ನಡೆದಿದೆಯೆಂಬುದನ್ನು ತಿಳಿಯಬೇಕಾಗಿರುವಂತೆಯೇ ಏನು ಆಗಬೇಕಾಗಿದೆ ಎಂಬುದನ್ನೂ ತಿಳಿದಿರುವುದು ಇನ್ನೂ ಹೆಚ್ಚು ಅಗತ್ಯ.(ಏನೂ ಕೆಲಸ ನಡೆದಿರದಿದ್ದರೆ ಆಗ ಆ ಸಂಶೋಧನೆಯಲ್ಲಿ ಮೇಲಿನ ಪ್ರಶ್ನೆಯೇ ಬರುವುದಿಲ್ಲ). ಸಿದ್ಧರಾಮನ ಬಗ್ಗೆ ಈಗಾಗಲೇ ಸಾಕಷ್ಟು ಕೆಲಸ ನಡೆದಿದೆ: ಅವನ ಬಗ್ಗೆ ಲೇಖನಗಳೂ ಗ್ರಂಥಗಳೂ ಪ್ರಕಟವಾಗಿವೆ. ಕೆಲವು ತೀರ್ಮಾನಗಳು ಬಂದಿವೆ; ಸಾಕಷ್ಟು ವಾದವಿವಾದಗಳೂ ಎದ್ದಿವೆ. ಇವನ್ನೆಲ್ಲ ತಿಳಿದುಕೊಂಡ ಬಳಿಕ - ಸಂಶೋಧಕನ ಕೆಲಸ: ಇಲ್ಲಿಯವರೆಗೆ ನಡೆದಿರುವ ವಿವೇಚನೆಯ ಕೊರತೆಗಳೇನು ? ವಿದ್ವಾಂಸರ ಯಾವ ನಿಲುವು ಪ್ರಶ್ನಾರ್ಹ ? ವಿದ್ವಾಂಸರು ಚರ್ಚಿಸದೇ ಅಥವಾ ಗಮನಿಸದೇ ಬಿಟ್ಟಿರುವ ಭಾಗಗಳು ಯಾವುವು ? ತಾನು ಹೊಸದಾಗಿ ಕೆಲಸ ಮಾಡಬೇಕಾದ ಕ್ಷೇತ್ರಗಳು ಯಾವುವು ? ಇವನ್ನು ಸ್ಪಷ್ಟಗೊಳಿಸಿಕೊಳ್ಳುವುದು. ಇಲ್ಲದಿದ್ದರೆ, ಕೊಟ್ರಶೆಟ್ಟಿಯವರಂತೆ, ಈಗಾಗಲೇ ನಮಗೆ ಗೊತ್ತಿರುವ ಸಂಗತಿಗಳನ್ನೆಲ್ಲ ಇನ್ನೊಂದು ರೀತಿಯಲ್ಲಿ ಹೇಳಿ ದೊಡ್ಡ ಪುಸ್ತಕವನ್ನು ಬರೆದಂತಾಗುತ್ತದೆ. ಇಡೀ ಪುಸ್ತಕವನ್ನು ಓದಿದರೆ ಸಿದ್ಧರಾಮನ ಬಗೆಗೆ ಯಾವುದೇ ಹೊಸ ಅಂಶವೂ ತಿಳಿಯುವುದಿಲ್ಲ; ಹೊಸ ನಿಲುವು, ಧೋರಣೆ ವ್ಯಕ್ತವಾಗುವುದಿಲ್ಲ. 'ಸಿದ್ಧರಾಮನ ಸಾಂಗತ್ಯ'ಕೃತಿಯ ಮೈಸೂರು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಹಸ್ತಪ್ರತಿ 'ನೋಡಲು ದೊರೆಯದೆ ಇದ್ದುದರಿಂದ' ಆ ಬಗ್ಗೆ ಬಂದಿರುವ ಬೇರೊಂದು ಲೇಖನವನ್ನೇ ಅವಲಂಬಿಸಬೇಕಾಗಿದೆ ಎಂಬ ಮಾತು ಸಂಶೋಧಕರು ಶ್ರಮಕ್ಕೆ ಸಿದ್ಧರಾಗದೆ ಹೇಗೆ ಸುಲಭ ಮಾರ್ಗವನ್ನು ಹಿಡಿಯುತ್ತಾರೆಂಬುದಕ್ಕೆ ಸಾಕ್ಷಿಯಾಗಿದೆ, 'ಸಿದ್ಧರಾಮನ ವೀರಶೈವತ್ವ'ದ ಬಗ್ಗೆ ಒಂದು ಅಧ್ಯಾಯವನ್ನು ವ್ಯರ್ಥಮಾಡಿದ್ದಾರೆ. ಪರ ವಿರೋಧ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವುಗಳಲ್ಲೇ ಒಂದು ಅಭಿಪ್ರಾಯವನ್ನು ಒಪ್ಪುವುದಕ್ಕೆ ಅಷ್ಟು ಪುಟ ಬರೆಯಬೇಕೆ ?

ಸಿದ್ಧರಾಮನ ಬಗ್ಗೆ ಇನ್ನೂ ಇರುವ ಸಮಸ್ಯೆಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಬಹುದು:

(೧) 'ರೇವಣ ಸಿದ್ಧ' ಯಾರು ?

(೨) ಸೊನ್ನಲಿಗೆಯ ರಾಣಿ ಚಾಮಲದೇವಿಯ ಐತಿಹಾಸಿಕತೆಯ ಸಮಸ್ಯೆ ಎಂತು ?

(೩) ಸಿದ್ಧರಾಮನ ಕಾಲದಲ್ಲಿ ಸೊನ್ನಲಿಗೆ ಪ್ರಾಂತವನ್ನು ಆಳುತ್ತಿದ್ದ ರಾಜವಂಶ ಯಾವುದು ?

(೪) 'ಧೂಳಿ ಮಾಕಾಳ' ಎಂಬ ಹೆಸರಿನ ದೈವ ಈಗಲೂ ಇದೆಯೇ ? ('ಧೂಳಯ್ಯ' ಎಂಬ ದೈವವನ್ನು ಬಸವಣ್ಣ ಉಲ್ಲೇಖಿಸುತ್ತಾನೆ). 'ಮೊರಡಿ ಮುದ್ದಗೌಡ' ಎಂಬಲ್ಲಿನ 'ಮೊರಡಿ'ಯನ್ನು ಗುರುತಿಸಲು ಸಾಧ್ಯವೇ ? ಆ ದೈವಕ್ಕೂ 'ಮೊರಡಿ'ಗೂ ಸಂಬಂಧವಿದೆಯೆ ?

(೫) ಸಿದ್ಧರಾಮನ ಬಾಳಿನಲ್ಲಿ ಬರುವ ವ್ಯಕ್ತಿಗಳ ಐತಿಹಾಸಿಕತೆಗೆ ಇನ್ನೇನಾದರೂ ಆಧಾರಗಳು ಇವೆಯೇ ?

(೬) ಸಿದ್ಧರಾಮ ವೀರಶೈವರಿಗೆಂತೋ ಕುರುಬರಿಗೂ ಆರಾಧ್ಯನಾದ ದೈವ. ಕುರುಬರ ಪುರಾಣಕತೆಗಳಲ್ಲಿ (myths) ಹಾಡುಗಳಲ್ಲಿ ಸಿದ್ಧರಾಮನ ವಿಷಯ ಸಾಕಷ್ಟು ಬರುತ್ತದೆ. ವೀರಶೈವರಲ್ಲೇ ನೊಣಬರಿಗೆ ಅವನು ಬಹುಪೂಜ್ಯ ವ್ಯಕ್ತಿ, ಅದಕ್ಕೆ ಕಾರಣಗಳೇನು ? ಹೋಗಲಿ, ಸೊಲ್ಲಾಪುರದ ಪ್ರಾಂತದಲ್ಲೇ ಇರಬಹುದಾದ ಸಿದ್ಧರಾಮನನ್ನು ವಿಷಯವಾಗುಳ್ಳ ಜಾನಪದ ಸಾಕಷ್ಟು ಸಿಗಬಹುದು. ಸಿದ್ಧರಾಮನ ದೇವಾಲಯಗಳು ಅನೇಕವುಂಟು. ಅವುಗಳ ಸಮೀಕ್ಷೆ ಮಾಡಬಹುದಿತ್ತು. ಕೊನೆಗೆ, ಸೊಲ್ಲಾಪುರದ ಸಿದ್ಧರಾಮೇಶ್ವರ ದೇವಾಲಯದ ಆರಾಧನೆಗಳನ್ನು (rituals) (ಉದಾ.ಹಬ್ಬ, ಉತ್ಸವ) ಅಲ್ಲಿ ರೂಢ ಮೂಲವಾಗಿರುವ ನಂಬಿಕೆಗಳನ್ನು ಸಂಗ್ರಹಿಸಿದ್ದರೆ, ಸಿದ್ಧರಾಮನನ್ನು ಇಂದು ಜನ ಕಾಣುತ್ತಿರುವ ಬಗೆಯ ಪರಿಚಯವಾಗುತ್ತಿತ್ತು. ಹೀಗೆ ಕ್ಷೇತ್ರ ಸಮೀಕ್ಷೆ (field survey) ಮಾಡಿದ್ದರೆ ನಮಗೆ ಗೊತ್ತಿಲ್ಲದ ನೂರು ಸಂಗತಿಗಳನ್ನು ತಿಳಿಸಬಹುದಿತ್ತು.

(೭) ಹರಿಹರ ರಾಘವಾಂಕರು ತಮ್ಮ ಕೃತಿಯ ನಾಯಕರ 'ವಚನ'ಗಳನ್ನು ಉಲ್ಲೇಖಿಸುತ್ತಾರೆ. ಹರಿಹರನಂತೆಯೇ ರಾಘವಾಂಕನೂ ತನ್ನ ಕೃತಿಯಲ್ಲಿ ಸಿದ್ಧರಾಮನ ವಚನಗಳನ್ನು ಹೆಣೆದಿರಬೇಕು. ಅಂತಹ ಎರಡು ವಚನಗಳನ್ನು ನಾನು ನನ್ನ 'ವಚನ ಸಾಹಿತ್ಯ'ಪುಸ್ತಕದಲ್ಲಿ ಗುರುತಿಸಿದ್ದೇನೆ. ಸಿದ್ಧರಾಮನ ಬಗ್ಗೆ ಇರುವ ನಿಬಂಧದಲ್ಲಿ ಅಂತಹ ವಚನಗಳನ್ನು ಗುರುತಿಸುವ ಪ್ರಯತ್ನವೇ ಇಲ್ಲ ಎಂಬುದು ಆಶ್ಚರ್ಯದ ಸಂಗತಿ.

(೮) ಸಿದ್ಧರಾಮನಿಗೂ ನಾಥಪಂಥಕ್ಕೂ ಇದ್ದಿರಬಹುದಾದ ಸಂಬಂಧದ ಬಗ್ಗೆ ಹೆಚ್ಚಿನ ವಿವೇಚನೆಗೆ ಅವಕಾಶವಿದೆ.

ಅನೇಕ ಶಾಸನಗಳಲ್ಲಿ ಸಿದ್ಧರಾಮನ 'ವಚನ'ಗಳ ಉಲ್ಲೇಖವಿದೆ. "ಎಂದುಮ ಸಿದ್ಧರಾಮನಾಥ ದೇವರ ವಚನ" "ಶ್ರೀ ಸಿದ್ಧರಾಮನಾಥ ದೇವರು ಪುಣ್ಯಪಾಪಕ್ಕೆ ನಿಯಾಮಿಸಿ ಕೊಟ್ಟ ವಚನ" ಇತ್ಯಾದಿ ಮಾತುಗಳು ಅಲ್ಲಿ ಬರುತ್ತವೆ. ಶಾಸನಗಳಲ್ಲಿ ಬರುವ ವಚನವು ಸಿದ್ಧರಾಮನ ವಚನಗಳಲ್ಲಿ ಈಗ ದೊರೆಯುವುದಿಲ್ಲವೆಂದೂ 'ಬೇರೆ ಆಕರಗಳಲ್ಲಿ ಸಿಕ್ಕುವ ಸಾಧ್ಯತೆಯಿದೆ'ಯೆಂದೂ ಕೊಟ್ರಶೆಟ್ಟಿಯವರು ಹೇಳುತ್ತಾರೆ. ವಾಸ್ತವವಾಗಿ ಶಾಸನಸ್ಥ 'ವಚನವು' ಸಿದ್ಧರಾಮನ 'ವಚನ'ಗಳಂತಹ ರಚನೆ ಅಲ್ಲವೇ ಅಲ್ಲ. ಅದು ಸಿದ್ಧರಾಮನೇ ಬರೆದದ್ದು ಎಂದು ಹೇಳಲು ಆಧಾರವಿಲ್ಲ. ಶಾಸನಗಳಲ್ಲಿ ದಾನಗಳನ್ನು ಪಾಲಿಸಿದವರಿಗೆ ಅಥವಾ ಮೀರಿದವರಿಗೆ ಯಾವ ಪುಣ್ಯ ಪಾಪಗಳು ಬರುತ್ತವೆ ಯೆಂದು ಹೇಳುವಾಗ ಮನು, ವ್ಯಾಸರ 'ಉಕ್ತಿ'ಗಳು ಬರುತ್ತವೆ. ಆ ಉಕ್ತಿಗಳಲ್ಲಿ ಯಾವುದೂ ಮನುಸ್ಮೃತಿಯಲ್ಲಾಗಲಿ ವ್ಯಾಸ ಭಾರತದಲ್ಲಾಗಲಿ ಬರುವುದಿಲ್ಲ. ಸುಪ್ರಸಿದ್ಧ ವ್ಯಕ್ತಿಗಳ ಹೆಸರಲ್ಲಿ

ಮುಂದಿನವರು ಕಲ್ಪಿಸಿದ ಆ 'ಉಕ್ತಿ'ಗಳು ಅವರ ಹೆಸರಲ್ಲಿ ಪ್ರಚುರವಾದುವು. ಹಾಗೆಯೇ, ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾಲಯಕ್ಕೆ ಕೊಟ್ಟ ದತ್ತಿಗಳ ಊರ್ಜಿತಕ್ಕಾಗಿ ಮುಂದಿನವರು ಸಿದ್ಧರಾಮನ ಹೆಸರನ್ನು ಬಳಸಿಕೊಂಡಿದ್ದಾರೆ. ದತ್ತಿಯನ್ನು ಪಾಲಿಸಲು ಕೇಳಿಕೊಳ್ಳುವಾಗ ಅವನ 'ವಚನ'ವನ್ನೂ ಹೆಸರನ್ನೂ ಬಳಸಿಕೊಂಡಿರಲು ಕಾರಣ, ಜನ ಆ ಕಡೆ ಲಕ್ಷ್ಯವನ್ನು ಕೊಡುತ್ತಾರೆ ಎಂಬುದೇ ಆಗಿದೆ. ಸುಮಾರು ಇಪ್ಪತ್ತಮೂರು ಶಾಸನಗಳಲ್ಲಿ ಬರುವ ಸಿದ್ಧರಾಮನ ನೇರ ಅಥವಾ ಪರೋಕ್ಷ ಉಲ್ಲೇಖ ಎರಡು ಸಂಗತಿಗಳನ್ನು ಶ್ರುತಪಡಿಸುತ್ತದೆ : ಮಲ್ಲಿಕಾರ್ಜುನ ದೇವರಿಗೂ ಸಿದ್ಧರಾಮನಿಗೂ ಇದ್ದ ನಿಕಟ ಸಂಬಂಧ ಮತ್ತು ಸಿದ್ಧರಾಮನ ಬಗ್ಗೆ ಜನರಿಗಿದ್ದ ಪೂಜ್ಯಭಾವನೆ. ಶಾಸನದ 'ವಚನ'ವನ್ನು ಸಿದ್ಧರಾಮನೇ ಬರೆದ 'ವಚನ'ಗಳಂತಹ ಒಂದು ಕೃತಿಯೆಂದು ಭಾವಿಸುವ ತಪ್ಪು ಕಲ್ಪನೆ ನಮ್ಮಲ್ಲಿ ಹೋಗಬೇಕಾಗಿದೆ.

ವಚನಕಾರರ ಹಾಡುಗಳ ಕರ್ತೃತ್ವದ ಬಗ್ಗೆ ನನ್ನ ಸಂಶಯಗಳು ಹಿಂದಿನಂತೆಯೇ ಇವೆ ; ಮತ್ತು ಆ ಬಗ್ಗೆ ನನ್ನ ನಿಲವನ್ನು 'ವಚನ ಸಾಹಿತ್ಯ' ಪುಸ್ತಕದಲ್ಲಿ ಸೂಕ್ಷ್ಮವಾಗಿ ವಿವರಿಸಿದ್ದೇನೆ. ಸಿದ್ಧರಾಮನ ವಚನವನ್ನೇ ಈಚಿನವರು ಹೇಗೆ ಹಾಡಿಗೆ ತಿರುಗಿಸಿದ್ದಾರೆಂದು ಉದಾಹರಣೆ ಕೊಟ್ಟಿದ್ದೇನೆ. ಶಿವಶರಣರ ಹೆಸರಲ್ಲಿ ಸಿಗುವ ಹಾಡುಗಳನ್ನು ಕುರಿತಂತೆ ಹೆಚ್ಚಿನ ವಿವೇಚನೆಗೆ ಅವಕಾಶವಿದೆ. ಸಿದ್ಧರಾಮನ ಕೃತಿಗಳ ಸಾಹಿತ್ಯಕ ಅಥವಾ ಅನುಭಾವಿಕ ಮೌಲ್ಯ ವಿವೇಚನೆಯಲ್ಲೂ ಡಾ. ಕೊಟ್ರಶೆಟ್ಟಿಯವರು ಯಾವ ಪ್ರೌಢಿಮೆಯನ್ನೂ ತೋರಿಲ್ಲ.

ಹೀಗೆಯೇ ಅಥವಾ ಇನ್ನೂ ಹೆಚ್ಚು ನಿರಾಸೆ ಉಂಟುಮಾಡುವ ನಿಬಂಧ ಎಂ. ಎಸ್. ಲಕ್ಷ್ಮೆಯವರ ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮ, ಇಲ್ಲಂತೂ ಸಂಶೋಧಕರ ಕೆಲಸ ತೀರ ಸುಲಭ : ಮಹಾದೇವಿಯಕ್ಕನ ಬಗ್ಗೆ ಒಂದಷ್ಟು, ಕಾರಿಕಾಲಮ್ಮೆಯ ಬಗ್ಗೆ ಒಂದಷ್ಟು ಬರೆದು, ಕೊನೆಯಲ್ಲಿ ಇಬ್ಬರನ್ನೂ ಕುರಿತು ಒಟ್ಟಿಗೆ ಇನ್ನೊಂದಷ್ಟು ಬರೆದರೆ ಅಲ್ಲಿಗೆ ಮುಗಿಯಿತು. ಕನ್ನಡ ಸಾಹಿತ್ಯ ಓದಿದವರು ಕಾರಿಕಾಲಮ್ಮೆಯ ಬಗ್ಗೆ ಸ್ವತಂತ್ರ ಸಂಶೋಧನೆಯಿರಬಹುದೆಂದೂ, ತಮಿಳು ಸಾಹಿತ್ಯ ಓದಿದವರು ಮಹಾದೇವಿಯಕ್ಕನ ಬಗ್ಗೆ ಸ್ವತಂತ್ರ ಸಂಶೋಧನೆಯಿರಬಹುದೆಂದೂ ತೃಪ್ತಿಪಟ್ಟುಕೊಳ್ಳಬಹುದು. ಹೋಗಲಿ, ಆ ಇಬ್ಬರು ಶಿವ ಭಕ್ತೆಯರಿಗಾದರೂ ಹೋಲಿಸುವಂತಹುದು ಏನಿದೆ ? ಹಾಗೆ ನೋಡಿದರೆ ಯಾರನ್ನು ಯಾರ ಜೊತೆ ಬೇಕಾದರೂ ಹೋಲಿಸಬಹುದು. ಪಂಪ – ಮಿಲ್ಟನ್ ಕಾಳಿದಾಸ-ಷೇಕ್ಸ್‌ಪಿಯರ್ ಇವರ ಬಗ್ಗೆ, ಪರಸ್ಪರ ಸಾಮ್ಯಗಳ ಬಗ್ಗೆ ಒಂದು ಪ್ರಬಂಧ ಬರೆಯಬಹುದು. ನಿಬಂಧ ಬರೆಯಲು ಸಾಧ್ಯವೇ ? ಬರೆಯುವುದು ಸಾಧುವೇ ? ಇಂತಹ ಕೃತಿಗಳಲ್ಲಿ ನಮಗೆ ತಿಳಿಯದ ಕವಿ ಅಥವಾ ಕವಯಿತ್ರಿಯ ಬಗ್ಗೆ ಮಾಹಿತಿಯ ಸಂಗ್ರಹವಿರುತ್ತದೆ. 'ಸಂಶೋಧನೆ' ಎಂಬುದು ಅಲ್ಲಿರುವುದಿಲ್ಲ. ನನಗೆ ಕಾರಿಕಾಲಮ್ಮೆಯ ವಿಷಯ ಅಷ್ಟು ತಿಳಿಯದು. ಆದರೆ, ಮಹಾದೇವಿಯಕ್ಕನ ಬಗೆಗೆ ಲಕ್ಷ್ಮೆಯವರ ಬರಹವನ್ನು ಓದಿದಾಗ ಅವರು ವಿಚಾರಗಳನ್ನು ಮುಂದುವರಿಸಿಲ್ಲ, 'ಹಿಂದುವರಿಸಿ'ದ್ದಾರೆ ಎನ್ನಿಸುತ್ತದೆ. " ಅವಳೇ ಹೇಳಿದ ವಚನಗಳಲ್ಲಿಯ ಧ್ವನ್ಯಾರ್ಥವನ್ನು ಅವಲೋಕಿಸಿ ಮಹದೇವಿಯಕ್ಕನ ಲಗ್ನ ಆಗಿಲ್ಲವೆಂದೆ ಅಭಿಪ್ರಾಯ ತಾಳುವುದು ಹೆಚ್ಚು ಸಾಧುವಾದ ಮಾರ್ಗ"ವೆನ್ನುವ ಲೇಖಕರಿಂದ ಏನು ಹೊಸತನ್ನು ನಿರೀಕ್ಷಿಸಬಹುದು ?.

ಬೇರೆ ಬೇರೆ ಲೇಖಕರ ತೀರ ಸಾಮಾನ್ಯ ಉಕ್ತಿಗಳನ್ನು ಬೆಲೆಬಾಳುವ ಉಲ್ಲೇಖಗಳೆಂದು ಬಳಸಿಕೊಳ್ಳುವುದನ್ನು ನೋಡಿದಾಗ ನಗುಬರುತ್ತದೆ. ಇಂಗ್ಲಿಷ್ ವಾಕ್ಯಗಳಂತೂ ತಪ್ಪು ತಪ್ಪಾಗಿ ಉದ್ಧೃತವಾಗಿವೆ. ಎಲ್ಲಿ ಸಣ್ಣಕ್ಷರ, ಎಲ್ಲಿ ದೊಡ್ಡಕ್ಷರ (Capital) ಬಳಸಬೇಕೆಂಬುದು, ವಿರಾಮ ಚಿಹ್ನೆಗಳನ್ನು ಹೇಗೆ ಬಳಸಬೇಕೆಂಬುದು ಲೇಖಕರಿಗೆ ತಿಳಿದಿರುವಂತೆ ಕಾಣುವುದಿಲ್ಲ. Whose ಎಂಬುದನ್ನು Who's ಎಂದು ಅಚ್ಚುಮಾಡಿಸಿದ್ದಾರೆ. ಪುಸ್ತಕದ ಬಹುಭಾಗವನ್ನು ಹಿಂದಿನ ಗ್ರಂಥಕರ್ತರ ಬರಹಗಳಿಂದ ತುಂಬಿ ತುಳುಕಿಸಿದ್ದಾರೆ.

ಮೇಲಿನ ಎರಡೂ ನಿಬಂಧಗಳು, ಮತ್ತು ಅಂತಹ ಅನೇಕ ನಿಬಂಧಗಳು ಪಿಎಚ್.ಡಿ. ಪಡೆಯುತ್ತಿರುವವರ ಬಗ್ಗೆ, ನಿಬಂಧಗಳ ಗುಣದ ಬಗ್ಗೆ ಮತ್ತೆ ಮತ್ತೆ ಯೋಚನೆ ಮಾಡುವಂತೆ ಮಾಡಿವೆ. ಈ ಮಾತುಗಳು ಕಠಿಣವೆಂದು ತೋರಬಹುದು. ಆದರೆ ಗುಣಮಟ್ಟದ ಬಗ್ಗೆ ಆಸಕ್ತರಾಗಿರುವವರು ಇವನ್ನು ಲಘುವಾಗಿ ಭಾವಿಸಬಾರದು, ಮುಂದಿನ ಜನಾಂಗ ಈಗ ಬರುತ್ತಿರುವ ಕೆಲವು ಸಂಶೋಧನ ನಿಬಂಧಗಳ ಬಗ್ಗೆ ಏನೆಂದುಕೊಳ್ಳಬಹುದೋ ಎಂದು ಒಮ್ಮೊಮ್ಮೆ ಯೋಚಿಸುತ್ತೇನೆ.

ಭಾಷೆಗೆ ಸಂಬಂಧಿಸಿದಂತೆ ನಮ್ಮ ಮುಂದೆ ಮೂರು ಪುಸ್ತಕಗಳಿವೆ. ಸೇಡಿಯಾಪು ಕೃಷ್ಣ ಭಟ್ಟರ ಕೆಲವು ದೇಶನಾಮಗಳು ಓದುಗರಿಗೆ ಬಹಳ ಸಂತೋಷ ಕೊಡುವ ಪುಸ್ತಕ. ಕೃಷ್ಣಭಟ್ಟರು ಹಾಸಿಗೆ ಹಿಡಿದು ಅನಾರೋಗ್ಯದಿಂದ ಬಳಲುತ್ತಿದ್ದರೂ ಈ ಪುಸ್ತಕವನ್ನು ಬರೆದಿರುವುದನ್ನು ನೋಡಿದರೆ ಅವರ ಮನಸ್ಸು ತನ್ನ ಆರೋಗ್ಯವನ್ನು ಖಂಡಿತ ಉಳಿಸಿಕೊಂಡಿದೆ ಎಂದು ಅನ್ನಿಸುತ್ತದೆ. ವಿಸ್ತಾರವಾದ ವ್ಯಾಸಂಗ, ಸ್ಪಷ್ಟವಾದ ಆಲೋಚನೆ, ತಿಳಿಯಾದ ಬರವಣಿಗೆ ಈ ಚಿಕ್ಕ ಪುಸ್ತಕದ ಲಕ್ಷಣಗಳು.

ಇದರಲ್ಲಿ ತುಳು, ಚೇರ, ಕೊಂಕಣ, ಪಾಂಡ್ಯ ಎಂಬ ದೇಶ ನಾಮಗಳ ನಿಷ್ಪತ್ತಿಯನ್ನು ಕುರಿತು ವಿವೇಚನೆಯಿದೆ. 'ತುಳು' ಎಂಬ ಶಬ್ದವು ಮೂಲತಃ ಕುಳಸಮೇತವಾದುದೆಂದೂ, ಅದರ ಅರ್ಥ 'ಜಲಾಧಿಕ್ಯವುಳ್ಳ ದೇಶ'ವೆಂದೂ ಅವರ ಅಭಿಪ್ರಾಯ. ಅದು ನೀರು ಎಂಬರ್ಥದ ಯಾವುದೋ ಪದದಿಂದ ಜನ್ಯವಾಗಿದೆಯೆಂದು ಅವರು ಸಾಧಿಸಿದ್ದಾರೆ. 'ಚೇರ-ಕೇರಲ' ಶಬ್ದಗಳೆರಡೂ ಒಂದು ಇನ್ನೊಂದರ ರೂಪಾಂತರವೆಂಬ ಅವರ ತೀರ್ಮಾನಕ್ಕೆ ಭಾಷಾವಿಜ್ಞಾನಿಗಳ ಸಮ್ಮತಿಯಿದೆ. ಇವು ಗುಡ್ಡ ಎಂಬರ್ಥದ ಪದದಿಂದ (ನೋಡಿ: ತುಳು. ಕೇರ್ = ಮೇಲೇರು) ಬಂದಿದೆಯೆಂದು ಅವರ ನಂಬಿಕೆ. ಕೊಂಕ – ಕೋಂಕ (= ವಿರಳಿತವುಳ್ಳದ್ದು) ಶಬ್ದದಿಂದ 'ಕೊಂಕಣ' ಬಂತೆಂದು ಅವರ ವಾದ. 'ಪಾಂಡಿ' ಎಂದರೆ ಸಾಮಾನು ಸಾಗಿಸುವ ಹಡಗು ಎಂಬರ್ಥ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ಈ ಪದ ತಮಿಳಲ್ಲಿಯೂ ಇತ್ತೆಂದು ತೋರಿಸಿಕೊಡುತ್ತಾರೆ. 'ಪಾಂಡ್ಯನ್' ಎಂಬುದು ಹಡಗಿನಲ್ಲಿ ಸಾಮಾನು ಸಾಗಿಸುವ ವ್ಯಕ್ತಿಯಾಗುತ್ತಾನೆ. 'ಪಾಂಡಿ' ಶಬ್ದದ ಮೂಲ, ಶ್ರೀ ಕೃಷ್ಣ ಭಟ್ಟರ ಪ್ರಕಾರ, ಸಂಸ್ಕೃತ ಭಾಂಡ (= ಸಾಮಾನು ಸರಂಜಾಮು). 'ಭಾಂಡ' ಎಂಬುದೇ ತಮಿಳರ ಬಾಯಲ್ಲಿ 'ಪಾಂಡಿ' ಎಂದಾಗಿ ಸಾಮಾನು ಸಾಗಿಸುವ ಸಾಧನ, ಹಡಗು ಎಂದಾಗಿದೆಯೆಂದು ಅವರ ವಾದ. ಈ ಎಲ್ಲ ಊಹೆಗಳಲ್ಲಿ ಯಾವುದು ನಿಲ್ಲುತ್ತದೋ ಹೇಳುವುದು ಕಷ್ಟ. ಕೆಲವು ಕಡೆ ಊಹೆಯ ಕುದುರೆ ಸ್ವಲ್ಪ ಹೆಚ್ಚಾಗಿಯೇ ಓಡಿದಂತೆ ಅನ್ನಿಸುತ್ತದೆ. ಆದರೆ ಕೃಷ್ಣ ಭಟ್ಟರ ಬರವಣಿಗೆಯ ರೀತಿ ಮೆಚ್ಚುಗೆಯಾಗುತ್ತದೆ. ಬೆದಕಿ ವಸ್ತು ಸ್ಥಿತಿಯನ್ನು ತಿಳಿಯುವ ಹಂಬಲವಂತೂ ಪುಸ್ತಕದುದ್ದಕ್ಕೂ ಎದ್ದು ನಿಲ್ಲುತ್ತದೆ.

ಜಿ. ಎಸ್. ಕುಳ್ಳಿ ಮತ್ತು ಜಿ. ಪಿ. ಮುರಡಿ ಅವರ ಅನುವಾದ ಕಲೆ ಬಹಳ ಆಸೆ ಹುಟ್ಟಿಸುವ ಪುಸ್ತಕ. ಈ ಹಿಂದೆ, ಕಾಲೇಜುಗಳಲ್ಲಿ ಅನುವಾದ ಮಾಡುವುದನ್ನು ತರಗತಿಗಳಲ್ಲಿ ಕಲಿಸುತ್ತಿದ್ದರು ಮತ್ತು ಪರೀಕ್ಷೆಗಳಲ್ಲಿ ಅಂತಹ ಪ್ರಶ್ನೆಯಿರುತ್ತಿತ್ತು. ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಿ. ಮಹಾದೇವಪ್ಪನವರೂ ಜಿ. ವೆಂಕಟಸುಬ್ಬಯ್ಯನವರೂ ಅನುವಾದದ ತಂತ್ರವನ್ನು ತಿಳಿಯಲು ಸಹಾಯಕ ಪುಸ್ತಕಗಳನ್ನು ಬರೆದಿದ್ದರು (ಅವುಗಳನ್ನು ಪ್ರಸ್ತುತ ಲೇಖಕರು ಗಮನಿಸಿಲ್ಲ). ಆ ಗ್ರಂಥಗಳ ಉದ್ದೇಶ ನೇರವಾಗಿ ಅನುವಾದದ ತಂತ್ರವನ್ನು ವಿದ್ಯಾರ್ಥಿಗಳಿಗೆ ಉದಾಹರಣೆ ಸಮೇತ ತಿಳಿಸುವುದು. ಇಲ್ಲಿ ಲೇಖಕರು ಅನುವಾದದ ಬಗ್ಗೆ ತಾತ್ವಿಕ ವಿವೇಚನೆಯೊಂದಿಗೆ ಆರಂಭಿಸಿ, ಅನುವಾದ ಕೈಗೊಳ್ಳುವವರ ಸಮಸ್ಯೆಗಳು, ಅನುವಾದದ ಪ್ರಭೇದಗಳು, ಅನುವಾದದ ಇತಿಹಾಸ ಇತ್ಯಾದಿ ಸಮಸ್ಯೆಗಳನ್ನು ವಿವೇಚಿಸುತ್ತಾರೆ. ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಈ ವಿವೇಚನೆ ನಡೆಯುತ್ತದೆ ಎಂಬ ಭಾವನೆ ಅಲ್ಲಲ್ಲಿ ಹುಟ್ಟುತ್ತದೆ.

ವಾಸ್ತವ ಸಂಗತಿಯೆಂದರೆ ಇಡೀ ಕೃತಿ ವಿಫಲವಾಗಿದೆ. ಇದಕ್ಕೆ ಕಾರಣಗಳು ಹಲವಾರು. ಒಂದು, ಲೇಖಕರಿಗೆ ಅಭಿವ್ಯಕ್ತಿಗೆ ಸರಿಯಾದ ಭಾಷೆ ಇನ್ನೂ ಸಿದ್ಧಿಸದಿರುವುದು. ತಾವು ಹೇಳುವುದು ಓದುಗರಿಗೆ ಅರ್ಥವಾಗುತ್ತದೆಯೇ ಇಲ್ಲವೇ ಎಂಬುದರ ಕಡೆ ಲಕ್ಷ್ಯ ಕೊಡದಿರುವುದು. ಇಂಗ್ಲಿಷ್ ವಾಕ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವನ್ನು ಹಾಗೆ ಹಾಗೇ ಕನ್ನಡಕ್ಕೆ ತಂದಿರುವುದು, ತಮ್ಮ ನಿರೂಪಣೆಗೆ ಕೆಟ್ಟ ಉದಾಹರಣೆಗಳನ್ನು ಆರಿಸಿಕೊಂಡು ಅವನ್ನೇ ಮತ್ತೆ ಮತ್ತೆ ಬಳಸುವುದು. ಮೂಲ ಇಂಗ್ಲಿಷ್ ಪದಗಳನ್ನು ಕನ್ನಡಕ್ಕೆ ಅನುವಾದಿಸುವಾಗಲೂ ಅದೇ ಮಕ್ಕೀ ಕ ಮಕ್ಕೀ ವಿಧಾನ ಅನುಸರಿಸಿದೆ. "Translation of Scientific literature" ಎಂಬುದನ್ನು "ವೈಜ್ಞಾನಿಕ ಸಾಹಿತ್ಯಾನುವಾದ" ಎಂದು ಅನುವಾದಿಸಿದರೆ ಹೇಗೆ? 'ವೈಜ್ಞಾನಿಕ' ಎಂಬುದು 'ಸಾಹಿತ್ಯಾನುವಾದ'ದ ವಿಶೇಷಣವಾಗಿಬಿಡುವ ಸಂಭವವಿದೆ. 'ವಿಜ್ಞಾನ ಸಾಹಿತ್ಯದ' ಅಥವಾ ಬೇಕಾದರೆ 'ವೈಜ್ಞಾನಿಕ ಸಾಹಿತ್ಯದ ಅನುವಾದ' ಎಂಬ ಸ್ಪಷ್ಟ ಅನುವಾದ ಯಾವುದೇ ತಪ್ಪು ಕಲ್ಪನೆಗೂ ಅವಕಾಶಕೊಡದು. ಉಪವರ್ಗ ಸೂಚಕಗಳಾಗಿ ಬಳಸಿದ ಅ, ಬ, ಕ, ಡ, ಇ ಎಂಬುವು a, b, c, d, e ಯ ಕೆಟ್ಟ ಅನುವಾದಗಳು, ಸಹಜವಾಗಿ ಅ, ಆ, ಇ, ಈ, ಉ ಏಕೆ ಬಳಸಬಾರದು ? 'ವೈಜ್ಞಾನಿಕ ಸಾಹಿತ್ಯಾನುವಾದ'ದ ಚರ್ಚೆಯಲ್ಲಿ 'V.P.P = ಬೆಲೆಯಂಚೆ' ಎಂಬ ಉದಾಹರಣೆ ಹೇಗೆ ಉಚಿತವೋ ತಿಳಿಯದು. "ಈ ಪಾರಿಭಾಷಿಕ ಪದಗಳು ಅದೇ ಅರ್ಥಕೊಡುವ ಸಾಮಾನ್ಯ ಪದಗಳಿಂದ ಚ್ಯುತಿ ಹೊಂದುವುದಿಲ್ಲ"—ಇಂಥ (ಸುಲಭವಾಗಿ ?) ಅರ್ಥವಾಗದ ವಾಕ್ಯಗಳು ಈ ಪುಸ್ತಕದ ತುಂಬ ಇವೆ. "ನಮಿಸಿ ನಾರಾಯಣನ..." ಎಂಬ ವ್ಯಾಸಭಾರತದ ಶ್ಲೋಕಾನುವಾದ ಕುಮಾರವ್ಯಾಸನದಲ್ಲ, ಎ. ಆರ್. ಕೃಷ್ಣಶಾಸ್ತ್ರಿಯವರದು. 'untranslatability' 'ಭಾಷಾಂತರರಾಹಿತ್ಯ'ವಲ್ಲ, ಭಾಷಾಂತರಾಸಾಧ್ಯತೆ. ಹಿಂದೂಗಳಲ್ಲಿ 'ಸ್ವರ್ಗವಾಸಿಗಳಾದರು' ಇದ್ದಂತೆ ಮುಸಲ್ಮಾನರಲ್ಲಿ 'ಪೈಗಂಬರವಾಸಿಗಳಾದರು' ಎಂಬ ಮಾತು ಇರುವುದು ಸಂದೇಹಾಸ್ಪದ. ಶಿವಕೋಟ್ಯಾಚಾರ್ಯನ ವಡ್ಡಾರಾಧನೆಗೆ ಮೂಲ ಹರಿಷೇಣನ 'ಕಥಾಕೋಶ' ಅಲ್ಲ ಶಿವಕೋಟಿಯ 'ಬೃಹತ್ ಕಥಾಕೋಶ' ; ಅಲ್ಲಿರುವುವು ತೀರ್ಥಂಕರರ ಕತೆಗಳಲ್ಲ. 'ಬೃಹದಾರಾಧನಾ' ಎಂಬ ಕೃತಿಯಿಲ್ಲ, ಇರುವುದು 'ಭಗವತೀ ಆರಾಧನಾ.' ಕೃತಿರಚನೆಯನ್ನು ಗಂಭೀರವಾದ ಕಾರ್ಯವೆಂದು ಭಾವಿಸಿದ್ದಿದ್ದರೆ ಬಹುಶಃ ಹೀಗಾಗುತ್ತಿರಲಿಲ್ಲ. ಓದುಗರಿಗೆ ಅನುವಾದದ ಬಗ್ಗೆ ಯಾವುದೇ ಬೆಳಕೂ ಈ ಕೃತಿಯಿಂದ ದೊರಕುವಂತೆ ಕಾಣುವುದಿಲ್ಲ.

ಕನ್ನಡ ಭಾಷೆಯು ರೂಪರೇಷೆಗಳು ಎಂಬ ವಿಲ್ಯಂ ಮಾಡ್ತ ಅವರ ಕೃತಿ ಸ್ವಾಗತಾರ್ಹವಾದುದು. ಭಾಷಾವಿಜ್ಞಾನ ಕ್ಷೇತ್ರದಲ್ಲಿ ಕರ್ನಾಟಕ ಬಹಳ ಹಿಂದುಳಿದಿದೆ. ತಮಿಳು, ಮಲಯಾಳ, ತೆಲುಗು ಭಾಷೆಗಳನ್ನು ಕುರಿತಂತೆ ನಡೆದಿರುವ ಕೆಲಸಕ್ಕೆ ಹೋಲಿಸಿದಾಗ ನಮ್ಮಲ್ಲಿ ಆಗಿರುವ ಕೆಲಸ ಕಡಮೆಯೆಂದೇ ಹೇಳಬೇಕು. ಭಾಷಾವಿಜ್ಞಾನವನ್ನೇ ಮುಖ್ಯ ವಿಷಯವಾಗಿ ಮಾಡಿಕೊಂಡು ಸಂಶೋಧನೆ ಮಾಡುತ್ತಿರುವವರ ಸಂಖ್ಯೆ ನಮ್ಮಲ್ಲಿ ದೊಡ್ಡದೇನೂ ಅಲ್ಲ. ವಿಲ್ಯಂ ಮಾಡ್ತ ಆ ದೃಷ್ಟಿಯಿಂದ ನಮ್ಮಲ್ಲಿ ಭರವಸೆ ಹುಟ್ಟಿಸುವ ತರುಣ ಭಾಷಾವಿಜ್ಞಾನಿಯಾಗಿದ್ದಾರೆ.

ಅವರ ಈ ಕೃತಿ ಕನ್ನಡ ಭಾಷೆಯ ರಚನೆಯನ್ನು ಕುರಿತುದಾಗಿದೆ. ವಿವರಣಾತ್ಮಕ ಭಾಷಾವಿಜ್ಞಾನದ ಕ್ರಮವನ್ನನುಸರಿಸಿ ಇಲ್ಲಿಯೂ ಕನ್ನಡ ಭಾಷೆಯ ರಚನೆಯನ್ನು ಧ್ವನಿಮ, ಸಂಧಿ, ಆಕೃತಿಮ, ವಾಕ್ಯ ಈ ಸ್ತರಗಳಲ್ಲಿ ವಿವರಿಸಲಾಗಿದೆ. ಇದು ಕನ್ನಡ ಭಾಷೆಯ ರಚನೆಯ ಬಗ್ಗೆ ನಮಗೆ ಈಗಾಗಲೇ ತಿಳಿದಿರುವ ಸಂಗತಿಗಳ ಮೊತ್ತವಲ್ಲ. ವಿಶ್ಲೇಷಣೆಯ ಮೂಲಕ ಅನೇಕ ಹೊಸ ಅಂಶಗಳನ್ನು ಗುರುತಿಸಿದ್ದಾರೆ. ಈ ದೃಷ್ಟಿಯಿಂದ ಕನ್ನಡ ಅಕ್ಷರಗಳ ರಚನೆಯ ಬಗ್ಗೆ (syllabic structure), ಕನ್ನಡ ಸಂಧಿಯ ಬಗ್ಗೆ (morpho-phonemics) ಬರೆದಿರುವ ಭಾಗಗಳನ್ನು ನೋಡಬೇಕು. ಶಾಸ್ತ್ರೀಯ ಬರವಣಿಗೆಯಲ್ಲಿ ಮಿತವ್ಯಯ ಗುಣವನ್ನು ಸಾಧಿಸುವುದು ಒಂದು ಅಪೇಕ್ಷಣೀಯ ಗುಣ. ಆದರೆ ಅದನ್ನೇ ಒಂದು ತುತ್ತತುದಿಗೆ ಒಯ್ದರೆ ಆಗ ಕೃತಿ ಸ್ವಲ್ಪ ದುರವ

ಗ್ರಾಹ್ಯವಾಗುವ ಸಾಧ್ಯತೆ ಉಂಟು. ಮಾಡ್ತ ಅವರು ಚಿಹ್ನೆಗಳ ಮೂಲಕವೇ ಎಲ್ಲವನ್ನೂ ಸೂಚಿಸಲು ಹೋಗಿ ಓದುಗರು ಮತ್ತೆ ಮತ್ತೆ ಸಂಕೇತ ವಿವರಗಳನ್ನು ಓದಿ ಸ್ಪಷ್ಟಮಾಡಿಕೊಳ್ಳುವಂತೆ ಮಾಡುತ್ತಾರೆ. ಓದುಗರ ಬಗ್ಗೆ ಸ್ವಲ್ಪ ರಿಯಾಯ್ತಿ ತೋರಿಸಿ, ನಾಲ್ಕು ಮಾತು ಹೆಚ್ಚಾದರೂ ವಿವರಗಳನ್ನು ಕೊಡಬಹುದಿತ್ತು. ಆದರೂ, ವಿಲ್ಯಂ ಮಾಡ್ತ ಕನ್ನಡ ಭಾಷಾವಿಜ್ಞಾನಕ್ಕೆ ಒಂದು ಒಳ್ಳೆಯ ಗ್ರಂಥವನ್ನು ಕೊಟ್ಟಿದ್ದಾರೆಂಬಲ್ಲಿ ಅನುಮಾನವಿಲ್ಲ.

Retroflex ಎಂಬುದನ್ನು ಪ್ರತಿವೇಷ್ಟಿತ ಎಂದು ಕರೆಯುವುದರ ಬದಲು ಪರಿವೇಷ್ಟಿತ ಎಂದು ಕರೆದಿರುವುದು ಅನುಚಿತ. 'ಜ್ವರ' ಮತ್ತು 'ಜ್ಞಾನಿ' ಪದಗಳ ಮೊದಲ ವ್ಯಂಜನಸ್ವನ ಒಂದೇ ಅಲ್ಲ; ಬೇರೆ ಬೇರೆ. ಇದನ್ನು ಅವರು ಗಮನಿಸಿದಂತೆ ತೋರದು. phonome ಧ್ವನಿಮಾ ಆದರೆ, allophone ಉಪಧ್ವನಿಮಾ ಅಲ್ಲ, ಉಪಧ್ವನಿ. 'ಅಂ,' 'ಊಂ' ಎಂದು ಅನುನಾಸಿಕೀಕೃತ ಸ್ವರಗಳನ್ನು ಹೀಗೆ ಕನ್ನಡದಲ್ಲಿ ಬರೆದರೆ ತಪ್ಪಾಗುತ್ತದೆ. ಇಲ್ಲಿ ಬಿಂದುವು 'ಮ್' ಅನುನಾಸಿಕವನ್ನು—ಅಮ್, ಊಮ್ ಎಂಬಂತೆ—ಸೂಚಿಸಬಹುದು. 'ಅ', 'ಊ'ಗಳ ಮೇಲೆ ಅನುನಾಸಿಕೀಕರಣ ಚಿಹ್ನೆಯನ್ನು ಬಳಸಬೇಕು. ಕೆಡ್, ಬಿಡ್ ಗಳು ಕೇಡು, ಬೀಡುಗಳಾಗಿ ನಾಮಪದಗಳಾಗಿ ರೂಪಾಂತರವಾಗುತ್ತವೆಯೆಂದು ಮಾಡ್ತ ಎಲ್ಲರಂತೆ ವಾದಿಸುತ್ತಾರೆ. ಸ್ವರಾದಿ ಪ್ರಕೃತಿ ಸಾಧಕ ಪ್ರತ್ಯಯ ಬಂದುದರಿಂದ ಕೇಡು, ಬೀಡುಗಳೇ ತಮ್ಮ ದೀರ್ಘಸ್ವರವನ್ನು ಹ್ರಸ್ವಗೊಳಿಸಿಕೊಳ್ಳುತ್ತವೆಂದು ಡಿ. ಎನ್. ಶಂಕರಭಟ್ಟರು ವಾದಿಸುವುದನ್ನು ಗಮನಿಸಬಹುದಿತ್ತು. ಒಂದೊಂದು ಅಧ್ಯಾಯವೂ ತೀರ ಚಿಕ್ಕವಾದುವು : ವಿಷಯಗಳೂ ಹೆಚ್ಚು ಚರ್ಚಿತವಾದುವು ಎಂದು ಅನ್ನಿಸುವುದಿಲ್ಲ. ತಮ್ಮ ಕೃತಿ 'ರೂಪರೇಷೆಗಳು' ಮಾತ್ರ ಎಂದು ಕೃತಿಕಾರರು ಸಮರ್ಥಿಸಿಕೊಳ್ಳಬಹುದು.

ಇಷ್ಟು ಒಳ್ಳೆಯ ಪುಸ್ತಕದಲ್ಲಿ ಮುದ್ರಣ ದೋಷಗಳು ತುಂಬಿದ್ದು ಓದುಗರನ್ನು ಗಾಬರಿಗೊಳಿಸುತ್ತವೆ. ಕೊನೆಯಲ್ಲಿ ಅರ್ಧಪುಟದ ಒಪ್ಪೋಲೆ ಇದೆ. ಸರಿಯಾಗಿ ಪಟ್ಟಿಮಾಡಿದರೆ ಎರಡು ಮೂರು ಪುಟಗಳಾದರೂ ಆಗಬಹುದು.

ಅಭಿನಂದನ ಗ್ರಂಥಗಳು

ಹು. ಕಾ. ಜಯದೇವ್

ಈ ವರ್ಷ ಬಂದಿರುವ ಅಭಿನಂದನ ಗ್ರಂಥಗಳು ಮೂರು—'ಸಹ್ಯಾದ್ರಿ', 'ಕಬ್ಬಿನ ಹಾಲು' ಮತ್ತು 'ರಾಜಕೀಯ ಪಟು'. 'ಸಹ್ಯಾದ್ರಿ' ನಮ್ಮ ನಾಡಿನ ಶ್ರೇಷ್ಠ ಕವಿಗಳಲ್ಲೊಬ್ಬರಾದ ಶ್ರೀ ಕುವೆಂಪು ಅವರಿಗೆ 'ಕಬ್ಬಿನ ಹಾಲು' ಮತ್ತು 'ರಾಜಕೀಯಪಟು' ಕ್ರಮವಾಗಿ ಶ್ರೀ ಕೆ. ವಿ. ಶಂಕರಗೌಡ ಮತ್ತು ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಅರ್ಪಿಸಿದ ಗ್ರಂಥಗಳು.

* * *

'ಸಹ್ಯಾದ್ರಿ' ರಾಷ್ಟ್ರಕವಿ ಕುವೆಂಪು ಅವರಿಗೆ ಅವರ ಎಪ್ಪತ್ತೆರಡನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅರ್ಪಿಸಿದ ಎಪ್ಪತ್ತೆರಡು ಜನ ಲೇಖಕರ ಎಪ್ಪತ್ತುನಾಲ್ಕು ಲೇಖನಗಳನ್ನೊಳಗೊಂಡ ಅಭಿನಂದನ ಗ್ರಂಥ. ಇದರ ಪ್ರಧಾನ ಸಂಪಾದಕರು ಡಾ. ದೇ. ಜವರೇಗೌಡ ಅವರು. ಸಂಪಾದಕರು ಡಾ. ಜೀ. ಶಂ. ಪರಮಶಿವಯ್ಯ, ಡಾ. ಸಿ. ಪಿ. ಕೃಷ್ಣಕುಮಾರ್ ಮತ್ತು ಸುಧಾಕರ. ಜವರೇಗೌಡರು ಮುನ್ನುಡಿಯಲ್ಲಿ ಕುವೆಂಪು ಅವರ ವ್ಯಕ್ತಿತ್ವ, ಅಭಿನಂದನ ಗ್ರಂಥಗಳ ಆವಶ್ಯಕತೆ, 'ಸಹ್ಯಾದ್ರಿ' ಶೀರ್ಷಿಕೆಯ ಅನ್ವರ್ಥತೆ ಮೊದಲಾದುವನ್ನು ಹೇಳಿ ಈ ಗ್ರಂಥದಲ್ಲಿನ ಕೆಲವಾರು ಉತ್ತಮ ಲೇಖನಗಳನ್ನು ಹೆಸರಿಸಿದ್ದಾರೆ. ಸಂಪಾದಕರ ಪರವಾಗಿ ಜೀ. ಶಂ. ಪ. ಅವರು ಈ ಅಭಿನಂದನ ಗ್ರಂಥದ ಯೋಜನೆ, ಇಂತಹ ಬೃಹತ್ ಯೋಜನೆಯ ಕಾರ್ಯದಲ್ಲಿ ಒದಗಿ ಬರುವ ಅಡಚಣೆಗಳು ಮತ್ತು ಈ ಬೃಹತ್ ಸಂಪುಟದ ಪ್ರೇರಕರು, ಸಲಹೆಗಾರರು ಮತ್ತು ಸಹೋದ್ಯೋಗಿಗಳ ಬಗೆಗೆ ಬರೆದಿದ್ದಾರೆ.

'ಸಹ್ಯಾದ್ರಿ' ಕುವೆಂಪು ಅವರ ಮೇರು ಸದೃಶವಾದ ವ್ಯಕ್ತಿತ್ವಕ್ಕೆ ಹೊಯ್‌ಕಯ್ ಆಗಿದೆ. ಸುಮಾರು ಸಾವಿರದನೂರು ಪುಟಗಳ ಬೃಹತ್ ಹೊತ್ತಿಗೆ. ಲೇಖಕರು ಎಪ್ಪತ್ತೆರಡು ಜನ: ಲೇಖನಗಳು ಎಪ್ಪತ್ತನಾಲ್ಕು. ಇಲ್ಲಿ ಈ ಎಲ್ಲ ಲೇಖನಗಳ ವಿವರವಾದ ವಿಮರ್ಶೆಗೆ ತೊಡಗುವುದಾಗಲಿ ಅಥವಾ ಎಲ್ಲ ಲೇಖಕರ ಹೆಸರುಗಳನ್ನು ಹೆಸರಿಸುವುದಾಗಲಿ ಸಾಧ್ಯವಾಗದು. ಆದರೂ ಪ್ರಯತ್ನಪಡಲಾಗಿದೆ.

'ರಾಜದಂಡಕ್ಕೆ ಮಣಿಯ ಮಹಾಕವಿ' ಎಂಬ ಲೇಖನದಲ್ಲಿ ಕೋ. ಚನ್ನಬಸಪ್ಪ ಅವರು—

ವಿಪ್ಲವ ಮೂರ್ತಿಯ ಸಖನಾಗಿಹನೈ
ಕವಿಗರಸುಗಿರಸುಗಳ ಋಣವಿಲ್ಲ
ಅವನಗ್ನಿಮುಖಿ !
ಪ್ರಲಯ ಶಿಖಿ !

ಎಂಬ ಕವಿಯ ಚಿತ್ರವನ್ನು ಕೊಟ್ಟನ ಕುವೆಂಪು ಅವರು ಸ್ವಾತಂತ್ರ್ಯಪೂರ್ವ ಮತ್ತು ಅನಂತರ ರಾಜದಂಡಕ್ಕೆ, ಅಧಿಕಾರಶಾಹಿಗೆ ಮಣಿಯದಿದ್ದುದನ್ನು ದೃಷ್ಟಾಂತಗಳೊಡನೆ ಬಹು ರಮ್ಯವಾಗಿ ಚಿತ್ರಿಸಿದ್ದಾರೆ. ಸ್ವಾತಂತ್ರ್ಯ ಚಳುವಳಿಗೆ ಕವಿಚೇತನ ಸ್ಪಂದಿಸಿದ ರೀತಿಯನ್ನು, ಸರಕಾರಿ ನೌಕರರಾಗಿದ್ದೂ ಏಕೀ ಕರ್ಣಾಟಕಕ್ಕೆ ದಿಟ್ಟತನದಿಂದ ಹೋರಾಡಿದ ರೀತಿಯನ್ನು ಚೇತೋಹಾರಿಯಾಗಿ ವಿವರಿಸಿದ್ದಾರೆ. 'ಬೋಧಕರಾಗಿ ಕುವೆಂಪು' ಲೇಖನದಲ್ಲಿ ಮಹಾಬೋಧಕರಾಗಿ ಕುವೆಂಪು ಹೇಗೆ ಪಾಠಮಾಡುತ್ತಿದ್ದರೆಂಬುದನ್ನು ಸ್ವಾನುಭವದಿಂದ ನ. ಸುಬ್ರಹ್ಮಣ್ಯಂ ಕೊಟ್ಟಿದ್ದಾರೆ. ಅದರಲ್ಲೂ ಕಾವ್ಯಮೀಮಾಂಸೆಯನ್ನು ಮಾಡುವ ರೀತಿ ವಿದ್ಯಾರ್ಥಿಗಳಿಗೆ ಹೃದ್ಯವಾಗುವಂತೆ ಉಪಮೆ,

ದೃಷ್ಟಾಂತ, ತರ್ಕಗಳಿಂದ ವಿವರಿಸುತ್ತಿದ್ದ ರೀತಿ ಮಹಾಬೋಧಕನಿಗೆ ಮಾತ್ರ ಸಾಧ್ಯವಾದುದೆಂದೂ, ಪಾಠದ ವೇಳೆ ಅಚಿಂತ್ಯರಾಗಿ ಆಡಿದ ಒಂದೊಂದು ಮಾತೂ ಹೇಗೆ ನುಡಿಮುತ್ತಿನಂತೆ, ವಾಕ್ಯ ಮಾಣಿಕ್ಯದಂತೆ ಕಂಗೊಳಿಸುತ್ತಿದ್ದುವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಕೆಲವನ್ನು ಉಲ್ಲೇಖಿಸಿದ್ದಾರೆ. ನಿಂಗಣ್ಣ ಸಣ್ಣಕಿ ಅವರು 'ವಿಶ್ವಕವಿ ಕುವೆಂಪು' ಎಂಬ ಲೇಖನದಲ್ಲಿ ಕುವೆಂಪು ಅವರು ತಮ್ಮ ಕಾವ್ಯಗಳಲ್ಲಿ ಸಾರ್ವಕಾಲಿಕವಾದ ಲೋಕ ಸತ್ಯಗಳನ್ನು, ಸರ್ವಧರ್ಮ ಸಮ್ಮತವಾದ ಮಾನವಧರ್ಮವನ್ನು ವ್ಯಕ್ತಪಡಿಸುವ ಮೂಲಕ, ಸದಾ ಅಲ್ಪಕ್ಕೆ ಹೇಸಿ ಭೂಮಕ್ಕೇರುವ ತುಡಿತದಿಂದ, ದೇಶಭಾಷೆಗಳ ಗಡಿಗಳನ್ನೊಡೆದು ಅನಿಕೇತನರಾಗುವ ಮೂಲಕ ಹೇಗೆ ವಿಶ್ವಕವಿ ಎಂಬುದನ್ನು ನಿರೂಪಿಸುವುದರ ಬದಲು ಕುವೆಂಪು ಅವರ ಭಾಷಾಪ್ರೇಮದ, ಪ್ರಕೃತಿ ಪ್ರೇಮದ ಕವನಗಳ ಸಾಲುಗಳನ್ನು ಉದ್ಧರಿಸುತ್ತಾ ಸಾಗುವ ಈ ಲೇಖನ ತನ್ನ ವಿಷಯದ ವಿಸ್ತಾರ ಆಳ ಅಗಲಗಳನ್ನೇ ಅರಿತುಕೊಳ್ಳದೆ ಮೇಲೆ ಮೇಲೆ ತೇಲಿದಂತಿದೆ. ಕುವೆಂಪು ಅವರು ವಿಶ್ವಕವಿಗಳ ಸಾಲಿನಲ್ಲಿ ಸಿಲ್ಲಬಲ್ಲ ಕವಿ ಎಂಬುದರಲ್ಲಿ ಸಂಶಯವಿಲ್ಲವಾದರೂ ಅದನ್ನು ಬರಿದೆ ಅಭಿಮಾನದಿಂದ ಹೇಳದೆ ನಿರೂಪಿಸಿ ತೋರಿಸಿದ್ದರೆ ಅದಕ್ಕೊಂದು ಬೆಲೆ ಬರುತ್ತಿತ್ತು. ಆ ಕೆಲಸ ಈ ಲೇಖನದಿಂದ ಆಗಿಲ್ಲ.

'ಕುವೆಂಪು ಚಿತ್ರಿಸಿರುವ ಕುಟುಂಬ ಜೀವನ' ಎಂಬ ಲೇಖನದಲ್ಲಿ ಶಾಂತಾದೇವಿ ಮಾಳವಾಡ ಅವರು ಕುವೆಂಪು ಅವರ ಸಫಲವೂ ಆದರ್ಶಮಯವೂ ಆದ ಕೌಟುಂಬಿಕ ಜೀವನವನ್ನು ಕೊಟ್ಟು ಅನಂತರ 'ರಾಮಾಯಣ ದರ್ಶನಂ'ದಲ್ಲಿಯ ರಸಮಯ ಕೌಟುಂಬಿಕ ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು'ಗಳನ್ನು ನೋಡಿದ್ದರೂ ಅವಕ್ಕೆ ಸಿಗಬೇಕಾದ ಪ್ರಾಧಾನ್ಯತೆ ಸಿಕ್ಕಿಲ್ಲ. ಕುವೆಂಪು ಚಿತ್ರಿಸಿರುವ ಆದರ್ಶ ಕೌಟುಂಬಿಕ ಚಿತ್ರಗಳನ್ನು ಕಂಡಾಗ ಎಂತಹ ಕಲ್ಲೆದೆಯಾದರೂ ಮೃದುವಾಗುವಂತೆ ಶಾಂತಾದೇವಿ ಮಾಳವಾಡ ಅವರು ನಿರೂಪಿಸಿದ್ದಾರೆ. ಲೇಖನದ ಉದ್ದಕ್ಕೂ ಕುವೆಂಪು ಕುಟುಂಬದ ಮೇಲಿನ ಮೆಚ್ಚಿಕೆ, ಪ್ರೀತಿಗಳು ಹರಿದಿದೆ. ಆದರೆ ಎಲ್ಲಿಯೂ ಅತಿಯಾಗಿಲ್ಲ. ಸ. ಸ. ಮಾಳವಾಡರ 'ಕುವೆಂಪು ಚಿತ್ರಿಸಿರುವ ದಾಂಪತ್ಯ ಜೀವನ'ದಲ್ಲಿ ಶಾಂತಾದೇವಿ ಮಾಳವಾಡರ ಲೇಖನದ ವಸ್ತುವೇ ಮುಂದುವರೆದಿದೆ; ದೃಷ್ಟಿಯೂ ಅದೇ. ಆದರೆ ಇಲ್ಲಿ ಒಂದೆರಡು ಸಣ್ಣ ಕಥೆಗಳ ದಾಂಪತ್ಯ ಜೀವನವನ್ನು ಮತ್ತು ಕಾದಂಬರಿಗಳಲ್ಲಿನ ದಾಂಪತ್ಯ ಜೀವನವನ್ನು ವಿವರವಾಗಿ ನೋಡಲಾಗಿದೆ. ಕುವೆಂಪು ಮೇಲಿನ ಗೌರವ ಇಲ್ಲೂ ಎದ್ದು ಕಾಣುತ್ತದೆ.

ಶ್ರೀಮತಿ ವಿಜಯಭಾರತಿ ಅವರ 'ಶ್ರೀ ರಾಮಾಯಣದರ್ಶನ' ಕಾವ್ಯದಲ್ಲಿ ಹಾಸ್ಯ ಮತ್ತು ವಿಡಂಬನೆ' ಎಂಬ ಲೇಖನದಲ್ಲಿ ಶ್ರೀ ರಾಮಾಯಣದರ್ಶನದಲ್ಲಿ ಅಲ್ಲಲ್ಲಿ ಮಿನುಗಿರುವ ಹಾಸ್ಯ ಮತ್ತು ವಿಡಂಬನೆಯ ಸಾಮಾನ್ಯ ಚಿತ್ರವಿದೆ. ರಾಮಾಯಣದರ್ಶನದಲ್ಲಿ ಮಾತ್ರವಲ್ಲದೆ ಅವರ ಕಾದಂಬರಿಗಳಲ್ಲೂ ಸನ್ನಿವೇಶದಿಂದಲೆ ಹಾಸ್ಯದ ಬುಗ್ಗೆಗಳನ್ನೇಳಿಸುವ ಕೆಲವಾರು ಪ್ರಸಂಗಗಳಿವೆ. ಅವುಗಳ ಬಗ್ಗೆ ಲೇಖನವಿಲ್ಲದಿರುವುದೊಂದು ಕೊರತೆ ಎಂದೆನ್ನಿಸುತ್ತದೆ.

ಕುವೆಂಪು ಮತ್ತು ಕಾವ್ಯ–ಬಿಡಿ ಕವನಗಳು ಮತ್ತು ಸಮಗ್ರವಾಗಿ-ವನ್ನು ಕುರಿತ ಕೆಲವು ಲೇಖನಗಳನ್ನು ಇಲ್ಲಿ ವಿವೇಚಿಸಲಾಗಿದೆ. 'ಪಕ್ಷಿ ಕಾಶಿ', 'ಕಲ್ಕಿ-ಒಂದು ವಿವೇಚನೆ', 'ಸೋವಿಯತ್ ರಷ್ಯಾಕ್ಕೆ ನಾನೊಮ್ಮೆ ಹೋಗಿದ್ದೆ' ಮತ್ತು 'ಕುವೆಂಪು ಅವರ ಕಥನ ಕವನಗಳು' ಲೇಖನಗಳಲ್ಲಿ ಶೀರ್ಷಿಕೆಗೆ ಅನುಗುಣವಾದ ವಸ್ತುವಿನ ವರ್ಣನೆಯೊ, ವ್ಯಾಖ್ಯಾನವೊ, ಪರಿಚಯವೊ ಇದೆ. ಕೆ. ಜಿ. ನಾರಾಯಣಪ್ರಸಾದರ 'ಕುವೆಂಪು ಅವರ ಸಾನೆಟ್ಟುಗಳು' ಲೇಖನದಲ್ಲಿ ಸಾನೆಟ್ಟಿನ ಮೂಲ, ಇಂಗ್ಲಿಷ್ ಸಾಹಿತ್ಯದಲ್ಲಿ ಅದರ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ಹೇಳಿದೆ. ಅನಂತರ ಕನ್ನಡದಲ್ಲಿ ಕುವೆಂಪು ಅವರು ಸಾನೆಟ್ಟಿನಲ್ಲಿ ಪ್ರಾಸದ ಬಗ್ಗೆ ಸ್ವಾತಂತ್ರ್ಯ ವಹಿಸಿ ಕನ್ನಡ ಜಾಯಮಾನಕ್ಕೊಗ್ಗುವಂತೆ ಅನೇಕ ಸಾನೆಟ್ಟುಗಳನ್ನು ರಚಿಸಿದುದನ್ನು ನಿರೂಪಿಸಿದ್ದಾರೆ. ಕುವೆಂಪು ಅವರ ಶಿಶು ಸಾಹಿತ್ಯ' ಲೇಖನದಲ್ಲಿ ಹೊರೆಯಾಲ ದೊರೆಸ್ವಾಮಿ ಅವರು ಕುವೆಂಪು ಅವರ ಶಿಶು ಸಾಹಿತ್ಯ ಭಾವಗವನ

ವಾಗಿಯೊ, ಭಾಷೆ ಬಿಗಿಯಾಗಿಯೊ, ಹಾಡುವ ಗೇಯದ ಲಯವಿಲ್ಲದೆಯೊ ಅವು ಸಾರ್ಥಕವಾದ ಶಿಶು ಸಾಹಿತ್ಯವಾಗಿಲ್ಲ ಎಂಬುದನ್ನು ಉದಾಹರಣೆಗಳಿಂದ ತೋರಿಸಿಕೊಟ್ಟಿದ್ದಾರೆ. ಆದರೆ ಕಿಂದರಿ ಜೋಗಿ ಮತ್ತು ಕನ್ನಡವನ್ನು ಕುರಿತ ಹಾಡುಗಳು ಮಕ್ಕಳ ಕಲ್ಪನೆಗೆ ಹಿಡಿಸುವುದರಲ್ಲಿ ಸಂಶಯವಿಲ್ಲ ಎಂದೂ ಹೇಳಿದ್ದಾರೆ. ನಾಟಕಗಳು ಅಷ್ಟೆ ಅವಾಸ್ತವ ಮತ್ತು ಮಕ್ಕಳ ಕಲ್ಪನೆಗೆ ಮೀರಿದುದು ಎನ್ನುತ್ತಾರೆ. 'ಬಾಲವಿಧವೆ' ಬೇಂದ್ರೆ ಅವರ ಪುಟ್ಟವಿಧವೆ ಕವನದ ಉತ್ತರ ಭಾಗದಂತಿದೆಯೆಂದು ಹೇಳಿ ಶಂಸ ಐತಾಳ ಅವರು ಸುಮಾರು ಅರ್ಧ ಶತಮಾನದ ಹಿಂದೆ ಕುವೆಂಪು ಅವರು ಸಮಾಜದ ಕ್ರೌರ್ಯಕ್ಕೆ ಕಿಡಿಕಾರಿದುದನ್ನು ತೋರಿದ್ದಾರೆ. ಬ್ರೌನಿಂಗನ The Pied piper of Hamelin ಕವನವನ್ನು ನಿಮಿತ್ತವಾಗಿಟ್ಟುಕೊಂಡು ಕುವೆಂಪುರವರು ರಚಿಸಿದ ಬೊಮ್ಮನಹಳ್ಳಿಯ ಕಿಂದರಿಜೋಗಿಯನ್ನು ಜಾನಪದ ಹಿನ್ನೆಲೆಯಲ್ಲಿ ಮತ್ತು ಅದು ಇಲ್ಲಿಯ ನೆಲಕ್ಕೆ ಎಷ್ಟರಮಟ್ಟಿಗೆ ಹೊಂದಿಕೊಂಡು ಇಲ್ಲಿಯದೇ ಕಥೆಯಾಗಿದೆಯೆಂಬುದನ್ನು ಜೀಶಂಪ ಅವರು 'ಕಿಂದರಿಜೋಗಿ' ಲೇಖನದಲ್ಲಿ ವಿವರಿಸಿದ್ದಾರೆ. 'ಮನೆಮನೆಯ ತಪಸ್ವಿನಿಗೆ' ಕವನ ಕುವೆಂಪುರವರ ಶ್ರೇಷ್ಠ ಕವನಗಳ ಸಾಲಿನಲ್ಲಿ ನಿಲ್ಲಲಾರದಾದರೂ ಅವರು ಶ್ರೀ ಸಾಮಾನ್ಯನನ್ನು ಕುರಿತು ಹಾಡಿದಂತೆ ಮನೆಮನೆಯ ಅನಾಮಿಕ ಗೃಹಿಣಿಯರನ್ನು ಕುರಿತು ನಮ್ಮ ಪುರಾಣ ಪ್ರಸಿದ್ಧ ಮಹಿಳಾಮಣಿಗಳ ತಪಸ್ಸಿಗೆ ಇವರ ತಪಸ್ಸು ಯಾವ ವಿಧದಲ್ಲಿಯೂ ಕಡಿಮೆಯಿಲ್ಲವೆಂದು ಹೇಳಿ ಅವರಿಗೆ ಕೀರ್ತಿ ಪಿಶಾಚಿ ಹಿಡಿಯದಿರಲಿ ಅವರ ಕರ್ಮಭೂಮಿ ಗೃಹವೇ ಆಗಿರಲಿ ಅದರಿಂದ ಸಮಾಜಕ್ಕೆ ಮತ್ತೆ ಲೋಕಕ್ಕೆ ಕಲ್ಯಾಣವಾಗಲಿ ಎಂದು ಹಾರೈಸಿರುವುದನ್ನು ಸಿ. ಪಿ. ಕೆ. ಅವರು 'ಮನೆಮನೆಯ ತಪಸ್ವಿನಿಗೆ' ಲೇಖನದಲ್ಲಿ ನಿರೂಪಿಸಿದ್ದಾರೆ. ಕುವೆಂಪು ಅವರು ಮೊದಲು ಬರೆಯತೊಡಗಿದುದು ಇಂಗ್ಲಿಷಿನಲ್ಲಿ. ಇಂಗ್ಲಿಷಿನಲ್ಲಿ ಅವರು ಹೊರತಂದ ಕವನ ಸಂಕಲನ 'Alien Harp' ಇಲ್ಲಿಯ ಕವನಗಳಲ್ಲಿ ಆಂಗ್ಲ ಕವಿಗಳ ಪ್ರಭಾವವಿರುವುದನ್ನೂ, ಕೆಲವು ಕವನಗಳಿಗೆ ಐತಿಹಾಸಿಕ ಘಟನೆಗಳು ವಸ್ತುವಾಗಿರುವುದನ್ನೂ, ಮತ್ತೆ ಕೆಲವು ಕವನಗಳಲ್ಲಿ ಸ್ವದೇಶಾಭಿಮಾನ ತುಂಬಿ ತುಳುಕುತ್ತಿರುವುದನ್ನು 'ವಿದೇಶೀಯ ವೀಣೆ' ಎಂಬ ಲೇಖನದಲ್ಲಿ ತೋರಿಸಿ ಅವು ಕುವೆಂಪು ಬಾಲಕವಿ ಇದ್ದಾಗ ಇಟ್ಟ ಪುಟ್ಟ ದಿಟ್ಟ ಹೆಜ್ಜೆಗಳಿವು ಎಂದಿದ್ದಾರೆ ವಿ. ಕೃ. ಗೋಕಾಕ್. 'ಕುವೆಂಪು ಅವರ ಭಾವಗೀತೆಗಳು' ಲೇಖನದಲ್ಲಿ ರಾಗೌ ಅವರು ಕುವೆಂಪು ಅವರ ಭಾವಗೀತೆಗಳ ನಾನಾ ಮುಖಗಳನ್ನು ವಿವೇಚಿಸಿದ್ದಾರೆ. ಕುವೆಂಪು ಅವರ ಭಾವ ಗೀತೆಗಳ ಹರಹು ಬಹುದೊಡ್ಡದು. ಅದನ್ನು ಈ ಪುಟ್ಟ ಲೇಖನದಲ್ಲಿ ಸಾಧ್ಯವಾದಷ್ಟು ಮಟ್ಟಿಗೂ ಸೂತ್ರರೂಪವಾಗಿ ವಿಮರ್ಶಿಸುವ, ವಿಮರ್ಶೆಗಿಂತಲೂ ಅವುಗಳನ್ನು ನೋಡಿ ಪರಿಭಾವಿಸಬೇಕಾಗಿ ರುವ ರೀತಿಯನ್ನು ನಿರ್ದೇಶಿಸಿದ್ದಾರೆ. 'ಕುವೆಂಪು ಮತ್ತು ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯ' ಎಂಬ ಲೇಖನದಲ್ಲಿ ಶಂಕರ ಮೊಕಾಶಿ ಪುಣೇಕರರು ರೊಮ್ಯಾಂಟಿಕ್ ಎಂದರೆ ಪಲಾಯನವಲ್ಲ ಎಂದು ಹೇಳಿ, ದೇಶ ವಿದೇಶಗಳಲ್ಲಿ ಈ ರೊಮ್ಯಾಂಟಿಕ್ ಸಂಪ್ರದಾಯದ ಉಗಮ ಬೆಳವಣಿಗೆಗಳನ್ನು ವಿವರಿಸಿ, ಭಾರತೀಯ ಸಾಹಿತ್ಯದ ಮೇಲೆ ತನ್ಮೂಲಕ ಕನ್ನಡ ಸಾಹಿತ್ಯದ ಮೇಲೆ ಅದರ ಪ್ರಭಾವ ಕ್ಕೊಳಗಾಗಿಯೂ ಭಾರತೀಯತ್ವಕ್ಕೆಳಸುತ್ತಿದ್ದ ಕುವೆಂಪು ಅವರ ಕವನಗಳನ್ನೂ, ಅವುಗಳಿಗೆ ಪ್ರೇರಕವೂ ಪೋಷಕವೂ ಆಗಿದ್ದ ದೇಶೀಯ ವಿದೇಶೀಯ ಕಾವ್ಯಗಳು, ಪ್ರಭಾವ ಬೀರಿದ ವ್ಯಕ್ತಿಗಳು, ಪ್ರೋತ್ಸಾಹಿಸಿದ ಗುರುಗಳು ಮೊದಲಾದುವನ್ನು ವಿವರಿಸಿ ಪೂರ್ಣ ಭಾರತೀಯವಾಗಿ ವೇದಾಂತ, ಭಕ್ತಿ, ಪ್ರೇಮ, ಕಾಮ, ಮಾತೃವಾತ್ಸಲ್ಯ, ಮಾನವಿಕತೆ, ದಾಕ್ಷಿಣ್ಯ, ರಸಿಕತೆ, ಅನಿರ್ಬಂಧತೆಗಳನ್ನು ಒಂದೇ ರಸಾಯನವಾಗಿ ಕುವೆಂಪು ಅವರ ಕವನಗಳು ಕೊಟ್ಟಂತೆ ಇನ್ನಾರ (ವಿದೇಶಿಯರ ಕವನಗಳು ಕೂಡ) ಕವನಗಳೂ ಕೊಟ್ಟಿಲ್ಲ ಎಂದಿದ್ದಾರೆ. ವಿದ್ವತ್ಪೂರ್ಣವಾದ ಈ ಲೇಖನ ಹಲವಾರು ಬಾರಿ ಮನನ ಯೋಗ್ಯವಾಗಿದೆ. 'ಕುವೆಂಪು ಮತ್ತು ಕಲೆ' ಲೇಖನದಲ್ಲಿ ಪಿ. ಆರ್. ತಿಪ್ಪೇಸ್ವಾಮಿ ಅವರು ದಿ. ಮಜುಂದಾರರ, ದಿ. ಕೆ. ವೆಂಕಟಪ್ಪನವರ, ರೋರಿಕ್ ಅವರ ಮತ್ತು ತಮ್ಮ ವರ್ಣಚಿತ್ರಗಳನ್ನು ನೋಡಿ ಸಹೃದಯರಾದ ಕುವೆಂಪು ಅವರು ಅವುಗಳಿಗೆ ಮನಸೋತು ರಸವಾರ್ಧಿಯೊಳು ಮುಳುಗಿ ಆ ನೆನಪಿನಲ್ಲಿ ರಚಿಸಿದ ಕವನಗಳನ್ನು ಉಲ್ಲೇಖಿಸಿದ್ದಾರೆ. ಚಿತ್ರಕಲೆಯನ್ನು ಮೆಚ್ಚಿ ಮಾರುಹೋದಂತೆಯೆ ಸೋಮನಾಥಪುರ, ಶ್ರವಣಬೆಳುಗೊಳಗಳನ್ನು ನೋಡಿ ಆ ಕಲೆಯ ಬಲೆಗೆ

ಸರ್ವೋಪಗೋಂಡು ಸಿಲ್ಕಿ ಭವ್ಯತೆಗೆ ದಿವ್ಯತಾ ಭಾವವನ್ನು ತಾಳಿ ಕವನಗಳನ್ನು ರಚಿಸಿರುವುದನ್ನೂ ಗುರುತಿಸಿದ್ದಾರೆ. ಸೌಂದರ್ಯ ಎಲ್ಲಿಯೇ ಇರಲಿ ಶ್ರುತಿಮಾಡಿಟ್ಟ ವೀಣೆಯಂತೆ ಕುವೆಂಪು ಕವಿ ಹೃದಯ ಮಿಡಿಯುವುದನ್ನು ಈ ಲೇಖನದಲ್ಲಿ ಕಾಣಬಹುದು.

'ಕಲೆಯುನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ' ಎಂಬ ಲೇಖನದಲ್ಲಿ ಕೋ. ಚೆನ್ನಬಸಪ್ಪ ಅವರು ಕಥಾವಸ್ತುವಿಗೆ ಮತ್ತು ಕೆಲವು ಪಾತ್ರಗಳ ಚಿತ್ರಣಕ್ಕೆ ಕುವೆಂಪು ಅವರು ವಾಲ್ಮೀಕಿ ಮತ್ತು ನಾಗಚಂದ್ರರಿಗೆ ಋಣಿಯಾಗಿದ್ದರೂ ಮಂಥರೆ, ಶೂರ್ಪನಖಿ ಮತ್ತು ವಾಲಿಯ ಪಾತ್ರ ಚಿತ್ರಣದಲ್ಲಿ ಮತ್ತು ರಾವಣವಧೆ ಮತ್ತು ಸೀತೆಯೊಡನೆ ರಾಮ ಅಗ್ನಿಪ್ರವೇಶ ಮಾಡುವ ಪ್ರಸಂಗಗಳಲ್ಲಿ ಕಂಡು ಬರುವ ದರ್ಶನ ಕುವೆಂಪು ಅವರದೇಬುದನ್ನು ತೋರಿಸಿಕೊಟ್ಟಿದ್ದಾರೆ. "ಶ್ರೀ ರಾಮಾಯಣ ದರ್ಶನಂ"ದಲ್ಲಿ 'ಪ್ರಣಯ ದರ್ಶನಂ' ಎಂಬ ಲೇಖನದಲ್ಲಿ ಗುಂಡ್ಮಿ ಚಂದ್ರಶೇಖರ ಐತಾಳರು 'ಪ್ರಣಯ' ಪದಕ್ಕೆ ಎಂಟು ಅರ್ಥಗಳಿವೆಯೆಂದೂ ಕೊನೆಯ ಅರ್ಥ ಮೋಕ್ಷವೆಂದೂ ಈ ಎಲ್ಲ ಅರ್ಥಗಳಲ್ಲಿಯೂ ಪ್ರಣಯ ಈ ಕಾವ್ಯದಲ್ಲಿದೆಯೆಂದೂ ಬೇರೆ ರಾಮಾಯಣಗಳಲ್ಲಿ ಬರಿಯ ಪ್ರಣಯವಿದ್ದರೆ ಇಲ್ಲಿ 'ಪ್ರಣಯ ದರ್ಶನ'ವಿದೆಯೆಂದೂ ಹೇಳಿ ಮೂಲದ ಪ್ರಸಂಗಗಳು ಇಲ್ಲಿ ರಸೋಜ್ವಲವಾಗಿರುವುದನ್ನು ಮತ್ತು ಮೂಲದಲ್ಲಿಲ್ಲದ ಧ್ಯಾನಮಾಲಿನಿಯ ಪಾತ್ರ ಇಲ್ಲಿ ಸೇರ್ಪಡೆ ಯಾಗಿರುವುದನ್ನು ವಿವರಿಸಿದ್ದಾರೆ. " 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಅತೀಂದ್ರಿಯ ಪ್ರಶ್ನೆ"ಯ ಬಗ್ಗೆ ವಿಚಾರ ಮಾಡುತ್ತಾ ಎಂ. ರಾಮಕೃಷ್ಣ ಅವರು ಕಾದಂಬರಿಯಲ್ಲಿನ ಅತೀಂದ್ರಿಯ ಪ್ರಸಂಗಗಳು ಬರುವ ಭಾಗಗಳನ್ನು ಸಕಾರಣವಾಗಿ, ತಾರ್ಕಿಕವಾಗಿ ಸತ್ಯವೆಂದು ನಿರೂಪಿಸಿದ್ದಾರೆ. ತಮ್ಮ ವಾದಕ್ಕೆ ಅತೀಂದ್ರಿಯ ಶಕ್ತಿಯನ್ನು ಹೊಂದಿದ್ದ ಅನೇಕರನ್ನು – ರಾಮಕೃಷ್ಣ ಪರಮಹಂಸ, ಎಡ್ಗರ್ ಕೇಸಿ ಮೊದಲಾದವರು – ದೃಷ್ಟಾಂತವಾಗಿ ಕೊಟ್ಟಿದ್ದಾರೆ. ಅತೀಂದ್ರಿಯ ಶಕ್ತಿಯನ್ನು ಓದುಗ ನಂಬಲಿ ಬಿಡಲಿ ಕಾದಂಬರಿಯ ಕಲಾವಂತಿಕೆಗೆ ಅದರಿಂದ ಭಂಗವಿಲ್ಲ ಎಂಬುದನ್ನೂ ತೋರಿಸಿಕೊಟ್ಟಿದ್ದಾರೆ.

'ಕುವೆಂಪು ಅವರ ಕಾದಂಬರಿಗಳ ಭಾಷೆ : ಭಾಷಾ ಶಾಸ್ತ್ರದ ದೃಷ್ಟಿಯಿಂದ' ವಿವೇಚಿಸಿದ ಸೋಮಶೇಖರಗೌಡ ಅವರು ಕಾದಂಬರಿಗಳ ಪಾತ್ರಗಳು ತಮ್ಮ ಸಾಮಾಜಿಕ ಸ್ತರಕ್ಕೆ ಅನುಗುಣವಾಗಿ ಆಡುವ ಭಾಷೆಯಲ್ಲಿ ಆಗುವ ವ್ಯತ್ಯಾಸಗಳನ್ನು ಗಮನಿಸಿ ಪಟ್ಟಿಮಾಡಿಕೊಟ್ಟಿದ್ದಾರೆ. 'ಕುವೆಂಪು ಅವರ ಮುಕ್ತಕಗಳು' ಎಂಬ ಲೇಖನದಲ್ಲಿ ಎಂ. ಪಿ. ಮಂಜಪ್ಪಶೆಟ್ಟಿ ಅವರು ಮುಕ್ತಕ ಎಂದರೇ ನೆಂದು ವಿವೇಚನೆ ಮಾಡಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಲ್ಲಿ ಮುಕ್ತಕಗಳ ಬೆಳವಣಿಗೆಯನ್ನು ನಿರೂಪಿಸಿ ಕುವೆಂಪು ಅವರ ಕೆಲವು ಮುಕ್ತಕಗಳನ್ನು ಪರಿಚಯಿಸಿದ್ದಾರೆ. ಅವರು ಪರಿಚಯಿಸಿರುವ ಕೆಲವೇ ಮುಕ್ತಕಗಳಲ್ಲಿ ಕೆಲವನ್ನು ಮುಕ್ತಕಗಳೆಂದು ಕರೆಯಲು ಸಾಧ್ಯವಾಗಲಾರದು. ಭಾರತೀಯ ಕಾವ್ಯಮೀಮಾಂಸೆಗೆ ಕುವೆಂಪು ಅವರ ಕೊಡುಗೆ ಸ್ಥಿರವೂ ಶಾಶ್ವತವೂ ಆದುದೆಂದು ಡಾ. ಕೆ. ಕೃಷ್ಣ ಮೂರ್ತಿ ಅವರು 'ಭಾರತೀಯ ಕಾವ್ಯ ಮೀಮಾಂಸೆಗೆ ಕುವೆಂಪು ಕೊಡುಗೆ' ಎಂಬ ಲೇಖನದಲ್ಲಿ ಹೇಳಿದ್ದರೆ, ಬಿ. ಎಚ್. ಶ್ರೀಧರ ಅವರು 'ಕುವೆಂಪು ಗದ್ಯ' ಎಂಬ ಲೇಖನದಲ್ಲಿ ಕುವೆಂಪು ಗದ್ಯ ಹೇಗೆ ವಸ್ತುನಿಷ್ಠವಾದುದು, ವಿಶಿಷ್ಟವಾದುದು, ಅನುಕರಣಾತೀತವಾದುದು ಎಂಬುದನ್ನು ಒಂದೆರಡು ಉದಾಹರಣೆಗಳಿಂದ ನಿರೂಪಿಸಿದ್ದಾರೆ. 'ಕುವೆಂಪುರವರ ಪದಸೃಷ್ಟಿ' ಎಂಬ ಲೇಖನದಲ್ಲಿ ಎಚ್. ಎಸ್. ಸುಜಾತ ಅವರು ಕುವೆಂಪು ಸಂಸ್ಕೃತ, ಬಂಗಾಲಿ ಮತ್ತು ಇಂಗ್ಲಿಷ್ ಭಾಷೆಗಳ ಗಾಢವಾದ ಅಭ್ಯಾಸದಿಂದ ತಮ್ಮ ಕಾವ್ಯ ವ್ಯವಸಾಯದಲ್ಲಿ ಹೇಗೆ ಹೊಸ ಹೊಸ ಪದಗಳನ್ನು ಸೃಷ್ಟಿಸಿಕೊಂಡರು, ಕನ್ನಡದ ಜಾಯಮಾನಕ್ಕೆ ಒಗ್ಗುವಂತೆ ಭಾಷಾಂತರಿಸಿಕೊಂಡರು, ಕೆಲವು ಹಳೆಯ ಪದಗಳಿಗೆ ಜೀವವಿತ್ತು ಪುನಶ್ಚೇತನಗೊಳಿಸಿದರು ಎಂಬುದನ್ನು ಆಳವಾದ ಅಭ್ಯಾಸ ದಿಂದ ನಿರೂಪಿಸಿದ್ದಾರೆ. ಕಾವ್ಯ ಮೀಮಾಂಸೆಗೆ ಕುವೆಂಪು ಕೊಟ್ಟ ಪಾರಿಭಾಷಿಕ ಪದಗಳ ಕಾಣಿಕೆ ಯನ್ನು ಎತ್ತಿ ತೋರಿದ್ದಾರೆ. ಒಟ್ಟಿನಲ್ಲಿ ಲೇಖಕಿ ತಮ್ಮ ಪಾಲಿನ ಕೆಲಸವನ್ನು ಚೊಕ್ಕವಾಗಿ ಮಾಡಿದ್ದಾರೆ. ಆದರೂ ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಕೆಲಸ ಆಗಬೇಕು.

'ಕುವೆಂಪು ಮತ್ತು ಕಾಡು' ಎಂಬ ಲೇಖನದಲ್ಲಿ ಎಚ್. ಎಲ್. ನಾಗೇಗೌಡರು 'ಶ್ರೀ ಕುವೆಂಪು'ವ 'ಶ್ರೀ ರಾಮಾಯಣ ದರ್ಶನಂ' ರೂಪಿಸುವ ಮೊದಲಿಗೇ ಸಹ್ಯಾದ್ರಿಯ ಕಾಡು ಕುವೆಂಪು ಅವರನ್ನು ರೂಪಿಸಿತ್ತು ಎಂದು ಹೇಳಿ ಹೀಗೆ ಮಲೆನಾಡಿನಿಂದ ರೂಪಿತಗೊಂಡ ಕುವೆಂಪು ರವರ ಕವನಗಳಲ್ಲಿ, ನಾಟಕಗಳಲ್ಲಿ, ರಾಮಾಯಣ ದರ್ಶನದಲ್ಲಿ ಕಾಡು ಹೇಗೆ ಚಿತ್ರಿತವಾಗಿದೆಯೆಂಬು ದನ್ನು ಚಿತ್ರಿಸುತ್ತಾ ಕಾಡಿನ ನಾನಾ ತರಹದ ಪಕ್ಷಿಗಳು, ಮರಗಳು, ಪ್ರಾಣಿಗಳು ಇತ್ಯಾದಿಗಳನ್ನು ಅವುಗಳ ಸೂಕ್ಷ್ಮಾತಿಸೂಕ್ಷ್ಮಗಳು ದಿವ್ಯಭವ್ಯಗಳು ಮೂಡಿಬಂದಿರುವುದನ್ನು ಅತಿ ವಿವರವಾಗಿ ನಿರೂಪಿಸಿದ್ದಾರೆ. ಈ ಅತಿಯಾದ ವಿವರವೇ ಲೇಖನದ ಒಂದು ದೋಷವೋ ಎನಿಸುತ್ತದೆ. 'ಕುವೆಂಪು ಮತ್ತು ಮಲೆನಾಡು' ಲೇಖನದಲ್ಲಿ ದೇವಂಗಿ ಟಿ. ಚಂದ್ರಶೇಖರರು ಮಲೆನಾಡ ಮಗು ವಾದ ಕುವೆಂಪುವಿಗೂ ಮಲೆನಾಡಿಗೂ ಇರುವ ಅವಿನಾ ಸಂಬಂಧ ಮತ್ತು ಕುವೆಂಪು ಅವರಿಂದಾಗಿ ಪ್ರಖ್ಯಾತವಾಗಿರುವ ಕವಿಶೈಲ, ಸಬ್ಬಲುಗುಡ್ಡೆ ಇತ್ಯಾದಿಗಳ ಆತ್ಮೀಯವಾದ ವರ್ಣನೆಯನ್ನು ಮಾಡಿದ್ದಾರೆ. ಮಲೆನಾಡಿನ ಪ್ರಕೃತಿ ಸೊಬಗನ್ನು ನಾನಾ ಋತುಮಾನಗಳಲ್ಲಿ ಬೆಳಗುಬೈಗುಗಳಲ್ಲಿ ಕುವೆಂಪು ಚಿತ್ರಿಸಿರುವುದನ್ನು ಉದಾಹರಣೆಗಳೊಡನೆ ಇಲ್ಲಿ ವಿವರಿಸಿದ್ದಾರೆ. 'ಕುವೆಂಪು ಕಾದಂಬರಿ ಗಳಲ್ಲಿ ಪ್ರಕೃತಿ'ಯಲ್ಲಿ ಸಂ. ತಪಸ್ವೀಕುಮಾರ್ ಅವರು ಎರಡೂ ಕಾದಂಬರಿಗಳಲ್ಲಿನ ಪ್ರಕೃತಿ ವರ್ಣನೆ ಒಮ್ಮೊಮ್ಮೆ ಸಂಸ್ಕೃತ ಭೂಯಿಷ್ಠವಾಗಿ ಪ್ರೌಢವಾಗುವುದನ್ನೂ ಮತ್ತೊಮ್ಮೆ ಸರಳ ನುಡಿ ಗಳಲ್ಲಿ ಮೈದೋರುವುದನ್ನೂ, ಕಾನೂರು ಹೆಗ್ಗಡಿತಿಯಲ್ಲಿ ಬಂದಿರುವಷ್ಟು ಪ್ರಕೃತಿ ಚಿತ್ರಣ ಮಲೆಗಳಲ್ಲಿ ಮದುಮಗಳುವಿನಲ್ಲಿ ಬರದೆ ಅಲ್ಲಿಯ ಜನಪದದ ಸಂಸ್ಕೃತಿಯೊಡನೆ ಮಿಳಿತವಾಗಿ ಬಂದಿರುವುದನ್ನು ನಿರೂಪಿಸಿದ್ದಾರೆ.

'ಕುವೆಂಪು ಚಿತ್ರಿಸಿದ ಪ್ರಾಣಿಪ್ರಪಂಚ'ದಲ್ಲಿ ಕೆ. ಶ್ರೀಕಂಠಕೂಡಿಗೆ ಅವರು ಕುವೆಂಪು ಅವರ ಕೃತಿಗಳಲ್ಲಿ ಅದರಲ್ಲಿಯೂ ಪ್ರಮುಖವಾಗಿ ಗದ್ಯಕೃತಿಗಳಲ್ಲಿ ಬಂದಿರುವ ಪ್ರಾಣಿಗಳ ಚಿತ್ರ ಬರಿಯ ಚಿತ್ರವಾಗದೆ ಕಾದಂಬರಿಯ ಒಂದು ಪಾತ್ರವೇ ಆಗಿ ಉಳಿದ ಪಾತ್ರಗಳೊಡನೆ ಹೇಗೆ ಸಾವಯವ ಸಂಬಂಧವನ್ನು ಹೊಂದಿದೆಯೆಂಬುದನ್ನೂ ಅವುಗಳ ಕ್ರಿಯೆ ಇತ್ಯಾದಿಗಳು ಕಾದಂಬರಿಯ ಮುಂದಿನ ಆಗು ಹೋಗುಗಳಿಗೆ ಪ್ರತಿಮೆಯಾಗುವುದನ್ನೂ ಸಫಲವಾಗಿ ಚಿತ್ರಿಸಿದ್ದಾರೆ. 'ಕುವೆಂಪು ಚಿತ್ರಿಸಿದ ಪಕ್ಷಿ ಪ್ರಪಂಚ'ದಲ್ಲಿ ತೀ.ನಂ. ಶಂಕರನಾರಾಯಣ ಅವರು ಪ್ರಕೃತಿ ಕವಿಯಾದ ಕುವೆಂಪು ಅವರು ಪ್ರಕೃತಿಯ ಒಂದು ಅಂಗವೇ ಆದ ಪಕ್ಷಿಗಳ ಬಗೆಗೆ ಬರೆದಿರುವುದನ್ನೂ, ಪ್ರಾಣಿಗಳು ಅದರಲ್ಲಿಯೂ ಸಾಕು ಪ್ರಾಣಿಗಳು ಮಾನವನಿಗೆ ನಿಕಟವಾದುದರಿಂದ ಅವುಗಳನ್ನು ಲೌಕಿಕಾನುಭವ ಅಭಿವ್ಯಕ್ತಿಗೂ, ಪಕ್ಷಿಗಳನ್ನು ಅಲೌಕಿಕಾನುಭವ ಅಭಿವ್ಯಕ್ತಿಗೂ, ಪ್ರಾಣಿಗಳನ್ನು ಕುರಿತು ಗದ್ಯದಲ್ಲೂ ಪಕ್ಷಿಗಳನ್ನು ಕುರಿತು ಪದ್ಯದಲ್ಲೂ (ಗರಿಗೆ ಹಕ್ಕಿಯನ್ನು ಕುರಿತ ಅವರ ಗದ್ಯಭಾಗವನ್ನು ಲೇಖಕರೇ ಉದಾಹರಿ ಸಿದ್ದಾರೆ) ಬರೆದಿರುವುದನ್ನೂ, ಮಲೆನಾಡಿನ ಅಸಂಖ್ಯ ಪಕ್ಷಿ ಸಂಕುಲ ಅವರ ಕವನಗಳ ವಸ್ತು ವಾಗಿರುವುದನ್ನೂ, ಹಿಂದಿನಿಂದಲೂ ಕವಿಗಳ ಪ್ರಶಂಸೆಗೆ ಪಾತ್ರವಾಗಿರುವ ಕೋಗಿಲೆಯಂತೆಯೆ ಅಥವಾ ಅದಕ್ಕಿಂತಲೂ ಮಿಗಿಲಾಗಿ ಕಾಜಾಣ ಕವಿಯ ಮನಸ್ಸನ್ನು ಸೆರೆ ಹಿಡಿದಿರುವುದನ್ನೂ. ಶ್ರೀ ಅರವಿಂದರು ಹೇಳುವ ಇಂದ್ರಿಯ ಸೌಂದರ್ಯದಿಂದ ಆತ್ಮಸೌಂದರ್ಯದವರೆಗಿನ ನಾಲ್ಕು ಹಂತ ಗಳೂ ಕುವೆಂಪು ಅವರ ಪಕ್ಷಿಗಳನ್ನು ಕುರಿತ ಕವನಗಳಲ್ಲಿ ಕಂಡುಬರುವುದನ್ನೂ, ಪಕ್ಷಿಗಳನ್ನು ಕುರಿತ ಕೆಲವು ಕವನಗಳಲ್ಲಿ ಸಮಾಜಿಕ ಪ್ರಜ್ಞೆ ಅಥವಾ ಎಚ್ಚರ ಇರುವುದನ್ನೂ ವಿವರಿಸಿದ್ದಾರೆ. ಲೇಖನ ಹೃದ್ಯವಾಗಿದೆ.

"'ಶ್ರೀ ರಾಮಾಯಣ ದರ್ಶನಂ'ದಲ್ಲಿ ಕೆಲವು ಗ್ರಾಮೀಣ ಉಪಮೆ ಮಹೋಪಮೆಗಳು" ಎಂಬ ಲೇಖನದಲ್ಲಿ ಡಿ. ಎ. ಶಂಕರ್ ಅವರು ಕುವೆಂಪು ಅವರ ಕಾದಂಬರಿಗಳಲ್ಲಿ, ಮಲೆನಾಡಿನ ಚಿತ್ರ ಗಳಲ್ಲಿ ಹೇರಳವಾಗಿ ಕಾಣುವ ಮಲೆನಾಡಿನ ಚಿತ್ರಗಳು ಶ್ರೀ ರಾಮಾಯಣ ದರ್ಶನಂನಲ್ಲಿ ಎಲ್ಲೋ ಒಮ್ಮೆ ಉಪಮೆಯಾಗಿ ಮಹೋಪಮೆಯಾಗಿ ಬಂದಿರುವುದನ್ನು ಗುರುತಿಸಿ ಕವಿಯ ಮಣ್ಣಿನ ವಾಸನೆ ಇಲ್ಲೂ ಇರುವುದನ್ನು ಗುರುತಿಸಿದ್ದಾರೆ. 'ಕುವೆಂಪು ಚಿತ್ರಿಸಿದ ಶ್ರೀ ಸಾಮಾನ್ಯರು' ಲೇಖನದಲ್ಲಿ

ಜೆ. ಆರ್. ನಂಜುಂಡೇಗೌಡರು ಕುವೆಂಪು ಸಾಹಿತ್ಯದಲ್ಲಿ ಶ್ರೀ ಸಾಮಾನ್ಯನ ಚಿತ್ರವನ್ನು ಕೊಡುವ ಮುನ್ನ ಶ್ರೀ ಸಾಮಾನ್ಯನ ವ್ಯಾಖ್ಯಾನ ಮಾಡಿ, ಕುವೆಂಪು ಸಾಹಿತ್ಯವನ್ನು ನಾಲ್ಕು ವರ್ಗಗಳನ್ನಾಗಿ ವಿಭಾಗಿಸಿಕೊಂಡು ಒಂದೊಂದರಿಂದಲೂ ಶ್ರೀ ಸಾಮಾನ್ಯನ ಪರಿಚಯ ಮಾಡಿಕೊಡುತ್ತಾ ಹೋಗಿದ್ದಾರೆ. ಕುವೆಂಪು ಸಾಹಿತ್ಯದಲ್ಲಿ ಬರುವ ಎಲ್ಲ ಶ್ರೀಸಾಮಾನ್ಯನ ಪಾತ್ರಗಳನ್ನು ಗದ್ಯದಲ್ಲಿ ಓದಿದಂತಾಗುತ್ತದೆ. ಲೇಖನ ಇನ್ನಷ್ಟು ವಿಮರ್ಶಾತ್ಮಕವಾಗಿದ್ದಿದ್ದರೆ ಲೇಖಕರ ಶ್ರಮ ಸಾರ್ಥಕವಾಗುತ್ತಿತ್ತು. 'ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಪ್ರಣಯ'ದಲ್ಲಿ ಹಾ. ತಿ. ಕೃಷ್ಣೇಗೌಡರು ಕಾದಂಬರಿಯಲ್ಲಿ ಬರುವ ಹಲವಾರು ಪ್ರಣಯ ಜೋಡಿಗಳನ್ನು ಅವುಗಳ ಸಾಮಾಜಿಕ ಸ್ತರದಲ್ಲಿ ನಿಂತು ನೋಡಿ, ವ್ಯಾಖ್ಯಾನಿಸಿ ಆಯಾ ಪಾತ್ರಗಳು ಎಷ್ಟು ಸಹಜವಾಗಿ ವರ್ತಿಸುತ್ತವೆಂಬುದನ್ನು ನಿರೂಪಿಸಿದ್ದಾರೆ. ಸಾಮಾಜಿಕ ಸ್ತರಗಳ ವ್ಯತ್ಯಾಸವಾದಂತೆಲ್ಲಾ ಗಂಡು ಹೆಣ್ಣುಗಳ ಸಂಬಂಧ, ಪಾತಿವ್ರತ್ಯ ಪ್ರಜ್ಞೆ ವ್ಯತ್ಯಾಸವಾಗುವುದನ್ನೂ, ಸಮಾಜದ ಕೆಳಸ್ತರದಿಂದ ಮೇಲಿನ ಸ್ತರಕ್ಕೆ ಬಂದಂತೆಲ್ಲಾ ಗಂಡು ಹೆಣ್ಣು ಸಮಾಜದ ಕಟ್ಟುಪಾಡಿಗೆ ಹೆಚ್ಚು ಒಳಗಾಗುವುದನ್ನೂ, ಪ್ರಣಯ ಅನ್ನಮಯ ಕೋಶದಿಂದ ಮನೋಮಯ ಕೋಶಕ್ಕೇರುವುದನ್ನೂ ಚಿತ್ರಿಸಿದ್ದಾರೆ. 'ಕುವೆಂಪು ಕೃತಿಗಳಲ್ಲಿ ಮಣ್ಣಿನ ವಾಸನೆ'ಯನ್ನು ಚಿತ್ರಿಸತೊಡಗುವ ಮುನ್ನ ದೇ. ನಾ. ರಾಮೇಗೌಡರು ಅದು ಸಾಹಸದ ಕೆಲಸವೆಂದು ತಮ್ಮ ಲೇಖನಕ್ಕೆ ಕೆಲವು ಕವನಗಳು ಮತ್ತು ಕಾದಂಬರಿಗಳ ಮಿತಿಯ ಲಕ್ಷಣ ರೇಖೆಯನ್ನು ಹಾಕಿಕೊಂಡು ಕವನಗಳಿಂದ ಕೆಲವು ಪ್ರಸಂಗಗಳನ್ನು ಮಣ್ಣಿನ ವಾಸನೆಗಾಗಿ ಉದಾಹರಿಸಿದ್ದಾರೆ. ಹಾಗೆ ಉದಾಹರಿಸಿರುವ ಕವನಗಳ ಪ್ರಸಂಗಗಳಲ್ಲಿ ಮಣ್ಣಿನ ವಾಸನೆ ಇಲ್ಲ. ಇನ್ನು ಕಾದಂಬರಿಗಳಲ್ಲಿ ಮಣ್ಣಿನ ವಾಸನೆಯ ಚಿತ್ರವನ್ನು ಕೊಡಲು ಹೋಗಿ ಕಾದಂಬರಿಗಳ ಸ್ವಾರಸ್ಯವಾದ ಪ್ರಸಂಗಗಳ ಮತ್ತು ಎಲ್ಲ ಪಾತ್ರಗಳ ಚಿತ್ರವನ್ನು ಕೊಡುತ್ತಾರೆ. ರಂಜಕವಾದ ಭಾಷೆಯಲ್ಲಿ ಮತ್ತೊಮ್ಮೆ ಕಾದಂಬರಿಗಳನ್ನು ಓದಿದಂತೆ ಆಗುತ್ತದೆ. ಅಂದರೆ ಕಾದಂಬರಿಗಳಲ್ಲಿ ಮಣ್ಣಿನ ವಾಸನೆಯನ್ನು ಲೇಖಕರು ಗುರುತಿಸಿಲ್ಲವೆಂದಲ್ಲ. ಆದರೆ ಅದು ಗೌಣವಾಗಿ ಕಾದಂಬರಿಗಳಲ್ಲಿನ ಪ್ರಕೃತಿ ವರ್ಣನೆ ಮತ್ತು ಸ್ವಾರಸ್ಯಕರವಾದ ಎಲ್ಲ ಪ್ರಸಂಗಗಳ ಚಿತ್ರವತ್ತಾದ ಪುನರ್ ನಿರೂಪಣೆ ಪ್ರಮುಖವಾಗಿ ಲೇಖನ ತನ್ನ ಆಶಯದಲ್ಲಿ ಸೋಲುತ್ತದೆ. 'ಕುವೆಂಪು ಸಾಹಿತ್ಯ ಮತ್ತು ಸ್ವಾತಂತ್ರ್ಯ ಹೋರಾಟ' ಲೇಖನದಲ್ಲಿ ಕುವೆಂಪು ಸಾಹಿತ್ಯ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಎಂತಹ ಪ್ರಚೋದನೆಯನ್ನು ನೀಡಿತು ಎಂಬುದನ್ನು ಸ್ವತಃ ಹೋರಾಟಗಾರರಾದ ಪಿ. ಎನ್. ಜವರಪ್ಪಗೌಡರು ನಿರೂಪಿಸಿದ್ದಾರೆ. ತಾವು ಕುವೆಂಪು ಸಾಹಿತ್ಯವನ್ನು ಬಳಸಿಕೊಂಡು ಹೇಗೆ ಜನರನ್ನು ಬಡಿದೆಬ್ಬಿಸುತ್ತಿದ್ದರೆಂಬುದನ್ನು ರೋಮಾಂಚಕಾರಿಯಾಗಿ ನಿರೂಪಿಸಿದ್ದಾರೆ. ಇದು ಕುವೆಂಪು ಸಾಹಿತ್ಯ ಆ ಕಾಲಕ್ಕೆ ಎಷ್ಟರಮಟ್ಟಿಗೆ ಜನತೆಯನ್ನು ಮುಟ್ಟಿತು, ತಟ್ಟಿತು ಮತ್ತು ಎಚ್ಚರಿಸಿತು ಎಂಬುದಕ್ಕೆ ಸಾಕ್ಷಿ. ಕುವೆಂಪು ಸಾಹಿತ್ಯ ಸ್ವಾತಂತ್ರ್ಯ ಹೋರಾಟದಲ್ಲಿ ನೀಡಿದ ಪ್ರಚೋದನೆಯ ಬಗ್ಗೆ ಇನ್ನೂ ಹಲವಾರು ಲೇಖನಗಳು ಬರಬೇಕು. ಸ್ವಾತಂತ್ರ್ಯ ಕಿಡಿಯನ್ನು ದೀಪ್ತಿಗೊಳಿಸಿದ್ದು ಮಾತ್ರವೇ ಅಲ್ಲ ಸಮಾಜ ಸುಧಾರಣೆಯಲ್ಲಿಯೂ ಆ ಸಾಹಿತ್ಯ ಸಾಕಷ್ಟು ಪರಿಣಾಮ ಬೀರಿತೆಂದು ಲೇಖಕರು ಹೇಳುತ್ತಾರೆ. ಕುವೆಂಪು ಸಾಹಿತ್ಯ ಸಾಮಾನ್ಯ ಜನತೆಯನ್ನೂ ಮುಟ್ಟಿದೆ, ಮುಟ್ಟುತ್ತೆ ಮತ್ತು ಮುಟ್ಟುತ್ತದೆ ಎಂಬುದಕ್ಕೆ ಇದಕ್ಕಿನ್ನ ಹೆಚ್ಚಿನ ಸಾಕ್ಷಿ ಬೇಕೆ? ಕುವೆಂಪು ಅವರದು ಸಂಸ್ಕೃತ ಭೂಯಿಷ್ಠವಾದ, ಜನತೆಯಿಂದ ದೂರವಾದ ಪ್ರೌಢ ಶೈಲಿ ಎಂದು ಮೊದಲಾಗಿ ಹೇಳುವ ವಿಮರ್ಶಕರ ನಾಲಿಗೆಗೆ ಇನ್ನಾದರೂ ಬೀಗ ಬಿದ್ದೀತೆ?

'ಕುವೆಂಪು ಕಾದಂಬರಿಗಳಲ್ಲಿ ಜನಜೀವನ' ಲೇಖನದಲ್ಲಿ ಮು. ಶಿವನಂಜಯ್ಯ ಅವರು ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಬಂದಿರುವ ಮಲೆನಾಡಿನ ಜನಜೀವನದ ಶ್ರೀಮಂತ ಚಿತ್ರ ಕಾದಂಬರಿಗಳ ಅಂಗವಾಗಿ, ಅನಿವಾರ್ಯವಾಗಿ, ಕಳೆಯಾಗಿ ಹೇಗೆ ಬಂದಿದೆಯೆಂಬುದನ್ನು ನಿರೂಪಿಸಿದ್ದಾರೆ. ಲೇಖನ ಇನ್ನೂ ವಿಸ್ತಾರವಾಗಬೇಕಿತ್ತು ಎನಿಸುತ್ತದೆ. 'ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀ' ಲೇಖನದಲ್ಲಿ ಎಚ್. ಬಿ. ಯಶೋಧ ಅವರು ಎರಡೂ ಕಾದಂಬರಿ

ಗಳ ಎಲ್ಲ ಸ್ತ್ರೀ ಪಾತ್ರಗಳ ಬಗ್ಗೆಯೂ ವಿಮರ್ಶಾತ್ಮಕವಾದ ವಿವೇಚನೆಯನ್ನು ಮಾಡಿ ಆ ಕಾದಂಬರಿಗಳ ಕಥಾವಸ್ತುವಿನ ಕಾಲದಲ್ಲಿ ಸ್ತ್ರೀಯ ಸ್ಥಾನಮಾನ ಎಂಥದಿತ್ತೆಂಬುದನ್ನು ಹೇಳಿದ್ದಾರೆ. ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಬರುವ ಮಕ್ಕಳ ಪಾತ್ರಗಳ ಸರಸ ನಿರೂಪಣೆ ನಂ. ತಪಸ್ವೀ ಕುಮಾರ್ ಅವರ 'ಕುವೆಂಪು ಕಾದಂಬರಿಗಳಲ್ಲಿ ಮಕ್ಕಳ ಪಾತ್ರ' ಲೇಖನದಲ್ಲಿದೆ.

ಕೆ. ಆರ್. ಶೇಷಗಿರಿ ಅವರು 'ಕುವೆಂಪು ಚಿತ್ರಿಸಿದ ಏಕಲವ್ಯ'ದಲ್ಲಿ ಮಹಾಭಾರತದಲ್ಲಿ ಕಿರು ಹನಿಯಾಗಿರುವ ಏಕಲವ್ಯನ ಪ್ರಸಂಗವನ್ನು ವಸ್ತುವಾಗುಳ್ಳ Purpose, ಹೆಬ್ಬೆರಳು, ಏಕಲವ್ಯ ಮತ್ತು ಬೆರಳ್‌ಗೆ ಕೊರಳ್ ನಾಟಕಗಳಲ್ಲಿ ಕುವೆಂಪುರವರ ಬೆರಳ್‌ಗೆ ಕೊರಳ್ ತನ್ನ ದರ್ಶನದಿಂದ ಉಳಿದ ನಾಟಕಗಳಿಗೆ ಹೇಗೆ ಮಿಗಿಲಾಗಿದೆ ಎಂಬುದನ್ನು ವಿವರಿಸಿದ್ದಾರೆ. 'ಹೂವಯ್ಯನ ಪಾತ್ರ ಮತ್ತು ವಸ್ತು ನಿಷ್ಠತೆಯ ಪ್ರಶ್ನೆ' ಎಂಬ ಲೇಖನದಲ್ಲಿ ಎನ್. ಎಸ್. ತಾರಾನಾಥ್ ಅವರು ಹೂವಯ್ಯನ ಪಾತ್ರಕ್ಕೆ ಹೆಚ್ಚು ಒತ್ತುಕೊಟ್ಟು ಆದರ್ಶೀಕರಿಸಿದುದರಿಂದ ಆ ಪಾತ್ರದಲ್ಲಿ ವಸ್ತು ನಿಷ್ಠತೆಯಿಲ್ಲ ಎಂಬ ವಿಮರ್ಶಕರ ಅಭಿಪ್ರಾಯವನ್ನು ನಿರಾಕರಿಸಿ ಹೂವಯ್ಯ ಒಮ್ಮೆಲೆ ಆ ಎತ್ತರಕ್ಕೆ ಏರಿದವನಲ್ಲ ಹಂತ ಹಂತವಾಗಿ ಏರಿದ್ದಾನೆ ಮತ್ತು ಹಾಗೆ ಏರುವಲ್ಲಿ ಬಂದ ನೋವುಗಳನ್ನು ಸಹಿಸಿದ್ದಾನೆ, ಅಶ್ಲೀಲ ಆಲೋಚನೆಗಳು ಬಂದಾಗ ಸಂಯಮದಿಂದ ಎಚ್ಚರದಿಂದ ಅದರಿಂದ ಪಾರಾಗಿದ್ದಾನೆ ಎಂದು ಹೇಳಿದ್ದಾರೆ. "'ಮಲೆಗಳಲ್ಲಿ ಮದುಮಗಳು'-ತಂತ್ರ-ನಾಯಿಗುತ್ತಿ" ಲೇಖನದಲ್ಲಿ ಎಸ್. ಶ್ರೀಧರಮೂರ್ತಿ ಅವರು ಕಥಾವಲಯದೊಳಕ್ಕೆ ಪ್ರವೇಶಿಸುತ್ತಿದ್ದಂತೆಯೆ ಕಂಡುಬರುವ ಗುತ್ತಿ, ಭಿನ್ನವ್ಯಕ್ತಿಗಳ ನಡುವಿನ ಕೊಂಡಿಯಾಗುವ ಗುತ್ತಿ, ಹೊಸ ಪರಿಸರದ ಪ್ರವೇಶಕ್ಕೆ ಮುಂದಾಗುವ ಗುತ್ತಿ, ಕಥಾಕ್ರಿಯೆಯ ಚಾಲನೆಗೆ ಚುಂಬಕ ಕಿಡಿಯಾಗುವ ಗುತ್ತಿ, ಕಥಾ ಕ್ರಿಯೆ ನಡೆವ ಎಲ್ಲ ವಲಯಕ್ಕೂ ಕಾಲಿಡುವ ಗುತ್ತಿ (ಚಿನ್ನಮ್ಮನ ಹೂವಳ್ಳಿಯ ಹೊರತಾಗಿ) ಕಾದಂಬರಿಯ ಕೇಂದ್ರ ಪ್ರಜ್ಞೆಯಲ್ಲ ಅಥವಾ ಪ್ರಧಾನ ಪಾತ್ರವಲ್ಲ ಎಂದು ಹೇಳಿ ಇಂಥ ಒಂದು ವಿಶಿಷ್ಟವೂ ಅನನ್ಯಾನುಕರಣವೂ ಆದ ತಂತ್ರ ಈ ಕಾದಂಬರಿಯಲ್ಲಿರುವುದನ್ನು ತೋರಿಸಿದ್ದಾರೆ. 'ಕುವೆಂಪು ಕಂಡ ಆಂಜನೇಯ' ಲೇಖನದಲ್ಲಿ ಹ. ಕ. ರಾಜೇಗೌಡರು ಹಿಂದಿನ ರಾಮಾಯಣಗಳಲ್ಲಿ ಕೇವಲ ಕಪಿಯಾಗಿದ್ದ ಆಂಜನೇಯ ಕುವೆಂಪು ಅವರ ರಾಮಾಯಣ ದರ್ಶನಂನಲ್ಲಿ ಮಹಾಮಾನ್ಯನೂ ದೇವಮಾನ್ಯನೂ ಆಗಿರುವುದನ್ನು ಶ್ರೀರಾಮ ಸಂದರ್ಶನದಿಂದ ಸೀತಾದರ್ಶನದವರೆಗಿನ ಮೂರು ಘಟ್ಟಗಳಲ್ಲಿ ಗುರುತಿಸಿದ್ದಾರೆ. "'ಶ್ರೀರಾಮಾಯಣ ದರ್ಶನ'ದಲ್ಲಿ ಸಂಪಾತಿಯ ಚಿತ್ರಣ"ದಲ್ಲಿ ಟಿ. ಎನ್. ನಾಗರತ್ನ ಅವರು ವಾಲ್ಮೀಕಿ ರಾಮಾಯಣದ ಸಂಪಾತಿಯ ಕಥಾಭಾಗದಲ್ಲಿ ಸಪ್ತಯೋಜನದ ಫಣಿ ಮತ್ತು ತಿಮಿಂಗಿಲದ ಪ್ರಸಂಗ ಇಲ್ಲದಿರುವುದನ್ನೂ ಶ್ರೀ ರಾಮಾಯಣ ದರ್ಶನದಲ್ಲಿ ಈ ಪ್ರಸಂಗವಿದ್ದು ಅದು ರಾವಣನ ಪಾತ್ರಕ್ಕೆ ಪ್ರತಿಮೆಯೂ ಆಗಿರುವುದನ್ನು ವಿವರಿಸಿದ್ದಾರೆ. "'ಶ್ರೀ ರಾಮಾಯಣ ದರ್ಶನ'ದಲ್ಲಿ ಮಂಡೋದರಿ" ಲೇಖನದಲ್ಲಿ ದೇ. ಜವರೇಗೌಡರು ಪಂಚ ಪತಿವ್ರತೆ ಯರಲ್ಲೊಬ್ಬಳೆಂದು ಪರಿಗಣಿತಳಾದ ಮಂಡೋದರಿಯ ಪಾತ್ರ ವಾಲ್ಮೀಕಿ ರಾಮಾಯಣದಲ್ಲಿ ಗ್ರಾಮೀಣ ಮುಗ್ಧೆಯಂತೆ ಕಂಡುಬಂದು, ಶ್ರೀರಾಮಚರಿತ ಮಾನಸದಲ್ಲಿ ರಾಮಭಕ್ತೆ, ಶುದ್ಧಾತ್ಮೆ, ಸುಸಂಸ್ಕೃತೆಯಾಗಿ ಕಾಣುವ ಮಂಡೋದರಿ ಕುವೆಂಪುರವರ ದರ್ಶನ ಪ್ರತಿಭೆಯಿಂದ ಶ್ರೀ ರಾಮಾಯಣ ದರ್ಶನದಲ್ಲಿ ಸದ್ಗೃಹಿಣಿಯಾಗಿ, ಮಹಾಪತಿವ್ರತೆಯಾಗಿ, ತಪಸ್ವಿನಿಯಾಗಿ, ಮಹಾ ಸಾಧಕಿಯಾಗಿ, ಪರಮ ಗುರುವಾಗಿ, ಜಗನ್ಮಾತೆಯ ಪ್ರತಿರೂಪವಾಗಿ, ಸೀತೆಗೆ ಸರಿಗಟ್ಟುವ ಮಹಾ ಸಾಧ್ವಿಯಾಗಿ, ರಾಕ್ಷಸರ ಮುಕ್ತಿಗೆಂತೊ ಅಂತೆಯೆ ಲೋಕಕ್ಷೇಮಕ್ಕೂ ಕಾರಣಳಾಗಿ, ಸದಾಕಾಲ ಸರ್ವರೂ ಆದರಿಸಬಹುದಾದ ಪವಿತ್ರ ವ್ಯಕ್ತಿಯಾಗಿ, ನಾಮಸ್ಮರಣ ಮಾತ್ರದಿಂದಲೇ ಅನನ್ಯ ಪ್ರಭಾವವನ್ನು ಬೀರಬಲ್ಲ ಚೈತನ್ಯ ಶಕ್ತಿಯಾಗಿ, ಪಾಪಿಗಳ ಹೃದಯದಲ್ಲಿಯೂ ಪುಣ್ಯವನ್ನು ಪ್ರಚೋದಿಸುವ ತೇಜಸ್ವಿನಿಯಾಗಿ ರಾರಾಜಿಸುವುದನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ- ತೌಲನಿಕವಾಗಿಯೂ-ತೋರಿಸಿಕೊಟ್ಟಿದ್ದಾರೆ. "ಶ್ರೀ ರಾಮಾಯಣ ದರ್ಶನದ ಸಾಧಕ ರಾವಣ"

ಲೇಖನದಲ್ಲಿ ಎಚ್. ನಂಜೇಗೌಡರು, ಕಾಮ ದೌರ್ಬಲ್ಯವೊಂದರಿಂದ ಕಳೆಗುಂದಿದ್ದ ರಾವಣ ಚೇತನ ಅನೇಕರ ಮತ್ತು ತನ್ನ ತಪಸ್ಸಿನ ನೆರವಿನಿಂದ ರಾಮನನ್ನೂ ಮೀರಿ ಬೆಳೆಯುವುದನ್ನು ಅಪೂರ್ಣ ದಿಂದ ಪೂರ್ಣಕ್ಕೆ, ಅಸತ್ತಿನಿಂದ ಸತ್ತಿಗೆ, ತಮಸ್ಸಿನಿಂದ ಜ್ಯೋತಿಗೆ ಪಯಣ ಬೆಳಸಿ ರಾಮತ್ವ ಕ್ಕೇರುವುದನ್ನು, ರಸಾಯನಿಕ ಕ್ರಿಯೆಯಿಂದ ಇದ್ದಿಲು ವಜ್ರವಾಗುವಂತೆ ರಾವಣ ರಾಮನಲ್ಲಿ ಐಕ್ಯವಾಗುವುದನ್ನು ರಾಮಾಯಣ ಕಾವ್ಯದ ಭಾಗಗಳಿಂದಲೇ ವರ್ಣನಾಮಯವಾಗಿ ನಿರೂಪಿ ಸಿದ್ದಾರೆ.

'ಕುವೆಂಪು ಮತ್ತು ಜಗತ್ ಪ್ರಜ್ಞೆ' ಲೇಖನದಲ್ಲಿ ಎಚ್ಚೆಸ್ಕೆ ಅವರು ಕುವೆಂಪು ದಾರ್ಶನಿಕರೂ ವಿಶ್ವಕವಿಯೂ ಆದ ರವೀಂದ್ರನಾಥ ಟಾಗೂರರಂತೆ ವಿಶ್ವಕವಿ ಅವರ ಪ್ರಜ್ಞೆ ವಿಶ್ವಪ್ರಜ್ಞೆ ಎಂಬು ದನ್ನು ಸವಿವರವಾಗಿ ನಿರೂಪಿಸಿದ್ದಾರೆ. ಕುವೆಂಪುರವರ ಸಾರ್ವಕಾಲೀನ ಪ್ರಜ್ಞೆ ಅವರ ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ನಾಟಕಗಳಲ್ಲಿ ಹೆಚ್ಚೆಂದೂ ಮತ್ತು ಕುವೆಂಪುರವರ ಸಾರ್ವಕಾಲೀನ ಪ್ರಜ್ಞೆಗೆ ಎಲ್ಲೋ ಒಂದೆರಡು ಬಾರಿ ಕಾರ್ಮೋಡಗಳು ಮುತ್ತಿ ಆ ಕಾಂತಿಯನ್ನು ಮಸುಕು ಮಾಡಿರಬಹುದಷ್ಟೇ ಹೊರತು ಅಳಿಸಲಾಗಿಲ್ಲವೆಂದೂ ಎಂ. ವಿ. ಸೀತಾರಾಮಯ್ಯನವರು 'ಕುವೆಂಪು ಸಾಹಿತ್ಯದಲ್ಲಿ ಸಾರ್ವಕಾಲೀನ ಪ್ರಜ್ಞೆ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ಈ ಸಾರ್ವಕಾಲೀನ ಪ್ರಜ್ಞೆ ಅಥವಾ ದರ್ಶನಕ್ಕೆ ಹಿನ್ನೆಲೆಯಾಗಿ ಸಂಕ್ಷಿಪ್ತವಾಗಿಯಾದರೂ ಕವಿಯ ಜೀವನ ಚರಿತ್ರೆಯ ಮೇಲೆ ಕಣ್ಣಾಡಿಸಿದ್ದಾರೆ. ಬಿ. ಎಸ್. ನಾಗರಾಜಭಟ್ ಅವರು 'ಕುವೆಂಪು ನಾಟಕಗಳಲ್ಲಿ ಸಮ ಕಾಲೀನ ಪ್ರಜ್ಞೆ' ಎಂಬ ಲೇಖನದಲ್ಲಿ ಕುವೆಂಪು ಅವರ ನಾಟಕಗಳಲ್ಲಿನ ಸಮಕಾಲೀನ ಪ್ರಜ್ಞೆ ಸಾಕ್ಷಾ ಅನುಭವದಿಂದ ಮೂಡಿದುವು ಎಂಬುದನ್ನು ನಿರೂಪಿಸಿದ್ದಾರೆ. 'ಕುವೆಂಪು ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ'ಯನ್ನು ವಿವೇಚಿಸುತ್ತಾ ಡಿ. ಎಸ್. ಜಯಪ್ಪ ಗೌಡ ಅವರು ಕುವೆಂಪು ಅವರು ಐತಿಹಾಸಿಕ ದೃಷ್ಟಿಯಿಂದಲೂ, ವರ್ಗದೃಷ್ಟಿಯಿಂದಲೂ ತಮ್ಮ ಕಾದಂಬರಿಗಳಲ್ಲಿ ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ತಂದು ಸಂಕ್ರಮಣಾವಸ್ಥೆಯಲ್ಲಿದ್ದ ಅಂದಿನ ಸಾಮಾಜದ ಚಿತ್ರವನ್ನು ಕೊಟ್ಟಿರುವುದನ್ನು ವಿವರಿಸಿದ್ದಾರೆ. 'ಕುವೆಂಪು ಅವರ ಕಾದಂಬರಿಗಳಲ್ಲಿ ಬ್ರಾಹ್ಮಣ ಮತ್ತು ಶೂದ್ರ ಪ್ರಜ್ಞೆ'ಯ ವಾದವನ್ನು ಎತ್ತಿಕೊಂಡ ಸದಾಶಿವ ಎಣ್ಣೆಹೊಳೆ ಅವರು ಕುವೆಂಪು ಅವರು ಬ್ರಾಹ್ಮಣ ದ್ವೇಷಿ ಎಂಬ ಅಪಪ್ರಚಾರಕ್ಕೀಡಾಗಿರುವುದನ್ನು ಸಕಾರಣವಾಗಿ ನಿರಾಕರಿಸುತ್ತಾ ಅವರದು ಪುರೋಹಿತ ಶಾಹಿಯ ವಿರೋಧವೇ ಹೊರತು ಬ್ರಾಹ್ಮಣ ವಿರೋಧವಲ್ಲ ಎಂಬುದನ್ನು ಅವರ ಎರಡು ಕಾದಂಬರಿಗಳ ಪಾತ್ರಗಳಾದ ವೆಂಕಪ್ಪಯ್ಯ ಜೋಯಿಸ ಮತ್ತು ಮಂಜಭಟ್ಟರ ಪಾತ್ರಗಳಿಂದ ಸಾಬೀತುಗೊಳಿಸಿ ಶೂದ್ರರಲ್ಲಿಯೂ ಅನೇಕ ವರ್ಗಗಳಿರುವುದನ್ನು ಕಾದಂಬರಿಗಳ ಪಾತ್ರಗಳಿಂದಲೇ ತೋರಿಸಿ, ಶೂದ್ರರಿಗೆ ಮಾಂಸ, ಕಳ್ಳು ಇವುಗಳ ಮೇಲಿನ ವ್ಯಸನವನ್ನು ಮತ್ತು ಶೂದ್ರರು ಹೇಗೆ ಮಣ್ಣಿಗೆ ಹತ್ತಿರವಾಗಿದ್ದಾರೆಂಬುದನ್ನು ಚಿತ್ರಿಸಿ ಈ ಎಲ್ಲವನ್ನೂ ಕುವೆಂಪು ಅವರು ವಾಸ್ತವಿಕ ಪ್ರಜ್ಞೆಯಿಂದ ನಿರ್ಮತ್ಸರ ಭಾವದಿಂದ ತಮ್ಮ ಕಾದಂಬರಿಗಳಲ್ಲಿ ನಿರೂಪಿಸಿದ್ದಾರೆಂಬುದನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ.

'ಕುವೆಂಪು ಕಾವ್ಯದಲ್ಲಿ ವೈಚಾರಿಕತೆ' ಯನ್ನು ಹುಡುಕಹೊರಟ ಕೆ. ಎಸ್. ನಿಸಾರ್ ಅಹಮದ್ ಅವರು ನವೋದಯ ಕಾವ್ಯಗಳಲ್ಲಿ ವೈಚಾರಿಕತೆ ಹೆಚ್ಚಾಗಿ ಕಂಡು ಬರುತ್ತಿರಲಿಲ್ಲವೆಂದೂ ಆದರೂ ಕುವೆಂಪು ಅವರ ಕವನಗಳಲ್ಲಿ ವೈಚಾರಿಕತೆಯಿದೆಯೆಂದೂ ಕೆಲವು ಕಡೆ ಅವರ ನಿಲುವು ವಿರೋಧಾ ಭಾಸದಂತೆ ಕಾಣುತ್ತದೆಂದೂ ಹೇಳಿದ್ದಾರೆ. ಕುವೆಂಪು ಕವನಗಳಲ್ಲಿ ವೈಚಾರಿಕತೆಯನ್ನು ಹುಡುಕ ಹೊರಟ ನಿಸ್ಸಾರರು ಕೇವಲ ಒಂದೆರಡು ಕವನಗಳಿಗೇ ತಮ್ಮ ಪರಿಮಿತಿಯನ್ನು ಹಾಕಿಕೊಳ್ಳದಿದ್ದರೆ ಅವರ ಲೇಖನ ಇನ್ನೂ ಪೂರ್ಣವಾಗಿರುತ್ತಿತ್ತು. 'ಕುವೆಂಪು ಸಾಹಿತ್ಯ ಮತ್ತು ನವ್ಯ ವಿಮರ್ಶೆ' ಯನ್ನು ಕೈಗೆತ್ತಿಕೊಂಡ ಎನ್. ಬೋರಲಿಂಗಯ್ಯ ಅವರು ನವ್ಯ ವಿಮರ್ಶಕರಲ್ಲಿ ಹೆಸರಾಂತರಾದ ಕೀರ್ತಿನಾಥ ಕುರ್ತಕೋಟಿ, ಯು. ಆರ್. ಅನಂತಮೂರ್ತಿ, ಎಂ. ಜಿ. ಕೆ. ಮತ್ತು ಜಿ. ಎಚ್. ನಾಯಕ್ ಅವರುಗಳು ಕುವೆಂಪು ಸಾಹಿತ್ಯವನ್ನು ಕಾಮಾಲೆಗಣ್ಣಿನಿಂದ ಕಂಡಿರುವುದನ್ನೂ ವಿಧಿಯಿಲ್ಲದೆ ಕುವೆಂಪು

ಹೆಸರನ್ನು ಪ್ರಸ್ತಾಪಿಸಲೇಬೇಕಾಗಿ ಬಂದಾಗ ತೇಲಿಸಿರುವುದನ್ನೂ ಸಾಧಾರಪಾಗಿ ತೋರಿಸಿ ಅವರ ನಿಜವಾದ ಬಣ್ಣವನ್ನು ಬಯಲುಮಾಡಿ ಯಾವ ಯಾವ ವಿಮರ್ಶಕರ ಯೋಗ್ಯತೆ ಏನು ಎಂಬುದನ್ನು ತೋರಿದ್ದಾರೆ. ಹಾಗೆಯೆ ನವ್ಯಪಂಥಕ್ಕೆ ಸೇರಿದ್ದ ಲಂಕೇಶ್, ತೇಜಸ್ವಿ ಮತ್ತು ಚಂದ್ರಶೇಖರ ಪಾಟೀಲರು ಮತ್ತೆ ಕುವೆಂಪು ಸಾಹಿತ್ಯದ ಮೌಲ್ಯವನ್ನು ಕಂಡುಕೊಳ್ಳುತ್ತಿರುವುದಕ್ಕೆ ಹರ್ಷಿಸಿದ್ದಾರೆ. ನಿರ್ದುಷ್ಟವಾದ ಬರವಣಿಗೆಗೆ ಹೆಸರಾದ ಬೋರಲಿಂಗಯ್ಯ ಅವರು ಸಮರ್ಥವಾಗಿ ತಮ್ಮ ವಾದವನ್ನು ಮಂಡಿಸುವುದರ ಜೊತೆಗೆ ಎದುರಾಳಿಗಳ ವಾದವನ್ನು ಖಂಡಿಸಿ ಅವರ ಸೋಗಲಾಡಿತನ ವನ್ನು ಬಯಲು ಮಾಡಿದ್ದಾರೆ. 'ಕುವೆಂಪು ಅವರ ಕಾದಂಬರಿಗಳಲ್ಲಿ ವೈಚಾರಿಕತೆ'ಯ ವಿಚಾರ ಮಾಡುತ್ತ ಸುಧಾಕರ ಅವರು "ಕಾನೂರು ಹೆಗ್ಗಡಿತಿಯಲ್ಲಿ ಹೂವಯ್ಯನ ಪಾತ್ರದ ಮೂಲಕ ವೈಚಾರಿಕತೆಯನ್ನು ತಂದು ಜೋಡಿಸುವ ಪ್ರಯತ್ನವೇನೋ ಇದೆ. ಆದರೆ ಅದು ಈ ಬದುಕಿಗೆ ಹೊರತಾದದ್ದು. ಅದು ಪೂರ್ತಿ ಅಸಹಜವಾಗಿ ಇಡಿಯ ಪಾತ್ರದ ಜೀವಂತಿಕವನ್ನೇ ಅಲ್ಲಗಳೆದಿದೆ. ಕಲಾತ್ಮಕವಾಗಿ ಹೂವಯ್ಯನ ಪಾತ್ರ ಹಾಗೂ ಅವನ ಭಾವಾತಿರೇಕದ ಆದರ್ಶವಾದ ಯಶಸ್ವಿ ಯಾಗಿಲ್ಲವೆಂಬುದು ಈಗಾಗಲೇ ಜಗಜ್ಜಾಹೀರಾಗಿಬಿಟ್ಟಿದೆ." ಎಂಬ ಗಿರಡ್ಡಿ ಗೋವಿಂದರಾಜರ ವಿಮರ್ಶೆಯನ್ನು ತೀವ್ರವಾಗಿ ವಿರೋಧಿಸುತ್ತಾ ಯೋಗ್ಯತೆಗೆ ತಕ್ಕ ಸ್ಥಾನವನ್ನು ಕೊಡದ ವಿಮರ್ಶಕ ರಾದ ಎಂ. ಜಿ. ಕೆ. ಮತ್ತು ಜಿ. ಎಚ್. ನಾಯಕರನ್ನು ತರಾಟೆಗೆ ತೆಗೆದುಕೊಂಡು ಕುವೆಂಪು ಅವರ ಕಾದಂಬರಿಗಳಲ್ಲಿರುವುದು ಶುದ್ಧ ವೈಚಾರಿಕತೆ ಎಂಬುದನ್ನು ಅಲ್ಲಿಯ ಪ್ರಸಂಗಗಳಿಂದಲೇ ತೋರಿಸಿ ಕೊಟ್ಟಿದ್ದಾರೆ. ಕುವೆಂಪು ಅವರದು ಪುರೋಹಿತಶಾಹಿಯ ವಿರೋಧವೇ ಹೊರತು ಬ್ರಾಹ್ಮಣ ವಿರೋಧವಲ್ಲ. ಮೌಢ್ಯ, ಅಜ್ಞಾನ ಬ್ರಾಹ್ಮಣರಲ್ಲಿರಲಿ, ಸ್ವಕೀಯರಲ್ಲಿರಲಿ ಅದನ್ನು ಕುವೆಂಪು ವಿರೋಧಿಸುತ್ತಾರೆ. ಅವರ ಈ ಗುಣವನ್ನು ಅವರ ಕಾದಂಬರಿಗಳಲ್ಲಿನ ಪಾತ್ರಗಳಿಂದಲೇ ಕಾಣ ಬಹುದು. ಇದನ್ನು ಸುಧಾಕರರು ಬೇಕೆಂದೇ ನಿದ್ದೆನಟಿಸುವ ನವ್ಯ ವಿಮರ್ಶಕರಿಗೆ ಎಚ್ಚರಿಸಿ ಹೇಳಿದ್ದಾರೆ ಈ ಲೇಖನದಲ್ಲಿ.

"'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಮನೋವೈಜ್ಞಾನಿಕ ಹೊಳಹುಗಳು" ಎಂಬ ಲೇಖನದಲ್ಲಿ ಎ. ಎಸ್. ಧರಣೇಂದ್ರಯ್ಯ ಅವರು ಶ್ರೀ ರಾಮಾಯಣದರ್ಶನಂ ಕಾವ್ಯದಲ್ಲಿನ ಮನೋವೈಜ್ಞಾನಿಕ, ಪರಾಮನೋವೈಜ್ಞಾನಿಕ ಪ್ರಸಂಗಗಳನ್ನೂ, ಅತೀಂದ್ರಿಯಾನುಭವಗಳನ್ನೂ ವಿವರಿಸಿದ್ದಾರೆ. ಮಂಥರೆಯ ಕುಟಿಲ ಕಾರ್ಯ, ದಶರಥ ಮತ್ತು ಶ್ರೀರಾಮರ ಮನೋವೈಕಲ್ಯ ಅಥವಾ ಚಿತ್ತಭ್ರಮೆಗೆ ಮನಶ್ಶಾಸ್ತ್ರದ ಸೂಕ್ತ ವಿವರಣೆಗಳನ್ನು ನೀಡಿದ್ದಾರೆ. ಇನ್ನೂ ಅನೇಕ ಘಟನೆಗಳ ಮೇಲೂ ಇಂದ್ರಿಯಾನುಭವ, ಅತೀಂದ್ರಿಯಾನುಭವ ಮುಂತಾದುವುಗಳ ಮೇಲೆ ಮನಶ್ಶಾಸ್ತ್ರದ ರೀತಿ ವಿವರಣೆಯನ್ನು ಕೊಟ್ಟಿದ್ದಾರೆ. ಇದು ಒಂದು ಸಾರ್ಥಕವಾದ ಪ್ರೌಢಪ್ರಬಂಧ. "'ಶ್ರೀ ರಾಮಾಯಣ ದರ್ಶನ'ದಲ್ಲಿ ವೈಜ್ಞಾನಿಕಾಂಶಗಳು" ಎಂಬ ಲೇಖನದಲ್ಲಿ ಜಿ. ಟಿ. ನಾರಾಯಣ ರಾವ್ ಅವರು 'ಶ್ರೀ ರಾಮಾಯಣ ದರ್ಶನಂ' ದಲ್ಲಿ ವಿಪುಲವಾಗಿರುವ ವೈಜ್ಞಾನಿಕಾಂಶಗಳನ್ನು ಎತ್ತಿ ತೋರಿದ್ದಾರೆ. ಅವರು ತೋರಿರುವ ಅಂಶಗಳು ಅಥವಾ ಉಪಮೆಗಳಲ್ಲಿ ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದವು ಹೇರಳವಾಗಿವೆ ಉಳಿದವು ವಿರಳವಾಗಿವೆ. ನಾರಾಯಣರಾವ್ ಅವರ ವಿವರಣೆ ಯಿಂದ ಕೆಲವೆಡೆ ಅರ್ಥದ ಸ್ವಾರಸ್ಯ ಮತ್ತಷ್ಟು ಹೆಚ್ಚುತ್ತದೆ. ಮತ್ತು ಕವಿಯ ದೈತ್ಯ ಪ್ರತಿಭೆ (ವ್ಯುತ್ಪತ್ತಿಯನ್ನು)ಯನ್ನು ಕಂಡು ಮೂಕರಾಗುತ್ತೇವೆ. ಇತಿಹಾಸ ಪುರಾಣಗಳನ್ನು ವಸ್ತುವಾಗುಳ್ಳ ಕಾವ್ಯಗಳಲ್ಲಿ ವೈಜ್ಞಾನಿಕಾಂಶಗಳನ್ನು ತರುವುದು ಸ್ವಲ್ಪ ಕಷ್ಟವಾದರೂ ಅದನ್ನು ಸಹಜವೆಂಬಂತೆ ಲೀಲಾಜಾಲವಾಗಿ ಕಾವ್ಯದುದ್ದಕ್ಕೂ ತಂದು ಕವಿ ತಮ್ಮ ವಿಜ್ಞಾನದ ಅರಿವನ್ನೂ ಸಮಕಾಲೀನ ಪ್ರಜ್ಞೆಯನ್ನೂ ಬೆಳಗಿರುವುದನ್ನು ಲೇಖಕರು ತೋರಿಸಿಕೊಟ್ಟಿದ್ದಾರೆ.

ರನ್ನನ ಗದಾಯುದ್ಧವನ್ನು ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ನಾಟಕವಾಗಿ ರೂಪಾಂ ತರಿಸಿದಂತೆ ಲಕ್ಷ್ಮೀಶನಲ್ಲಿದ್ದ ಕಥಾವಸ್ತುವನ್ನು ಕುವೆಂಪುರವರು ಚಂದ್ರಹಾಸ ನಾಟಕವಾಗಿ ಮಾಡಿದ್ದಾ ರೆಂದು ಡಿ. ವಿಜಯ ಅವರು ಹೇಳಿ ಹಾಗೆ ಮಾಡುವಾಗ ಅನೇಕ ಸೂಕ್ತಬದಲಾವಣೆಗಳನ್ನು ಮಾಡಿ

ಸ್ವಾರಸ್ಯಕರ ಸಂಭಾಷಣೆಗಳನ್ನು ಸೇರಿಸಿ ಸಂವಿಧಾನದಿಂದ ನಾಟಕಕ್ಕೆ ಒಂದು ಅಚ್ಚು ಕಟ್ಟನ್ನು ತಂದು ಕೊಟ್ಟಿರುವುದನ್ನು ತೋರಿದ್ದಾರೆ. 'ಬಿರುಗಾಳಿ ಮತ್ತು ಟೆಂಪೆಸ್ಟ್' ಲೇಖನದಲ್ಲಿ ಕೆ. ವೆಂಕಟ ರಾಮಪ್ಪ ಅವರು ತೌಲನಿಕ ಅಧ್ಯಯನದ ಬದಲು 'ಬಿರುಗಾಳಿ' 'ಟೆಂಪೆಸ್ಟ್' ನಾಟಕದ ರೂಪಾಂತರ ವೆಂದು ಹೇಳಿ ಎರಡು ನಾಟಕಗಳ ವರ್ಣನಾ ವಿವರಣೆಯನ್ನು ಕೊಟ್ಟು ನಾಟಕಕ್ಕೆ ಬಿರುಗಾಳಿ ಎಂಬ ಹೆಸರಿರುವುದನ್ನು ಸಮರ್ಥಿಸಿದ್ದಾರೆ. "ರಕ್ತಾಕ್ಷಿ' ಮತ್ತು 'ಹ್ಯಾಮ್ಲೆಟ್' ಲೇಖನದಲ್ಲಿ ಭಗವಾನ್ ಅವರು 'ರಕ್ತಾಕ್ಷಿ' 'ಹ್ಯಾಮ್ಲೆಟ್' ನಾಟಕದ ಸಂಪೂರ್ಣ ಅನುಕರಣೆಯೂ ಅಲ್ಲ : ಸಂಪೂರ್ಣ ಸ್ವತಂತ್ರ ರಚನೆಯೂ ಅಲ್ಲ. ಅವೆರಡರ ಕಲಬೆರಕೆ. ಆದರಿಂದ ಅದಕ್ಕೆ ಮೂಲಕೃತಿಯ ಸತ್ವ ವಿಲ್ಲ; ಸ್ವಂತ ಸೃಷ್ಟಿಯ ವೈಭವವಿಲ್ಲ. ಎಂದು ಆರಂಭಿಸಿ ಎರಡು ನಾಟಕಗಳಲ್ಲಿರುವ ಪಾತ್ರಗಳ ಸಾಮ್ಯ ವೈಷಮ್ಯಗಳನ್ನು ವಿವರಿಸಿ ಕುವೆಂಪು ಅದಷ್ಟು ಷೇಕ್ಸ್‌ಪಿಯರನನ್ನು ಅನುಸರಿಸಿ ಬರೆಯಲು ಶ್ರಮಪಟ್ಟಿದ್ದರೂ ಮೂಲದ ಸತ್ವವನ್ನು ಸಂಪೂರ್ಣವಾಗಿ ದಕ್ಕಿಸಿಕೊಂಡಿಲ್ಲವೆಂದು ನನ್ನ ಭಾವನೆ" ಎನ್ನುವ ತೀರ್ಮಾನಕ್ಕೆ ಸಕಾರಣವಾಗಿ ಸೋದೋಹರಣವಾಗಿ ಬಂದು" ಕುವೆಂಪು ರವರ 'ರಕ್ತಾಕ್ಷಿ' ಕನ್ನಡ ಇತಿಹಾಸದಿಂದ ಕಥಾವಸ್ತುವನ್ನಾಯ್ದುಕೊಂಡು ಷೇಕ್ಸ್‌ಪಿಯರನ 'ಹ್ಯಾಮ್ಲೆಟ್'ನಾಟಕದ ವಿವರಗಳಲ್ಲಿ ಬರೆಯಲಾಗಿದೆ ಎಂಬ ಕೆ. ಡಿ. ಕುರ್ತಕೋಟಿಯವರ ಅಭಿಪ್ರಾಯಕ್ಕೆ ಆಧಾರವಿಲ್ಲ ವೆಂಬುದನ್ನು ಸಾಧಾರವಾಗಿ ನಿರೂಪಿಸಿದ್ದಾರೆ. ಅನಂತರ ಎರಡು ನಾಟಕಗಳಲ್ಲಿನ ಪ್ರಧಾನ ಮತ್ತು ಗೌಣ ಪಾತ್ರಗಳ ಪರಿಪೇರು, ಎಗ್ಗುತಗ್ಗುಗಳನ್ನು ತೋರಿಸಿ ಷೇಕ್ಸ್‌ಪಿಯರನ ಪಾತ್ರಗಳು ಹೇಗೆ ಮತ್ತು ಏಕೆ ಉತ್ತಮ ಮತ್ತು ಶ್ರೇಷ್ಠ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ನಾಟಕಕಾರರ ಪ್ರಕೃತಿ ಪ್ರೇಮ ನಾಟಕಕ್ಕೆ ಸಹಜವಾಗದೆ, ಅನಿವಾರ್ಯವಾಗದೆ ಮೇಲಿನಿಂದ ತುರುಕಿದಂತಾಗುತ್ತದೆಂಬು ದನ್ನು ತೋರಿಸಿದ್ದಾರೆ. ಒಟ್ಟಿನಲ್ಲಿ ರಕ್ತಾಕ್ಷಿಯ ಬಗೆಗೆ ವಸ್ತು ನಿಷ್ಠ ವಿಮರ್ಶೆಯನ್ನು ಮಾಡಿ "ಇಂಗ್ಲಿಷ್‌ನಲ್ಲಿ ಹ್ಯಾಮ್ಲೆಟ್ ಹುಟ್ಟಿದಾಗ ಅದರ ಸಾಹಿತ್ಯವು ಅತ್ಯುನ್ನತ ಶಿಖರವನ್ನೇರಿತು. 'ರಕ್ತಾಕ್ಷಿ'ಯಂಥ ಶ್ಲಾಘ್ಯ ಸ್ವತಂತ್ರ ಐತಿಹಾಸಕ ನಾಟಕವು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹುಟ್ಟಿ ದಾಗ ಅದರ ಮಟ್ಟವು ಬಹು ಎತ್ತರಕ್ಕೆ ಏರಿರುವುದೆನ್ನುವುದರಲ್ಲಿ ಸಂದೇಹವಿಲ್ಲ' ಎಂಬ ಎ.ಆರ್.ಕೃ. ಅವರ ಅಭಿಪ್ರಾಯವನ್ನು ಅಸಮರ್ಪಕ ಎಂದಿದ್ದಾರೆ. ವಿಮರ್ಶಕರ ಮಾತು ಸತ್ಯ. ಆದರೂ 'ರಕ್ತಾಕ್ಷಿ'ನಾಟಕ ಬಂದ ಕಾಲವನ್ನು ಗಮನದಲ್ಲಿಟ್ಟುಕೊಂಡಾಗ ಆ ಮಾತಿನ ಅಗತ್ಯ ಕಂಡುಬರುತ್ತದೆ ಅಲ್ಲದೆ ಆ ಮಾತನ್ನು ವಿಮರ್ಶೆ ಎನ್ನುವ ಬದಲು ಶಿಷ್ಯನಿಗೆ ಕೊಟ್ಟ ಪ್ರೋತ್ಸಾಹದ ನುಡಿ ಎಂದು ಗ್ರಹಿಸಬೇಕಾಗುತ್ತದೆ. 'ಕುವೆಂಪು ಮತ್ತು ರಿಚರ್ಡ್ಸ್' ಎಂಬ ಲೇಖನದಲ್ಲಿ ಡಾ. ಎಚ್. ತಿಪ್ಪೇ ರುದ್ರಸ್ವಾಮಿ ಅವರು ಆಂಗ್ಲ ವಿಮರ್ಶಕ ಐ. ಎ. ರಿಚರ್ಡ್ಸ್‌ನನ್ನೂ ಮೀರಿದ ಪೂರ್ಣದೃಷ್ಟಿ ಕುವೆಂಪು ಅವರದೆಂಬುದನ್ನ ನಿರೂಪಿಸಿದ್ದಾರೆ. 'ಕುವೆಂಪು ಮತ್ತು ಹೋಮರ್' ಲೇಖನದಲ್ಲಿ ಎಲ್. ಎಸ್. ಶೇಷಗಿರಿರಾವ್ ಅವರು ಇಲಿಯಡ್ ಕಾವ್ಯದ ಉದ್ದಕ್ಕೂ ವಿಷಾದದ ಶ್ರುತಿಯಿದ್ದರೆ ರಾಮಯಣದರ್ಶನಂ, ಕಾವ್ಯದ ಉದ್ದಕ್ಕೂ ಅನುಕಂಪವಿರುವುದನ್ನೂ, ಇಬ್ಬರು ಕವಿಗಳ ಉದ್ದೇಶ ಬೇರೆಬೇರೆಯಾಗಿರುವುದನ್ನೂ, ಈ ಕಾವ್ಯಗಳಿಗಿದ್ದ ಹಿನ್ನೆಲೆ, ಇತಿಹಾಸ, ದರ್ಶನ ಬೇರೆ ಆದ್ದರಿಂದ ಎರಡನ್ನೂ ತೂಗಿ ನೋಡುವುದು ಸಾಧುವಲ್ಲ ಎಂದು ಹೇಳಿ ಹೋಮರನ ಮಹೋಪಮೆಗಳು ಮತ್ತು ಕಾವ್ಯಮಧ್ಯದಲ್ಲಿ ಸ್ಫೂರ್ತಿಗಾಗಿ ಕಾವ್ಯದೇವಿಯನ್ನು ಸ್ತುತಿಸುವುದರಿಂದ ಕುವೆಂಪು ಪ್ರಭಾವಿತ ರಾಗಿ ತಮ್ಮ ಕಾವ್ಯದಲ್ಲಿಯೂ ಮಹೋಪಮೆಗಳನ್ನು ತಂದು ಕಾವ್ಯಮಧ್ಯದಲ್ಲಿ ಸರಸ್ವತಿಯನ್ನು ಸ್ತುತಿಸಿರುವುದನ್ನು ಗುರುತಿಸಿದ್ದಾರೆ. 'ಕುವೆಂಪು ಮತ್ತು ಫಿರ್ದೌಸಿ' ಲೇಖನದಲ್ಲಿ ಎಂ. ವಿ. ಚಿತ್ರಲಿಂಗಯ್ಯ ಅವರು ಸುಮಾರು ಸಾವಿರವರ್ಷಗಳಷ್ಟು ಹಿಂದಿನ ಇರಾನಿನ ಕವಿ ಫಿರ್ದೌಸಿಯನ್ನು ಕುವೆಂಪು ಅವರೊಡನೆ ಹೋಲಿಸಿ ಅವರಿಬ್ಬರ ಬಾಲ್ಯ ಮತ್ತು ಪಡೆದ ಅನುಭವಗಳು ಹೇಗೆ ಸಮಾನ ವಾಗಿವೆಯೆಂಬುದನ್ನೂ, ಆಯಾದೇಶದ ಪ್ರಾಚೀನ ಕಾವ್ಯಗಳು ಕವಿಗಳ ಮೇಲೆ ಬೀರಿದ ಪ್ರಭಾವ ಹೇಗೆ ಏಕರೀತಿಯಾಗಿದ್ದಿತೆಂಬುದನ್ನೂ ಮತ್ತು ಅವರು ಕಾವ್ಯ ಸೃಷ್ಟಿಯಲ್ಲಿ ತೊಡಗಿದಾಗ ಮೂಲದ ವಸ್ತುವನ್ನು ಎಲ್ಲೆಲ್ಲಿ ಬದಲಾಯಿಸಿಕೊಂಡಿದ್ದಾರೆಂಬುದನ್ನೂ ತೋರಿಸಿದ್ದಾರೆ. ದೃಷ್ಟಿಯಲ್ಲಿ ಹೇಗೆ ಇಬ್ಬರೂ ಭಿನ್ನರೆಂಬುದನ್ನು–ಫಿರ್ದೌಸಿ ಕೀರ್ತಿಪ್ರಿಯ. ಕುವೆಂಪು ಕೀರ್ತಿಯನ್ನು ಶನಿಯೆಂದು ಕರೆ

ದವರು. ಫಿರ್ದೌಸಿಗೆ ಯುದ್ಧದ ಮತ್ತು ಬೇಟೆಯ ಚಿತ್ರಗಳನ್ನು ಕೊಡುವುದೆಂದರೆ ಬಲು ಇಷ್ಟ. ಕುವೆಂಪು ಈ ವಿಷಯದಲ್ಲಿ ಹಿತಮಿತ. ಸಾಂಸಾರಿಕ ಚಿತ್ರಗಳನ್ನು ಇಬ್ಬರೂ ಕೊಡುತ್ತಾರೆ. ಫಿರ್ದೌಸಿ ಭೋಗಪ್ರಿಯ. ಕುವೆಂಪು ಅದಕ್ಕೆ ವಿರುದ್ಧ. ಫಿರ್ದೌಸಿಗೆ ಜ್ಯೋತಿಷ್ಯದಲ್ಲಿ ನಂಬಿಕೆ. ಕುವೆಂಪು ಅವರಿಗೆ ನಂಬಿಕೆಯಿಲ್ಲ. ಸ್ವಪ್ನಗಳನ್ನು ಭವಿಷ್ಯದ ಸಂಕೇತಗಳೆಂದು ಇಬ್ಬರೂ ಬಗೆಯು ತ್ತಾರೆ. ಫಿರ್ದೌಸಿಯದು ರಾಷ್ಟ್ರೀಯ ವಿಚಾರ-ಕುವೆಂಪು ಅವರ ರಾಮಾಯಣದರ್ಶನಂ ಅಲ್ಲಿ ಅದು ಕಾಣುವುದಿಲ್ಲ (ಆದರೆ ಬೇರೆಕಡೆ ಇದೆ).—ವಿವರವಾಗಿ ನಿರೂಪಿಸಿದ್ದಾರೆ. ಕುವೆಂಪು ಅವರ ಅಭ್ಯಾಸದ ವಿಸ್ತಾರ ಫಿರ್ದೌಸಿಗಿಲ್ಲ. ಫಿರ್ದೌಸಿಗೆ ಚರಿತ್ರೆ ಭೂಗೋಳಗಳ ಜ್ಞಾನವಿಲ್ಲ. ಯೋಗದ ಪರಿಚಯ ಆತನಿಗಿಲ್ಲ. ಈ ಕಾರಣಗಳಿಂದಾಗಿ ಫಿರ್ದೌಸಿಯ ಕಾವ್ಯ ಲೌಕಿಕ ಮಟ್ಟದಲ್ಲೇ ನಿಂತರೆ ಕುವೆಂಪು ಅವರ ಕಾವ್ಯ ದಾರ್ಶನಿಕ ಮಟ್ಟಕ್ಕೇರುತ್ತದೆ. ಫಿರ್ದೌಸಿಯ ಕನಸಿನ ಇರಾನ್ ನಿರ್ಮಾಣವಾದುದು ಇತ್ತೀಚೆಗೆ. ಕುವೆಂಪು ಅವರ ಕನಸಿನ ಕರ್ಣಾಟಕ ಅವರೆದುರಿಗೇ ಸಿದ್ಧಿಸಿದೆ. ಅವನಿಗೆ ಸತ್ತಮೇಲೆ ಸ್ಮಾರಕ, ಇವರಿಗೆ ಬದುಕಿದ್ದಾಗಲೆ ಸನ್ಮಾನ. ಹೀಗೆ ಇಬ್ಬರಲ್ಲೂ ಇರುವ ಹೋಲಿಕೆ ವೈಷಮ್ಯಗಳನ್ನು ಅತಿ ವಿವರವಾಗಿ ಚಿತ್ರಲಿಂಗಯ್ಯ ನಿರೂಪಿಸಿದ್ದಾರೆ. ಎಚ್. ಎಚ್. ಅಣ್ಣಯ್ಯಗೌಡರು 'ಕುವೆಂಪು ಮತ್ತು ಟ್ಯಾಗೂರ್' ಲೇಖನದಲ್ಲಿ ಇಬ್ಬರಲ್ಲಿರುವ ಸಾಮ್ಯ ವೈಷಮ್ಯಗಳನ್ನು ಮತ್ತು ಅವರು ತಮ್ಮ ಕೃತಿಗಳಿಗೆ ಪಡೆದ ಸ್ಫೂರ್ತಿ ಪ್ರೇರಣೆಗಳನ್ನು ಚಿತ್ರಿಸಿದ್ದಾರೆ. 'ಕುವೆಂಪು ಮತ್ತು ವ್ಯಾಸ' ಲೇಖನದಲ್ಲಿ ಎಚ್. ಎಂ. ಶಂಕರನಾರಾಯಣರಾವ್ ಅವರು 'ಶ್ಮಶಾನ ಕುರುಕ್ಷೇತ್ರ', 'ಬೆರಳ್‌ಗೆ ಕೊರಳ್', 'ಯಮನ ಸೋಲು' ಮತ್ತು 'ಕಾನೀನ' ನಾಟಕಗಳಿಗೆ ಕುವೆಂಪು ಕಥಾಭಿತ್ತಿಗೆ ಮಾತ್ರ ವ್ಯಾಸರಿಗೆ ಋಣಿಯಾಗಿ ಉಳಿದೆಲ್ಲವನ್ನು ತಮ್ಮ ಕಲ್ಪನೆಯಿಂದ, ದರ್ಶನದಿಂದ ರೂಪಿಸಿಕೊಂಡು ಮೂಲವನ್ನೂ ಮಿಕ್ಕಿರುವುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. 'ಶ್ರೀ ರಾಮಾಯಣ ದರ್ಶನಂ ಮತ್ತು ಜೈನರಾಮಾಯಣ'ದಲ್ಲಿ ಮಿರ್ಜಿ ಅಣ್ಣಾರಾಯರು ಎರಡು ರಾಮಾಯಣಗಳ ಕಥೆಯನ್ನು ಬೇರೆಬೇರೆಯಾಗಿ ಕೊಟ್ಟಿದ್ದಾರೆ— ತೌಲನಿಕ ಅಭ್ಯಾಸವಿಲ್ಲ. 'ಶ್ರೀ ರಾಮಾಯಣ ದರ್ಶನಂ ಮತ್ತು ತೊರವೆ ರಾಮಯಣ'ದಲ್ಲಿ ಮಂಥರೆ ಮತ್ತು ಊರ್ಮಿಳೆಯರ ಚಿತ್ರ ಮತ್ತು ವಾಲಿವಧಾ ಪ್ರಸಂಗ ಎರಡೂ ಕಾವ್ಯಗಳಲ್ಲಿ ಹೇಗೆ ಬಂದಿದೆ ಎಂಬುದನ್ನು ಎನ್. ಬಸವಾರಾಧ್ಯರು ತೂಗಿ ನೋಡಿದ್ದಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರರ ಲೇಖನಕ್ಕೆ 'ಶ್ರೀರಾಮಾಯಣ ದರ್ಶನಂ ಮತ್ತು ಕಂಬರಾಮಾಯಣ ಎಂಬ ಶೀರ್ಷಿಕೆಯಿದ್ದರೂ ಇಲ್ಲಿ ತೌಲನಿಕ ಅಧ್ಯಯನವೇನೂ ಇಲ್ಲ. ಹನ್ನೊಂದನೇ ಶತಮಾನದ ಕಂಬರಾಮಾಯಣ ಮತ್ತು ಇಪ್ಪತ್ತನೇ ಶತಮಾನದ ಶ್ರೀ ರಾಮಾಯಣ ದರ್ಶನಂ ಎರಡೂ ತಮ್ಮ ಕಾಲದವರೆಗಿನ ಬೆಳವಣಿಗೆಯ ದೃಷ್ಟಿಯಿಂದ ರಚನೆಯಾದ ಕಾವ್ಯಗಳೆಂದು ಗೊರೂರು ರಾಮಸ್ವಾಮಿ ಅಯ್ಯಂಗಾರರು ಹೇಳಿದ್ದಾರೆ. ಕಂಬರಾಮಾಯಣದ ಕಥೆಯನ್ನು ಸಂಗ್ರಹವಾಗಿ ಕೊಟ್ಟಿದ್ದಾರೆ. ಕಂಬರಾಮಾಯಣದ ಪ್ರಭಾವ ಶ್ರೀರಾಮಾಯಣ ದರ್ಶನದ ಮೇಲೆ ಆಗಿರಲಾರದು. 'ಶ್ರೀ ರಾಮಾಯಣ ದರ್ಶನಂ ಮತ್ತು ಶ್ರೀ ರಾಮಾಯಣ ಕಲ್ಪವೃಕ್ಷಮು' ಆರ್ವಿಯಸ್ ಸುಂದರಂ ಅವರ ಲೇಖನ. ಈ ಎರಡು ರಾಮಾಯಣಗಳು ಸಮಕಾಲೀನವಾದುದರಿಂದ ಪರಸ್ಪರ ಹೋಲಿಕೆ ಅನಿವಾರ್ಯ ಮತ್ತು ಅವಶ್ಯಕ ಎಂದು ಹೇಳಿ ಇಬ್ಬರು ಕವಿಗಳ ದೃಷ್ಟಿ, ಪಾತ್ರಗಳು, ಕಥನ ವಿಧಾನ ಮತ್ತು ಛಂದಸ್ಸುಗಳನ್ನು ವಿವರಿಸಿ ವಿಶ್ವನಾಥರದು ಬೌದ್ಧಿಕ ಪ್ರಧಾನ ಕಾವ್ಯವಾದರೆ ಕುವೆಂಪು ಅವರದು ಹೃದಯ ಪ್ರಧಾನ ಕಾವ್ಯ ಎಂದಿದ್ದಾರೆ. ಈ ಎರಡು ಕಾವ್ಯಗಳ ತೌಲನಿಕ ಅಭ್ಯಾಸ ಅಗತ್ಯವಾಗಿ ಆಗಬೇಕಾದ ಕೆಲಸ. 'ಶ್ರೀ ರಾಮಾಯಣ ದರ್ಶನಂ ಮತ್ತು ಮರಾಠೀ ಗೀತ ರಾಮಾಯಣ' ಲೇಖನದಲ್ಲಿ ಎಸ್. ಪಿ. ಪಾಟೀಲರು ಶ್ರೀರಾಮಾಯಣ ದರ್ಶನಂ ಮತ್ತು ಶ್ರೀ ಗ. ದಿ. ಮೂಡಗೂಳಕರರ 'ಗೀತ ರಾಮಾಯಣ'ದಲ್ಲಿ ಕೆಲವು ರಸಸ್ಥಾನಗಳನ್ನು ಪ್ರಸ್ತಾಪಿಸಿ ಎರಡು ಕಡೆಯಲ್ಲೂ ಕವಿ ಮನೋಧರ್ಮ ಸಮಾನ ಪಾತಳಿಯಲ್ಲಿ ಪ್ರವಹಿಸಿರುವುದನ್ನು ತೋರಿಸಿಕೊಟ್ಟಿದ್ದಾರೆ. ಆದರೂ ಮಂಥರೆಯ ಪಾತ್ರ ಮೊದಲಾದ ಮೂಲದಲ್ಲಿ ಅಲಕ್ಷಿತ ಪಾತ್ರಗಳ ಮತ್ತು ಪ್ರಸಂಗಗಳ ಚಿತ್ರಣದಲ್ಲಿ ಕುವೆಂಪು ಅವರದು ಅನನ್ಯ ಚಿತ್ರಣ ಎಂಬುದನ್ನು ಒಪ್ಪಿಕೊಂಡಿದ್ದಾರೆ. 'ಶ್ರೀರಾಮ ಚರಿತಮಾನಸ ಮತ್ತು 'ಶ್ರೀರಾಮಾಯಣ ದರ್ಶನಂ' ಕಾವ್ಯಗಳ ತುಲನಾತ್ಮಕ ವಿಮರ್ಶೆಯನ್ನು ಕೈಗೆತ್ತಿಕೊಳ್ಳುವ

ಮುನ್ನ ಪ್ರಧಾನ್ ಗುರುದತ್ತ ಅವರು ತೌಲನಿಕ ಅಧ್ಯಯನದ ಮೂರು ಮುಖಗಳನ್ನು ವಿವರಿಸಿ, ಎರಡೂ ಕಾವ್ಯಗಳು ತಮ್ಮ ತಮ್ಮ ಭಾಷೆಯಲ್ಲಿ ಪಡೆದಿರುವ ವಿಶಿಷ್ಟವೂ ಅನನ್ಯವೂ ಆದ ಸ್ಥಾನ ವನ್ನು ಗುರುತಿಸಿ ತುಲಸೀದಾಸರು ಸಂತರಾದರೆ ಕುವೆಂಪು ಅವರು ರಸಋಷಿ ಎಂದು ಹೇಳಿ ಇದ ರಿಂದಲೇ ರಾಮಚರಿತ ಮಾನಸ ಧಾರ್ಮಿಕ ಪೌರಾಣಿಕ ಕೃತಿಯಾದರೆ ಶ್ರೀ ರಾಮಾಯಣ ದರ್ಶನಂ ವಿಶುದ್ಧ ಕಾವ್ಯದ ದೃಷ್ಟಿಯಿಂದ, ಪೂರ್ಣದೃಷ್ಟಿಯಿಂದ ರಾಮಚರಿತ ಮಾನಸವನ್ನು ಮೀರಿದ ಮೇರುಕೃತಿಯಾಗಿ ನಿಲ್ಲುತ್ತದೆಂದು ಹೇಳಿದ್ದಾರೆ. ಬೃಹತ್ತಿನಲ್ಲಿ ಹೊಯ್‌ಕಯ್ಯಾದ ಎರಡೂ ಕೃತಿಗಳ ಸಮಾನ ಸನ್ನಿವೇಶಗಳಲ್ಲಿ ಮತ್ತು ಪಾತ್ರಚಿತ್ರಣಗಳಲ್ಲಿ ಸಮಾನ ಮೂಲಗಳಿಂದ – ಪ್ರಮುಖವಾಗಿ ವಾಲ್ಮೀಕಿ - ಇಬ್ಬರೂ ಪ್ರೇರಣೆಯನ್ನು ಪಡೆದಿದ್ದರೂ ಪ್ರತಿಯೊಂದು ಸನ್ನಿವೇಶ, ಪ್ರಸಂಗ ಮತ್ತು ಪಾತ್ರದ ಮೇಲೆ ಕುವೆಂಪು ತಮ್ಮದೇ ಆದ ವಿಶಿಷ್ಟ ಮುದ್ರೆಯನ್ನು ಹೇಗೆ ಒತ್ತಿದ್ದಾರೆಂಬುದನ್ನು ಸೋದಾಹರಣವಾಗಿ ನಿರೂಪಿಸಿದ್ದಾರೆ. ತೌಲನಿಕ ಅಧ್ಯಯನಗಳಿಗೆ ದಾರಿದೀಪದಂತಿದೆ ಈ ಲೇಖನ.

'ಕುವೆಂಪು ಛಂದಸ್ಸು' ಎಂಬ ಲೇಖನದಲ್ಲಿ ಕೆ. ಶಿವರಾಮ ಐತಾಳರು ಕುವೆಂಪು ಹಿಂದಿನ ಛಂದೋರೂಪಗಳನ್ನು ಅರಗಿಸಿಕೊಂಡು ತಮ್ಮದೇ ಆದ 'ಕುವೆಂಪು ಛಂದಸ್ಸ'ನ್ನು ರಚಿಸಿಕೊಂಡ ರೀತಿಯನ್ನು ವಿವರಿಸಿದ್ದಾರೆ 'ರಗಳೆ, ಸರಳ ರಗಳೆ ಮತ್ತು ಮಹಾಛಂದಸ್ಸು' ಲೇಖನದಲ್ಲಿ ಡಾ. ಎಂ. ಚಿದಾನಂದಮೂರ್ತಿ ಅವರು 'ಶ್ರೀರಾಮಾಯಣದರ್ಶನಂ' ಕಾವ್ಯದಲ್ಲಿನ ಮಹಾ ಛಂದಸ್ಸನ್ನು ಸರಳ ರಗಳೆಯೆಂದೇ ಕರೆದು ಏಕತಾನತೆಯನ್ನು ಮುರಿಯಲು ತಂದಿರುವ ಅನಂತವಾದ ಗಣಪರಿವೃತ್ತಿ, ಪಾದಾಂತ್ಯದಲ್ಲಿ ತಂದಿರುವ ಮುಡಿ ಅಥವಾ ಪದ್ಮಗಣಗಳ ಔಚಿತ್ಯವನ್ನು ಉದಾ ಹರಣೆಗಳೊಂದಿಗೆ ವಿವರಿಸಿದ್ದಾರೆ. ಕೆಲವೆಡೆ ಆರು, ಏಳು, ಎಂಟು ಮಾತ್ರೆಗಳ ಗಣಗಳು ಬಂದು ಕವಿ ವರ್ಣಿಸಬೇಕೆಂದಿರುವುದನ್ನು ತಾವೇ ವ್ಯಂಜಿಸಿರುವುದನ್ನು ತೋರಿಸಿದ್ದಾರೆ. ಹಾಗೆಯೇ ಯತಿ, ಅರ್ಧ ಯತಿ ಮತ್ತು ಪೂರ್ಣ ಯತಿಗಳು ಹೇಗೆ ಕಾವ್ಯ ರಸಾಸ್ವಾದನೆಗೆ ಸಹಾಯಕವಾಗಿದೆಯೆಂಬು ದನ್ನೂ ಕೆಲವೆಡೆ ಅಕ್ಷರಗಳನ್ನು, ಪದಗಳನ್ನು, ಉಕ್ತಿಗಳನ್ನು ಪುನರಾವರ್ತಿಸಿ ಕಾವ್ಯೋದ್ದೇಶವನ್ನು ಸಾಧಿಸಿರುವುದನ್ನು ಉದಾಹರಣೆಗಳ ಸಹಿತ ತೋರಿಸಿದ್ದಾರೆ. ನೀರಸವಾದ ಛಂದಸ್ಸನ್ನೂ ಹೃದ್ಯ ವಾಗುವಂತೆ ವಿವರಿಸಿದ್ದಾರೆ.

ಮೇರು ಸದೃಶವಾದ ಕುವೆಂಪು ಚೇತನಕ್ಕೆ ಸಾವಿರದ ನೂರು ಪುಟಗಳು 'ಸಹ್ಯಾದ್ರಿ' ಸೂಕ್ತ ವಾದ ಅಭಿನಂದನ ಗ್ರಂಥ. ಈ ಅಭಿನಂದನ ಗ್ರಂಥದ ದೋಷ ಎಂದರೆ ಲೇಖನಗಳನ್ನು ವ್ಯವಸ್ಥಿತ ವಾಗಿ ವಿಷಯಾನುಗುಣವಾಗಿ ವಿಂಗಡಿಸಿಲ್ಲದಿರುವುದು. ಹಾಗೆ ಮಾಡಿದ್ದರೆ ಅದರ ಪರಿಣಾಮ ಇನ್ನೂ ಉತ್ತಮವಾಗಿರುತ್ತಿತ್ತು. ಇದುವರೆಗೆ ಕುವೆಂಪು ಮತ್ತು ಅವರ ಕೃತಿಗಳನ್ನು ಕುರಿತು ಅಭಿ ಮಾನದ ಸ್ತುತಿಪರವಾದ ವಿಮರ್ಶೆ ಬಂದಿದೆ. ಈ ಗ್ರಂಥದಲ್ಲಿ ಅಂತಹ ಲೇಖನಗಳು ಇರುವುದಾದರೂ ಕುವೆಂಪು ಬರೆದುದರಲ್ಲಿ ಜಳ್ಳು ಇರಬಹುದೆಂದು ನೋಡುವ ಹುಡುಕುವ ಕೆಲವು ಲೇಖನಗಳಿವೆ. ಕುವೆಂಪು ಬರೆದುದೆಲ್ಲ ಶ್ರೇಷ್ಠಸಾಹಿತ್ಯವೆಂಬ ಭ್ರಮೆಯಿಂದ ಹೊರಬಂದು ನೋಡುವ ಪ್ರಯತ್ನ ನಿಜಕ್ಕೂ ಸ್ವಾಗತಾರ್ಹವಾದುದು. ಆ ದಿಕ್ಕಿನಲ್ಲಿ ಇನ್ನೂ ಕೆಲಸ ಆಗಬೇಕು. ಈಗಾಗಲೇ ಕುವೆಂಪು ಅವರನ್ನು ಕುರಿತು ಗಂಗೋತ್ರಿ, ಕವಿ ಶೈಲ ಮೊದಲಾದ ಅಭಿನಂದನ ಗ್ರಂಥಗಳು ಬಂದಿವೆ. ಅವುಗ ಳಲ್ಲಿ ಅವರ ಕೃತಿಗಳ ವಿಮರ್ಶೆ ಆಗಿದೆ. ಆದರೆ ಕುವೆಂಪು ಸಾಹಿತ್ಯ ಮತ್ತೆ ಮತ್ತೆ ವಿಮರ್ಶೆಗೆ ಒಳಗಾಗ ಬೇಕು. ಆಗಲೆ ಅದು ಪುಟಕ್ಕಿಟ್ಟ ಚಿನ್ನದಂತೆ ಹೆಚ್ಚು ಕಾಂತಿಯುಕ್ತವಾಗುವುದು. ಅಧಿಕಾರಿಯಾಗಿ, ಶಿಕ್ಷಣ ತಜ್ಞರಾಗಿ ಅವರನ್ನು ನೋಡುವ ಲೇಖನಗಳು ಸಾಕಷ್ಟು ಬಂದಿಲ್ಲ. ಅವರ ಛಂದೋ ವೈವಿಧ್ಯ ವನ್ನು ಕುರಿತೂ ಸಾಕಷ್ಟು ಲೇಖನಗಳು ಇದುವರೆಗೂ ಬಂದಿಲ್ಲ. ಆದ್ದರಿಂದ ಅಭಿನಂದನ ಗ್ರಂಥಗಳ ರೂಪದಲ್ಲಿಯೆ ಆಗಲಿ ಬೇರೆ ರೀತಿಯೆ ಆಗಲಿ ಅವರ ಕೃತಿಗಳ ವಿಮರ್ಶೆ ಆಗಬೇಕು. ಯಾರೂ ಹೀಗೆ ಮಾಡದಿದ್ದರೂ ತನ್ನ ಆಂತರಿಕ ಚೈತನ್ಯದಿಂದಲೇ ವಿಮರ್ಶೆ ಮಾಡಿಸಿಕೊಳ್ಳುವ ಶಕ್ತಿ ಕುವೆಂಪು ಕೃತಿಗಳಿಗಿದೆ. ಅದಕ್ಕೆ ಪೂರಕವಾಗಿ ವಿದ್ಯಾವರ್ಧಕ ಸಂಸ್ಥೆ ಮತ್ತು ಕುವೆಂಪು ಅಭಿಮಾನಿ

ವರ್ಗ ವಸ್ತುನಿಷ್ಠವಾಗಿ ಅವರ ಕೃತಿಗಳನ್ನು ನೋಡಬೇಕು ಅಥವಾ ನೋಡುವವರಿಗೆ ಪ್ರೋತ್ಸಾಹವನ್ನು ಕೊಡಬೇಕು. ಈ ದಿಸೆಯಲ್ಲಿ 'ಸಹ್ಯಾದ್ರಿ' ನಾಂದಿಯಾಗುವುದರಲ್ಲಿ ಸಂಶಯವಿಲ್ಲ.

* * * *

ತನ್ನನ್ನು ಹಿಂಡಿದವರಿಗೂ ಸಿಹಿಯಾದ ಹಾಲನ್ನು ಕೊಡುವ ಕಬ್ಬಿನಂತೆ ಶ್ರೀ ಶಂಕರಗೌಡರ ಬಾಳು. ಈ ಅರ್ಥದಲ್ಲಿಯೆ ಶಂಕರಗೌಡರ ಅಭಿನಂದನ ಗ್ರಂಥಕ್ಕೆ 'ಕಬ್ಬಿನ ಹಾಲು' ಎಂದು ಹೆಸರಿಟ್ಟಿರುವುದು. ಇದನ್ನು ಮುನ್ನುಡಿಯಲ್ಲಿ ದೇಜಗೌ ಅವರು ವಿವರಿಸಿದ್ದಾರೆ. ಈ ಅಭಿನಂದನ ಗ್ರಂಥದ ಸಂಪಾದಕರು ಸಹ್ಯಾದ್ರಿಯ ಸಂಪಾದಕರಲೊಬ್ಬರಾಗಿದ್ದ ಜೀ. ಶಂ. ಪರಮಶಿವಯ್ಯ, ಪ. ಕ. ರಾಜೇಗೌಡ ಮತ್ತು ಪ. ಸು ಭಟ್ಟ. ಅರವತ್ತು ವರ್ಷಗಳ ಬಾಳಿನಲ್ಲಿ ಬಹುಪಾಲನ್ನು ಸಾರ್ವಜನಿಕ ಸೇವೆಗಾಗಿಯೆ ಕಳೆದ ಶಂಕರಗೌಡರ ಅಭಿನಂದನ ಗ್ರಂಥ ಹಿರಿದಾದ ಉದ್ದೇಶವನ್ನಿಟ್ಟುಕೊಂಡು ಸುಮಾರು ಸಾವಿರ ಪುಟಗಳಷ್ಟು ಮೈತುಂಬಿ ನಿಂತಿದೆ.

ಶಂಕರಗೌಡರನ್ನು ಕುರಿತ ಒಂದು ಕವನದಿಂದ ಗ್ರಂಥ ಆರಂಭವಾಗುತ್ತದೆ. ಶಂಕರಗೌಡರ ರಾಜಕೀಯ ಒಡನಾಡಿಯಾದ ವೀರೇಂದ್ರಪಾಟೀಲ್ ಅವರು 'ಆತ್ಮೀಯರಲ್ಲಿ ಆತ್ಮೀಯ' ಬರಹದಲ್ಲಿ ಶಂಕರಗೌಡರ ನಿಷ್ಠೆ, ಸ್ನೇಹ ಪರತೆಗಳನ್ನೂ ಸಹಕಾರ ಕ್ಷೇತ್ರ ಮತ್ತು ವಿದ್ಯಾ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆಯನ್ನು ನುಡಿ ಸೇವೆಯನ್ನೂ ಸ್ಮರಿಸಿದ್ದಾರೆ. 'ಸಮಾಜ ಸೇವಕ' ರಾಗಿ ಶ್ರೀ ಶಂಕರಗೌಡರನ್ನು ಡಾ. ಬೆಸಗರಹಳ್ಳಿ ರಾಮಣ್ಣ ಅವರು ಕಂಡು ಶಂಕರಗೌಡರು ರೈತರ ಸಂಘ ಸ್ಥಾಪನೆಗೆ ಮತ್ತು ಹಲವಾರು ವಿದ್ಯಾ ಸಂಸ್ಥೆಗಳ ಉಗಮಕ್ಕೆ ದುಡಿದುದನ್ನೂ ಕನ್ನಡಕ್ಕೆ ಕೊಟ್ಟ ಪ್ರೋತ್ಸಾಹವನ್ನೂ ನೆನೆದಿದ್ದಾರೆ. ಶಂಕರಗೌಡರು ವಿದ್ಯಾ ಮಂತ್ರಿಯಾಗುವ ಮೊದಲು ಮತ್ತು ಅನಂತರ ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಿಗೆ ಕೊಟ್ಟ ಪ್ರೋತ್ಸಾಹವನ್ನು ಮತ್ತು ಪಿ. ಯು. ಸಿ. ಮಂಡಲಿಯನ್ನು ರಚಿಸಿದುದನ್ನು 'ಸಹನಾಮೂರ್ತಿ' ಎಂಬ ಲೇಖನದಲ್ಲಿ ಪಿ. ಮಲ್ಲಿಕಾರ್ಜುನಪ್ಪ ಅವರು ನೆನೆದಿದ್ದಾರೆ. 'ನುಡಿ ನಮನ' ದಲ್ಲಿ ಹಾ. ಮಾ. ನಾಯಕರು ಶಂಕರಗೌಡರು ಕೆಲಸ ಯಾವುದೇ ಆದರೂ ಅದರಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಳ್ಳುತ್ತಾರೆಂಬುದನ್ನು ಹೇಳಿದ್ದಾರೆ. ಸಾರ್ವಜನಿಕ ಹಿತಕ್ಕಾಗಿ ತಮ್ಮ ಗೌರವಕ್ಕೆ ಕುಂದಾಗುವುದನ್ನು ಸಹಿಸಿಕೊಳ್ಳುವ, ಕಲಾವಿದರ ಏಳಿಗೆಗಾಗಿ ಪರಿತಪಿಸುವ, ಬಡವರಿಗಾಗಿ ಮರುಗುವ ಮತ್ತು ಇತರ ಗುಣಗಳು ಶಂಕಗೌಡರ ಪಂಚಮುಖವನ್ನು 'ಪಂಚಮುಖಿ'ಯಲ್ಲಿ ಎಚ್. ನಂಜೇಗೌಡರು ಚಿತ್ರಿಸಿದ್ದಾರೆ. ಶಂಕರಗೌಡರ ಬಿಗುವಿನ ವರ್ತನೆ, ಗಾಂಭೀರ್ಯ, ಸನ್ಮಾನಗಳ ಬಗ್ಗೆ ಅವರಿಗಿರುವ ನಿರಾಸಕ್ತಿಗಳನ್ನು 'ಸ್ವಾಭಿಮಾನಿ' ಎಂಬ ಲೇಖನದಲ್ಲಿ ಬಸವರಾಜ ಕಟ್ಟೀಮನಿ ಅವರು ವಿವರಿಸಿ ಶಿಕ್ಷಣ ಇಲಾಖೆಯನ್ನು ಶಿಸ್ತಿಗೊಳಪಡಿಸಿ ಹಿಡಿತಕ್ಕೆ ತಂದುದನ್ನೂ ವಿಶ್ವಕೋಶ, ಜ್ಞಾನಗಂಗೋತ್ರಿಗಳಿಗೆ ಕೊಟ್ಟ ಪ್ರೋತ್ಸಾಹವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಕೊಟ್ಟ ಅನನ್ಯ ಪ್ರೋತ್ಸಾಹವನ್ನೂ ಕನ್ನಡ ಮಾಧ್ಯಮಕ್ಕೆ ಕೊಟ್ಟ ಒತ್ತಾಯದ ಪ್ರೋತ್ಸಾಹವನ್ನೂ ಹೇಳಿದ್ದಾರೆ. ನಿಜಲಿಂಗಪ್ಪನವರ ಆತ್ಮೀಯರಾದ ಶಂಕರಗೌಡರಿಗೆ ನಿಜಲಿಂಗಪ್ಪನವರಿಂದಾದ ಅನ್ಯಾಯವನ್ನೂ ಹೇಳಿದ್ದಾರೆ! 'ಸಂಸ್ಕೃತಿ ನಿಧಿ' ಎಂಬ ಲೇಖನದಲ್ಲಿ ದೇಜಗೌ ಸ್ಥೂಲವಾಗಿ ಶಂಕರಗೌಡರ ಜೀವನ ಚಿತ್ರ ಮತ್ತು ಸ್ವಭಾವ ಚಿತ್ರಗಳನ್ನು ಕೊಟ್ಟು "ಆ ಜಿಲ್ಲೆಯ ಜನರಿಗೆ ವಿಶ್ವೇಶ್ವರಯ್ಯನವರು ಅನ್ನ ನೀಡುವುದರ ಮೂಲಕ ಭೌತಿಕ ಸುಖವನ್ನು ಕರುಣಿಸಿದರೆ, ಶಂಕರಗೌಡರು ಜನಜೀವನದಲ್ಲಿ ಆತ್ಮ ಚೈತನ್ಯವನ್ನು ಹರಿಸಿ 'ಶಂಕರ' ಎಂಬ ಹೆಸರನ್ನು ಸಾರ್ಥಕಪಡಿಸಿಕೊಂಡರು" ಎಂದಿದ್ದಾರೆ. 'ಕನ್ನಡಾಭಿಮಾನಿ' ಲೇಖನದಲ್ಲಿ ಜಿ. ನಾರಾಯಣರು ಕೇವಲ ಇಪ್ಪತ್ತೈದು ಸಾವಿರ ವಾರ್ಷಿಕ ಸಹಾಯಧನ ಪಡೆಯುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಲಕ್ಷ ರೂಪಾಯಿ ಸಿಗುವಂತೆ ಮಾಡಿದುದನ್ನು ಮತ್ತು ಪರಿಷತ್ತಿನ ತ್ರೈವಾರ್ಷಿಕ ಯೋಜನೆಗೆ ಹತ್ತು ಲಕ್ಷ ಧನ ಸಹಾಯವನ್ನು ಸರ್ಕಾರದಿಂದ ಕೊಡಿಸಿದುದನ್ನು ಮತ್ತು ಕನ್ನಡ ನುಡಿಯ ಏಳಿಗೆಗಾಗಿ ನಾನಾ ರೀತಿಯಲ್ಲಿ ಶಂಕರಗೌಡರು

ನೇರವಾಗಿರುವುದನ್ನು ನೆನೆದಿದ್ದಾರೆ. ಎಚ್. ಎಲ್. ನಾಗೇಗೌಡರ 'ಸುಸಂಸ್ಕೃತ' ಎಂಬ ಪುಟ್ಟ ಲೇಖನದಲ್ಲಿ ಬಾಲ್ಯದ ಸಲಿಗೆ ಗೆಳತನಗಳು ಕಾಣುತ್ತವೆ. ಮತ್ತು, ಶಂಕರಗೌಡರು ರಾಜಕೀಯವನ್ನು ಬಿಟ್ಟು ಜಿಲ್ಲೆಯ ಪುರೋಭಿವೃದ್ಧಿಗೆ ದುಡಿಯಲೆಂದು ಹಾರೈಸಿದ್ದಾರೆ. 'ಸ್ನೇಹಪರ' ಎಂಬ ಲೇಖನದಲ್ಲಿ ಕೆ. ಸಿಂಗಾರಿಗೌಡರು ತಮಗೂ ಗೌಡರಿಗೂ ಇರುವ ಮುರಿಯದ ಸಂಬಂಧವನ್ನು ಹೇಳಿ ಶಂಕರಗೌಡರ ರಚನಾತ್ಮಕ ಕೆಲಸಗಳನ್ನು, ನಿರ್ದಾಕ್ಷಿಣ್ಯ ಪ್ರವೃತ್ತಿಯನ್ನು, ಉದಾರತೆ, ಅಭಿಮಾನ, ಸಹನಾಶಕ್ತಿ, ಸೌಜನ್ಯ ಮೊದಲಾದ ಗುಣಗಳನ್ನು ವಿವರಿಸಿದ್ದಾರೆ. ೧೯೩೮ರಲ್ಲಿ ಶಿವಪುರದಲ್ಲಿ ಸೇರಿದ ಕಾಂಗ್ರೆಸ್ ಸಮ್ಮೇಳನದಲ್ಲಿ ಶಂಕರಗೌಡರು ಸ್ವಯಂ ಸೇವಕನಾಗಿ ದುಡಿದಂದಿನಿಂದ ೧೯೫೦ರಲ್ಲಿ ಕಾಂಗ್ರೆಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗುವವರೆಗಿನ ಗೌಡರ ರಾಜಕೀಯ ಜೀವನ ಚಿತ್ರ ಪಿ. ಎನ್. ಜವರಪ್ಪಗೌಡರ 'ಸ್ವಾತಂತ್ರ್ಯ ಹೋರಾಟಗಾರ'ದಲ್ಲಿದೆ. ಈ ಲೇಖನದಲ್ಲಿ ಕಾಂಗ್ರೆಸ್‌ನ ಹಳೆಯ ಹುಲಿಗಳ ರಾಜಕೀಯ ದ್ವೇಷ, ಕುಟಿಲತೆ ಇತ್ಯಾದಿಗಳ ಚಿತ್ರಣವೂ ಇದೆ. ಹ. ಕ. ರಾಜೇಗೌಡರು 'ಹೆಜ್ಜೆ ಗುರುತುಗಳು' ಎಂಬ ತಮ್ಮ ಲೇಖನದ ಮೊದಲ ಭಾಗದಲ್ಲಿ ಗೌಡರ ಸಂಕ್ಷಿಪ್ತವಾದ ಜೀವನ ಚರಿತ್ರೆಯನ್ನು ಕೊಟ್ಟು ಎರಡನೆಯ ಭಾಗದಲ್ಲಿ ತಾವು ಹಲವಾರು ಸಂದರ್ಭಗಳಲ್ಲಿ ಅವರನ್ನು ಕಂಡುದನ್ನು ಸ್ಮರಿಸಿಕೊಂಡು ಮೂರನೆಯ ಭಾಗದಲ್ಲಿ ಗೌಡರು ಚುನಾವಣೆಯಲ್ಲಿ ಸೋತುದಕ್ಕೆ ಕಾರಣವನ್ನು ಹುಡುಕುವ ಪ್ರಯತ್ನವನ್ನು ಪಟ್ಟಿದ್ದಾರೆ. ಲೇಖನ ಆತ್ಮೀಯವಾಗಿದೆ. ಇನ್ನೂ ಒಂದೆರಡು ಶಂಕರಗೌಡರನ್ನು ಕುರಿತ ಲೇಖನಗಳಿವೆ.

ನಾಟಕ ಪದದ ವ್ಯುತ್ಪತ್ತಿಯಿಂದ ಆರಂಭಿಸಿ ವಸ್ತು, ಸಂವಿಧಾನ, ಪಾತ್ರ, ಅಭಿನಯ, ರಸ, ರಂಗಭೂಮಿ, ಪ್ರೇಕ್ಷಕರು ಮೊದಲಾದುವುಗಳ ಮೇಲೆ ಇದುವರೆಗೆ ಆಗಿರುವ ಚರ್ಚೆಗಳನ್ನು ನಾಟಕ ಮತ್ತು ಅದರ ಸ್ವರೂಪ' ಎಂಬ ಲೇಖನದಲ್ಲಿ ಎಂ. ಸಿ. ವಸಂತಕುಮಾರ್ ಅವರು ಸ್ಥೂಲವಾಗಿ ನಿರೂಪಿಸಿದ್ದಾರೆ. 'ಕನ್ನಡ ನಾಟಕ ಸಾಹಿತ್ಯದ ಪ್ರಾಚೀನತೆ'ಯನ್ನು ವಿವರಿಸುತ್ತ ತ. ಸು. ಶಾಮರಾಯರು ಕರ್ನಾಟಕದಲ್ಲಿ ಸಂಸ್ಕೃತ ನಾಟಕಗಳು ರಾಜರ ಅರಮನೆಯ ನಾಟಕ ಶಾಲೆಗಳಲ್ಲಿ ಅಭಿನಯಿಸಲ್ಪಡುತ್ತಿದ್ದರೆ ಜನಸಾಮಾನ್ಯರಿಗಾಗಿ ದೇವಸ್ಥಾನಗಳಲ್ಲಿ ಯಕ್ಷಗಾನ ಮೊದಲಾದುವು ನಡೆಯುತ್ತಿದ್ದುವೆಂದೂ ಸಾಹಿತ್ಯ ಚರಿತ್ರೆಯಲ್ಲಿ ನಾಟಕಗಳಿರಬಹುದೆಂದು ಊಹಿಸುವ ಕೃತಿಗಳಿಗೆ ಹೆಚ್ಚಿನ ಆಧಾರವಿಲ್ಲವೆಂದೂ ಹತ್ತೊಂಬತ್ತನೆಯ ಶತಮಾನದ ಕಡೆಯ ದಶಕದಿಂದ ಮೈಸೂರು ಒಡೆಯರ ಉದಾರವಾದ ಪ್ರೋತ್ಸಾಹದಿಂದ ಕನ್ನಡದಲ್ಲಿ ನಾಟಕಗಳು ಬಂದುವೆಂದೂ ಹೇಳಿದ್ದಾರೆ. 'ಹಳಗನ್ನಡದಲ್ಲಿ ನಾಟಕದ ಸಮಸ್ಯೆ'ಯನ್ನು ಕೈಗೆತ್ತಿಕೊಂಡ ಎನ್. ಬೋರಲಿಂಗಯ್ಯ ಅವರು ಸಂಸ್ಕೃತ ನಾಟಕಗಳ ಪ್ರಯೋಗ ಸೀಮಿತ ವಲಯಕ್ಕೆ ಪರಿಮಿತವಾಗಿತ್ತೆಂದೂ ತಾರ್ಕಿಕವಾಗಿ ಹಳಗನ್ನಡದಲ್ಲಿ ನಾಟಕಗಳೇ ಇದ್ದಿರಲಾರವು ಎಂದೂ ಅಂದಿನ ಕವಿಗಳಿಗೆ ಸಾಮಾನ್ಯರ ಮೇಲೆ ಗಮನ ಇಲ್ಲದುದರಿಂದ ಹೀಗಾಗಿರಬೇಕೆಂದು ಅಭಿಪ್ರಾಯಪಡುತ್ತಾರೆ. 'ಹಳಗನ್ನಡ ಕಾವ್ಯಗಳು ಮತ್ತು ನಾಟಕ'ಗಳ ಬಾಂಧವ್ಯವನ್ನು ವಿವರಿಸುತ್ತ ಎನ್. ಬಸವಾರಾಧ್ಯರು ರನ್ನನ ಗದಾಯುದ್ಧ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಮತ್ತು ಕುಮಾರವ್ಯಾಸನ ಭಾರತಗಳಲ್ಲಿನ ನಾಟಕೀಯ ಭಾಗಗಳನ್ನು ಉದ್ಧರಿಸಿ ಹಳಗನ್ನಡದಲ್ಲಿ ನಾಟಕಗಳಿಲ್ಲವೆಂದು ಕೊರಗುವುದಕ್ಕಿಂತ ಅವುಗಳಲ್ಲಿರುವ ನಾಟಕೀಯ ಪ್ರಕರಣಗಳನ್ನು ಕಂಡು ಸಮಾಧಾನಪಟ್ಟುಕೊಳ್ಳುವುದು ಉಚಿತವಾದುದು ಎಂದು ಅಭಿಪ್ರಾಯಪಡುತ್ತಾರೆ. 'ಹೊಸಗನ್ನಡ ಸಾಹಿತ್ಯದಲ್ಲಿ ನಾಟಕಗಳಿವೆ ಹಳಗನ್ನಡದಲ್ಲೇಕಿಲ್ಲ!' ಎಂದು ಆಶ್ಚರ್ಯಪಟ್ಟು ಅದಕ್ಕೆ ಕಾರಣವನ್ನು ಹುಡುಕಲು ಹೊರಟ ಹ. ಕ. ರಾಜೇಗೌಡರು ರನ್ನನನ್ನು ನಾಟಕೀಯ ಶಕ್ತಿಯುಳ್ಳ ನಮ್ಮ ಮೊಟ್ಟಮೊದಲ ಕವಿಯೆಂದು ಭಾವಿಸಬಹುದೆಂದು ಹೇಳಿ ಹನ್ನೆರಡನೆಯ ಶತಮಾನದ ಬಹುರೂಪಿ ಚೌಡಯ್ಯನನ್ನು ಉದಾಹರಿಸಿ ವೀರಶೈವ ಧರ್ಮಪ್ರಸಾರಕ್ಕೆ ವಚನಗಳಂತೆಯೆ ನಾಟಕಗಳು ನೆರವಾಗಿರಬೇಕೆಂದೂ ಬಹುರೂಪಿ ಚೌಡಯ್ಯನಂಥವರು ಶಿವಲೀಲೆಗಳನ್ನು ಅಭಿನಯಿಸಿ ತೋರಿರಬೇಕೆಂದೂ ಈ ವಿಚಾರಗಳೆಲ್ಲ ಹೇಗೇ ಇರಲಿ ಕನ್ನಡದಲ್ಲಿ ಬಯಲಾಟ, ಯಕ್ಷಗಾನಗಳು ಹಿಂದಿನಿಂದಲೂ ಇದ್ದುವೆಂದು ಆದರೆ ವಿದ್ವಜ್ಜನರ ಅವಜ್ಞತೆಯಿಂದ ಯಾವ ಹಸ್ತಪ್ರತಿಗಳೂ ದೊರೆಯುತ್ತಿಲ್ಲವೆಂದು

ಹೇಳಿದ್ದಾರೆ. ಕನ್ನಡ ನಾಟಕಗಳ ಪ್ರಾಚೀನತೆಯನ್ನು ಶಾಸನಗಳಲ್ಲಿ ಹುಡುಕಲು ಹೊರಟ ಸೀತಾರಾಮ ಜಾಗೀರ್‌ದಾರರು 'ಶಾಸನಗಳು ಮತ್ತು ನಾಟಕ' ಎಂಬ ಲೇಖನದಲ್ಲಿ ಸಂಸ್ಕೃತದ ಕೆಲವು ನಾಟಕಗಳು ಶಾಸನಗಳಲ್ಲಿ ದೊರಕುವಂತೆ ಕನ್ನಡ ನಾಟಕಗಳು ದೊರೆತಿಲ್ಲವೆಂದೂ ಆದರೆ ನಾಟಕವಿದ್ದುದರ ಉಲ್ಲೇಖ ಕಾವ್ಯಗಳಿಂದ ಮತ್ತು ಶಾಸನಗಳಿಂದ ತಿಳಿದುಬರುತ್ತದೆಂದು ಹೇಳಿ ತಮ್ಮ ವಾದಕ್ಕೆ ಪೂರಕವಾಗಿ ಆದಿಪುರಾಣದಲ್ಲಿ ಭರತನ ಸೈನ್ಯದಲ್ಲಿ 'ಮಹಾ ನಾಟಕಬಲ' ಇದ್ದುದನ್ನು ಪಂಪ ವಿವರಿಸಿರುವುದನ್ನು, ಗಾನ್ಧರ್ವರ, ನಟರ, ನಾಟಕ ಶಾಲೆಗಳ, ನಾಟಕ ಸಾಹಿತ್ಯದ ಪ್ರಸ್ತಾಪ ಶಾಸನಗಳಲ್ಲಿ ಬರುವುದನ್ನು, ಪಟ್ಟದಕಲ್ಲಿನ ಶಾಸನವೊಂದು 'ಅಚಲನ್' ಎಂಬ ನಟನನ್ನು ಹೊಗಳಿರುವುದನ್ನು ಗಂಗ ಪೆರ್ಮಾನಡಿಯು ಪತ್ನಿ ಬಾಚಲದೇವಿ ತನ್ನ ಗಂಡನ ಸಾಹಸ ಪರಾಕ್ರಮಗಳನ್ನು ನಾಟಕವಾಗಿ ಮಾಡಿ ನರ್ತಿಸಿದ ಸೂಚನೆ ಶಾಸನವೊಂದರಲ್ಲಿ ಬರುವುದನ್ನೂ, ಅನೇಕ ರಾಣಿಯರು 'ಅಭಿನವ ಸರಸ್ವತಿ'ಯರೂ 'ಗೀತ ವಾದ್ಯ ಸೂತ್ರಧಾರೆ'ಯರೂ ಆಗಿದ್ದುದನ್ನು ಶಾಸನಗಳು ಹೇಳುವುದನ್ನು ಮತ್ತು ನಾಗಾವಿಯ ಶಾಸನ ನಾಟಕವಾಡುವವರನ್ನು ಪಾತ್ರದವರೆಂದು ಕರೆದಿರುವುದನ್ನು ಹೇಳಿ ಒಟ್ಟಿನಲ್ಲಿ ಕನ್ನಡದಲ್ಲಿ ನಾಟಕಗಳ ಬಗೆಗೆ ಮೊದಲು ತಿಳಿಸುವ ಸಾಧನಗಳೆಂದರೆ ಶಾಸನಗಳೇ ಎಂದು ಅಭಿಪ್ರಾಯಪಡುತ್ತಾರೆ. 'ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತ ನಾಟಕಗಳ ಪ್ರಭಾವ'ವನ್ನು ಗುರುತಿಸುತ್ತಾ ಸಿ. ಪಿ. ಕೆ. ಅವರು ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತ ನಾಟಕಗಳು ಬೀರಿರುವ ಪ್ರತ್ಯಕ್ಷವಾದ ಅಥವಾ ಪರೋಕ್ಷವಾದ ಪ್ರಭಾವ ಸಂಸ್ಕೃತ ಕಾವ್ಯಗಳ ಪ್ರಭಾವದಷ್ಟು ವ್ಯಾಪಕವಲ್ಲದಿದ್ದರೂ ಸಾಕಷ್ಟು ಮಹತ್ವಪೂರ್ಣವಾದುದೆಂದು ಹೇಳಿ ಭಾಸನ 'ಊರುಭಂಗ' ಭಟ್ಟನಾರಾಯಣನ 'ವೇಣೀಸಂಹಾರ'ಗಳು ಪಂಪ ಮತ್ತು ವಿಶೇಷವಾಗಿ ರನ್ನನಮೇಲೆ, ಕಾಳಿದಾಸನ 'ವಿಕ್ರಮೋರ್ವಶೀಯ' ಮತ್ತು 'ಅಭಿಜ್ಞಾನ ಶಾಕುಂತಲ'ದ ಕೆಲವು ಪದ್ಯಗಳು ಪಂಪನ ಮೇಲೆ, ರಾಜಶೇಖರನ 'ಕರ್ಪೂರ ಮಂಜರಿ' ನೇಮಿಚಂದ್ರನ 'ಲೀಲಾವತಿ'ಯ ಮೇಲೆ, ಭಾಸನ 'ದೂತವಾಕ್ಯ' ಕುಮಾರವ್ಯಾಸನ ಮೇಲೆ ಅಂತೆಯೆ ಆಧುನಿಕ ಕವಿಗಳಾದ ಕುವೆಂಪು ಮೇಲೆ ಭಾಸನ 'ಪ್ರತಿಮಾ ನಾಟಕ' ಪ್ರಭಾವ ಬೀರಿರುವುದನ್ನು ಸೋದಾಹರಣವಾಗಿ ತೋರಿ, ಹತ್ತೊಂಬತ್ತನೆಯ ಶತಮಾನದಲ್ಲಿ ಅನೇಕ ನಾಟಕಗಳು ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಿಂದ ನೇರವಾಗಿ ಕನ್ನಡಕ್ಕೆ ಭಾಷಾಂತರವಾಗಿರುವುದನ್ನು ಹೇಳಿ ಬಸಪ್ಪ ಶಾಸ್ತ್ರಿಗಳ 'ಕರ್ನಾಟಕ ಶಾಕುಂತಲ ನಾಟಕಂ' ಅವರ ಭಾಷಾಂತರ ದಕ್ಷತೆಗೆ ಸಾಕ್ಷಿ ಎಂದು ತಿಳಿಸಿ ಅವರಿಗೆ ಬಂದಿರುವ 'ಅಭಿನವ ಕಾಳಿದಾಸ' ಎಂಬ ಬಿರುದನ್ನು ಮೆಚ್ಚಿಕೊಂಡು ಇನ್ನುಳಿದ ಭಾಷಾಂತರಕಾರರನ್ನು ಹೆಸರಿಸಿದ್ದಾರೆ.

'ಸೂತ್ರದ ಬೊಂಬೆ'ಯ ಬಗ್ಗೆ ಬರೆಯುತ್ತಾ ಗೊರೂರು ರಾಮಸ್ವಾಮಿ ಅಯ್ಯಂಗಾರರು ತೊಗಲುಬೊಂಬೆ ಮತ್ತು ಸೂತ್ರದ ಬೊಂಬೆ ಇವುಗಳನ್ನು ಆಡುವ ವಿಧಾನವನ್ನೂ ತೊಗಲು ಬೊಂಬೆಯನ್ನು ತಯಾರುಮಾಡುವ ವಿಧಾನವನ್ನೂ ಅವುಗಳಿಗೆ ಬಣ್ಣ ಹಾಕುವುದನ್ನೂ ಆಟದಲ್ಲಿ ಬಳಸುವ ಭಾಷೆಯನ್ನೂ ಸೂತ್ರದ ಬೊಂಬೆ ದೇಶವಿದೇಶಗಳಲ್ಲಿರುವುದನ್ನೂ ಆಂಧ್ರದಲ್ಲಿ ಅದು ಇಂದಿಗೂ ಉತ್ತಮಸ್ಥಿತಿಯಲ್ಲಿರುವುದನ್ನೂ ಸೊಗಸಾಗಿ ವಿವರಿಸಿದ್ದಾರೆ. 'ಕರ್ನಾಟಕದಲ್ಲಿ ತೊಗಲು ಬೊಂಬೆಯಾಟಗಳ'ನ್ನು ವಿವರಿಸುತ್ತಾ ನಂ. ತಪಸ್ವೀಕುಮಾರ್ ಅವರು ತೊಗಲು ಗೊಂಬೆಯಾಟವಾಡುವ ಗೊಂಬೆ ರಾಮರು ಶಿಳ್ಳೆಕ್ಯಾತ ಅಥವಾ ಸಿಳ್ಳೆಕ್ಯಾತರೆಂಬುದನ್ನು ನಿರೂಪಿಸಿ ಅವರ ಮೂಲ ಚೂಲಗಳನ್ನು ಶೋಧಿಸಿ, ಗೊಂಬೆಯಾಟದ ವೈಶಿಷ್ಟ್ಯ, ತೊಗಲುಗೊಂಬೆಯ ರಚನೆ, ರಂಗಸಜ್ಜಿಕೆ ಮೊದಲಾದುವನ್ನು ವಿಶೇಷವಾಗಿ ಬಯಲುಸೀಮೆಯನ್ನು ಗಮನದಲ್ಲಿಟ್ಟುಕೊಂಡು ವಿವರಿಸಿದ್ದಾರೆ. ಲೇಖನದ ಉದ್ದಕ್ಕೂ ಈ ಕಲೆ ಉಳಿದುಬರಲೆಂಬ ಕಳಕಳಿಯಿದೆ. ಬಯಲಾಟದ ಪ್ರಭೇಧಗಳಾದ ಮೂಡಲಪಾಯ ಮತ್ತು ಪಡುವಲಪಾಯ ಮತ್ತು ಇವುಗಳ ಒಳಪ್ರಭೇಧಗಳನ್ನು ವಿವರಿಸಿ ಮೂಡಲಪಾಯದ ಬಗ್ಗೆ ಹೆಚ್ಚು ಒತ್ತು ಕೊಟ್ಟು ಅದಕ್ಕೆ ಬಳಸಿಕೊಳ್ಳುವ ವಸ್ತು, ಪಾತ್ರಗಳು, ಭಾಗವತರು, ರಂಗಮಂಟಪ ನಿರ್ಮಾಣ (ಅಟ್ಟಣೆ), ವಾದ್ಯ ವಿಶೇಷಗಳು ಅಲಂಕಾರ ವಿಶೇಷಗಳನ್ನು ಡಾ. ಡಿ.ಕೆ. ರಾಜೇಂದ್ರ ಅವರು ವಿವರವಾಗಿ 'ಮೂಡಲಪಾಯ'ದಲ್ಲಿ ವಿವರಿಸಿದ್ದಾರೆ. ಹಾಡುಗಾರಿಕೆ ಪ್ರಧಾನ

ವಾದ 'ತಾಳಮದ್ದಳೆ'ಉಳಿದು ಬೆಳೆಯಬೇಕಾದುದೆಂಬುದನ್ನು 'ಯಕ್ಷಗಾನ ತಾಳಮದ್ದಳೆ'ಯಲ್ಲಿ ಕುಕ್ಕಿಲ ಕೃಷ್ಣಭಟ್ಟರು ನಿರೂಪಿಸಿದ್ದಾರೆ. ಉಡುಪಿಯಿಂದ ಕಾಸರಗೋಡಿನವರೆಗೆ ಪ್ರಚಲಿತವಿರುವ ತೆಂಕುತಿಟ್ಟೆಂದು ಕರೆಯಲ್ಪಡುವ ಯಕ್ಷಗಾನ ಪದ್ಧತಿ ಕಥಕ್ಕಳಿಗೆ ಸಮೀಪವಾಗಿರುವುದನ್ನೂ ಅದರ ವೇಷ ಭೂಷಣಗಳು, ನೃತ್ಯವಿಧಾನ ಮತ್ತು ಅದರಲ್ಲಿ ಸುಧಾರಣೆಗಳಾಗುತ್ತಿದ್ದರು ಸಂಪ್ರದಾಯವನ್ನು ಉಳಿಸಿಕೊಂಡು ಬರುವ ಪ್ರಜ್ಞೆ ಇರುವುದನ್ನು 'ಯಕ್ಷಗಾನ ತೆಂಕುತಿಟ್ಟು'ವಿನಲ್ಲಿ ಅಮೃತ ಸೋಮೇಶ್ವರರು ವಿವರಿಸಿದ್ದಾರೆ. 'ಬಡಗುತಿಟ್ಟಿನ ಯಕ್ಷಗಾನ'ದಲ್ಲಿ ಎ. ಸದಾನಂದ ಹೆಬ್ಬಾರರು ಬಡಗುತಿಟ್ಟಿನ ಯಕ್ಷಗಾನದ ವೈಶಿಷ್ಟ್ಯವನ್ನು ಮತ್ತು ಭಾಗವತರ ಪಾತ್ರ, ವೇಷ, ನೃತ್ಯಾದಿಗಳ ವಿವರವನ್ನು ಕೊಟ್ಟು ಕಾಲಕ್ಕೆ ತಕ್ಕಂತೆ ಬದಲಾವಣೆ ಆಗಬೇಕಾಗಿರುವುದನ್ನು ಹೇಳಿದ್ದಾರೆ. ಆರ್ವಿಯಸ್ ಸುಂದರಂ ಅವರು 'ತೆಲುಗು ಯಕ್ಷಗಾನ'ಗಳು ಎಂಬ ತಮ್ಮ ಲೇಖನದಲ್ಲಿ ತೆಲುಗಿನಲ್ಲಿ ಯಕ್ಷಗಾನಗಳ ಉಗಮ, ಅವುಗಳಿಗೆ ಪ್ರೋತ್ಸಾಹವಿತ್ತ ರಾಜರು, ಯಕ್ಷಗಾನಗಳನ್ನು ರಚಿಸಿದ ಕವಿಗಳು ಮತ್ತು ಯಕ್ಷಗಾನಗಳಲ್ಲಿ ಕಾಣುವ ಕೆಲವು ಪಾತ್ರಗಳ ವಿವರಗಳನ್ನು ಕೊಟ್ಟಿದ್ದಾರೆ. ಹಿ. ಶಿ. ರಾಮಚಂದ್ರ ಗೌಡರು 'ಕಥಕ್ಕಳಿ' ಆರ್ಯ ದ್ರಾವಿಡ ಸಂಸ್ಕೃತಿಗಳ (ನಂಬೂದರಿ ಮತ್ತು ನಾಯರ್‌ಗಳ ನಡುವೆ) ಘರ್ಷಣೆಯ ಫಲವಾಗಿ ಅನೇಕ ಬದಲಾವಣೆಗಳನ್ನು ಪಡೆದುಕೊಂಡು, ಯುದ್ಧವಿದ್ಯೆಯ ಕೆಲವು ವರಸೆಗಳನ್ನು ತನ್ನಲ್ಲಿ ಸೇರಿಸಿಕೊಂಡು, ಭರತನಾಟ್ಯದಿಂದ ಪ್ರಭಾವಿತವಾಗಿ ಪೂರ್ಣರೂಪದ ಕಲೆಯಾಗಿದೆ ಎಂದು ವಿವರಿಸಿದ್ದಾರೆ. ಕಥಕ್ಕಳಿಯಲ್ಲಿ ಬಳಸುವ ಪರದೆ, ದೀಪದಕಂಬ, ವಾದ್ಯಮೇಳ ಚಂಡೆ, ಮದ್ದಳೆ, ಹಾಡುಗಾರರು, ನಟರು ಮತ್ತು ಅವರು ಕೈಗೊಳ್ಳಬೇಕಾದ ಶ್ರಮಪೂರ್ಣವಾದ ಅಭ್ಯಾಸ, ಕಥಕ್ಕಳಿಯನ್ನು ಬೆಳೆಸಿದ ಕವಿಗಳು, ಕಥಕ್ಕಳಿಯಲ್ಲಿ ಬಳಸುವ ಕಿರೀಟಾದಿ ಆಭರಣಗಳು ಮತ್ತು ಅವು ಪಾತ್ರದಿಂದ ಪಾತ್ರಕ್ಕೆ ಬದಲಾಗುವುದು, ನಟರಿಗೆ ಹಚ್ಚುವ ಬಣ್ಣ ಮತ್ತು ಒಂದೊಂದು ಬಣ್ಣಕ್ಕೂ ಇರುವ ಅರ್ಥ, ಗಡ್ಡಗಳು ಮತ್ತು ಅವುಗಳಿಂದಾಗಿ ಆಗುವ ಪಾತ್ರಗಳ ಸ್ಥಾನಮಾನ ನಿರ್ಣಯ, ಸಂಕೇತಗಳು ಮತ್ತು ಮುದ್ರೆಗಳು ಮತ್ತು ಅವುಗಳ ವಿವರವಾದ ವರ್ಣನೆ ಎಲ್ಲವನ್ನೂ ಈ ಲೇಖನಗಳಲ್ಲಿ ಹೇಳಿದ್ದಾರೆ. ಇದು ಕಥಕ್ಕಳಿಯನ್ನು ಕುರಿತ ವಿವರಪೂರ್ಣವಾದ ಪ್ರೌಢಪ್ರಬಂಧ. 'ತಮಿಳುನಾಡಿನ ಜನಪದ ರಂಗಭೂಮಿ'ಯ ಬಗ್ಗೆ ಬರೆಯುತ್ತ ಡಾ. ಜೀ. ಶಂ. ಪರಮಶಿವಯ್ಯ ಅವರು ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿರುವ ಸೂತ್ರದ ಗೊಂಬೆಯಾಟ (ಬೊಮ್ಮಲಾಟ–ಪಾವೈ ಕೂತ್ತು), ಜನಪ್ರಿಯ ತಿರುಕೂತ್ತು (ಬೀದಿ ಆಟ) ಮತ್ತು ಭಾಗವತ ಮೇಳ ಅವುಗಳನ್ನು ಆಡುವ ವಿಧಾನ ಮತ್ತು ಅವುಗಳ ಇಂದಿನ ಸ್ಥಿತಿಯನ್ನು ವಿವರಿಸಿದ್ದಾರೆ. 'ಗ್ರಾಮಾಂತರ ಪ್ರದೇಶಗಳಲ್ಲಿ ನಾಟಕ ಕಲೆ'ಯ ಬಗ್ಗೆ ಬರೆಯುತ್ತ ಸದಾಶಿವ ಎಣ್ಣೆಹೊಳೆ ಅವರು ನಾಟಗಳು ಅಸ್ತಿತ್ವಕ್ಕೆ ಬಂದಂದಿನಿಂದ ಇಂದಿನವರೆಗೆ ಗ್ರಾಮಗಳಲ್ಲಿ ಆಡುವ ನಾಟಕಗಳಲ್ಲಿ ಆಗಿರುವ–ಬಣ್ಣ, ವೇಷಭೂಷಣ, ದೀಪಾಲಂಕಾರ, ವಾದ್ಯಗಳ...ಬದಲಾವಣೆಗಳನ್ನು ಮೂರು ಹಂತಗಳಲ್ಲಿ ಗುರುತಿಸಿದ್ದಾರೆ. 'ಶ್ರೀಕೃಷ್ಣ ಪಾರಿಜಾತ'ದಲ್ಲಿ ಆರ್. ಜಿ. ಕುಲಕರ್ಣಿ ಅವರು ಜಾನಪದ ನಾಟಕವಾದ ಶ್ರೀಕೃಷ್ಣ ಪಾರಿಜಾತವ ಕಾಲ, ಅದರ ಪ್ರಾಚುರ್ಯಕ್ಕೆ ಕಾರಣರಾದ ಅಪರಾಳ ತಮ್ಮಣ್ಣ ಮತ್ತು ಕುಲಗೋಡ ತಮ್ಮಣ್ಣರ ಜೀವನ ಪರಿಚಯಮಾಡಿಕೊಡುವುದರ ಜೊತೆಗೆ ಶ್ರೀಕೃಷ್ಣ ಪಾರಿಜಾತದ ವರ್ಣನಾತ್ಮಕ ವಿಮರ್ಶೆಯನ್ನೂ ಮಾಡಿದ್ದಾರೆ.

ಎಚ್. ಎಸ್. ಹರಿಶಂಕರ್ ಅವರು 'ಒಡೆಯರ ಕಾಲದ ಸಾಹಿತ್ಯ–ನಾಟಕಗಳು' ಎಂಬ ಲೇಖನದಲ್ಲಿ ಕನ್ನಡದ ಮೊದಲ ನಾಟಕವಾದ ಮಿತ್ರವಿಂದಾ ಗೋವಿಂದ ಕೃತಿಚೌರ್ಯ ಎಂದು ಹೇಳಿ ಚಿಕ್ಕದೇವರಾಜ ಒಡೆಯರು, ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಚಾಮರಾಜ ಒಡೆಯರ ಕಾಲದಲ್ಲಿ ನಾಟಕಕ್ಕೆ ಸಿಕ್ಕಿದ ಪ್ರೋತ್ಸಾಹ ಮತ್ತು ನಾಟಕಗಳ ಬೆಳವಣಿಗೆಯನ್ನು ಕುರಿತು ವಿವರಿಸಿದ್ದಾರೆ. 'ಸಿಂಗರಾರ್ಯ, ಅಳಸಿಂಗರಾಚಾರ್ಯರ್ ಮತ್ತು ಶೇಷಯ್ಯಂಗಾರ್ ಅವರ ನಾಟಕಗಳ'ನ್ನು ಕುರಿತು ಬರೆದಿರುವ ಕೆ. ಆರ್. ಶೇಷಗಿರಿ ಅವರು ಸಿಂಗಾರಾರ್ಯನ ಮಿತ್ರವಿಂದಾ ಗೋವಿಂದಾ, ಅಳಸಿಂಗರಾಚಾರ್ಯರ ಶ್ರೀಮತಿ ಪರಿಣಯ ನಾಟಕಂ ಮತ್ತು ಪಂಚರಾತ್ರ ರೂಪಕ ಮತ್ತು ಶೇಷ

ಯ್ಯಂಗಾರ್ ಅವರ ಬಾಲಚರಿತಂ ನಾಟಕಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಈ ಮೂವರು ನಾಟಕಕಾರರೂ ಶಂಕರಗೌಡರ ಜಿಲ್ಲೆಯಾದ ಮಂಡ್ಯ ಜಿಲ್ಲೆಗೆ ಸೇರಿದವರೆಂಬುದೊಂದು ವಿಶೇಷ. 'ಎಂ. ಎಲ್. ಶ್ರೀಕಂಠೇಗೌಡರ ಮೂರು ನಾಟಕ'ಗಳನ್ನು ವಿವೇಚನೆಗೆ ತೆಗೆದುಕೊಂಡ ಶಂ. ಸ. ಐತಾಳ ಅನುವಾದಗಳಾದ ಪ್ರತಾಪರುದ್ರದೇವ (ಮ್ಯಾಕ್‌ಬೆತ್), ಪ್ರಮೀಳಾರ್ಜುನೀಯಂ (ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್) ಮತ್ತು ಸ್ವತಂತ್ರ ಕೃತಿಯಾದ ಸೀತಾಸ್ವಯಂವರಂ ನಾಟಕಗಳಲ್ಲಿ ಹೇಗೆ ಶ್ರೀಕಂಠೇಗೌಡರು ಹಂತಹಂತವಾಗಿ ಪರಿಪೂರ್ಣತೆಯ ಕಡೆಗೆ ಬಂದಿದ್ದಾರೆಂಬುದನ್ನು ವಿವರಿಸಿದ್ದಾರೆ. ಪ್ರತಾಪ ರುದ್ರದೇವದ ಅನುವಾದ ಅಷ್ಟು ಹಿತಕರವಾಗಿಲ್ಲದಿದ್ದರೆ ಪ್ರಮೀಳಾರ್ಜುನೀಯ ಇಲ್ಲಿನ ಪರಿಸರಕ್ಕೆ ಹೊಂದುವಂತಿದೆಯೆಂದೂ ಸೀತಾಸ್ವಯಂವರ ಸ್ವತಂತ್ರ ಕಲ್ಪನೆಯಿಂದ ಕೂಡಿದ ನಾಟಕವೆಂದಿದ್ದಾರೆ. ಮೂರು ನಾಟಕಗಳಲ್ಲಿಯೂ ಕಂದ ವೃತ್ತಗಳಿಂದ ಕೂಡಿದ ನಡುಗನ್ನಡ ಭಾಷೆಯ ಬಳಕೆಯಿದೆಯೆಂದು ಹೇಳಿದ್ದಾರೆ. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಕನ್ನಡಕ್ಕಾಗಿ ದುಡಿದ ಈ ಮಹನೀಯರ ಮೂರು ನಾಟಕಗಳನ್ನು ಹೊಸಗನ್ನಡಕ್ಕೆ ಹಾಕಿದ ಭದ್ರ ಬುನಾದಿಯೆಂದು ಕರೆದಿದ್ದಾರೆ. (ಲೇಖಕರು ಈ ಮೂರು ನಾಟಕಗಳ ಹೊರತು ಉಳಿದ ನಾಟಕಗಳು ದೊರೆತಿಲ್ಲವೆಂದಿದ್ದಾರೆ. ಆದರೆ ಶ್ರೀಕಂಠೇಗೌಡರ ಉಳಿದ ನಾಟಕಗಳೂ ದೊರೆತು ಅವುಗಳು ಅಚ್ಚಾಗಿವೆ.) 'ನಾಟಕದ ಉಗಮ ಮತ್ತು ಕೆಲವು ಸಾಮಾಜಿಕ ನಾಟಕಕಾರರ' ಬಗ್ಗೆ ಬರೆಯುತ್ತಾ ಕೆ. ಎಸ್. ಶಿವಪ್ಪ ಅವರು ಮುಖ್ಯವಾಗಿ ಕೈಲಾಸಂ, ಶ್ರೀರಂಗ, ಬೇಂದ್ರೆ, ಕುವೆಂಪು, ಪರ್ವತವಾಣಿ ಮತ್ತು ಕ್ಷೀರಸಾಗರರ ನಾಟಕಗಳಲ್ಲಿ ಸಾಮಾಜಿಕತೆಯಿರುವುದನ್ನು ತೋರಿಸಿದ್ದಾರೆ. ಯಾರೊಬ್ಬರ ಬಗ್ಗೆಯೂ ಆಳವಾದ ವಿಚಾರಮಾಡಿಲ್ಲ. 'ಮರಾಠಿ ರಂಗಭೂಮಿ ಮತ್ತು ಕನ್ನಡ ರಂಗಭೂಮಿ' ಪರಸ್ಪರ ಕೊಡುಕೊಳುವಿಕೆಯಿಂದ—ನಟರಿಂದ, ನಾಟಕಗಳಿಂದ, ರಂಗಮಂದಿರ ಪರಿಕರಗಳಿಂದ, ವಿಚಾರದಿಂದ—ತುಷ್ಟಿ ಪುಷ್ಟಿ ಪಡೆದಿರುವುದನ್ನು ಹಿಂದಿನಿಂದ ಇತ್ತೀಚಿನವರೆಗೂ ತೌಲನಿಕವಾಗಿ ಮಿರ್ಜಿ ಅಣ್ಣಾರಾಯರು ನೋಡಿದ್ದಾರೆ. 'ಹಿಂದೀ ನಾಟಕಗಳು ಮತ್ತು ಕನ್ನಡ'ದ ಬಗ್ಗೆ ಬರೆಯುತ್ತಾ ಪ್ರಧಾನ್ ಗುರುದತ್ ಅವರು ಹಿಂದೀ ನಾಟಕದ ಆರಂಭ ಕಾಲದಿಂದ ಆಧುನಿಕ ಕಾಲದವರೆಗೆ—ಭಾರತೇಂದು ಅವರಿಂದ ಮೋಹನರಾಕೇಶ್‌ವರೆಗೆ—ಹಿಂದೀ ನಾಟಕದ ಚರಿತ್ರೆಯನ್ನು ನಿರೂಪಿಸಿ ಅಲ್ಲಿನ ಉತ್ತಮ ಕೃತಿಗಳು ಇಲ್ಲಿಗೂ ಇಲ್ಲಿನ ಉತ್ತಮ ಕೃತಿಗಳು ಅಲ್ಲಿಗೂ ಅನುವಾದಿತವಾಗದೆ ಇರುವುದಕ್ಕೆ ಕಾರಣಗಳನ್ನು ಹುಡುಕಿ ಮುಂದೆ ಪರಸ್ಪರ ಅನುವಾದಗಳಿಂದ ಎರಡೂ ಭಾಷೆಯ ನಾಟಕ ರಂಗಭೂಮಿ ತುಷ್ಟಿ ಪುಷ್ಟಿಗಳನ್ನು ಪಡೆಯಲೆಂದು ಹಾರೈಸಿದ್ದಾರೆ. 'ಎಂಬತ್ತು ವರ್ಷಗಳ ಹಿಂದೆ ರಂಗಭೂಮಿಯು' ಬಗ್ಗೆ ಮಾತನಾಡುತ್ತ ಗುಬ್ಬಿ ವೀರಣ್ಣನವರು* ಎಂಬತ್ತು ವರ್ಷಗಳಲ್ಲಿ ನಾಟಕ ಸಂಸ್ಥೆಗಳು ದಾಟಿದ ಅವಸ್ಥೆಗಳನ್ನೂ ನಾಟಕವಾಡಲು ಅವರು ಪಡುತ್ತಿದ್ದ ಬವಣೆಯನ್ನೂ, ಚಲನ ಚಿತ್ರದಿಂದ ನಾಟಕಕ್ಕೆ ಆಗಿರುವ ತೊಂದರೆಯನ್ನೂ ನಾಟಕರಂಗ ಚೇತರಿಸಿಕೊಳ್ಳಬೇಕಾದರೆ ಸರಕಾರ ಮಾಡಬೇಕಾಗಿರುವ ಕೆಲಸವನ್ನು ತಮ್ಮ ಸ್ವಾನುಭವದಿಂದ ನಿರೂಪಿಸಿದ್ದಾರೆ ಇದೇ ಸಂದರ್ಭದಲ್ಲಿ ಮಾತನಾಡಿದ ಮಾಸಾ ಚೌಡಪ್ಪ ಅವರು 'ನಮ್ಮ ರಂಗಭೂಮಿ'ಯ ಬಗ್ಗೆ ಮಾತನಾಡುತ್ತ ಸುಸಜ್ಜಿತವಾದುದಲ್ಲವಾದರೂ ಸುಮಾರಾದ ಎಲ್ಲ ಅನುಕೂಲಗಳನ್ನು ರಂಗಭೂಮಿಗಳು ರಂಗಭೂಮಿಯ ಪರಿಕರಗಳೊಂದಿಗೆ ವಿಶೇಷವಾಗಿ ಹಳ್ಳಿಗರಿಗೆ ಕೊನೆಯ ಪಕ್ಷ ಐವತ್ತು ಹಳ್ಳಿಗೊಂದರಂತೆ ದೊರೆಯಬೇಕೆಂದು ಒತ್ತಿ ಹೇಳಿ ಆಗ ಮಾತ್ರ ನಾಟಕ ರಂಗದ ಅಭ್ಯುದಯ ಆಗುತ್ತದೆಂದು ಹೇಳಿದ್ದಾರೆ.

'ಕನ್ನಡ ಚಾರಿತ್ರಿಕ ನಾಟಕಗಳ' ವಿವೇಚನೆ ಮಾಡುತ್ತ ಮು. ಶಿವನಂಜಯ್ಯ ಅವರು ಸಂಸರ ನಾಟಕಗಳು ಚಾರಿತ್ರಿಕ ನಾಟಕಗಳಿಗೆ ಗಟ್ಟಿಯ ತಳಹದಿಯನ್ನು ಹಾಕಿದಲ್ಲಿಂದ ಪ್ರಾರಂಬಿಸಿ ಗಿರೀಶರ 'ತುಘಲಕ್' ಮತ್ತು ಲಂಕೇಶರ 'ಸಂಕ್ರಾಂತಿ' ನಾಟಕಗಳವರೆಗಿನ ಎಲ್ಲ ಐತಿಹಾಸಿಕ ನಾಟಕಗಳ

---

* ಈಗ ದಿವಂಗತರು. ಅವರು ಬೇರೊಂದು ಸಂದರ್ಭದಲ್ಲಿ ಹಿಂದೆ ಮಾಡಿದ್ದ ಭಾಷಣವನ್ನು ಇಲ್ಲಿ ಲೇಖನವಾಗಿ ಸೇರಿಸಿಕೊಂಡಿದೆ.

ಸ್ಥೂಲ ವಿವೇಚನೆ ಮಾಡಿ ಚಾರಿತ್ರಿಕ ನಾಟಕಗಳು ಹೊಸ ಧೋರಣೆಗಳನ್ನು ಬೆಳೆಸಿಕೊಳ್ಳಬೇಕಾದುದನ್ನೂ ಗುಣಕ್ಕೆ ಪ್ರಾಶಸ್ತ್ಯ ಕೊಟ್ಟು ಪ್ರಯೋಗ ನಡೆಸಬೇಕಾಗಿರುವುದನ್ನೂ ಹೇಳಿದ್ದಾರೆ. 'ಕನ್ನಡದಲ್ಲಿ ಮಕ್ಕಳ ನಾಟಕಗಳು' ಎಂಬ ಲೇಖನದಲ್ಲಿ ಡಿ. ವಿಜಯ ಅವರು ಇದುವರೆಗೆ ಕನ್ನಡದಲ್ಲಿ ಬಂದಿರುವ ಎಲ್ಲ ಮಕ್ಕಳ ನಾಟಕಗಳ ಪ್ರಸ್ತಾಪ ಮಾಡಿದ್ದಾರೆ. 'ಕನ್ನಡದಲ್ಲಿ ಗೀತ ನಾಟಕಗಳ' ಬಗ್ಗೆ ಬರೆಯುತ್ತ ಉಮಾಶಂಕರು ಸಂಸ್ಕೃತ ಕಾವ್ಯದಲ್ಲಿಯೆ ಗೀತ ನಾಟಕದ ಹೊಳಹನ್ನು ಕಾಣಬಹುದಾದರೂ ಪಾಶ್ಚಾತ್ಯ ಅಪೆರಗಳಿಂದ ಪ್ರಭಾವಿತರಾಗಿ ಗೀತ ನಾಟಕಗಳು ನಮ್ಮಲ್ಲಿ ಬಂದುವೆಂಬುದನ್ನು ಹೇಳಿ ಕನ್ನಡದಲ್ಲಿ ಕಾರಂತರು ಮತ್ತು ಪು.ತಿ.ನ. ಅವರು ಪ್ರಮುಖ ಗೀತನಾಟಕಕಾರರೆಂದಿದ್ದಾರೆ. 'ಹವ್ಯಾಸಿ ಪ್ರಯೋಗಗಳ' ಬಗ್ಗೆ ಬರಯುತ್ತ ಸಿಂಧುವಳ್ಳಿ ಅನಂತಮೂರ್ತಿ ವೃತ್ತಿ ನಾಟಕ ಸಂಸ್ಥೆಗಳಿಗಿಂತ ಭಿನ್ನವಾದ ಹವ್ಯಾಸಿ ನಾಟಕ ರಂಗದಲ್ಲಿ ನಿರ್ದೇಶನ ಜವಾಬ್ದಾರಿ ಹೆಚ್ಚಿನದೆಂಬುದನ್ನೂ ಬೆಳಕಿನ ವ್ಯವಸ್ಥೆ, ರಂಗಪರಿಕರಗಳಿಂದ ಸಾಮಾನ್ಯ ನಾಟಕವನ್ನೂ ಪರಿಣಾಮಕಾರಿಯಾಗಿ ಆಡಬಹುದೆಂಬುದನ್ನು ನಿರೂಪಿಸಿ ಇದುವರೆಗೆ ಹವ್ಯಾಸಿ ನಾಟಕ ಕಲಾವಿದರು ಆಡಿರುವ ಎಲ್ಲ ರೀತಿಯ ನಾಟಕಗಳ ಯಶಸ್ಸು ಅಥವಾ ಸೋಲಿಗೆ ನಿರ್ದೇಶಕ, ನಟ, ಬೆಳಕಿನ ವ್ಯವಸ್ಥೆ ಮತ್ತು ರಂಗ ಪರಿಕರಗಳು ಹೇಗೆ ನೆರವಾಗಿವೆ ಅಥವಾ ಕೈಕೊಟ್ಟಿವೆ ಎಂಬುದನ್ನೂ ಇಂತಹ ನಾಟಕಗಳು ಮನರಂಜನೆ ಒದಗಿಸುವುದಲ್ಲದೆ ಪ್ರೇಕ್ಷಕರನ್ನು ಚಿಂತನೆಗೆ ಹಚ್ಚುತ್ತವೆಂಬುದನ್ನೂ ಮತ್ತು ಒಂದೇ ನಾಟಕ ಒಂದೆಡೆ ಯಶಸ್ವಿಯಾದರೆ ಮತ್ತೊಂದೆಡೆ ಸೋಲಬಹುದೆಂದೂ ಆ ಸೋಲಿಗೆ ನಿರ್ದೇಶಕ, ನಟರು, ಪ್ರೇಕ್ಷಕರು ಯಾರಾದರೂ ಕಾರಣರಾಗಬಹುದೆಂಬುದನ್ನೂ ವಿವರಿಸಿದ್ದಾರೆ. 'ಕನ್ನಡದ ಇತ್ತೀಚಿನ ಕೆಲವು ಸಾಮಾಜಿಕ ನಾಟಕಗಳು' ಎಂಬ ಶೀರ್ಷಿಕೆಯಲ್ಲಿ ಎಚ್.ಬಿ. ಯಶೋಧರಾ ಅವರು ಕೈಲಾಸಂ, ಶ್ರೀರಂಗ, ಪರ್ವತವಾಣಿ ಮೊದಲಾದ ನಾಟಕಕಾರರ ನಾಟಕಗಳಲ್ಲಿನ ಸಾಮಾಜಿಕತೆಯನ್ನು ಕುರಿತು ಬರೆದಿದ್ದಾರೆ. 'ಇಂದಿನ ನಾಟಕ ಮತ್ತು ಸಾಮಾನ್ಯ' ಲೇಖನದಲ್ಲಿ ಬಿ. ಎನ್. ನಾಗರಾಜಭಟ್ ಅವರು ಸಂಸ್ಕೃತ ನಾಟಕಗಳು ಅಥವಾ ಅವುಗಳ ಅನುವಾದಗಳು ಕೇವಲ ಒಂದು ವರ್ಗದ ಜನಕ್ಕೆ ಸೀಮಿತವಾದರೆ ನವ್ಯ ನಾಟಕಗಳು ವಿದೇಶಿ ಕಣ್ಣಿನಿಂದ ಇಲ್ಲಿನ ಸಮಾಜವನ್ನು ನೋಡುವ ಮೂಲಕ ಜನಸಾಮಾನ್ಯರಿಂದ ದೂರವಾಗಿಯೆ ಉಳಿದಿವೆ. ಜನಸಾಮಾನ್ಯರಿಗೆ ಹತ್ತಿರವಾಗಿದ್ದ ನಾಟಕಗಳೆಂದರೆ ನವೋದಯ ಕಾಲದಲ್ಲಿ ಬಂದ ನಾಟಕಗಳೆ ಎಂಬ ನಿಲುವಿಗೆ ಬಂದಿದ್ದಾರೆ. 'ನಾಟಕ ಕಲೆ ಮತ್ತು ಸಮಾಜದ ಮೇಲೆ ಅವರ ಪ್ರಭಾವ' ಎಂಬ ಲೇಖನದಲ್ಲಿ ಎಚ್ಚೆಸ್ಕೆ ಅವರು ನಾಟಕಕಾರ ತನ್ನ ಕೃತಿಯನ್ನು ಸಮಕಾಲೀನ ಸಮಾಜವನ್ನು ಗುರಿಯಲ್ಲಿಟ್ಟುಕೊಂಡು ರಚಿಸುವಂತೆಯೇ ಸಾರ್ವಕಾಲಿಕವೂ ಆಗುವಂತೆ ರಚಿಸಬಹುದೆಂದು ವಿವರಿಸಿದ್ದಾರೆ. 'ವಿಚಾರ ಪ್ರಧಾನ ನಾಟಕಗಳು' ಲೇಖನದಲ್ಲಿ ಎನ್ಕೆ ಕುಲಕರ್ಣಿ ಅವರು ಪ್ರಧಾನವಾಗಿ ಶ್ರೀರಂಗರನ್ನು ವಿಚಾರ ಪ್ರಧಾನ ನಾಟಕಕಾರರೆಂದೂ ಕೈಲಾಸಂ ಅವರನ್ನು ಭಾವನಾ ಪ್ರಧಾನ ನಾಟಕಕಾರರೆಂದೂ ಹೇಳಿ ಉಳಿದ ನಾಟಕಕಾರರ ಕೃತಿಗಳಲ್ಲಿ ಕಂಡುಬರುವ ವಿಚಾರದ ಸುಳುಹನ್ನು ತೆರೆದು ತೋರಿದ್ದಾರೆ. 'ಕನ್ನಡದಲ್ಲಿ ಅಸಂಗತ ನಾಟಕಗಳ' ಬಗೆಗೆ ಬರೆಯುತ್ತಾ ಎಚ್. ಎಮ್. ಚನ್ನಯ್ಯ ಅವರು ಪ್ರಮುಖವಾಗಿ ಶ್ರೀ. ನ. ರತ್ನ, ಚಂದ್ರಶೇಖರ ಪಾಟೀಲ, ಚಂದ್ರಶೇಖರ ಕುಸುನೂರ ಮತ್ತು ತಮ್ಮ ಅಸಂಗತ ನಾಟಕಗಳನ್ನು ಪ್ರಸ್ತಾಪಿಸಿ ಕನ್ನಡದ ಅಸಂಗತನಾಟಕ ಈಗ 'ಎಪಿಕ್-ನಾಟಕ' ರೀತಿಯ ಕಡೆ ಪರಿವರ್ತಿತವಾಗುತ್ತದೆಯೊ ಏನೊ ಎಂದು ಅಭಿಪ್ರಾಯಪಡುತ್ತಾರೆ. 'ಕನ್ನಡದ ನವ್ಯ ನಾಟಕಗಳ' ಬಗೆಗೆ ಎಸ್. ಶ್ರೀಧರಮೂರ್ತಿ ಬರೆಯುತ್ತಾ ರಂಗವನ್ನು ಗಮನವಲ್ಲಿಟ್ಟುಕೊಂಡು ಅದರ ಅನೇಕ ಸಾಧ್ಯತೆಗಳನ್ನು ದುಡಿಸಿಕೊಳ್ಳಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತ ಬೆಳಕು ಸಂಯೋಜನೆಯ ಭಿನ್ನವಿಧಾನಗಳಿಂದ, ದೃಶ್ಯ ಸಂಘಟನೆಯ ನವೀನ ವಿಧಾನಗಳಿಂದ, ಹಿನ್ನೆಲೆ ಶಬ್ದಪ್ರಸರಣೆ ಮೊದಲಾದ ಹೊಸ ತಂತ್ರಗಳಿಂದ ಶ್ರೀರಂಗ, ಲಂಕೇಶ್, ಗಿರೀಶ್ ಕಾರ್ನಾಡ್, ಚಂದ್ರಶೇಖರ ಪಾಟೀಲ್, ಕಂಬಾರ ಮೊದಲಾದವರು ನವ್ಯ ನಾಟಕಗಳನ್ನು ಬರೆದಿದ್ದರೂ ಅವರು ಏರಬಹುದಾದ ಎತ್ತರಕ್ಕೆ ಏರಿಲ್ಲವೆಂದು ಹೇಳಿದ್ದಾರೆ. 'ನಾಟಕ ನಿರ್ಮಾಣ ವಿಧಾನ'ವನ್ನು ಕುರಿತು ಆರ್. ಗುರುರಾಜರಾವ್ ಅವರು ನಿರ್ಮಾತೃ, ನಿರ್ದೇಶಕ, ನಟ, ರಂಗಮಂಟಪದ ದೀಪ

ಗಳ ವ್ಯವಸ್ಥೆ ಹೇಗೆ ಇರಬೇಕು ಎಂದು ಹೇಳಿ ಇವೆಲ್ಲದರ ಸಂಯೋಜನೆಯಿಂದ ಉತ್ತಮ ರಂಗ ಮಂದಿರ ಮೂಡಬೇಕು ಎಂದಿದ್ದಾರೆ.

'ಚಲನಚಿತ್ರ ಮತ್ತು ರಂಗಭೂಮಿ'ಯ ಸಮಸ್ಯೆಯನ್ನು ವಿವರಿಸುತ್ತ ತ.ರಾ.ಸು. ಅವರು ನಾಟಕವೇ ಚಲನಚಿತ್ರಕ್ಕೆ ಪ್ರೇರಕವಾದರೂ ಆಧುನಿಕ ವಿಜ್ಞಾನದ ತಾಂತ್ರಿಕ ಜ್ಞಾನದಿಂದಾಗಿ ವಾಮನನಂತೆ ತನಗೆ ಜನ್ಮಕೊಟ್ಟ ನಾಟಕವನ್ನೇ ಚಲನಚಿತ್ರ ಮೂಲೆಗುಂಪಾಗಿ ಮಾಡಿದೆ. ಆದರೆ ಪುರಾತನ ಸಂಸ್ಕೃತಿಯಾದ ನಾಟಕವನ್ನು ಉಳಿಸಿಕೊಂಡು ಬರಬೇಕು. ಅಂತಹ ಪ್ರಯತ್ನ ರಷ್ಯಾ ಮತ್ತಿತರ ದೇಶಗಳಲ್ಲಿ ನಡೆಯುತ್ತಿದೆ. ಆ ದಿಸೆಯಲ್ಲಿ ಇಲ್ಲೂ ಪ್ರಯತ್ನ ಸಾಗಬೇಕೆಂದು ಕಳಕಳಿ ಯಿಂದ ತ.ರಾ.ಸು. ವಿನಂತಿಸಿಕೊಂಡಿದ್ದಾರೆ. 'ಕರ್ನಾಟಕದಲ್ಲಿ ಚಲನಚಿತ್ರ ಮಾಧ್ಯಮ'ದ ಬಗ್ಗೆ ಬರೆಯುತ್ತಾ ಶಂಕರಲಿಂಗೇಗೌಡರು ಮೂಕಿಯಿಂದ ಇಂದಿನವರೆಗೆ ಕನ್ನಡ ಚಲನಚಿತ್ರ ಬೆಳೆದ ಬಗೆಯನ್ನು ಅದರ ಸಾಧನೆಯನ್ನು ವಿವರಿಸಿ ಚಲನಚಿತ್ರಗಳು ಸಮಾಜದ ಮೇಲೆ ಬೀರುವ ಪ್ರಭಾವ ದಿಂದಾಗಿ ಅವು ಇಂದಿನ ಕಾಮಪ್ರಚೋದಕ ನೀತಿಯನ್ನು ಬಿಟ್ಟು ಸಮಾಜ ಸುಧಾರಣೆಯ ರೀತಿ ಯಲ್ಲಿ ಬರಬೇಕೆಂದು ವಿನಂತಿಸಿಕೊಂಡಿದ್ದಾರೆ.

'ಕರ್ನಾಟಕದಲ್ಲಿ ನಾಟಕ ಕಂಪನಿಗಳು' ಕ್ರಿ.ಶ. ೧೮೮೨ ರಿಂದ ಇಂದಿನವರೆಗೆ ಆಗಿಹೋದ ಏಳು ಬೀಳಿನ ಚರಿತ್ರೆಯನ್ನು ಬಿ. ಎಸ್. ಸಣ್ಣಯ್ಯ ಅವರು ಕೊಟ್ಟಿದ್ದಾರೆ. ಈ ಚರಿತ್ರೆ ನೀರಸವಾಗಿಲ್ಲ. ಆ ಕಂಪನಿಗಳನ್ನು ಕಟ್ಟುವಲ್ಲಿ ನಟರೋ, ಮಾಲೀಕರೊ ಪಟ್ಟ ಕಷ್ಟ, ಮಾಡಿದ ತ್ಯಾಗ ಇವುಗಳ ವಿವರಣೆಯಿಂದಲೂ, ದ್ವೇಷಾಸೂಯೆಯಿಂದಲೊ ಮತ್ತಾವುದೋ ಕಾರಣದಿಂದಲೊ ಕಟ್ಟಿದ ಸಂಸ್ಥೆ ಯನ್ನು ಒಡೆಯುವ ನೀಚತನದ ವಿವರಣೆಯಿಂದಲೂ. ನಾಟಕ ಕಂಪನಿಗಳಿಗಾಗಿ ತಮ್ಮ ಜೀವನವನ್ನೇ ಮುಡಿಪಿಟ್ಟ ಕಲಾ ತಪಸ್ವಿಗಳ ಸರಸವಾದ ವ್ಯಕ್ತಿ ಚಿತ್ರಗಳಿಂದಲೂ ಲೇಖನ ಓದಿಸಿಕೊಂಡು ಹೋಗು ತ್ತದೆ. ನಾಟಕ ಪ್ರಪಂಚದ ದಿಗ್ಗಜಗಳಾದ ವರದಾಚಾರ್ಯರು, ಗುಬ್ಬಿ ವೀರಣ್ಣನವರು, ಪೀರ್ ಸಾಹೇಬರು, ಸುಬ್ಬಯ್ಯನಾಯ್ಡು ಮೊದಲಾಗಿ ಚಿಕ್ಕವರವರೆಗೂ ಇಲ್ಲಿ ವಿವರಗಳಿವೆ. ಇಲ್ಲಿ ಯಾರನ್ನೂ ಅಲಕ್ಷಿಸಿಲ್ಲ. ಆ ದಿಗ್ಗಜಗಳ ನಿಷ್ಠೆ, ಸಾಹಸವೇ ರೋಮಾಂಚಕರವಾದುದು. ಇದೊಂದು ಸ್ತುತ್ಯವಾದ ಲೇಖನ. ಕರ್ನಾಟಕದ ನಾಟಕ ಕಂಪನಿಗಳ ಚರಿತ್ರೆಗೆ ಇದೊಂದು ಆಧಾರವಾದ ಲೇಖನ ಎಂಬುದರಲ್ಲಿ ಸಂಶಯವಿಲ್ಲ. 'ಕಂಪನಿ ನಾಟಕ ಕರ್ತರ' ಬಗ್ಗೆ ಬರೆಯುತ್ತ ಜಿ. ಜಿ. ಮಂಜುನಾಥ್ ವೃತ್ತಿ ನಿರತ ನಾಟಕ ಕಂಪನಿಗಳಿಗಾಗಿ ನಾಟಕಗಳನ್ನು ರಚಿಸಿದ ನಾಟಕಕಾರರಲ್ಲಿ ಪ್ರಧಾನರಾದ ಚುರುಮುರಿ ಶೇಷಗಿರಿರಾಯರು, ಶಾಂತಕವಿ, ವಾಮನರಾವ್ ಮಾಸ್ತರ, ಗರುಡ ಸದಾಶಿವರಾಯರು, ಮುದವೀಡು ಕೃಷ್ಣರಾಯರು, ಬಸವಪ್ಪ ಶಾಸ್ತ್ರಿಗಳು, ಕವಿ ತಿಲಕ ಸೋಸಲೆ ಅಯ್ಯಾಶಾಸ್ತ್ರಿ, ನಂಜನಗೂಡು ಶ್ರೀಕಂಠಶಾಸ್ತ್ರಿ, ಎ. ವಿ. ವರದಾಚಾರ್, ಬೆಳ್ಳಾವೆ ನರಹರಿಶಾಸ್ತ್ರಿ, ಬಿ. ಪುಟ್ಟಸ್ವಾಮಯ್ಯ, ಎಚ್. ಎಲ್. ಎನ್. ಸಿಂಹ, ಕೆ. ಹಿರಣ್ಣಯ್ಯ, ಎಂ. ಎಲ್. ಶ್ರೀಕಂಠೇಶ ಗೌಡ, ಡಿ. ಲಕ್ಷ್ಮಣಯ್ಯ ಮೊದಲಾದ ನಾಟಕಕಾರರ ಸಂಕ್ಷಿಪ್ತ ಪರಿಚಯ ಮತ್ತು ಕೃತಿಗಳ ಹೆಸರು ಗಳನ್ನೂ ಅನಂತರ ವೃತ್ತಿ ನಾಟಕ ಕಂಪನಿಗಳಿಗೆ ಬರೆದ ನಾಟಕಗಳು ಮತ್ತು ಅವುಗಳ ಕರ್ತೃಗಳ ಒಂದು ಪಟ್ಟಿಯನ್ನೂ ಅನಂತರ ನಾಟಕಗಳನ್ನು ಬರೆದಿರುವ ಆದರೆ ಕೃತಿಗಳು ದೊರಕದಿರುವ ನಾಟಕಕಾರರ ಹೆಸರುಗಳನ್ನೂ ಕೊಟ್ಟಿದ್ದಾರೆ. 'ಕನ್ನಡ ರಂಗಭೂಮಿಯ ನಟ ಶ್ರೇಷ್ಠರ' ಬಗ್ಗೆ ಕೆ. ಜಿ. ನಾರಾಯಣ ಪ್ರಸಾದ್ ಬರೆದಿದ್ದಾರೆ. ಎ. ವಿ. ವರದಾಚಾರ್ಯರು, ಟಿ. ರಾಘವ, ಜಿ. ನಾಗೇಶರಾವ್, ಎಂ. ಎನ್. ಗಂಗಾಧರರಾಯರು, ವಾಮನರಾವ್ ಮಾಸ್ತರ್, ಹಂದಿಗನೂರ ಸಿದ್ಧರಾಮಪ್ಪ – ಈ ಆರಿಸಿದ ಹತ್ತುಮಂದಿ ನಟಶ್ರೇಷ್ಠರ ಸಂಕ್ಷಿಪ್ತ ಜೀವನ ಚಿತ್ರವನ್ನೂ ನಾಟಕ ಕ್ಕಾಗಿ ಅವರು ತಮ್ಮ ಬಾಳನ್ನು ಮುಡುಪಿಟ್ಟುದನ್ನೂ ನಾಟಕ ಕಲೆಯ ಉದ್ಧಾರಕ್ಕೆ ಹೋರಾಡಿದು ದನ್ನೂ ಆ ಪ್ರಯತ್ನದಲ್ಲಿ ಬರಿಗಯ್ಯಾದುದನ್ನೂ ಹೊಸ ನಾಟಕಗಳನ್ನು ಬರೆಸಿದುದನ್ನೂ ರಂಗ ಪರಿಕರಗಳಲ್ಲಿ ಹೊಸತನವನ್ನು ತಂದುದನ್ನೂ ನಟರಲ್ಲಿ ಶಿಸ್ತನ್ನು ತಂದುದನ್ನೂ ಹೇಳಿದ್ದಾರೆ. ಇಲ್ಲಿ ಹೆಸರಿಸಿರುವ ನಟಶ್ರೇಷ್ಠರೆಲ್ಲ ಒಂದಲ್ಲ ಒಂದು ಬಾರಿ ತಮ್ಮದೇ ಆದ ನಾಟಕ ಕಂಪನಿಗಳನ್ನು

ಸ್ಥಾಪಿಸಿಕೊಂಡಿದ್ದುದರಿಂದ ಈ ಎಲ್ಲರ ವಿಷಯ 'ಕರ್ನಾಟಕದ ಕಂಪನಿ ನಾಟಕಗಳು' ಲೇಖನದಲ್ಲಿ ಬಂದು ಇಲ್ಲಿ ಪುನರಾವರ್ತನೆಯಾದಂತೆ ಆಗಿದೆ.

'ಪಾದುಕಾ ಕಿರೀಟ', 'ಕೂಡಿ ಬಾಳೋಣ' ಮತ್ತು 'ಶಿಷ್ಟಾಚಾರ'ಗಳು ಶಂಕರ ಗೌಡರ ನಾಟಕಗಳು. 'ಪಾದುಕಾ ಕಿರೀಟ' ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ', ಅ.ನ.ಕೃ. ಅವರ 'ಚಿತ್ರವಿಚಿತ್ರ' ಮತ್ತು ಭಾಸನ 'ಪ್ರತಿಮಾ ನಾಟಕ'ಕ್ಕೆ ಋಣಿಯಾಗಿದ್ದರೂ ರಂಗಭೂಮಿಯ ಅವಶ್ಯಕತೆಗೆ ಅನುಗುಣವಾಗಿ ನೃತ್ಯ, ಹಾಡುಗಳು ಮತ್ತು ಪಾತ್ರಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿಂದ ಮೈತಳೆದಿರುವ 'ಪಾದುಕಾ ಕಿರೀಟ' ಸಂವಿಧಾನ ಚಾತುರ್ಯದಲ್ಲಿ ಮತ್ತು ದೃಶ್ಯ ಸಂಯೋಜನೆಯಲ್ಲಿ ತನ್ನ ವೈಶಿಷ್ಟ್ಯತೆಯನ್ನು ಮೆರೆದಿದೆಯೆಂದು ರಾಗೌ ಹೇಳುತ್ತಾರೆ. 'ಕೂಡಿ ಬಾಳೋಣ'ದ ಹೆಚ್ಚಳ ಅದರ ಭಾಷಾ ಬಳಕೆಯಲ್ಲಿದೆಯೆಂದೂ ಜನಪದ ನುಡಿಗಟ್ಟುಗಳನ್ನು, ಗಾದೆಗಳನ್ನು ಶಂಕರಗೌಡರು ಬಳಸಿಕೊಂಡಿರುವ ರೀತಿ ಗಮನಾರ್ಹವಾದುದೆಂದು ಶಂಕರಗೌಡರು ಹೇಳುತ್ತಾರೆ. 'ಶಿಷ್ಟಾಚಾರ'ವನ್ನು ಕುರಿತು ದೊ. ನಾ. ರಾಮೇಗೌಡರು ರಾಜಕೀಯದಲ್ಲಿ ಆದರ್ಶ ಇರಬೇಕೆಂದು ಹೇಳುವ ಈ ಕೃತಿ ನಾಟಕಕಾರರ ಮನೋಗರ್ಭದಲ್ಲಿ ಕಾದಂಬರಿ ರೂಪದಲ್ಲಿದ್ದಿರಬೇಕೆಂದು ಊಹಿಸಿದ್ದಾರೆ. ನಾಟಕೀಯ ಸನ್ನಿವೇಶದ ಜೀವಾಳವನ್ನು ಹಿಡಿದ ಶಂಕರಗೌಡರು ಪಾತ್ರಗಳ ಸ್ವಭಾವ ವಿಶ್ಲೇಷಣೆಯ ಕಡೆಗೆ ಹೆಚ್ಚಿನ ಒಲವನ್ನು ತೋರಿದ್ದಾರೆಂದೂ ನಾಟಕದಲ್ಲಿ ಬರುವ ದೀರ್ಘವಾದ ಸಂಭಾಷಣೆಗಳು ರಸಪ್ರತೀತಿಗೆ ಅಡ್ಡಿಯಾದರೂ ಎಷ್ಟರ ಮಟ್ಟಿಗೆ ಪೂರ್ಣವಾಗಬಹುದೋ ಅಷ್ಟರ ಮಟ್ಟಿಗೆ ನಾಟಕ ಪೂರ್ಣವಾಗಿದೆಯೆಂದೂ ಹೇಳಿದ್ದಾರೆ.

'ಪ್ರಾಚೀನ ಕಾಲದ ಶಿಕ್ಷಣ ಪದ್ಧತಿ'ಯನ್ನು ಕುರಿತು ಪ್ರಾಚೀನ ಕಾಲದ ಶಿಕ್ಷಣದ ಉದ್ದೇಶ ಲೌಕಿಕಕ್ಕಿಂತ ಪಾರಲೌಕಿಕದ ಕಡೆಗೆ ಬುದ್ಧಿ ವಿಕಾಸಕ್ಕಿಂತ ಹೃದಯ ಸಂಸ್ಕಾರದ ಕಡೆಗೆ ಇದ್ದಿತು ಎಂಬುದನ್ನು ನಾನಾ ಉದಾಹರಣೆಗಳ ಮೂಲಕ ಟಿ. ಜಿ. ಸಿದ್ಧಪ್ಪಾರಾಧ್ಯರು ನಿರೂಪಿಸಿದ್ದಾರೆ. 'ಹಿಂದೂ ದೇಶದ ಪ್ರಾಚೀನ ವಿದ್ಯಾಭ್ಯಾಸ'ದ ಬಗೆಗೆ ಬರೆಯುತ್ತ ಎಂ. ಕೆ. ರಾಜಗೋಪಾಲ್ ಅವರು ವೇದಗಳನ್ನು ಬಾಯಿಂದ ಬಾಯಿಗೆ ಪಾಠ ಮಾಡುತ್ತಿದ್ದ ಆಗಿನ ವಿದ್ಯಾಭ್ಯಾಸ ಪದ್ಧತಿಯನ್ನು ಮತ್ತು ವೇದಾಧ್ಯಯನದ ಫಲವಾಗಿ ಜ್ಯೋತಿಷ, ಗಣಿತ ಮೊದಲಾದ ಇತರ ವಿಷಯಗಳು ಹುಟ್ಟಿದ್ದನ್ನು ಮತ್ತು ಆಗಿನ ಕಾಲದ ಗುರುಶಿಷ್ಯ ಸಂಬಂಧವನ್ನು ವಿವರಿಸಿದ್ದಾರೆ. 'ಕರ್ನಾಟಕದಲ್ಲಿ ಶಿಕ್ಷಣ ಪರಂಪರೆ'ಯ ಬಗೆಗೆ ಬರೆಯುತ್ತಾ ಡಾ. ಎನ್. ಎಸ್. ವೀರಪ್ಪ ಅವರು ಕರ್ನಾಟಕಕ್ಕೆ ಜೈನ ಮತ್ತು ಬೌದ್ಧ ಧರ್ಮಗಳ ಆಗಮನದಿಂದ ಆರಂಭಿಸಿ ಇತ್ತೀಚಿನವರೆಗಿನ ವಿದ್ಯಾಭ್ಯಾಸ ಕ್ರಮವನ್ನು ನಿರೂಪಿಸಿದ್ದಾರೆ. ಪ್ರಾಥಮಿಕ ಶಿಕ್ಷಣ, ದೇವಾಲಯ, ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಿಕಾಸ್ಥಾನಗಳಲ್ಲಿ ನಡೆಯುತ್ತಿದ್ದ ವಿದ್ಯಾಭ್ಯಾಸ ಪದ್ಧತಿ ಮತ್ತು ಅಲ್ಲಿ ಕಲಿಸುತ್ತಿದ್ದ ವಿಷಯಗಳ ವಿವರಣೆಯನ್ನು ಕೊಟ್ಟಿದ್ದಾರೆ. ಈ ವಿದ್ಯಾಭ್ಯಾಸ ಪದ್ಧತಿಯ ಮೇಲೆ ಮುಸ್ಲಿಮರ ದಾಳಿಯನಂತರ ಅದರ ಅವನತಿ ಮತ್ತೆ ಏಳಿಗೆ ಮತ್ತು ಇಂಗ್ಲಿಷ್ ಶಿಕ್ಷಣ ಪದ್ಧತಿಯಲ್ಲಿ ಐಕ್ಯವಾದುದನ್ನು ಹೇಳಿದ್ದಾರೆ. ಹಾಗೆಯೇ ಮಹಿಳೆಯರ ಶಿಕ್ಷಣ, ವೃತ್ತಿಶಿಕ್ಷಣ ಮತ್ತು ಸೈನಿಕ ಶಿಕ್ಷಣಗಳ ಕಡೆಗೂ ತಮ್ಮ ಗಮನವನ್ನು ಹರಿಸಿದ್ದಾರೆ. ಇತ್ತೀಚಿನ ಶಿಕ್ಷಣದ ಅತಿ ವಿವರವಾದ ಅಂಕಿಸಂಖ್ಯೆಗಳನ್ನೂ ಕೊಟ್ಟಿದ್ದಾರೆ. ಈ ಲೇಖನದ ಹರಹು ಜಾಸ್ತಿಯಾಗಿ ಬಂಧ ಸಡಿಲವಾದಂತೆ, ಎಲ್ಲ ವಿಷಯಗಳನ್ನು ಜೋಡಿಸುವಲ್ಲಿ ಒಂದು ಏಕ ಸೂತ್ರತೆ ಇಲ್ಲದಂತೆ, ಕ್ರಮಬದ್ಧ ಆಲೋಚನೆಯ ಅಭಾವವಿರುವಂತೆ ತೋರುತ್ತದೆ. ಲೇಖನದ ಹರಹು ಜಾಸ್ತಿಯಾದುದರಿಂದ ಎಲ್ಲೂ ಖಚಿತ ಅಭಿಪ್ರಾಯ ರೂಪುಗೊಳ್ಳದೆ ಹೋಗುತ್ತದೆ. ಮಯೂರ ಶರ್ಮನಿಗಿಂತ ಹಿಂದಿನವನಾದ ಮುಕ್ಕಣ್ಣ ಕದಂಬ ಅಹಿಚ್ಛತ್ರ ಪುರದಿಂದ ಬ್ರಾಹ್ಮಣರನ್ನು ಕರೆಸಿದನೆಂಬ ದಂತ ಕಥೆಗಳೇ ಇತಿಹಾಸವೆಂಬಂತೆ ಇಲ್ಲಿ ನಿರೂಪಿತವಾಗಿದೆ. ಒಟ್ಟಿನಲ್ಲಿ ಲೇಖನಕ್ಕೆ ಒಂದು ಮಿತಿಯನ್ನು ಹಾಕಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. 'ಕನ್ನಡ ಶಿಕ್ಷಣ'ವನ್ನು ಕುರಿತು ಬರೆದಿರುವ ಕೆ. ಸಚ್ಚಿದಾನಂದಯ್ಯ ಅವರು ಕನ್ನಡವನ್ನು ಪ್ರಾಥಮಿಕ ಹಂತದಲ್ಲಿ ಎಷ್ಟರಮಟ್ಟಿಗೆ ಕಲಿಸಬೇಕೆಂದು ಹೇಳಿದ್ದಾರೆ. ಅದರ ಜೊತೆಯಲ್ಲಿ

ಭಾಷೆಯೆಂದರೇನು ಮಾತೃಭಾಷೆಯಲ್ಲಿ ಶಿಕ್ಷಣದ ಅವಶ್ಯಕತೆ ಮತ್ತು ಇನ್ನೂ ಅನೇಕ ವಿಚಾರಗಳಿಂದ ಮತ್ತು ಕೊಡುವ ಅಂಕಿ ಸಂಖ್ಯೆಗಳಿಂದ ಲೇಖನದ ಮೂಲ ಆಶಯ ಪೇಲವವಾಗಿ ಮೂಡಿ ಬಂದಿದೆ. ಕೆ. ಎಸ್. ಸದಾಶಿವಯ್ಯ ಅವರು 'ರಾಷ್ಟ್ರೈಕ್ಯತೆ ಹಾಗೂ ಭಾಷೈಕ್ಯತೆಗೆ ಶಿಕ್ಷಣ'ವನ್ನು ಕುರಿತು ಹೇಳುತ್ತಾ ಜಾತಿ, ಮತ, ಭಾಷೆ, ಪ್ರಾಂತ ಮೊದಲಾದ ಭಾವನಾತ್ಮಕ ವಿಷಯಗಳು ರಾಷ್ಟ್ರೀಯ ಭಾವನೆಗೆ ಮಾರಕವಾಗಿದ್ದರೂ ಐಕ್ಯತೆ ನಮ್ಮಲ್ಲಿದೆಯೆಂದು ಈ ಐಕ್ಯತೆ ಅಥವಾ ರಾಷ್ಟ್ರೀಯ ಭಾವನೆ ಸದಾ ಸ್ಥಾಯಿಯಾಗಿರಬೇಕಾದರೆ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಅದಕ್ಕೆ ಅನುಗುಣವಾದ ವಿದ್ಯಾಭ್ಯಾಸ ಪದ್ಧತಿಯನ್ನು ತರಬೇಕೆಂದು ಅದಕ್ಕಾಗಿ ಹಲವಾರು ಮಾರ್ಗಗಳನ್ನು ಸೂಚಿಸಿದ್ದಾರೆ. 'ರಾಷ್ಟ್ರೀಯ ಅವಶ್ಯಕತೆಗಳಿಗಾಗಿ ಶಿಕ್ಷಣ'ದಲ್ಲಿ ಕೆ. ಸಂಪದ್ಗಿರಿರಾವ್ ಅವರು ಇದುವರೆಗೂ ಹಲವಾರು ಸಮಿತಿಗಳು ಆಯೋಗಗಳು ಬಂದು ತಮ್ಮ ವರದಿಯನ್ನು ಸಲ್ಲಿಸಿದ್ದರೂ ಅವುಗಳ ಅನುಷ್ಠಾನ ಆಗಿಲ್ಲವೆಂದು ಮುಂದೆ ನಮ್ಮ ರಾಷ್ಟ್ರೀಯ ಅಗತ್ಯಗಳಿಗೆ ತಕ್ಕಂತೆ ವಿದ್ಯಾಭ್ಯಾಸ ರೂಪಿತವಾಗಬೇಕೆಂದು ಹೇಳಿದ್ದಾರೆ. 'ಉಪಾಧ್ಯಾಯ ಶಿಕ್ಷಣ : ಪೂರ್ವಾನ್ವಯ ಮತ್ತು ಪ್ರತೀಕ್ಷೆ' ಎಂಬ ಲೇಖನದಲ್ಲಿ ಪ್ರೊ. ಜಿ. ಕೆ. ನಾಗಪ್ಪ ಅವರು ಉಪಾಧ್ಯಾಯ ಶಿಕ್ಷಣ ಕಾಲೇಜುಗಳಲ್ಲಿ ಇರುವ ಲೋಪದೋಷಗಳನ್ನು ಅದರ ನಿವಾರಣೆಗಾಗಿ ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ಸ್ವಾನುಭವದಿಂದ ವಿವರಿಸಿದ್ದಾರೆ. ಉಪಾಧ್ಯಾಯ ಶಿಕ್ಷಣಕ್ಕೆ (B Ed.) ಸಂಬಂಧಿಸಿದಂತೆ ಇದೊಂದು ಉಪಯುಕ್ತ ಲೇಖನ. 'ಶಿಕ್ಷಣ ಕಾರ್ಯಕ್ರಮದಲ್ಲಿ ಪಠ್ಯಪುಸ್ತಕಗಳು' ಎಂಬ ಲೇಖನದಲ್ಲಿ ಎಸ್. ಎನ್. ಸಾವಿತ್ರಿ ಅವರು ಪಠ್ಯಪುಸ್ತಕದ ನಾನಾ ವಿಧಾನಗಳನ್ನು ಅದು ಶಿಕ್ಷಣ ಕ್ರಮ ಬದಲಾದಂತೆ ಬದಲಾಗುವುದನ್ನು ಮತ್ತು ಪಠ್ಯಪುಸ್ತಕ ನಿರ್ಮಾಣಕ್ಕೆ ಹಲವರ ಸಹಕಾರ ಬೇಕಿರುವುದನ್ನು ಹೇಳಿದ್ದಾರೆ. 'ಶಾಲೆಗಳಲ್ಲಿ ವಿಜ್ಞಾನ ಬೋಧನೆ ಹೊಸ ಕಾರ್ಯಕ್ರಮ'ದಲ್ಲಿ ಜೆ. ಎಂ. ಟಿ. ರಾಜನ್ ಶಾಲೆಗಳಲ್ಲಿ ವಿಜ್ಞಾನದ ಬಗೆಗೆ ಆಸಕ್ತಿ ಕೆರಳುವಂತೆ ಮಾಡಲು ಇತ್ತೀಚೆಗೆ ಕೈಗೊಂಡಿರುವ ಹಲವಾರು ವಿಧಾನಗಳ ವಿವರಣೆಯನ್ನು ಕೊಟ್ಟು ಅದರ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. 'ಗಣಿತ ಬೋಧನೆ'ಗೆ ಗಣಿತ ಶಾಸ್ತ್ರದ ಚರಿತ್ರೆ ಮತ್ತು ಗಣಿತ ಶಾಸ್ತ್ರಜ್ಞರ ಚರಿತ್ರೆ ತಿಳಿದಿದ್ದರೆ ಗಣಿತ ಬೋಧನೆ ಹೆಚ್ಚು ಪ್ರಿಯವೂ ಸುಲಭವೂ ಆಗುತ್ತದೆಂದು ಹೇಳಿ ಗಣಿತವನ್ನು ಆಸಕ್ತಿ ಕೆರಳುವಂತೆ ಹೇಳುವ ಮತ್ತು ಹಾಗೆ ಹೇಳುವಾಗ ಉಪಯೋಗಿಸಿಕೊಳ್ಳುವ ಅನೇಕ ವಿಧದ ಉಪಕರಣಗಳನ್ನು ಜಿ. ವಿ. ಹೇರ್ಳೆ ಅವರು ವಿವರಿಸಿದ್ದಾರೆ. 'ವಿದ್ಯಾಭ್ಯಾಸದಲ್ಲಿ ಎನ್. ಸಿ. ಸಿ.ಯ ಪಾತ್ರ' ವನ್ನು ಕುರಿತು ಜಿ. ಟಿ. ನಾರಾಯಣರಾವ್ ಅವರು ಎನ್. ಸಿ. ಸಿ. ಉನ್ನತ ಆದರ್ಶವನ್ನು ಹೊಂದಿದ್ದರೂ ಅನ್ವಯದಲ್ಲಿ ವಿಫಲವಾಗಿರುವುದನ್ನು ತಿಳಿಸಿ ಆ ವಿಫಲತೆಗೆ ಕಾರಣಗಳನ್ನು ಮತ್ತು ಅದರ ನಿವಾರಣೋಪಾಯಗಳನ್ನು ಸೂಚಿಸಿ ಎನ್. ಸಿ. ಸಿ. ಬಿಳಿಯ ಆನೆಯನ್ನು ಸಾಕಿದಂತೆ ಆದ್ದರಿಂದ ಅದರ ಬದಲು ಬೇರೊಂದು ವ್ಯವಸ್ಥೆಯನ್ನು ತರುವುದು ಉಚಿತವೆಂದು ವಾಸ್ತವ ನೆಲಗಟ್ಟಿನ ಮೇಲೆ ನಿಂತು ಹೇಳಿದ್ದಾರೆ. 'ಕನ್ನಡ ರಾಜ್ಯದಲ್ಲಿ ಚಿತ್ರ ಕಲಾ ಶಿಕ್ಷಣ'ದ ಬಗೆಗೆ ಬರೆಯುತ್ತ ಪಿ. ಆರ್. ತಿಪ್ಪೇಸ್ವಾಮಿ ಅವರು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ತರಗತಿಗಳಿದ್ದರೂ ಅಧ್ಯಾಪಕರಿಲ್ಲದಿರುವುದನ್ನು ಗಮನಿಸಿ ರಾಜ್ಯದ ಹದಿನಾಲ್ಕು ಕಲಾ ಶಾಲೆಗಳಲ್ಲಿ ಮೈಸೂರಿನ ಚಾಮರಾಜೇಂದ್ರ ಕಲಾ ಶಾಲೆ ಮತ್ತು ದಾವಣಗೆರೆಯ ಸರಕಾರಿ ಚಿತ್ರ ಶಾಲೆಗಳೆಂದು ಹೇಳಿ ಚಿತ್ರ ಕಲೆಯ ಶಿಕ್ಷಣಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. 'ಶಿಕ್ಷಣ ಆಡಳಿತದ ವಿಕೇಂದ್ರೀಕರಣದ' ಬಗ್ಗೆ ವಿಚಾರ ಮಾಡುತ್ತ ಎಚ್. ವಿ. ಶ್ರೀರಂಗರಾಜು ಅವರು ಸಂಪೂರ್ಣ ವಿಕೇಂದ್ರೀಕರಣಕ್ಕೆ ಸಮಾಜವೇ ಆಗಲಿ ಸರ್ಕಾರವೇ ಆಗಲಿ ಸಿದ್ಧವಿಲ್ಲವೆಂದು ಹೇಳಿ ಶಂಕರಗೌಡರು ವಿದ್ಯಾಮಂತ್ರಿಗಳಾಗಿದ್ದಾಗ ಖಾಸಗಿಯಾಗಿ ನಡೆಯುತ್ತಿದ್ದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡುದನ್ನು ತಿಳಿಸಿದ್ದಾರೆ. 'ಶಂಕರಗೌಡರು ಮತ್ತು ಶಿಕ್ಷಣ'ದ ಬಗೆಗೆ ಬರೆಯುತ್ತ ಎಸ್. ಮಂಚಯ್ಯ ಅವರು ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದ ಶಂಕರಗೌಡರು ವಿದ್ಯಾಮಂತ್ರಿಗಳಾದಾಗ ಕನ್ನಡ ವಿಶ್ವಕೋಶ, ಜ್ಞಾನಗಂಗೋತ್ರಿ, ಕನ್ನಡ ನಿಘಂಟು ಕಾರ್ಯಗಳಿಗೆ ತೆರೆದ ಮನದ ಪ್ರೋತ್ಸಾಹವಿತ್ತುದನ್ನು, ಶಿಕ್ಷಣ ಇಲಾಖೆಯ ಪುನರ್ ವ್ಯವಸ್ಥೆ ಮಾಡಿದುದನ್ನು, ಶಿಕ್ಷಣ ಇಲಾಖೆಯೊಳಗೇ

ಪಠ್ಯಪುಸ್ತಕ ವಿಭಾಗವೊಂದನ್ನು ಸೃಷ್ಟಿಸಿದುದನ್ನು, ಎರಡು ವರ್ಷದ ಪಿ. ಯು. ಸಿ. ಶಿಕ್ಷಣವನ್ನು ಜಾರಿಗೆ ತಂದುದನ್ನು ಸ್ಮರಿಸಿ ಶಿಕ್ಷಣ ಇತಿಹಾಸದಲ್ಲಿ ಶಂಕರಗೌಡರ ಹೆಸರು ಸಾಧನೆ ಅಚ್ಚಳಿಯದೆ ಉಳಿಯುತ್ತದೆಂದು ಹೇಳಿದ್ದಾರೆ.

'ಸಹ್ಯಾದ್ರಿ' ಯಷ್ಟೇ ಬೃಹತ್ ಗಾತ್ರದ ಅಭಿನಂದನ ಗ್ರಂಥವನ್ನು ತರಬೇಕೆಂಬ ಮಹದಾಶೆಯಿಂದ ಹೆಚ್ಚಿನ ಸಂಖ್ಯೆಯ ಲೇಖನಗಳನ್ನು 'ಕಬ್ಬಿನ ಹಾಲು' ಅಭಿನಂದನ ಗ್ರಂಥಕ್ಕಾಗಿ ಬರೆಸಲಾಗಿದೆ. ಗಾತ್ರದಲ್ಲಿ 'ಸಹ್ಯಾದ್ರಿ' ಯಷ್ಟೇ ಇದ್ದರೂ 'ಕಬ್ಬಿನ ಹಾಲು' 'ಸಹ್ಯಾದ್ರಿ'ಯ ಮಟ್ಟಕ್ಕೇರಲಾರದು. ಅದಕ್ಕೆ ಕಾರಣ 'ಸಹ್ಯಾದ್ರಿ'ಯಲ್ಲಿ ಕುವೆಂಪು ಅವರಿಗೆ ನೇರವಾಗಿ ಸಂಬಂಧಿಸಿದಂತೆ ಮತ್ತು ಅವರ ಕೃತಿಗಳಿಗೆ ಸಂಬಂಧಿಸಿದಂತೆ ಲೇಖನಗಳಿದ್ದರೆ 'ಕಬ್ಬಿನ ಹಾಲು'ವಿನಲ್ಲಿ ಶಂಕರಗೌಡರಿಗೆ ಪ್ರಿಯವಾದ ವಿಷಯಗಳಾದ ನಾಟಕ ಮತ್ತು ಶಿಕ್ಷಣಗಳ ಬಗ್ಗೆ ಲೇಖನಗಳಿರುವುದು. ಹೀಗಾಗಿ ಶಂಕರಗೌಡರು ಹಿಂದಾಗಿ ಉಳಿದ ವಿಷಯಗಳು ಪ್ರಧಾನವಾಗುತ್ತವೆ. ಅವೂ ನೀರಸವಾದ ವಿಷಯಗಳು, ಹೆಚ್ಚಿನ ಸಂಖ್ಯೆಯ ಲೇಖನಗಳಿರುವುದರಿಂದ ಕೆಲವಾರು ಕಡೆ ವಿಷಯ ಪುನರಾವರ್ತನೆಯಾಗಿ ಚರ್ವಿತ-ಚರ್ವಣವಾಗಿದೆ ಉದಾಹರಣೆಗೆ 'ಕರ್ನಾಟಕದ ನಾಟಕ ಕಂಪನಿಗಳು' ಮತ್ತು 'ಕನ್ನಡದಲ್ಲಿ ವೃತ್ತಿ ರಂಗಭೂಮಿಯ ನಟ ಶ್ರೇಷ್ಠರು.' ಹಾಗೆಯೆ 'ವಿಚಾರ ಪ್ರಧಾನವಾದ ನಾಟಕಗಳು', 'ಕನ್ನಡದಲ್ಲಿ ಅಸಂಗತ ನಾಟಕಗಳು', 'ಕನ್ನಡ ನವ್ಯನಾಟಕ' ಮೊದಲಾದ ಶೀರ್ಷಿಕೆಯಲ್ಲಿ ಚರ್ಚಿಸಲ್ಪಟ್ಟಿರುವುದು ಒಂದೇ ವಿಷಯ. ಸಂಪಾದಕರು ಸ್ವಲ್ಪ ಎಚ್ಚರವಹಿಸಿ ಸಂಯಮದಿಂದ್ದಿರೆ ಇಂಥವನ್ನು ನಿವಾರಿಸಬಹುದಿತ್ತು. 'ಕಬ್ಬಿನ ಹಾಲು'ವಿನಲ್ಲಿ ಶಂಕರಗೌಡರಿಗೆ ಪ್ರಿಯವಾದ ನಾಟಕ ಮತ್ತು ಶಿಕ್ಷಣವನ್ನು ಕುರಿತ ಹಲವಾರು ಲೇಖನಗಳಿವೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ, ವೈದ್ಯ ಶಿಕ್ಷಣ, ವಿಜ್ಞಾನ ಶಿಕ್ಷಣ, ವ್ಯವಸಾಯ ಶಿಕ್ಷಣಗಳ ಬಗೆಗೂ ಸಹಕಾರದ ನಾನಾ ಮುಖಗಳ ಬಗೆಗೆ ಅದರ ಉಪಯೋಗದ ಬಗೆಗೆ ಲೇಖನಗಳನ್ನು ಬರೆಸಿದ್ದರೆ ಗಾತ್ರದಲ್ಲಿ 'ಸಹ್ಯಾದ್ರಿ' ಯನ್ನೂ ಮೀರಿಸುತ್ತಿತ್ತೋ ಏನೋ! ಒಟ್ಟಿನಲ್ಲಿ 'ಸಹಕಾರ'ದ ಬಗೆಗೆ ಲೇಖನಗಳಿಲ್ಲದಿರುವುದು ಒಂದು ಕೊರತೆಯೆ. ಇದು ಹೇಗಾದರೂ ಇರಲಿ. ಇಲ್ಲಿನ ಲೇಖನಗಳನ್ನೆಲ್ಲ ವಿಷಯಾನುಗುಣವಾಗಿ ವಿಂಗಡಿಸಿ ಒಂದೊಂದು ಭಾಗವಾಗಿ ಮಾಡಿದ್ದಾರೆ. ಇಂತಹ ಆರು ಭಾಗಗಳಿವೆ 'ಕಬ್ಬಿನ ಹಾಲು' ವಿನಲ್ಲಿ. ಇದು ಅಭ್ಯಾಸಿಗಳಿಗೆ ತುಂಬಾ ಅನುಕೂಲವಾಗಿದೆ. ಕೃತಜ್ಞತೆಗಳನ್ನು ಸೂಚಿಸುವಲ್ಲಿ ಸಂಪಾದಕರಲ್ಲೊಬ್ಬರಾದ ಜೀ. ಶಂ. ಪರಮಶಿವಯ್ಯ ಅವರು "ಅವರ (ಶಂಕರಗೌಡರ) ಪ್ರಿಯ ಕ್ಷೇತ್ರಗಳಾದ ನಾಟಕ ಮತ್ತು ಶಿಕ್ಷಣಗಳಿಗೆ 'ಕಬ್ಬಿನ ಹಾಲು' ಸಂಬಂಧಪಡುತ್ತದೆ"ಂದು ಹೇಳಿದ್ದಾರೆ. ಮುನ್ನುಡಿಯಲ್ಲಿ ದೇಜಗೌ ಅವರು 'ನಾಟಕದ ಬಗ್ಗೆ ಇಷ್ಟು ಸಮರ್ಪಕವೂ ಸಮಗ್ರವೂ ಆದ ಆಧಾರ ಗ್ರಂಥ ಸದ್ಯಕ್ಕೆ ಮತ್ತೊಂದಿಲ್ಲವೆಂದೇ ಹೇಳಬಹುದು' ಎಂದು "ಅಭಿನಂದನ ಗ್ರಂಥಗಳ ಸಾಲಿನಲ್ಲಿ ಇದಕ್ಕೊಂದು ವಿಶಿಷ್ಟವಾದ ಸ್ಥಾನವಿದೆಯೆಂದರೆ ತಪ್ಪಾಗಲಾರದು" ಎಂದಿದ್ದಾರೆ. ಈ ಮಾತಿನ ಬಗ್ಗೆ ಯಾರೂ ಭಿನ್ನಾಭಿಪ್ರಾಯ ವ್ಯಕ್ತಪಡಿಸುವಂತಿಲ್ಲ.

*   *   *   *

'ರಾಜಕೀಯ ಪಟು' ಶ್ರೀ ಕೆಂಗಲ್ ಹನುಮಂತಯ್ಯನವರ ಅರವತ್ತೇಳನೆಯ ಹುಟ್ಟಿದ ಹಬ್ಬದ ನೆನಪಿಗಾಗಿ ಅರ್ಪಿಸಿದ ಅಭಿನಂದನ ಗ್ರಂಥ. ಕೆಂಗಲ್ಲರ ಸನ್ಮಾನ ಸಮಿತಿಯ ಅಧ್ಯಕ್ಷರಾದ ಪಿ. ಶಿವಶಂಕರ್ ಅವರು ಕೆಂಗಲ್ಲರ ಧೈರ್ಯ, ಸಂಸ್ಕೃತಿಯ ಪ್ರಸಾರ, ಆಡಳಿತವನ್ನು ರಾಜಕೀಯದಿಂದ ದೂರವಿರಿಸಿದ್ದು, ವಿಧಾನಸೌಧದ ನಿರ್ಮಾಣ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ, ಕೇಂದ್ರ ರೈಲ್ವೆ ಮಂತ್ರಿಯಾಗಿ ಅವರ ಸೇವೆ ಮೊದಲಾದ ಗುಣಗಳನ್ನೂ ಸಾಧನೆಗಳನ್ನೂ ವಿವರಿಸಿ ಈ ಅಭಿನಂದನ ಗ್ರಂಥದ ಬಹುತೇಕ ಬರಹಗಳು ಈ ವಿಷಯವನ್ನು ಕುರಿತವೇ ಎಂದಿದ್ದಾರೆ. ಈ ಅಭಿನಂದನ ಗ್ರಂಥದಲ್ಲಿ ಇಪ್ಪತ್ತೆರಡು ಬರಹಗಳಿವೆ. ಅವುಗಳಲ್ಲಿ ಮೂರು ಬರಹಗಳನ್ನು ಎಚ್. ಎಚ್. ಅಣ್ಣಯ್ಯಗೌಡರು ಬರೆದಿದ್ದಾರೆ. ಎಚ್. ಸಿದ್ಧವೀರಪ್ಪ

ನವರು ಕಳುಹಿಸಿದ ಶುಭಸಂದೇಶವನ್ನು ಎಲ್. ಬಸವರಾಜರವರ ಭಾಷಣವನ್ನು ಲೇಖನಗಳಾಗಿ ಹಾಕಿದ್ದಾರೆ. ಹನುಮಂತಯ್ಯನವರೇ ಸುರಾಜ್ಯದ ಬಗ್ಗೆ ಮಾಡಿದ ಪುಟ್ಟ ಭಾಷಣವನ್ನೂ ಸೇರಿಸಿ ಕೊಂಡಿದ್ದಾರೆ. ಅಲ್ಲದೆ ಕೆಂಗಲ್ಲರ ವಾಣಿಗಳು ಮತ್ತು ಅವರೊಡನೆ ನಡೆಸಿದ ಸಂದರ್ಶನಗಳು ಎರಡು ಲೇಖನಗಳಾಗಿವೆ. ಎಚ್. ಕೆ. ವೀರಣ್ಣಗೌಡರ 'ಬದುಕು ಮೆಲುಕು' ಗ್ರಂಥದಿಂದ ಆರಿಸಿದ ಭಾಗವನ್ನು ಪರಿಚಯ' ಎಂಬ ಹೆಸರಿನಿಂದ ರಚಿಸಿದ್ದಾರೆ. ಈ ಅಭಿನಂದನ ಗ್ರಂಥದ ಸಂಪಾದಕರು ಡಿ. ಲಿಂಗಯ್ಯ.

'ಮುತ್ಸದ್ದಿ ಕೆಂಗಲ್ ಹನುಮಂತಯ್ಯ' ಎಂಬ ಲೇಖನದಲ್ಲಿ ಕೆ. ಎಸ್. ಭಗವಾನ್ ಅವರು ಕೆಂಗಲ್ಲರು ಕಡುಬಡತನದಿಂದ ಸ್ವಸಾಮರ್ಥ್ಯದಿಂದ ಮೇಲೆ ಬಂದ ಬಗೆಯನ್ನು ವಿವರಿಸಿದ್ದಾರೆ. ಅಲ್ಲದೆ ಸಮರ್ಥನ್ಯಾಯವಾದಿಯಾಗಿದ್ದ ಅವರು ರಾಜಕೀಯಕ್ಕೆ ಪ್ರವೇಶಿಸಿ ಹಂತಹಂತವಾಗಿ ಮೇಲೇರಿ ಮೈಸೂರಿನ ಪ್ರಥಮ ಚುನಾಯಿತ ಮುಖ್ಯಮಂತ್ರಿಯಾಗಿ, ರಾಜ್ಯದಲ್ಲೇ ವಿರೋಧ ವಿದ್ದರೂ ಏಕೀಕರ್ಣಾಟಕಕ್ಕೆ ತ್ರಿಕರಣಪೂರ್ವಕವಾದ ಬೆಂಬಲವನ್ನು ನೀಡಿ ಅಸಂದಿಗ್ಧವಾಗಿ ಏಕೀ ಕರ್ಣಾಟಕದ ಶಿಲ್ಪಿ ಎನಿಸಿಕೊಂಡುದನ್ನು ನಿರೂಪಿಸಿ ಅವರು ಮಾಡಿದ ಅನೇಕ ಜನಹಿತ ಕಾರ್ಯ ಗಳನ್ನು ಆಡಳಿತ ಸುಧಾರಣಾ ಅಧ್ಯಕ್ಷರಾಗಿ, ರೈಲ್ವೆ ಮಂತ್ರಿಯಾಗಿ ಸಾಧಿಸಿದ ಸಾಧನೆಗಳನ್ನೂ ಎಲ್ಲ ಕ್ಕಿಂತ ಮಿಗಿಲಾಗಿ ಅವರ ಸಜ್ಜನಿಕೆಯನ್ನು ವಿವರಿಸಿದ್ದಾರೆ. ಈ ಅಭಿನಂದನ ಗ್ರಂಥದಲ್ಲಿ ಹನುಮಂತಯ್ಯನವರ ವಿಚಾರವಾಗಿ ಬರೆದಿರುವ ಬಹುತೇಕ ಲೇಖಕರು ಕೆಂಗಲ್ಲರ ಧೀಮಂತ ವ್ಯಕ್ತಿತ್ವವನ್ನು, ಅಪ್ರಿಯವಾದರೂ ಸತ್ಯವನ್ನೇ ನುಡಿಯುವ ಸ್ವಭಾವವನ್ನು, ವಿರೋಧಿಗಳ ಅಭಿಪ್ರಾಯವನ್ನೂ ತೆರೆದ ಮನದಿಂದ ಸ್ವೀಕರಿಸುತ್ತಿದ್ದುದನ್ನು, ಸಭೆ ಸಮಾರಂಭಗಳಿಗೆ ನಿಯಮಿತ ವೇಳೆಯಲ್ಲಿ ಆಗಮಿಸುತ್ತಿದ್ದುದನ್ನು (ಆ ವಿಚಾರದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ನೆನಪು ಬರುತ್ತದೆಂದು ಲೇಖಕರು ಹೇಳುತ್ತಾರೆ), ಕೆಂಗಲ್ಲರಿಗೇ ವಿಶಿಷ್ಟವಾದ ಉಡುಗೆ ತೊಡುಗೆಯನ್ನು, ಸಂಸ್ಕೃತಿ ಪ್ರಸಾರದ ಬಗೆಗೆ ಕೆಂಗಲ್ಲರಿಗಿದ್ದ ಕಳಕಳಿಯನ್ನು, ಶಿಕ್ಷಣದ ಬಗೆಗೆ ಅವರಿಗಿದ್ದ ಆಸಕ್ತಿ ಯನ್ನು, ವಿಧಾನಸೌಧವನ್ನು ನಿರ್ಮಿಸಿದ್ದನ್ನು, ಅವರಲ್ಲದೆ ಬೇರೆಯಾರೇ ಮುಖ್ಯಮಂತ್ರಿಯಾಗಿದ್ದರೂ ಏಕೀಕರ್ಣಾಟಕಕ್ಕೆ ತೊಂದರೆಯಾಗುತ್ತಿದ್ದುದನ್ನು ವಿವರಿಸಿದ್ದಾರೆ. ಎಚ್. ಕೆ. ವೀರಣ್ಣಗೌಡರ 'ಬದುಕು ಮೆಲುಕು' ಗ್ರಂಥದಲ್ಲಿ ವೀರಣ್ಣಗೌಡರು ಕೆಂಗಲ್ಲರನ್ನು ಕಂಡ ಎರಡು ಮೂರು ಸಂದರ್ಭ ಗಳಲ್ಲಿ ವ್ಯಕ್ತವಾದ ಕೆಂಗಲ್ಲರ ಗುಣಸ್ವಭಾವಗಳನ್ನು ಚಿತ್ರಿಸಿರುವುದನ್ನು ಇಲ್ಲಿ ಪರಿಚಯ' ಎಂಬ ಹೆಸರಿನಲ್ಲಿ ಸೇರಿಸಲಾಗಿದೆ. ಹನುಮಂತ ಸದೃಶವಾದ ಕೆಂಗಲ್ಲರ ವ್ಯಕ್ತಿತ್ವವನ್ನು ನಾನಾ ದೃಷ್ಟಿ ಕೋನಗಳಿಂದ ನೋಡಿ ಮೆಚ್ಚಿ ಎಲ್. ಬಸವರಾಜು ಅವರು ಮಾಡಿದ ಭಾಷಣವನ್ನು 'ಅಭಿನವ ಹನುಮಂತ' ಎಂಬ ಹೆಸರಿನಲ್ಲಿ ಅಚ್ಚುಹಾಕಿದ್ದಾರೆ. 'ಸುರಾಜ್ಯ' ಒಂದು ಸನ್ಮಾನ ಸಮಾರಂಭದಲ್ಲಿ ಕೆಂಗಲ್ಲರೇ ಮಾಡಿದ ಪುಟ್ಟ ಭಾಷಣ. ನಮಗೆ ಸ್ವರಾಜ್ಯವಷ್ಟೇ ಸಾಲದು ಅದು ಸುರಾಜ್ಯವಾಗ ಬೇಕೆಂಬ ಅವರ ಆದರ್ಶ ಇಲ್ಲಿ ವ್ಯಕ್ತವಾಗಿದೆ.

ಕೆಂಗಲ್ಲರೊಡನೆ ಡಿ. ಲಿಂಗಯ್ಯನವರು ನಡೆಸಿದ ಸಂದರ್ಶನ. 'ಕೆಂಗಲ್ಲರೊಡನೆ ಸಂದರ್ಶನ' ಧರ್ಮ, ಆಡಳಿತ, ರಾಜಕೀಯ ಇತ್ಯಾದಿಗಳ ಬಗ್ಗೆ ಕೆಂಗಲ್ಲರ ನಿಲವು ಈ ಸಂದರ್ಶನದಿಂದ ಗೊತ್ತಾ ಗುತ್ತದೆ.

'ಕೆ. ಹನುಮಂತಯ್ಯ ಮತ್ತು ಸಂಸ್ಕೃತಿ ಪ್ರಸಾರ'ದಲ್ಲಿ ಎ. ಎನ್. ಮೂರ್ತಿರಾವ್ ಅವರು ಗಳಿಗಳರಲ್ಲಿ ಉದಾತ್ತ ಧ್ಯೇಯದಿಂದ ಕೆಂಗಲ್ಲರು ಸಂಸ್ಕೃತಿ ಪ್ರಸಾರ ಇಲಾಖೆಯನ್ನು ಪ್ರಾರಂಭಿಸಿ ತತ್ಕಾಲಕ್ಕೆ ಮತ್ತು ದೀರ್ಘಕಾಲದಲ್ಲಿ ಪ್ರಭಾವ ಬೀರುವ ಕಾರ್ಯಕ್ರಮಗಳನ್ನು ಕೈಗೊಂಡುದನ್ನು, ಈ ಕಾರ್ಯ ಹಲವರಿಂದ ಟೀಕೆಗೆ ಒಳಗಾದುದನ್ನು ಮತ್ತು ಈ ಕಾರ್ಯಕ್ರಮದ ದುರ್ಲಾಭ ಪಡೆಯಲು ಆಸಕ್ತ ಹಿತಾಸಕ್ತಿಗಳು ಮುಂದಾದಾಗ ಈ ಕಾರ್ಯಕ್ರಮವನ್ನೇ ರದ್ದುಗೊಳಿಸಿದುದನ್ನು ವಿವರಿಸಿದ್ದಾರೆ. ದೀರ್ಘಕಾಲದಲ್ಲಿ ಪ್ರಭಾವ ಬೀರುವ ಕಾರ್ಯಕ್ರಮಗಳಲ್ಲಿ ಕುಮಾರವ್ಯಾಸಭಾರತ,

ಜೈಮಿನಿಭಾರತ, ಹರಿಶ್ಚಂದ್ರಕಾವ್ಯ ಮೊದಲಾದ ಕೃತಿಗಳು ಪ್ರಕಟವಾಗಿ ಜನತೆಗೆ ಸುಲಭ ಬೆಲೆಯಲ್ಲಿ ಲಭಿಸಿದುದನ್ನು ಮತ್ತು ಕನ್ನಡ ವಿಶ್ವಕೋಶದ ಯೋಜನೆ ಆಗಲೆ ಸಿದ್ಧವಾದುದನ್ನು ತಿಳಿಸಿದ್ದಾರೆ. ಒಮ್ಮೆ ಕೆಂಗಲ್ಲರು ರಾಜ್ಯದ ವಿಚಾರ ಪ್ರಸ್ತಾಪ ಮಾಡಬೇಕಾಗಿದೆಯೆಂದು ವಿಶ್ವೇಶ್ವರಯ್ಯನವರಿಗೆ ಫೋನಿನಲ್ಲಿ ತಿಳಿಸಿದಾಗ ವಿಶ್ವೇಶ್ವರಯ್ಯನವರು ಕುಮಾರ ಕೃಪಕ್ಕೆ (ಮುಖ್ಯಮಂತ್ರಿಗಳ ನಿವಾಸ) ಬರುತ್ತೇನೆಂದರೂ ಹಿರಿಯ ಚೇತನಕ್ಕೆ ಗೌರವ ಸಲ್ಲಿಸಲೋಸುಗ ಕೆಂಗಲ್ಲರು ತಾವಾಗಿಯೇ ವಿಶ್ವೇಶ್ವರಯ್ಯನವರ ಮನೆಗೆ ಹೋದ ಒಂದು ಪ್ರಸಂಗವನ್ನು ಎ. ಎನ್. ಮೂರ್ತಿರಾಯರು ಕೊಟ್ಟಿದ್ದಾರೆ. ಈ ಪ್ರಸಂಗ ಲೇಖನದ ಶೀರ್ಷಿಕೆಗೆ ಹೊರತಾದರೂ ಕೆಂಗಲ್ಲರ ಸುಸಂಸ್ಕೃತ ನಡವಳಿಕೆಯನ್ನು ತೋರುತ್ತದೆ. 'ದೇಶಭಕ್ತ ಕೆ. ಹನುಮಂತಯ್ಯ' ಎಂಬ ಲೇಖನದಲ್ಲಿ ಬಿ. ಶಿವಮೂರ್ತಿಶಾಸ್ತ್ರಿಗಳು ಕೆಂಗಲ್ಲರು ಕನ್ನಡ ಸಾಹಿತ್ಯ ಪರಿಷತ್ತಿಗೆ ಧನ ಸಹಾಯ ಮಾಡಿದುದನ್ನು ಮತ್ತು ಏಕೀಕರ್ಣಾಟಕಕ್ಕೆ ನೆರವಾದುದನ್ನು ಸ್ಮರಿಸಿದ್ದಾರೆ.

ಶಿಕ್ಷಣ ವಿಚಾರದಲ್ಲಿ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದರೂ ಅದರ ಅಂಧಾನುಕರಣೆ ಯನ್ನು ಮಾಡದೆ ತಮ್ಮ ಅನುಭವದ ಬೆಳಕಿನಲ್ಲಿ ಅಧ್ಯಯನದ ಸಾರವನ್ನು ಬೆರಸಿ ದೂರ ದೃಷ್ಟಿ ಯಿಂದ ಕೂಡಿದ ವಿದ್ಯಾಭ್ಯಾಸಕ್ರಮವನ್ನು ಕೆಂಗಲ್ಲರು ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದು ದನ್ನು 'ಕೆಂಗಲ್ ಹನುಮಂತಯ್ಯ : ಶಿಕ್ಷಣ ತತ್ವದ ರೂಪರೇಖೆ' ಎಂಬ ಲೇಖನದಲ್ಲಿ ಎಚ್. ಎಚ್. ಅಣ್ಣಯ್ಯಗೌಡರು ವಿವರಿಸಿದ್ದಾರೆ. 'ಕೆಂಗಲ್ ವಾಣಿಗಳು' ಕೆಂಗಲ್ಲರು ಮುಖ್ಯಮಂತ್ರಿಯಾಗಿದ್ದಾಗ ಮಾಡಿದ ಭಾಷಣಗಳಿಂದ ಆಯ್ದ ಸೂತ್ರ ರೂಪದ ವಾಕ್ಯಗಳು. ಆಯ್ದವರು ದಿನಕರ (ಡಿ. ಲಿಂಗಯ್ಯ) ಇವುಗಳನ್ನು ನೋಡಿದಾಗ ನಮ್ಮ ವಿದ್ಯಾಭ್ಯಾಸ ಪದ್ಧತಿಯ ಬಗ್ಗೆ ಕೆಂಗಲ್ಲರು ಎಷ್ಟೊಂದು ರೀತಿ ಯಲ್ಲಿ ಚಿಂತಿಸಿ ಅಲ್ಲಿನ ನ್ಯೂನತೆಗಳಿಗೆ ಪರಿಹಾರ ಹುಡುಕಲು ಪ್ರಯತ್ನಿಸಿದ್ದಾರೆಂಬುದು ತಿಳಿಯುತ್ತದೆ ಅಲ್ಲದೆ ನಮ್ಮ ನಾಡಿನ ಸರ್ವಾಂಗೀಣ ಉನ್ನತಿಗಾಗಿ ಅವರ ಮನಸ್ಸು ಸದಾ ತುಡಿಯುತ್ತಿದ್ದುದು ಗೊತ್ತಾಗುತ್ತದೆ.

'ವಿಧಾನಸೌಧ'ವನ್ನು ಕುರಿತ ಮೂರು ಲೇಖನಗಳಿವೆ. ಕನ್ನಡದಲ್ಲಿ ಎಚ್. ಎಚ್. ಅಣ್ಣಯ್ಯ ಗೌಡರು ಇಂಗ್ಲಿಷಿನಲ್ಲಿ ಕೆ. ಎಸ್. ರಾಮೇಗೌಡರು ಮತ್ತು ಎಂ. ಮುನಿಯಪ್ಪ ಅವರು ಬರೆದಿದ್ದಾರೆ ಅಣ್ಣಯ್ಯಗೌಡರು ವಿಧಾನಸೌಧದ ವೈಶಿಷ್ಟ್ಯವನ್ನು ಹೇಳಿದರೆ ಮುನಿಯಪ್ಪನವರು ಅದರ ಉದ್ದ ಅಗಲಗಳನ್ನೂ ಅದಕ್ಕೆ ನೀರು ಸರಬರಾಜಾಗುವ ವಿಧಾನವನ್ನು ಹೇಳಿ ವಿಧಾನಸೌಧ ಈಗ ನಿರ್ಮಾಣವಾಗಿದ್ದರೆ ಹತ್ತುಕೋಟಿ ರೂಪಾಯಿಗಳು ಖರ್ಚಾಗುತ್ತಿತ್ತೆಂದು ಅಂದಾಜು ಮಾಡಿದ್ದಾರೆ. ಸ್ವತಃ ಶಿಲ್ಪ ತಜ್ಞರಾದ ಕೆ. ಎಸ್. ರಾಮೇಗೌಡರು ಕೆ. ಸಿ. ರೆಡ್ಡಿ ಅವರ ಕಾಲದಲ್ಲಿ ವಿಧಾನಸೌಧಕ್ಕೆ ಶಂಕುಸ್ಥಾಪನೆಯಾಗಿ ಅದರ ವಿನ್ಯಾಸ ಸಿದ್ಧವಾದುದನ್ನೂ, ಅದು ಕೆಂಗಲ್ಲರ ಕಾಲದಲ್ಲಿ ಮತ್ತೆ ಬದಲಾಗಿ ಕೆಂಗಲ್ಲರ ಕಲ್ಪನೆಗೆ ತಕ್ಕಂತೆ ಸಾವಿರಾರು ವಿನ್ಯಾಸಗಳು ಸಿದ್ಧವಾಗಿ ಕೊನೆಗೆ ಈಗಿನ ವಿನ್ಯಾಸ ಸ್ವೀಕೃತ ವಾದುದನ್ನೂ, ಅದರ ನಿರ್ಮಾಣದಲ್ಲಿ ಹೊಯ್ಸಳ, ದ್ರಾವಿಡ ಮತ್ತು ಜೈಪುರ ಮೊದಲಾದ ವಾಸ್ತು ಶಿಲ್ಪ ಶೈಲಿಗಳಿಂದ ಪ್ರೇರಿತರಾಗಿ ಆ ಎಲ್ಲ ಶೈಲಿಗಳನ್ನು ಅನುಕರಿಸಿ ಎಲ್ಲ ಶೈಲಿಗಳ ಸಂಗಮ ಅಲ್ಲಿರು ವುದನ್ನೂ ಇದು ವಾಸ್ತು ಶಿಲ್ಪ ತಜ್ಞರ ಟೀಕೆಗೆ ಗುರಿಯಾಗಿರುವಂತೆಯೆ ಅನೇಕರ ಮೆಚ್ಚುಗೆಯನ್ನು ಗಳಿಸಿರುವುದನ್ನು ಮತ್ತು ಅದರಿಂದಾಗಿ ಅನೇಕ ರೀತಿಯ ಅನುಕೂಲವಾಗಿರುವುದನ್ನು ವಿವರಿಸಿ ದ್ದಾರೆ. 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ವಿಧಾನಸೌಧದ ಬಾಗಿಲಿನ ಮೇಲೆ ಕೆಂಗಲ್ಲರು ಕೆತ್ತಿಸಿದ್ದುದನ್ನೂ ಕೆಂಗಲ್ಲರ ಅನಂತರ ಅಧಿಕಾರಕ್ಕೆ ಬಂದವರು ಆ ಉಕ್ತಿಯ ವಿವರಣೆಯನ್ನು ಅರಿಯದೆ ಅಳಿಸಿ ಹಾಕಿದುದನ್ನೂ, ವಿಧಾನಸೌಧದ ಕೆಂಗಲ್ಲರ ಭವ್ಯ ಕಲ್ಪನೆ ಪೂರ್ಣವಾಗದೆ ಉಳಿದು ದನ್ನೂ ಕೆರೆಕಟ್ಟೆ ಭಾವಿಗಳನ್ನು ಕಟ್ಟಿಸಿದಾಗ ಬಲಿಕೊಡುವಂತೆ ವಿಧಾನಸೌಧದ ನಿರ್ಮಾಣಕ್ಕೆ ಕೆಂಗಲ್ಲರ ಮೈಸೂರಿನ ರಾಜಕೀಯ ಬಲಿಯಾದುದನ್ನು 'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಲೇಖನದಲ್ಲಿ ಜಿ. ನಾರಾಯಣರು ವಿವರಿಸಿದ್ದಾರೆ.

ಏಕೀಕರ್ಣಾಟಕಕ್ಕೆ ಕೆಂಗಲ್ಲರು ವಹಿಸಿದ ಪಾತ್ರವನ್ನು ಕುರಿತು ಎರಡು ಲೇಖನಗಳಿವೆ. 'ಕೆಂಗಲ್ಲರೂ ಕರ್ನಾಟಕ ಏಕೀಕರಣವೂ' ಎಂಬ ಲೇಖನದಲ್ಲಿ ಸೂರ್ಯನಾಥ ಕಾಮತರು ಕೆಂಗಲ್ಲರು ಏಕೀಕರ್ನಾಟಕಕ್ಕಾಗಿ ದುಡಿದು ಆದರಿಂದ ಅಮೃತಬರುವ ಮೊದಲೇ ಉದಿಸಿದ ವಿಷವನ್ನುಂಡು ವಿಷಕಂಠನಾಗಿ ತಮ್ಮ ಮುಖ್ಯಮಂತ್ರಿ ಪದವಿಯನ್ನು ಕಳೆದುಕೊಂಡ ಚಾರಿತ್ರಿಕ ಘಟನೆಯನ್ನು ನೆನೆಸಿಕೊಂಡಿದ್ದಾರೆ. ೬-೧೧-೫೫ರಂದು ಮೈಸೂರು ರಾಜ್ಯದ ಉಭಯ ಸದನಗಳಲ್ಲಿ ಏಕೀ ಕರ್ನಾಟಕ ಗೊತ್ತುವಳಿಯ ಮೇಲೆ ಕೆಂಗಲ್ಲರು ಮಾಡಿದ ಭಾಷಣವನ್ನು ಅವರದೇ ಮಾತುಗಳಲ್ಲಿ ಎಚ್. ಎಚ್. ಅಣ್ಣಯ್ಯಗೌಡರು 'ಕರ್ನಾಟಕ ಏಕೀಕರಣದಲ್ಲಿ ಕೆಂಗಲ್ಲರ ಪಾತ್ರ' ಎಂಬ ಲೇಖನ ವಾಗಿ ಸಿದ್ಧಪಡಿಸಿದ್ದಾರೆ. ಇಲ್ಲಿ ಕೆಂಗಲ್ಲರಿಗೆ ಏಕೀಕರ್ನಾಟಕದ ಬಗೆಗಿದ್ದ ಅಚಲ ನಿಷ್ಠೆ, ತಮ್ಮ ವಿರೋಧಿಗಳನ್ನು ಒಲಿಸಿಕೊಳ್ಳುವ ವಾಕ್ಚಾತುರ್ಯ, ದೂರದೃಷ್ಟಿ ಮೊದಲಾದುವು ಸುವ್ಯಕ್ತವಾಗಿವೆ.

'ರೈಲ್ವೆ ಮಂತ್ರಿಯಾಗಿ ಕೆಂಗಲ್ ಹನುಮಂತಯ್ಯ ಎಂಬುದು ಕೆ. ಎನ್. ಚನ್ನಬಸಪ್ಪನವರ ಇಂಗ್ಲಿಷ್ ಲೇಖನ. ಕೆಂಗಲ್ ಹನುಮಂತಯ್ಯನವರು ಕೇವಲ ಒಂದು ವರ್ಷ ನಾಲ್ಕು ತಿಂಗಳು ಮಾತ್ರ ರೈಲ್ವೆ ಮಂತ್ರಿಯಾಗಿದ್ದರೂ ಅವರು ಸಾಧಿಸಿದ ಸಾಧನೆ ಅದ್ಭುತವಾದುದು ನಭೂತೋನ ಭವಿಷ್ಯತಿ ಎನ್ನುವಂಥದೆಂದು ಅಂಕಿ ಅಂಶಗಳಿಂದ ಲೇಖಕರು ವಿವರಿಸಿದ್ದಾರೆ. ಮೊದಲನೆಯದಾಗಿ ನಷ್ಟದಲ್ಲಿ ನಡೆಯುತ್ತಿದ್ದ ರೈಲ್ವೆ ಲಾಭದಲ್ಲಿ ನಡೆಯುವಂತೆ ಮಾಡಿದುದು, ಕಾಲಕ್ಕೆ ಸರಿಯಾಗಿ ರೈಲುಗಳು ಹೊರಡುವಂತೆ ಮತ್ತು ನಿರ್ದಿಷ್ಟ ಸ್ಥಳಗಳನ್ನು ತಲಪುವಂತೆ ಮಾಡಿದುದು, ಟಿಕೆಟ್‌ರಹಿತ ಪ್ರಯಾಣಿಕರ ವಿರುದ್ಧ ರಾಜ್ಯಸರ್ಕಾರಗಳ ಸಹಕಾರದೊಡನೆ ತೀವ್ರವಾದ ಕ್ರಮ ಕೈಗೊಂಡುದು, ದೇಶದಲ್ಲೆಲ್ಲಾ ಒಂದೇ ತೆರನಾದ ರೈಲ್ವೆಮಾರ್ಗವಿರಬೇಕೆಂಬ ಆವಶ್ಯಕತೆಯನ್ನು ಮನಗಂಡು ಅದ ರಂತೆ ಕಾರ್ಯಪ್ರವೃತ್ತರಾದುದು, ಕನ್ಯಾಕುಮಾರಿಯಿಂದ ದೆಹಲಿಯವರೆಗೆ ನೇರ ರೈಲ್ವೆಮಾರ್ಗದ ಕಲ್ಪನೆ ಮತ್ತು ಅದರ ಕಾರ್ಯಾರಂಭ, ರೈಲಿನ ಸುಗಮ ಓಡಾಟಕ್ಕೆ ಅಡಚಣೆಯಾಗಿದ್ದಲ್ಲೆಲ್ಲಾ ಸೇತುವೆಗಳ ನಿರ್ಮಾಣ ಮೊದಲಾದುವನ್ನು ವಿವರಗಳೊಂದಿಗೆ ತಿಳಿಸಿರುವುದಲ್ಲದೆ ೧೯೭೧ರಲ್ಲಿ ಪಾಕಿಸ್ಥಾನದ ಜೊತೆಯಲ್ಲಿ ಆದ ಯುದ್ಧದಲ್ಲಿ ಕೆಂಗಲ್ಲರ ನೇತೃತ್ವದಲ್ಲಿ ರೈಲ್ವೆ ವಿಭಾಗವು ನೀಡಿದ ನೆರವು ಸಹಕಾರಗಳನ್ನು ವಿವರಿಸಿದ್ದಾರೆ. ಯುದ್ಧಕ್ಕೆ ಮುನ್ನ ಮತ್ತು ಯುದ್ಧಕಾಲದಲ್ಲಿ ಯುದ್ಧೋ ಪಕರಣಗಳ ಸಾಗಾಣಿಕೆಗಾಗಿ ಎರಡು ಸಾವಿರ ವಿಶೇಷ ರೈಲುಗಳನ್ನೋಡಿಸಿದರೆ ಯುದ್ಧಾನಂತರ ನಿರಾಶ್ರಿತರಪುನರ್‌ವಸತಿಗಾಗಿ ಎಂಟುನೂರು ವಿಶೇಷ ರೈಲುಗಳನ್ನು ಓಡಿಸಿದುದನ್ನೂ ಬಂಗ್ಲಾದಲ್ಲಿ ನಿರ್ನಾಮವಾಗಿದ್ದ ರೈಲ್ವೆ ವ್ಯವಸ್ಥೆಯನ್ನು ಅತಿಕ್ಷಿಪ್ರಕಾಲದಲ್ಲಿ ಸಜ್ಜುಗೊಳಿಸಿಕೊಟ್ಟುದನ್ನು ವಿವರಿಸಿ ಹನುಮಂತಯ್ಯನವರ ದಕ್ಷತೆಯ ಪ್ರತ್ಯಕ್ಷ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಸಾರ್ವಜನಿಕವಾಗಿ ಸಾರ್ಥಕ ಸೇವೆಯನ್ನು ಸಲ್ಲಿಸಿದವರಿಗೆ ಅಭಿನಂದನ ಗ್ರಂಥಗಳನ್ನು ಅರ್ಪಿಸಿ ಸನ್ಮಾನಿಸುವುದೇ ಸೂಕ್ತವಾದ ಸನ್ಮಾನವಲ್ಲದಿದ್ದರೂ ಕೆಂಗಲ್ ಹನುಮಂತಯ್ಯನವರಿಗೆ ಅರ್ಪಿಸಿರುವ 'ರಾಜಕೀಯ ಪಟು' ಎಂಬ ಅಭಿನಂದನ ಗ್ರಂಥ ಸಮಾಧಾನಕರವಾದುದಲ್ಲ. ಈ ಅಭಿನಂದನ ಗ್ರಂಥ ಕೇವಲ ನೂರು ಪುಟಗಳಷ್ಟಿದೆ. ಅದು ಇನ್ನಷ್ಟು ಮೈದುಂಬಿಕೊಂಡು ಬರಬಹುದಾಗಿತ್ತು. ಕೆಂಗಲ್ಲರ ಆಪ್ತರಿಂದ, ರಾಜಕೀಯ ಒಡನಾಡಿಗಳಿಂದ, ಅಭಿಮಾನಿಗಳಿಂದ, ಅವರ ಅಧೀನದಲ್ಲಿ ಕೆಲಸ ಮಾಡಿದವರಿಂದ ಲೇಖನಗಳನ್ನು ಬರೆಸಬಹುದಾಗಿತ್ತು. ಅವರ ವಯ್ಯಕ್ತಿಕ ಜೀವನಕ್ಕೆ ಸಂಬಂ ಧಿಸಿದಂತೆ ಲೇಖನಗಳನ್ನು ಬರೆಸಬಹುದಾಗಿತ್ತು. ಈ ಅಭಿನಂದನ ಗ್ರಂಥಕ್ಕೆ 'ರಾಜಕೀಯ ಪಟು' ಎಂಬ ಹೆಸರಿನ ಬದಲು ಸೂಕ್ತವಾದ ಮತ್ತೊಂದು ಹೆಸರನ್ನಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ ಇದು ಕೆಂಗಲ್ಲರು ಪ್ರಧಾನವಾಗಿ ರಾಜಕಾರಣಿ ಎಂಬ ಅರ್ಥವನ್ನು ಕೊಡುತ್ತದೆ. ಆದರೆ ಕೆಂಗಲ್ಲರ ವ್ಯಕ್ತಿತ್ವ ಇಷ್ಟಕ್ಕೇ ಸೀಮಿತವಾಗಿಲ್ಲ. ಇದು ಸಂಪಾದಕರಿಗೂ ಗೊತ್ತು. ಈ ಪುಟ್ಟ ಅಭಿನಂದನ ಗ್ರಂಥದಲ್ಲಿ ಇರುವ ಕೆಲವೇ ಲೇಖನಗಳಲ್ಲಿ ಬಹಳಷ್ಟು ಒಂದೇ ವಿಷಯವನ್ನು ಕುರಿತವು. ಲೇಖಕರ ಆಯ್ಕೆಗೇ ವಿಷಯವನ್ನು ಬಿಟ್ಟದ್ದರಿಂದ ಹೀಗಾಗಿದೆ ಎಂದು ಸಂಪಾದಕರು ಹೇಳಿದ್ದಾರೆ. ಆದರೆ ಅದು ಸಮಾಧಾನಕರವಾದ ಹೇಳಿಕೆ ಆಗಲಾರದು. ವಿಷಯ ಪುನರುಕ್ತವಾದುದರಿಂದ ವೈವಿಧ್ಯಕ್ಕೆಡೆ

ಯಿಲ್ಲವೆಂತಾಗಿದೆ. ಮತ್ತು ಗ್ರಂಥದ ಉದ್ದಕ್ಕೂ ಒಂದೊಂದು ಲೇಖನದ ಕೊನೆಗೂ ಕೆಂಗಲ್ಲರ ಭಾಷಣಗಳಿಂದ ಆಯ್ದು ವಾಕ್ಯಗಳನ್ನು ಕೊಟ್ಟಿದೆ. ಈ ಆಯ್ದ ವಾಕ್ಯಗಳಲ್ಲಿ ಕೆಲವು ತೀರ ಸಾಮಾನ್ಯ. ಒಂದು ಸಮಾಧಾನದ ವಿಷಯವೆಂದರೆ ಎಲ್ಲ ಲೇಖನಗಳೂ ಕೆಂಗಲ್ಲರನ್ನು ಕುರಿತವು. ಹಾಗಾಗಿ ಕೃತಿಯ ಉದಕ್ಕೂ ಕೆಂಗಲ್ಲರ ನೆನಪು ಇದೆ. ಈ ಅಭಿನಂದನ ಗ್ರಂಥವನ್ನು ಓದಿ ಮುಗಿಸಿದ ಮೇಲೂ ಅವರ ನೆನಪು ಸಹೃದಯರ ಮನದಲ್ಲಿ ಉಳಿಯುತ್ತದೆ. "ಬಹುಮುಖ ಪ್ರತಿಭೆಯ ವ್ಯಕ್ತಿಯ ಜೀವನ ಮತ್ತು ಕಾರ್ಯಗಳನ್ನು ಪರಿಚಯಿಸಬೇಕೆಂಬ ಮಹದಾಸೆಯಿಂದ" ಈ ಅಭಿನಂದನ ಗ್ರಂಥ ಹೊರಬಂದು ತನ್ನ ಆಶಯದಲ್ಲಿ ಸೋತಿದ್ದರೂ "ಇದು ಗಾತ್ರದಲ್ಲಿ ಚಿಕ್ಕದಾದರೂ ಪಾತ್ರದಲ್ಲಿ ದೊಡ್ಡದೆಂಬ" ಸಂಪಾದಕರ ಮಾತು ಮಿತವಾದ ಅರ್ಥದಲ್ಲಿ ನಿಜ.

* * *

"ಕನ್ನಡದಲ್ಲಿ ಅಭಿನಂದನಾ ಗ್ರಂಥಗಳ ಒಂದು ಪರಂಪರೆಯೇ ನಿರ್ಮಾಣವಾಗಿದೆ. ನಾಡು ನುಡಿಯ ಸೇವೆಗಾಗಿ ದುಡಿದ ಹಿರಿಯರಿಗೆ ಗೌರವ ಸೂಚಿಸುವುದು, ಅವರ ಕೆಲಸವನ್ನು ಗುರುತಿಸುವುದು ಇದರ ಉದ್ದೇಶ. ಬಿ. ಎಂ. ಶ್ರೀ. ಅವರಿಗೆ 'ಸಂಭಾವನೆ' ಗ್ರಂಥವನ್ನು ಅರ್ಪಿಸಿದಮೇಲೆ ಈ ಸಂಪ್ರದಾಯ ಪ್ರಾರಂಭವಾಯಿತೆಂದು ತೋರುತ್ತದೆ. ಅನಂತರ ಈ ರೀತಿಯ ಅನೇಕ ಗ್ರಂಥಗಳು ಪ್ರಕಟವಾಗಿವೆ. ಇವುಗಳಲ್ಲಿ ಸ್ಪಷ್ಟವಾಗಿ ಎರಡು ವಿಧ ಕಾಣಬಹುದು. ಮೊದಲನೆಯದು– ಒಂದು ನಿರ್ದಿಷ್ಟ ವಿಷಯವನ್ನು ಪ್ರಧಾನವಾಗಿಟ್ಟುಕೊಳ್ಳದೆ ಹಲವು ವಿಷಯಗಳಮೇಲೆ ಹಲವು ಲೇಖಕರಿಂದ ಲೇಖನಗಳನ್ನು ಬರೆಯಿಸಿ ಅವುಗಳನ್ನು ಒಟ್ಟುಗೂಡಿಸಿ ಪ್ರಕಟಿಸುವುದು. ಎರಡನೆಯದು - ಅಭಿನಂದನಾ ಗ್ರಂಥವನ್ನು ಯಾರಿಗೆ ಅರ್ಪಿಸುತ್ತಾರೋ ಆ ಸಾಹಿತಿಯ ಸಾಧನೆ ಸಿದ್ಧಿಗಳನ್ನು ಗುರುತಿಸುವ ವಿಮರ್ಶಾತ್ಮಕ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುವುದು"* ಮೂರನೆಯ ಬಗೆಯ ಅಭಿನಂದನ ಗ್ರಂಥವೂ ಉಂಟು. ಸನ್ಮಾನಿತ ವ್ಯಕ್ತಿಗೆ ಪ್ರಿಯವಾದ ವಿಷಯಗಳ ಬಗೆಗೆ ಲೇಖನಗಳನ್ನು ಬರೆಸಿ ಗ್ರಂಥವನ್ನು ಸಮರ್ಪಿಸುವುದು. ೧೯೭೫ರಲ್ಲಿ ಬಂದಿರುವ ಅಭಿನಂದನಾ ಗ್ರಂಥಗಳಲ್ಲಿ 'ಸಹ್ಯಾದ್ರಿ' ಎರಡನೆಯ ವರ್ಗಕ್ಕೆ ಸೇರುತ್ತದೆ. ಇದರಲ್ಲಿ ಕುವೆಂಪು ಅವರ ಸಿದ್ಧಿ ಸಾಧನೆಗಳ ಪರಿಚಯವಾಗುತ್ತದೆ. 'ರಾಜಕೀಯ ಪಟು'ವನ್ನೂ ಇದೇ ವರ್ಗಕ್ಕೆ ಸೇರಿಸಬೇಕಾಗುತ್ತದೆ. ಆದರೆ ಕೆಂಗಲ್ಲರು ಸಾಹಿತಿಯಲ್ಲವಾದ್ದರಿಂದ ರಾಜಕೀಯ ಹಾಗೂ ಆಡಳಿತ ರಂಗದಲ್ಲಿ ಅವರು ಸಲ್ಲಿಸಿದ ಸೇವೆಯ ಬಗೆಗೆ. ಮತ್ತು ಸಂಸ್ಕೃತಿ ಪ್ರಸಾರಕ್ಕೂ ಏಕೀಕರ್ಣಾಟಕಕ್ಕೂ ಅವರು ನೆರವಾದ ಬಗೆಗೆ ಮತ್ತು ಇತರ ವಿಚಾರಗಳ ಬಗೆಗೆ ಲೇಖನಗಳಿವೆ. 'ರಾಜಕೀಯ ಪಟು'ವನ್ನು ಈ ವರ್ಗದಲ್ಲಿ ಸೇರಿಸುವುದು ಸೂಕ್ತವಲ್ಲ ಎನ್ನುವುದಾದರೆ ಇದನ್ನೇ ಮತ್ತೊಂದು ವರ್ಗವೆಂದೂ ಹೆಸರಿಸಬೇಕಾಗಿರುತ್ತದೆ. ೧೯೭೪ರಲ್ಲಿ ತಗಡೂರು ರಾಮಚಂದ್ರರಾಯರಿಗೆ, ಟಿ. ಎ. ಮಾಧವಪ್ಪೈ ಅವರಿಗೆ ಅರ್ಪಿಸಿದ ಅಭಿನಂದನ ಗ್ರಂಥಗಳು ಈ ಬಗೆಯವು. 'ಕಬ್ಬಿನಹಾಲು' ವಿನಲ್ಲಿ ಶಂಕರಗೌಡರ ಮೂರು ನಾಟಕಗಳ ವಿಮರ್ಶೆಯಿದ್ದರೂ ಅದು ಗೌಣವಾಗಿ ಶಂಕರಗೌಡರಿಗೆ ಪ್ರಿಯವಾದ ನಾಟಕ ಮತ್ತು ಶಿಕ್ಷಣಗಳ ಬಗ್ಗೆ ಲೇಖನಗಳಿರುವುದರಿಂದ ಅದನ್ನು ಮೂರನೆಯ ಗುಂಪಿಗೆ ಸೇರಿಸಬಹುದು.

ಈ ಮೂರು ಅಭಿನಂದನ ಗ್ರಂಥಗಳಲ್ಲಿ 'ಸಹ್ಯಾದ್ರಿ' ಮತ್ತು 'ಕಬ್ಬಿನ ಹಾಲು' ಗ್ರಂಥಗಳನ್ನು ಹೊರತಂದವರು ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನವರು. ಈ ಗ್ರಂಥಗಳ ಬಹುಪಾಲು ಲೇಖಕರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯವರು. ಇಂತಹ ಲೇಖಕರ ಪಡೆಯನ್ನೇ ಹೊಂದಿರುವ ಕನ್ನಡ ಅಧ್ಯಯನ ಸಂಸ್ಥೆ ಎಂತಹ ಗುರುತರವಾದ ಕೆಲಸವನ್ನಾದರೂ ಮಾಡಬಲ್ಲರೆಂದು ಈ ಸಂದರ್ಭದಲ್ಲಿ ಹೇಳಿದರೆ ಅನುಚಿತವಾಗಲಾರದೆಂದು ಭಾವಿಸುತ್ತೇನೆ.

---

* ಬಿ. ವಿ. ವೈಕುಂಠರಾಜು : ತೀ. ನಂ. ಶ್ರೀ. ನೆನಪಿಗೆ ವಿದ್ವತ್ ಕಾಣಿಕೆ : ಪ್ರಜಾವಾಣಿ ಸಾಪ್ತಾಹಿಕ ಪುರವಣಿ ೨೬-೯-೭೬.

ಜಾನಪದ

ಕೆ. ಮರುಳಸಿದ್ದಪ್ಪ

ಈ ವರ್ಷ ನಮ್ಮ ಗಮನಕ್ಕೆ ಬಂದಿರುವ ಒಟ್ಟು ಹನ್ನೊಂದು ಕೃತಿಗಳಲ್ಲಿ ಎರಡು ಶಾಸ್ತ್ರ ಗ್ರಂಥಗಳು ; ಉಳಿದವು ಜನಪದ ಸಾಹಿತ್ಯ ಸಂಕಲನಗಳು. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈಗೀಗ ಜನಪದ ಸಂಗ್ರಹಗಳು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯಾಗುತ್ತಿವೆ ; ಆದರೆ ಹೆಬ್ಬೊತ್ತಿಗೆಗಳು ಹೆಚ್ಚಾಗಿವೆ. ವೈಜ್ಞಾನಿಕ ದೃಷ್ಟಿ ಸಂಗ್ರಾಹಕರಲ್ಲಿ ಬೆಳೆಯುತ್ತಿದೆ ; ಸಾಂಸ್ಕೃತಿಕ ಅಧ್ಯಯನಕ್ಕೆ ಮಹತ್ವ ಬಂದಿದೆ.

ಸ್ಥೂಲವಾಗಿ ಜಾನಪದ ಕ್ಷೇತ್ರದ ವಿದ್ವಾಂಸರನ್ನು ಎರಡು ವಿಧವಾಗಿ ವಿಂಗಡಿಸಬಹುದು. ಮೊದಲನೆಯವರು ಸಂಗ್ರಹ ಮತ್ತು ಸಂಪಾದನಾ ಕಾರ್ಯದಲ್ಲಿ ಅಗಾಧ ಶ್ರಮವಹಿಸಿಯೂ ಸಾಕಷ್ಟು ವೈಜ್ಞಾನಿಕ ಮಾದರಿಯಲ್ಲಿ ಸಂಪಾದನೆಯನ್ನು ನಡೆಸದಿರುವವರು. ಆದರೆ ಈ ಬಗೆಯ ಸಂಪಾದಕರು ತಾವು ಸಂಗ್ರಹಿಸಿದ ಕಥೆ ಅಥವಾ ಹಾಡಿನ ಸಾಂಸ್ಕೃತಿಕ ಹಿನ್ನೆಲೆಯನ್ನು ಅರಿತಿರುತ್ತಾರೆ. ಈ ಸಂಗತಿಗಳನ್ನು ಸ್ಥೂಲವಾಗಿಯಾದರೂ ತಮ್ಮ ಪೀಠಿಕೆಗಳಲ್ಲಿ ಚರ್ಚಿಸಿರುತ್ತಾರೆ. ಎರಡನೆಯ ವರ್ಗದವರು ಸಂಗ್ರಹ ಸಂಪಾದನೆಗಳನ್ನು ಹೆಚ್ಚು ವೈಜ್ಞಾನಿಕವಾಗಿ ನಡೆಸಿರುತ್ತಾರೆ. ಹಾಡುಗಾರರು ಮತ್ತು ಕಥೆ ಹೇಳುವವರ ವಿವರಗಳನ್ನು ತಿಳಿಸಿರುತ್ತಾರೆ. ಕೆಲವೆಡೆ ಪ್ರತಿವಕ್ತೃಗಳ ಸಂದರ್ಶನವೂ ಇರುತ್ತದೆ. ಆದರೆ ಇವರಲ್ಲಿಯೂ ಕೆಲವರು ಸಾಂಸ್ಕೃತಿಕ ಚೌಕಟ್ಟಿನಲ್ಲಿಟ್ಟು ಒಂದು ಕಥೆ ಅಥವಾ ಹಾಡನ್ನು ಪರಿಶೀಲಿಸುವುದಿಲ್ಲ. ಜಾನಪದವನ್ನು ಕುರಿತ ಇಂಗ್ಲಿಷ್ ಗ್ರಂಥಗಳಿಂದ ತಾವು ಟಿಪ್ಪಣಿ ಮಾಡಿಕೊಂಡ ಎಲ್ಲ ಸಂಗತಿಗಳನ್ನೂ ಯಥಾವತ್ತಾಗಿ ಪೀಠಿಕೆಯಲ್ಲಿ ಪ್ರಸ್ತಾಪಿಸುತ್ತಾರೆ.

ಒಟ್ಟಾರೆ ಜಾನಪದ ಸಂಗ್ರಹಣೆಯ ಕಾರ್ಯ ಇಬ್ಬರಿಂದಲೂ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿದೆಯೆಂಬುದು ಗಮನಿಸಬೇಕಾದ ಸಂಗತಿ. ಬಹುಶಃ ಕನ್ನಡ ಜಾನಪದ ಕ್ಷೇತ್ರದಲ್ಲಿ ನಾವಿರುವುದು ಸಂಗ್ರಹ ಮತ್ತು ಸಂಪಾದನೆಯ ಘಟ್ಟ. ಅದರ ಅಧ್ಯಯನ ಮತ್ತು ವ್ಯಾಖ್ಯಾನಗಳ ಯುಗ ವಿನ್ನೂ ಪ್ರಾರಂಭವಾಗಬೇಕು. ಸಂಗ್ರಹ ಮತ್ತು ಸಂಪಾದನೆಗಳು ಹೆಚ್ಚು ವೈಜ್ಞಾನಿಕವಾಗಿ ನಿರ್ದಿಷ್ಟವಾಗಿ ನಡೆದರೆ ಮುಂದೆ ಯಾವ ಕಾಲಕ್ಕಾದರೂ ನಡೆಯಬಹುದಾದ ಅಧ್ಯಯನಕ್ಕೆ ಹೆಚ್ಚು ಅನುಕೂಲವಾಗುತ್ತದೆಯೆಂಬುದನ್ನು ಮಾತ್ರ ಎಲ್ಲರೂ ನೆನಪಿಡಬೇಕಾದ ಸಂಗತಿ.

ಈ ವರ್ಷದ ಮಹತ್ವಾಕಾಂಕ್ಷೆಯ ಅಗಾಧ ಪ್ರಮಾಣದ ಜನಪದ ಸಂಕಲನವೆಂದರೆ ಮತಿಘಟ್ಟ ಕೃಷ್ಣಮೂರ್ತಿಯವರದು. ತಾವು ಹಲವು ದಶಕಗಳಿಂದ ಸಂಗ್ರಹಿಸಿದ ಜನಪದ ಸಾಹಿತ್ಯವನ್ನೆಲ್ಲ ಅವರು ಹತ್ತು .ಸಂಪುಟಗಳಲ್ಲಿ ತರಬೇಕೆಂದಿದ್ದು, ಅದರ ಮೊದಲ ಕಂತಾಗಿ 'ಗೀತೆಗಳು' ಎಂಬ ಸಂಪುಟವನ್ನು ಹೊರತಂದಿದ್ದಾರೆ. ಪ್ರಥಮ ಸಂಪುಟದ ಗಾತ್ರವೇ ಸಹಸ್ರ ಪುಟಗಳನ್ನು ಮೀರಿ ನಿಂತಿದೆ ; ಒಟ್ಟಾರೆ ಅದರ ಬೃಹದ್ ಸ್ವರೂಪ ಹೇಗಿರಬಹುದೆಂದು ಊಹಿಸಬಹುದಾಗಿದೆ. ಕೋಲಾಟದ ಪದಗಳು, ಪ್ರೇಮ ಗೀತೆಗಳು, ಚಾರಿತ್ರಿಕ ಗೀತೆಗಳು, ಕ್ಷಾಮ ಗೀತೆಗಳು, ಸಂಕೀರ್ಣ ಗೀತೆಗಳು, ಬೀಸುವ ಪದಗಳು. ಸೋಬಾನೆ ಪದಗಳು, ನಾಲ್ಕು ಹಬ್ಬಗಳು, ಮಿಶ್ರ ಗೀತೆಗಳು. ಕಥನ ಗೀತೆಗಳು. ರಾಮಾಯಣದ ಕಥೆಗಳು, ಕೃಷ್ಣನ ಬಾಲ ಲೀಲೆ, ಶಿವ ಕಥೆಗಳು, ಸಾಮಾಜಿಕ ಕಥೆಗಳು, ಚಾರಿತ್ರಿಕ ಕಥೆಗಳು, ಶಿವಶರಣೆ ಚೆನ್ನಮ್ಮ—ಹೀಗೆ ವಿಂಗಡಿಸಿಕೊಂಡು ಒಂದೊಂದ

ಅಧ್ಯಾಯಕ್ಕೂ ಪ್ರತ್ಯೇಕ ಪ್ರಸ್ತಾವನೆಯೊಡನೆ ಪ್ರಕಟಿಸಿದ್ದಾರೆ. ಕೆಲವು ಅಧ್ಯಾಯಗಳಿಗೆ ಮಾತ್ರ ಪ್ರಸ್ತಾವನೆಯಿಲ್ಲ.

ಕನ್ನಡ ಜನಪದ ಸಾಹಿತ್ಯ ಸಂಗ್ರಹದಲ್ಲಿ ಮತಿಘಟ್ಟ ಕೃಷ್ಣಮೂರ್ತಿಯವರು ಪಡೆದಿರುವ ಅನುಭವದ ಮಟ್ಟಕ್ಕೆ ನಿಲ್ಲುವವರು ಬಹು ಕಡಿಮೆ ಸಂಖ್ಯೆಯಲ್ಲಿದ್ದಾರೆಂಬುದನ್ನು ಒಪ್ಪಿಕೊಳ್ಳಬಹುದಾದರೂ ಈ ಅನುಭವಕ್ಕೆ ಸಾಟಿಯಾದ ವೈಜ್ಞಾನಿಕ ದೃಷ್ಟಿಯೂ ಇದ್ದಿದ್ದರೆ ಕನ್ನಡನಾಡಿಗೆ ಇದರಿಂದ ಎಂಥ ಲಾಭವಾಗುತ್ತಿತ್ತೆಂದು ಯೋಚಿಸಬೇಕು. ತಾವು ಸಂಗ್ರಹಿಸಿದ ಜನಪದ ಸಾಹಿತ್ಯವನ್ನು ವ್ಯಾಖ್ಯಾನಿಸುವಲ್ಲಿ ಅವರು ಆಳವಾದ ಸಾಂಸ್ಕೃತಿಕ ಅರಿವನ್ನು ಪ್ರಕಟಿಸಿದ್ದಾರೆ. ಜೊತೆಗೆ ಜನಪದ ಮಾಧ್ಯಮದ ವಿಶಿಷ್ಟತೆ ಅವರಿಗೆ ಗೊತ್ತಿದೆ. ಕೆಲವು ಜನಪದ ಸಂಕೇತಗಳು, ಜನಪದ ಛಂದಸ್ಸು–ಇಂಥ ಲೇಖನಗಳು ಅವರ ಸೂಕ್ಷ್ಮ ನಿರೀಕ್ಷಣೆ ಮತ್ತು ಪಾಂಡಿತ್ಯಕ್ಕೆ ನಿದರ್ಶನವಾಗಿವೆ. ಈ ಸಂಸ್ಕೃತಿಯ ಆರ್ಥಿಕ ವ್ಯವಸ್ಥೆ, ಕುಟುಂಬ ವ್ಯವಸ್ಥೆ, ಸಾಮಾಜಿಕ ಪದ್ಧತಿಗಳು. ಚರಿತ್ರೆ, ಹಬ್ಬ ಆಚರಣೆಗಳು, ಪುರಾಣ ವ್ರತಗಳು, ಇವೆಲ್ಲವನ್ನೂ ಜಾನಪದ ಕಟ್ಟಿಕೊಡುತ್ತದೆ ಎಂಬ ಅರಿವಿನಿಂದ ಅವರು ಜನಪದ ಸಾಹಿತ್ಯವನ್ನು ನೋಡುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನವೋದಯ ಸಾಹಿತಿಗಳ ಪಾಲಿಗೆ ಜನಪದ ಸಾಹಿತ್ಯವೆನ್ನುವುದು ಕೇವಲ ಸುಂದರವಾದ ಅಭಿವ್ಯಕ್ತಿ. ಮತಿಘಟ್ಟ ಕೃಷ್ಣಮೂರ್ತಿಯವರೂ ಅದನ್ನು ಸಾಹಿತ್ಯವೆಂದೇ ಪರಿಗಣಿಸುತ್ತಾರಾದರೂ ಅದಕ್ಕೆ ಮಹತ್ವವಿರುವುದು ಸಾಂಸ್ಕೃತಿಕ ನೆಲೆಯಲ್ಲಿ ಎಂಬುದನ್ನು ಗುರುತಿಸುತ್ತಾರೆ. ಇಷ್ಟೆಲ್ಲ ಅರಿವಿದ್ದೂ ಅವರ ಕೆಲವು ಪ್ರಸ್ತಾವನೆಗಳಲ್ಲಿ ಈ ಸಂಸ್ಕೃತಿಯ ಸಾಮಾಜಿಕ ಆರ್ಥಿಕ ಪದ್ಧತಿಗಳ ವಸ್ತು ನಿಷ್ಠವಾದ ಕೂಲಂಕಷ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕು. ಏಕೆಂದರೆ ನಮ್ಮ ಪರಂಪರೆಯಲ್ಲಿರುವುದೆಲ್ಲಾ ಶ್ರೇಷ್ಠ ಎಂಬ ಪೂರ್ವ ಗ್ರಹಿಕೆಗಳಿಂದಲೇ ಜನಪದ ಸಾಮಗ್ರಿಯನ್ನವರು ಪರಿಶೀಲಿಸುತ್ತಾರೆ. ಅಲ್ಲಿ ಕಂಡುಬರುವ ಶೋಷಣೆಯನ್ನು ಅವರು ಗುರುತಿಸುವುದಿಲ್ಲ. ಅಲ್ಲದೆ ತಾವು ಸಂಗ್ರಹಿಸಿದ ಜನಪದ ಸಾಹಿತ್ಯದ ಪ್ರತಿವಕ್ತೃಗಳ ಮಾಹಿತಿಯನ್ನು ಅವರು ಕೊಡುವುದಿಲ್ಲ. ಇದೊಂದು ಈ ಸಂಗ್ರಹದ ಬಹು ದೊಡ್ಡ ಕೊರತೆ. ಜನಪದ ಗೀತೆಯೊಂದನ್ನು ಅದು ಹುಟ್ಟಿದ ಪರಿಸರದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಬೇಕಾದರೆ ಹಾಡುಗಾರರನ್ನು ಕುರಿತ ಮಾಹಿತಿ, ಸಮಗ್ರವಾದ ಸಂದರ್ಶನಗಳೆಲ್ಲಾ ಇರಬೇಕಾಗುತ್ತದೆ. ಜನಪದ ಸಾಹಿತ್ಯವನ್ನು ಅದು ಹುಟ್ಟಿದ ಸಾಮಾಜಿಕ ಸಾಂಸ್ಕೃತಿಕ ಪರಿಸರದಿಂದ ಬೇರ್ಪಡಿಸಿ ಪರಿಶೀಲಿಸಿದರೆ, ಹಾಗೆ ಪರಿಶೀಲಿಸುವ ವಿದ್ವಾಂಸನು ಸಹಜವಾಗಿಯೇ ತಾನು ಹುಟ್ಟಿದ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಗಳನ್ನು ಅಲ್ಲಿಗೆ ಆರೋಪಿಸುತ್ತಾನೆ. ಇದರಿಂದ ಸಾಂಸ್ಕೃತಿಕವಾಗಿ ಬಹು ದೊಡ್ಡ ಅನ್ಯಾಯವಾಗುತ್ತದೆ. ಇನ್ನು, ಮತಿಘಟ್ಟ ಕೃಷ್ಣಮೂರ್ತಿಯವರ ಗೀತೆಗಳ ವರ್ಗೀಕರಣ ವಿಧಾನವೂ ವ್ಯವಸ್ಥಿತವಾಗಿಲ್ಲ ; ವೈಜ್ಞಾನಿಕ ವಿಂಗಡನೆಯಂತೂ ಅಲ್ಲವೇ ಅಲ್ಲ; ಆದರಿಂದ ಪುನರಾವರ್ತನೆಯನ್ನು ಅಲ್ಲಿ ಕಾಣಬಹುದು. ಮುಂದಿನ ಸಂಗ್ರಹಗಳಲ್ಲಿ ಈ ಬಗೆಯ ಕೊರತೆಗಳನ್ನು ನೀಗಿಸುತ್ತಾರೆಂಬ ಭರವಸೆಯನ್ನು ತಾಳಬಹುದಾಗಿದೆ. ಒಟ್ಟಾರೆ ಹೇಳುವುದಾದರೆ ಮತಿಘಟ್ಟ ಕೃಷ್ಣಮೂರ್ತಿಯವರ ಕೊಡುಗೆ ಗಾತ್ರದ ದೃಷ್ಟಿಯಿಂದ ಅದ್ವಿತೀಯವಾದದ್ದೆಂಬುದರಲ್ಲಿ ಸಂದೇಹಕ್ಕೆಡೆಯೇ ಇಲ್ಲ. ಜನಪದ ಸಾಹಿತ್ಯ ಸಂಗ್ರಹದ ದುಡಿಮೆಯ ಅರಿವಿರುವವರು ಅವರ ಶ್ರಮ ಎಂಥದೆಂಬುದನ್ನು ಬಲ್ಲರು. ಏಕಾಂಗಿಯಾಗಿ ಈ ಪ್ರಮಾಣದ ಕೆಲಸವನ್ನು ಮಾಡಿರುವ ಅವರನ್ನು ಅಭಿನಂದಿಸುವುದು ಮಾತ್ರವಲ್ಲ ತಕ್ಕ ಪ್ರೋತ್ಸಾಹ ಕೊಡುವುದು ಸಂಬಂಧಿಸಿದವರೆಲ್ಲರ ಕರ್ತವ್ಯವಾಗಿದೆ.

'ಪಟ್ಟೋಲೆ ಪಳಮೆ', ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯವರು ಪ್ರಕಟಿಸಿರುವ ಒಂದು ಅಪೂರ್ವ ಬಗೆಯ ಜಾನಪದ ಕೃತಿ. ಸಂಪಾದಕರಾದ ನಡಿಕೇರಿಯಂಡ ಚಿಣ್ಣಪ್ಪನವರು ತಮ್ಮ ಜನಪದ ಅಧ್ಯಯನವನ್ನು ಭೌಗೋಳಿಕವಾಗಿ ಕೊಡಗಿಗೆ ಸಾಂಸ್ಕೃತಿಕವಾಗಿ ಕೊಡವರಿಗೆ ಸೀಮಿತಗೊಳಿಸಿಕೊಂಡಿರುವುದರಿಂದ ಅವರ ಅಧ್ಯಯನಕ್ಕೆ ಗಟ್ಟಿಯಾದ ನೆಲೆಯಿದೆ. ಮತಿಘಟ್ಟ ಕೃಷ್ಣಮೂರ್ತಿಗಳ ಸಂಗ್ರಹದಂತೆ ವೈವಿಧ್ಯ ಇಲ್ಲಿಲ್ಲವಾದರೂ ಅಲ್ಲಿ ಕಾಣಲಾರದ ಸ್ಪಷ್ಟ ಮಾಹಿತಿಗಳಿವೆ.

ಸಾರ್ಥಕವಾದ ಫಲಿತಗಳಿವೆ. ಕನ್ನಡದ 'ಗರತಿ ಹಾಡು' ಪ್ರಕಟವಾಗುವುದಕ್ಕೆ ಒಂದು ದಶಕದಷ್ಟು ಹಿಂದೆಯೇ ಪ್ರಕಟವಾಗಿದ್ದ 'ಪಟ್ಟೋಲೆ ಪಳಮೆ' ಕೊಡಗು ಸಂಸ್ಕೃತಿಯನ್ನು ಪರಿಚಯಿಸುವ ಚಿಕ್ಕ ವಿಶ್ವಕೋಶದಂತಿದೆ. ಕೊಡಗು ಜಾನಪದ ಸಂಗ್ರಹ, ಜೀವನ ವಿಭಾಗ, ಪದ್ಧತಿ ಮತ್ತು ಆಚರಣೆಗಳ ಅಧ್ಯಯನವನ್ನು ಈ ಶತಮಾನದ ಮೊದಲ ಭಾಗದಲ್ಲಿಯೇ ನಡೆಸಿದ ದಿವಂಗತರಾದ ನಡಿಕೇರಿಯಂಡ ಚಿಣ್ಣಪ್ಪನವರು ಯಾವುದೇ ಆಧುನಿಕ ಜನಪದ ಸಂಗ್ರಹಕಾರನಿಗೂ ಮಾರ್ಗದರ್ಶನವಾಗುವಂತಹ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ವಾಸ್ತವವಾಗಿ ಕೊಡಗಿನ ಜನಪದ ಗೀತೆಗಳನ್ನು ಸಂಗ್ರಹಿಸುವ ಕಾರ್ಯ ಕಳೆದ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದಲೇ ನಡೆದಿತ್ತೆಂದು ಗೊತ್ತಾಗಿದೆ. ಡಾ. ಜೀಶಂಪರವರು ಸರಿಯಾಗಿಯೇ ಗುರುತಿಸಿರುವಂತೆ "ಕಾಲ ದೃಷ್ಟಿಯಿಂದ, ವಿಷಯ ದೃಷ್ಟಿಯಿಂದ, ಕ್ರಮಬದ್ಧವಾದ ಜಾನಪದ ಅಧ್ಯಯನ ದೃಷ್ಟಿಯಿಂದ ಚಿಣ್ಣಪ್ಪನವರು 'ಪಟ್ಟೋಲೆ ಪಳಮೆ' ಮಹತ್ವದ ಕೃತಿಯಾಗಿ ನಿಂತಿದೆ."

ಕೊಡಗು ವಿವರಣೆಯೆಂಬ ಮೊದಲ ಅಧ್ಯಯನದಲ್ಲಿ ಭೌಗೋಳಿಕ ವಿವರ, ಕಾವೇರಿ ಪುರಾಣ, ಸ್ಥಳಮಹಾತ್ಮೆ, ರಾಜಕೀಯ ಇತಿಹಾಸಗಳಿವೆ ಎರಡನೆಯ ಅಧ್ಯಾಯದಲ್ಲಿ ಕೊಡವರ ಪದ್ಧತಿ ಮತ್ತು ಆಚರಣೆಗಳ-ಹುಟ್ಟು, ಸೂತಕ, ಮದುವೆ, ಸಾವು ಮುಂತಾದ ವಿಧಿಗಳ–ಅಧ್ಯಯನ ಸಮಗ್ರವಾಗಿದೆ. ಮೂರನೆಯ ಅಧ್ಯಾಯ ಹಬ್ಬಗಳನ್ನು ಪರಿಚಯಿಸುತ್ತದೆ. ಕೈಲ್ ಪೊಳ್ದು. ಕಾವೇರಿ ಸಂಕ್ರಮಣ, ಪುತ್ತರಿ ಮುಂತಾದ ಹಬ್ಬಗಳನ್ನು ಆರಾಧನೆ ಆಚರಣೆಗಳ ಸಹಿತ ಪರಿಚಯಿಸಲಾಗಿದೆ. ನಾಲ್ಕನೆಯ ಮತ್ತು ಐದನೆಯ ಅಧ್ಯಾಯದಿಂದಲೇ ಜನಪದ ಸಾಹಿತ್ಯ ಸಂಗ್ರಹವಿರುವುದು. ಕೊಡಗರ ದೈವಕ್ಕೆ ಸಂಬಂಧಿಸಿದ ಹಾಡುಗಳು ಈ ಎರಡು ಅಧ್ಯಾಯಗಳಲ್ಲಿವೆ. ಆರನೆಯ ಅಧ್ಯಾಯದಲ್ಲಿ ಗಾದೆಗಳು, ಒಗಟುಗಳು ಮತ್ತು ಸೂಕ್ತಿಗಳ ಸಂಗ್ರಹವಿದೆ. ಅದೇ ಅಧ್ಯಾಯದಲ್ಲಿ ಜಾತಿ ಪದ್ಧತಿ, ಇತರ ಪದ್ಧತಿಗಳು, ನಂಬಿಕೆಗಳು, ಪ್ರಾಯಶ್ಚಿತ್ತಗಳು, ಮೃಗಪಕ್ಷಿಗಳ ಕೂಗಿನ ಸಂಕೇತಗಳು, ಶಬ್ದಾರ್ಥ ವಿವರಗಳೂ ಇವೆ.

ಸುಮಾರು ಐನೂರಕ್ಕೂ.ಹೆಚ್ಚು ಪುಟಗಳ 'ಪಟ್ಟೋಲೆ ಪಳಮೆ' ಎಲ್ಲ ದೃಷ್ಟಿಯಿಂದಲೂ ಕೊಡಗು ಸಂಸ್ಕೃತಿಗೆ ತನ್ಮೂಲಕ ಕರ್ನಾಟಕ ಸಂಸ್ಕೃತಿಗೆ ಒಂದು ಮಹತ್ವದ ಕೊಡುಗೆಯಾಗಿದೆ. ಕರ್ನಾಟಕದ ಜಾನಪದ ಇತಿಹಾಸದಲ್ಲಿಯೇ ಇದರ ಪ್ರಕಟನೆ, ಒಂದು ಸಾಧನೆಯ ಮೈಲಿಗಲ್ಲು. ಈಗಾಗಲೇ ೧೯೨೪ ರಲ್ಲಿಯೇ ಈ ಗ್ರಂಥ ಚಿಣ್ಣಪ್ಪನವರಿಂದಲೇ ಪ್ರಕಟವಾಗಿದ್ದು ಮರು ಮುದ್ರಣವನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಕೈಗೊಂಡು, ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿದೆ. ಈ ಗ್ರಂಥದಲ್ಲಿರುವ ಕೊಡವರ ಹಾಡುಗಳು, ಗಾದೆ, ಒಗಟು ಮುಂತಾದ ಜನಪದ ಸಾಹಿತ್ಯಕ್ಕೆ ಕನ್ನಡ ಅನುವಾದವನ್ನೂ ಒದಗಿಸಿದ್ದರೆ ಈ ಕೃತಿಯನ್ನು ಪ್ರಕಟಿಸಿದ ಅವರ ಉದ್ದೇಶ ಹೆಚ್ಚು ಸಾರ್ಥಕವಾಗಿರುತ್ತಿತ್ತು. ಕೊಡಗು ಭಾಷೆಯ ಪರಿಚಯವಿಲ್ಲದವರು ಈ ಕೃತಿಯನ್ನು ಅಧ್ಯಯನಕ್ಕೆ ಇನ್ನೂ ಸಮಗ್ರವಾಗಿ ಬಳಸಿಕೊಳ್ಳದಂತಾಗಿರುವ ಪರಿಸ್ಥಿತಿಯನ್ನು ಮರುಮುದ್ರಣದಲ್ಲಿ ಸುಲಭವಾಗಿ ನಿವಾರಿಸಬಹುದಿತ್ತು. ಈಗಿರುವಂತೆ 'ಪಟ್ಟೋಲೆ ಪಳಮೆ' ನಡಿಕೇರಿಯಂಡ ಚಿಣ್ಣಪ್ಪನವರ ಕೃತಿಯ ಪುನರ್‌ಮುದ್ರಣ ಮಾತ್ರವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಡಾ. ಎಂ. ಎಸ್. ಸುಂಕಾಪುರರು ಸಂಪಾದಕರಾಗಿ ಪ್ರಕಟಿಸುತ್ತಿರುವ 'ಜೀವನ ಜೋಕಾಲಿ' ಮಾಲೆಯಲ್ಲಿ ಈ ವರ್ಷ 'ದುಂದುಮೆ ಪದಗಳು' ಹೊರಬಂದಿದೆ. ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯಕ್ಕೆ ನಡುವೆ ಜನಪ್ರಿಯ ಸಾಹಿತ್ಯವೆಂಬ ಒಂದು ಪ್ರಕಾರವನ್ನು ಗುರುತಿಸುವ ಅಗತ್ಯವಿದೆಯೆಂಬ ಅಂಶವನ್ನು ಇಂಥ ಕೃತಿಗಳನ್ನು ಕಂಡಾಗ ಮನವರಿಕೆಯಾಗುತ್ತದೆ. ಜನಪ್ರಿಯ ಸಾಹಿತ್ಯವು ಧಾಟಿ ಧೋರಣೆಗಳಲ್ಲಿ ಜಾನಪದಕ್ಕೆ ಹತ್ತಿರವಾಗಿರುತ್ತದೆ; ಆದರೆ ಏಕ ಕವಿ ಕೃತವಾಗಿರುವುದರಿಂದ ರಚನೆಯಲ್ಲಿ ಅಚ್ಚುಕಟ್ಟು, ಅಲ್ಪ ಸ್ವಲ್ಪ ಪಾಂಡಿತ್ಯವೂ ಇರುವುದುಂಟು. ಅಲ್ಲದೆ ಇಂಥ ಕೆಲವು ಹಾಡುಗಳು ವಾಕ್ ಪರಂಪರೆಯಲ್ಲಿಯೇ

ಪ್ರಸಾರ ಹೊಂದಿರುತ್ತವೆ. ಹೋಳಿ ಹಾಡು, ದುಂದುಮೆ ಪದಗಳು ವಸಂತೋತ್ಸವ ಆಚರಣೆಯ ಅಂಗವಾಗಿಯೇ ಪ್ರಸಾರದಲ್ಲಿರುವ ಹಾಡುಗಳಾಗಿದ್ದು ಸಮೂಹದ ಭಾಗವಹಿಸುವಿಕೆಯನ್ನು ಅಲ್ಲಿ ಕಾಣಬಹುದಾಗಿದೆ. ಆದುದರಿಂದ ಜಾನಪದಕ್ಕೆ ಹತ್ತಿರವಾದ ಮತ್ತು ಸ್ಪಷ್ಟವಾಗಿಯೇ ಜನಪ್ರಿಯ ಸಾಹಿತ್ಯವಾಗಿರುವ ದುಂದುಮೆ ಪದಗಳನ್ನು ಜಾನಪದ ವಿದ್ವಾಂಸರೇ ಸಂಪಾದಿಸುವುದು ಉಚಿತವಾಗಿದೆ. ಪ್ರಸ್ತುತ ಸಂಪಾದಕರು ಇಂಥ ಒಂಬತ್ತು ದುಂದುಮೆ ಪದಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಪ್ರಸ್ತಾವನೆಯಲ್ಲಿ ಹೋಳಿ ಸಾಹಿತ್ಯದ ವೈಶಿಷ್ಟ್ಯ, ದುಂದುಮೆ ಪದದ ಲಕ್ಷಣಗಳನ್ನು ವಿವರಿಸಿದ್ದಾರೆ. ದುಂದುಮೆ ಪದಗಳನ್ನು ಹಾಡುವಾಗ ಬಳಸುವ ವಾದ್ಯದ ವಿವರಣೆ ಮತ್ತು ದುಂದುಮೆ ಪದಗಳನ್ನು ಆಚರಣೆಯ ಚೌಕಟ್ಟಿನಲ್ಲಿಯೇ ಇರಿಸಿ ನೋಡಿರುವುದು ಇಲ್ಲಿನ ವಿಶೇಷವಾಗಿದೆ. ಕಥನ ಕಾವ್ಯಗಳಾದ ದುಂದುಮೆ ಪದಗಳ ಕತೃಗಳು ಮತ್ತು ಕಥಾ ಪರಿಚಯವನ್ನೂ ಪ್ರಸ್ತಾವನೆಯಲ್ಲಿ ಮಾಡಿಕೊಡಲಾಗಿದೆ. ಒಟ್ಟಾರೆ 'ಜೀವನ ಜೋಕಾಲಿಯ ಜನಪದ ಸಾಹಿತ್ಯಮಾಲೆ' ಕನ್ನಡ ಜಾನಪದ ಭಂಡಾರವನ್ನು ಸಮೃದ್ಧಿಗೊಳಿಸುತ್ತಿರುವುದು ಸಂತೋಷದ ಸಂಗತಿ. ಇದರ ಹಿಂದೆ ಚಾಲಕ ಶಕ್ತಿಯಾಗಿ ನಿಂತು ದುಡಿಯುತ್ತಿರುವ ಡಾ. ಸುಂಕಾಪುರರು ಅಭಿನಂದನಾರ್ಹರು.

'ಶಿವಮೊಗ್ಗಾ ಜಿಲ್ಲೆಯ ಗೊಂದಲಿಗರ ಕಥೆಗಳು', ಕ್ಯಾತನಹಳ್ಳಿ ರಾಮಣ್ಣನವರ ಒಂದು ಸಂಕಲನ. ಗೊಂದಲಿಗರ ಪರಂಪರೆ ಕನ್ನಡ ನಾಡಿನಲ್ಲಿ ಪ್ರಚಾರದಲ್ಲಿರುವ ಒಂದು ವಿಶಿಷ್ಟ ಕಥಾ ಪರಂಪರೆಯಾಗಿದ್ದು ಅಪೂರ್ವವಾದ ಕೆಲವು ಪದ್ಧತಿಗಳು, ಆಚಾರ ವಿಚಾರಗಳು ಅಲ್ಲಿ ಕಂಡುಬರುತ್ತವೆ. ಈ ಪರಂಪರೆಗೆ ಸೇರಿದ ಹತ್ತು ಕಥೆಗಳನ್ನು, ಧಾರ್ಮಿಕ–ಲೌಕಿಕ, ಎಂಬ ಎರಡು ವಿಭಾಗದಲ್ಲಿ ಗುರುತಿಸಿ ಸಂಗ್ರಹಿಸಿದ್ದಾರೆ. ಅಚ್ಚುಕಟ್ಟಾದ ತಮ್ಮ ಪ್ರಸ್ತಾವನೆಯಲ್ಲಿ ಶಿವಮೊಗ್ಗೆಯ ಗೊಂದಲಿಗರಲ್ಲಿ ಕಂಡುಬರುವ ವೈಯಕ್ತಿಕ ಆಚರಣೆಗಳು – ಮೈ ನೆರೆದಾಗ, ಮದುವೆಯಾದಾಗ, ಸತ್ತಾಗ – ಮತ್ತು ಸಾರ್ವತ್ರಿಕ ಪದ್ಧತಿಗಳೂ – ನ್ಯಾಯ ವಿತರಣೆ ಇತ್ಯಾದಿ – ಸಂಗತಿಗಳನ್ನು ವಿವರಿಸಿದ್ದಾರೆ. ಈ ಭಾಗ ಇನ್ನಷ್ಟು ವ್ಯಾಪಕವಾಗಿರಬಹುದಿತ್ತೆಂಬುದನ್ನು ಬಿಟ್ಟರೆ ಉಳಿದಂತೆ ಕಥೆಗಾರನನ್ನು ಕುರಿತ ಮಾಹಿತಿ, ಅರ್ಥಕೋಶ ಮುಂತಾದವು ಸಮಗ್ರವಾಗಿವೆ.

'ಹಂತಿಯ ಹಾಡುಗಳು', ಕನ್ನಡ ಜನಪದ ಸಾಹಿತ್ಯದಲ್ಲಿ ವಿಶೇಷ ಬಗೆಯವು. ಕೃಷಿ ಪ್ರಧಾನ ಸಂಸ್ಕೃತಿಯ ನಮ್ಮ ದೇಶದಲ್ಲಿ ಕೃಷಿ ಕಾಯಕದಲ್ಲಿ ನಿರತರಾದ ಜನಪದರು ತಮ್ಮ ಕೆಲಸದ ದಣಿವನ್ನು ಮರೆಯಲು ಇಂಥ ಹಾಡುಗಳನ್ನು ಹಾಡುತ್ತಿದ್ದರು. ಕೆಲವಕ್ಕೆ ಆಚರಣೆಗಳೂ ಉಂಟು. ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿಯೂ ಸುಗ್ಗಿಯ ಹಾಡುಗಳು ಪ್ರಚಾರದಲ್ಲಿವೆ. ಉತ್ತರ ಕರ್ನಾಟಕದಲ್ಲಿ ಇವನ್ನೇ ಹಂತಿಯ ಹಾಡುಗಳೆನ್ನುತ್ತಾರೆ. ಡಾ. ಎಂ. ಎಸ್. ಲಠ್ಠೆಯವರು 'ಹಂತಿಯ ಹಾಡುಗಳ ಒಂದು ಸಂಗ್ರಹವನ್ನೇ ತಂದಿದ್ದಾರೆ. ಸಂಪಾದಕರ ಉತ್ಸಾಹಪೂರ್ಣ ದುಡಿಮೆಯನ್ನು ಮೆಚ್ಚುತ್ತಾ ಕೆಲವು ಅರಕೆಗಳನ್ನೂ ಗಮನಿಸಬಹುದಾಗಿದೆ. ಒಂದೊಂದೂ ಹಾಡನ್ನು ಸಂಗ್ರಹಿಸಿದ ನಿರ್ದಿಷ್ಟ ಹಳ್ಳಿ, ಪ್ರತಿವಕ್ತೃವಿನ ಹೆಸರು, ಹಾಡು ಹುಟ್ಟಿದ ಸಾಂಸ್ಕೃತಿಕ ಹಿನ್ನೆಲೆ ಮುಂತಾದ ದಾಖಲೆಗಳನ್ನು ಸಂಪಾದಕರು ಕೊಡಬೇಕಾಗಿತ್ತು. ಪೀಠಿಕೆಯಲ್ಲಿ ಅವರೇ ಹೇಳಿರುವಂತೆ ಉತ್ತರ ಕರ್ನಾಟಕದಲ್ಲಿ ಹಂತಿಯ ಹಾಡುಗಳನ್ನು ಹೆಚ್ಚಾಗಿ ಹಾಡುವವರು ಹೊಲೆಯರು; ಹಂತಿಯ ಹಾಡುಗಳಿಗೆ ವೃತ್ತಿ ಗಾಯಕರಿದ್ದಾರೆ; ಅವರನ್ನು ಸುಗ್ಗಿಯಲ್ಲಿ ಹಣ ಕೊಟ್ಟು ಕರೆಸುವುದುಂಟು – ಆದರೆ ಈ ವಿವರಗಳಿಂದ ಬರಬೇಕಾದ ಸಾಂಸ್ಕೃತಿಕ ತೀರ್ಮಾನಗಳೇನು ಎಂಬುದು ಮಾತ್ರ ಸ್ಪಷ್ಟವಾಗುವುದಿಲ್ಲ. ಹಂತಿಯ ಹಾಡುಗಳಿಗೆ ಸಂಬಂಧಿಸಿದಂತೆ ಇದ್ದಿರಬಹುದಾದ ಆಚರಣೆಗಳ ವಿವರವೂ ಅಲ್ಲಿಲ್ಲ. ಅಲ್ಲದೆ, ಹಂತಿಯ ಹಾಡುಗಳೆಂದರೆ ಸುಗ್ಗಿಯ ಕಾಲದಲ್ಲಿ ಹಾಡಬಹುದಾದ ಯಾವ ರೀತಿಯ ಹಾಡುಗಳಾದರೂ ಸರಿ. ಎಂಬ ಧೋರಣೆ ಸಂಪಾದಕರಿಗಿರುವಂತಿದೆ. ಹೀಗಾಗಿ ಐತಿಹಾಸಿಕ, ಪೌರಾಣಿಕ ಕಥನ ಗೀತಗಳೂ ಈ ಸಂಗ್ರಹದಲ್ಲಿ ಸೇರಿವೆ. ವಾಸ್ತವವಾಗಿ ಹಂತಿಯ ಹಾಡುಗಳು ವಿಶೇಷವಾಗಿ ಕೃಷಿ ಕಾಯಕಕ್ಕೆ ಸಂಬಂಧಿಸಿದ ಚಟುವಟಿಕೆಯ

ವಸ್ತುವನ್ನುಳ್ಳ ಹಾಡುಗಳು. ಇಲ್ಲಿ ಸ್ತುತಿಯ ಹಾಡುಗಳು, ಎತ್ತಿನ ಮಹಿಮೆಗೆ ಸಂಬಂಧಿಸಿದ ಹಾಡುಗಳು, ರೈತನ ಕೆಲಸ ಕಾರ್ಯ, ಕೃಷಿ ಸಂಬಂಧ ಆರಾಧನೆ ಮತ್ತು ಆಚರಣೆಗಳು ಮಾತ್ರ ಸೇರಬೇಕು. ಹೀಗೆ ನಿಖರವಾಗಿ ವಸ್ತುನಿಷ್ಠ ವಿಭಾಗ ಮಾಡಿಕೊಳ್ಳದಿದ್ದರೆ ಜನಪದ ಗೀತೆಗಳೆಲ್ಲಾ ಹಂತಿಯ ಹಾಡುಗಳಾಗಿಬಿಡುತ್ತವೆ; ಸುಗ್ಗಿಯ ಕಾಲದಲ್ಲಿ ಇವೆಲ್ಲವನ್ನೂ ಹಾಡುತ್ತಾರೆ ಎಂಬ ಕಾರಣದಿಂದ. ಇಷ್ಟೆಲ್ಲಾ ಕೊರತೆಗಳಿದ್ದೂ ಡಾ. ಲಕ್ಷ್ಮಯವರ ಕಾರ್ಯ ಅಭಿನಂದನೀಯವಾಗಿದೆ. ಏಕೆಂದರೆ ಇಷ್ಟು ಸಂಖ್ಯೆಯ ಕೃಷಿ ಸಂಬಂಧಿಯಾದ ಜನಪದ ಗೀತೆಗಳು ಒಂದು ಕಡೆ ಒಟ್ಟಾಗಿ ದೊರೆಯುವಂತಾದುದರಿಂದ ಸಾರ್ಥಕ ಅಧ್ಯಯನಕ್ಕೆ ಮುಂದಾದರೂ ಅವಕಾಶವಾದೀತು.

'ಮಾಗಡಿ ಕೆಂಪೇಗೌಡ', ಐತಿಹಾಸಿಕ ಮಹತ್ವವುಳ್ಳ ಜನಪದ ಕಾವ್ಯ. ಕರ್ನಾಟಕದ ಪ್ರಾಚೀನ ಪರಂಪರೆಯಲ್ಲಿ ಕಂಡುಬರುವ ಉಜ್ವಲ ವ್ಯಕ್ತಿಗಳಲ್ಲಿ ಕೆಂಪೇಗೌಡನೂ ಒಬ್ಬ. ಆತನನ್ನು ಕುರಿತ ಒಂದು ದೀರ್ಘ ಜನಪದ ಕೃತಿಯನ್ನು ಸಂಪಾದಿಸಿ ಪ್ರಕಟಿಸಿರುವ ಪಿ. ಕೆ. ರಾಜಶೇಖರ ಮತ್ತು ಗೆಳೆಯರು ಒಳ್ಳೆಯ ಕೆಲಸವನ್ನೇ ಮಾಡಿದ್ದಾರೆ. ಎಂಟು ಜನ ಗಾಯಕರಿಂದ ಸಂಗ್ರಹಿಸಿ ಪರಿಷ್ಕರಿಸಿರುವ ಈ ಕೃತಿ ಗ್ರಂಥ ಸಂಪಾದನಾ ಶಾಸ್ತ್ರದ ನಿಯಮಕ್ಕನುಸಾರವಾಗಿ ಸಂಪಾದಿಸಲ್ಪಟ್ಟಿದೆ. ಜನಪದ ಸಾಹಿತ್ಯವನ್ನು ಹೀಗೆ ಸಂಪಾದಿಸುವುದು ಎಷ್ಟರಮಟ್ಟಿಗೆ ಉಚಿತ? ಎಂಬುದನ್ನು ಕುರಿತ ಸಂದೇಹ ನಮಗಿದೆ. ಯಾವುದಾದರೂ ಉತ್ತಮ ಪ್ರತಿಯೊಂದನ್ನು ಪೂರ್ತಿಯಾಗಿ ಒಪ್ಪಿ ಪ್ರಕಟಿಸಿ, ಉಳಿದ ಪಾಠಾಂತರಗಳನ್ನು ತೌಲನಿಕ ಅಧ್ಯಯನಕ್ಕೆ ಬಳಸುವುದು ಅನುಸರಿಸಬೇಕಾದ ಮಾರ್ಗವೆನ್ನಬಹುದು.

ಈ ಗ್ರಂಥದ ಪ್ರಸ್ತಾವನೆಯಲ್ಲಿ ಕೆಲವು ಕುತೂಹಲಕಾರಿ ಹೇಳಿಕೆಗಳಿವೆ. 'ಒಕ್ಕಲಿಗ' ಎಂಬ ಪದ ಕೃಷಿ ಸಂಬಂಧಿಯಾದುದು ಎಂಬ ಒಂದೇ ಕ್ಷೀಣ ಆಧಾರದಮೇಲೆ ಕೃಷಿ ಸಂಬಂಧಿಯಾದ ಸರ್ವ ಸಮಸ್ತವೂ 'ಒಕ್ಕಲಿಗ' ಎಂಬ ಜಾತಿಗೇ ಸೇರಿದ್ದು ಎಂಬ ತಪ್ಪು ಕಲ್ಪನೆಯನ್ನು ಅದು ಮೂಡಿಸುತ್ತಿದೆ. 'ಒಕ್ಕಲಿಗ' ಎಂಬ ಪದ ಉದ್ಯೋಗ ಸೂಚಕವಾಗಿರುವಂತೆ ಜಾತಿ ಸೂಚಕವೂ ಆಗಿದೆ. ಉದ್ಯೋಗ ಸೂಚಕ ಎಂಬರ್ಥದಲ್ಲಿ ಕೃಷಿಯನ್ನವಲಂಬಿಸಿರುವ ಎಲ್ಲ ಜಾತಿಗಳವರನ್ನೂ ಒಕ್ಕಲಿಗರು ಎನ್ನುವ ಪರಿಪಾಠವಿದೆ. ಕರ್ನಾಟಕದ ಕೆಲವು ಭಾಗಗಳಲ್ಲಿ ವೀರಶೈವರನ್ನೂ 'ಒಕ್ಕಲು ತನ'ದವರು ಎಂದೇ ಕರೆಯುತ್ತಾರೆ. ಅಲ್ಲದೆ ಕೃಷಿ ಕಾರ್ಯದಲ್ಲಿ ನಿರತರಾಗಿರುವ ಹಲವು ಹನ್ನೊಂದು ಜಾತಿಗಳು ಕರ್ನಾಟಕದಲ್ಲಿವೆ. ಆದರೆ ಹಳೆಯ ಮೈಸೂರಿನ ಕೆಲವು ಪ್ರದೇಶಗಳಲ್ಲಿ 'ಒಕ್ಕಲಿಗ' ಎಂಬ ಪದ ಜಾತಿ ಸೂಚಕವೂ ಆಗಿದೆ. ಹಿಂದೂ ಧರ್ಮದ ವರ್ಣಾಶ್ರಮ ವಿಂಗಡಣೆಯಂತೆ ಒಂದು ವರ್ಣವನ್ನು ನಿರ್ಧರಿಸುವುದು ಉದ್ಯೋಗ. ಉದಾಹರಣೆಗೆ ದೈಹಿಕ ಶ್ರಮದ ದುಡಿಮೆಗಾರರೆಲ್ಲ ಶೂದ್ರರು. ಆದರೆ ಈ ಶೂದ್ರರಲ್ಲೇ ಆಚರಣೆ, ಪದ್ಧತಿ, ಕುಟುಂಬ ವ್ಯವಸ್ಥೆ ಮುಂತಾದ ವ್ಯತ್ಯಾಸಗಳಿಂದಾಗಿ ಹಲವು ಜಾತಿಗಳಿವೆ. ವರ್ಣ ವ್ಯವಸ್ಥೆಯಲ್ಲಿ ಉದ್ಯೋಗವು ಒಂದು ವರ್ಣವನ್ನು ನಿರ್ಧರಿಸಿದಂತೆ ಜಾತಿ ವ್ಯವಸ್ಥೆಯಲ್ಲಿ ಆಚರಣೆಗಳು ಒಂದು ಜಾತಿಯನ್ನು ನಿರ್ಧರಿಸುತ್ತವೆ. ಈ ಯಾವ ಸಂಗತಿಗಳನ್ನೂ ವಿಚಾರಿಸದೆ ಪಿ. ಕೆ. ರಾಜಶೇಖರರು ದಕ್ಷಿಣ ಭಾರತದ ಬಹುಸಂಖ್ಯಾತ ಜಾತಿಗಳಾದ ಆಂಧ್ರದ ರೆಡ್ಡಿಗಳು, ತಮಿಳು ನಾಡಿನ ಗೌಂಡರು, ಕೇರಳದ ನಾಯರ್‌ಗಳು – ಮುಂತಾದವರನ್ನೆಲ್ಲಾ ಒಕ್ಕಲಿಗ ಜಾತಿಯವರೆಂದು ಕರೆಯುತ್ತಾರೆ. ಕೇರಳದ ನಾಯರರಂತೂ ಹಿಂದೂ ಧರ್ಮದಲ್ಲೇ ವಿಶಿಷ್ಟ ಬಗೆಯವರೆಂದು ಮಾನವ ಶಾಸ್ತ್ರದ ಪರಿಚಯವಿರುವವರೆಲ್ಲಾ ಹೇಳುತ್ತಾರೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಮತ್ತು ಇತರ ಆಚರಣೆಗಳಿಂದಾಗಿ ಅವರು ಈ ವಿಶಿಷ್ಟ ವರ್ಗಕ್ಕೆ ಸೇರುತ್ತಾರೆ. ಹೀಗಿರುವಾಗ ನಾಯರರು ಹೇಗೆ ಒಕ್ಕಲಿಗರು, ಎಂಬುದನ್ನು ಅವರು ಸಾಂಸ್ಕೃತಿಕ ಸಾಮಾಜಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ವಿವರಿಸಬೇಕು. ಆದರೆ ಇಲ್ಲಿ ವಿಚಿತ್ರವಾದ ಸಂಗತಿಯೆಂದರೆ ರೆಡ್ಡಿ, ಗೌಂಡರು, ನಾಯರ್‌ಗಳು ವ್ಯವಸಾಯದವರೆಂದು ಒಕ್ಕಲಿಗರಾದಂತೆ ಕರ್ನಾಟಕದವರೇ ಆಗಿದ್ದು ಕೃಷಿ ಮತ್ತು ಕೃಷಿ ಸಂಬಂಧಿ ಕಸುಬುದಾರರೇ ಆಗಿರುವ ಲಿಂಗಾಯಿತರು, ಕುರುಬರು, ದೇವಾಂಗ, ಮಾದಿಗ, ಹೊಲೆಯರು ರಾಜಶೇಖರರು

ಒಪ್ಪುವಂತಹ ಒಕ್ಕಲಿಗರಲ್ಲ. ಉದ್ಯೋಗ ಸೂಚಕ ಮತ್ತು ಜಾತಿ ಸೂಚಕ ಎಂಬ ಎರಡು ಅರ್ಥಗಳು ಈ ಶಬ್ದಕ್ಕಿರುವ ಮೂಲಭೌತ ಸಂಗತಿಯನ್ನೇ ಅವರು ತಿಳಿದುಕೊಂಡಿಲ್ಲವಾದುದರಿಂದ ಅಥವಾ ಅದನ್ನು ಗೌಣವೆಂದು ಭಾವಿಸಿರುವುದರಿಂದ ಈ ವಿರೋಧಾಭಾಸಗಳು ಹುಟ್ಟಿಕೊಂಡಿವೆ. ವ್ಯವಸಾಯದ ಕಸುಬಿನವರೆಲ್ಲಾ ಒಕ್ಕಲಿಗರಾಗುವುದಾದರೆ ದಕ್ಷಿಣ ಭಾರತವೇ ಏಕೆ ಜಗತ್ತಿನ ಎಲ್ಲ ದೇಶದಲ್ಲಿಯೂ ಈ ಜಾತಿಯವರಿದ್ದಾರೆಂದು ಒಪ್ಪಬೇಕಾಗುತ್ತದೆ. ಪಿ. ಕೆ. ರಾಜಶೇಖರರ ಒಂದು ಹೇಳಿಕೆ ಹೀಗಿದೆ : "...... ಒಕ್ಕಲಿಗರ ಬೇಸಾಯ ದೇವತೆಯಾದ ಬಸವಗಳು ವೀರಶೈವ ಅರ್ಚಕರ ಪ್ರಭಾವಕ್ಕೆ ಸಿಕ್ಕಿ ಕಲ್ಯಾಣದ ಬಸವನಾಗಿ ಪರಿವರ್ತಿತವಾದವು ..... ಇದರಿಂದ ಒಕ್ಕಲಿಗರ ಬಸವನ ಗುಡಿಗಳು ಶೈವ ಮಠಗಳು ವೀರಶೈವರ ಹಸ್ತಕ್ಷೇಪಕ್ಕೊಳಗಾಗಿ ಒಕ್ಕಲಿಗ ಜನಾಂಗ ಧಾರ್ಮಿಕ ಪರಿವೇಷದಿಂದ ಚ್ಯುತವಾಯಿತು". ಮತ್ತೊಂದು ಕಡೆ ಸಿದ್ಧರಾಮನಂತಹ ಶರಣರು ಒಕ್ಕಲಿಗರಾಗಿದ್ದು ವೀರಶೈವ ವಿದ್ವಾಂಸರು ಅವರಿಗೆ ಲಿಂಗದೀಕ್ಷೆ ಕೊಡಿಸಿದರೆಂದು ಆರೋಪಿಸಿದ್ದಾರೆ. ಇಂತಹ ಹೇಳಿಕೆಗಳು ಒಂದು ಪರಂಪರೆಯ ಸಾಮಾಜಿಕ ಸಾಂಸ್ಕೃತಿಕ ಇತಿಹಾಸದ ಸ್ಪಷ್ಟ ಅರಿವಿಲ್ಲದಿದ್ದರೆ ಮಾತ್ರ ಬರುತ್ತವೆ. ಕೇವಲ ಭಾವುಕ ಉತ್ಸಾಹವನ್ನು ಮಾತ್ರ ನಂಬಿ ಸರಳವಾದ ದಿಢೀರ್ ತೀರ್ಮಾನಕ್ಕೆ ಬರದೆ ಐತಿಹಾಸಿಕ ಹಿನ್ನೆಲೆಯಲ್ಲಿ ಒಂದು ಸಂಗತಿಯನ್ನು ಪರಿಶೀಲಿಸುವುದು ಉಚಿತ. ವಾಸ್ತವವಾಗಿ ಹನ್ನೆರಡನೇ ಶತಮಾನದ ಶಿವಶರಣರಲ್ಲಿ ಮತ್ತು ಮುಂದೆ ವೀರಶೈವಕ್ಕೆ ಮತಾಂತರವಾದ ಬಹುಪಾಲು ಜನ ಕೆಳಜಾತಿಗಳಿಂದ ಮತ್ತು ಕೃಷಿ ನೆಲೆಯಿಂದ ಬಂದವರು. ಇವತ್ತಿಗೂ ವೀರಶೈವರಲ್ಲಿರುವ ನೊಣಬ, ಸಾದ, ಗೌಡ– ಮುಂತಾದ ಉಪಜಾತಿಗಳು ನೇರವಾಗಿ ಒಕ್ಕಲಿಗ ಜಾತಿ ಮೂಲದಿಂದ ಮತಾಂತರ ಹೊಂದಿರುವ ಸಾಧ್ಯತೆಯಿದೆಯಾದರೂ ಇವರನ್ನು ಯಾರೂ ಒತ್ತಾಯದಿಂದ ಮತಾಂತರಿಸಿರಲಾರರು. ಏನಿದ್ದರೂ ಇದನ್ನೆಲ್ಲಾ ಸಾಂಸ್ಕೃತಿಕ ಸಾಮಾಜಿಕ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗುತ್ತದೆ. ಇಂದಿಗೂ ಒಕ್ಕಲಿಗರಿಗೂ ಲಿಂಗಾಯಿತರಿಗೂ ಆರ್ಥಿಕ ಸಾಮಾಜಿಕ ಪರಿಸ್ಥಿತಿಯಲ್ಲಿ ಅಂತಹ ವ್ಯತ್ಯಾಸವೇನೂ ಇಲ್ಲ. ಆಚರಣೆಗಳಲ್ಲಿ ಮಾತ್ರ ವ್ಯತ್ಯಾಸವಿದೆ. ಯಾರೂ ಇತಿಹಾಸವನ್ನು ಸರಳೀಕರಿಸಬಾರದೆಂಬ ಗಂಭೀರ ನಿಷ್ಠೆಯಿಂದ ಇಷ್ಟೆಲ್ಲಾ ಹೇಳಲಾಗಿದೆಯೇ ಹೊರತು ಯಾರನ್ನೂ ಸಮರ್ಥಿಸಿಕೊಳ್ಳುವ ಅಥವಾ ಖಂಡಿಸುವ ಉದ್ದೇಶದಿಂದಲ್ಲ.

ಮಾಗಡಿ ಕೆಂಪೇಗೌಡನಂತಹ ಮಹಾವ್ಯಕ್ತಿಗಳು ಆರ್ಥಿಕ ಸಾಮಾಜಿಕ ಪರಂಪರೆಯ ಹಿನ್ನೆಲೆಯಲ್ಲಿ ಕೃಷಿಕರೆಲ್ಲರಿಗೂ ಸೇರಿದವರು. ಅಂದರೆ ಕೃಷಿ ಪ್ರಧಾನ ವಾಂಶಿಕ ಮೂಲದಿಂದ ಹುಟ್ಟಿ ರಾಜ್ಯವ್ಯವಸ್ಥೆಯ ಸೂತ್ರವನ್ನು ಹಿಡಿದ ಮಹಾಶೂರರು. ಈ ದೇಶದ ಸಂಸ್ಕೃತಿಯ ಜೀವಾಳ ಕೃಷಿ ಎಂಬುದನ್ನರಿತರೆ, ಮತ್ತು ಕೃಷಿಯ ಹಿನ್ನೆಲೆಯೇ ಇಲ್ಲದ ಕ್ಷತ್ರಿಯರು ಮತ್ತು ಅವರ ಹಿಂದೆ ನಿಂತ ವೈದಿಕರು ರಾಜ್ಯ ವ್ಯವಸ್ಥೆಯನ್ನು ಭಾರತದಲ್ಲಿ ವ್ಯಾಪಕವಾಗಿ ಹಿಡಿದಿದ್ದರೆಂಬ ಐತಿಹಾಸಿಕ ಸತ್ಯವನ್ನು ನೆನಪಿಸಿ ಕೊಂಡರೆ ಮಾಗಡಿ ಕೆಂಪೇಗೌಡ ನಂತಹವರು ಇತಿಹಾಸದಲ್ಲಿ ಏಕೆ ವಿಶಿಷ್ಟರಾಗುತ್ತಾರೆಂಬ ಸಂಗತಿ ಹೊಳೆಯುತ್ತದೆ.

ಎಲ್. ಆರ್. ಹೆಗ್ಗಡೆಯವರ 'ಉತ್ತರ ಕನ್ನಡ ಜನಪದ ಕಥೆಗಳು' ಈ ವರ್ಷದಲ್ಲಿ ಗಮನಿಸಬೇಕಾದ ಕೃತಿಗಳಲ್ಲೊಂದು. ಅತಿ ಮಾನುಷ ಕಥೆಗಳು, ಪ್ರಾಣಿ ಕಥೆಗಳು ಮತ್ತು ವಾಸ್ತವಿಕ ಕಥೆಗಳೇ ಪ್ರಧಾನವಾದ ಈ ಸಂಕಲನದಲ್ಲಿ ತಮ್ಮ ಪ್ರತಿವಕ್ತೃಗಳನ್ನು ಕುರಿತ ವಿವರವಾದ ಮಾಹಿತಿಯಿದೆ. ತೌಲಿಕ ಸಾಕಷ್ಟು ಅಭ್ಯಾಸ ಪೂರ್ಣವಾಗಿದೆ. ಉಳಿದವರಂತೆ ಸ್ಟಿತ್‌ಥಾಮ್ಸನ್ನಿನ ಗ್ರಂಥವನ್ನು ಮುಕ್ಕಿಕಾಮುಕ್ಕಿ ಒಪ್ಪಿಸದೆ ಒಂದೊಂದೂ ಕಥೆಯ ಹಿನ್ನೆಲೆ, ಪರಿಸರವನ್ನು ತಿಳಿಯುವ ವ್ಯಾಖ್ಯಾನಿಸುವ ಪ್ರಾಮಾಣಿಕ ಪ್ರಯತ್ನವನ್ನಲ್ಲಿ ಗುರುತಿಸಬಹುದು. ಸಮಗ್ರವಾದ ಸಾಂಸ್ಕೃತಿಕ ಅಧ್ಯಯನವೆಂದು ಅದನ್ನು ತಿಳಿಯಬಾರದಾದರೂ ಸಧ್ಯಕ್ಕೆ ಸಾಧ್ಯವಿರುವ ಎಲ್ಲ ನಿಟ್ಟಿನಿಂದಲೂ ಒಂದು ಕಥೆಯನ್ನವರು ಪರಿಶೀಲಿಸುತ್ತಾರೆ. ಕೆಲವು ಕಥೆಗಳಿಗೆ ಪ್ರಾಚೀನ ಪಾಠಾಂತರಗಳನ್ನೂ ಸೂಚಿಸಿ ತೌಲನಿಕ ವಿವೇಚನೆ ನಡೆಸಿದ್ದಾರೆ. ಮದುವೆಯ ಪದ್ಧತಿಗಳನ್ನು ಕುರಿತು, ಹಿಂಸಾಪ್ರಕಾರ

ಗಳನ್ನು ಕುರಿತು, ಕೃಷಿ ಚಟುವಟಿಕೆಯನ್ನು ಕುರಿತು, ಪ್ರಾಚೀನ ಕಾಲದಲ್ಲಿದ್ದಿರಬಹುದಾದ ಜೀವನ ವಿಧಾನಗಳನ್ನು ಕುರಿತು ಅವರು ಅಲ್ಲಲ್ಲಿ ಸ್ಥೂಲವಾಗಿ ಚರ್ಚಿಸಿದ್ದಾರೆ. ಜನಪದ ಸಾಹಿತ್ಯವನ್ನು ಅಪೂರ್ವವಾದ ಗತಕಾಲದ ಪಳೆಯುಳಿಕೆಯೆಂದು ಭಾವಿಸಿ ಅಧ್ಯಯನ ಮಾಡುವ ಅಪರ ಪರಿಪಾಠ ಅನುಕರಣೀಯವಾಗಿದೆ.

'ನಮ್ಮೂರಿನ ಜನಪದ ಕಥೆಗಳು', ದೊ. ನಾ. ರಾಮೇಗೌಡರ ಸಂಗ್ರಹ. ಮಂಡ್ಯ ಜಿಲ್ಲೆಯ ಹಳ್ಳಿಯೊಂದರಲ್ಲಿಯೇ ಇಲ್ಲಿರುವ ಕಥೆಗಳನ್ನೆಲ್ಲಾ ಸಂಗ್ರಹಿಸಿರುವುದು ಇಲ್ಲಿನ ಒಂದು ವೈಶಿಷ್ಟ್ಯ. ಸಂಪಾದಕರು ತಮ್ಮ ದೀರ್ಘವಾದ ಪ್ರಸ್ತಾವನೆಯಲ್ಲಿ ಜನಪದ ಕಥೆಯ ಸ್ವರೂಪ, ವರ್ಗೀಕರಣ, ಆಶಯ - ಮುಂತಾದ ಸಂಗತಿಗಳನ್ನು ಚರ್ಚಿಸಿದ್ದಾರೆ. ಈ ಸಂಗ್ರಹದ ಕಥೆಗಳನ್ನು ಹೋಲುವ ಇತರ ಕಥೆಗಳು, ಕಥಾವರ್ಗಗಳನ್ನೂ ವಿವರಿಸಿದ್ದಾರೆ. ಗ್ರಂಥದ ಕೊನೆಗೆ ಪ್ರತಿವಕ್ತೃಗಳನ್ನು ಕುರಿತ ಮಾಹಿತಿಗಳಿವೆ. ಒಟ್ಟಾರೆ ಸಾಕಷ್ಟು ವೈಜ್ಞಾನಿಕವಾಗಿ ಈ ಸಂಗ್ರಹವನ್ನು ಹೊರತರಲಾಗಿದೆ ಯಾದರೂ ಕಥೆಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಧ್ಯಯನಕ್ಕೆ ಸಾಕಷ್ಟು ಮಹತ್ವ ಕೊಟ್ಟಿಲ್ಲ. ಇಲ್ಲಿರುವ ವ್ಯಭಿಚಾರದ ಕಥೆಗಳು ಕನ್ನಡದಲ್ಲಿಯೇ ಹೊಸ ರೀತಿಯವೆಂದು ಸಂಪಾದಕರು ಭಾವಿಸಿದ್ದಾರೆ. ಆದರೆ ಇಂಥ ಸಾವಿರಾರು ಕಥೆಗಳು ಅದಕ್ಕಾಗಿಯೇ ಮೀಸಲಿರುವ ಅನೇಕ ಅಶ್ಲೀಲಸಿಯತ ಕಾಲಿಕೆಗಳಲ್ಲಿ ಬಂದಿವೆ. ಇಂಥ ಎಷ್ಟೋ ಕಥೆಗಳು ಶುದ್ಧ ಜನಪದ ಕಥೆಗಳೇ ಎಂದು ಸಂದೇಹಿಸ ಬೇಕಾಗಿದೆ. ಅವು ಬರೆಹದ ಮೂಲಕವೇ ಹುಟ್ಟಿ ವಾಕ್ ಪರಂಪರೆಯಲ್ಲಿ ಪ್ರಸಾರವಾಗಿರುವ ಸಾಧ್ಯತೆಯನ್ನು ಅಲ್ಲಗಳೆವಂತಿಲ್ಲ. ಶುದ್ಧ ಜನಪದ ಕಥೆಗಳಾಗಿದ್ದರೂ ಸಾಂಸ್ಕೃತಿಕವಾಗಿ ಇವುಗಳ ಮಹತ್ವ ವಿಶೇಷವಾದುದಲ್ಲ. ಲೈಂಗಿಕ ಆಸಕ್ತಿ ಮತ್ತು ಅದಕ್ಕೆ ಸಂಬಂಧಿಸಿದ ಕಟ್ಟುಪಾಡುಗಳನ್ನು ಉಲ್ಲಂಘಿಸುವಲ್ಲಿ ಎಲ್ಲ ಸಮಾಜಗಳೂ ತುಂಟತನದಿಂದ ವರ್ತಿಸಿವೆಯೆಂಬ ತಮಾಷೆಯೊಂದನ್ನೇ ಇಂಥ ಕಥೆಗಳು ವ್ಯಾಪಕವಾಗಿ ಸ್ಪಷ್ಟಪಡಿಸುತ್ತವೆ.

'ಪಾರ್ತಿ ಸುಬ್ಬನ ಯಕ್ಷಗಾನಗಳು' ಎಂಬ ಕೃತಿಯನ್ನು ಕುಕ್ಕಿಲ ಕೃಷ್ಣಭಟ್ಟರು ಸಂಪಾದಿಸಿದ್ದಾರೆ. ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯು ಪ್ರಕಟಿಸಿರುವ ಈ ಗ್ರಂಥದಲ್ಲಿ ಕುಂಬಳೆಯ ಪಾರ್ತಿಸುಬ್ಬನವೆಂದು ಹೇಳಲಾದ ಹತ್ತು ಯಕ್ಷಗಾನ ಪ್ರಸಂಗಗಳು ಮತ್ತು ಯಕ್ಷಗಾನ ಲಕ್ಷಣವನ್ನು ಹೇಳುವ ಶಾಸ್ತ್ರ ಕೃತಿಯಾದ 'ಸಭಾಲಕ್ಷಣ'ವನ್ನೂ ಸೇರಿಸಿದ್ದಾರೆ. ಯಕ್ಷಗಾನವನ್ನು ಶುದ್ಧ ಜಾನಪದವೆಂದು ಕರೆಯಬೇಕೇ ಎಂಬುದು ಚರ್ಚಾಸ್ಪದ ವಿಷಯವೇ ಆಗಿದೆ. ಯಕ್ಷಗಾನ ಸಾಹಿತ್ಯ ದಲ್ಲಿ ಸಂಭಾಷಣೆ ಮೌಖಿಕವಾದುದು. ಪದ್ಯಭಾಗವೂ ನಿರ್ದಿಷ್ಟ ಕವಿಯಿಂದ ರಚಿಸಲ್ಪಟ್ಟಿದ್ದರೂ ಜನಸಾಮಾನ್ಯರಿಗಾಗಿಯೇ ಬರೆದದ್ದು ಎಂಬುದರಲ್ಲಿ ಸಂದೇಹವಿಲ್ಲ. ಪದ್ಯ ಭಾಗವನ್ನು ಬಿಟ್ಟು ಯಕ್ಷಗಾನದ ಉಳಿದ ಕಲಾಮಾಧ್ಯಮಗಳೆಲ್ಲ–ನೃತ್ಯ, ಗಾನ, ವಾದ್ಯ, ವೇಷ, ಭೂಷಣ, ಮುಖಾ ಲಂಕಾರ-ಜಾನಪದೀಯವಾಗಿರುವುದರಿಂದ ಇದೊಂದು ಜಾನಪದ ಕಲೆ ಎಂದೇ ಪರಿಗಣಿಸಬೇಕಾಗಿದೆ. ಆದರೆ ಯಕ್ಷಗಾನ ಕವಿಗಳಂತೂ ಜನಪದ ಕವಿಗಳಂತೆ ನಿರಕ್ಷರ ಕುಕ್ಷಿಗಳಲ್ಲ. ಸಾಕಷ್ಟು ಕಾವ್ಯ, ಶಾಸ್ತ್ರ ವ್ಯಾಸಂಗ ಪರಿಣತರು. ಕೆಲವರಂತೂ ಮಹಾಪಂಡಿತರು. ಪಾರ್ತಿ ಸುಬ್ಬನವೆಂದು ಸಂಪಾದಿಸ ಲಾಗಿರುವ ಪ್ರಸ್ತುತ ಯಕ್ಷಗಾನಗಳಲ್ಲಿಯೇ ಕವಿಗಳ ಪಾಂಡಿತ್ಯಕ್ಕೆ ಹೇರಳವಾದ ಉದಾಹರಣೆಗಳು ಸಿಗುತ್ತವೆ.

'ಪಾರ್ತಿಸುಬ್ಬನ ಯಕ್ಷಗಾನಗಳು' ಸಂಪಾದಿಸಿರುವ ಕುಕ್ಕಿಲ ಕೃಷ್ಣಭಟ್ಟರು ತಮ್ಮ ಹಲವು ವರ್ಷಗಳ ಸಂಶೋಧನೆಯ ಫಲವಾಗಿ ಈ ಕೃತಿಯನ್ನು ಹೊರ ತರುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಆದರೆ ಅವರು ಪಾರ್ತಿಸುಬ್ಬನವೆಂದು ಹೇಳುತ್ತಿರುವ ಯಕ್ಷಗಾನ ಕೃತಿಗಳು ಆತನವಲ್ಲವೆಂಬ ವಾದವೂ ಇದೆ. ಪಾರ್ತಿಸುಬ್ಬನು ಹದಿನೆಂಟನೆ ಶತಮಾನಕ್ಕೆ ಹಿಂದಿನವನೆಂದು ಕೃಷ್ಣಭಟ್ಟರು ಹೇಳಿದರೆ ಡಾ. ಶಿವರಾಮಕಾರಂತರು ಆತನ ಕಾಲವನ್ನು ಹತ್ತೊಂಬತ್ತನೆ ಶತಮಾನವೆಂದಿದ್ದಾರೆ. ಯಕ್ಷ ಗಾನ ಚರಿತ್ರೆಯಲ್ಲಿ ಮೂವರು ಸುಬ್ಬರಿದ್ದು ಕುಂಬಳೆಯ ಪಾರ್ತಿಸುಬ್ಬನು ಮೂರನೆಯ ಮತ್ತು

ಹತ್ತೊಂಬತ್ತನೆ ಶತಮಾನದವನೆಂದೂ, ಇವನಿಗಿಂತ ಹಿಂದಿನ ಉಳಿದಿಬ್ಬರ ಕೃತಿಗಳನ್ನೂ ಪಾರ್ತಿಸುಬ್ಬನಿಗೇ ಆರೋಪಿಸಿ ಆತನ ಕಾಲವನ್ನು ಹದಿನೇಳನೇ ಶತಮಾನಕ್ಕೆ ಒಯ್ಯುವುದು ಸರಿಯಲ್ಲವೆಂದೂ ಅವರವಾದ. ಇಷ್ಟೆಲ್ಲಾ ವಾದ ವಿವಾದಗಳ ಸುಳಿವನ್ನೂ ಹತ್ತ ಕೊಡದಂತೆ ಕುಕ್ಕಿಲ ಕೃಷ್ಣ ಭಟ್ಟರು ತಮ್ಮ ಪೀಠಿಕೆಯನ್ನು ಬರೆದಿದ್ದಾರೆ. ಐತಿಹಾಸಿಕವಾಗಿ ನಡೆದಿರುವ ಎಲ್ಲ ವಾದ ವಿವಾದಗಳನ್ನೂ ಉಲ್ಲೇಖಿಸಿ ಸಾಧಾರ ಪೂರ್ವಕವಾಗಿ ಪಾರ್ತಿಸುಬ್ಬನು ಒಬ್ಬನೇ ಎಂದು ಸಿದ್ಧಪಡಿಸಬೇಕಾದುದು ಅವರ ಕರ್ತವ್ಯವಾಗಿತ್ತು. ಈ ಬಗೆಯ ಏಕ ಮುಖ ಪ್ರತಿಪಾದನೆ ಉಚಿತವಾಗಿಲ್ಲವೆಂದೇ ಹೇಳಬಹುದು.

ಯಕ್ಷಗಾನವೆಂದರೆ ಕೃಷ್ಣಭಟ್ಟರ ಅಭಿಪ್ರಾಯದಂತೆ ಒಂದು ಪ್ರಬಂಧ ವಿಶೇಷ. "ಸಂಗೀತ ಶಾಸ್ತ್ರಕರ್ತರೂ ಈ ಹೆಸರನ್ನು ಪ್ರಬಂಧ ವಿಶೇಷವೆಂಬ ಅರ್ಥದಲ್ಲಿ ಬಳಸಿದ್ದಾರೆ, ಹೊರತು ಈಗ ಕೆಲವರು ಭಾವಿಸಿರುವಂತೆ ಗಾನ ವಿಶೇಷವೆಂಬ ಅರ್ಥದಲ್ಲಿ ಅಲ್ಲ"—ಎಂದಿದ್ದಾರೆ. ಆದರೆ ಯಕ್ಷಗಾನವೆಂಬುದು ಅದರ ಹೆಸರೇ ಸೂಚಿಸುವಂತೆ ಒಂದು ಗಾನಶೈಲಿ ಎಂಬುದು ಸ್ಪಷ್ಟ ವಿಚಾರವೆಂದು ಡಾ. ಕಾರಂತರು ಅಭಿಪ್ರಾಯಿಸುತ್ತಾರೆ.

ಯಕ್ಷಗಾನ ಕೃತಿಗಳೇನೇ ಇರಲಿ ಈ ಸಂಕಲನದಲ್ಲಿರುವ 'ಸಭಾ ಲಕ್ಷಣ'ವಂತೂ ಪಾರ್ತಿಸುಬ್ಬನದೆಂಬುದರಲ್ಲಿ ಸಂದೇಹವಿಲ್ಲ. ಉಳಿದವು ಪಾರ್ತಿಸುಬ್ಬನವೇ ಇರಲಿ ಅಥವಾ ಅಜಪುರದ ಸುಬ್ಬನವೇ ಇರಲಿ ಹತ್ತು ಯಕ್ಷಗಾನ ಕೃತಿಗಳು ಒಂದು ಸಂಪುಟದಲ್ಲಿ ಹೊರ ಬಂದದ್ದು ಸಂತೋಷದ ಸಂಗತಿ.

'ಯಕ್ಷಗಾನ' ಐ.ಬಿ.ಎಚ್. ಪ್ರಕಾಶನದ 'ಕವಿ ಕಾವ್ಯ ಪರಂಪರೆ'ಯ ಎಂಟನೆಯ ಪುಸ್ತಕ. ಈ ಗ್ರಂಥದಲ್ಲಿ ಕನ್ನಡ ನಾಡಿನ ಹೆಮ್ಮೆಯ ಕಲೆಯಾದ ಯಕ್ಷಗಾನವನ್ನು ಮೂವರು ವಿದ್ವಾಂಸರಿಂದ ಪರಿಚಯ ಮಾಡಿಸಲಾಗಿದೆ.

'ಯಕ್ಷಗಾನದ ಕವಿಗಳು ಮತ್ತು ಕೃತಿಗಳು' ಎಂಬ ಲೇಖನವನ್ನು ಬರೆದಿರುವ ಶ್ರೀಮತಿ ನಿರ್ಮಲಾ ಇನಾಂದಾರ್ ಅಭ್ಯಾಸಪೂರ್ಣವಾದ ವಿವೇಚನೆಯನ್ನು ಒದಗಿಸಿದ್ದಾರೆ. ಯಕ್ಷಗಾನದಲ್ಲಿ ಕೃತಿಕಾರನ ಕೊಡುಗೆ ಏನು? ಕಾವ್ಯ ಮತ್ತು ನಾಟಕದ ಅಂಶಗಳು ಇಲ್ಲಿ ಹೇಗೆ ಮೇಳವಿಸುತ್ತವೆ? ಯಕ್ಷಗಾನದಲ್ಲಿ ಗಾನಕ್ಕಿರುವ ಮಹತ್ವವೇನು? ಯಕ್ಷಗಾನ ಪ್ರಸಂಗಗಳು ಎಷ್ಟರಮಟ್ಟಿಗೆ ಜಾನಪದೀಯವಾಗುತ್ತವೆ? ದೇಸಿ ಮಾರ್ಗಗಳಲ್ಲಿ ಯಕ್ಷಗಾನ ಕವಿಗಳು ಯಾವುದಕ್ಕೆ ಸೇರುತ್ತಾರೆ? ಕನ್ನಡ ಕಾವ್ಯಪರಂಪರೆಯಲ್ಲಿ ಇವರ ಸ್ಥಾನವೇನು? ಎಂಬ ವಿಚಾರಗಳನ್ನೂ, ಯಕ್ಷಗಾನದ ಛಂದಸ್ಸು, ರಚನೆಯ ಕ್ರಮ, ವರ್ಣನೆ, ನಾಟಕದ ನಿರ್ದೇಶನಗಳು, ಹಾಡಿನ ಸಾಹಿತ್ಯಗುಣ—ಇವೆಲ್ಲವನ್ನೂ ಸಕ್ರಮವಾಗಿ ನಿರ್ದುಷ್ಟವಾಗಿ ಚರ್ಚಿಸಿದ್ದಾರೆ. ಉತ್ತಮ ಸಂಶೋಧಕನಿಗಿರಬೇಕಾದ ಸಂಗ್ರಹಗುಣ, ಖಚಿತ ನಿಲುವು ಮತ್ತು ತಲಸ್ಪರ್ಶಿಯಾದ ಅರಿವು ನಿರ್ಮಲಾ ಇನಾಂದಾರ್‌ರವರ ಲೇಖನದಲ್ಲಿ ಎದ್ದು ಕಾಣುತ್ತವೆ. ಲೇಖನದ ಕೊನೆಯಲ್ಲಿ ಕೆಲವು ಕವಿಗಳು ಮತ್ತು ಕೃತಿಗಳನ್ನು ಚಾರಿತ್ರಿಕವಾಗಿ ವಿವೇಚನೆಗೆ ಗುರಿಪಡಿಸಲಾಗಿದೆ.

ಪಿ. ವಿ. ಹಾಸ್ಯಗಾರರ 'ಕಲೆ ಮತ್ತು ಪ್ರಯೋಗ'ವೆಂಬ ಲೇಖನದ ವ್ಯಾಪ್ತಿಯೂ ವಿಸ್ತಾರವಾಗಿಯೇ ಇದೆ. ಯಕ್ಷಗಾನ ಕಲೆಯ ಹೆಸರು, ಹುಟ್ಟು, ಪ್ರಾಚೀನತೆ, ಜಾನಪದೀಯಗುಣ, ಸಂಗೀತ, ಮಾರ್ಗ ಸಂಗೀತದೊಂದಿಗಿರುವ ವ್ಯತ್ಯಾಸ, ಸಾಹಿತ್ಯ, ತಾಳ–ಲಯ, ನೃತ್ಯ ಮತ್ತು ಶಾಸ್ತ್ರ, ತಾಳ ಮದ್ದಳೆ, ಸಂಪ್ರದಾಯ ಮತ್ತು ಸಮಯ ಸಂಕೇತಗಳು, ಪರಿಕರಗಳು, ಇಂದಿನ ಯಕ್ಷಗಾನ, ಸಪ್ತ ತಾಳಗಳು ಮತ್ತು ಪಟ್ಟದಿಗಳು, ತೆಂಕು ಬಡಗು, ಯಕ್ಷಗಾನದಭವಿಷ್ಯ—ಹೀಗೆ ಅವರು ವಿಷಯವನ್ನು ಸ್ಥೂಲವಾಗಿ ವಿಂಗಡಿಸಿಕೊಂಡು ವಿವರಿಸಿದ್ದಾರೆ. ಯಕ್ಷಗಾನ ಪರಂಪರೆಯನ್ನು ರಕ್ತದಲ್ಲಿಯೇ ರೂಢಿಸಿಕೊಂಡು ಬಂದಿರುವ ಹಾಸ್ಯಗಾರರು ಸ್ವತಹ ಯಕ್ಷಗಾನ ಕಲಾವಿದರೂ ಆಗಿದ್ದು ತಮ್ಮೆಲ್ಲ ಅನುಭವ ಅಧ್ಯಯನಗಳ ಫಲವನ್ನು ಇಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ.

'ಯಕ್ಷಗಾನ ನಾಟಕ ಮಾಧ್ಯಮ'ವೆಂಬ ಕೊನೆಯ ಲೇಖನವನ್ನು ಡಾ. ಶಿವರಾಮ ಕಾರಂತರು ಬರೆದಿದ್ದಾರೆ. ಭಾರತೀಯ ನಾಟಕ ಪರಂಪರೆಯ ಸ್ಥೂಲ ಪರಿಚಯದಿಂದ ಆರಂಭಿಸಿ ದೇಶೀಯ ನಾಟಕಗಳ ಪರಿಚಯಕ್ಕೆ ತೊಡಗುತ್ತಾರೆ. ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಯಕ್ಷಗಾನದ ವಿವಿಧ ರೂಪಗಳು, ನೆರೆಯ ಪ್ರಾಂತಗಳಾದ ಆಂಧ್ರ, ಕೇರಳ, ತಮಿಳು ನಾಡುಗಳ ದೇಸಿ ಕಲೆಗಳಿಗೂ ಯಕ್ಷಗಾನಕ್ಕೂ ಇರುವ ಸಂಬಂಧ, ಪ್ರಸಂಗ ಸಾಹಿತ್ಯ, ಯಕ್ಷಗಾನವು ಹೇಗೆ ಗಾನಶೈಲಿ? ಯಕ್ಷಗಾನ ಸಂಗೀತದ ರಾಗ, ತಾಳ, ವೈವಿಧ್ಯ, ಸಂಭಾಷಣೆಯ ವಚನಭಾಗ, ತಾಳಮದ್ದಲೆ, ನಾಟಕದಲ್ಲಿ ಬರುವ ವಿವಿಧ ಸಂಘರ್ಷಣೆ. ನೃತ್ಯ ಮಾಧ್ಯಮದ ಕಾರ್ಯ. ಅಂಗಭಂಗಿ–ಹೆಜ್ಜೆ ಗತ್ತು–ರಂಗಲೇಖ, ರಂಗಸ್ಥಳದ ಪದ್ಧತಿಗಳು, ವೇಷಭೂಷಣ ಮತ್ತು ಮುಖ ವರ್ಣಿಕೆಯಲ್ಲಿ ಕಂಡುಬರುವ ವಿಶಿಷ್ಟ ತೆರನ ಕಲ್ಪನಾ ವೈಖರಿ—ಮುಂತಾದವನ್ನು ಖಚಿತವಾಗಿ, ನಿರೂಪಿಸಿದ ಬಳಿಕ ಈ ಕಲೆಯ ಮಿತಿಯನ್ನೂ ಗುರುತಿಸಿ ಲೇಖನವನ್ನು ಸಮಾರೋಪಗೊಳಿಸಿದ್ದಾರೆ. ಡಾ. ಕಾರಂತರು ಯಕ್ಷಗಾನ ಕಲೆಗೆ ಬದುಕನ್ನೇ ಧಾರೆಯೆರೆದ ಮಹಾಸೃಜನಶೀಲ ವಿದ್ವಾಂಸರಾಗಿದ್ದು ಈ ಕ್ಷೇತ್ರದಲ್ಲಿ ಹಲವಾರು ಲೇಖನ ಗ್ರಂಥಗಳನ್ನು ರಚಿಸಿದ್ದಾರೆ. ಅದೆಲ್ಲದರ ಸಾರಸಂಗ್ರಹವೇ ಈ ಲೇಖನದಲ್ಲಿದೆ.

ಒಟ್ಟಾರೆ ಗ್ರಂಥವು ಕಲ್ಪನೆ ಮತ್ತು ಪರಿಣಾಮಗಳಲ್ಲಿ ಸಾರ್ಥಕವಾಗಿ ಹೊರ ಬಂದಿದೆಯಾದರೂ ಅಲ್ಲಲ್ಲಿ ಪುನರುಕ್ತಿಯಿದೆ. ಒಬ್ಬರಿಗಿಂತ ಹೆಚ್ಚಿನ ಲೇಖಕರಾದಾಗ ಇದು ಅನಿವಾರ್ಯವಾಗುತ್ತದೆ. ಗ್ರಂಥದ ಕೊನೆಯಲ್ಲಿ ಪಾರಿಭಾಷಿಕ ಶಬ್ದ ಸೂಚಿಯೊಂದಿರಬಹುದಿತ್ತು. ಇಂಥ ಚಿಕ್ಕಪುಟ್ಟ ಅರಕೆಗಳನ್ನು ಬಿಟ್ಟರೆ ಉತ್ತಮ ಗ್ರಂಥವೊಂದನ್ನು ಈ ಮಾಲೆಯಲ್ಲಿ ಸಂಪಾದಿಸಿಕೊಟ್ಟ ವಿ. ಸೀತಾರಾಮಯ್ಯನವರು ಅಭಿನಂದನಾರ್ಹರಾಗಿದ್ದಾರೆ.

'ಜನಪದ ಗೀತೆ', ಸಿ. ಪಿ. ಕೆ. ಯವರು ತಾವು ಮಾಡಿದ ಭಾಷಣವೊಂದನ್ನು ಆಧರಿಸಿ ಬರೆದ ಪುಟ್ಟ ಪುಸ್ತಕ. ಕೇವಲ ಮುವ್ವತ್ತು ಪುಟಗಳ ವ್ಯಾಪ್ತಿಯಲ್ಲಿ ಹಲವಾರು ಇಂಗ್ಲಿಷ್ ಮತ್ತು ಕನ್ನಡ ಜಾನಪದ ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹವಾಗಿ ವಿವೇಚಿಸಿದ್ದಾರೆ ; ಸ್ವಂತ ನಿಲುವುಗಳೂ ಇವೆ. ಸಮಗ್ರವಾದ ಸಮೀಕ್ಷೆಯೊಂದನ್ನು ಈ ಕೃತಿಯಲ್ಲಿ ಕಾಣಬಹುದಾದರೂ ಸಾಕಷ್ಟು ಕನ್ನಡ ಉದಾಹರಣೆಗಳಿಲ್ಲ. ಆಧುನಿಕ ಜಗತ್ತಿನಲ್ಲಿ ಜನಪದ ಗೀತೆಗಳು ಹುಟ್ಟುತ್ತವೆಯೆಂಬುದಕ್ಕೆ ಉದಾಹರಣೆಯಾಗಿ ಅಮೆರಿಕೆಯಲ್ಲಿ ರೈಲು, ಹಡಗುಗಳ ಅಪಘಾತಗಳಾದಾಗ ಹುಟ್ಟಿದ ಲಾವಣಿಗಳನ್ನು ಉಲ್ಲೇಖಿಸಿದ್ದಾರೆ. ನಮ್ಮಲ್ಲಿಯೂ ಕಡ್ಲೆಮಟ್ಟಿ ಸ್ಟೇಷನ್ನಿನ ಲಾವಣಿ, ತರೀಕೆರೆ ರೈಲು ಅಪಘಾತದ ಲಾವಣಿ, ಪಾಂಬನ್ ಸೇತುವೆ ದುರಂತವನ್ನು ಕುರಿತು ತಮಿಳು ಲಾವಣಿ ಮುಂತಾಗಿ ಹಲವು ಉದಾಹರಣೆಗಳಿವೆ. ಆದರೂ ನಮ್ಮ ಜಾನಪದ ವಿದ್ವಾಂಸರು ಸಿದ್ಧಾಂತ, ಉದಾಹರಣೆಗಳೆರಡಕ್ಕೂ ಅಮೆರಿಕೆಯ ಪುಸ್ತಕಗಳನ್ನೇ ಆಶ್ರಯಿಸುವುದು ಆಶ್ಚರ್ಯದ ಸಂಗತಿಯಾಗಿದೆ. ಜನಪದ ಗೀತೆಯನ್ನು ಅಥವಾ ಯಾವುದೇ ಜಾನಪದ ಸಾಮಗ್ರಿಯನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವುದೇ ಪ್ರಧಾನವಾಗಬೇಕು ಎಂಬ ವಾದವನ್ನೂ ಸಿ.ಪಿ.ಕೆ.ಯವರು ಪೂರ್ತಿಯಾಗಿ ಒಪ್ಪುತ್ತಿಲ್ಲ. ಆದರೆ ಬಹುಪಾಲು ಪಾಶ್ಚಾತ್ಯ ಮತ್ತು ಭಾರತೀಯ ಜಾನಪದ ವಿದ್ವಾಂಸರೆಲ್ಲ ಜಾನಪದವನ್ನು ಸಾಂಸ್ಕೃತಿಕ ಮಾನವ ಶಾಸ್ತ್ರದ ಅಧ್ಯಯನ ಕಕ್ಷೆಯಲ್ಲಿಯೇ ಗುರುತಿಸಿದ್ದಾರೆ. ಅದರ ಸಾಹಿತ್ತಿಕ ಮಹತ್ವಕ್ಕೆ ಇದರಿಂದ ಧಕ್ಕೆಯೇನೂ ಇಲ್ಲ. ಕಲಾತ್ಮಕತೆಯ ದೃಷ್ಟಿಯಿಂದ ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಸಮಾನವೆಂದು ಹೇಳುವ ಮಾತಂತೂ ಕೇವಲ ಅಭಿಮಾನದ ಸಂಗತಿಯಾಗುತ್ತದೆ. ಶ್ರೇಷ್ಠ ಸಾಹಿತ್ಯದ ಮಟ್ಟಕ್ಕೆ ಬರುವ ಜನಪದ ಗೀತೆಗಳಿವೆ ; ಆದರೆ ಅಂಥವುಗಳ ಸಂಖ್ಯೆ ತೀರಾ ಕಡಿಮೆ ಪ್ರಮಾಣದಲ್ಲಿದೆ. ಅಲ್ಲಲ್ಲಿ ಸಿ.ಪಿ.ಕೆ. ಯವರ ಭಾಷಾಶೈಲಿ ಅನಗತ್ಯವಾದ ಪ್ರೌಢಿಮೆಯಿಂದ ಕೂಡಿರುತ್ತದೆ. ಜನಪದ ಗೀತೆಯಂತಹ ಸರಳ ವಿಚಾರವನ್ನು ವಿವರಿಸುವುದಕ್ಕೆ ಸಂಸ್ಕೃತ ಭೂಯಿಷ್ಠ ಶೈಲಿಯೇಕೆ ? ಅರ್ಥವಾಗುವುದಿಲ್ಲ. ಇಷ್ಟಾದರೂ ಕೇವಲ ಸಂಗ್ರಹ ಸಂಪಾದನೆಗಳೇ ಹೆಚ್ಚಾಗಿ ಬರುತ್ತಿರುವಾಗ ಸಿದ್ಧಾಂತ ಮತ್ತು ಸಮೀಕ್ಷೆಗಳಿಗೇ ಮೀಸಲಾದ ಸಿ.ಪಿ.ಕೆ.ಯವರ ಕೃತಿಯನ್ನು ಸ್ವಾಗತಿಸಬೇಕು.

ಮಕ್ಕಳ ಸಾಹಿತ್ಯ

ಡಾ। ಎಸ್. ವಿದ್ಯಾಶಂಕರ

ಈ ವರ್ಷ ಬಂದ ಮಕ್ಕಳ ಸಾಹಿತ್ಯವನ್ನು ಅನುಕೂಲದ ದೃಷ್ಟಿಯಿಂದ ಕಿರುಗತೆ-ಕವಿತೆಗಳು : ಇತಿಹಾಸ ಪ್ರಸಿದ್ಧ ಅರಸರು–ಮಂತ್ರಿಗಳು – ಆಡಳಿತಗಾರರು–ಅರಸುಮನೆತನಗಳು ; ಧಾರ್ಮಿಕ ಮಹಾಪುರುಷರು ; ಕಲಾವಿದರು–ಕವಿಗಳು–ಸಾಹಿತಿಗಳು–ಸಂಶೋಧಕರು ; ಸಮಾಜ ಸೇವಕರು–ಸ್ವಾತಂತ್ರ್ಯ ಯೋಧರು ; ಕರ್ನಾಟಕದ ಕಲೆಗಳು, ಪ್ರೇಕ್ಷಣೀಯ ಸ್ಥಳಗಳು ; ಸಂಕೀರ್ಣ ವಿಷಯ ಗಳು ಹೀಗೆ ವಿಂಗಡಿಸಿಕೊಳ್ಳಲಾಗಿದೆ.

ಈ ವರ್ಷವೂ ಮಕ್ಕಳಿಗೆಂದೇ ಬರೆದ ಸಚಿತ್ರಮಯ ಕಿರುಗತೆ ಕವಿತೆಗಳ ಗಮನಾರ್ಹ ಕೊಡುಗೆ ಕಂಡುಬರಲಿಲ್ಲ. ಕನ್ನಡ ನಾಡಿನ ಹೆಸರಾಂತ–ಮಕ್ಕಳ ಸಾಹಿತ್ಯವನ್ನು ದೊಡ್ಡ ಪ್ರಮಾಣ ದಲ್ಲಿ ಹೊರತರುವಲ್ಲಿ–ಎರಡು ಸಂಸ್ಥೆಗಳು ಸ್ಪರ್ಧಾತ್ಮವಾಗಿ ಶ್ರಮಿಸುತ್ತಿವೆ. ಎರಡೂ ಸಂಸ್ಥೆಗಳು ಸಮಸಮನಾಗಿ ಸುಮಾರು ಅರವತ್ತು ಪುಸ್ತಕಗಳನ್ನು ಹೊರತಂದಿವೆ.

ಅ. ಕಿರುಗತೆ–ಕವಿತೆಗಳು :

'ಚಿನ್ನದ ತಟ್ಟೆ' ಮಕ್ಕಳಿಗೆಂದೇ ಬರೆದ ಐದು ಪುಟಾಣಿ ಹಾಗೂ ಮೂರು ಕಿರು ಪದ್ಯಗಳನ್ನು ಒಳಗೊಂಡ ಕೃತಿ. ಮೊದಲ ಕತೆಯಾದ 'ಚಿನ್ನದ ತಟ್ಟೆ' ಯು 'The Golden Plate' ಎಂಬ ಇಂಗ್ಲಿಷ್ ಕವನದ ಆಧಾರದ ಮೇಲೆ ರಚಿತವಾದ ನೀತಿಕತೆ. ನಾಲ್ಕನೆಯ ಕತೆ 'ಮೃಗ ರಾಜನ ಮದುವೆ'ಯೂ ನೀತಿಯ ನೆಲೆಗಟ್ಟಿನ ಮೇಲೆ ನಿಂತಿದೆ. 'ಮಂತ್ರದ ಗುಲಾಬಿ ಗಿಡ' 'ಮೂರು ಪ್ರಶ್ನೆಗಳು' ಹಾಗೂ 'ಮೂವರು ಗೆಳೆಯರು' ಮಕ್ಕಳ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ಹೇಳಿದ ಕತೆಗಳಾಗಿವೆ. ಇಲ್ಲಿನ ಕತೆಗಳ ಸರಳ ಭಾಷೆ ಹಾಗೂ ನಿರೂಪಣೆ ಮಕ್ಕಳಿಗೆ ಮುಟ್ಟುವಂತಿವೆ. ಕಥೆಗಳಲ್ಲಿನ ಕುತೂಹಲ ಕೆರಳಿಸುವ ವಸ್ತು ಮಕ್ಕಳಿಗೆ ಪ್ರಿಯವಾಗುತ್ತದೆ. ಮೂರು ಕಿರು ಪದ್ಯ ಗಳಲ್ಲಿ ಮೊದಲನೆಯದಾದ 'ಅವನಾರಮ್ಮ' ಚೆನ್ನಾಗಿದೆ. ಮಕ್ಕಳು ಮೆಲುಕು ಹಾಕಬಹುದು. ಉಳಿದೆರಡು ಪದ್ಯವೆಂಬ ಹೆಸರಿನ ಗದ್ಯದ ತುಣುಕುಗಳು. ಲೇಖಕ ಶ್ರೀ ಎಸ್. ಚನ್ನಪ್ಪನವರ ಪ್ರಯತ್ನ ಮೆಚ್ಚುವಂತಿದೆ.

ಆ. ಇತಿಹಾಸ ಪ್ರಸಿದ್ಧ ಅರಸರು–ಮಂತ್ರಿಗಳು–ಆಡಳಿತಗಾರರು–ಅರಸು ಮನೆತನಗಳು

ಕದಂಬ ಅರಸರಲ್ಲಿ ಪ್ರಖ್ಯಾತನಾದ ಕಾಕುಸ್ಥವರ್ಮನು ಇಪ್ಪತ್ತೈದು ವರ್ಷಗಳವರೆವಿಗೆ (ಕ್ರಿ. ಶ. ೪೩೫–೪೫೦) ಸತತವಾಗಿ ಆಳಿದ ಕರ್ನಾಟಕದ ಪ್ರಸಿದ್ಧ ದೊರೆ. 'ಕದಂಬ ಕುಲಾಭರಣ' ನೆಂದು ಪ್ರಖ್ಯಾತನಾದ ಈತನ ರಾಜ್ಯಭಾರದಲ್ಲಿ ಪ್ರಜೆಗಳು ಸುಖಿಗಳಾಗಿದ್ದರು. ಶ್ರೀ ಎಂ. ಆರ್. ಆನವಟ್ಟಿಯವರು ಕಾಕುಸ್ಥವರ್ಮನು ಮಾಡಿದ ಪ್ರಜಾಹಿತ ಕಾರ್ಯಗಳು, ರಾಜ್ಯಾಡಳಿತ ಕ್ರಮ, ಕಲೆ–ಸಾಹಿತ್ಯಗಳಿಗೆ ಕೊಟ್ಟ ಪ್ರೋತ್ಸಾಹಗಳನ್ನು ಪರಿಚಯಿಸಿರುವರು. ಕದಂಬರ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ತಾಳಗುಂದದ ಪ್ರಣವೇಶ್ವರ ದೇವಾಲಯದ ಎದುಗಿರುವ ಕವಿ ಕುಬ್ಜನು ಬರೆದು ಕಡೆದ ಶಾಸನದ ಪೂರ್ಣಪಾಠ ಹಾಗೂ ಕನ್ನಡ ಮೊತ್ತಮೊದಲನೆಯ ಶಾಸನವೆಂದು ಭಾವಿಸಲಾಗಿರುವ ಹಲ್ಮಿಡಿ ಶಾಸನದ ಪೂರ್ಣಪಾಠ ಕೊಟ್ಟಿರುವರು. ಮಕ್ಕಳಿಗಾಗಿ ಬರೆದ ಈ ಪುಸ್ತಕದಲ್ಲಿ ಅವುಗಳ ಸೇರ್ಪಡೆಯಾಗಬೇಕಾದ ಪ್ರಮೇಯವೇನಿತ್ತು ? ಈ ಶಾಸನಗಳನ್ನು ಹೆಸರಿಸಿ,

ಅವುಗಳಲ್ಲಿ ಬಂದಿರುವ ವಿಷಯಗಳನ್ನು ಹೇಳಿದ್ದರೆ ಸಾಲುತ್ತಿರಲಿಲ್ಲವೆ ? ಮಕ್ಕಳ ಮನಃಸ್ಥಿತಿಯನ್ನರಿತು ಪುಸ್ತಕ ರಚನೆಯಾದಂತಿಲ್ಲ.

ಗಂಗ ಅರಸುಮನೆತನದ ಉದಯ, ಕರ್ಣಾಟಕ ಪರಂಪರೆಗೆ ಗಂಗರಸರ ಕೊಡುಗೆ, ಕರ್ನಾಟಕವನ್ನಾಳಿದ ಗಂಗ ರಾಜರುಗಳು–ಹೀಗೆ ಇವೆಲ್ಲವನ್ನೂ ಪ್ರಾರಂಭದಲ್ಲಿ ಪರಿಚಯಿಸಿ, ಆ ವಂಶದ ಶಕಪುರುಷನಾದ 'ಶ್ರೀಪುರುಷ' ನ ವ್ಯಕ್ತಿತ್ವದ ಹಿರಿಮೆಯನ್ನು ಶ್ರೀ ಎಂ. ವಾಸುದೇವರಾವ್‌ರವರು ಪ್ರಸ್ತಾಪಿಸಿರುವರು. ಜೀವಿತದ ಬಹುಭಾಗ ಪಲ್ಲವರು ಹಾಗೂ ರಟ್ಟರ ಜೊತೆ ಹೋರಾಡಿ ಗಂಗ ಸಾಮ್ರಾಜ್ಯವನ್ನುಳಿಸಿದ ಶ್ರೀಪುರುಷನ ಸ್ಥೈರ್ಯ, ಕೆಚ್ಚು ಕಡುಗಲಿತನಗಳು ನಿಜಕ್ಕೂ ಉಲ್ಲೇಖನೀಯವಾಗಿವೆ. ಗಜಯುದ್ಧದಲ್ಲಿ ಪ್ರಚಂಡನಾದ ಇವನ ಸಾಹಸದ ವೈಖರಿಗಳು ಚೆನ್ನಾಗಿ ವಿವರಣೆಗೊಂಡಿವೆ. ಶ್ರೀಪುರುಷನ ಆಡಳಿತ ಕ್ರಮ, ದಾನಗುಣ, ವಿದ್ವತ್ತು–ಇತ್ಯಾದಿಗಳ ಪರಿಚಯ ಸಂಗ್ರಹರೂಪದಲ್ಲಿ ಬಂದಿವೆ. ಲೇಖಕರು ಮಕ್ಕಳಿಗೆ ತಿಳಿಯುವಂತೆ ಬರೆಯಬಹುದಿತ್ತು. ಶೈಲಿ ಸರಳವಾಗಿಲ್ಲವೆಂಬುದು ಒಂದು ದೊಡ್ಡ ಕೊರತೆ.

ಶ್ರೀ ಎಸ್. ಆರ್. ಕೃಷ್ಣಮೂರ್ತಿಯವರು ಮೈಸೂರು ಅರಸು ಮನೆತನದ ಅರಸರಲ್ಲಿ ಜನಪ್ರಿಯರಾದ 'ಶ್ರೀ ಜಯಚಾಮರಾಜ ಒಡೆಯರ್'ರವರ ಜೀವನ ಪರಿಚಯವನ್ನು ಮಕ್ಕಳಿಗಾಗಿ ಮಾಡಿಕೊಟ್ಟಿರುವರು. ಒಡೆಯರ್‌ರವರ ಪಾಂಡಿತ್ಯ, ಮೇಧಾವಿತನ, ಪ್ರಜಾಸೇವೆ, ಸಾಹಿತ್ಯ-ಸಂಗೀತಾಭಿಮಾನ, ಬದಲಾಗುತ್ತಿದ್ದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಮನೋಭಾವ, ಔದಾರ್ಯ ಇತ್ಯಾದಿ ವಿಷಯಗಳನ್ನು ಲೇಖಕರು ವಿವರಿಸಿರುವರು. ಮೈಸೂರು ಅರಸು ಮನೆತನದ ಬಗೆಗೆ, ಸಾಹಿತ್ಯ-ಸಂಗೀತಗಳನ್ನು ಕುರಿತ ಅವರ ವಿಶೇಷ ಆಸಕ್ತಿಯ ಬಗೆಗೆ, ಅವರ ಆಡಳಿತದ ಬಗೆಗೆ ಇನ್ನಷ್ಟು ಹೇಳಬಹುದಿತ್ತು. ಸಧ್ಯದ ಲೇಖಕರ ವಿವರಣೆಯಿಂದ ಒಡೆಯರ್ ರವರ ವ್ಯಕ್ತಿಚಿತ್ರ ಕಣ್ಮುಂದೆ ನಿಲ್ಲದು.

ಕನ್ನಡ ಸಾಹಿತ್ಯ ಹಾಗೂ ಕರ್ನಾಟಕ ಇತಿಹಾಸದಲ್ಲಿ ಪ್ರಸಿದ್ಧವಿರುವ 'ಚಾವುಂಡರಾಯ'ನನ್ನು ಕುರಿತ ಪರಿಚಯಾತ್ಮಕ ಕೃತಿಯನ್ನು ಪ್ರೊ. ಜಿ. ವೆಂಕಟಸುಬ್ಬಯ್ಯನವರು ಬರೆದಿರುವರು. ಚಾವುಂಡರಾಯನು ಕನ್ನಡ ಕವಿಗಳಿಗಿತ್ತ ಪ್ರೋತ್ಸಾಹ, ಅವನು ಮಾಡಿದ ಧಾರ್ಮಿಕ ಹಾಗೂ ಸಾಹಿತ್ಯಿಕ ಸೇವೆ, ಕರ್ನಾಟಕ ಶಿಲ್ಪಕಲೆಗೆ ಅವನಿತ್ತ ಕೊಡುಗೆ–ಇವೇ ಮೊದಲಾದ ವಿಷಯಗಳನ್ನು ಲೇಖಕರು ವಿವರಿಸಿರುವರು. ಗಂಗರಸರ ಸೇನಾನಾಯಕನಾಗಿ ಹಲವಾರು ಯುದ್ಧಗಳಲ್ಲಿ ಭಾಗವಹಿಸಿ ತೋರಿದ ಪರಾಕ್ರಮ, ಪಡೆದ ವಿಕ್ರಮಗಳನ್ನು ಲೇಖಕರು ಪ್ರಾರಂಭದಲ್ಲಿ ಕೊಟ್ಟಿರುವರು. ಸರಳ ನಿರೂಪಣೆ ಮಕ್ಕಳಿಗೆ ಹಿಡಿಸುವಂತಿದೆ.

ಬಹಮನಿ ರಾಜ್ಯದ ಶಕ್ತ ಪ್ರಧಾನಿಯೂ, ಒಳ್ಳೆಯ ಆಡಳಿತಗಾರನೂ, ಅತುಳ ಪರಾಕ್ರಮಿಯೂ, ಕರುಣಿಯೂ ಆದ ಬಹಮನಿ ಸುಲ್ತಾನರ ಮಂತ್ರಿ 'ಮಹಮೂದ ಗವಾನ'ನ ಬಗೆಗೆ ಶ್ರೀ ಎಲ್. ಆರ್. ಕುಲಕರ್ಣಿಯವರು ಪರಿಚಯ ನೀಡಿರುವರು. ಹಾಸುಹೊಕ್ಕಾಗಿದೆ, ಕೈವಾರಿ ಇತ್ಯಾದಿ ಕ್ಲಿಷ್ಟ ಪದಗಳ ಬಳಕೆಯನ್ನು ಲೇಖಕರು ಪ್ರಾರಂಭದಲ್ಲಿಯೇ ಮಾಡಿರುವುದನ್ನು ಗಮನಿಸಿದಾಗ ಅವರು ಮಕ್ಕಳಿಗಾಗಿ ಕೃತಿರಚನೆ ಮಾಡುತ್ತಿರುವುದು ಮರೆತಂತೆ ಕಾಣುತ್ತದೆ.

ಶ್ರೀ ಆರ್. ಎಸ್. ರಾಮರಾಯರ 'ಕಲ್ಯಾಣದ ಚಾಲುಕ್ಯರು' ಕರ್ನಾಟಕವನ್ನಾಳಿದ ಸುಪ್ರಸಿದ್ಧ ಅರಸು ಮನೆತನವೊಂದರ ಪರಿಚಯ ಮಾಡಿಕೊಡುವ ಪ್ರಯತ್ನ. ಲೇಖಕರು ಆ ವಂಶದಲ್ಲಿ ಬಂದ ದೊಡ್ಡ ಪುಟ್ಟ ಅರಸರುಗಳ ಬಗೆಗೆ ವಿವರಗಳನ್ನೂ ಕೊಡುವುದರ ಜೊತೆಗೆ ಈ ಮನೆತನದವರ ಧಾರ್ಮಿಕ-ಆರ್ಥಿಕ–ಸಾಂಸ್ಕೃತಿಕ-ಸಾಹಿತ್ಯಿಕ ಕೊಡುಗೆಗಳನ್ನೂ ಪ್ರಸ್ತಾಪಿಸಿರುವರು. ಕರ್ನಾಟಕದ ಇತಿಹಾಸದಲ್ಲಿ ಕಲ್ಯಾಣಿ ಚಾಲುಕ್ಯರ ಸ್ಥಾನ–ಮಾನಗಳನ್ನು ಪಕ್ಷಿನೋಟವೊಂದರ ಮೂಲಕ ಲೇಖಕರು ಕೊಡಲು ಪ್ರಯತ್ನಿಸಿರುವರು. ಈ ಪ್ರಯತ್ನ ಮೆಚ್ಚುವಂತಿದೆ. ಮುಖಪುಟದ ಚಿತ್ರ ಹಾಗೂ

ಚಾಲುಕ್ಯರ ಕಲೆಯ ಬಗೆಗೆ ಹೆಚ್ಚಿನ ತಿಳುವಳಿಕೆ ಕೊಡುವ ಒಳಗಿನ ಚಿತ್ರಗಳು ಚೆನ್ನಾಗಿವೆ ಲೇಖಕರ ಶೈಲಿ ಇನ್ನಷ್ಟು ಸರಳವಾಗಿದ್ದರೆ ಹೆಚ್ಚು ಪ್ರಭಾವ ಬೀರುತ್ತಿತ್ತು.

೯. ಧಾರ್ಮಿಕ ಮಹಾಪುರುಷರು :

ಜೈನಧರ್ಮದ ಮೊದಲ ತೀರ್ಥಂಕರನಾದ 'ಆದಿನಾಥ'ನ ಬದುಕು ಬೋಧೆಗಳನ್ನು ಶ್ರೀ ಎಸ್. ಬಿ. ಪಾಟೀಲ್‌ರವರು ವಿವರಿಸಿರುವರು. ಮೊದಲಿಗೆ ಆದಿನಾಥನಿಗೆ ಹಿಂದಿದ್ದ ೧೪ ಮಂದಿ ಮನುಗಳು ಹಾಗೂ ಅವರ ಬಗೆಗಿನ ಸಂಕ್ಷಿಪ್ತ ವಿವರಗಳು ; ಆದಿನಾಥನು ತೀರ್ಥಂಕರನಾಗುವ ಮುನ್ನ ಎತ್ತಿದ ಒಂಭತ್ತು ಭವಗಳ ಕಥೆಗಳು – ಇವನ್ನು ಲೇಖಕರು ತಿಳಿಸಿರುವರು. ಆದಿನಾಥನ ಬಾಲ್ಯ, ಯೌವನ, ವಿವಾಹ, ಸಂಸಾರಿಕ ಜೀವನ, ಕೂಡಿ ಬಂದ ವೈರಾಗ್ಯ, ನಡೆಸಿದ ತಪಸ್ಸು, ಪಡೆದ ಕೇವಲಜ್ಞಾನ, ಮಾಡಿದ ಧರ್ಮಬೋಧೆ ಲೋಕ ಕಲ್ಯಾಣ – ಇವೆಲ್ಲವನ್ನೂ ಮಕ್ಕಳ ಗ್ರಹಿಕೆಗೆ ಸಿಲುಕುವಂತೆ ಹೇಳಲು ಪ್ರಯತ್ನಿಸಿರುವರು. ಪು. ೨೭ ರಲ್ಲಿ ಅಚಾರ್ಯ ಎಂದಿರಬೇಕಾದ ಕಡೆ ಆಚಾರ್ಯ ಎಂದು ತಪ್ಪು ಬಿದ್ದಿದೆ. ಅಪರಿಗ್ರಹ, ಕೇವಲ ಜ್ಞಾನ ಕಲ್ಯಾಣ ಇಂತಹ ಪಾರಿಭಾಷಿಕ ಪದಗಳಿಗೆ ವಿವರಣೆ ನೀಡಬೇಕಿತ್ತು. ಮಕ್ಕಳಿಗೆಂದು ಬರೆದ ಪುಸ್ತಕ ಆದಷ್ಟೂ ಸರಳ ವಿರಬೇಕು. ಪು. ೨೫ ರಲ್ಲಿ ಬರುವ ಪಂಪನ ಆದಿಪುರಾಣದ ಪದ್ಯ ಮಕ್ಕಳಿಗೆ ತಿಳಿಯುವುದಾದರೂ ಹೇಗೆ? ಭಾವಾನುವಾದ ಕೊಟ್ಟಿದ್ದರೆ ಉಪಯೋಗವಾಗುತ್ತಿತ್ತಲ್ಲವೇ ?

ಅಥಣಿಯ ಗಚ್ಚಿನ ಮಠದ ಪುಣ್ಯಪುರುಷ 'ಶ್ರೀ ಮುರುಘೇಂದ್ರ ಮಹಾಶಿವಯೋಗಿ'ಗಳ ಪ್ರಭಾವೀ ಬದುಕಿನ ಕಥನವನ್ನು ಶ್ರೀ ದು. ನಿಂ. ಬೆಳಗಲಿಯವರು ಪರಿಚಯಿಸಿರುವರು. ಶಿವ ಯೋಗಿಗಳ ದಯಾಪರವಾದ ಬದುಕು, ತ್ರಿಕಾಲಜ್ಞಾನ ಶಕ್ತಿ, ಹೊನ್ನು-ಹೊಗಳಿಕೆಗಳ ಬಗೆಗಿನ ನಿರಾಸಕ್ತಿ, ದಾಸೋಹದಲ್ಲಿನ ನಿಶ್ಚಿಂತ ಮನೋಭಾವ, ಭಕ್ತರಿಂದ ಬಂದದ್ದನ್ನು ಭಕ್ತರಿಗೇ ಒಪ್ಪಿಸುವ ದಾನಗುಣ, ಸಾಮಾಜಿಕ ಸೇವೆ, ಅಮಾನುಷ ಲೀಲೆಗಳು ಲೇಖಕರಿಂದ ತಿಳಿಯುವಂತೆ ಹೇಳಲಾಗಿದೆ. ಹಂತಹಂತವಾಗಿ ವ್ಯಕ್ತಿತ್ವದ ಮಹತಿಯನ್ನು ಲೇಖಕರು ಮನಮುಟ್ಟುವಂತೆ ತಿಳಿಸುತ್ತಾ ಹೋಗಿರು ವುದು ಮೆಚ್ಚಬಹುದಾದ ಅಂಶವಾಗಿದೆ. ಪವಾಡಗಳಿಂದ ಆದಷ್ಟು ವ್ಯಕ್ತಿತ್ವವನ್ನು ಮುಕ್ತಗೊಳಿ ಸಿರುವುದು ಗಮನೀಯ ವಿಷಯವಾಗಿದೆ.

'ಚಿತ್ತರಗಿ ಇಲಕಲ್ಲ ಶ್ರೀ ವಿಜಯಮಹಾಂತ ಶಿವಯೋಗಿ'ಗಳ ಜೀವನ ಚರಿತ್ರೆಯನ್ನು ಶ್ರೀ ಪಂಚಾಕ್ಷರಿ ಹಿರೇಮಠರು ಬರೆದಿರುವರು. ಶಿವಯೋಗಿಗಳ ಜನನ, ಬಾಲ್ಯ, ವಿದ್ಯಾಭ್ಯಾಸ, ಸಾಧನೆ-ಸಿದ್ಧಿ, ಸಾಮಾಜಿಕ ಸೇವೆ, ಪ್ರಭಾವೀ ವ್ಯಕ್ತಿತ್ವ – ಇವುಗಳ ಪರಿಚಯವನ್ನು ಲೇಖಕರು ಸುಂದರವಾಗಿ ಕೊಟ್ಟಿರುವರು. ಚಿತ್ತರಗಿ ಸಂಸ್ಥಾನ ಮಠವು ಅರವತ್ತಕ್ಕೂ ಹೆಚ್ಚಿನ ಶಾಖಾ ಮಠ ಗಳನ್ನು ಹೊಂದಿರುವ ಉತ್ತರ ಕರ್ನಾಟಕದಲ್ಲಿನ ದೊಡ್ಡ ಪೀಠ. ಈ ಪೀಠಕ್ಕೆ ದೊಡ್ಡ ಪರಂಪರೆ ಯಿದ್ದು ಶ್ರೀ ವಿಜಯಮಹಂತೇಶರಿಂದಾಗಿ ಇದು ಹೆಚ್ಚಿನ ಪ್ರಸಿದ್ಧಿಗೆ ಬಂದಿತು. ಇವರ ನಂತರ ಪೀಠವನ್ನೇರಿದ ಮಹಾಸ್ವಾಮಿಗಳ ಬಗೆಗೂ ಲೇಖಕರು ಪ್ರಸ್ತಾಪ ಮಾಡಿರುವರು. ಪವಾಡಗಳನ್ನು ಪ್ರಧಾನವಾಗಿ ಹೇಳದೆ ಹಿರಿಯತನವನ್ನು ತನ್ನ ನಡೆ-ನುಡಿ-ಆಚರಣೆಗಳಿಂದ ಪಡೆದ, ಜನಾನುರಾಗಿ ಗಳಾಗಿದ್ದ ಶಿವಯೋಗಿಗಳ ಮಹಾನ್ ವ್ಯಕ್ತಿತ್ವವನ್ನು ಭಾವಪೂರ್ಣರಾಗಿ ಲೇಖಕರು ಪರಿಚಯಿ ಸಿರುವರು. ಇದು ಮೆಚ್ಚಬಹುದಾದ ವಿಷಯ. ಮಕ್ಕಳಿಗೆ ಅರ್ಥವಾಗುವ ಭಾಷಾ ಶೈಲಿಯಲ್ಲಿ ಲೇಖಕರು ಹೇಳಬಹುದಿತ್ತು. ಪುಸ್ತಕದಲ್ಲಿ ಇದೊಂದು ದೊಡ್ಡ ಕೊರತೆ. ಲಿಂಗಾನುಸ್ಥಾನ (ಪು. ೪) ಲಿಂಗಸಾರಾಯ (ಪು. ೫), ಶಿವಬೆಳಗ (ಪು. ೭), ಅಯ್ಯಾಚಾರ (ಪು. ೯), ವಿಶ್ವಕುಟುಂಬಿ (ಪು. ೧೦) 'ಸಹಸ್ರದಳ ಕಮಲದಲ್ಲಿಪ್ಪ ಶಿವಲಿಂಗಕ್ಕೆ ನೇತ್ರಗಳ ಮುಖ ಮಾಡಿ ರೂಪಿನ ನೈವೇದ್ಯವ ಅರ್ಪಿಸುವ...' (ಪು. ೧೫) ಇತ್ಯಾದಿ ಕ್ಲಿಷ್ಟ ಪದ-ಪದಪುಂಜಗಳು-ವಾಕ್ಯಗಳು ಮಕ್ಕಳಿಗೆ ಎಷ್ಟರ ಮಟ್ಟಿಗೆ ಅರ್ಥವಾಗಬಲ್ಲವು ?

ಶ್ರೀ ಗಿರಿರಾಜ ಹೊಸಮನಿ ಕಂಬಳಿಹಾಳರವರು 'ನೀರಲಕೇರಿ ಶ್ರೀ ಬಸವಲಿಂಗ ಶಿವಯೋಗಿಗಳು' ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ನೀರಲಕೇರಿ ಗ್ರಾಮದಲ್ಲಿ ಹುಟ್ಟಿ, ವಿರಕ್ತರಾಗಿ, ಸುಪ್ರಸಿದ್ಧ ಅನುಭಾವಿಗಳಾಗಿ, ಸಾವಿರಾರು ಅನುಭವ ಪದಗಳ ಕರ್ತೃಗಳಾಗಿ ಮೆರೆದ ಶಿವಶರಣರ ಜೀವನ-ಸಿದ್ಧಿ-ಸಾಧನೆಗಳ ವಿವರ ಕೊಟ್ಟಿರುವರು. ಶಿವಯೋಗಿಗಳ ಪ್ರಭಾವಪೂರ್ಣ ವಿರಕ್ತ ಜೀವನದ ಜೊತೆಗೆ ಸಾಹಿತ್ಯಿಕ ಸೇವೆಯನ್ನೂ ಅದರ ಮಹತ್ವವನ್ನೂ ಲೇಖಕರು ನಿರೂಪಿಸಲು ಯತ್ನಿಸಿರುವರು. "ಲಿಂಗವೆಂದರೆ ನಮ್ಮ ಚಿತ್ಕಳೆಯನ್ನೇ ಗುರು ಕರುಣಿಸಿ ನಮ್ಮ ಅಂಗೈಯಲ್ಲಿಟ್ಟಿರುವುದು. ಗುರುವೇ ಸಮಸ್ತಕ್ಕೂ ಮೂಲ ಕಾರಣನು. ಇಷ್ಟಲಿಂಗ ಪೂಜೆ ಎಂದರೆ, ನಮ್ಮ ಆತ್ಮನ ಪೂಜೆ. ನಮ್ಮಲ್ಲೇ ನಾವು ಆ ಪರಬ್ರಹ್ಮ ಸ್ವರೂಪವನ್ನು ಕಂಡುಕೊಳ್ಳುವುದು. ಇದನ್ನೇ ನಮ್ಮವರು ಸಾಕ್ಷಾತ್ಕಾರವೆನ್ನುತ್ತಾರೆ. ಅಂಥ ಸಾಕ್ಷಾತ್ಕಾರವನ್ನು ಪಡೆಯಲು ಇಷ್ಟಲಿಂಗ ಬೇಕು, ಇಷ್ಟಲಿಂಗ ಪೂಜೆ ಬೇಕು. ನೆಟ್ಟ ನೋಟದಿಂದ ಅಂಗೈಯಲ್ಲಿನ ಲಿಂಗವನ್ನು ನಿಬ್ಬೆರಗಾಗಿ ನೋಡುತ್ತ ಕುಳಿತುಕೊಳ್ಳುವುದು, ಅದರ ಆನಂದದಲ್ಲಿಯೇ ಬಾಹ್ಯಪ್ರಜ್ಞೆಯನ್ನು ಮರೆಯುವುದೇ ಲಿಂಗಾಂಗ ಸಾಮರಸ್ಯ. ಅಂಥ ಲಿಂಗಾಂಗ ಸಾಮರಸ್ಯವೇ ನಮ್ಮ ಇಷ್ಟಲಿಂಗ ಪೂಜೆಯಲ್ಲಿಯ ಪವಿತ್ರ ಸ್ಥಿತಿ, ಪವಿತ್ರ ಘಟ್ಟ. ನಾನೇ ಅದು, ಅದುವೇ ನಾನು ಆದಮೇಲೆ ಮತ್ತೇತರ ಚಿಂತೆ? ಮತ್ತೇತರ ಭಯ ? ಅದುವೆ ನಿರಂಜನ ಸ್ಥಿತಿ, ಅದುವೇ ನಿರ್ಲಿಪ್ತ ಸ್ಥಿತಿ, ಅದುವೆ ನಿರ್ವಿಕಾರ ಸ್ಥಿತಿ, ಅದುವೇ ನಿರ್ಗುಣ ಸ್ಥಿತಿ..." (ಪು. ೮, ೯). ಈ ರೀತಿಯ ತಾತ್ವಿಕವಾದ ಸಂಗತಿಗಳ ನಿರೂಪಣೆ ಮಕ್ಕಳ ಮುಗ್ಧ ಮನಸ್ಸಿಗೆ ತಿಳಿಯುವುದಾದರೂ ಹೇಗೆ? ಲೇಖಕರು ಮಕ್ಕಳ ಮಾನಸಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬರೆಯುವ ಪ್ರಯತ್ನ ಮಾಡಿಲ್ಲ. ವಯಸ್ಕರಿಗೆ ಅದರಲ್ಲೂ ವೀರಶೈವ ಧರ್ಮದ ತಾತ್ವಿಕ ಹಿನ್ನೆಲೆ ಬಲ್ಲವರಿಗೆ ಮಾತ್ರ ನಿಲುಕುವಂತಹದು – ಈ ಬಗೆಯ ಬರವಣಿಗೆ.

ಶ್ರೀ ವ್ಹಿ. ಡಿ. ಯಜಮಾನರವರ 'ಶ್ರೀ ಸದ್ಗುರು ಭಾವೂ ಸಾಹೇಬ ಮಹಾರಾಜರು' ಕನ್ನಡ ನಾಡಿನ ಉಮದಿಯ ಸತ್ಪುರುಷರೂ, ನಾಥ ಪಂಥದ ಪರಂಪರೆಯವರೂ, ನಿಂಬರಗಿಯ ಶ್ರೀ ಗುರುಲಿಂಗಜಂಗಮ ಮಹಾರಾಜರ ಶಿಷ್ಯರೂ ಆದ ಶ್ರೀ ಭಾವೂಸಾಹೇಬರ ಜೀವನವನ್ನು ಪರಿಚಯಿಸುವ ಕೃತಿ. ಸದ್ಗುರು ಭಾವೂ ಸಾಹೇಬರು ಭಗವಂತನ ಸಾಕ್ಷಾತ್ಕಾರಕ್ಕೆ ಸಾಧನಗಳಾದ ಧ್ಯಾನ-ಜ್ಞಾನ-ಭಕ್ತಿಗಳ ಬಗೆಗೆ ಜನ ಸಾಮಾನ್ಯರಿಗೆ ತಿಳಿಯುವಂತೆ ಹೇಳಿ ಜನಮನ ಶುದ್ಧೀಕರಣಕ್ಕೆ ಕಾರಣರಾಗಿರುವರು. ಇವರ ಬೋಧೆ ಹಾಗೂ ಪವಾಡಗಳನ್ನು ಸಂಕ್ಷಿಪ್ತವಾಗಿ ಈ ಕೃತಿಯಲ್ಲಿ ಹೇಳಲಾಗಿದೆ. ಇವರ ಗುರುಪರಂಪರೆ ಹೇಳುವಾಗ ಲೇಖಕರು ಅನಿವಾರ್ಯವೆಂಬಂತೆ ಹೆಚ್ಚು ವಿವರಣೆ ನೀಡಿರುವರು. ಇವರು ಮಾಡಿದ ಪವಾಡಗಳಲ್ಲಿ ನಂಬಲರ್ಹವಾದವುಗಳನ್ನು ಲೇಖಕರು ಹೇಳಬಹುದಿತ್ತು. ಅವುಗಳ ಹೊರತಾಗಿ ವ್ಯಕ್ತಿ ಚಿತ್ರಣ ಮಾಡಿದ್ದರೆ ಪುಸ್ತಕ ಪರಿಣಾಮ ಬೀರುತ್ತಿತ್ತು.

ಶ್ರೀ ಎಲ್. ಆರ್. ಕುಲಕರ್ಣಿಯವರ 'ಬಕ್ಕಪ್ರಭು' ಬೀದರ್ ಜಿಲ್ಲೆಯಲ್ಲಿ ಬಾಳಿ ಬೆಳಗಿದ ಶಿವಯೋಗಿವರ್ಯರ ಜೀವನ ಚಿತ್ರ. ಬಕ್ಕಪ್ರಭುಗಳ ವೈರಾಗ್ಯಮಯವಾದ ಜೀವನ, ಅಪೂರ್ವ ಯೋಗಶಕ್ತಿ, ಪರೋಪಕಾರೀ ಗುಣ, ಮಾನವೀಯತೆ – ಇವುಗಳ ಪರಿಚಯ ಪ್ರಧಾನವಾಗಿ ಈ ಕೃತಿಯಲ್ಲಿ ಬಂದಿದೆ. ಬಕ್ಕಪ್ರಭುಗಳು ತೋರಿದ ಪವಾಡಗಳ ಹಿನ್ನೆಲೆಯಲ್ಲಿ ಅವರ ಅಮಾನುಷ ವ್ಯಕ್ತಿತ್ವವನ್ನು ಪರಿಚಯಿಸುವ ಪ್ರಯತ್ನಮಾಡಿರುವರು. ಪವಾಡಗಳು ಆದಷ್ಟು ಕಡಿಮೆಯಾಗಿ, ಶಿವಯೋಗಿಗಳ ಬಹುಮುಖ ವ್ಯಕ್ತಿತ್ವದ ಚಿತ್ರ ಕೃತಿಯಲ್ಲಿ ಬಂದಿದ್ದರೆ ಕೃತಿ ಇನ್ನಷ್ಟು ಪ್ರಯೋಜನಕಾರಿಯಾಗುತ್ತಿತ್ತು.

ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೋಕಿನ ಸಣ್ಣ ಹಳ್ಳಿಯಾದ ಲಚ್ಯಾಣದ ಮಹಾಮಹಿಮರಾದ 'ಸಿದ್ಧಲಿಂಗ ಮಹಾರಾಜ'ರನ್ನು ಕುರಿತು ಶ್ರೀ ಈಶ್ವರಚಂದ್ರ ಚಿಂತಾಮಣಿಯವರು ಜೀವನ ಪರಿಚಯ ಮಾಡಿಕೊಟ್ಟಿರುವರು. ಸಿದ್ಧಲಿಂಗರು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಈ ಮೂರೂ ರಾಜ್ಯಗಳಲ್ಲಿ ಶಿಷ್ಯವೃಂದವನ್ನು ಹೊಂದಿರುವರು. ಬಂಥನಾಳ ಮಠದ ಶಂಕರಲಿಂಗರ

ಶಿಷ್ಯರಾಗಿ ಅಧ್ಯಾತ್ಮದ ಒಳಹೊರಗನ್ನು ಅರಿತು ಸಾಧನೆಯಿಂದ ಸಿದ್ಧರಾಗಿ ತಮ್ಮ ಪವಾಡಗಳಿಂದ ಪ್ರಸಿದ್ಧರಾದ ಶ್ರೀ ಸಿದ್ಧಲಿಂಗರ ಪ್ರಭಾವಪೂರ್ಣವಾದ ವ್ಯಕ್ತಿಚಿತ್ರ ಆಕರ್ಷಕವಾಗಿದೆ.

'ಶ್ರೀ ವಿಜಯದಾಸರು' ದಾಸಪರಂಪರೆಯಲ್ಲಿ ಪುರಂದರದಾಸರ ನಂತರ ಕಂಡುಬರುವ ಪ್ರಮುಖರು. ಪುರಂದರದಾಸರಂತೆಯೇ ಇವರೂ ತಮ್ಮ ಪದಗಳ ಮೂಲಕ ಸಾಮಾಜಿಕ ದೋಷ ಗಳನ್ನು ತಿದ್ದಹೊರಟರು. ದೇಶ ಸುತ್ತಿ ಲೋಕಾನುಭವ ಸಂಪತ್ತಿ ಗಳಿಸಿ ತಮ್ಮ ಅನುಭವ-ಅನಿಸಿಕೆಗಳನ್ನು ಹಾಡುಗಳ ಮೂಲಕ ವ್ಯಕ್ತಿಪಡಿಸಿರುವ ಇವರು ಪುರಂದರದಾಸರಂತೆ ಹೆಚ್ಚಿನ ಕೃತಿ ರಚಿಸಿರುವರು. ಪುರಂದರದಾಸರ ಮಗ ಮಧ್ವಪತಿಯೇ ವಿಜಯದಾಸರಾಗಿ ಜನ್ಮವೆತ್ತಿ ಎಪ್ಪತ್ತೈದು ಸಾವಿರ ಪದಗಳನ್ನು ಬರೆದರೆಂಬ ಕಥೆಯಿದೆ. ಈಗ ವಿಜಯದಾಸರ ಎಲ್ಲ ಕೃತಿಗಳು ಲಭ್ಯವಿಲ್ಲ. ಸು. ೧೦೦ ಉಗಾಭೋಗಗಳು ಲಭ್ಯವಿವೆ. ಶ್ರೀ ಕೃಷ್ಣ ಕೊಲ್ಹಾರ ಕುಲಕರ್ಣಿಯವರು ವಿಜಯ ದಾಸರ ಬಾಲ್ಯಜೀವನ, ವೈರಾಗ್ಯ, ಉಪದೇಶಗಳನ್ನು ವಿಶದವಾಗಿ ನಿರೂಪಿಸಿರುವರು. "ಪುರಂದರ ದಾಸರಿಗಿಂತ ಬಿಗಿಯಾದ ಪದಬಂಧವೆಂದು ವಿಜಯದಾಸರ ಕೃತಿಗಳು ಕರೆಸಿಕೊಳ್ಳುತ್ತವೆ. ಅವರ ರಚನೆ ಶಾಸ್ತ್ರಗರ್ಭಿತವಾಗಿದೆ...." (ಪು. ೪೪) ಎಂಬ ಲೇಖಕರ ಅಭಿಪ್ರಾಯ ಮೆಚ್ಚುಗೆಯ ಭಾವ ದಿಂದ ಮೂಡಿದ್ದಿರಬಹುದು.

'ವೇದಾಂತ ದೇಶಿಕರು' ಬಹುಮುಖವಾದ ಪ್ರತಿಭೆಯುಳ್ಳ ಪಂಡಿತರು. 'ತಾರ್ಕಿಕ ಸಿಂಹ' ರೆಂದು ಪ್ರಸಿದ್ಧರಿರುವ ಇವರು ರಾಮಾನುಜರು ಉಪದೇಶಿಸಿದ ಧರ್ಮವನ್ನು ಪ್ರತಿಪಾದಿಸಿ ಪ್ರಚಾರ ಮಾಡಿದರು. 'ವೇದಾಂತಾಚಾರ್ಯ'. 'ನಿಗಮಾಂತ ಮಹಾ ದೇಶಿಕ' ಎಂದೆಲ್ಲಾ ಕೀರ್ತಿತರಾಗಿರುವ ಇವರ ವಿದ್ವತ್ತು ಅಸಾಮಾನ್ಯವಾದುದು. ತಮಿಳು-ಸಂಸ್ಕೃತ-ಪ್ರಾಕೃತ ಭಾಷೆ ಗಳಲ್ಲಿ ನೂರಕ್ಕೂ ಹೆಚ್ಚು ಕೃತಿ ರಚನೆ ಮಾಡಿರುವ ಇವರು ಕಂಚಿ, ಶ್ರೀರಂಗಂಗಳಲ್ಲಿ ಸೇವೆ ಸಲ್ಲಿಸಿ ತಮ್ಮ ಕೊನೆಯ ದಿನಗಳನ್ನು ಸತ್ಯಮಂಗಲದಲ್ಲಿ ಕಳೆದರು. ದೇಶಿಕರು ಉದ್ದಕ್ಕೂ ದುಷ್ಟರೊಂದಿಗೆ ಹೆಣಗಾಡಿ ಬಡತನದ ಜೀವನ ನಡೆಸಿದರು. ಮಹಿಮಾಶಾಲಿಗಳಾಗಿದ್ದ ಇವರ ಜೀವನ ವೃತ್ತಾಂತ ವನ್ನು ಡಾ॥ ಅನಂತರಂಗಾಚಾರ್‌ರವರು ಒದಗಿಸಿಕೊಟ್ಟಿದ್ದು, ವ್ಯಕ್ತಿತ್ವದ ಮಹತಿಯನ್ನು ಚೆನ್ನಾಗಿ ಪರಿಚಯಿಸಿರುವರು.

ಈ. ಕಲಾವಿದರು-ಕವಿಗಳು-ಸಾಹಿತಿಗಳು-ಸಂಶೋಧಕರು

'ನಾಟ್ಯಯೋಗಿ ಬಳ್ಳಾರಿ ರಾಘವ'ರ ಜೀವನ ಪರಿಚಯವನ್ನು ಶ್ರೀ ಕೆ. ದೊಡ್ಡನ ಗೌಡರು ಕೊಟ್ಟಿರುವರು. ವೃತ್ತಿಯಲ್ಲಿ ವಕೀಲರಾಗಿದ್ದರೂ ಪ್ರವೃತ್ತಿಯಲ್ಲಿ ಅಭಿಜಾತ ಕಲಾವಿದರು. ಅಂದಿನ ಕಾಲದಲ್ಲಿ ಪ್ರತಿಭಾವಂತ ವಿದ್ಯಾವಂತ ನಟರ ಕೊರತೆ ರಂಗಭೂಮಿಯನ್ನು ಬಾಧಿಸಿತ್ತು. ಪೌರಾಣಿಕ ನಾಟಕಗಳಲ್ಲಿ ಅಭಿನಯಿಸುತ್ತಿದ್ದರೂ ರಾಘವರು ಸಾಮಾಜಿಕ ಬದಲಾವಣೆಗಳನ್ನೂ ಅದರ ಲೋಪದೋಷಗಳನ್ನೂ ಬಿಂಬಿಸುವ ನಾಟಕಗಳ ಅಗತ್ಯವನ್ನು ಮನಗಂಡಿದ್ದರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೆಳೆಯುತ್ತಿದ್ದ ರಂಗಭೂಮಿಯ ವೈವಿಧ್ಯತೆಗಳನ್ನು ಅಭ್ಯಾಸ ಮಾಡಲು ರಾಘವರು ಯೂರೋಪು ಪ್ರವಾಸ ಕೈಗೊಂಡು ಅಲ್ಲಿನ ನಾಟಕಗಳನ್ನು ನೋಡಿ ಪ್ರಸಿದ್ಧ ನಾಟಕಕಾರರು, ಕಲಾವಿದರನ್ನು ಭೇಟಿಮಾಡಿ ಅವರೊಡನೆ ಚರ್ಚಿಸಿ ಭಾರತೀಯ ನಾಟ್ಯಕಲೆಯ ಬಗೆಗೆ ವಿದೇಶೀ ಯರಿಗೆ ಪರಿಚಯ ಮಾಡಿಕೊಟ್ಟು ತಮ್ಮ ಕಲಾ ಪ್ರವಾಸವನ್ನು ಮುಗಿಸಿದರು. ರಾಘವರ ರಂಗ ಭೂಮಿಯ ಏಳಿಗೆಯ ಬಗೆಗಿನ ಕನಸು. ರಂಗಭೂಮಿಯ ಉನ್ನತಿಯೇ ತಮ್ಮ ಬಾಳಿನ ಧ್ಯೇಯ ವೆಂದು ಬಗೆದು ಕೊನೆಯುಸಿರಿರುವವರೆವಿಗೂ ನಟರಾಗಿ ದುಡಿದ ಅವರ ಕಲಾ ತಪಸ್ಸುಗಳ ವಿವರ ಯುಕ್ತವಾದ ಪರಿಚಯವನ್ನು ಲೇಖಕರು ಕೊಟ್ಟಿರುವರು.

'ಸಂಗೀತರತ್ನ ಖಾನ್‌ಸಾಹೇಬ್ ಅಬ್ದುಲ್ ಕರೀಂಖಾನ್ ಹಾಗೂ ಗಾನರತ್ನ ಗುಳೇದಗುಡ್ಡ ಗಂಗೂಬಾಯಿ'ಯವರ ಸಂಗೀತ ಸಾಧನೆಯ ಜೀವನ ಪರಿಚಯವನ್ನು ಶ್ರೀ ಎನ್ಕೆಯವರು ಕೊಟ್ಟಿರು

ವರು. ಹದಿನೈದನೆಯ ವಯಸ್ಸಿಗೇ ತಾಸುಗಟ್ಟಲೆ ಸಂಗೀತ ಕಾರ್ಯಕ್ರಮವನ್ನು ಕೊಟ್ಟು ಮೆಚ್ಚುಗೆಯನ್ನು ಪಡೆದ ಕೀರ್ತಿ ಗಂಗೂಬಾಯಿಯವರಿಗೆ ಸೇರಿದೆ. ಗಂಗೂಬಾಯಿಯವರು ಸಂಗೀತ ಪ್ರಪಂಚದಲ್ಲಿ ಪಡೆದಷ್ಟೇ ಖ್ಯಾತಿಯನ್ನು ನಟನ ಕಲೆಯಲ್ಲೂ ಪಡೆದಿರುವರು. ಇವರು ಸಂಗೀತ ನಟನಗಳಿಗೆ ತಮ್ಮ ಜೀವನವನ್ನು ಮುಡುಪಿಟ್ಟವರು. ಅವರ ಗಾಯನ-ಅಭಿನಯಗಳು ಕರ್ನಾಟಕದಲ್ಲಿಂದು ಮನೆಮಾತಾಗಿದೆ. ರಂಗಭೂಮಿಯಲ್ಲಿದ್ದು ತಮ್ಮ ಸಚ್ಚಾರಿತ್ರ-ಶೀಲಗಳಿಂದ ಗೌರವಾದರಗಳನ್ನು ಅಭಿಮಾನಿಗಳನ್ನು ಪಡೆದ ಇವರ ಬದುಕಿನ ವಿವರಗಳನ್ನು ಶ್ರೀ ಎನ್ಕೆಯವರು ಚೆನ್ನಾಗಿ – ಆರಾಧಕರಾಗಿ – ಕೊಟ್ಟಿರುವರು. ಖಾನ್ ಸಾಹೇಬರು ಹಿಂದೂಸ್ತಾನೀ ಸಂಗೀತದಲ್ಲಿ ಹೆಸರಾಂತವರು. ಕರ್ನಾಟಕದೊಂದಿಗೆ ನಿಕಟ ಸಂಬಂಧಹೊಂದಿದ್ದ ಇವರ ಶಿಷ್ಯ ಪರಂಪರೆ ಉತ್ತರ ಕರ್ನಾಟಕದಲ್ಲಿ ದೊಡ್ಡದಿದೆ ಶ್ರೀ ಎನ್ಕೆಯವರು ಖಾನ್ ಸಾಹೇಬರ ಜೀವನ ಸಂಗತಿಗಳನ್ನು ಚೆನ್ನಾಗಿ ಹೇಳಿರುವರಾದರೂ ಸಂಗೀತದ ಪಾರಿಭಾಷಿಕ ಪದಗಳಿಂದ ಇಡಿಕಿರಿದಿರುವ ಈ ಪುಸ್ತಕ ಮಕ್ಕಳಿಗೆ ನಿಲುಕುವುದರಲ್ಲಿ ಸಂದೇಹವಿದೆ.

'ಭೈರವೀ ಲಕ್ಷ್ಮೀನಾರಣಪ್ಪ'ನವರ ಕಲಾಸೇವೆಯ ಪರಿಚಯವನ್ನು ಗಾನಕಲಾಭೂಷಣ ಎಲ್. ರಾಜಾರಾವ್‌ರವರು ಕೊಟ್ಟಿರುವರು. ವೀಣೆಯಲ್ಲಿ ರಾಗತಾನಗಳನ್ನು ನುಡಿಸುವುದರಲ್ಲಿ ತಮ್ಮ ವಿಶಿಷ್ಟತೆಯನ್ನು ಮೆರೆದಿದ್ದ ಲಕ್ಷ್ಮೀನಾರಣಪ್ಪನವರು ಕರ್ಣಾಟಕದ ಸುಪ್ರಸಿದ್ಧ ವೈಣಿಕರು. ಪ್ರಖ್ಯಾತ ಸಂಗೀತ ವಿದ್ವಾಂಸರಾದ ವೀಣೆ ಶೇಷಣ್ಣ, ಸುಬ್ಬಣ್ಣನವರ ಮೆಚ್ಚುಗೆಯನ್ನು ಪಡೆದಿದ್ದ ಇವರ ವೀಣಾವಾದನ ವೈಖರಿ ನೆರೆನಾಡಿನವರನ್ನೂ ಆಕರ್ಷಿಸಿದ್ದಿತು. ಲಕ್ಷ್ಮೀನಾರಣಪ್ಪನವರ ಕಲಾತಪಸ್ಸು, ಸಾಧನೆ-ಸಿದ್ಧಿಗಳ ವಿವರಗಳನ್ನು ಲೇಖಕರು ವಿಶದವಾಗಿ ಹೇಳಿರುವರು.

ಈ ಶತಮಾನದ ಆದಿಭಾಗದಲ್ಲಿ ಮರಣವನ್ನಪ್ಪಿದ ಸುಪ್ರಸಿದ್ಧ ಕವಿ 'ಮುದ್ದಣ'ನ ಜೀವನ ಚರಿತ್ರೆಯನ್ನು ಶ್ರೀ ಕೆ. ನರಸಿಂಹಶಾಸ್ತ್ರಿಗಳು ಕೊಟ್ಟಿರುವರು. ಮುದ್ದಣ ನಂದಳಿಕೆ ಲಕ್ಷ್ಮೀನಾರಣಪ್ಪನ ಕಾವ್ಯನಾಮ. ಕವಿಯ ಸಾಹಿತ್ಯಪ್ರೇಮ, ಅಪ್ರತಿಮ ಪ್ರತಿಭೆ, ವಿದ್ವತ್ತು, ಅಮೂಲ್ಯ ಸಾಹಿತ್ಯ ಸೇವೆಗಳ ಸುಂದರ ಚಿತ್ರವನ್ನು ಲೇಖಕರು ಕೊಟ್ಟಿರುವರು. ಕೀರ್ತಿಯ ಬೆನ್ನೇರದೆ ಅದ್ಭುತ ರಾಮಾಯಣ, ಶ್ರೀರಾಮಪಟ್ಟಾಭಿಷೇಕ, ಶ್ರೀರಾಮಾಶ್ವಮೇಧ ಕೃತಿಗಳನ್ನು ರಚಿಸಿ ಅವು ಬೆಳಕು ಕಂಡು ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾದರೇ ಸಾಕೆಂದು ಕರ್ತೃತ್ವವನ್ನು ಬಚ್ಚಿಟ್ಟು ಅಜ್ಞಾತ ಕವಿಯೋರ್ವನ ಕೃತಿಗಳಿವೆಂದು ಪ್ರಕಾಶಕರಿಗೆ ಹೇಳಿದ ನಂದಳಿಕೆ ನಾರಣಪ್ಪನ ಅವ್ಯಾಜ ಸಾಹಿತ್ಯ ಪ್ರೇಮ, ಹೃದಯ ವೈಶಾಲ್ಯಗಳನ್ನು ಲೇಖಕರು ಚೆನ್ನಾಗಿ ವಿವರಿಸಿರುವರು. ಬಡತನದ ಬೇಗೆಯಲ್ಲಿ ಬಳಲಿ ಸಾಹಿತ್ಯದಮೇಲಣ ಹುಚ್ಚು ಮೆಚ್ಚಿನಿಂದ ಮೂವತ್ತೊಂದನೆಯ ವಯಸ್ಸಿಗೇ ಕ್ಷಯ ರೋಗದಿಂದ ಮರಣವನ್ನಪ್ಪಿದ ಕವಿಯ ದುರಂತ ಜೀವನದ ಕಥನ ಕೇಳುಗರೆಲ್ಲರ ಹೃದಯ ಮಿಡಿಯುತ್ತದೆ. ನಂದಳಿಕೆ ನಾರಣಪ್ಪನದು ವ್ಯಾಕರಣ, ನಿಘಂಟು, ಭಾಷಾಶಾಸ್ತ್ರ, ಕಾವ್ಯವಿಮರ್ಶೆ ಹೀಗೆ ಬಹುಮುಖವಾದ ಆಸಕ್ತಿ. ಅವನ ಮನದಾಳದ ಯೋಜನೆಗಳು ಪೂರ್ಣಗೊಳ್ಳುವ ಮೊದಲೇ ದೈವ ಅವನನ್ನು ನಮ್ಮಿಂದ ಕಸಿದುಕೊಂಡಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧರಾದ 'ವರಕವಿ ತಿಪ್ಪಯ್ಯ ಮಾಸ್ತರ'ರ ದಾರುಣಮಯವಾದ ಜೀವನ ಪರಿಚಯವನ್ನು ಶ್ರೀ ಶಾ. ಮಂ. ಕೃಷ್ಣರಾಯರು ಕೊಟ್ಟಿರುವರು. ಶಿಸ್ತಿನ ಅಧ್ಯಾಪಕರಾಗಿದ್ದರೂ ಸಹೋದ್ಯೋಗಿ ಹಾಗೂ ಮೇಲಧಿಕಾರಿಗಳ ಅಸೂಯಾ ಮನೋಭಾವಕ್ಕೆ ತುತ್ತಾಗಿ ಜೀವನದುದ್ದಕ್ಕೂ ಕಹಿಯನ್ನುಂಡ, ಬಡತನದಲ್ಲಿ ನರಳಿದ ತಿಪ್ಪಯ್ಯ ಮಾಸ್ತರರು ತಮ್ಮ ಅಂದಿನ ಸ್ಥಿತಿಯಲ್ಲೂ ಯಾರನ್ನೂ ಯಾಚಿಸದೆ ಸ್ವಾಭಿಮಾನದ ಬದುಕನ್ನು ನಡೆಸಿದರು. ಅವರಲ್ಲಿ ಕವಿತಾ ಶಕ್ತಿ ಅಂತರ್ಗತವಾಗಿತ್ತು. ಅವರು ತಮ್ಮ ಉಜ್ವಲ ಪ್ರತಿಭೆಯಿಂದ ಆಶುಕವಿತೆಯನ್ನು ಸೃಷ್ಟಿಸಿ ಮಹಾರಾಜರನ್ನೂ ತಲೆದೂಗಿಸಿದ್ದರು. ಸರಕಾರಿ ಚಾಕರಿಗೆ ರಾಜಿನಾಮೆಯಿತ್ತು ಜನರ ಅಂಧ ವಿಶ್ವಾಸ, ಸೋಮಾರಿತನ, ಕುಡಿತ, ಜೂಜು ಮೊದಲಾದ ಅನಿಷ್ಟ ಪರಂಪರೆಗಳನ್ನು ಹೊಡೆದೋಡಿ

ಸಲು ಕವಿತೆ ಕಟ್ಟಿ ಹಾಡಿದರು. ದೀನರ ದಲಿತರ ಕೆಟ್ಟಚಟ, ದುರಭ್ಯಾಸಗಳನ್ನು ಬಿಡಿಸಿ ಅವರನ್ನು ಉತ್ತಮರನ್ನಾಗಿ ಮಾಡಲು ಶ್ರಮಿಸಿದರು. ಪ್ರಭಾವಪೂರ್ಣ ನಾಟಕಗಳನ್ನು ಬರೆದು ಜನಜಾಗೃತಿ ಮಾಡಿದರು. ಸ್ವಾತಂತ್ರ್ಯಹೋರಾಟದ ಕಾಲದಲ್ಲಿ ರಾಷ್ಟ್ರೀಯ ತತ್ವಗಳನ್ನು ಕನ್ನಡದ ಲಾವಣಿ ಗೀಗೀಪದ. ನೀತಿಪದ, ವೀರಗೀತೆ, ಸ್ಫೂರ್ತಿಗೀತೆಗಳ ಮೂಲಕ ಹೇಳಿದರು. ಕಣ್ಣು ಮಂಜಾದಾಗ ಧೈರ್ಯಗೆಡದೆ ಮಗನ ಸಹಾಯಪಡೆದು ಪರಿಕಥೆ ಮಾಡಿದರು. ಇವರ ಹೋರಾಟದ ಜೀವನ, ಕಾವ್ಯಾಸಕ್ತಿ, ದೇಶಪ್ರೇಮ, ದೇಶಸೇವೆ ಇವೇ ಮೊದಲಾದವುಗಳ ಪರಿಚಯವನ್ನು ಲೇಖಕರು ಮನ ಮುಟ್ಟುವಂತೆ ಕೊಡಲು ಪ್ರಯತ್ನಿಸಿರುವರು. ಇವರ ಶೈಲಿ. ಸರಳವಾಗಿಲ್ಲದಿರುವುದರಿಂದ ಇವರ ಪ್ರಯತ್ನ ನಿರೀಕ್ಷಿಸಿದಷ್ಟು ಸಫಲವಾಗುವುದಿಲ್ಲ.

ಶ್ರೀ ಮುರಳೀಧರ ಉಪಾಧ್ಯ ಹಿರಿಯಡಕರವರು ಕನ್ನಡದ ಹಿರಿಯ ಕಥೆಗಾರರಾಗಿದ್ದ ಎಮ್. ಎನ್. ಕಾಮತ್ ರವರ ಜೀವನ ಕಥನವನ್ನು ಬರೆದಿರುವರು. ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ತಮ್ಮ ಜೀವಿತದ ಬಹುಭಾಗವನ್ನು ಅಧ್ಯಾಪಕರಾಗಿ ಕಾಲಕಳೆದ ಕಾಮತ್‌ರವರು ಸರಳ ಸ್ವಭಾವದವರು, ಸ್ನೇಹಪರರು ನಗೆಗಾರರು. ಫೋಟೋಗ್ರಫಿ, ನಾಟಕ ರಚನೆ, ನಾಟಕ ದಿಗ್ದರ್ಶಿಸುವುದು, ಕವನಗಳನ್ನೂ ಬರೆಯುವುದು–ಇವರ ಹವ್ಯಾಸಗಳು. ಇವರು ನಲವತ್ತಕ್ಕೂ ಹೆಚ್ಚು ಕವನಗಳನು ಏಕಾಂಕ ನಾಟಕಗಳನ್ನೂ ಬರೆದಿರುವರು. ಮಕ್ಕಳಿಗೆಂದೇ ಇವರು ಬಾಲಕರ ಮಹಾಭಾರತ, ಗದಾ ಯುದ್ಧದ ಕತೆ, ಯಾದವಕೃಷ್ಣ, ಚಂಡಕೌಶಿಕ, ನಾಗಾನಂದ ಮೊದಲಾದ ಗದ್ಯಕೃತಿಗಳನ್ನು ರಚಿಸಿರುವರು. ೧೯೧೮ ರಲ್ಲಿ ಪ್ರಕಟವಾದ ಇವರ 'ಅಂದಿನ ಅವೂರು' ಕನ್ನಡ ಕಥಾ ಸಾಹಿತ್ಯದಲ್ಲಿ ಒಳ್ಳೆಯ ಹೆಸರು ತಂದುಕೊಟ್ಟಿದೆ. ಸಂಸಾರಿಕ ತಾಪತ್ರಯಗಳ ನಡುವೆಯೂ ಸಾಹಿತ್ಯ ಸೃಷ್ಟಿಸಿ ತಾವೂ ನಕ್ಕು ಇತರರನ್ನೂ ನಗಿಸಿ ತಮ್ಮ ಐವತ್ತೇಳನೆಯ ವಯಸ್ಸಿನಲ್ಲಿ ಪ್ರಾಣಬಿಟ್ಟ ಕಾಮತ್‌ರವರ ಬಗೆಗೆ ಶ್ರದ್ಧೆಯಿಟ್ಟು ವಿಷಯ ಸಂಗ್ರಹಿಸಿ ವ್ಯಕ್ತಿ ಪರಿಚಯವನ್ನು ಲೇಖಕರು ಕೊಟ್ಟರುವರು.

ಮೈಸೂರು ಸರಕಾರದ ಮುಖ್ಯ ಅನುವಾದಕರಾಗಿ ಮೂವತ್ತು ವರುಷ ಅವಿರತವಾಗಿ ದುಡಿದು ಕನ್ನಡ ನಾಡಿಗೂ ಭಾಷೆಗೂ ಮಹತ್ತರ ಸೇವೆ ಸಲ್ಲಿಸಿದವರು ಸಿ. ಕೆ. ವೆಂಕಟರಾಮಯ್ಯನವರು. ಕನ್ನಡದ ಕೆಲಸವೆಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ. ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ವಸ್ತುಗಳನ್ನು ಆಯ್ದು ನಾಟಗಳನ್ನು ರಚಿಸಿ ಉತ್ಸಾಹಿ ತರುಣರಿಂದ ಆಡಿಸಿರುವರು. ಕರ್ನಾಟಕದ ಎಲ್ಲೆಡೆ ಹೋಗಿ ಶ್ರೋತೃಗಳು ಮೈಮರೆಯುವಂತೆ ಭಾಷಣ ಮಾಡಿರುವರು. ಸಾಹಿತ್ಯ ಮತ್ತು ಅಭಿವೃದ್ಧಿ ಇಲಾಖೆಯ ನಿರ್ದೇಶಕರಾಗಿ ಕರ್ನಾಟಕದ ಗಮಕಕಲೆ, ನಾಟಕ, ಸಂಗೀತ, ಸಾಹಿತ್ಯಗಳು ಜನ ಸಾಮಾನ್ಯರಿಗೂ ತಿಳಿಯುವಂತೆ ಆಯಾ ಕ್ಷೇತ್ರದಲ್ಲಿ ಪರಿಣತರಾದವರಿಂದ ಭಾಷಣಮಾಡಿಸಿರುವರು. ಇವರ ಸೇವೆಯನ್ನು ಮನ್ನಿಸಿ ಮೈಸೂರು ಮಹಾರಾಜರು 'ರಾಜಸೇವಾಸಕ್ತ' ಎಂಬ ಬಿರುದನ್ನೂ, ಭಾರತ ಸರಕಾರದವರು ಪದ್ಮಶ್ರೀ ಪ್ರಶಸ್ತಿಯನ್ನೂ ದಯಪಾಲಿಸಿ ಗೌರವಿಸಿರುವರು. ಈ ಹಿರಿಯ ಕನ್ನಡದ ಕಟ್ಟಾಳಿನ ಪರಿಚಯವನ್ನು 'ಚಿರಂಜೀವಿ'ಯವರು ತೃಪ್ತಿಕರವಾಗಿ ಕೊಟ್ಟಿರುವರು.

ಶ್ರೀ ಈಶ್ವರಚಂದ್ರರು ಸುಬೋಧ ರಾಮರಾಯರ ಜೀವನ-ಸಾಧನೆ-ಸಿದ್ಧಿಗಳ ಪರಿಚಯವನ್ನು ಕೊಟ್ಟಿರುವರು. ಪ್ರಾರಂಭ ಮಕ್ಕಳ ಕುತೂಹಲವನ್ನು ಮೀಟುತ್ತದೆ. ರಾಮರಾಯರ ಕಷ್ಟದ ಜೀವನ. ಸಮೃದ್ಧ ಸಾಹಿತ್ಯ ಸೇವೆ, ಮಕ್ಕಳ ಸಾಹಿತ್ಯಕ್ಕೆ ಅವರ ಕೊಡುಗೆ, ಹರಿದಾಸ ಸಾಹಿತ್ಯ ಬೆಳಕು ಕಾಣಲು ಅವರು ಪಟ್ಟಶ್ರಮ ಇತ್ಯಾದಿಗಳ ವಿವರಗಳನ್ನು ಲೇಖಕರು ಒಪ್ಪವಂತೆ ಕೊಟ್ಟಿರುವರು. ಒಳ್ಳೆಯದನ್ನೇ ಯೋಚಿಸಿ, ಆಡಿ, ಬರೆದ ಅವರ ಶುದ್ಧ ಸಾತ್ವಿಕ ಬದುಕಿನ ಮಹತ್ವಪೂರ್ಣ ಪರಿಚಯ ಈ ಕಿರುಕೃತಿಯಿಂದಾಗುತ್ತದೆ.

ಕನ್ನಡ ನಾಡಿನ ಸುಪ್ರಸಿದ್ಧ ಪತ್ರಿಕೋದ್ಯಮಿಗಳೂ, ಕ್ರಾಂತಿಕಾರಿ ಮನೋಭಾವದವರೂ, ಸಂಶೋಧಕರೂ ಆಗಿದ್ದ **ತಿ. ತಾ. ಶರ್ಮರ** ಪರಿಚಯವನ್ನು ಅರಳು ಮಲ್ಲಿಗೆ ಪಾರ್ಥಸಾರಥಿಯವರು ಕೊಟ್ಟಿರುವರು. ಲೇಖಕರದು ಆತುರದ ಬರವಣಿಗೆ. ಪುಸ್ತಕದ ಬಹುಭಾಗ ಶರ್ಮರ ಪತ್ರಿಕಾ

ಜೀವನ, ನಿರ್ಭೀತ ಬರವಣಿಗೆ ಪರಿಣಾಮ–ಈ ವಿಷಯಗಳೇ ಆಕ್ರಮಿಸಿಕೊಂಡಿವೆ. ರಾಷ್ಟ್ರಭಕ್ತಿ, ಪ್ರಬುದ್ಧ ಸಂಶೋಧಕ ಎಂಬ ಶೀರ್ಷಿಕೆಗಳಲ್ಲಿ ಬಂದಿರುವ ವಿವರಣೆಗಳು ತೀರಾ ಪೇಲವವಾಗಿವೆ. ಅವರ ವ್ಯಕ್ತಿತ್ವದ ಪರಿಚಯಕ್ಕೆ ಅವು ಸಮರ್ಥವಾಗಿಲ್ಲ. ಶರ್ಮರ ಕನಸಾಗಿದ್ದ ಕವಿಜನಾಶ್ರಯದ ಕಲ್ಪನೆಯನ್ನು ವಿವರಿಸಿರುವರು. ಕೊನೆಯಲ್ಲಿ ಶರ್ಮರ ಭಾಷಣಗಳಿಂದ ಕೆಲವು ಸ್ಫೂರ್ತಿಯುತ ವಾದ ಮಾತುಗಳನ್ನು ಆಯ್ದುಕೊಟ್ಟಿರುವರು. ವ್ಯಕ್ತಿಪರಿಚಯ ತೃಪ್ತಿಕರವಾಗಿಲ್ಲವೆಂಬ ಅನಿಸಿಕೆ ಪುಸ್ತಕ ಮುಗಿಸಿದಾಗ ಓದುಗನಿಗಾಗುತ್ತದೆ.

ವೀರಕೇಸರಿ ಸೀತಾರಾಮಶಾಸ್ತ್ರಿಗಳು ಸುಪ್ರಸಿದ್ಧ ಪತ್ರಿಕಾಕರ್ತರು, ಸಾಹಿತಿಗಳು, ಸ್ವಾತಂತ್ರ್ಯ ಹೋರಾಟಗಾರರು. ಇವರ ಸಾಹಸಮಯ ಬದುಕನ್ನೂ, ಕರ್ನಾಟಕಕ್ಕೆ ಹಾಗೂ ಕನ್ನಡಕ್ಕೆ ಇವರಿಂದಾದ ಸೇವೆ-ಕೊಡುಗೆಗಳನ್ನೂ ಈ ಪುಸ್ತಕದಲ್ಲಿ ಶ್ರೀ ಮೈ. ಸೂ. ಶೇ. ರವರು ಪ್ರಸ್ತಾಪಿಸಿರು ವರು. ಲೇಖಕರಿಗೆ ವೀರಕೇಸರಿಯವರ ಬಗೆಗೆ ತುಂಬು ಗೌರವ-ಅಭಿಮಾನಗಳಿವೆ. ಆದರೆ ಅವರಿಗೆ ವ್ಯಕ್ತಿಪರಿಚಯ ಮಾಡಿಕೊಡುವ ವಿಧಾನ ಸರಿಯಾಗಿ ತಿಳಿದಿಲ್ಲ. ಉತ್ಸಾಹ ಪ್ರಧಾನವಾದ ಬರವಣಿಗೆ ಯಲ್ಲಿ ಅಡ್ಡಾದಿಡ್ಡಿ ವಿವರಣೆಗಳಿವೆ. ಉತ್ಸಾಹಕ್ಕೆ ತಕ್ಕಭಾಷೆ ಲೇಖಕರಿಗಿಲ್ಲ. 'ಕಂಡದ್ದನ್ನು ಕಂಡಂತೆ ಬರೆಯುತ್ತಿದ್ದ, ಭ್ರಷ್ಟಾಚಾರದ ಬೆನ್ನು ಬಿದ್ದು ಹೋಗಿ, ಬಹಿರಂಗಕ್ಕೆಳೆದು ಭೂತಬಿಡಿಸುತ್ತಿದ್ದ ಸ್ವಾತಂತ್ರ್ಯಜೀವಿ, ಹುಟ್ಟು ಹೋರಾಟಗಾರ, ಪರಾಕ್ರಮದ ಪಂಜು ಮದ್ದೂರು ಸೀತಾರಾಮ ಶಾಸ್ತ್ರಿಗಳು, 'ವೀರಕೇಸರಿ' ಪತ್ರಿಕೆಯ ಸಂಪಾದಕರು ; ಪ್ರಕಾಶಕರು : ಹಾಗೂ ಅದರ ಸರ್ವಸ್ವ ವಾಗಿದ್ದರು' (ಪು. ೮) ಮೇಲಿನ ಮಾತಿಗೆ ಈ ಅಸಂಬದ್ಧ ವಾಕ್ಯ ನಿದರ್ಶನ 'ಶಾಸ್ತ್ರಿಗಳ ಹಿರಿಯ ರೆಲ್ಲರೂ ಮಹಾ ಮಹಾ ಪಂಡಿತರಾಗಿದ್ದರು ವೇದಾಗಮನಗಳಲ್ಲಿ ಸಂಪೂರ್ಣ ಬಲ್ಲವರಾಗಿದ್ದರು. ವೇದಮೂರ್ತಿಗಳೆಂದು ಅನ್ವರ್ಥರಾಗಿದ್ದರು. ಇವರೆಲ್ಲರಿಗೂ ಸಂಸ್ಕೃತ ಸಾಹಿತ್ಯ ಕರತಲಾಮಲಕ ಇವರೆಲ್ಲರದು ಪಾಂಡಿತ್ಯಮಯ ಪೌರೋಹಿತ್ಯ ; ಹೊಟ್ಟೆಗಿಂತಲೂ 'ಪೌರರ ಹಿತ' ಮುಖ್ಯ" (ಪು. ೧೦) ಈ ಬಗೆಯ ಬರವಣಿಗೆಯನ್ನು ಓದಿದಾಗಲಂತೂ ಲೇಖಕರು ಏನನ್ನೂ ಹೇಳುತ್ತಿದ್ದಾರೆ, ಯಾರಿಗಾಗಿ ಬರೆಯುತ್ತಿದ್ದಾರೆ ? ಎಂಬ ಪ್ರಶ್ನೆಗಳೇಳುತ್ತವೆ. ಪುಸ್ತಕ ಮುದ್ರಣವಾಗುವಾಗಲಾದರೂ ಲೇಖಕ ಮಹಾಶಯ ಇಲ್ಲವೇ ಪ್ರಕಾಶಕ ಮಹಾಶಯರು ಒಮ್ಮೆ ಕರಡು ನೋಡಬಹುದಿತ್ತು.

ಕರ್ನಾಟಕ ಕವಿಚರಿತ್ರೆಯ ಮೂರು ಸಂಪುಟಗಳನ್ನು ಅಪಾರ ಶ್ರಮವಹಿಸಿ ಸಿದ್ಧಪಡಿಸಿ ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರರಾಗಿರುವ ಆರ್. ನರಸಿಂಹಾಚಾರ್ಯರ ಬದುಕಿನ ವಿವರಗಳನ್ನು ಶ್ರೀ ಎನ್. ಅನಂತರಂಗಾಚಾರ್‌ರವರು ಪರಿಚಯಿಸಿರುವರು ದೇಶವಿದೇಶಗಳ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿ ಪ್ರಾಕ್ತನ ವಿಮರ್ಶ ವಿಚಕ್ಷಣ, ಮಹಾಮಹೋಪಾಧ್ಯಾಯ, ರಾವ್‌ಬಹದ್ದೂರ್, ಪ್ರಾಚ್ಯ ವಿದ್ಯಾವೈಭವ ಮೊದಲಾದ ಪ್ರಶಸ್ತಿಗಳಿಂದ ಗೌರವ ಪಡೆದಿರುವ ನರಸಿಂಹಾಚಾರ್ಯರ ಕಾರ್ಯಚಟು ವಟಿಕೆಗಳ ಸಂಕ್ಷಿಪ್ತ ಪರಿಚಯವನ್ನು ಲೇಖಕರು ಕೊಟ್ಟಿರುವರು. ಪ್ರಾಚ್ಯ ಸಂಶೋಧನಾಲಯದಲ್ಲಿ ನರಸಿಂಹಾಚಾರ್ಯರು ಮಾಡಿರುವ ಗಣನೀಯ ಸೇವೆಯ ಸ್ಮರಣೆ ಮನನೀಯವಾಗಿದೆ. ಆಚಾರ್ಯರ ಕೃತಿಗಳ ಸಂಕ್ಷಿಪ್ತ ಪರಿಚಯ ಲೇಖಕರು ಕೊಟ್ಟಿರುವರು. ಅವರು ಮಾಡಿರುವ ಸಂಶೋಧನೆಗಳು ; ಪ್ರಕಟಿಸಿರುವ ಲೇಖನಗಳು, ಕೃತಿಗಳು ಅವರ ಅಪಾರ ಪಾಂಡಿತ್ಯ ಹಾಗೂ ಪರಿಶ್ರಮಗಳನ್ನು ಪರಿಚಯಿಸುತ್ತವೆ.

ಕನ್ನಡದ ಸುಪ್ರಸಿದ್ಧ ವಿದ್ವಾಂಸರೂ ಸಂಶೋಧಕರೂ ಆದ ಪ್ರೊ. ಡಿ. ಎಲ್. ನರಸಿಂಹಾ ಚಾರ್‌ರವರ ಜೀವನ ಪರಿಚಯವನ್ನು ಶ್ರೀ ಬಿ. ವಿ. ವೈಕುಂಠರಾಜುರವರು ಮಕ್ಕಳಿಗೆ ತಿಳಿಯುವಂತೆ ಕೊಟ್ಟಿರುವರು. ಡಿ. ಎಲ್. ಎನ್.ರವರ ಸಾಹಿತ್ಯಸೇವೆಯ ಪ್ರಸ್ತಾಪ ವಿವರಯುಕ್ತವಾಗಿದೆ. ಶ್ರೇಷ್ಠ ಅಧ್ಯಾಪಕರಾಗಿ, ಪ್ರತಿಭಾವಂತ ಸಂಶೋಧಕರಾಗಿ, ಕನ್ನಡದ ಅಪೂರ್ವ ಪದಗಳ ನಿಷ್ಪತ್ತಿ ಕಾರರಾಗಿ ಮಾಡಿರುವ ಅವರ ಸೇವೆಯ ಸ್ಮರಣೆ ತುಂಬಾ ಚೆನ್ನಾಗಿ ಬಂದಿದೆ. ಕೊನೆಯಲ್ಲಿ, ಅವರ ವ್ಯಕ್ತಿತ್ವ—ಸಾಧನೆಗಳ ಸ್ಫುಟವಾದ ಚಿತ್ರವನ್ನು ಲೇಖಕರು ಕೊಟ್ಟಿರುವರು. ಮೆಚ್ಚುವ ಅಂತ

ವೆಂದರೆ ಲೇಖಕರ ನಿರೂಪಣಾ ವಿಧಾನ. ಮಕ್ಕಳಿಗೆ ತಿಳಿಯುವಂತೆ ಪುಟ್ಟ ಪುಟ್ಟ ವಾಕ್ಯಗಳಲ್ಲಿ ಸರಳವಾದ ಭಾಷೆಯಲ್ಲಿ ನಿದರ್ಶನಗಳೊಂದಿಗೆ ವಿವರಣೆ ನೀಡುವ ಲೇಖಕರ ಪ್ರಾಮಾಣಿಕ ಪ್ರಯತ್ನ ಅಭಿನಂದನೀಯವಾಗಿದೆ.

ಡಾ॥ ಸಿ. ವಿ. ರಾಮನ್ ಹಾಗೂ ಗಣಿತ ವಿದ್ವಾಂಸ ಸಿ. ಎನ್. ಎಸ್. ಅಯ್ಯಂಗಾರ್‌ರವರ ಜೀವನ ಚರಿತ್ರೆಯನ್ನು ಶ್ರೀ ಜಿ. ಟಿ. ನಾರಾಯಣರಾವ್‌ರವರು ಬರೆದಿರುವರು.

ಡಾ॥ ಸಿ. ವಿ. ರಾಮನ್‌ರವರು ಭಾರತ ಸರಕಾರದ ಅರ್ಥಶಾಖೆಯ ಓರ್ವ ಉನ್ನತಾಧಿಕಾರಿಯಾಗಿ ಸೇವೆಯನ್ನಾರಂಭಿಸಿದರೂ ವಿಜ್ಞಾನದ ಮೇಲಿನ ಆಕರ್ಷಣೆಯಿಂದಾಗಿ ಹೆಚ್ಚು ಕಾಲ ಆ ಹಿರಿಯ ಉನ್ನತ ಭವಿಷ್ಯವಿರುವ ಅಧಿಕಾರದಲ್ಲಿ ನಿಲ್ಲದೆ ವಿಜ್ಞಾನಿಯಾದುದು ನಮ್ಮ ಹಾಗೂ ದೇಶದ ಸೌಭಾಗ್ಯ. ಅವರ ವಿಜ್ಞಾನಪ್ರೇಮ, ಅವರು ನಡೆಸಿದ ಸಂಶೋಧನೆಗಳು, ಅವರು ಪಡೆದ ಅಂತರ ರಾಷ್ಟ್ರೀಯ ಮನ್ನಣೆಗಳು ವಿಸ್ತಾರವಾಗಿ ಲೇಖಕರಿಂದ ನಿರೂಪಿತವಾಗಿದೆ. ರಾಮನ್‌ರವರ ಜೊತೆ ಸಂದರ್ಶನ ಪಡೆದು ಅವರ ಬದುಕಿನ ಬಗೆಗೆ ಅವರಿಂದಲೇ ವಿಷಯ ಸಂಗ್ರಹಿಸಿ ಅವರ ಸಾಧನೆ-ಸಿದ್ಧಿಗಳ ಪರಿಚಯ ಮಾಡಿಕೊಟ್ಟಿರುವ ಲೇಖಕರ ಪ್ರಯತ್ನ ಮೆಚ್ಚುವಂತಿದೆ. ಒಂದೇ ಒಂದು ಕೊರತೆಯೆಂದರೆ ಅವರು ಹೇಳುವ ಎಷ್ಟೋ ವಿಷಯಗಳು ಭಾಷೆಯ ಕ್ಲಿಷ್ಟತೆಯಿಂದಾಗಿ ಅರ್ಥವಾಗದು. 'ನೇಟಿವ್' ವಿಜ್ಞಾನಿ (ಪು. ೧೮) ರೋಹಿತ (ಪು. ೨೦) ದ್ರುತಗತಿ (ಪು. ೨೨) ಅಶ್ರುಗ (ಪು. ೨೩) ಭೂರಿ ಕಲ್ಲುಗಳು (ಪು. ೩೯) ಇಂತಹ ಪದಗಳು ಬಂದಾಗ ಪಕ್ಕದಲ್ಲಿ ಶಬ್ದಕೋಶವಿಟ್ಟು ಕೊಂಡು ಓದುವ ಮಕ್ಕಳು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಕರ್ನಾಟಕದ ಸುಪ್ರಸಿದ್ಧ ಗಣಿತ ವಿದ್ವಾಂಸರಾದ ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ಯರ ಕಷ್ಟದಾಯಿಯಾಗಿದ್ದ ಬಾಲ್ಯ ಜೀವನ, ಆ ಕಷ್ಟಗಳನ್ನು ಎದುರಿಸುವಲ್ಲಿ ತೋರಿದ ಮನಸ್ಥೈರ್ಯ, ತಮ್ಮ ಸ್ವಯಂ ಪ್ರತಿಭೆಯಿಂದ ಕೀರ್ತಿಶಾಲಿಗಳಾದ ಅವರ ಶ್ರದ್ಧಾವಂತ ಜೀವನ, ವಿಜ್ಞಾನ ಸಾಹಿತ್ಯ ನಿರ್ಮಾಪಕರಾಗಿ ಅವರ ನುಡಿಸೇವೆ, ಸಂಸ್ಕೃತ ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಅನುವಾದಿಸುವ ಮೂಲಕ ಮಾಡಿರುವ ಸಾಹಿತ್ಯಸೇವೆ ಇವೆಲ್ಲವುಗಳ ವಿವರಗಳನ್ನು ಲೇಖಕರು ಕೊಟ್ಟಿರುವರು. ಇಲ್ಲಿಯೂ ಸಹಾ ಲೇಖಕರ ಕ್ಲಿಷ್ಟ ಭಾಷೆ ಮಕ್ಕಳಿಗೆ ತೊಡಕಾಗಿದೆ.

ಉ. ಸಮಾಜಸೇವಕರು-ಸ್ವಾತಂತ್ರ್ಯಯೋಧರು

ಶ್ರೀ ಕೈವಾರ ರಾಜಾರಾವ್‌ರವರು ರಾಜಮಂತ್ರ ಪ್ರವೀಣ ಎಚ್. ವಿ. ನಂಜುಂಡಯ್ಯನವರ ಸಮಾಜಸೇವೆ ಸಾಹಿತ್ಯಾಭಿಮಾನಗಳನ್ನು ವಿವರಿಸಿರುವರು. ಮೈಸೂರು ವಿಶ್ವವಿದ್ಯಾಲಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ತುಗಳ ಸ್ಥಾಪನೆಯಲ್ಲಿ ಅವರು ತೋರಿದ ವಿಶೇಷ ಆಸಕ್ತಿಯ ಫಲವನ್ನು ನಾವಿಂದು ಕಣ್ಣಾರೆ ಕಾಣುತ್ತಿದ್ದೇವೆ. ನಂಜುಂಡಯ್ಯನವರ ಸಾಂಸಾರಿಕ ಸುಖ-ದುಃಖಗಳು, ಶ್ರದ್ಧಾವಂತ ದುಡಿಮೆ, ಮಾನವೀಯತೆಗಳ ಪರಿಚಯವನ್ನು ಲೇಖಕರು ಸೊಗಸಾಗಿ ನಿರೂಪಿಸಿರುವರು.

ಸಾಹಿತಿಗಳಲ್ಲದಿದ್ದರೂ ಸಾಹಿತ್ಯಾಭಿಮಾನವನ್ನು ವಿಶೇಷವಾಗಿ ಬೆಳೆಸಿಕೊಂಡಿದ್ದ, ಕನ್ನಡದ ಅಭಿವೃದ್ಧಿಯ ಬಗೆಗೆ ವಿಶೇಷ ಆಸ್ಥೆ ಹೊಂದಿದ್ದ ಕರ್ಪೂರ ಶ್ರೀನಿವಾಸರಾಯರು ವೃತ್ತಿಯಲ್ಲಿ ಇಂಜಿನಿಯರ್. ಆದರೆ ಕನ್ನಡ ಅವರ ಅಂತರಂಗದ ಪ್ರಿಯ ವಿಷಯ. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಲ್ಲಿ ಇವರದೂ ಪ್ರಮುಖ ಪಾತ್ರ. ಪರಿಷತ್ತಿಗೆ ಸ್ವಂತ ಕಟ್ಟಡವಿರಬೇಕೆಂದು ಆಲೋಚಿಸಿ ಅದು ಮೇಲೇಳಲು ಕಾರಣರಾದರು. ಆಧುನಿಕ ಶಾಸ್ತ್ರಗಳೂ ಕನ್ನಡದಲ್ಲಿ ಪ್ರಕಟವಾಗಬೇಕೆಂಬುದು ಅವರ ಬಯಕೆಯಾಗಿದ್ದಿತು. ಕೇವಲ ಕನ್ನಡಾಭಿಮಾನದಿಂದ ಪರಿಷತ್ತಿನೊಂದಿಗ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಶ್ರೀನಿವಾಸರಾಯರ ಜೀವನದ ವಿವರಗಳನ್ನು ಶ್ರೀ ಹೆಚ್. ಎಸ್. ಮೂರ್ತಿಯವರು ಕೊಟ್ಟಿರುವರು. ಲೇಖಕರು ಇನ್ನಷ್ಟು ವಿಷಯ ಸಂಗ್ರಹಿಸಿ ಶ್ರೀನಿವಾಸರಾಯರ ವ್ಯಕ್ತಿತ್ವದ

ಹಿರಿಮೆಯನ್ನು ಪರಿಚಯಿಸಬಹುದಿತ್ತು. ಲೇಖಕರು ಕೊಡುವಷ್ಟೇ ವಿವರಗಳಿಂದ ಶ್ರೀನಿವಾಸ ರಾಯರ ಪರಿಪೂರ್ಣವಾದ ಜೀವನಚಿತ್ರ ಅರಿಯಲಾಗದು.

ರೊದ್ದ ಶ್ರೀನಿವಾಸರಾಯರ ಜೀವನ ಚರಿತ್ರೆಯನ್ನು ಶ್ರೀ ಎಂ. ಎಂ. ಅಣ್ಣಿಗೇರಿಯವರು ಬರೆದಿರುವರು. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಧಾರವಾಡದಲ್ಲಿ ವಿದ್ಯಾಪ್ರಗತಿಗಾಗಿ ರೊದ್ದ ರವರು ಮಾಡಿರುವ ಸೇವೆ ಅನುಪಮವಾದುದು. ಕರ್ನಾಟಕ ಕಾಲೇಜು, ಕರ್ನಾಟಕ ವಿಶ್ವವಿದ್ಯಾ ಲಯಗಳ ಸ್ಥಾಪನೆಗೆ ಪ್ರಮುಖ ಕಾರಣಕರ್ತರು. ಅವರ ಸಾಮಾಜಿಕ ಸೇವೆ ಬಹುಮುಖವಾದುದು ಆರು ವರುಷ ಶಾಸನಸಭೆಯ ಸದಸ್ಯರಾಗಿ ಅನೇಕ ಉಪಯುಕ್ತ ಕಾರ್ಯಗಳು ಉತ್ತರ ಕರ್ನಾಟಕದಲ್ಲಿ ಆಗಲು ನೆರವಾಗಿರುವರು. ಲೇಖಕರು ವ್ಯಕ್ತಿಪರಿಚಯ ನೀಡುವಾಗ ಅವರ ಜೀವನದ ಮಹತ್ವದ ಘಟನೆಗಳಿಗೆ ಪ್ರಾಧಾನ್ಯ ನೀಡಬೇಕು. ಒಬ್ಬ ಅಧ್ಯಾಪಕನ ವರ್ಗ ರದ್ದುಪಡಿಸಿದ್ದು ಸಾಧಾರಣ ಸಂಗತಿ. ಇಂತಹವುಗಳನ್ನು ಹೇಳದೆ ಬಿಟ್ಟರೂ ವ್ಯಕ್ತಿತ್ವಕ್ಕೆ ಧಕ್ಕೆಬರುವುದಿಲ್ಲ. ಸರಳ ಭಾಷೆ ಯಿಂದಾಗಿ ಪುಸ್ತಕ ಓದಿಸಿಕೊಂಡು ಹೋಗುತ್ತದೆ.

ಉತ್ತರ ಕರ್ನಾಟಕದ ಉತ್ತರ ಗಡಿ ಪ್ರದೇಶದಲ್ಲಿ ಕನ್ನಡವನ್ನು ಉಳಿಸಿ ಬೆಳೆಸಲು ಶ್ರಮಿಸಿ ದವರು ಚಿಕ್ಕೋಡಿ ತಮ್ಮಣ್ಣಪ್ಪನವರು. ಕನ್ನಡ ಶಾಲೆಯ ಶಿಕ್ಷಕರಾಗಿ ಅವರು ವಿದ್ಯಾರ್ಥಿ ಹಾಗೂ ಜನತೆಯಲ್ಲಿ ಕನ್ನಡ ನಾಡು–ನುಡಿ–ಸಂಸ್ಕೃತಿಗಳ ಬಗೆಗೆ ಜಾಗೃತಿಯಾಗುವಂತೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದ ಅವರು ಗಡಿನಾಡಿನಲ್ಲಿ ಕನ್ನಡಿಗರ ಮೇಲಾಗುತ್ತಿದ್ದ ಅನ್ಯಾಯವನ್ನು ಸಾಹಿತ್ಯ ಸಮ್ಮೇಳನಗಳಲ್ಲಿ ಆಕ್ರೋಶಪೂರ್ಣರಾಗಿ ವಿವರಿಸು ತ್ತಿದ್ದರು. ವಿಶಾಲ ಹೃದಯಿಗಳೂ ನ್ಯಾಯನಿಷ್ಠುರರೂ ಆಗಿದ್ದ ಅವರು ಸಾಮಾಜಿಕ ಅನ್ಯಾಯ ಗಳನ್ನು ಸಹಿಸುತ್ತಿರಲಿಲ್ಲ. ಈ ಅನ್ಯಾಯಗಳ ತಡೆಗೆ ಶ್ರಮಿಸುತ್ತಿದ್ದರು. ಅಳಿಯಂದಿರಾದ ವಚನ ಪಿತಾಮಹ ಹಳಕಟ್ಟಿಯವರನ್ನು ರೂಪಿಸಿದ, ವೀರಶೈವ ಸಾಹಿತ್ಯವನ್ನು ಹೊರತರಲು ಪ್ರೇರೇಪಿಸಿದ ಕೀರ್ತಿ ಇವರಿಗೆ ಸೇರಿದೆ. ಲೇಖಕ ಶ್ರೀ ದು. ನಿಂ. ಬೆಳಗಲಿಯವರ ಶೈಲಿ ಸರಳವಾಗಿದೆ.

ಬೆಂಗಳೂರಿನ ಶಾರದಾ ಸ್ತ್ರೀಸಮಾಜದ ಸ್ಥಾಪಕರಾಗಿ ಮಹಿಳೆಯರ ಸ್ಥಿತಿ-ಗತಿಗಳನ್ನು ಉತ್ತಮ ಗೊಳಿಸಲು ಪ್ರಾಂಜಲ ಮನಸ್ಸಿನಿಂದ ದುಡಿದವರು ಶ್ರೀಮತಿ ಆರ್. ಕಲ್ಯಾಣಮ್ಮನವರು. ಅವರು 'ಮಕ್ಕಳ ಕೂಟ'ದ ಹುಟ್ಟಿಗೂ ಕಾರಣರಾಗಿರುವರು. ನಿಸ್ವಾರ್ಥಿಗಳಾಗಿದ್ದ ಅವರು ಕೊನೆಯ ವರೆವಿಗೂ ತಮಗಾಗಿ ಏನನ್ನೂ ಮಾಡಿಕೊಳ್ಳಲಿಲ್ಲ. ಅನಾಥ ಮಹಿಳೆಯರ ಉದ್ಧಾರ ಅವರ ಬದುಕಿನ ಗುರಿಯಾಗಿದ್ದಿತು. ಆ ಗುರಿ ಸಾಧನೆಗಾಗಿಯೇ ಹಲವಾರು ಸಂಘಗಳ ಸದಸ್ಯರಾಗಿ ದ್ದರು. ತಮ್ಮ ಕತೆ, ಕಾದಂಬರಿ, ನಾಟಕ, ಬಿಡಿಲೇಖನಗಳಿಂದ ಕಲ್ಯಾಣಮ್ಮನವರು ಕನ್ನಡ ಓದುಗ ಬಳಗಕ್ಕೆ ಪರಿಚಿತರಾಗಿರುವರು. ಅವರು 40ಕ್ಕೂ ಹೆಚ್ಚು ವರ್ಷ 'ಸರಸ್ವತಿ' ಎಂಬ ಮಾಸಪತ್ರಿಕೆಯ ಸಂಪಾದಕಿಯಾಗಿ ಸೇವೆಸಲ್ಲಿಸಿರುವರು. ಇಂದಿನ ಗಣ್ಯಸಾಹಿತಿಗಳನೇಕರನ್ನು ಕನ್ನಡ ಬಳಗಕ್ಕೆ ಪರಿಚಯಿಸಿದ ಕೀರ್ತಿಯೂ ಅವರ ಪಾಲಿಗಿದೆ. ಅವರು ಮಕ್ಕಳಿಗಾಗಿ ಬರೆದ ಲೇಖನಗಳು ತುಂಬಾ ಪರಿಣಾಮಕಾರಿಯೂ, ಬೋಧಪ್ರದವೂ ಆಗಿವೆ. ಶ್ರೀಮತಿ ಆರ್. ಕಲ್ಯಾಣಮ್ಮನವರ ನಿಸ್ವಾರ್ಥ ತ್ಯಾಗಮಯ ಜೀವನದ ವಿವರವಾದ ಪರಿಚಯವನ್ನು ಶ್ರೀಮತಿ ಎಚ್. ಎಸ್. ಪಾರ್ವತಿ ಯವರು ಕೊಟ್ಟಿರುವರು. ವ್ಯಕ್ತಿಪರಿಚಯ ಮಕ್ಕಳ ಮನಸ್ಸಿಗೆ ಮುಟ್ಟುವಂತಿದೆ. ಭಾಷೆ ಸರಳ ವಾಗಿದೆ.

ಸ್ವಾಮಿ ವಿವೇಕಾನಂದರ ವಿದ್ವತ್ತು, ದೇಶಪ್ರೇಮ, ಶಾಸ್ತ್ರ ಪ್ರೌಢಿಮೆಗಳಿಗೆ ಮನಸೋತು ಅವರನ್ನು ಚಿಕಾಗೋ ವಿಶ್ವಧರ್ಮ ಸಮ್ಮೇಳನಕ್ಕೆ ಕಳುಹಿಸಿ ಆ ಮೂಲಕ ಹಿಂದೂ ಧರ್ಮದ ಪರಿಚಯವನ್ನು ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಕರ್ಮಯೋಗಿ ಅಳಸಿಂಗ ಪೆರುಮಾಳ್ ರವರಿಗೆ ಸೇರಿದೆ. ಇವರ ದೇಶಭಕ್ತಿ, ಗುರುಭಕ್ತಿಗಳ ಪರಿಚಯದ ಜೊತೆಗೆ ವಿಶೇಷವಾದ ತ್ಯಾಗಮಯ ಜೀವನವನ್ನೂ ಶ್ರೀ ಲ. ನ. ಶಾಸ್ತ್ರೀ ಅವರು ತಮ್ಮ ಈ ಕಿರುಹೊತ್ತಗೆಯಲ್ಲಿ ಕೊಟ್ಟಿರುವರು.

ಶ್ರೀ ಟಿ. ಬಿ. ಕೇಶವರಾವ್‌ರವರು ಸಾಮಾಜಿಕ ಕಾರ್ಯಕರ್ತರೂ, ಸ್ವಾತಂತ್ರ್ಯಯೋಧರೂ ಆದ ಇಜಾರಿ ವಸುಪಾಲಪ್ಪನವರ ಜೀವನ ಪರಿಚಯ ಕೊಟ್ಟಿರುವರು. ಇದೇ ಲೇಖಕರು ಕಡಪಾ ರಾಘವೇಂದ್ರರಾಯರ ಜೀವನ ಚರಿತ್ರೆಯನ್ನೂ ಬರೆದಿರುವರು. ರಾಘವೇಂದ್ರರಾಯರು ಕರ್ನಾಟಕ ಏಕೀಕರಣದ ಸಲುವಾಗಿ ನಡೆಸಿದ ಹೋರಾಟದ ವಿವರಗಳು ಚೆನ್ನಾಗಿ ಬಂದಿವೆ.

ಶ್ರೀ ಕರಿಯಪ್ಪ ಸರಗೂರರು ಮೈಲಾರ ಮಹದೇವಪ್ಪನವರ ಉಜ್ವಲವಾದ ದೇಶಪ್ರೇಮ ಹಾಗೂ ದೇಶಕ್ಕಾಗಿ ಮಾಡಿದ ಆತ್ಮಬಲಿದಾನದ ಪರಿಚಯ ನೀಡಿರುವರು. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸತ್ಯಾಗ್ರಹಿಗಳನ್ನು ಒಂದುಗೂಡಿಸಿ ಸತ್ಯಾಗ್ರಹ ಚಳುವಳಿಗಳನ್ನು ನಡೆಯಿಸಿ ಜೀವದ ಹಂಗು ತೊರೆದು ಹೋರಾಡಿ ಸ್ವಾತಂತ್ರ್ಯದ ಕನಸು ಕಾಣುತ್ತಲೇ ಹುತಾತ್ಮರಾದವರು ಮೈಲಾರ ಮಹದೇವಪ್ಪನವರು ಅವರ ಉಜ್ವಲವಾದ ರಾಷ್ಟ್ರಪ್ರೇಮ, ಉಚ್ಚ ಆದರ್ಶ, ರಚನಾತ್ಮಕ ಕಾರ್ಯ ಚಟುವಟಿಕೆಗಳ ಸ್ಥೂಲವಾದ ಪರಿಚಯವನ್ನು ಈ ಕಿರುಕೃತಿ ನೀಡುತ್ತದೆ.

ಕರ್ನಾಟಕದ ಗಾಂಧಿಯೆಂದು ಹೆಸರಾಂತ (?) ತಿಮ್ಮಪ್ಪನಾಯಕರ ಜೀವನ ಪರಿಚಯವನ್ನು ಡಾ॥ ಸೂರ್ಯನಾಥ ಕಾಮತರು ಕೊಟ್ಟಿರುವರು. ತಿಮ್ಮಪ್ಪನಾಯಕರು ಭಾರತ ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿದ ವೀರರು; ದೇಶಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಿಟ್ಟವರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಇವರು ಹತ್ತಿಸಿದ ಸ್ವಾತಂತ್ರ್ಯದ ಕಿಚ್ಚು ಇವರನ್ನು ದೇಶದ್ರೋಹಿಯೆಂದು ಸೆರೆಮನೆಗೊಯ್ದಿತು. ಖಾದಿ ಪ್ರಚಾರ, ಹರಿಜನೋದ್ಧಾರ, ಗ್ರಾಮಸ್ವಾವಲಂಬನ, ಗ್ರಾಮೋದ್ಯೋಗಗಳ ಪುನರುಜ್ಜೀವನ-ಇವರು ಕೈಗೊಂಡ ಕಾರ್ಯಗಳಲ್ಲಿ ಮುಖ್ಯವಾದುವು. ಇವರ ಉದ್ಬೋಧಕವಾದ ಜೀವನ ಪರಿಚಯವನ್ನು ಲೇಖಕರು ಮನಮುಟ್ಟುವಂತೆ ಕೊಟ್ಟಿರುವರು.

ಶ್ರೀಮತಿ ಎಚ್. ಎಸ್. ಪಾರ್ವತಿಯವರ ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಆತುರದ ಬರವಣಿಗೆ ಹೇಗೆ ಅಪಕ್ವವೂ ಅಪರಿಪೂರ್ಣವೂ ಆಗಿರುತ್ತದೆಯೆಂಬುದಕ್ಕೆ ಒಂದು ನಿದರ್ಶನ. ವಿಷಯದ ಆಯ್ಕೆಯನ್ನು ಮಾಡಿಕೊಳ್ಳುವಾಗ ಅದರ ವ್ಯಾಪ್ತಿಯ ತಿಳುವಳಿಕೆಯನ್ನು ಮನಸ್ಸಿಗೆ ತಂದುಕೊಳ್ಳಬೇಕಿತ್ತು. ವಿಷಯ ಬಹುವ್ಯಾಪಿಯಾಗಿರುವುದರಿಂದ ಲೇಖಕಿಯ ಹಿಡಿತಕ್ಕೆ ಒಳಗಾದಂತಿಲ್ಲ. ಕನ್ನಡ ಸಾಹಿತ್ಯದಲ್ಲಿ ಬರುವ ಕವಯಿತ್ರಿಯರ ಒಂದೊಂದು ಮಾದರಿ (sample) ಕೊಟ್ಟರೆ ವಿಷಯಕ್ಕೆ ನ್ಯಾಯ ಬಗೆದಂತಾಗುತ್ತದೆ ಎಂದು ಲೇಖಕಿ ಭಾವಿಸಿದಂತಿದೆ. ಕಂತಿಯ ಬಗೆಗೆ ಹೇಳಿರುವ ವಿವರಗಳು ತೀರಾ ಕಡಿಮೆ. ಜಾನಪದ ಸಾಹಿತ್ಯದ ಬಗೆಗೆ ಹೇಳುವಾಗಲೂ ವಿವರಣೆ ಚುಟುಕಾಗುತ್ತದೆ. ಪು. 12ರಲ್ಲಿ ಬಂದಿರುವ ಅನುಭವ ಮಂಟಪದ ಚಿತ್ರ ರಾಜಸಭೆಯೊಂದರ ಚಿತ್ರದಂತಿರುವುದು ಹಾಸ್ಯಾಸ್ಪದವಾಗಿದೆ. "ವಿಚಾರ ಸಾಹಿತ್ಯ, ವೈಜ್ಞಾನಿಕ ಸಾಹಿತ್ಯ, ಸಾಮಾಜಿಕ ಶಾಸ್ತ್ರ, ಕವನಗಳು, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳಲ್ಲೂ ಮಹಿಳೆಯರ ಪ್ರತಿಭೆ ತೋರಿಬರಲಿ" ಎಂದು ಲೇಖಕಿ ಹಾರೈಸಿರುವರು. ಮಹಿಳಾ ಲೇಖಕಿಯಾಗಿ ಮಹಿಳಾಸಾಹಿತ್ಯದಲ್ಲಿನ ಕೊರತೆಯನ್ನು ಗಮನಿಸಿರುವ ಅಂಶ ಮೆಚ್ಚಬೇಕಾಗಿದೆ.

ಊ. ಕರ್ನಾಟಕದ ಕಲೆಗಳು, ಪ್ರೇಕ್ಷಣೀಯ ಸ್ಥಳಗಳು

ಶ್ರೀ ಸಿಂಪಿ ಲಿಂಗಣ್ಣನವರ ಉತ್ತರ ಕರ್ನಾಟಕದ ಜಾನಪದ ಗೀತೆಗಳು ಹೆಸರೇ ಹೇಳುವಂತೆ ಕರ್ನಾಟಕದ ಒಂದು ಭಾಗದ ಜನಪದ ಗೀತೆಗಳ ವೈವಿಧ್ಯ ಹಾಗೂ ವೈಶಿಷ್ಟ್ಯಗಳನ್ನು ತಿಳಿಯಪಡಿಸುವ ಕೃತಿ. ಜಾನಪದ ಸಾಹಿತ್ಯದಲ್ಲಿ ಗೀತಗಳು ಪ್ರಧಾನ ಸ್ಥಾನ ವಹಿಸಿರುವುದನ್ನು ಲೇಖಕರು ಪ್ರಸ್ತಾಪಿಸಿ, ಗಂಡಸರ ಹಾಡುಗಳು, ಹೆಂಗಸರ ಹಾಡುಗಳು, ಮಕ್ಕಳ ಹಾಡುಗಳು (ಗಂಡುಮಕ್ಕಳ ಹಾಡು, ಹೆಣ್ಣು ಮಕ್ಕಳ ಹಾಡು) ಎಂದು ವಿಂಗಡಿಸಿ, ಅವುಗಳ ಬಗೆಗಳನ್ನು ಸೋದಾಹರಣವಾಗಿ ವಿವರಿಸಿ ಹಾಗೆಯೇ ಅವುಗಳ ಸೊಗಸನ್ನೂ ಚೆನ್ನಾಗಿ ತಿಳಿಯಪಡಿಸಿರುವರು. ಉ.ಕ.ದಲ್ಲಿ ಪ್ರಚಲಿತವಿರುವ ಮೊಟ್ಟೆಯ ಹಾಗೂ ಹಿಡಿಯ ಹಾಡು, ಡೊಳ್ಳಿನ ಹಾಡು, ಗೊಂದಲಿಗರ ಹಾಡು,

ಕರ್ಬಲಾಹಾಡು, ಭಜನೆಹಾಡು—ಇವುಗಳ ಪರಿಚಯ ಲೇಖಕರು ಸಂಕ್ಷಿಪ್ತವಾಗಿ ಕೊಟ್ಟಿದ್ದರೂ ಜಾನಪದದ ಅಭ್ಯಾಸಿಗೆ ಉಪಯುಕ್ತವಾಗಿವೆ. ಲಾವಣಿ ಹಾಗೂ ಬಯಲಾಟದ ಹಾಡುಗಳ ಬಗೆಗಿನ ವಿವರಗಳೂ ಸಾಕಷ್ಟು ಬಂದಿವೆ. ಈ ಉಪಯುಕ್ತ ಕಿರುಹೊತ್ತಗೆಯಲ್ಲಿ ಮಕ್ಕಳಿಗೆ ಈ ಸಾಹಿತ್ಯ ಕ್ಷೇತ್ರದ ಪರಿಚಯವನ್ನು ಆಕರ್ಷಕ ಶೀರ್ಷಿಕೆ, ಸೆರೆಹಿಡಿಯುವ ನಿರೂಪಣೆಯಿಂದ ಹೇರಳ ವಿಷಯ ಸಂಪತ್ತಿಯಿಂದ ಅರ್ಥಪೂರ್ಣ ಹಾಡುಗಳ ಉದಾಹರಣೆಗಳಿಂದ ಪರಿಣಾಮಕಾರಿಯಾಗಿ ಹೇಳಿರುವರು.

ಕರ್ನಾಟಕದ ನೃತ್ಯ, ಚಿತ್ರ, ಶಿಲ್ಪ ನಾಟಕ ಕಲೆಗಳನ್ನು ಕುರಿತು ಸಂಕ್ಷಿಪ್ತ ಪರಿಚಯವನ್ನು ಡಾ॥ ಶಿವರಾಮ ಕಾರಂತರು ಪ್ರತ್ಯೇಕ ಪ್ರತ್ಯೇಕವಾಗಿ ಕಿರುಹೊತ್ತಗೆಗಳಲ್ಲಿ ಕೊಟ್ಟಿರುವರು. ಒಂದೊಂದು ಕಲೆಯಲ್ಲೂ ವ್ಯಾಪಕವಾದ ತಿಳುವಳಿಕೆಯುಳ್ಳ ಕಾರಂತರು ಕಿರಿದರಲ್ಲೇ ಅವುಗಳ ಹಿರಿಮೆಯನ್ನೂ ವೈಶಿಷ್ಟ್ಯವನ್ನೂ ವಿವರಿಸಿರುವರು. ಮಕ್ಕಳ ಮನಸ್ಸನ್ನರಿತ ಅವರು ಸರಳ ಹಾಗೂ ಆಕರ್ಷಕ ಶೈಲಿಯಲ್ಲಿ ಪುಟ್ಟಪುಟ್ಟ ವಾಕ್ಯಗಳಲ್ಲಿ ವಿಷಯ ನಿರೂಪಣೆ ಮಾಡಿರುವರು; ಚಿತ್ರಗಳೊಂದಿಗೆ ವಿವರಣೆ ನೀಡಿರುವರು. ಇವು ಮಕ್ಕಳಿಗಷ್ಟೇ ಅಲ್ಲ ನಮ್ಮ ಪ್ರಾಚೀನ ಕಲೆಗಳ ಬಗೆಗೆ ತಿಳಿಯಬೇಕೆನ್ನುವ ಎಲ್ಲರಿಗೂ ಅರ್ಥವಾಗುವಂತೆ ಹೇಳಿರುವುದು ಮೆಚ್ಚಬೇಕಾದ ಅಂಶ. ಮಕ್ಕಳ ಸಾಹಿತ್ಯದಲ್ಲಿ ಕೈಯಾಡಿಸಹೊರಡುವವರ ಕಾರಂತರು ಬರೆದಿರುವ ಇಂತಹ ಪುಸ್ತಕಗಳನ್ನು ಒಮ್ಮೆಯಾದರೂ ನೋಡಿದರೆ ಮಕ್ಕಳಿಗೆ ಸಾಹಿತ್ಯ ಹೇಗೆ ರಚಿಸಬೇಕೆಂಬುದರ ಅರಿವಾಗುತ್ತದೆ.

ಡಾ॥ ಶಿವರಾಮಕಾರಂತರ ಇನ್ನೆರಡು ಮಹತ್ವಪೂರ್ಣ ಕೃತಿಗಳು-ಕರ್ನಾಟಕದ ಕರಾವಳಿ ಹಾಗೂ ಚೆಲುವಿನ ಕನ್ನಡನಾಡು. ಮೊದಲನೆಯದರಲ್ಲಿ ನಮ್ಮ ಸಮುದ್ರ ಕರಾವಳಿಯ ಸಂಪತ್ತನ್ನೂ ಅದಕ್ಕೆ ಅಂಟಿಕೊಂಡೇ ವಾಸಿಸುತ್ತಿರುವ ಜನರಿಗೆ ಅದು ಹೇಗೆ ವರಪ್ರದವಾಗಿದೆ ಜೀವನಾಧಾರವಾಗಿದೆಯೆಂಬುದರ ತಿಳುವಳಿಕೆಯನ್ನೂ ಕಾರಂತರು ಕೊಟ್ಟಿರುವರು. ಈ ಕರಾವಳಿ ಪ್ರದೇಶದಲ್ಲಿ ನಾವಿನ್ನೂ ಗುರುತಿಸಿರದ ಬಗೆಬಗೆಯ ವೃಕ್ಷ, ಹಕ್ಕಿಗಳು, ಚೆಲುವು ದಾಣಗಳು ಇವೆ. ಇವೂ ಒಂದು ವಿಧದ ಸಂಪತ್ತು. ನಮಗೆ ನಮ್ಮಲ್ಲಿನ ಮರಗಳ, ಸಸ್ಯಗಳ, ಪಶುಪಕ್ಷಿಗಳ ಹೆಚ್ಚಿನ ತಿಳುವಳಿಕೆಯಿಲ್ಲ; ಅವುಗಳ ಬಗೆಗೆ ಕುತೂಹಲ ಬೆಳೆಸಿಕೊಳ್ಳುವ, ಹೆಚ್ಚಿನ ಅಭ್ಯಾಸ ನಡೆಸುವ ವ್ಯವಧಾನವಿಲ್ಲ. ಅವುಗಳನ್ನು ನೋಡಿ ಸಂತೋಷಪಡುವ ಹೃದಯವಿಲ್ಲ. ನಮ್ಮಲ್ಲಿ ಸುಂದರ ಕಡಲು, ನದಿಗಳಿವೆ. ಅವುಗಳನ್ನು ನಿಂತು ನೋಡಿ ಸುಖಿಸುವ ಮನೋಭಾವ ಬೆಳೆದಿಲ್ಲ. ನಮ್ಮ ಪ್ರಕೃತಿ ಸಂಪತ್ತನ್ನು ತಿಳಿಯುವ, ನೋಡಿ ಅನುಭವಿಸುವ, ಖುಷಿಪಡುವ ಮನೋವೃತ್ತಿ ನಮ್ಮಲ್ಲಿ ಇಲ್ಲದ್ದನ್ನು ಕಂಡು ಕಾರಂತರು ನೊಂದಿರುವರು. 'ನಮ್ಮ ಕರಾವಳಿಯ ಸೊಬಗು ಮಂಗನ ಮುಂದೆ ಚೆಲ್ಲಿದ ಮಾಣಿಕ್ಯದಂತಾಗಿದೆ' ಎಂಬ ಅವರ ಖೇದದ ಮಾತಿನಲ್ಲಿ ಆ ನೋವಿನ ಎಳೆಯಿದೆ; ನಮ್ಮವರ ಆಲಸೀತನಕ್ಕೆ ಬೇಸರವಿದೆ. "ಯಾವುದೇ ನಾಡಿನಲ್ಲಿದ್ದು ಸುಖಪಡಬೇಕಾದರೆ ಅಲ್ಲಿನ ಪ್ರಕೃತಿಯ ಸಂಪತ್ತನ್ನು ಕುರಿತು ಜನ ಆಳವಾಗಿ ಅಭ್ಯಾಸಮಾಡಬೇಕು. ಆಗ ಜೀವನ ನಡೆಯಿಸುವ ಕೆಲಸ ಸುಲಭವಾಗುತ್ತದೆ. ಜೀವನದಲ್ಲಿ ಸಂತೋಷ ತಂದುಕೊಳ್ಳುವುದೂ ಸುಲಭವಾಗುತ್ತದೆ. ಎಂಬ ಕಾರಂತರ ಮಾತನ್ನು ನಾವು ಇಂದು ವಿಚಾರಮಾಡಬೇಕಾಗಿದೆ. ಕಾರಂತರ ಮತ್ತೊಂದು ಪುಸ್ತಕ-'ಚೆಲುವಿನ ಕನ್ನಡನಾಡು' ನಮ್ಮ ಸುಂದರ ಪ್ರಾಕೃತಿಕ ಸಂಪತ್ತಿನ ಪರಿಚಯ ಮಾಡಿಕೊಡಲು ಹೊರಟಿದೆ. ನಮ್ಮ ನಯನ ಮನೋಹರವಾದ ಪರ್ವತ, ಸಮುದ್ರ, ಹೊಳೆ, ಕಾಡುಗಳಲ್ಲಿ ಹುದುಗಿರುವ ಮನಸ್ಸನ್ನು ಸೂರೆಗೊಳ್ಳುವ-ಸೌಂದರ್ಯವನ್ನು, ನೋಟಗಳನ್ನು; ಭಯ—ಆನಂದಗಳನ್ನು ತಂದುಕೊಡುವ ಪ್ರಾಣಿಗಳ ಮೋಹಕಾಕೃತಿಗಳನ್ನೂ ಉದ್ದಕ್ಕೂ ಕಾರಂತರು ಹೇಳುತ್ತಾ ಹೋಗಿರುವರು. ನಮ್ಮ ಪ್ರಕೃತಿ ಸಂಪತ್ತನ್ನು ಜನ ಸ್ವಲಾಭಕ್ಕಾಗಿ ನಾಶಮಾಡುತ್ತಿರುವ ಅನಾಗರೀಕ ಪ್ರವೃತ್ತಿಯನ್ನು ಕಾರಂತರು ಕಟುವಾಗಿ ಟೀಕಿಸಿರುವರು. ಕುತೂಹಲ ಮೀಟುವ ವಿವರಣೆ, ಪುಟ್ಟವಾಕ್ಯಗಳಲ್ಲಿ ಮಕ್ಕಳ ಮನಮುಟ್ಟುವ ರೀತಿಯಲ್ಲಿ ಹೇಳುವ ವಿಷಯ ನಿರೂಪಣೆಗಳಿಂದಾಗಿ ಈ ಹೊತ್ತಗೆ ಮಕ್ಕಳಿಗೆ ಹಿಡಿಸುತ್ತದೆ.

ಕರ್ಣಾಟಕದ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳ ಪರಿಚಯುವನ್ನು ಅದರ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ, ಹಿನ್ನೆಲೆಯಲ್ಲಿ ಹಲವಾರು ಮಂದಿ ಲೇಖಕರು ಕೊಟ್ಟಿರುವರು. ಸರ್ವಶ್ರೀ ದಯಾನಂದ ತೊರ್ಕೆಯವರು 'ಧಾರವಾಡ'ವನ್ನೂ ; ಮೋಹನಚಂದ ಕೀರಣಗಿಯವರು ಕೊಪ್ಪಳವನ್ನೂ ; ಎಸ್. ಎಸ್. ಭೂಸರೆಡ್ಡಿಯವರು ರಾಯಚೂರನ್ನೂ ; ಮೈ. ನ. ನಾಗರಾಜರವರು ನಂದಿದುರ್ಗವನ್ನೂ ; ಜಯತೀರ್ಥ ರಾಜಪುರೋಹಿತರು ಕನಕಗಿರಿಯನ್ನೂ ; ಎಂ. ಆರ್. ಶಾನಭಾಗರವರು ಶ್ರೀಕ್ಷೇತ್ರಯಾಣವನ್ನೂ ; ಡಾ॥ ಬಾ. ರಾ. ಗೋಪಾಲ್‌ರವರು ಬನವಾಸಿಯನ್ನೂ ಕುರಿತು ಪರಿಚಯಾತ್ಮಕ ಕಿರುಹೊತ್ತಿಗೆಗಳನ್ನು ತಂದಿರುವರು. ಇವರ ಪರಿಚಯಗಳು ಚಿತ್ರಗಳನ್ನೊಳಗೊಂಡಿವೆ. ಇವು ಪ್ರವಾಸಿಗಳಿಗೆ ಉತ್ತಮ ಮಾಹಿತಿ ಒದಗಿಸುತ್ತವೆ.

ಕರ್ಣಾಟಕದ ಸುಪ್ರಸಿದ್ಧ ಕಲಾಬೀಡಾದ ಪಟ್ಟದಕಲ್ಲಿನ ಬಗೆಗೆ ವಿಸ್ತಾರವಾದ ಪರಿಚಯುವನ್ನು ಡಾ॥ ಅ. ಸುಂದರ ಅವರು ಕೊಟ್ಟಿರುವರು. ಪಟ್ಟದಕಲ್ಲು ಸಾಂಸ್ಕೃತಿಕವಾಗಿ ಹೇಗೆ ಮಹತ್ವದ ಸ್ಥಾನ ವಹಿಸಿದೆ ಎಂಬುದನ್ನು ತಿಳಿಸುವುದರ ಜೊತೆಗೆ ಲೇಖಕರು ಅಲ್ಲಿರುವ ದೇವಾಲಯಗಳು ಅವುಗಳ ಸ್ವರೂಪ ಮತ್ತುಲಕ್ಷಣಗಳನ್ನು ಶಿಲ್ಪಗಳಲ್ಲಿ ಕಾಣಬರುವ ಕಲಾಪ್ರತಿಭೆ - ಸಂಪತ್ತುಗಳನ್ನು ವಿವರಿಸಿರುವರು. ತಮ್ಮ ಅಭಿಪ್ರಾಯಗಳನ್ನು ನಕ್ಷೆ, ಮಾದರಿ, ವಿನ್ಯಾಸ, ಚಿತ್ರಗಳ ಮೂಲಕ ವಿವರಿಸುವ, ಸ್ಪಷ್ಟಗೊಳಿಸುವ ಪ್ರಯತ್ನ ಮಾಡಿರುವರು. ಪ್ರವಾಸಿಗಳಿಗೆ ಉಪಯುಕ್ತ ಕೈಪಿಡಿಯಂತಿರುವ ಈ ಕೃತಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಬಯಸುವ ಅಭ್ಯಾಸಿಗಳಿಗೆ ಹೆಚ್ಚಿನ ಸಹಾಯ ನೀಡುತ್ತದೆ.

ಸಂಕೀರ್ಣ :

ಪ್ರೊ. ಎಸ್. ಕೆ. ರಾಮಚಂದ್ರರಾವ್‌ರವರು ಕನ್ನಡನಾಡಿನ ವಿಶಿಷ್ಟಗುಣವಾದ ಸರ್ವಧರ್ಮ ಪ್ರೇಮವನ್ನು, ನಮ್ಮವರ ವಿಶಾಲ ಮನೋಧರ್ಮವನ್ನು ಕನ್ನಡ ನಾಡಿನ ಧಾರ್ಮಿಕ ಪರಂಪರೆ ಎಂಬ ಕಿರುಹೊತ್ತಗೆಯಲ್ಲಿ ವಿವರಿಸಿರುವರು.

'ಚಿರಂಜೀವಿ'ಯವರು ಕನ್ನಡ ನಾಡಿನಲ್ಲಿ ಪತ್ರಿಕೋದ್ಯಮ ಹುಟ್ಟಿಬೆಳೆದ ಬಗೆಯನ್ನು ತಮ್ಮ ಕರ್ನಾಟಕ ಪತ್ರಿಕೋದ್ಯಮ ಎಂಬ ಪುಸ್ತಕದಲ್ಲಿ ಹೇಳಿರುವರು.

ಡಾ॥ ಎಂ. ಚಿದಾನಂದಮೂರ್ತಿಯವರ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಪ್ರಧಾನವಾಗಿ ಕರ್ನಾಟಕದಲ್ಲಿ ವೀರರ, ಪತಿವ್ರತೆಯರ ತ್ಯಾಗದ ಪರಮಾವಧಿಯ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳ ಬಗೆಗೆ ಪರಿಚಯ ಮಾಡಿಕೊಡುವ ವಿಶಿಷ್ಟ ಪ್ರಯತ್ನವಾಗಿದೆ. ವೀರಗಲ್ಲುಗಳ ಲಕ್ಷಣಗಳು, ಅವುಗಳ ಸ್ಥಾಪನೆಯ ಉದ್ದೇಶ ಅವುಗಳ ಬಗೆಗಳು ಲೇಖಕರಿಂದ ವಿಶದವಾಗಿ ವಿವರಿಸಲ್ಪಟ್ಟಿವೆ. ವೀರರ ಹಾಗೂ ಮಹಾಸತಿಯರ ಸ್ಮಾರಕವಾಗಿ ನಿಲ್ಲಿಸಿದ ಈ ವೀರಗಲ್ಲು, ಮಾಸ್ತಿಕಲ್ಲುಗಳನ್ನು ಇಂದಿಗೂ ಪೂಜೆಮಾಡುತ್ತಿರುವುದು ಸಮಾಜ ಅವುಗಳಿಗೆ ಹಾಗೂ ಅವುಗಳ ಹಿಂದೆ ಹೊಮ್ಮುವ ಮೌಲ್ಯಗಳಿಗೆ ತೋರಿದ ಗೌರವವಾಗಿದೆ. ವೀರಗಲ್ಲುಗಳ ನಿರ್ಮಾಣಕ್ಕೆ ಕಾರಣರಾದ ವೀರರ ರೋಮಾಂಚನಗೊಳಿಸುವ ಸಾಹಸಗಳ ವಿವರಗಳನ್ನು ಲೇಖಕರು ಚೆನ್ನಾಗಿ ಪರಿಚಯಿಸಿರುವರು. ಮಾಸ್ತಿಕಲ್ಲುಗಳು ಗಂಡ ಸತ್ತಮೇಲೆ ತಮ್ಮಪ್ರಾಣ ಬಿಟ್ಟ ಮಹಾಸತಿಯರ ನೆನಪಿಗಾಗಿ ನೆಡಿಸಿದ ಸ್ಮಾರಕ ಶಿಲೆಗಳು. ಮಾಸ್ತಿಕಲ್ಲುಗಳ ಲಕ್ಷಣ, ಮಹಾಸತಿಯರ ಅಚಲ ನಿಷ್ಠೆ, ಪತಿಭಕ್ತಿ, ತ್ಯಾಗ ಗುಣಗಳನ್ನು ಲೇಖಕರು ಮನಮುಟ್ಟುವಂತೆ ವಿವರಿಸಿರುವರು. ಬೆಳತೂರಿನಶಾಸನ (ದೇಕಬ್ಬೆಯ ಶಾಸನ)ದ ಮೂಲಕ ಮಹಾಸತಿಯರು ದೃಢನಿರ್ಧಾರಗೊಂಡು ಹೇಗೆ ಅಗ್ನಿಪ್ರವೇಶ ಮಾಡುತ್ತಿದ್ದರೆಂಬುದರ ಪರಿಚಯ ನೀಡಿರುವರು. ಜಾಬೋರ್ನೀಸಾ (ಸು. ೧೫೨೦) ಸಹಗಮನದ ಬಗೆಗೆ ಕೊಟ್ಟಿರುವ ವಿಸ್ತೃತ ವರದಿಯನ್ನು ಲೇಖಕರು ಕೊಟ್ಟಿರುವರಲ್ಲದೆ ಪ್ರವಾಸಿಗಳ ವರದಿ, ಶಾಸನ, ಕಾವ್ಯ, ಜನಪದ ಗೀತೆಗಳ ಆಧಾರದ ಮೇಲೆ ಸಹಗಮನ ನಡೆಯುತ್ತಿದ್ದ ಬಗೆಯನ್ನು ಚಿತ್ರವತ್ತಾಗಿ ನಿರೂಪಿಸಿರುವರು. ಮಾಸ್ತಿಕಲ್ಲುಗಳನ್ನು ಹಿಂದೆಯೂ ಪೂಜಿಸುತ್ತಿದ್ದರು. ಇಂದೂ ಪೂಜಿಸುತ್ತಿರುವರು. ಮಾಸ್ತಿಕಲ್ಲು

ವೀರಗಲ್ಲಿಗಿಂತ ಹೆಚ್ಚು ಮನ ಕಲಕುತ್ತದೆ ಎಂಬ ತಮ್ಮ ಅಭಿಪ್ರಾಯವನ್ನು ಸಮರ್ಥಿಸುತ್ತಾ "ಇಲ್ಲಿ ಸ್ತ್ರೀ ಸಾವುದೋ ನಂಬಿಕೆಗಾಗಿ, ಆದರ್ಶಕ್ಕಾಗಿ ತನ್ನನ್ನು ತಾನು ಕೊಂದುಕೊಳ್ಳುತ್ತಾಳೆ. ಇದು ಬರೀ ಆತ್ಮಹತ್ಯೆಯಲ್ಲ. ಹೋಲಿಕೆ ಮಾಡಿ ಹೇಳುವುದಾದರೆ, ಯುದ್ಧದಲ್ಲಿ ಸಾಯುವುದು ಸುಲಭ; ಆದರೆ. ಎಲ್ಲರ ಮುಂದೆ ತನ್ನನ್ನು ತಾನು ಕೊಂದು ಕೊಳ್ಳುವುದು ಕಠಿನ. ವೀರನಿಗಿಂತ ಹೆಚ್ಚಿನ ನಿಷ್ಠೆ, ಧೈರ್ಯ, ಆದರ್ಶಪ್ರಿಯತೆ, ಗಂಡೆದೆ ಆ ಹೆಣ್ಣಿನಲ್ಲಿರಬೇಕಾಗುತ್ತದೆ" ಎಂದು ಲೇಖಕರು ನಿಲುವು ತಾಳಿರುವರು. ನಮ್ಮ ಪ್ರಾಚೀನರ ಆದರ್ಶ ಮನೋಭಾವ, ಸಾಹಸ-ಸ್ಥೈರ್ಯ, ತ್ಯಾಗ-ಬಲಿದಾನಗಳ ಪರಿಚಯ ನಮ್ಮ ಮಕ್ಕಳಿಗಾಗಬೇಕಾಗಿದೆ; ನಮ್ಮ ಹಿರಿಯ ಪರಂಪರೆಯ, ಭವ್ಯ ಸಂಸ್ಕೃತಿಯ ಪರಿಚಯ ಆಗಬೇಕಾಗಿದೆ. ಈ ದಿಸೆಯಲ್ಲಿ ಡಾ॥ ಚಿದಾನಂದಮೂರ್ತಿಯವರ ಈ ಪುಟ್ಟಪುಸ್ತಕ ಸ್ವಾಗತಾರ್ಹ. ವಿಷಯ ಸಂಪತ್ತಿಯಿಂದ ಕೂಡಿರುವ ಈ ಪುಟ್ಟ ಪುಸ್ತಕ ಮಕ್ಕಳಿಗಷ್ಟೇ ಅಲ್ಲ ಹಿರಿಯರಿಗೂ ವಾಚನೀಯವಾಗಿದೆ.

ಬೆಂಗಳೂರಿನ ಸುಪ್ರಸಿದ್ಧ ಪ್ರಕಾಶಕರಾದ ಐ.ಬಿ.ಎಚ್ ರವರ ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ ಮಾಲೆಯಲ್ಲಿ ಸು. ೬೦ ಮಕ್ಕಳ ಪುಸ್ತಕಗಳು ಬಂದಿವೆ. ಇದೇ ರೀತಿ ರಾಷ್ಟ್ರೋತ್ಥಾನ ಸಾಹಿತ್ಯದ ವತಿಯಿಂದಲೂ ಭಾರತ-ಭಾರತಿ ಮಾಲೆಯಲ್ಲಿ ಸು. ೬೦ ಮಕ್ಕಳ ಪುಸ್ತಕಗಳು ಬಂದಿವೆ. ಭಾರತ-ಭಾರತಿ ಮಾಲೆಯಲ್ಲಿ ಪೌರಾಣಿಕ ವ್ಯಕ್ತಿಗಳು, ಇತಿಹಾಸ ಪುರುಷರು, ಕವಿಗಳು-ಕಲೆಗಾರರು ವಿದ್ವಾಂಸರು, ದೇಶಭಕ್ತರು, ಸಮಾಜಸೇವಕರು, ಧಾರ್ಮಿಕಪುರುಷರು – ಈ ವಿಷಯಗಳ ಚೌಕಟ್ಟಿನಲ್ಲಿ ಜೀವನ ಚರಿತ್ರೆಗಳು ಬಂದಿವೆ. ನಮ್ಮ ಸಾಹಿತ್ಯಕ್ಕೆ ಪೂರಕವಾಗಿ ಈ ಎರಡು ಸಂಸ್ಥೆಗಳು ಮಕ್ಕಳ ಸಾಹಿತ್ಯವನ್ನು ವಿಪುಲವಾಗಿ ವರ್ಷ ವರ್ಷವೂ ಹೊರತರುತ್ತಿವೆ. ಐ.ಬಿ.ಎಚ್. ರವರದು ಸ್ವಲ್ಪ ವ್ಯಾಪಕವಾಗಿ ವಿಷಯುಗಳ ಆಯ್ಕೆ. ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತಿನವರದು ಜೀವನ ಚರಿತ್ರೆಗಳ ಮಟ್ಟಿಗೆ ವ್ಯಾಪ್ತಿ. ಸಂಖ್ಯೆಯಲ್ಲಿ ಮಕ್ಕಳ ಸಾಹಿತ್ಯವೆಂಬ ಹೆಸರಿನಲ್ಲಿ, ಸಾಹಸ ನಡೆಸಿರುವರೇ ಹೊರತು ಪರಿಣಾಮದಲ್ಲಿ, ಮೌಲ್ಯದಲ್ಲಿ ಇವರ ಸೇವೆಯ ಫಲಶ್ರುತಿ ನಿರೀಕ್ಷಿಸಿದ ಮಟ್ಟದಲ್ಲಿ ಆದಂತಿಲ್ಲ. ನಿರ್ದಿಷ್ಟ ವಿಷಯುಗಳ ಚೌಕಟ್ಟಿನಲ್ಲಿ ಲೇಖಕರಿಂದ ಪುಸ್ತಕ ಬರೆಯಿಸಿ ದಪ್ಪ ಅಕ್ಷರಗಳಲ್ಲಿ ಚಿತ್ರಗಳೊಂದಿಗೆ ಮುದ್ರಿಸಿ ಪುಸ್ತಕ ಹೊರತಂದ ಮಾತ್ರಕ್ಕೆ ನಮ್ಮ ಈ ಸಾಹಿತ್ಯ ಸಮೃದ್ಧವಾದಂತಾಗಲಿಲ್ಲ; ವಿಶಿಷ್ಟ ಕೊಡುಗೆಯಾದಂತಾಗಲಿಲ್ಲ. ಸಂಖ್ಯಾಬಲ ಒಂದು ಸಾಹಿತ್ಯದ ಮೌಲ್ಯ ನಿರ್ಣಯಿಸ ಹೊರಡುವ ಮಾಧ್ಯಮವಾದಲ್ಲಿ ಅದಕ್ಕಿಂತ ದೊಡ್ಡ ದುರಂತ ನಮ್ಮ ಪಾಲಿಗೆ ಮತ್ತೊಂದಿಲ್ಲ. ನಮ್ಮ ಮಕ್ಕಳ ಸಾಹಿತ್ಯ ಬೆಳೆಯಬೇಕೆಂಬ ಕಾಳಜಿ ಇರುವವರು ಈಗಿನ ಫಸಲಿಗೇ ತೃಪ್ತರಾದಲ್ಲಿ ನಮ್ಮ ಮಕ್ಕಳಿಗೇ ಅನ್ಯಾಯ ಬಗೆದಂತಾಗುತ್ತದೆ; ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ.

ನಮ್ಮ ಮಕ್ಕಳಿಗೆ ಸಣ್ಣ ಕತೆಗಳು. ಕವಿತೆಗಳು, ನಾಟಕಗಳು ಓದಲು ಸಿಗುತ್ತಿಲ್ಲ. ಈ ಬಾರಿ 'ಚಿನ್ನದ ತಟ್ಟೆ'ಎಂಬ ಒಂದೇ ಒಂದು ಕತೆ-ಕವನಗಳ-ನ್ನೊಳಗೊಂಡ ಕೃತಿ ಹೊರಬಂದಿದೆಯೆಂದರೆ ಅಚ್ಚರಿಯಾಗುತ್ತದೆ. ನಮ್ಮ ಸಾಹಿತಿಗಳ ದಿವ್ಯ ಅಲಕ್ಷ್ಯವೇ, ಪ್ರಕಾಶಕರ ತಿರಸ್ಕಾರವೇ ? ವಿಚಾರ ಮಾಡಬೇಕಾಗಿದೆ. ನಮ್ಮ ಈ ಬಾಲಸಾಹಿತ್ಯ ಕೇವಲ ಸಾಪ್ತಾಹಿಕ ಪುರವಣಿಗೆಯ ಒಂದು ಹಾಳೆಗೆ, ವಾರಪತ್ರಿಕೆಯ ಒಂದೆರಡು ಪುಟಗಳಿಗೆ ಮಾತ್ರ ಮೀಸಲಾಗಿರುವುದು, ಅಷ್ಟರಿಂದಲೇ ನಮ್ಮ ಮಕ್ಕಳು ತೃಪ್ತರಾಗಬೇಕಾಗಿರುವುದು ನೇರ ನೋಟಕ್ಕೆ ಕಾಣಬರುತ್ತಿದೆ. ಪತ್ರಿಕೆಗಳಲ್ಲಿ ಮಕ್ಕಳ ಸಾಹಿತ್ಯವನ್ನು ನಮ್ಮ ಲೇಖಕರು ಬರೆಯುತ್ತಿರುವರು. ಅವರ ಉತ್ಸಾಹ ಬತ್ತಿಹೋಗಿಲ್ಲ. ಪುಸ್ತಕರೂಪದಲ್ಲಿ ಅವರ ಬರವಣಿಗೆ ಬರಲು ಒಳ್ಳೆಯ ಪ್ರಕಾಶಕರು ಮುಂದೆ ಬರುತ್ತಿಲ್ಲ. ಹಾಕಿದ ಹಣ ಹಿಂತಿರುಗಿ ಬರಲಾರದೆನ್ನುವ ಹಿಂಜರಿಕೆ ಪ್ರಕಾಶಕರದು. ಈ ವರ್ತುಲದಲ್ಲಿ ತನ್ನದೇ ಆದ ಸಮಸ್ಯೆಯಲ್ಲಿ ನಮ್ಮ ಮಕ್ಕಳ ಸಾಹಿತ್ಯ ಸಿಕ್ಕಿ ಹಾಕಿಕೊಂಡಿದೆ. ಮಕ್ಕಳ ಸಾಹಿತ್ಯವನ್ನು ದೊಡ್ಡ ಸಂಖ್ಯೆಯಲ್ಲಿ ಹೊರತರುತ್ತಿರುವ ಪ್ರಕಾಶಕರು ತಮ್ಮ ವಿಷಯದ ಆಯ್ಕೆಯ ಮಿತಿಯನ್ನು ವಿಸ್ತರಿಸಿದರೆ ಈ ಸಮಸ್ಯೆಗೆ ಸ್ವಲ್ಪ ಪರಿಹಾರ ಸಿಗಬಹುದು. ಈ ನಿಟ್ಟಿನಲ್ಲಿ ವಿಚಾರಿಸುವುದು ಒಳಿತು.

ಅನ್ಯ ಸಾಹಿತ್ಯದಿಂದ

ಡಿ. ಆರ್. ನಾಗರಾಜ್

ಕಾವ್ಯ, ಕಥೆ, ಕಾದಂಬರಿ, ನಾಟಕ - ಈ ನಾಲ್ಕೂ ಪ್ರಕಾರಗಳಿಗೆ ಸೇರದ ಅನ್ಯ ಸಾಹಿತ್ಯದಿಂದ ಬಂದ ಬರಹಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ; ಇಂಗ್ಲಿಷಿನಿಂದ ಅನುವಾದವಾಗಿರುವ ಒಂದು ಕೃತಿಯನ್ನು ಬಿಟ್ಟರೆ ಇನ್ನು ಉಳಿದವುಗಳೆಲ್ಲಾ ಭಾರತೀಯ ಭಾಷೆಗಳಿಂದ ಬಂದವುಗಳೇ ಆಗಿವೆ. ಬರಹದ ಸ್ವರೂಪ ತಾತ್ವಿಕ ನೆಲೆ ಎರಡನ್ನು ಇಲ್ಲಿ ಗಮನದಲ್ಲಿಟ್ಟುಕೊಳ್ಳಲಾಗಿದೆ; ಕನ್ನಡ ಭಾಷೆಯಲ್ಲಿ ಈ ಕೃತಿಗಳು ತಾಳಿರುವ ಸ್ವರೂಪವನ್ನು ಗಮನಿಸಲಾಗಿದೆಯೇ ಹೊರತು, ಮೂಲ ದೊಂದಿಗೆ ಯಾವ ಕೃತಿಯನ್ನು ಹೋಲಿಸಿಲ್ಲ. ಕಳೆದ ಬಾರಿ ಬಂದ ಕೃತಿಗಳ ಸಂಖ್ಯೆಗೂ ಈ ಬಾರಿಗೂ ಅಂಥ ವ್ಯತ್ಯಾಸವೇನಿಲ್ಲ.

ಠಾಗೂರರ ಮಾನವತಾ ಸಿದ್ಧಾಂತ

ಮೂಲ – ಹಿರಣ್ಮಯ ಬ್ಯಾನರ್ಜಿ : ಅನು – ಹೆಚ್. ಕೆ. ರಾಮಚಂದ್ರಮೂರ್ತಿ ರವೀಂದ್ರ ಭಾರತಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಪ್ರೊಫೆಸರ್ ಹಿರಣ್ಮಯ ಬ್ಯಾನರ್ಜಿಯವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಮಾಡಿದ ಮೂರು ಇಂಗ್ಲಿಷ್ ಭಾಷಣಗಳ ಕನ್ನಡ ಅನುವಾದ ಈ ಕೃತಿ. ಕನ್ನಡಿಸಿದವರು ಶ್ರೀ ಹೆಚ್. ಕೆ. ರಾಮಚಂದ್ರಮೂರ್ತಿ.

ಮೊದಲ ಭಾಷಣದಲ್ಲಿ ಮಾನವತಾ ಸಿದ್ಧಾಂತ ಎಂಬ ಪರಿಕಲ್ಪನೆಯ ವ್ಯಾಖ್ಯೆ, ತಾವು ಅದನ್ನು ಬಳಸುತ್ತಿರುವ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ. 'ದೈವ ಶ್ರದ್ಧೆಗಿಂತ ಹೆಚ್ಚಾಗಿ ಮಾನವ ಹಿತಾಸಕ್ತಿಯನ್ನು ಕುರಿತು ಚಿಂತಿಸುವಿಕೆ' ಎಂಬ ಅರ್ಥದಲ್ಲಿಯೇ ಬಳಸಲು ಇಚ್ಛಿಸಿದ್ದರೂ, ಮುಂದಿನ ಅವರ ಚಿಂತನೆಯಲ್ಲಿ ಹಾಗಾಗಿಲ್ಲ. ದೈವದ, ಧರ್ಮದ ಸೂಕ್ಷ್ಮಗಳ ಹಿನ್ನೆಲೆಯಲ್ಲಿಯೇ ರವೀಂದ್ರನಾಥ ಠಾಗೂರರ ಮಾನವತಾ ಸಿದ್ಧಾಂತವನ್ನು ವಿವೇಚಿಸಿದ್ದಾರೆ.

ಹಿರಣ್ಮಯ ಬ್ಯಾನರ್ಜಿಯವರ ಆಲೋಚನಾ ಕ್ರಮ ಮೂಲಭೂತವಾಗಿ ರಿಲಿಜಿಯಸ್ ಆದದ್ದು; ಠಾಗೂರರ ಚಿಂತನೆಯ ಎಲ್ಲ ಶ್ರೇಷ್ಠತೆಗಳನ್ನು, ಸಾಧನೆಗಳನ್ನು ಬ್ಯಾನರ್ಜಿಯವರು ಅರ್ಥೈಸಿಕೊಳ್ಳು ವುದು ಈ ನೆಲೆಯಲ್ಲಿಯೇ. ಆದುದರಿಂದಲೇ ಹಿರಣ್ಮಯ್ಯ ಬ್ಯಾನರ್ಜಿಯವರ ವಿವೇಚನೆ ಅನೇಕ ಕಡೆ ಅಸಮಗ್ರವಾಗುತ್ತದೆ, ಬ್ಯಾನರ್ಜಿಯವರ ಈ ಕೆಳಗಿನ ಮಾತುಗಳನ್ನು ಗಮನಿಸಬಹುದು.

'ವೈಜ್ಞಾನಿಕವಾಗಿರುವ, ಅಜ್ಞೇಯತಾವಾದದ ಮೇಲೆ ನೆಲಸಿರುವ ಕಾಂಟ್‌ನ ಮಾನವತಾ ಸಿದ್ಧಾಂತಕ್ಕೂ, ಧರ್ಮದರ್ಶನಗಳ ಮೇಲೆ ನಿಂತ ಭಾರತೀಯ ಮಾನವತಾ ಸಿದ್ಧಾಂತಕ್ಕೂ ಬೇಕಾದಷ್ಟು ವ್ಯತ್ಯಾಸವಿದೆ......ಠಾಗೂರರ ಮಾನವತಾ ಸಿದ್ಧಾಂತವು ಮೇಲೆ ಹೇಳಿದ ಎರಡನೆಯ ರೀತಿಯದು. ಅದು ಅವರ ಪ್ರಬಲ ದೈವಭಕ್ತಿಯಿಂದ ಹುಟ್ಟಿದುದು.' [ಪು. ೪]

ಠಾಗೂರರ ಮಾನವತಾ ಸಿದ್ಧಾಂತ ಪ್ರಬಲ ದೈವ ಭಕ್ತಿಯಿಂದ ಹುಟ್ಟಿತು ಎನ್ನುವ ಮಾತು ಠಾಗೂರರ ಚಿಂತನಾಕ್ರಮದ ಬೆಳವಣಿಗೆಯನ್ನು ಸರಳೀಕರಿಸಿ ಬಿಡುತ್ತದೆ. ಮತ್ತು ಈ ಮಾತು ಸಮ ಕಾಲೀನ ಭಾರತೀಯ ಪರಿಸರದ ಸಂಬಂಧಗಳ ಪ್ರಭಾವವನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎಂಬ ಅನುಮಾನ ಕೂಡಾ ತರಿಸುತ್ತದೆ.

ಠಾಗೂರರ ಕಾವ್ಯವನ್ನಾಗಲೀ, ಅವರ ಚಿಂತನೆಯ ಬೆಳವಣಿಗೆಯನ್ನಾಗಲೀ ಕುರಿತು ಮಾಡುವ ವಿಶ್ಲೇಷಣೆ ಸಮಗ್ರವಾಗುವುದು ಸಮಕಾಲೀನ ಬೆಂಗಾಲೀ ಪರಿಸರದ ಹಿನ್ನಲೆಯನ್ನು ಲೆಕ್ಕಕ್ಕೆ

ತೆಗೆದುಕೊಂಡಾಗಲೆ. ವಾಸ್ತವವಾಗಿ ಬಂಗಾಳದಲ್ಲಿ ಮಾನವತಾವಾದ ಒಂದು ಪ್ರಬಲ ಚಿಂತನೆಯಾಗಿ ರೂಪುಗೊಂಡದ್ದು ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಎನ್ನುವುದು ಖಚಿತ. ಭಾರತೀಯ ಪುನರುಜ್ಜೀವನದ ಹಿನ್ನೆಲೆಯ ಶಕ್ತಿಗಳನ್ನು ಈ ಸಂದರ್ಭದಲ್ಲಿ ಗಮನಿಸುವುದು ಅನಿವಾರ್ಯ. ಠಾಗೂರರ ವ್ಯಕ್ತಿತ್ವ. ಕಾವ್ಯ ರೂಪಗೊಂಡದ್ದು ಈ ಎಲ್ಲ ವಾತಾವರಣದ ಮಧ್ಯೆ, ಚರಿತ್ರೆಯಲ್ಲಾದ ಚಲನೆಗೆ ಅನುಗುಣವಾಗಿ ಮಾನವತಾವಾದ ಒಂದು ನಿರ್ದಿಷ್ಟ ರೂಪ ಪಡೆಯಿತು. ಠಾಗೂರರಿಗೆ ಸಂಬಂಧಿಸಿದ ಹಾಗೆ, ದೈವಭಕ್ತಿ ಇದಕ್ಕೆ ಪೂರಕವಾಗಿರಬಹುದು, ಅಷ್ಟೆ.

ರವೀಂದ್ರನಾಥ ಠಾಗೂರರನ್ನು ಧಾರ್ಮಿಕ ಕವಿ ಎನ್ನುವ ಅರ್ಥದಲ್ಲಿಯೇ ಬ್ಯಾನರ್ಜಿಯವರು ವ್ಯಾಖ್ಯಾನಿಸುತ್ತಾರೆ. [ಉದಾಹರಣೆಗೆ—'ಭಗವಂತನ ಮೇಲಿನ ಪ್ರೇಮ, ಅವನೊಡನೆ ನಿಕಟ ಸಂಬಂಧವನ್ನು ಪಡೆಯಬೇಕೆನ್ನುವ ಹಂಬಲ—ಇವೇ ಅವರ ಕಾವ್ಯದ ಕೇಂದ್ರ ವಸ್ತು...' ಹೀಗೆ ಕಾವ್ಯವು ಅವರ ಧಾರ್ಮಿಕ ಚಿಂತನೆಗಳಿಗೆ ಅಭಿವ್ಯಕ್ತಿ ನೀಡುವ ಮುಖ್ಯ ಸಾಧನವಾಯಿತು'—ಮುಂತಾದ ವಾಕ್ಯಗಳು]. ಆದರೆ ಅಕ್ಕಮಹಾದೇವಿ, ಹರಿಹರ ಮುಂತಾದವರನ್ನು ಧಾರ್ಮಿಕ ಕವಿಗಳು ಎಂದು ಕರೆಯುವಷ್ಟು ಧೈರ್ಯದಿಂದ ಠಾಗೂರರನ್ನು ಕರೆಯಲಾಗುವುದಿಲ್ಲ. ಠಾಗೂರರ ಕಾವ್ಯ ಒಳಗೊಳ್ಳುವ ದ್ವಂದ್ವಗಳ ಸ್ವರೂಪದಲ್ಲಿ, ಸಮಕಾಲೀನ ವೈಷಮ್ಯಗಳನ್ನು ದಕ್ಕಿಸಿಕೊಳ್ಳುವ ಪರಿಮಾಣದಲ್ಲಿ, ಠಾಗೂರರು ಅತ್ಯಂತ ಉನ್ನತ ಹಂತವನ್ನು ಸಾಧಿಸಿ ಧಾರ್ಮಿಕ ಕವಿಗಿಂತ ಮೇಲೇರುತ್ತಾರೆ. ಸಮಕಾಲೀನ-ಸಾರ್ವತ್ರಿಕ ದ್ವಂದ್ವಗಳನ್ನು ಅರಗಿಸಿಕೊಂಡ ನಿಜವಾದ ಮಾನವತಾವಾದಿ ಕವಿಯಾಗುತ್ತಾರೆ. ಏಕೆಂದರೆ ರಿಲಿಜಿಯಸ್ ತುಡಿತಗಳನ್ನು, ಹುಡುಕಾಟಗಳನ್ನು ಒಳಗೊಂಡ ಕಾವ್ಯವೆಲ್ಲವೂ ಮಾನವತಾ ಕಾವ್ಯವಲ್ಲ. ಆದರೆ ಮಾನವತಾ ಕಾವ್ಯದಲ್ಲಿ ನಿಜವಾದ ಧಾರ್ಮಿಕ ತುಡಿತಗಳೂ, ಸಂಘರ್ಷಗಳೂ ಇರಲು ಸಾಧ್ಯ. ಈ ಬಗೆಯ ಕಾವ್ಯಕ್ಕೆ ಠಾಗೂರ್ ಉತ್ತಮ ಸಾಕ್ಷಿ. ಮಾನವತಾ ಸಿದ್ಧಾಂತ ಜೀವನದ ಕ್ರೂರ ವಾಸ್ತವಗಳಿಗೆ ಕಣ್ಣು ಮುಚ್ಚುವುದಿಲ್ಲ. ಅದಕ್ಕೆ ಸ್ಪಂದಿಸಿಯೇ ಬದಲಾವಣೆಯ ಅನಿವಾರ್ಯತೆಯನ್ನು ಹೇಳುತ್ತದೆ. ಈ ಸೂಕ್ಷ್ಮವನ್ನು ಠಾಗೂರರಿಗೆ ಸಂಬಂಧಿಸಿದ ಹಾಗೆ ಬ್ಯಾನರ್ಜಿಯವರು ಗಮನಿಸಿದಂತೆ ಕಾಣುವುದಿಲ್ಲ. ಮೇಲೆ ಹೇಳಿದ ಅರ್ಥದಲ್ಲಿ ಠಾಗೂರರು ನಿಜವಾದ ಮಾನವತಾವಾದಿ ಕವಿ. ಜೀವನದ ತುಡಿತಗಳನ್ನು. ಸೂಕ್ಷ್ಮಗಳನ್ನು, ವೈಷಮ್ಯಗಳನ್ನು. ಪಲಾಯನಕ್ಕೆ ಹೊರತಾದ ಅನುಭಾವದಕಂಪನ, ರೊಮಾಂಚನಗಳನ್ನು. ಸಮಕಾಲೀನತೆಯ ತಿಳುವಳಿಕೆಯನ್ನು ಒಟ್ಟಿಗೇ ಹಿಡಿದಿಟ್ಟ ಕವಿ ಠಾಗೂರ್. ಆದ್ದರಿಂದ ಠಾಗೂರರ ಕಾವ್ಯದ ಮುಖ್ಯ ನೆಲೆಗಳನ್ನು ವಿವರಿಸುವಾಗ ಧಾರ್ಮಿಕ ಎಂದಷ್ಟೇ ಹೇಳಿದರೆ ಠಾಗೂರರಿಗೆ ನ್ಯಾಯ ಸಲ್ಲಿಸಿದಂತಾಗುವುದಿಲ್ಲ ಎಂಬ ಅನುಮಾನ ನನಗಿದೆ.

ಬ್ಯಾನರ್ಜಿಯವರು ತಮ್ಮ ಎರಡನೆಯ ಭಾಷಣದಲ್ಲಿ ಠಾಗೂರರ ಮಾನವತಾವಾದದ ತುಂಬು ಹೃದಯವಂತಿಕೆಯನ್ನು ಕೆಲವು ಸಮರ್ಥ ಪದ್ಯಗಳ ಮೂಲಕ ವಿವರಿಸಿದ್ದಾರೆ. ದೀನದಲಿತರ ಬಗ್ಗೆ, ತುಳಿತಕ್ಕೊಳಗಾದವರ ಬಗ್ಗೆ ಠಾಗೂರರ ಗಾಢಾ ಸ್ಪಂದನವನ್ನು ವಿವರಿಸಿದ್ದಾರೆ. ಠಾಗೂರರ ಉತ್ಕಟ ದೈವಿಕ ಅನ್ವೇಷಣೆ ದೇವರನ್ನು ಮಾನವೀಕರಿಸುವುದರಲ್ಲಿ ಕೊನೆಯಾಗುತ್ತದೆ ಎಂಬ ಮಹತ್ವದ ಅಂಶವನ್ನು ಬ್ಯಾನರ್ಜಿಯವರು ಗುರುತಿಸಿದ್ದಾರೆ.

ಆದರೆ ಠಾಗೂರರ ಮಾನವತಾ ವಾದವನ್ನು ವಿವೇಚಿಸಲು ಬ್ಯಾನರ್ಜಿಯವರು ಉದಾಹರಿಸಿರುವುದು 'ಗೀತಾಂಜಲಿಯ' ಸಾಲುಗಳನ್ನು. ಠಾಗೂರರ ಮಾನವತಾ ಸಿದ್ಧಾಂತ ಮತ್ತು ಕಾವ್ಯದ ಬೆಳವಣಿಗೆಯಲ್ಲಿ ಗೀತಾಂಜಲಿ' ಪ್ರಮುಖ ಘಟ್ಟವಲ್ಲ. ವಾಸ್ತವವಾಗಿ ಗೀತಾಂಜಲಿಯ ನಂತರವೇ ಠಾಗೂರರ ಮಾನವತಾ ಸಿದ್ಧಾಂತ ಇನ್ನಷ್ಟು ಆಳ ವಿಸ್ತಾರಗಳನ್ನು ಕೂಡಿಸಿಕೊಂಡಿದ್ದು. ಮಾನವೀಯತೆ ಮತ್ತು ವಾಸ್ತವತೆಯ ನಡುವೆ ಇರುವ ಸಂಬಂಧಗಳನ್ನು ಠಾಗೂರರು ಸೂಕ್ಷ್ಮಾತಿ ಸೂಕ್ಷ್ಮವಾಗಿ ಅರ್ಥಮಾಡಿಕೊಂಡದ್ದು ಇಲ್ಲಿಂದಾಚೆಗೆಯೇ. ಆ ಜಗತ್ತಿನ ಕ್ರೂರ ವಾಸ್ತವವನ್ನು, ಸಮಕಾಲೀನ ಸ್ಥಿತಿಯನ್ನು ಅರ್ಥಮಾಡಿಕೊಂಡು ಅದರ ಬದಲಾವಣೆಗಾಗಿ ಹಾತೊರೆಯುವ ಠಾಗೂರರ

ಮಾನವತಾ ಹೃದಯ ಹೆಚ್ಚು ಸ್ಫುಟವಾಗಿ ವ್ಯಕ್ತವಾಗುವುದು 'ಗೀತಾಂಜಲಿ' ಯ ನಂತರದಲ್ಲಿ. ಠಾಗೂರರು ಎಲ್ಲಕ್ಕಿಂತ ಮುಖ್ಯವಾಗಿ ಒಬ್ಬ ಕವಿ ಎಂಬುದನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಈ ಬೆಳವಣಿಗೆಯನ್ನು ಗಮನಿಸದೆ ಹೋದದ್ದು ಈ ಕೃತಿಯ ಮುಖ್ಯ ಕೊರತೆ; ಜೊತೆಗೆ ಠಾಗೂರರ ಮಾನವತಾ ಸಿದ್ಧಾಂತದಲ್ಲಿ 'ಸೃಜನಾತ್ಮಕ ಐಕ್ಯತೆ' ಪರಿಕಲ್ಪನೆಯನ್ನು ಸ್ಪಷ್ಟಪಡಿಸುವ ಅಗತ್ಯವಿತ್ತು.

ಜನಾಂಗದ ಧಾರ್ಮಿಕ ಕುತೂಹಲಗಳು ಠಾಗೂರರನ್ನು ಮಾನವತಾವಾದದಿಂದ ದೂರ ಎಳೆದೊಯ್ಯಲಿಲ್ಲ. ಚರಿತ್ರೆಯ ಬಗ್ಗೆ, ಬದುಕಿನ ಬಗ್ಗೆ ಅಪಾರ ಆಶಾವಾದಿಯಾಗಿದ್ದ ಕವಿ ಠಾಗೂರ್. ಈ ಕಾರಣದಿಂದ ಯೇಟ್ಸ್ ಕವಿಯ ದಿಗ್ಭ್ರಮೆಗಿಂತ ಠಾಗೂರರ ಅನ್ವೇಷಣೆ ಹೆಚ್ಚು ಅರ್ಥಪೂರ್ಣವಾದದ್ದು.

ನಾನು ಮೇಲೆ ಹೇಳಿದ ಅಂಶಗಳನ್ನೆಲ್ಲಾ ಕೇವಲ ಮೂರು ಭಾಷಣಗಳಲ್ಲಿ ಚರ್ಚಿಸಲು ಸಾಧ್ಯ ವಿಲ್ಲ ಎಂಬ ಮಾತೂ ಸಹ ಈ ಸಂಧರ್ಭದಲ್ಲಿ ಬರಬಹುದು. ಆದರೆ ಈ ಅಂಶಗಳು ಅವರ ಆಲೋಚನಾ ಚೌಕಟ್ಟಿನಲ್ಲಿ ತೆಳುವಾಗಿಯಾದರೂ ಕಾಣಿಸಿಕೊಳ್ಳುವುದಿಲ್ಲ ಎಂಬುದೇ ಇಲ್ಲಿಯ ಮುಖ್ಯ ಪ್ರಶ್ನೆ.

ಇಷ್ಟೆಲ್ಲಾ ಮಿತಿಗಳೊಡನೆಯೂ ಈ ವರ್ಷ ಅನ್ಯಸಾಹಿತ್ಯದಿಂದ ಬಂದ ಎಲ್ಲ ಪುಸ್ತಕಗಳಿಗಿಂತ ಇದು ಹೆಚ್ಚು ಪ್ರಬುದ್ಧವಾದದ್ದು. ಶ್ರೀ ಹೆಚ್. ಕೆ. ರಾಮಚಂದ್ರಮೂರ್ತಿಯವರ ಅನುವಾದ ಸೊಗಸಾಗಿದೆ.

ತಿಳಿವು-ಗೆಲುವು (ಮೂಲ : ರಾಮಗೋಪಾಲನ್ ಅನು : ಚಿರಂಜೀವಿ)

ನಮ್ಮ ನೆರೆಯ ಭಾಷೆ ತಮಿಳಿನ 'ಜ್ಞಾನಮಲರ್' ಎಂಬ ಕೃತಿಯ ಕನ್ನಡ ಅನುವಾದ ಈ ಕೃತಿ. 'ತ್ಯಾಗಭೂಮಿ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದು 'ಕಂಚಿ ಕಾಮಕೋಟಿ ಪೀಠದ ಶ್ರೀ ಜಗದ್ಗುರುಗಳಿಂದಲೂ ಮೆಚ್ಚಿಕೆ, ಹರಕೆ ಪಡೆಯಿತೆಂದು ಈ ಪುಸ್ತಕದ ಬಗ್ಗೆ ಹೇಳಲಾಗಿದೆ.

ಜನಸಾಮಾನ್ಯರಿಗೆ ಅರ್ಥವಾಗದ ಗಹನತತ್ವಗಳನ್ನು (?) ಸರಳವಾಗಿ ಹೇಳುವುದು ಇಲ್ಲಿಯ ಉದ್ದೇಶ. ಇಲ್ಲಿ ಎಲ್ಲದರ 'ಗಹನತತ್ವ'ವನ್ನೂ ವಿವರಿಸಲಾಗಿದೆ. ಕೆಲವು ಆಲೋಚನೆಗಳನ್ನು ನೋಡಬಹುದು. ಅದಕ್ಕೆ ಯಾವ ವ್ಯಾಖ್ಯಾನವೂ ಬೇಕಿಲ್ಲ.

೧. "ಕಳೆದ ಕೆಲವು ತಲೆಮಾರುಗಳಿಗೂ ಹಿಂದೆ ನಮ್ಮ ತಾಯಂದಿರು ಒಳ್ಳೆಯ ಆರೋಗ್ಯ ದಿಂದ ಇದ್ದರು. ಕಾರಣ, ಕೆಲವು ನಿಯಮಗಳನ್ನು ಕಟ್ಟುಪಾಡುಗಳನ್ನು ಪಾಲಿಸುತ್ತಾ ಶಾಂತವಾದ ಬಾಳ್ವೆಯನ್ನು ನಡೆಸುತ್ತಿದ್ದರು. ಮಕ್ಕಳಿಗೆ ಬಹಳಷ್ಟು ಹಾಲೂಡಿಸಿದರೂ ಕೂಡ ಅವರ ಆರೋಗ್ಯ ಕೆಡುತ್ತಿರಲಿಲ್ಲ. ಇಂದು ಏಕೆ ಕೆಡಬೇಕು?

"ನಾಗರಿಕತೆ ಎಂಬ ಹೆಸರಿನಲ್ಲಿ ಕಣ್ಮುಚ್ಚಿಕೊಂಡು ಪರಕೀಯನಾಡಿನ ಆಚಾರಗಳ ಬೆನ್ನ ಹಿಂದೆ ಓಡುವ ಅಭ್ಯಾಸ ನಮ್ಮನ್ನು ಸಂಪೂರ್ಣವಾಗಿ ಮೃಗಗಳನ್ನಾಗಿ ಮಾಡುತ್ತಿದೆ."

೨. "ದೇವರನ್ನು ಸೇರುವುದು ನಮ್ಮ ನಾಡಿನ ಮೂಲಗುರಿ."

೩. "ಎಲ್ಲಿ ಕೆಲಸ ಸಿಕ್ಕಿದರೂ ಎಷ್ಟು ಸಂಬಳ ಸಿಕ್ಕಿದರೂ ಸೇರಿಬಿಡುವುದು ಎನ್ನುವ ನಿರ್ಧಾರಕ್ಕೆ ಯುವಕರು ಬರಬೇಕು".

ಈ ಪುಸ್ತಕದಲ್ಲಿರುವ ಆಲೋಚನಾ ಕ್ರಮ ಅತ್ಯಂತ ಅಪಾಯಕಾರಿಯಾದದು; ಪ್ರಗತಿಯನ್ನು, ಚರಿತ್ರೆಯ ಚಲನೆಯನ್ನು ಸೂಕ್ಷ್ಮವಾಗಿ ವಿರೋಧಿಸುವ ಈ ಪುಸ್ತಕದಲ್ಲಿ ಶ್ರೀ ಗುರೂಜಿ ಎಂಬುವರು ಆಗಾಗ ಬಂದು ಹೋಗುತ್ತಾರೆ. ಈ ಪುಸ್ತಕದ ಅನುವಾದದ ಶೈಲಿ ಇನ್ನಷ್ಟು ಸಹಜವಾಗಿರ ಬಹುದಿತ್ತು.

ವೀರ ಜಿನೇಂದ್ರ ಚರಿತೆ :

ಇದು ಡಾ. ಹೀರಾಲಾಲ್ ಜೈನ್, ಡಾ. ಆ. ನೇ. ಉಪಾಧ್ಯೆಯವರುಗಳ ಜಂಟೀ ಸಂಕಲನ. ಅದನ್ನು ಕನ್ನಡಕ್ಕೆ 'ಸ್ವತಂತ್ರ' ರೂಪಾಂತರಮಾಡಿರುವುದಾಗಿ ಲೇಖಕ ಶ್ರೀ ಹಂ. ಪ. ನಾಗರಾಜಯ್ಯನವರು ಹೇಳುತ್ತಾರೆ. 'ಸ್ವತಂತ್ರ ರೂಪಾಂತರ' ಎನ್ನುವುದರ ಸ್ವರೂಪವನ್ನು ಲೇಖಕರು ಹೀಗೆ ವಿವರಿಸುತ್ತಾರೆ.

'ಕನ್ನಡ ರೂಪಾಂತರ ಆದಷ್ಟೂ ಕನ್ನಡದಲ್ಲಿ ಸಿಗುವ ಇದಕ್ಕೆ ಸಂವಾದಿಯಾದ ಸಾಹಿತ್ಯ ಸಾಮಗ್ರಿಯನ್ನು ಅಳವಡಿಸಿಕೊಂಡಿದೆ'. ಆದರೆ ಈ ಪುಸ್ತಕದಲ್ಲಿ ಬಳಸಲಾಗಿದೆ ಎನ್ನಲಾಗಿರುವ ಕನ್ನಡದ ಸಾಮಗ್ರಿ ಪ್ರತ್ಯೇಕ ನೆಲೆಯನ್ನು ಸ್ಥಾಪಿಸಿಕೊಂಡಿಲ್ಲ. [ಒಂದು ರೀತಿಯ ಅನುಬಂಧ ದಂತಿರುವ ಕಡೆಯ 'ವೀರ ಜಿನಸ್ತುವ' ಕೆಲವು ಪದ್ಯಗಳನ್ನು ಬಿಟ್ಟರೆ]. ಆದ್ದರಿಂದ ಮೂಲ ಕೃತಿಯ ಸ್ವರೂಪ ಮತ್ತು ಸ್ವತಂತ್ರ ರೂಪಾಂತರ ಇವುಗಳ ನಡುವಣ ಸಂಬಂಧ ಯಾವ ಸ್ವರೂಪದ್ದೆಂದು ತಿಳಿಯುವಂತಿಲ್ಲ. ಕನ್ನಡ ಸಾಮಗ್ರಿಯ ಅಭ್ಯಾಸ ಸೂಚಿಯನ್ನಾಗಲೀ, ಗ್ರಂಥಋಣ ಇದ್ದರೆ, ಅದನ್ನೂ ಪಟ್ಟಿಮಾಡಬಹುದಿತ್ತು.

'ಮಹಾವೀರರ ಜೀವನಕ್ಕೆ ಸಂಬಂಧಿಸಿರುವ ಕನ್ನಡ ಸಾಹಿತ್ಯ' ಇಪ್ಪತ್ತೈದು ಸಾಲುಗಳಲ್ಲಿ ಕನ್ನಡ ಕವಿಗಳ ದೊರೆತ, ದೊರೆಯದಿರುವ ಕೃತಿಗಳನ್ನು ಉಲ್ಲೇಖಿಸುತ್ತಾರೆ. ಪ್ರಾಯಶಃ ಈ ಭಾಗ ರೂಪಾಂತರಕಾರರದೆಂದು ತಿಳಿಯಬಹುದು.

'ವೀರ ಜಿನೇಂದ್ರ ಚರಿತೆ'ಯ ಸಂಕಲನಕಾರರ ಪ್ರೌಢವಾದ ವಿಷಯ, ನಿರೂಪಣ ಕ್ರಮ ಮೌಲಿಕವಾದದ್ದಾಗಿದೆ. ಮಹಾವೀರನ ಬಗೆಗೆ ಐತಿಹಾಸಿಕ ಸಾಮಗ್ರಿ ಇದ್ದರೂ ಕೂಡಾ ವಿಶ್ಲೇಷಣೆಯಲ್ಲಿ ಅದರ ಬಳಕೆ ಅಷ್ಟಾಗಿ ಇಲ್ಲದಿರುವುದು ಒಂದು ಕೊರತೆಯಾಗಿ ಕಾಣುತ್ತದೆ.

ಭಾರತದ ಪ್ರಮುಖ ಧರ್ಮವೊಂದರ ಮುಖ್ಯ ಪುರುಷನಾದ ಮಹಾವೀರನ ಜೀವನ, ತತ್ವ ಗಳಿಗೆ ಸಂಬಂಧಿಸಿದ ಹಾಗೆ ಈ ಗ್ರಂಥ ನಿಜಕ್ಕೂ ಕುತೂಹಲಕಾರಿಯಾದದ್ದು ; ಈ ಥರದ ಕೃತಿಯಲ್ಲಿ ಸಹಜವಾಗಿ ಎಲ್ಲವೂ ಅಲೌಕಿಕದ ಮಟ್ಟದಲ್ಲಿ, ಪವಾಡಗಳ ಮಟ್ಟದಲ್ಲಿ ಬದುಕು ನಿರೂಪಿತ ವಾಗಿದ್ದರೂ, ಭಾರತೀಯ ಧರ್ಮಚಿಂತನೆಯ ಅನೇಕ ವೈಶಿಷ್ಟ್ಯವನ್ನು ತಿಳಿಯಲು ಈ ಪುಸ್ತಕ ನೆರವಾಗುತ್ತದೆ.

ರಾಮಾಯಣ ಸುಧೆ : ರಾಮಾಯಣದ ಆಯ್ದ ಶ್ಲೋಕಗಳ ಕನ್ನಡ ಅನುವಾದ. ಅನುವಾದಕರು ನಾರಾಯಣರಾವ್ ತಾಳೀಕೋಟ.

ಈ ಕೃತಿ ರಾಮಾಯಣದಿಂದ ಆಯ್ದ – ಜೀವನಾನುಭವಗಳನ್ನೊಳಗೊಂಡ ಶ್ಲೋಕಗಳ ಅನುವಾದ. ವಿಚಾರ ಪ್ರಚೋದಕ ಸಂಗ್ರಹ ಇದೆಂದು ಹೇಳಲಾಗಿದೆ.

ರಾಮಾಯಣದ ಕಾಲದ ಆದರ್ಶಗಳು, ಜೀವನ ಮೌಲ್ಯಗಳು ಈಗಲೂ ಸಮಕಾಲೀನವೆ ಎನ್ನುವ ವಿಚಾರ ಮಂಥನವೂ ಈ ಕೃತಿಯ ಹಿಂದಿನ ಉದ್ದೇಶವೆಂದು ಕಂಡುಬಂದರೂ, ಅವುಗಳ ಸ್ಪಷ್ಟ ವಿವೇಚನೆಗೆ ಈ ಪುಸ್ತಕದಲ್ಲಿರುವ ಶ್ಲೋಕಗಳು ನೆರವಾಗುವುದಿಲ್ಲ.

ಯಾವಾಗಲೂ ಮೌಲ್ಯ ಎಂಬುದು ಸಾಪೇಕ್ಷವಾದದ್ದು ; ಚಾರಿತ್ರಿಕ ಒತ್ತಡಗಳಿಗೆ, ಸಾಮಾಜಿಕ ಶ್ರೇಣೀಕರಣಗಳ ಒತ್ತಾಯಗಳಿಗೆ ತಕ್ಕಂತೆ ರೂಪುಗೊಳ್ಳುವಂಥದು. ರಾಮಾಯಣದಿಂದ ಬಂಡಿ ಬಂಡಿ ಕೋಟ್ ಮಾಡಿ ಈವತ್ತಿನ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಸಮರ್ಥಿಸುವ ಅನೇಕ ಪಂಡಿತರಿದ್ದಾರೆ ನಮ್ಮಲ್ಲಿ. ಆ ಜನ ಈ ಪುಸ್ತಕದ ಶ್ಲೋಕಗಳನ್ನು ಕೂಡಾ ಬಳಸಿಕೊಳ್ಳಲು ಸಾಧ್ಯವಿದೆ.

ಅನುವಾದದೊಂದಿಗೆ ಅಲ್ಲಲ್ಲಿ ಸಂದರ್ಭವನ್ನು ಸೂಚಿಸಲಾಗಿದೆ. ಗದ್ಯಾನುವಾದವಾಗಿರುವುದರಿಂದ ಮೂಲ ಕಾವ್ಯತ್ವದ ಒಂದೆಳೆಯನ್ನೂ ಸಹ ಇಲ್ಲಿ ಕಾಣಲಾಗುವುದಿಲ್ಲ.

ಸಂಖ್ಯೆ, ವೈವಿಧ್ಯತೆ ಎರಡೂ ದೃಷ್ಟಿಗಳಿಂದ ಈ ಬಾರಿಯ 'ಅನ್ಯ ಸಾಹಿತ್ಯದಿಂದ' ಪ್ರಕಾರ ನಿರಾಸೆ ಹುಟ್ಟಿಸುತ್ತದೆ. ಕನ್ನಡದ ವಿಚಾರವಂತ ಜನ ಹಲವು ಹತ್ತು ದಿಕ್ಕುಗಳ ಚಿಂತನೆಗಳನ್ನು ಅರಗಿಸಿಕೊಂಡು ಕನ್ನಡಕ್ಕೆ ತರುವ ಅಗತ್ಯ ಎದ್ದು ಕಾಣುತ್ತದೆ. ಅಂಥ ನೂರುಸಾವಿರ ಪ್ರಯತ್ನಗಳಾದಾಗಲೇ ಕನ್ನಡ ಮನಸ್ಸು ಹೊಸ ಆಯಾಮಗಳಿಗೆ ಹಬ್ಬಲು ಸಾಧ್ಯ.

ಸಂಕೀರ್ಣ

ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ

ಈ ಸಲದ ಸಂಕೀರ್ಣವಿಭಾಗಕ್ಕೆ ಬಂದಿರುವ ಒಟ್ಟು ಹದಿಮೂರು ಪುಸ್ತಕಗಳ ಸಮೀಕ್ಷೆ ಇಲ್ಲಿದೆ. ಇವುಗಳಲ್ಲಿ ಒಂದು ವಿಶ್ವಕೋಶ ; ಒಂದು ಗ್ರಂಥ ಸೂಚಿ ; ಒಂದು ಪುರಾಣ–ಭಾರತ ಕೋಶ ; ಒಂದು ಕಾನೂನು ಪದಕೋಶ ; ಉಳಿದವು ನಾನಾ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳು.

ಅರವಿಂದ ದರ್ಶನ ಅರವಿಂದರ ಜೀವನ, ಕಾವ್ಯ, ಸಾಧನೆ ಮತ್ತು ದರ್ಶನಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣ ವಿಭಾಗವು ಸಂಕಲಿಸಿದ ಪ್ರಬಂಧಗಳ ಸಂಕಲನ. ಇದರಲ್ಲಿ ಒಟ್ಟು ಹನ್ನೊಂದು ಗದ್ಯ ಲೇಖನಗಳಿವೆ. ಪುಸ್ತಕದ ಆರಂಭ ಮತ್ತು ಅಂತ್ಯಗಳಲ್ಲಿ ಅರವಿಂದರನ್ನು ಕುರಿತ ಒಂದೊಂದು ಪದ್ಯ ಇವೆ. ಸಿಂಪಿ, ಲಿಂಗಣ್ಣ, ಸ. ಸ. ಮಾಳವಾಡ ಮತ್ತು ಭಾರತೀ ರಮಣಾಚಾರ್ಯರ ಲೇಖನಗಳು ಅರವಿಂದರ ಬಾಹ್ಯ ಜೀವನದ ಅಂಶಗಳನ್ನು ಪ್ರಧಾನವಾಗಿ ಹೇಳಿದರೆ ಬೇಂದ್ರೆ ಮತ್ತು ಗೋಕಾಕರ ಲೇಖನಗಳು ಅರವಿಂದರು ರಚಿಸಿದ ಕಾವ್ಯಗಳನ್ನು ದೃಷ್ಟಿಯಲ್ಲಿಟ್ಟು ಬರೆದ ಲೇಖನಗಳಾಗಿವೆ. ಅರವಿಂದರ ತತ್ತ್ವದರ್ಶನವನ್ನು ಕುರಿತು ಹೇಳುವ ಲೇಖನಗಳಲ್ಲಿ ಎನ್. ಎಸ್. ರಾಘವಾಚಾರ್ಯರ ಲೇಖನ ಬಿಗಿಯಾಗಿದ್ದರೂ ಓದುವವರಿಗೆ ಲಾಭದಾಯಕವಾಗಿದೆ. ಕೆ. ಬಿ. ರಾಮಕೃಷ್ಣರಾವ್ ಅವರಿಂದ ರಚಿತವಾದ "ಬ್ರಹ್ಮಣಾ ಸಹಮೋದತೇ – ಶ್ರೀ ಅರವಿಂದ ದರ್ಶನ" ಎಂಬ ಲೇಖನ ಬರಿಯ ಪಾರಿಭಾಷಿಕ ಪದಗಳ ಬಲದಿಂದ ಚಲಿಸುತ್ತದೆಯೇ ಹೊರತು ಓದುಗನಿಗೆ ಸ್ಪಷ್ಟವಾದ ಯಾವ ತಿಳಿವನ್ನೂ ನೀಡುವುದಿಲ್ಲ. ಬೇಂದ್ರೆಯವರ ಬರಹದಲ್ಲಿ ವಿಚಾರದ ಜೊತೆಗೆ ಮಾತಿನ ಚೆಲ್ಲಾಟವೂ ಕಂಡುಬರುತ್ತದೆ ; ನಿದರ್ಶನಗಳ ಬೆಂಬಲವಿಲ್ಲದ ಪ್ರಶಂಸಾತ್ಮಕ ಹೇಳಿಕೆಗಳು ಮಾಲೆಗಟ್ಟಿಕೊಂಡು ಬರುತ್ತವೆ. ಇಡೀ ಬರೆಹ ಪ್ರೌಢವಾದ ಉಕ್ತಿಮಾಲೆಯಾಗಿದೆ. ಗೋಕಾಕರ "ಕವಿ ಶ್ರೀ ಅರಬಿಂದೊ" ಅರವಿಂದರ ಕಾವ್ಯದ ಬಗ್ಗೆ ಕೆಲವು ಅಭಿಪ್ರಾಯಗಳನ್ನು ತಕ್ಕ ನಿದರ್ಶನಗಳೊಂದಿಗೆ ಸ್ಪಷ್ಟವಾಗಿ ಹೇಳಲು ಹವಣಿಸುತ್ತದೆ.

ಭಾರತೀಯ ಪರಂಪರೆ ಭಾರತೀಯ ವಿದ್ಯಾಭವನದ ಪ್ರಕಟಣೆಯಾದ Indian Inheritance ಎಂಬ ಪುಸ್ತಕದ ಕನ್ನಡ ಅನುವಾದ. ಬೇರೆ ಬೇರೆ ಲೇಖಕರು ಬರೆದ ಲೇಖನಗಳನ್ನು ಒತ್ತಟ್ಟಿಗೆ ಸೇರಿಸಿ ಸಿದ್ಧಪಡಿಸಿದ ಒಂದು ಸಂಕಲನರೂಪವಾದ ಪುಸ್ತಕ ಇದು. ಭಾರತದ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ, ಇತಿಹಾಸ, ವಿಜ್ಞಾನ ಮೊದಲಾದ ವಿಷಯಗಳನ್ನು ಕುರಿತು ಹಿರಿಯ ಲೇಖಕರು ಬರೆದ ಬರೆಹಗಳು ಇದರಲ್ಲಿವೆ. ವಿವೇಕಾನಂದ, ಅರವಿಂದ, ಜವಾಹರಲಾಲ್ ನೆಹರೂ, ರಾಧಾಕುಮುದ್ ಮುಖರ್ಜಿ – ಹೀಗೆ ತಮ್ಮ ಕ್ಷೇತ್ರಗಳಲ್ಲಿ ತುಂಬ ಸಮರ್ಥರೆನ್ನಿಸಿಕೊಂಡ ವ್ಯಕ್ತಿಗಳ ಲೇಖನಗಳಿರುವ ಈ ಸಂಕಲನ ನಮ್ಮ ರಾಷ್ಟ್ರದ ಸ್ವರೂಪ ಕುರಿತ ಪ್ರಾಥಮಿಕ ಪರಿಚಯಕ್ಕೆ ಅಗತ್ಯವಾದ ಪುಸ್ತಕ. ಲೇಖನಗಳ ಅನುವಾದವನ್ನು ಬೇರೆ ಬೇರೆಯವರಿಂದ ಮಾಡಿಸಲಾಗಿದೆ.

ಸಾಹಿತ್ಯ ಭಾಗದ ಲೇಖನದ ಕಡೆಯಲ್ಲಿ ಒಂದು ತೊಡಕಿದೆ. ಪುರಾಣ - ಕಾವ್ಯದ ಕಥೆ ಎಂಬ ಶೀರ್ಷಿಕೆಯ ಅಡಿಯಲ್ಲಿ ಲೇಖಕರು ರಾಮಾಯಣ ಮಹಾಭಾರತಗಳೆರಡನ್ನೂ ಕುರಿತು ಮಾತನಾಡಲಿರುವುದಾಗಿ ಹೇಳಿದರೂ ಕೇವಲ ರಾಮಾಯಣದ ಕಥೆ ನಿರೂಪಿಸಿ ಮಹಾಭಾರತದ ಬಗ್ಗೆ ಚಕಾರವನ್ನೂ ಎತ್ತದೆ ಲೇಖನ ಮುಗಿಸಿ ಬಿಡುತ್ತಾರೆ. ಮೂಲದಲ್ಲಿಯೇ ಇದು ಹೀಗಿದೆಯೋ ಅಥವಾ ಮೂಲ ಲೇಖನದ ಭಾಗವೊಂದನ್ನು ಆಯ್ದುಕೊಳ್ಳಲು ಹೋಗಿ ಹೀಗೆ ತಪ್ಪಾಗಿದೆಯೋ ತಿಳಿಯದು.

ರಾಮಾಯಣ ಕಥೆಯ ನಿರೂಪಣೆಯಲ್ಲಿಯೂ ಒಂದು ತಪ್ಪಿದೆ. ಸೀತೆಯ ಕೈಹಿಡಿಯಲು ಬಂದ ರಾಜಕುಮಾರರಿಗೆ ಇಟ್ಟ ಪರೀಕ್ಷೆಯೆಂದರೆ ಹರಧನುವೆಂಬ ಬಿಲ್ಲನ್ನು ಮುರಿಯುವುದು ಎಂದು ಹೇಳಲಾಗಿದೆ. ಬಿಲ್ಲಿಗೆ ಹೆದೆಯೇರಿಸುವುದು ಪರೀಕ್ಷೆಯ ವಿಷಯವಾಗಿತ್ತೇ ಹೊರತು ಅದನ್ನು ಮುರಿಯುವುದಲ್ಲ. ರಾಮ ಅದಕ್ಕೆ ಹೆದೆಯೇರಿಸಲು ಹೋದಾಗ ಅವನು ಎಳೆದ ಬಲಕ್ಕೆ ಅದು ಮುರಿಯಿತು ಅಷ್ಟೆ.

ಶಿಕ್ಷಣದಲ್ಲಿ ಕ್ರಾಂತಿಕಾರಿ ರೂಸೋ ಎಸ್. ಬಿ. ಗಜೇಂದ್ರಗಡ್ ಅವರ ಗ್ರಂಥ. ರೂಸೋನ ಜೀವನ ಮತ್ತು ಅವನ ವಿಚಾರಾತ್ಮಕ ಬರೆಹಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ. ಶೈಕ್ಷಣಿಕ ಕ್ಷೇತ್ರಕ್ಕೆ ರೂಸೋನಿಂದ ಸಂದ ಕೊಡುಗೆಗೆ ವಿಶೇಷ ಗಮನ ಕೊಡಲಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನಡೆದ ಅನೇಕ ಪರಿವರ್ತನೆಗಳಿಗೆ ರೂಸೋನ ಸಿದ್ಧಾಂತಗಳೇ ಆಧಾರವಾಗಿವೆ. ತನ್ನ ಕಾಲದ ಶಿಕ್ಷಣ ಕ್ರಮದ ವಕ್ರತೆಗಳನ್ನು ಖಂಡಿಸಿ ನಿಜವಾದ ಶಿಕ್ಷಣದ ಸ್ವರೂಪವನ್ನು ಮಂಡಿಸಿದ ಒಬ್ಬ ಮೇಧಾವಿ ಅವನು. ಅವನ ಬರೆಹಗಳು ಸಾಮಾಜಿಕ, ಆರ್ಥಿಕ, ಹಾಗೂ ರಾಜಕೀಯ ಪರಿಸ್ಥಿತಿಗಳ ಮೂಲಭೂತವಾದ ಪರಿವರ್ತನೆಯನ್ನು ಕೋರುವಂಥವು. ಅಲ್ಲದೆ ಬಾಲ್ಯದಿಂದ ಪ್ರಬದ್ಧ ಸ್ಥಿತಿಯವರಿಗೆ ಮಾನವ ಜೀವನದ ಎಲ್ಲ ಮಜಲುಗಳನ್ನೂ ಪರಿಶಿಲೀಸುವಂಥವು. ಇಂಥ ವಿಚಾರಗಳನ್ನು ಒಂದು ಕಟ್ಟಿನಲ್ಲಿ ಹಿಡಿದುಕೊಡುವುದು ಸುಲಭ ಕೆಲಸವಲ್ಲ. ಈ ಶ್ರಮ ಸಾಧ್ಯವಾದ ಕೆಲಸವನ್ನು ಲೇಖಕರು ಸಾಧಿಸಿದ್ದಾರೆ. ಆದರೆ ಪುಸ್ತಕದಲ್ಲಿ ಅನೇಕ ಕಡೆ ಭಾಷೆಯನ್ನು ತಪ್ಪು ತಪ್ಪಾಗಿ ಬಳಸಲಾಗಿದೆ. "ಈ ನಿಮಿತ್ತದಿಂದ ರೂಸೋ ಹ್ಯೂಮನ ಕೂಡ ಅಕಾರಣ ಜಗಳವಾಡಿದನು." "ಆಪತ್ತುಗಳಿಂದ ದುರ್ಬಲವಾದ ಮನಸ್ಸು ಶಾಂತಿಗೆ ಆಗರವಾಯಿತು" "ರೂಸೋ ಸುಖದುಃಖಗಳ ನೆಳಲು" "ಆತನ ಜೀವವೇ ಅನುರಕ್ಷಿತವಾಯಿತು" - ಇವೆಲ್ಲ ಇಂಥ ಪುಸ್ತಕದಲ್ಲಿ ಅಕ್ಷಮ್ಯವಾದ ಅಪರಾಧಗಳು.

ಕರ್ನಾಟಕ ಮತ್ತು ಜೈನ ಸಂಸ್ಕೃತಿ ಹೆಸರೇ ಸೂಚಿಸುವಂತೆ ಕರ್ನಾಟಕ ಪ್ರಾಂತ್ಯದಲ್ಲಿ ಜೈನ ಧರ್ಮ, ಸಂಸ್ಕೃತಿ ಸಾಹಿತ್ಯಗಳು ಹೇಗೆ ಬೆಳೆದು ಪ್ರಚುರವಾದವು ಎನ್ನುವುದನ್ನು ಹೇಳುವ ಗ್ರಂಥ. ಇದರಲ್ಲಿ ಒಟ್ಟು ಆರು ಲೇಖನಗಳಿವೆ. ಮಿರ್ಜಿ ಅಣ್ಣಾರಾಯರು ಬರೆದ ಕರ್ನಾಟಕದಲ್ಲಿ ಜೈನಧರ್ಮ ಎಂಬ ಲೇಖನ ಜೈನಧರ್ಮ ಕರ್ನಾಟಕಕ್ಕೆ ಹೇಗೆ ಬಂತು, ವ್ಯಾಪಿಸಿತು ಎನ್ನುವುದನ್ನೂ ಮತ್ತು ಆ ಧರ್ಮವನ್ನು ಆಕ್ರಮಿಸಿ ಅದರ ಪ್ರಚಾರಕ್ಕಾಗಿ ಶ್ರಮಿಸಿದ ಕರ್ನಾಟಕದ ಪ್ರಸಿದ್ಧ ರಾಜರನ್ನೂ ಕುರಿತು ಹೇಳುತ್ತದೆ. ಕಲಘಟಗಿಯವರು ಜೈನ ತತ್ವಜ್ಞಾನ ಎಂಬ ತಮ್ಮ ಲೇಖನದಲ್ಲಿ ಜೈನ ಧರ್ಮದ ಸ್ವರೂಪವನ್ನೂ ಆ ಧರ್ಮ ಸಂಬಂಧವಾದ ಪರಿಭಾಷೆಯನ್ನು ಬಳಸಿ ಸಂಗ್ರಹವಾಗಿ ತಿಳಿಸಿದ್ದಾರೆ. ಬಿ. ಎಸ್. ಕುಲಕರ್ಣಿಯವರ 'ಕನ್ನಡದಲ್ಲಿ ಜೈನ ಧಾರ್ಮಿಕ ಸಾಹಿತ್ಯ' ಎಂಬ ಲೇಖನ ಜೈನ ಪುರಾಣ ಕಾವ್ಯಗಳನ್ನೂ ಇತರ ಜೈನ ಧಾರ್ಮಿಕ ಕೃತಿಗಳನ್ನೂ ಹೆಸರಿಸುತ್ತದೆ. 'ಕನ್ನಡದಲ್ಲಿ ಜೈನ ಲೌಕಿಕ ಸಾಹಿತ್ಯ' ಎನ್ನುವುದು ಅದಕ್ಕೆ ಪೂರಕವಾಗಿ ಬಿ. ಬಿ. ಮಹೀಶವಾಡಿಯವರು ಬರೆದ ಇನ್ನೊಂದು ಲೇಖನ. ಸಿ. ವ್ಹಿ. ಕೆರೆಮನಿಯವರು ಕರ್ನಾಟಕದಲ್ಲಿ ಜೈನರಿಗೆ ಪವಿತ್ರವೆನಿಸಿರುವ ತೀರ್ಥಕ್ಷೇತ್ರಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಡಾ. ಅ. ಸುಂದರ ಅವರು ಬರೆದ 'ಕರ್ನಾಟಕದಲ್ಲಿ ಜೈನ ಶಿಲ್ಪ' ಎಂಬ ಲೇಖನ ಈ ಪುಸ್ತಕದಲ್ಲಿಯೇ ಅತ್ಯಂತ ಉಪಯುಕ್ತವಾದ ಬರಹವಾಗಿದೆ. ಈ ಲೇಖಕರು ಕಡೆಯಲ್ಲಿರುವ ಬಳಸಿರುವ ಸುಮಾರು ಮೂವತ್ತು ಚಿತ್ರಗಳು ಅವರು ವಿವರಿಸಿದ ವಿಚಾರಗಳಿಗೆ ಸೊಗಸಾದ ನಿದರ್ಶನಗಳಾಗಿವೆ.

ನನ್ನದು ಈ ಕನ್ನಡನಾಡು ಪಾಟೀಲ ಪುಟ್ಟಪ್ಪನವರ ಇಪ್ಪತ್ತು ಲೇಖನಗಳ ಸಂಗ್ರಹ. ನಮ್ಮ ನಾಡಿನ ಹತ್ತೊಂಬತ್ತು ಜಿಲ್ಲೆಗಳ ಒಂದು ಸ್ಥೂಲಪರಿಚಯ ಈ ಲೇಖನಗಳಲ್ಲಿದೆ. ಒಂದೊಂದು ಜಿಲ್ಲೆಯನ್ನು ಕುರಿತು ಒಂದೊಂದು ಲೇಖನವಿರುತ್ತ ಕಡೆಯಲ್ಲಿ ಬೆಂಗಳೂರು ನಗರದ ಬಗ್ಗೆಯೇ ಒಂದು ಪ್ರತ್ಯೇಕ ಬರೆಹವಿದೆ.

ಈ ಲೇಖನಗಳನ್ನು ಪಾಟೀಲರು ಒಂದು ಪತ್ರಿಕೆಗಾಗಿ ಬರೆದರು. ಪತ್ರಿಕಾ ಬರೆಹದ ಎಲ್ಲ ಲಕ್ಷಣಗಳೂ ಇಲ್ಲಿ ಕಾಣುತ್ತವೆ. ಬರೆಹ ಸರಳವಾಗಿದೆ, ಸುಟಿಯಾಗಿದೆ. ಏನನ್ನೂ ಆಕರ್ಷಕವಾಗಿ ಹೇಳುವ ರೀತಿ ಪಾಟೀಲರಿಗಿದೆ. ಆದರೆ ಆಕರ್ಷಕವಾಗಿದ್ದೂ ಇವು ತೀರ ತೇಲು ಬರೆಹಗಳು ಎನ್ನದೆ ವಿಧಿಯಿಲ್ಲ. ಪತ್ರಿಕೆಗಾಗಿ ಬರೆಯುವ ಲೇಖನಗಳಿಗೆ ಹಲವಾರು ಮಿತಿಗಳಿರುವುದುಂಟು. ಲೇಖನ ವಿಷಯದ ಯೋಗ್ಯತೆಗೆ ತಕ್ಕಷ್ಟು ದೀರ್ಘವಾಗಲು ಅವಕಾಶವಿಲ್ಲದೆ ಹೋಗಬಹುದು. ಪತ್ರಿಕೆಯಲ್ಲಿ ಗೊತ್ತುಪಡಿಸಿರುವ ಸ್ಥಳದ ಮಿತಿಗೆ ಒಳಪಡಿಸಿ ಅದನ್ನು ನಿರೂಪಿಸಬೇಕಾಗಬಹುದು. ಇಲ್ಲಿಯ ಲೇಖನಗಳಿಗೆ ಒದಗಿರುವ ಪಾಡು ಅದೇ. ಒಂದೊಂದು ಜಿಲ್ಲೆಯ ಬೆಳೆ, ಕೈಗಾರಿಕೆ, ಕಲೆ, ವಿಶಿಷ್ಟ ವ್ಯಕ್ತಿಗಳು, ಸ್ಥಳಪುರಾಣ...ಎಲ್ಲದರ ಬಗ್ಗೆಯೂ ಹೇಳಲು ಹೊರಟಿರುವಾಗ ಅದನ್ನು ಆರೇಳು ಪುಟಗಳ ಚಿಕ್ಕ ಲೇಖನದಲ್ಲಿ ಕೊರತೆಯಾಗದಂತೆ ಹೇಗೆ ಹೇಳಬಹುದು? ಪ್ರತಿ ಜಿಲ್ಲೆಯ ತೀರ ಮುಖ್ಯ ಸ್ಥಳಗಳು, ಮುಖ್ಯ ಕಲೆ, ಮುಖ್ಯ ಕೈಗಾರಿಕೆ, ಮಹತ್ವದ ವ್ಯಕ್ತಿಗಳು– ಒಂದೆರಡು ಸಾಲಿನಲ್ಲಿ ಪ್ರಸ್ತಾಪಿತವಾಗುತ್ತವೆ. ಸ್ಥಳಕ್ಕೆ ಸಂಬಂಧಿಸಿದ ರುಚಿರುಚಿಯಾದ ಹಳೆಯ ಕಥೆಗಳಿದ್ದರೆ ಪಾಟೀಲರು ಅವನ್ನೆಲ್ಲ ಸಂಕ್ಷಿಪ್ತವಾಗಿಯಾದರೂ ಪ್ರಸ್ತಾಪಿಸಿ ಬರೆಹಕ್ಕೆ ಒಂದು ಬಗೆಯ ರಂಜಕತೆ ಒದಗಿಸುತ್ತಾರೆ. ಒಟ್ಟಿನಲ್ಲಿ ಬರೆಹ ಬಿಡದೆ ಓದಿಸಿಕೊಂಡು ಹೋಗುವಷ್ಟು ಆಕರ್ಷಕವಾಗಿದೆ.

ಕಾವ್ಯಚಿತ್ರಗಳು ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳ ಹದಿನಾರು ಬರೆಹಗಳ ಸಂಕಲನ. ತಾವು ಓದಿದ ಹಿಂದಿನ ಕಾವ್ಯ, ನಾಟಕಗಳಲ್ಲಿ ತಮಗೆ ತುಂಬ ಆಕರ್ಷಕವಾಗಿ ಕಂಡ ಕೃತಿಗಳ ಕಥೆಯನ್ನು ಲೇಖಕರು ಸರಳವಾದ ಗದ್ಯದಲ್ಲಿ ಸಂಗ್ರಹವಾಗಿ ಹೇಳಿದ್ದಾರೆ. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಬರುವ ಕಿರಾತಾರ್ಜುನೀಯ ಪ್ರಸಂಗ, ರನ್ನನ ಅಜಿತನಾಥ ಪುರಾಣದಲ್ಲಿ ಬರುವ ಸಗರ ಚಕ್ರವರ್ತಿಯ ಕಥೆ, ಜೈಮಿನಿ ಭಾರತದಲ್ಲಿನ ಚಂದ್ರಹಾಸನ ಕಥೆ––ಹೀಗೆ ರಮ್ಯವಾದ ಹಲವು ಕಥಾ ಪ್ರಸಂಗಗಳು ಇಲ್ಲಿವೆ. ಜಿನಸೇನ ಗುಣಭದ್ರರಿಂದ ಹಿಡಿದು ಗೋವಿಂದ ಪೈಗಳವರೆಗೆ ರಚಿತವಾದ ಕೃತಿಗಳ ತನಕ ಈ ಬರೆಹದ ವ್ಯಾಪ್ತಿ ಇದೆ. ಕೆರೆಗೆ ಹಾರದಂಥ ಕೆಲವು ಜಾನಪದ ಪದ್ಯ ಕಥೆಗಳನ್ನು ಗದ್ಯದಲ್ಲಿ ಹೇಳಲಾಗಿದೆ. ಈ ಕಥೆಗಳನ್ನು ಓದಿ ಅವುಗಳ "ರುಚಿ ಸವಿಯೆಂದು ಕಂಡವರು ಮೂಲದ ಕಥೆಗೇ ಲಗ್ಗೆ ಹಾಕಿಯಾರು" ಎಂಬ ಆಸೆಯಿಂದ ಈ ಬರೆಹಗಳನ್ನು ಹೊರತರಲಾಗಿದೆ.

ವೆಂಕಟೇಶ ಕುಲಕರ್ಣಿಯವರ **ರಾವಣಲೀಲಾ ಅಕ್ರಮವೇ?** ಎಂಬ ಶೀರ್ಷಿಕೆಯಿರುವ ಮೂವತ್ತೆರಡು ಪುಟಗಳ ಪುಸ್ತಕ ಒಂದು ವಿಚಾರಾತ್ಮಕವಾದ ಲೇಖನ. ಹಿಂದೆ ಇ. ವಿ. ರಾಮಸ್ವಾಮಿ ನಾಯಕರ್ ಅವರ ಅನುಯಾಯಿಗಳು ರಾಮ ಲಕ್ಷ್ಮಣ ಸೀತೆಯರ ಪ್ರತಿಕೃತಿಗಳನ್ನು ಮಾಡಿ ಅವುಗಳನ್ನು ಸುಟ್ಟು ಹಾಕಿದ್ದಕ್ಕೆ ಬಂಧಿತರಾಗಿದ್ದರು. ಹೀಗೆ ಪ್ರತಿ ಕೃತಿಗಳನ್ನು ಸುಟ್ಟುದುದರ ಹಿಂದಿದ್ದ ದೃಷ್ಟಿ ಏನು? ಅದರಿಂದ ಆಗಬಹುದಾದ ಅನುಕೂಲ ಅನಾನುಕೂಲಗಳೇನು? ಎನ್ನುವುದನ್ನು ನಿಷ್ಪಕ್ಷಪಾತವಾಗಿ ವಿಚಾರಮಾಡಲು ಹೊರಟ ಬರೆಹ ಇದು. ಗಮನಿಸಬೇಕಾದ ಲೇಖನ.

ಅ. ವೆಂ. ಗುಂಡೂರಾಯರ **ಐತಿಹಾಸಿಕ ರಾಮಾಯಣ** ಅದರ ಹೆಸರೇ ತಿಳಿಸುವಂತೆ ಇತಿಹಾಸದ ದೃಷ್ಟಿಯಿಂದ ರಾಮಾಯಣವನ್ನು ಪರಿಶೀಲಿಸುವ ಪುಸ್ತಕ. ರಾಮಾಯಣ ಬರಿದೆ ಕಲ್ಪಿಸಿಕೊಂಡ ಕಥೆಯಲ್ಲ, ವಾಸ್ತವವಾಗಿ ನಡೆದ ಘಟನೆ. ಆದರೆ ಕಾವ್ಯಸಹಜವಾದ ಉತ್ಪ್ರೇಕ್ಷೆಗಳು, ಒಂದು ಸಂಗತಿಯನ್ನು ಪ್ರತಿಮಾತ್ಮಕವಾಗಿ ಹೇಳುವ ವಿಧಾನಗಳು, ಕಾಲಕ್ರಮದಲ್ಲಿ ಒಂದು ಧಾರ್ಮಿಕ ಕಾವ್ಯದೊಳಕ್ಕೆ ನುಸುಳಿಕೊಳ್ಳುವ ಸಂಗತಿಗಳು—ಇವೆಲ್ಲ ಸೇರಿ ರಾಮಾಯಣ ಈಗಿರುವ ಸ್ವರೂಪವನ್ನು ಪಡೆದಿದೆ ಎಂದು ಲೇಖಕರ ವಾದ. ಅವುಗಳನ್ನೆಲ್ಲ ತಿಳಿದು ಓದುವವರಿಗೆ ಯಾವ ದೇವತೆಗಳ ಪ್ರವೇಶವೂ ಇಲ್ಲದ, ಮಾನವ ಶಕ್ತಿಯ ಮಿತಿಗೆ ಮೀರಿದ ಯಾವ ಅದ್ಭುತಗಳೂ ಇಲ್ಲದ ಒಂದು ಸಹಜ ಸರಳ ಕಥೆಯಾಗಿ ರಾಮಾಯಣ ಕಾಣುತ್ತದೆ ಎಂದು ಲೇಖಕರು ಭಾವಿಸುತ್ತಾರೆ. ಅಂಥ ಸಹಜ ಕಥೆಯಾಗಿ ಅವರು ರಾಮಾಯಣವನ್ನು ಗದ್ಯರೂಪದಲ್ಲಿ ಸಂಗ್ರಹವಾಗಿ ಹೇಳಿದ್ದಾರೆ.

ಲೇಖಕರ ಅಭಿಪ್ರಾಯದಂತೆ ರಾಮಾಯಣ ಕಾವ್ಯದಲ್ಲಿ ಪ್ರಸ್ತಾಪಿತರಾಗಿರುವ ಅತ್ರಿ, ವಿಶ್ವಾಮಿತ್ರ, ಭಾರದ್ವಾಜ– ಇವರೆಲ್ಲ ಆ ಹೆಸರಿನ ಮೂಲ ಪುರುಷರ ವಂಶದಲ್ಲಿ ಬಂದವರೇ ಹೊರತು ಅವರೇ ಅಲ್ಲ. ಮೂಲ ಪುರುಷರ ಹೆಸರು ಕ್ರಮೇಣ ವಂಶನಾಮವಾಗಿ ಮುಂದೆ ಆ ವಂಶದಲ್ಲಿ ಬಂದ ಎಲ್ಲರಿಗೂ ಅನ್ವಯವಾಗುತ್ತಿತ್ತು. ವಸಿಷ್ಠ ವಿಶ್ವಾಮಿತ್ರಾದಿಗಳು ಇಕ್ಷ್ವಾಕು ವಂಶಕ್ಕೆ ಸೇರಿದ ತ್ರಿಶಂಕು ಹರಿಶ್ಚಂದ್ರರ ಕಾಲದವರು. ರಾಮಾಯಣದಲ್ಲಿ ಬರುವ ವಸಿಷ್ಠಾದಿಗಳು ಆ ವಂಶದಲ್ಲಿ ಮೂವತ್ತೆರಡು ತಲೆಗಳ ನಂತರ ಬಂದವರು. ರಾವಣ ಆಳಿದ ಲಂಕೆ ಇತಿಹಾಸದಲ್ಲಿ ಬರುವ ತ್ರೈಕೂಟಕ ರಾಜ್ಯ. ಇಲ್ಲಿ ಈಗ ವಾಸಿಸುವ ಗೊಂಡಾ ಜನರು ಆದಿನಿವಾಸಿಗಳಾಗಿದ್ದು ತಾವು ರಾವಣನ ವಂಶಸ್ಥರೆಂದು ಹೇಳಿಕೊಳ್ಳುತ್ತಾರೆ. ಭಯಂಕರ ಮುಖವಾಡಗಳನ್ನು ಧರಿಸುವುದು ಈಗಲೂ ಅವರಲ್ಲಿ ಒಂದು ಪದ್ಧತಿ. ರಾವಣನ ಹತ್ತು ತಲೆ ಇಂಥ ಮುಖವಾಡ. ಹನುಮಂತ ಸಮುದ್ರವನ್ನು ಲಂಘಿಸಿದ್ದು, ರಾಕ್ಷಸರು ಅವನ ಬಾಲಕ್ಕೆ ಲಂಕೆ ಹಚ್ಚಿ ಅವನು ಲಂಕಾಪಟ್ಟಣ ಸುಟ್ಟದ್ದು ಎಲ್ಲ ಉತ್ಪ್ರೇಕ್ಷಿತ ಸಂಗತಿಗಳು.

ಬರೆಹ ತರ್ಕಬದ್ಧವಾಗಿದೆ. ಆದರೆ ಮಾಡಿಕೊಂಡ ಎಲ್ಲ ಮಾರ್ಪಾಟುಗಳಿಗೂ ತಕ್ಕ ಆಧಾರಗಳಿಲ್ಲ ಎನ್ನುವುದು ಒಂದು ಕೊರತೆ.

ಕುಲಪತಿಯ ಭಾಷಣಗಳು (ಆರನೆಯ ಸಂಪುಟ) ಶ್ರೀ ದೇ. ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದಾಗ ಮಾಡಿದ ಮೂವತ್ತೆರಡು ಭಾಷಣಗಳ ಆರನೆಯ ಸಂಪುಟ ಇದು. 'ಹಿಂದಿನ ಸಾಹಿತ್ಯವಾರ್ಷಿಕ'ಗಳಲ್ಲಿ ಕುಲಪತಿಯ ಭಾಷಣಗಳ, ಹಿಂದಿನ ಕೆಲವು ಸಂಪುಟಗಳಿಗೆ ಆಗಲೇ ಹೇಳಿರುವ ಮಾತುಗಳೆ ಪ್ರಸ್ತುತ ಸಂಪುಟಕ್ಕೂ ಅನ್ವಯಿಸುತ್ತವೆ.

ಕನ್ನಡ ವಿಶ್ವಕೋಶ (ಎಂಟನೆಯ ಸಂಪುಟ) ಕನ್ನಡದಲ್ಲಿ ಮೊಟ್ಟಮೊದಲಿಗೆ ವಿಶ್ವಕೋಶ ರೂಪುಗೊಳ್ಳುತ್ತಿದ್ದು ಅದರಿಂದ ಕನ್ನಡ ಜನಕ್ಕೆ ಆಗುತ್ತಿರುವ, ಆಗಲಿರುವ ಉಪಯೋಗ ಅಪಾರವಾಗಿದೆ. ಇಂಥ ಒಂದು ಯೋಜನೆಯನ್ನು ಇಷ್ಟು ತ್ವರಿತ ರೀತಿಯಲ್ಲಿ ಮತ್ತು ಇಷ್ಟು ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಯಾವುದೇ ವಿಶ್ವವಿದ್ಯಾನಿಲಯದ ಒಂದು ವಿಭಾಗಕ್ಕೆ ಅತ್ಯಂತ ಹೆಮ್ಮೆ ಗೌರವಗಳ ವಿಷಯ. ಈ ಕಾರ್ಯದಲ್ಲಿ ಅಲ್ಲೊಂದು ಇಲ್ಲೊಂದು ದೋಷಗಳಿರುವ ಸಂಭವ ಇಲ್ಲದೆ ಇಲ್ಲ. ಆದರೂ ಇದು ಆ ದಿಕ್ಕಿನಲ್ಲಿ ನಡೆಯುತ್ತಿರುವ ಪ್ರಥಮ ಪ್ರಯತ್ನವೆನ್ನುವುದನ್ನು ಗಮನಿಸಿದಾಗ ನಡೆಯುತ್ತಿರುವ ಕೆಲಸ ಬಹು ಮಹತ್ವದ್ದೆನ್ನುವುದು ತಿಳಿದೀತು.

ಸದ್ಯದ ಸಂಪುಟದಲ್ಲಿ 'ಜಲಾಂತರ್ಗಾಮಿ'ಯಿಂದ 'ಡೇಲಿಯ'ದವರೆಗೆ ನೂರಾರು ವ್ಯಕ್ತಿ, ವಸ್ತು, ಪ್ರಾಣಿ, ಸಂಗತಿಗಳನ್ನು ಕುರಿತು ಪ್ರೌಢ ಲೇಖನಗಳಿವೆ. ಆದರೆ ಸಾಹಿತ್ಯ ವಾರ್ಷಿಕದ ಆಸಕ್ತಿಗೆ ಒಳಪಡುವ ಲೇಖನಗಳು ಈ ಸಂಪುಟದಲ್ಲಿ ಹೆಚ್ಚಿಲ್ಲ. ಡಾಂಟೆ, ಟೆನಿಸನ್ ಇಂಥ ಶ್ರೇಷ್ಠ ಕವಿಗಳನ್ನು ಕುರಿತ ಲೇಖನಗಳು ತುಂಬ ಪ್ರೌಢವಾಗಿದ್ದು ಅಗತ್ಯ ವಿವರಗಳನ್ನೆಲ್ಲ ಒದಗಿಸುತ್ತವೆ. ಡಾಂಟೆಯನ್ನು ಕುರಿತ ಲೇಖನ ಅವನ ಎಲ್ಲ ಕೃತಿಗಳ ಬಗ್ಗೆ, ಅವನ ಜೀವನದ ಬಗ್ಗೆ, ಅವನ ಕಾಲದ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಸಾಕಷ್ಟು ವಿಷಯಗಳನ್ನು ನೀಡುತ್ತದೆ. ಅವನ ಮಹಾಕೃತಿಯಾದ ಡಿವೈನ್ ಕಾಮೆಡಿಯಲ್ಲಿ ಏನೇನು ವಿವರಗಳು ಬರುತ್ತವೆ ಎನ್ನುವುದನ್ನು ಪಟ್ಟಿಮಾಡಿಕೊಡುತ್ತದೆ. ಇಷ್ಟಾದರೂ ಆ ಕೃತಿಯ ವೈಶಿಷ್ಟ್ಯವನ್ನು ಸಮರ್ಪಕವಾಗಿ ಹೇಳುವುದಿಲ್ಲ. ನಾಟಕೀಯತೆ, ವಸ್ತುನಿಷ್ಠತೆ, ಪ್ರತಿಮಾತ್ಮಕತೆ ಮತ್ತು ಒಂದು ಬಗೆಯ ಆತ್ಮಕಥೆ ಎಲ್ಲ ಮೇಳೈಸಿ ಆದ ಒಂದು ವಿಶಿಷ್ಟ ಕೃತಿ ಇದು. ಆವರೆಗಿನ ಯಾವುದೇ ಕೃತಿಯಲ್ಲಿ ಈ ಎಲ್ಲ ಅಂಶಗಳು ಇಲ್ಲಿನ ಪ್ರಮಾಣದಲ್ಲಿ ಬಂದಿಲ್ಲ. ಅವನ ಸಮಕಾಲೀನರೂ ಅವನ ಕಾವ್ಯದಲ್ಲಿ ಪಾತ್ರಗಳಾಗಿ ಒದಗುವ ಸಂಗತಿ, ಅವರ ಬಗ್ಗೆ ಅವನಿಗೆ ವೈಯಕ್ತಿಕ ಪ್ರೀತಿ ದ್ವೇಷಗಳು ಇದ್ದಿತೆನ್ನುವ ವಿಷಯ, ಈ ಕೃತಿ ಒಂದಕ್ಕಿಂತ ಹೆಚ್ಚು ಅರ್ಥಗಳ

ನೆಲೆಯಲ್ಲಿ ಚಲಿಸುವ ರೀತಿ, ಒಂದು ರೂಪಕ ಕಥೆಯಾಗಿ ಅದನ್ನು ಭಾವಿಸಬೇಕಾದ ಬಗೆ – ಇವನ್ನೆಲ್ಲ ಈ ಲೇಖನದಲ್ಲಿ ಕೊಂಚ ವಿವರವಾಗಿ ಹೇಳಬಹುದಾಗಿತ್ತು.

ಸಂಪುಟದ ಕಡೆಯಲ್ಲಿ ಒಂದು ವಿಷಯ ಸೂಚಿ ಇದೆ. ಸಂಪುಟದಲ್ಲಿ ಬಂದಿರುವ ಮುಖ್ಯ ವಿಷಯಗಳನ್ನೆಲ್ಲ ಅಲ್ಲಿ ಕೊಟ್ಟಿರುವುದಾಗಿ ಹೇಳಿದೆ. ಆದರೆ ಡಾಂಟೆ, ಟೆನಿಸನ್ – ಇಂಥ ಇನ್ನೂ ಒಂದೆರಡು ಮುಖ್ಯ ವಿಷಯಗಳು ಅಲ್ಲಿ ಬಿಟ್ಟುಹೋಗಿವೆ. ಟುವಟಾರ, ಜೀರಿಗೆ, ಜಲೋದರದಂಥ ಶೀರ್ಷಿಕೆಗಳನ್ನು ಅಲ್ಲಿ ಸೇರಿಸಿರುವಾಗ ಮೇಲೆ ಹೇಳಿದಂಥ ಶ್ರೇಷ್ಠ ಕವಿಗಳು ಅಲ್ಲಿ ಬಿಟ್ಟುಹೋಗಿರುವುದು ಯುಕ್ತವಾಗಿ ಕಾಣುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿರುವ ಕನ್ನಡ ಗ್ರಂಥಸೂಚಿಯ ಎರಡನೆಯ ಸಂಪುಟ ಇದೀಗ ಅಚ್ಚಾಗಿದೆ. ಒಂದು ಮತ್ತು ಮೂರನೆಯ ಸಂಪುಟಗಳು ಈ ಮುಂಚೆಯೇ ಹೊರಬಂದಿದ್ದು ನಡುವೆ ಬರಬೇಕಾದ ಎರಡನೆಯ ಸಂಪುಟ ಅದಕ್ಕೆ ಸಂಬಂಧಿಸಿದ ವರ್ಗೀಕರಣದ ತೊಡಕಿನಿಂದಾಗಿ ಕೊಂಚ ತಡವಾಗಿ ಪ್ರಕಟವಾಗಿದೆ.

ಇಂಥ ಗ್ರಂಥ ಸೂಚಿಯ ಉಪಯುಕ್ತತೆ ಎಷ್ಟೆನ್ನುವುದನ್ನು ಹೊಸದಾಗಿ ಹೇಳುವ ಅಗತ್ಯ ಇಲ್ಲವೆನ್ನಿಸುತ್ತದೆ. ಕನ್ನಡ ಭಾಷೆಯಲ್ಲಿ ಇದುವರೆಗೆ ಅಚ್ಚಾಗಿರುವ ಯಾವುದೇ ಪುಸ್ತಕ, ಅದನ್ನು ಬರೆದ ಲೇಖಕ, ಪುಸ್ತಕದ ಒಳಗಿರುವ ವಿಷಯ, ಅದರ ಗಾತ್ರ, ಬೆಲೆ, ಅದು ಮುದ್ರಿತವಾದ ಕಾಲ, ಅದು ಸ್ವತಂತ್ರ ಕೃತಿಯೇ, ಅನುವಾದವೇ, ಸಂಗ್ರಹವೇ, ಸಂಪಾದಿತವೇ – ಇತ್ಯಾದಿ ಎಲ್ಲ ವಿವರ ಏಕತ್ರ ಸಿಗುವ ರೀತಿಯಲ್ಲಿ ಈ ಗ್ರಂಥವನ್ನು ಸಿದ್ಧಪಡಿಸಲಾಗಿದೆ. ಸದ್ಯದ ಸಂಪುಟದಲ್ಲಿ ಸಾಮಾನ್ಯ ವಿಷಯಗಳು (ಎಂದರೆ ಗ್ರಂಥ ಸೂಚಿಗಳು, ಗ್ರಂಥಾಲಯ ವಿಜ್ಞಾನ, ವಿಶ್ವಕೋಶಗಳು, ಪತ್ರಿಕೋದ್ಯಮ ಶಾಸ್ತ್ರ ಮತ್ತು ಸಂಕಲನಗಳು), ಉಪಯುಕ್ತ ಕಲೆ, ಲಲಿತ ಕಲೆ, ಭಾಷಾಶಾಸ್ತ್ರ, ಧರ್ಮ ಸಾಮಾನ್ಯ, ತತ್ವಶಾಸ್ತ್ರ ಮತ್ತು ಮನಶ್ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಬಂದ ಪುಸ್ತಕಗಳ ವಿವರಗಳಿವೆ. ಬೇಕಾದ ಪುಸ್ತಕದ ಮಾಹಿತಿ ಎಲ್ಲ ಸಿಗುತ್ತದೆ ಎನ್ನುವುದನ್ನು ಈ ಪುಸ್ತಕದಿಂದ ಸುಲಭವಾಗಿ ಆಯ್ದುಕೊಳ್ಳಲು ಸಹಾಯಕವಾಗುವಂತೆ ಗ್ರಂಥದ ಕಡೆಯಲ್ಲಿ ಕರ್ತೃಸೂಚಿ, ಕೃತಿಸೂಚಿ, ವಿಷಯ ವಿಭಾಗ ಸೂಚಿ, ಪ್ರಕಾಶಕರ ಸೂಚಿ ಇತ್ಯಾದಿಗಳಿವೆ. ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಅಚ್ಚಾದ ಮೊದಮೊದಲ ಕನ್ನಡ ಗ್ರಂಥಗಳ ರಕ್ಷಾಪತ್ರ, ಒಳಪುಟ ಇತ್ಯಾದಿಗಳಿಗೆ ಸಂಬಂಧಿಸಿದ ಹದಿನೇಳು ಚಿತ್ರಗಳ ಫೋಟೋ ಇವೆ. ಪುಸ್ತಕಗಳಿಗೆ ವಿವರಗಳನ್ನು ಕೊಡುವಾಗ ಒಳಗಿರುವ ವಿಷಯಕ್ಕೆ ಸಂಬಂಧಿಸಿದಂತೆ ವಿವರಣಾತ್ಮಕ ಟಿಪ್ಪಣಿಯೊಂದನ್ನು ಸಹ ಕೊಟ್ಟಿರುವುದರಿಂದ ಈ ಗ್ರಂಥವನ್ನು ಬಳಸುವವರಿಗೆ ಹಾಗೆ ಬಳಸಲು ಅಗತ್ಯವಾದ ಎಲ್ಲ ಸಹಾಯಗಳನ್ನೂ ನೀಡಿದಂತಾಗಿದೆ. ಸುಮಾರು ೬೩೦ ಪುಟಗಳಿರುವ ಈ ಗ್ರಂಥದಲ್ಲಿ ೫೩೨೭ ಉಲ್ಲೇಖಗಳಿದ್ದು ಅವುಗಳ ಪ್ರಧಾನ ಭಾಗ (೩೯೮೭ ಉಲ್ಲೇಖಗಳು) ಧರ್ಮ ಹಾಗೂ ತತ್ವಶಾಸ್ತ್ರಗಳಿಗೆ ಸಂಬಂಧಿಸಿವೆ. ಇಲ್ಲಿರುವ ಪುಸ್ತಕಗಳ ಮಾಹಿತಿ ಸಂಗ್ರಹಕ್ಕೆ ಸುಮಾರು ೨೧೨ ಆಕರಗಳನ್ನು ಬಳಸಲಾಗಿದೆಯೆಂದರೆ ಈ ಕೆಲಸಕ್ಕೆ ಎಷ್ಟು ಸಮಯ ಶ್ರಮಗಳ ವಿನಿಯೋಗವಾಗಿರಬೇಕು ಎನ್ನುವುದು ತಿಳಿಯುತ್ತದೆ. ಇದೊಂದು ಅತ್ಯಂತ ಉಪಯುಕ್ತವಾದ ಸೂಚಿ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಕಾನೂನು ಪದಕೋಶ ಕರ್ನಾಟಕ ಸರ್ಕಾರದ ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯದವರು ಹೊರತಂದಿರುವ ಗ್ರಂಥ. ಆಡಳಿತ ವ್ಯವಹಾರವೆಲ್ಲ ಕನ್ನಡದಲ್ಲಿಯೇ ನಡೆಯಬೇಕೆನ್ನುವುದು ಅಪವಾದ ಮುಕ್ತವಾದ ಅಭಿಪ್ರಾಯವಾಗುತ್ತಿರುವ ಈ ದಿನಗಳಲ್ಲಿ ಇಂಥ ಕೋಶದ ಅಗತ್ಯ ತುಂಬ ಉಂಟು. ಆಡಳಿತ ಭಾಷೆ ಕನ್ನಡವೇ ಆಗಬೇಕೆಂಬ ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಲ್ಲ, ಅದನ್ನು ನಡೆಸಲು ಬೇಕಾದ ಪರಿಕರಗಳನ್ನು ಒದಗಿಸಿ ಅನುಕೂಲಕರವಾದ ವಾತಾವರಣ ಸೃಷ್ಟಿಮಾಡುವುದು ಕಷ್ಟ. ಇಂಥ ಕಷ್ಟಪರಿಹಾರದ ಮಾರ್ಗದಲ್ಲಿ ನಡೆದಿರುವ ಒಂದು ಯೋಗ್ಯ ಪ್ರಯತ್ನ ಈ ಕಾನೂನು ಪದಕೋಶ.

ಕಾನೂನು ವ್ಯವಹಾರದಲ್ಲಿ ಬಳಕೆಯಾಗುವ ಪಾರಿಭಾಷಿಕ ಪದಗಳ ಕನ್ನಡ ರೂಪಗಳನ್ನು ಈ ಕೋಶದಲ್ಲಿ ಕೊಡಲಾಗಿದೆ. ಮೊದಲು ಇಂಗ್ಲಿಷ್‌ರೂಪವನ್ನು ಕೊಟ್ಟು, ಅದಕ್ಕೆ ಹಿಂದಿ ಪಾರಿಭಾಷಿಕ ಅನುವಾದವನ್ನು ಒದಗಿಸಿ ಕಡೆಯಲ್ಲಿ ಕನ್ನಡ ಪದವನ್ನು ಕೊಡಲಾಗಿದೆ. ಹಿಂದಿಯಿಂದ ಕೊಟ್ಟಿರುವ ಪದ ಉದ್ದಕ್ಕೂ ಸಂಸ್ಕೃತ ಪದವೇ ಆಗಿದ್ದು ಅದು ಬಹುಮಟ್ಟಿಗೆ ಭಾರತದ ಎಲ್ಲ ಪ್ರಾದೇಶಿಕ ಭಾಷೆಗಳಿಗೂ ಹೊಂದಬಲ್ಲ ಸಾಮಾನ್ಯಪದವಾಗಿದೆ. ಕನ್ನಡದಲ್ಲಿ ಆ ಪದವನ್ನೇ ಆದಷ್ಟೂ ಉಳಿಸಿ ಕೊಳ್ಳಲಾಗಿದೆ. ಕೆಲವು ಕಡೆ ಅದನ್ನು ಕನ್ನಡ ಮಾತುಗಳಲ್ಲಿ ವಿವರಿಸಿರುವುದೂ ಉಂಟು. (ಉದಾ: (೧) ನಿರೋಧ್ ಬೈರೆಕ್–ಬಂಧಿತರನ್ನು ಇರಿಸುವ ಕಟ್ಟಡ (೨) ಅಪಮಾರ್ಜಕ್–ಶುದ್ಧ ಮಾಡುವ ವಸ್ತು) ಇದು ಒಳ್ಳೆಯದೇ ಏಕೆಂದರೆ ಪ್ರತಿಪದಕ್ಕೂ ಏಕಪದಗಳನ್ನು ಕೊಡುವ ಹಟತೊಟ್ಟು ಹೊರಟರೆ ಆ ಪ್ರಯತ್ನ ಅರ್ಥವಾಗದ ಕ್ಲಿಷ್ಟ ಸಂಸ್ಕೃತ ಸಮಾಸಪದದ ಸೃಷ್ಟಿಯಲ್ಲಿ ಮುಗಿಯು ವುದೂ ಉಂಟು. ಸಂತೋಷದ ಮಾತೆಂದರೆ ದಸ್ತಾವೇಜು, ದಾವೆ, ವಾರಂಟು, ಮುನ್ಸೀಫ ಇಂಥ ಪದಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಅವುಗಳಿಗೆ ಶುದ್ಧಗನ್ನಡ ಅಥವಾ ಸಂಸ್ಕೃತದ ಪ್ರತಿ ಪದಗಳನ್ನು ಹುಡುಕಲು ಹೋಗಿಲ್ಲ. ಇಷ್ಟಾದರೂ ಹಿಂದಿಯಲ್ಲಿ ಬಳಸಲಾಗಿದೆ ಎಂಬ ಕಾರಣ ಕ್ಕಾಗಿ ಅಭಿಕರ್ತ (agent), ಪ್ರತ್ಯಾಯೋಜನೆ (delegation), ಅಪರಸತ್ರ ನ್ಯಾಯಾಧೀಶ (additional sessions judge)-ಇತ್ಯಾದಿಗಳನ್ನು ಕನ್ನಡದಲ್ಲಿಯೂ ಬಳಸಿರುವುದು ಸರಿ ಯಾಗಿ ಕಾಣುವುದಿಲ್ಲ.

ಯಜ್ಞನಾರಾಯಣ ಉಡುಪರಿಂದ ರಚಿತವಾದ ಪುರಾಣ–ಭಾರತಕೋಶ ಭರತಖಂಡದ ವೇದ, ಉಪನಿಷತ್ತು, ಪುರಾಣ, ಕಾವ್ಯಗಳಲ್ಲಿ ಕಾಣಸಿಗುವ ಪ್ರಖ್ಯಾತ ವ್ಯಕ್ತಿ, ವಸ್ತು, ದೇಶ ಮೊದಲಾದವು ಗಳಿಗೆ ಟಿಪ್ಪಣಿರೂಪದ ವಿವರಣೆ ಕೊಡುವ ಗ್ರಂಥ. ಸಾಕಷ್ಟು ಹಿಂದೆ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ್ದ ಪುರಾಣನಾಮ ಚೂಡಾಮಣಿ ಇದೇ ಬಗೆಯ ಗ್ರಂಥ ಮಾತ್ರವಲ್ಲ ಅದು ಈ ದಿಕ್ಕಿನಲ್ಲಿ ನಡೆದ ಮೊಟ್ಟಮೊದಲ ಶ್ರೇಷ್ಠ ಪ್ರಯತ್ನ. ಉಡುಪರು ತಮ್ಮ ಕೃತಿಯನ್ನು ಅದಕ್ಕಿಂತ ಉಪಯುಕ್ತ ವಾಗಿ ಮಾಡಬೇಕೆನ್ನುವ ಉದ್ದೇಶದಿಂದ ಅಲ್ಲಿ ಸಿಗದ ಇನ್ನೂ ಹಲವಾರು ಅಂಶಗಳನ್ನು ತಮ್ಮ ಕೃತಿಯಲ್ಲಿ ಸೇರಿಸಿದ್ದಾರೆ. ಉದಾಹರಣೆಗೆ ಗಂಡಕ, ಗಂಡಕಿ, ನಾಗರಪಂಚಮಿ, ನವತಂತು, ನವಪಾಷಾಣ-ಇಂಥ ಅನೇಕ ಪದಗಳು ಪುರಾಣನಾಮ ಚೂಡಾಮಣಿಯಲ್ಲಿ ಇಲ್ಲದಿದ್ದರೂ ಇಲ್ಲಿ ದೊರೆಯುತ್ತವೆ. ಇದಕ್ಕೆ ಕಾರಣವೆಂದರೆ ಕ್ಷೇತ್ರ ಮಹಾತ್ಮೆಯಂಥ ಗ್ರಂಥಗಳನ್ನೂ ಲೇಖಕರು ಈ ಕೆಲಸಕ್ಕೆ ಬಳಸಿಕೊಂಡಿರುವುದು. ಪುರಾಣನಾಮಚೂಡಾಮಣಿ ಕೆಲವು ಕಡೆ ಒಂದು ಪದಕ್ಕೆ ಎರಡೋ ಮೂರೋ ಸಾಲಿನ ವಿವರಣೆ ನೀಡಿ ವಿವರಗಳಿಗೆ ಮೂಲ ಆಕರಗಳ ನಿರ್ದೇಶನವನ್ನು ನೀಡುತ್ತದೆ. ಅವುಗಳನ್ನು ನೋಡಿದರೇ ಹೆಚ್ಚು ವಿಷಯ ದೊರೆಯುವುದು ಸಾಧ್ಯ. ಉಡುಪರು ಹಾಗೆ ಮಾಡದೆ ಆ ಗ್ರಂಥಗಳಲ್ಲಿ ದೊರೆಯುವ ವಿಷಯವನ್ನೂ ಸೇರಿಸಿ ಸಂಗ್ರಹವಾಗಿ ಹೇಳಿಬಿಡುತ್ತಾರೆ. ಚೂಡಾ ಮಣಿಯ ರೀತಿ ವಿದ್ವಾಂಸರಿಗೆ ಅನುಕೂಲಕರವಾದದ್ದು; ಉಡುಪರ ರೀತಿ ಸಾಮಾನ್ಯ ಓದುಗರಿಗೆ, ವಿದ್ಯಾರ್ಥಿಗಳಿಗೆ ಮತ್ತು ಉಪಾಧ್ಯಾಯರಿಗೆ ಉಪಯುಕ್ತವಾದದ್ದು. ಇದಕ್ಕೆ ಉದಾಹರಣೆಯಾಗಿ ಪುರೂರವ ಎಂಬ ಪದಕ್ಕೆ ಈ ಎರಡು ಪುಸ್ತಕಗಳಲ್ಲಿಯೂ ಕೊಟ್ಟಿರುವ ಟಿಪ್ಪಣಿಯನ್ನು ನೋಡಬ ಹುದು. ಉಡುಪರು ಅನೇಕ ಹೊಸ ಅಂಶಗಳನ್ನು ಇಲ್ಲಿ ಸೇರಿಸಿದ್ದಾರಾದರೂ ಅದರಲ್ಲಿ ಒಂದು ಒಪ್ಪಬಹುದಾದ ಕ್ರಮವಿರುವಂತೆ ಕಾಣುವುದಿಲ್ಲ. ಉದಾಹರಣೆಗೆ ನಾಗರಪಂಚಮಿ ಪದವನ್ನು ಸೇರಿಸಿಕೊಂಡವರು ದೀಪಾವಳಿ, ಯುಗಾದಿ ಇತ್ಯಾದಿ ಹಬ್ಬಗಳನ್ನೂ ಸೇರಿಸಬೇಕಾಗಿತ್ತು ಎನಿಸು ತ್ತದೆ. ಆದರೆ ಅವು ಈ ಕೃತಿಯಲ್ಲಿ ಸೇರ್ಪಡೆಯಾಗಿಲ್ಲ.

ಅದೇನೇ ಇದ್ದರೂ ಪುರಾಣನಾಮ ಚೂಡಾಮಣಿಯ ನಂತರವೂ ಇಂಥ ಒಂದು ಗ್ರಂಥ ಬರಬೇಕಾದ ಅಗತ್ಯವನ್ನು ಉಡುಪರು ಕಾರ್ಯರೂಪದಲ್ಲಿಯೇ ಸಮರ್ಥಿಸಿಕೊಂಡಿರುವುದು ಪ್ರಶಂಸಿಸಬೇಕಾದ ವಿಷಯ. ಇದನ್ನು ಕೇವಲ ನಿರ್ದೇಶಕನ ಗ್ರಂಥವಾಗಿ ಬಳಸುವುದು ಮಾತ್ರವಲ್ಲ, ಸುಮ್ಮನೆ ಓದುತ್ತ ಹೋಗಬಹುದು, ಇಲ್ಲಿನ ಸಂಗತಿಗಳು ಮತ್ತು ನಿರೂಪಣೆ ಅಷ್ಟು ಸ್ವಾರಸ್ಯಕರವಾಗಿವೆ.

ಅನುಬಂಧ

ಎನ್. ವಿ. ವಿಮಲ

೧೯೭೫ ರಲ್ಲಿ ಪ್ರಕಟವಾದ ಪುಸ್ತಕಗಳು

ಕಾವ್ಯ

ಅಬ್ದುಲ್ ರಹಮಾನ ಮಾಸಾಪತಿ
    ಇಪ್ಪತ್ತಾರು ಕವಿತೆಗಳು : ವಿಕಾಸ ಪ್ರಕಾಶನ, ಹುನಗುಂದ; ಪು. ೨೮

ಅಶೋಕ ಮಠದ
    ಗೊತ್ತಿಲ್ಲದ ದಾರಿ : ಯುಗಧ್ವನಿ ಪ್ರಕಾಶನ; ಹುಬ್ಬಳ್ಳಿ; ಪು. ೨೮

ಕಂದ ಜಲಜ
    ರಾಯರ ಅಂತರಂಗ : ಜಗದಾನಿ ಪ್ರಕಾಶನ, ಹೊಸಪೇಟೆ, ಪು. ೨೨+೧೧೨

ಕಾಶೆಟ್ಟಿ
    ಬೆಂಗಾಡು : ಶ್ರೀ ಪ್ರಕಾಶನ, ಹಾವೇರಿ, ಪು. ೩೬

ಕುಲಶೇಖರಿ
    ಕ್ಷಿತಿಜ : ಚಿನ್ಮಯಿ ಪ್ರಕಾಶನ, ಬೆಂಗಳೂರು; ೯+೩೦

ಗೋಪಾಲಕೃಷ್ಣ ಅಡಿಗ
    ಇದನ್ನು ಬಯಸಿರಲಿಲ್ಲ : ಅಕ್ಷರ ಪ್ರಕಾಶನ, ಸಾಗರ, ಪು. ೩೬+೪

ಗೋಭಾನು
    ನಿಚ್ಚಳ ನಿಲುವು : ನೇಸರ ಪ್ರಕಾಶನ, ನೇಸರಗಿ (ಬೆಳಗಾವಿ ಜಿಲ್ಲೆ)

ಚೆನ್ನವೀರ ಕಣವಿ
    ಚಿರಂತನದಾಹ : ಕಾರ್ತಿಕೇಯ ಪಬ್ಲಿಕೇಷನ್ಸ್, ಗುಲ್ಬರ್ಗಾ; ಪು. ೮+೧೫೨.

ದೇಶಪಾಂಡೆ ಸುಬ್ಬರಾಯ
    ಬೊಗಸೆ ತುಂಬವ ಬದುಕು : ಕಾವ್ಯಧಾರಾ ಪ್ರಕಾಶನ, ಧಾರವಾಡ : ಪು. ೫೨

ದೇವೇಂದ್ರ ನಾಯಕ (ಸಿ. ಎಂ.)
    ಶ್ರೀ ಅಭಿನವ ಮಹಾಭಾರತ ಕಾವ್ಯಮಂಜರಿ : ಸಂ. ೧ (ಕಥನ ಕಾವ್ಯ) ಚಾಣಕ್ಯ ಪ್ರಕಾಶನ, ಹುಬ್ಬಳ್ಳಿ

ನರಸಿಂಹ ಕುಮಾರ
    ಕನ್ನಡ ಕಿರಣ : ಸುಧಾ ಪರಿಮಳ ಪ್ರಕಾಶನ, ನಾಗಲಾಪುರ (ಬಳ್ಳಾರಿ ಜಿಲ್ಲೆ) ಪು. ೩೧

ಪಂಡಿತಾರಾಧ್ಯ (ಹೊ. ಮ.)
    ಬೆತ್ತಲೆ ಪದ್ಯಗಳು : ಯುವಕರ ಸಂಘ, ರಾಮನಗರ, ಪು. ೫೯

ಪ್ರಭಾಶಂಕರ ಪ್ರೇಮಿ (ಟಿ. ಜಿ.)
    ಅಂಕುರ : ಶರಣ ಪ್ರಕಾಶನ, ಬೆಂಗಳೂರು; ಪು. ೫೮

ಪಾಂಚಜನ್ಯ
    ಮೇಘಮಾಲಾ : ದಿವ್ಯಸಾಹಿತ್ಯ ಪ್ರಕಾಶನ, ಮೈಸೂರು ಪು. ೬+೫೫

ಭುವನ ಮಿತ್ರ

ನಮ್ಮ ಚರಿತ್ರೆ : ಭುವನ ಪ್ರಕಾಶನ, ಬೆಂಗಳೂರು ; ಪು. ೫೬

ಮಲ್ಲಪ್ಪ

ಮೊರೆ

ಮಾತೆ ಮಹಾದೇವಿ (ಸಂ.)

ವಿಶ್ವ ಕಲ್ಯಾಣಗೀತೆ ; ಸುಯಿಧಾನ ಗ್ರಂಥಮಾಲೆ, ಧಾರವಾಡ, ಪು. ೮೮

ಮುಗಳಿ (ರಂ. ಶ್ರೀ.)

ಮಣಿಮಾಲೆ : ಉಷಾ ಸಾಹಿತ್ಯಮಾಲೆ, ಮೈಸೂರು, ಪು. ೨೩

ರಂಗಸ್ವಾಮಿ (ಸು) (ಸಂ.)

ವರಕವಿ : ಹಂಸಧ್ವನಿ ಪ್ರಕಾಶನ, ಬೆಂಗಳೂರು, ಪು. ೧೦ + ೬೨

ರಘುಸುತ

೧. ದುಂಬಿ : ಪುಲಿಕೇಶಿ ಪ್ರಕಾಶನ, ಬೆಂಗಳೂರು ಪು. ೫೬

೨. ವೀಣೆಯ ತಂತಿ : ಪುಲಿಕೇಶಿ ಪ್ರಕಾಶನ, ಬೆಂಗಳೂರು ಪು. ೬೪

ರಾಮಚಂದ್ರಾಚಾರ್ (ಡಿ. ಬಿ.) ಸಂ.

ಕವಿಗಳು ಕಂಡ ಕೊಡಗು : ಕಾವೇರಿ ಕಾಲೇಜು, ಗೋಣಿ ಕೊಪ್ಪಲು, ಪು. ೨೨

ರುದ್ರಮೂರ್ತಿಶಾಸ್ತ್ರಿ (ಸು.)

ಅನಾಮಧೇಯನ ಆತ್ಮಕತೆ : ಎಸ್. ಶ್ರೀಕಂಠಪ್ಪ, ಬೆಂಗಳೂರು, ಪು. ೪೬

ಲಕ್ಕಪ್ಪ ಗೌಡ (ಎಚ್. ಜೆ.)

ಊರ ಮುಂದಿನ ಬಾವಿ : ರವಿಕಲಾ ಪ್ರಕಾಶನ, ಬೆಂಗಳೂರು, ಪು. ೪೬

ವಿಜಯ (ಡಿ.)

ಇರುತ್ತವೆ : ಸುರುಚಿ ಪ್ರಕಾಶನ, ಮೈಸೂರು ಪು. ೫೨

ಶಿವರುದ್ರಪ್ಪ (ಜಿ. ಎಸ್.)

ನನ್ನ ನಿನ್ನ ನಡುವೆ : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ಪು. ೨೦೦

ಶಿವಳ್ಳಿ ಕೆಂಪೇಗೌಡ

ಶತಭಾಗಿನಿ ತಂಗಿಗೆ : ಜ್ವಾಲಾ ಪ್ರಕಾಶನ, ಶಿವಳ್ಳಿ (ಮಂಡ್ಯ ಜಿಲ್ಲೆ), ಪು. ೧೬

ಶಿವಶರಣ ಜಾವಳಿ

ಪತ್ತರ ಕೂಡ ಹನ್ನೊಂದು : ವಿಚಾರ ಭಾರತಿ ಅಧ್ಯಯನ ವೇದಿಕೆ, ಕಲಬುರ್ಗಿ, ಪು. ೫೧ + ೭ + ೭

ಶ್ರೀ ಕೃಷ್ಣ ಆಲನಹಳ್ಳಿ

೧. ಕಾಡು ಗಿಡದ ಹಾಡುಪಾಡು ಪು. ೪೦ + ೬

೨. ಡೋಗ್ರಾ-ಪಹಾರಿ ಪ್ರೇಮ ಗೀತೆಗಳು ಪು. ೮ + ೪೦ ಅಕ್ಷರ ಪ್ರಕಾಶನ, ಸಾಗರ

ಸಾಹಿತ್ಯಾನಂದ ಮತ್ತು ವಿರೂಪಾಕ್ಷಗೌಡ (ಕೆ.) (ಸಂ.)

ಚೇತನ : ನಿವೇದಿತ ಪ್ರಕಾಶನ, ಬೆಂಗಳೂರು, ಪು. ೧೧೭

ಸ್ವಾಮಿ (ಬಿ. ಎಸ್.)

ಲಾಸ್ಯ ತಾಂಡವ : ನವೀನ ಪ್ರಕಾಶನ, ಬೆಂಗಳೂರು, ಪು. ೪೭

ಸಿದ್ಧಲಿಂಗಯ್ಯ

ಹೊಲೆಮಾದಿಗರ ಹಾಡು : ಮುಂಗಾರು ಪ್ರಕಾಶನ, ಬೆಂಗಳೂರು, ಪು. ೨೮

ಸಿಹಿ

ಅನ್ವೇಷಣ : ಶ್ರೀ ಸಿದ್ಧರಾಮೇಶ್ವರ ಪ್ರಕಾಶನ, ಯಲಬುರ್ಗಾ (ರಾಯಚೂರು ಜಿಲ್ಲೆ) ಪು. ೪೨

ಸೋಮಶೇಖರ ಇಮ್ರಾಪುರ

ಬಿರುಗಾಳಿ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೮ + ೮೧

ನಾಟಕ

ಕವಿತಾಕೃಷ್ಣ

ತ್ಯಾಗಮಯಿ : ಕವಿತಾ ಪ್ರಕಾಶನ. ಕ್ಯಾತಸಂದ್ರ ; (ತುಮಕೂರು ಜಿಲ್ಲೆ) ; ಪು. ೧೨೫

ಕೃಷ್ಣಮೂರ್ತಿ, ಕೆ. ಮತ್ತು ಇತರರು (ಸಂ)

ಸ್ವಪ್ನ ವಾಸವದತ್ತಮ್ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪು. ೧೯೧ + ೭

ಕ್ಯಾತ್ಸಂದ್ರ ಚಂದ್ರಶೇಖರ್

ಮನೆಹಾಳ ; ಆಶಾ ಸಾಹಿತ್ಯ, ಬೆಂಗಳೂರು ; ಪು. ೧೦೫

ಗುಂಡಪ್ಪ (ಡಿ. ವಿ.) [ಡಿ. ವಿ. ಜಿ.]

ಪ್ರಹಸನ ತ್ರಯೀ : ಕಾವ್ಯಾಲಯ, ಮೈಸೂರು ; ಪು. ೬೦

ಗೋಪಾಲಕೃಷ್ಣ (ರಾ.)

ದಿವ್ಯ ಜ್ಯೋತಿ : ರಾ. ಗೋಪಾಲಕೃಷ್ಣ, ಬೆಂಗಳೂರು ; ಪು. ೧೦೮

ಗೌರೀತನಯ

ವಧು ದಕ್ಷಿಣೆ : ಗೌರೀ ನಿವಾಸ, ಬಾಗೇಪಲ್ಲಿ (ಕೋಲಾರ ಜಿಲ್ಲೆ) ; ಪು. ೨೯

ಚಂದ್ರಶೇಖರ ಕಂಬಾರ

೧. ಸಂಗ್ಯಾ ಬಾಳ್ಯಾ ಅನ್ನ ಬೇಕೋ ನಾಡೊಳಗೆ : ನೆಲಮನೆ ಪ್ರಕಾಶನ, ಮೈಸೂರು : ಪು. ೮೦

೨. ಜೈಸಿದ ನಾಯ್ಕಾ : ಬಾಪ್ಕೋ ಪ್ರಕಾಶನ : ಬೆಂಗಳೂರು ; ಪು. ೧೩ + ೧೨೮

ಚಿರಂತನ

ಮೂರು ಗೀತ ನಾಟಕಗಳು : ಉಷಾ ಸಾಹಿತ್ಯ ಮಾಲೆ, ಮೈಸೂರು : ಪು. ೭೪ + ೮

ಜೇಮ್ಸ್ ಬ್ಯಾರಿ

ಕ. ಅನು : ನಾಗರಾಜ್ (ಆರ್.)

ತಿರುಗುಮುರುಗು : ಸುರುಚಿ ಪ್ರಕಾಶನ, ಮೈಸೂರು ; ಪು. ೧೪೪

ಪರ್ವತವಾಣಿ
    ಯುಃಕಶ್ಚಿತ್ ಹೆಂಗಸು : ಬಾಪ್ಕೋ ಪ್ರಕಾಶನ, ಬೆಂಗಳೂರು ; ಪು. ೩೬

ಭರತೇಶ
    ಭರತೇಶರ ಮೂರು ನಾಟಕಗಳು : ಸುಮತಿ ಪ್ರಕಾಶನ, ಬೆಂಗಳೂರು ; ಪು. ೨೪೪

ಭಾಸ
ಕ. ಅನು : ವಾಸುದೇವ ಭಟ್ಟ (ಎಂ.)
    ಪ್ರತಿಮಾ ನಾಟಕ : ರತ್ನಾಕರ ಪ್ರಕಾಶನ, ಮಂಗಳೂರು ; ಪು. ೯೬

ಮಾಸ್ಟರ್ ಹಿರಣ್ಣಯ್ಯ
    ಫೋನಾವತಾರ : ಮಯೂರ ಪ್ರಕಾಶನ, ಬೆಂಗಳೂರು ; ಪು. ೨೬

ರಘುಸುತ
    ಚೀಟಿಕಾಟ : ಸುರುಚಿ ಪ್ರಕಾಶನ, ಮೈಸೂರು ; ಪು. ೩೦

ವಸಂತ ಕವಲಿ
    ಬೇರೆ ಕೊಂಚ ಮಧು ಪಾತ್ರಕ್ಕೆ ಹಾಕಿ : ಶಾರದಾ ಪ್ರಕಟನಾಲಯ, ಬೆಂಗಳೂರು ;
    ಪು. ೧೪ + ೧೦೫

ವಿಜಯ ತೆಂಡೂಲ್ಕರ್
ಕ. ಅನು : ಪ್ರೇಮಾ ಕಾರಂತ
    ಹಕ್ಕಿ ಹಾರುತಿದೆ ನೋಡಿದಿರಾ : ಅಕ್ಷರ ಪ್ರಕಾಶನ, ಸಾಗರ ; ಪು. ೬೬

ವಿಲಿಯಂ ಷೇಕ್ಸ್‌ಪಿಯರ್
ಕ. ಅನು : ಕೆ. ಎಸ್. ಭಗವಾನ್
    ೧. ಜೂಲಿಯಸ್ ಸೀಸರ್ : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ;
    ಪು. ೪೬ + ೧೩೮

ಕ. ಅನು : ಪಿ. ವಿ. ನಾರಾಯಣ
    ೨. ಹನ್ನೆರಡನೆಯ ರಾತ್ರಿ : 'ಉಲ್ಲಾಸ' ಬೆಂಗಳೂರು ; ಪು. ೧೩೨ + ೫

ವೀರಣ್ಣ ರಾಜೂರ
    ಏಕಾಂಕ ನಾಟಕಗಳು : ಶ್ರೀ ಕುಮಾರೇಶ ಗ್ರಂಥಮಾಲೆ, ಧಾರವಾಡ ; ಪು. ೧೮ + ೧೧೮

ಶಂಕರಗೌಡ (ಕೆ. ವಿ.)
    ಶಿಷ್ಟಾಚಾರ : ಪ್ರಬುದ್ಧ ಪ್ರಕಾಶನ, ಮೈಸೂರು ; ಪು. ೧೦೬

ಶ್ರೀನಿವಾಸ (ಎಸ್ಕೆ)
    ೧. ಕುಲಟೆ : ಪಂಪಾಕ್ಷಿ ಪ್ರಕಾಶನ, ಬೆಂಗಳೂರು ; ಪು. ೬ + ೭೨
    ೨. ಕನ್ನಡ ನಾಡಿನ ಕಲಿ : ಪಂಪಾಕ್ಷಿ ಪ್ರಕಾಶನ, ಬೆಂಗಳೂರು ; ಪು. ೧೩೯

ಶ್ರೀನಿವಾಸರಾವ್ (ಕೆ. ಎ.) [ಶ್ರೀವೈನತೇಯ]
    ಪಾಪ ಕಳೆದಾತ್ಮ : ಆಶಾ ಸಾಹಿತ್ಯ, ಬೆಂಗಳೂರು ; ಪು. ೪೨

ಶ್ರೀರಂಗ

೧. ಏನ ಬೇಡಲಿ ನಿನ್ನ ಬಳಿಗೆ ಬಂದು : ರವೀಂದ್ರ ಪುಸ್ತಕಾಲಯ, ಕಾರ್ಗಲ್, (ಸಾಗರ); ಪು. ೬೭

೨. ಯಾರಿಗೆ ಮಾಡ್ತೀ ಪ್ಯಾಂ : ಅಕ್ಷರ ಪ್ರಕಾಶನ, ಸಾಗರ ; ಪು. ೭೩ + ೮

ಸಿಜ್ (ಜೆ. ಎಂ.)
ಕ. ಅನು : ಬಸವರಾಜನಾಯ್ಕರ

ಪಡುವಣನಾಡಿನ ಪ್ರೇಮವೀರ : ಯುಗಧ್ವನಿ ಪ್ರಕಾಶನ, ಹುಬ್ಬಳ್ಳಿ ; ಪು. ೪ + ೮೨

ಸುನಂದಮ್ಮ (ಟಿ.)

ಬಾದರಾಯಣಿ : ಹಂಸ ಧ್ವನಿ ಪ್ರಕಾಶನ, ಬೆಂಗಳೂರು ; ಪು. ೪೭

ಸಣ್ಣ ಕತೆ

ಅಚ್ಯುತ ಕೇಶವ ಭಾಗವತ (ಸಂ.)
ಕ. ಅನು : ಬೇಂದ್ರೆ (ಲ. ಜಿ.)

ಮರಾಠೀ ಸಣ್ಣ ಕತೆಗಳ ಕಣಜ : ಸಾಹಿತ್ಯ ಅಕಾಡೆಮಿ, ಹೊಸದೆಹಲಿ ; ಪು. ೪೨೩

ಅಶ್ವತ್ಥ
ಅಶ್ವತ್ಥರ ಕಥೆಗಳು : ಶಾರದಾ ಮಂದಿರ,

ಭಾಗ ೨, ಮೈಸೂರು ; ಪು. vi + ೧೧೫

ಅಶೋಕ ಕುಲಕರ್ಣಿ

ಕೃತಪುರದ ಡಾ॥ ಎಲಗುರ್ದ : ಸಾಹಿತ್ಯ ಭಂಡಾರ, ಬೆಂಗಳೂರು ; ಪು. ೪೦

ಉಮಾಶಂಕರ

ಒಂಟಿ ಮರ : ಸ್ವರ್ಣ – ಕಿರಣ ಪ್ರಕಾಶನ, ಮೈಸೂರು : ಪು. ೧೮೦

ಕ್ಯಾತನಹಳ್ಳಿ ರಾಮಣ್ಣ

ವಜ್ರವರ್ತುಲ : ಪ್ರಬುದ್ಧ ಪ್ರಕಾಶನ, ಮೈಸೂರು ; ಪು. ೧೫೧

ಕೃಷ್ಣಕುಮಾರ್ (ಸಿ. ಪಿ.) [ಸಿ. ಪಿ. ಕೆ.]

ಹನ್ನೊಂದು ಹೊರಗಿನ ಕತೆಗಳು : ಹಂಸಧ್ವನಿ ಪ್ರಕಾಶನ, ಬೆಂಗಳೂರು ; ಪು. ೧೫೯

ಗಿರಿರಾಜ್ (ಹೊ. ಶಿ.)

ನಿಸರ್ಗ : ತ್ಯಾಗ ಪ್ರಕಾಶನ, ಮೈಸೂರು ; ಪು. ೯೩ + ೫

ಬರಗೂರು ರಾಮಚಂದ್ರಪ್ಪ

ಸುಂಟರ ಗಾಳಿ : ಗಿರೀಶ ಪ್ರಕಾಶನ, ಹೇಮಗಿರಿ ಪ್ರಕಾಶನ ; ಪು. ೧೭೨ + ೪

ಬೀChi

ಅಮ್ಮನವರ ಇಚ್ಛಾ ! : ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು : ಪು. ೨೦೩

ಭೈರನಟ್ಟಿ (ಪ. ಶಿ.)

ಬೈಲೆಟ್ ಮಾನವ : ಬಾಪ್ಕೋ ಪ್ರಕಾಶನ, ಬೆಂಗಳೂರು ; ಪು. ೯೫

ರಘುಸುತ

ಗೌರವ ತೆರೆ : ಪುಲಿಕೇಶಿ ಪ್ರಕಾಶನ, ಬೆಂಗಳೂರು : ಪು. ೮೮

ರಾಜಶೇಖರ ಭೂಸನೂರಮಠ

೧. ಸಿಗ್ನಿ ಸಂಗೀತ : ಪು. ೧೧೦

೨. ಶುಕ್ರಗ್ರಹದ ಸಾಹಸಿ ಝಿಯಾನ್, ಪು. ೧೫೫
ಝಿಯಾನ್ ಪಬ್ಲಿಕೇಶನ್, ಧಾರವಾಡ

ರಾಮದಾಸ್

ಸೇಡು : ವ್ಯಾಸ ಪ್ರಕಾಶನ, ಉಡುಪಿ ; ಪು. ೧೦೦

ರಾವಬಹದ್ದೂರ

ನೆರೆ – ಹೊರೆ ; ಉಷಾ ಸಾಹಿತ್ಯ ಮಾಲೆ, ಮೈಸೂರು ; ಪು. ೨೦೪ + ೮

ವ್ಯಾಸರಾಯ ಬಲ್ಲಾಳ

ಮಂಜರಿ : ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು ;
ಪು. ೮ + ೪೪೮

ವಿಜಯ ಸಾಸನೂರ

ಕ್ಷಣಗಳು : ಶರತ್ ಪ್ರಕಾಶನ, ಮೈಸೂರು : ಪು. ೧೬೮

ವಿಮಲಾ ರಾಘವೇಂದ್ರ

ಗುಲಾಬಿ ಬಾಡಿತು : ಆಶಾ ಸಾಹಿತ್ಯ, ಬೆಂಗಳೂರು, ಪು. ೭೯

ಶಿವಳ್ಳಿ ಕೆಂಪೇಗೌಡ

ಕಾಗೆಪುರದಲ್ಲಿ ಮೂರು ಮಕ್ಕಳ ಸಾವು : ಜ್ವಾಲಾ ಪ್ರಕಾಶನ, ಶಿವಳ್ಳಿ (ಮಂಡ್ಯ ಜಿಲ್ಲೆ) ;

ಸುಮತೀಂದ್ರ ನಾಡಿಗ್

ಕಾರ್ಕೋಟಕ : ಬಾಪ್ಕೋ ಪಬ್ಲಿಕೇಷನ್, ಬೆಂಗಳೂರು ; ಪು. ೧೬೪

ಹಾಲಪ್ಪ (ಎಚ್.) ಸಂ

ಆಗಮನ : ಪ್ರಶಾಂತಿ ಪ್ರಕಾಶನ, ಸಾಸ್ವೆಹಳ್ಳಿ ; ಪು. ೬೮ + ೧೦

ಕಾದಂಬರಿ

ಅನಂತರಾಮು (ಎನ್. ಪಿ.)

ಚೈತ್ರವನ : ಗಿರಿಜಾ ಪ್ರಕಾಶನ, ಮೈಸೂರು ; ಪು. ೪೮೪ + ೪

ಅನುಪಮಾ ನಿರಂಜನ

ನಟಿ : ಡಿ. ವಿ. ಕೆ. ಮೂರ್ತಿ, ಮೈಸೂರು ; ಪು. ೧೭೫

ಅಯ್ಯನರ್ (ಪಿ. ಜಿ. ಪಿ.)

ಸಮಾಗಮ : ಪ್ರಗತಿಶೀಲ ಸಾಹಿತ್ಯ ಸಂಘ, ಬೆಂಗಳೂರು ; ಪು. ೧೫೫

ಅಶ್ವಿನಿ

ಕಪ್ಪು ಕೊಳ : ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು ; ಪು. ೧೮೦

ಆರ್ಯಾಂಬ ಪಟ್ಟಾಭಿ
    ಸಾಕ್ಷಾತ್ಕಾರ : ಪ್ರಕಾಶ ಸಾಹಿತ್ಯ, ಬೆಂಗಳೂರು ; ಪು. ೧೭೯

ಆಳವಂದಾರ್ ಗೋಪಾಲಾಚಾರ್
    ನಾದಿನಿ : ಶ್ರೀ ಗಣಪತಿ ಪಬ್ಲಿಕೇಷನ್ಸ್, ಬೆಂಗಳೂರು ; ಪು. ೧೮೯

ಇಂದಿರಾ (ಎಂ. ಕೆ.)
    ೧. ವರ್ಣಲೀಲೆ : ವಾಸವಾಂಬ ಪ್ರಕಾಶನ, ಬೆಂಗಳೂರು ; ಪು. ೨೩೦
    ೨. ಕೂಚುಭಟ್ಟ : ಹೇಮಂತ ಸಾಹಿತ್ಯ, ಬೆಂಗಳೂರು, ಪು. ೧೩೪
    ೩. ಹಸಿವು : ಹೇಮಂತ ಸಾಹಿತ್ಯ, ಬೆಂಗಳೂರು, ಪು. ೧೩೮

ಈಚನೂರು ಜಯಲಕ್ಷ್ಮಿ
    ಪ್ರೇಮ ಬಂಧನ : ಹಂಸಧ್ವನಿ ಪ್ರಕಾಶನ, ಬೆಂಗಳೂರು, ಪು. ೨೫೬

ಕಡಿದಾಳ್ ಮಂಜಪ್ಪ
    ಕ್ರಾಂತಿ ಕೂಟ : ಕಡಿದಾಳ್ ಪ್ರಕಾಶನ, ಬೆಂಗಳೂರು, ಪು. ೮ + ೨೭೯

ಕುಮಾರ ಜನ್ನ
    ಅನ್ವೇಷಣೆ : ಸಾಹಿತ್ಯ ದೂತ, ಬೆಂಗಳೂರು, ಪು. ೧೪೧

ಕೂಳೂರು ಶ್ರೀನಿವಾಸ ನಾಯಕ್
    ಬಂಗಾರದ ತೆನೆ : ಮಲೆನಾಡು ಪ್ರಕಾಶನ, ಬೆಂಗಳೂರು, ಪು. ೨೨೩

ಗೋಪಾಲರಾಯ (ಎಚ್. ಎಸ್.)
    ಜೇನು-ನಂಜು : ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು, ಪು. ೨೩೧

ಚಂದ್ರಕಲಾ (ಬಿ. ಎಸ್.)
    ಸಂಗೀತದ ಸುಳಿಯಲ್ಲಿ : ಬಾಲಾಜಿ ಪ್ರಕಾಶನ, ಬೆಂಗಳೂರು, ಪು. ೨೮೦

ಚಂದ್ರಕಾಂತ ಕುಸನೂರ
    ಯಾತನಾ ಶಿಬಿರ : ಮನೋಹರ ಗ್ರಂಥಮಾಲಾ, ಧಾರವಾಡ, ಪು. ೧೨೧

ಚನ್ನವೀರಯ್ಯ (ಸಿ. ಎನ್.)
    ದುಂಬಿಯಾಟ : ಶ್ರೀ ಉಮಾಶಂಕರ ಸಾಹಿತ್ಯ ಪ್ರಕಟನಾಲಯ, ಬೆಂಗಳೂರು, ಪು. ೨೨೦

ಜಯಪ್ರಕಾಶ್ (ಕೆ. ಎ.)
    ವಿಧಿ : ಪ್ರಕಾಶ ಸಾಹಿತ್ಯ, ಬೆಂಗಳೂರು, ಪು. ೧೫೪

ಜಯಲಕ್ಷ್ಮೀದೇವಿ (ಸಿ. ಎನ್.)
    ಶಪ್ತಪಾಪಿ : ಗೀತಾ ಬುಕ್ ಹೌಸ್, ಮೈಸೂರು, ಪು. ೪೦೨

ಜಯತೀರ್ಥ ರಾಜಪುರೋಹಿತ
    ಜೇನುಸುಳಿ : ಸುರುಚಿ ಪ್ರಕಾಶನ, ಮೈಸೂರು, ಪು. ೩೩೬

ಜೂಲ್ಸ್‌ವರ್ನ್ ಮತ್ತು ವಿಕ್ಟರ್ ಹ್ಯೂಗೋ
ಕ. ಅನು : ವಾಸುದೇವ ಭಟ್ಟ (ಎಂ.)
    ಎರಡು ಫ್ರೆಂಚ್ ಕಾದಂಬರಿಗಳು : (ಭೂ ಪ್ರದಕ್ಷಿಣೆ ಮತ್ತು ಸಮುದ್ರದ ಶ್ರಮಜೀವಿಗಳು)
    ರತ್ನಾಕರ ಪ್ರಕಾಶನ, ಮಂಗಳೂರು, ಪು. viii + ೨೦೮

ತೈಲೂರು ವೆಂಕಟಕೃಷ್ಣ

೧. ಅಗ್ನಿಕುಂಡ : ಎಸ್. ಡಿ. ಜಯರಾಮು, ಮಂಡ್ಯ, ಪು. ೧೫೯

೨. ಸಮ್ಮಿಳನ : ಕಾವೇರಿ ಸಾಹಿತ್ಯ ಮಂದಿರ, ಮಂಡ್ಯ, ಪು. ೧೫೭

೩. ರಕ್ತಾಭಿಷೇಕ

ದೇವಕೀ ಮೂರ್ತಿ

ಶಿಶಿರ ವಸಂತ : ಕಾವ್ಯಾಲಯ, ಮೈಸೂರು, ಪು. ೧೪೬

ಧಾರೇಶ್ವರ್

೧. ಶ್ರದ್ಧಾಂಜಲಿ : ಹೇಮಂತ ಸಾಹಿತ್ಯ, ಬೆಂಗಳೂರು, ಪು. ೨೪೫

೨. ಒರೆಗಲ್ಲು : ಹೇಮಂತ ಸಾಹಿತ್ಯ, ಬೆಂಗಳೂರು, ಪು. ೧೭೫

ನರೇಂದ್ರಬಾಬು

ಸ್ವಯಾರ್ಜಿತ : ಹೇಮಂತ ಸಾಹಿತ್ಯ, ಬೆಂಗಳೂರು, ೧೯೯

ನಂಜುಂಡಸ್ವಾಮಿ (ಎಂ.)

ತೃಪ್ತಿ : ಎಂ. ನಂಜುಂಡಸ್ವಾಮಿ, ತಿಪಟೂರು, ಪು. ೧೪೪

ನಾಗೇಗೌಡ (ಎಚ್. ಎಲ್.)

ಸೊನ್ನೆಯಿಂದ ಸೊನ್ನೆಗೆ : ಸಾಹಿತ್ಯ ಸದನ, ಬೆಂಗಳೂರು, ಪು. ೧೪ + ೨೫೭

ನಾಡಿಗೇರ ಕೃಷ್ಣರಾಯ

ಪಂಚರಂಗೀ ಪರಮಾತ್ಮ : ಪ್ರಕಾಶ ಸಾಹಿತ್ಯ, ಬೆಂಗಳೂರು, ಪು. ೧೨೨

ನಾಡಿಗೇರ್ ಮಾಧವರಾವ್

ಅಶ್ರುಧಾರಾ ; ಅ. ನ. ಕೃ. ಕನ್ನಡ ಸಂಘ, ಬೆಂಗಳೂರು ; ಪು. ೨೧೧

ನಾರಾಯಣಸ್ವಾಮಿ

ಕತ್ತಲು ಕರಗಿತು : ಭರತೇಶ ಪ್ರಕಾಶನ. ಬೆಂಗಳೂರು ; ಪು. ೧೭೨

ನಿರ್ಮಲಾ

೧. ಮಂಗಳದ ಮುಂಬೆಳಗು ; ಸಾಹಿತ್ಯ ದೂತ, ಬೆಂಗಳೂರು ; ಪು. ೨೪೦

೨. ಪಾರ್ವತಿ : ರಾಜಕಮಲ ಪ್ರಕಾಶನ, ಬೆಂಗಳೂರು ; ಪು. ೨೧೬

ನೀಳಾದೇವಿ

ಮೂಕರಾಗ : ಹೇಮಂತ ಸಾಹಿತ್ಯ, ಬೆಂಗಳೂರು ; ಪು. ೧೯೬

ಪದ್ಮಾ (ಎಂ. ಸಿ.)

ಪ್ರೇಮ ವಸಂತ : ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು ; ಪು. ೨೦೨

ಪದ್ಮಜಾ

ಬೆಂಕಿಯ ಸಂಗ : ಪುಲಿಕೇಶಿ ಪ್ರಕಾಶನ, ಬೆಂಗಳೂರು : ಪು. ೯೫

ಫ್ರೆಡರಿಕ್ ಮ್ಯಾರಿಯಟ್ (ಮೂಲ ಇಂಗ್ಲಿಷ್)

ಕ. ಅನು : ಗೋಪಾಲಕೃಷ್ಣ ಅಡಿಗ

ಬನದ ಮಕ್ಕಳು : ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು ; ಪು. ೨೩೪

ಬಸವರಾಜ್ (ಆರ್.)

ಈಸೂರಿನ ಚಿರಂಜೀವಿಗಳು : ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು ; ೮+೧೬೮

ಬಸವರಾಜ್ ಕೆಸ್ತೂರ್

ಸಂಘರ್ಷ : ವಿಜಯ ಪಬ್ಲಿಕೇಶನ್, ಬೆಂಗಳೂರು ; ಪು. ೮೮

ಬಸವರಾಜ ಕಟ್ಟೀಮನಿ

ಮಾಜೀ ಮಂತ್ರಿ : ಪ್ರತಿಭಾ ಗ್ರಂಥ ಮಾಲೆ, ಧಾರವಾಡ ; ಪು. ೧೫೦

ಬಸವರಾಜ್ ಪಾಟೀಲ

ಬಂಗಾರದ ಹೆಣ್ಣು : ಸುಜಾತ ಪ್ರಕಾಶನ, ಬಿಜಾಪುರ ; ಪು. ೧೨೯

ಬೆಳಗಲಿ (ದು. ನಿಂ.)

ದಾಕ್ಷಾಯಣಿ ; ಸಿರಿನುಡಿ ಪ್ರಕಾಶನ, ಅಥಣಿ (ಬೆಳಗಾವಿ ಜಿಲ್ಲೆ) : ಪು. ೨೪೫

ಬೈರಕೂರು ವೆಂಕಟೇಶ

ಊರ್ಮಿಳೆ : ಸಾಹಿತ್ಯ ಭಾರತಿ ಪ್ರಕಾಶನ, ಬೆಂಗಳೂರು ; ಪು. ೧೪೪

ಮನೋಹರ ಚಂದ್ರನ್ (ಎಂ. ಪಿ.)

ಆಪರೇಷನ್ ಸಂಜೀವಿ : ಸುಮತಿ ಪ್ರಕಾಶನ, ಬೆಂಗಳೂರು ; ಪು. ೪+೧೩೨

ಮಣಿ ಮಧುಕರ್ (ಮೂಲ ಹಿಂದಿ)

ಕ. ಅನು. ಎನ್. ಡಿ. ಕೃಷ್ಣಮೂರ್ತಿ

ಮರಳು ಕಾಡಿನ ಮುಗ್ಧರು : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ; ಪು. ೧೫೫

ಮಹಾಲಕ್ಷ್ಮಿ

ಮಂಗಳವಾದ್ಯ : ಡಾಕ್ಟರ್ ಸೇತೂರಾಮ್ : ಬೆಂಗಳೂರು ; ಪು. ೧೫೨

ಮಾತೆ ಮಹಾದೇವಿ

ತರಂಗಿಣಿ : ಸುಯಿಧಾನ ಸುಗ್ರಂಥ ಮಾಲೆ, ಧಾರವಾಡ ; ಪು. ೬೦೦

ಮಿರ್ಜಾರುಸ್ವಾ (ಮೂಲ ಉರ್ದು)

ಕ. ಅನು. ಶಾಂತರಸ

ಉಮ್‌ರಾವ್‌ಜಾನ್ ಅದಾ : ಸಾಹಿತ್ಯ ಆಕಾಡೆಮಿ, ಹೊಸ ದೆಹಲಿ ; ಪು. ೩೫೦

ರಂಗನಾಯಕಮ್ಮ (ಮೂಲ ತೆಲುಗು)

ಕ. ಅನು. ಯಂ. ಜಿ. ಭೀಮರಾವ್

ರಚಯಿತ್ರಿ : ಹೇಮಂತ ಸಾಹಿತ್ಯ, ಬೆಂಗಳೂರು ; ಪು. ೨೪೮

ರಘುಸುತ

ಅನುಭವ : ಪುಲಿಕೇಶಿ ಪ್ರಕಾಶನ, ಬೆಂಗಳೂರು : ಪು. ೧೫೫

ರಮಾದೇವಿ ಮೂರ್ತಿ

ವಿರಾಗಿನಿ : ಕರುಣಾಕರನ್ ಪ್ರಕಾಶನ, ಮೈಸೂರು ; ಪು. ೧೫೬

ರಣಜಿತ್ ದೇಸಾಯಿ (ಮೂಲ ಮರಾಠಿ)

ಕ. ಅನು : ಭಾಸ್ಕರ ಗೋವಿಂದರಾವ ಗೋಖಲೆ

ಸ್ವಾಮಿ : ಗೀತಾ ಬುಕ್ ಹೌಸ್ : ಮೈಸೂರು : ಪು. ४೭೧

ರಾಧಾದೇವಿ (ಹೆಚ್. ಜಿ.)

ಭ್ರಮರ ಬಂಧನ : ಅ. ನ. ಕೃ. ಕನ್ನಡ ಸಂಘ, ಬೆಂಗಳೂರು ; ಪು. ೧೮೪

ರಾಮರಾವ್ (ಟಿ. ಕೆ.)

೧. ಮರಳು ಸರಪಣಿ : ಸಾಹಿತ್ಯ ಜ್ಯೋತಿ, ಬೆಂಗಳೂರು ; ಪು. ೨೪೫

೨. ಗುಲಾಮ ಹೆಣ್ಣು : ಹಂಸಧ್ವನಿ ಪ್ರಕಾಶನ, ಬೆಂಗಳೂರು ; ೯೩

ರಾಮಶರ್ಮ

ಪರಾಭವ : ಆಶಾ ಸಾಹಿತ್ಯ, ಬೆಂಗಳೂರು, ಪು. ೨೦೩

ರಾವಬಹದ್ದೂರ

ಕಾಂಚನ ಮೃಗ : ಗೀತಾ ಬುಕ್ ಹೌಸ್, ಮೈಸೂರು, ಪು. ೨೫೩

ವಿಜಯಶ್ರೀ

ಒಂಟಿ : ಸಿ. ಎಂ. ಎಸ್. ಆರ್ಯ, ಶಿವಮೊಗ್ಗ, ಪು. ೧೪೦ + ೬ + ೬

ವಿಮಲ ರಾಘವೇಂದ್ರ

೧. ಬಳ್ಳಿಗಾಸರೆ : ಆಶಾ ಸಾಹಿತ್ಯ, ಬೆಂಗಳೂರು. ಪು. ೧೫೮

೨. ಶುಭೋದಯ : ಆಶಾ ಸಾಹಿತ್ಯ, ಬೆಂಗಳೂರು, ಪು. ೧೫೬

ವಿಶಾಲಾಕ್ಷಿ ದಕ್ಷಿಣಾಮೂರ್ತಿ

ಶ್ರೀವನಿತಯುರಸನೆ : ಹೇಮಂತ ಸಾಹಿತ್ಯ, ಬೆಂಗಳೂರು, ಪು. ೧೮೧

ಶಿವರಾಮ ಕಾರಂತ

ಇಳೆಯೆಂಬ..." : ಐ. ಬಿ. ಎಚ್. ಪ್ರಕಾಶನ, ಬೆಂಗಳೂರು, ಪು. ೬ + ೩೨೨

ಶ್ರೀನಿವಾಸ ಉಡುಪ

ವಿಜಯಲಕ್ಷ್ಮಿ : ಹೇಮಂತ ಸಾಹಿತ್ಯ, ಬೆಂಗಳೂರು, ಪು. ೧೩೫

ಸ್ವಾಮಿ (ಬಿ. ಎಸ್.)

ಕರ್ನಾಟಕ ಶ್ರೀ : ನವೀನ ಪ್ರಕಾಶನ, ಬೆಂಗಳೂರು, ಪು. ೧೪೬

ಸುಂದರ ನಾಡಕರ್ಣಿ

ಗೋಡೆಗಳು : ಸಮಾಜ ಪುಸ್ತಕಾಲಯ, ಧಾರವಾಡ, ಪು. ೧೫೫

ವಿಮರ್ಶೆ

ಕಲಬುರ್ಗಿ (ಎಂ. ಎಂ.) ಮತ್ತು ಇತರರು

ಕನ್ನಡದಲ್ಲಿ ಷಟ್ಪದಿ ಸಾಹಿತ್ಯ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೨೫೪

ಕಾಳೇಗೌಡ ನಾಗವಾರ

ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೨೩೬ + ೮

ಕುರ್ತುಕೋಟಿ (ಕೆ. ಡಿ.)

ಬೃಂಗದ ಬೆನ್ನೇರಿ : ಮನೋಹರ ಗ್ರಂಥಮಾಲೆ, ಧಾರವಾಡ, ಪು. ೧೩೨

ಕೃಷ್ಣಕುಮಾರ್ (ಸಿ. ಪಿ.) [ಸಿ. ಪಿ. ಕೆ.]
ಪರಾಮರ್ಶೆ : ಹಂಸಧ್ವನಿ ಪ್ರಕಾಶನ, ಬೆಂಗಳೂರು, ಪು. ೧೬೪+೮

ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್. ಎಸ್.) [ಎಚ್ಚೆಸ್ಕೆ]
ಪ್ರತಿಭಾ ಸಂದರ್ಶನ : ಹಂಸಧ್ವನಿ ಪ್ರಕಾಶನ, ಬೆಂಗಳೂರು, ಪು. ೧೨೦

ಕೊಟ್ಟಲಗಿ ಮತ್ತು ಗದಗಕರ
ಬೇಂದ್ರೆ ಸಾಹಿತ್ಯ ಸೌರಭ : ಸಮಾಜ ಪುಸ್ತಕಾಲಯ, ಧಾರವಾಡ, ಪು. ೧೧೪

ಗಿರಡ್ಡಿ ಗೋವಿಂದರಾಜ
ನವ್ಯ ವಿಮರ್ಶೆ : ಅಕ್ಷರ ಪ್ರಕಾಶನ, ಸಾಗರ, ಪು. ೧೪೧

ಗುಂಡಪ್ಪ (ಡಿ. ವಿ.) [ಡಿ.ವಿ.ಜಿ.]
ಕಾವ್ಯ ಸ್ವಾರಸ್ಯ : ಕಾವ್ಯಾಲಯ, ಮೈಸೂರು, ಪು. ೪+೧೪೪

ಗೋಕಾಕ್ (ವಿ. ಕೃ.)
ನವ್ಯತೆ : ಸುರುಚಿ ಪ್ರಕಾಶನ, ಮೈಸೂರು, ಪು. ೧೬೦

ಚಿದಾನಂದ ಮೂರ್ತಿ (ಎಂ.)
ವಚನ ಸಾಹಿತ್ಯ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೬+೨೬೪

ಜಯದೇವ್ (ಹು. ಕಾ.)
ಶಾಸನ ಮತ್ತು ಗದ್ಯ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೨೧೦+೮

ಜವರೇಗೌಡ (ದೇ) [ದೇಜಗೌ]
ಕುವೆಂಪು ದರ್ಶನ ಮತ್ತು ಸಂದೇಶ : ಸಹ್ಯಾದ್ರಿ ಪ್ರಕಾಶನ, ಮೈಸೂರು, ಪು. ೮+೧೩೮

ದೇಶಪಾಂಡೆ ಸುಬ್ಬರಾಯ
ಸಂತೆಯುಲ್ಲೊಂದು ಮನೆ : ಕಾವ್ಯಧಾರಾ ಪ್ರಕಾಶನ, ಧಾರವಾಡ, ಪು. ೫೧

ನಾಗರಾಜ್ ಭಟ್ (ಬಿ. ಎನ್.)
ವಿಕಿರಣ : ನೆಲ-ಮನೆ ಪ್ರಕಾಶನ, ಮೈಸೂರು, ಪು. ೮೮+೬

ನಾರಾಯಣ (ಪಿ. ವಿ.)
ಚಂಪೂ ಕವಿಗಳು : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೬+೨೬೪

ನಾಯಕ (ಹ. ಮಾ.) ಸಂ.
೧. ಬಸವ ಪರುಷ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು. ೮+೨೭೨
೨. ಬಿಡುಗಡೆ ಬೆಳ್ಳಿ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು. ೪+೪೫೦
೩. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ : (ಎರಡನೆಯ ಸಂಪುಟ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು. ೮೩೯

ಪಂಚಾಕ್ಷರಿ ಹಿರೇಮಠ
ಕವಿಕಾವ್ಯದರ್ಶನ : ಐ ಬಿ ಎಚ್ ಪ್ರಕಾಶನ, ಬೆಂಗಳೂರು, ಪು. ೪+೮೧

ಮರುಳ ಸಿದ್ದಪ್ಪ (ಕೆ.)
ಷಟ್ಪದಿ ಸಾಹಿತ್ಯ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೧೯೮+೮

ಮಹೇಶ್ವರಪ್ಪ
ಭಾವಬಿಂದು : ಮಹೇಂದ್ರ ಪ್ರಕಾಶನ, ಚಿತ್ರದುರ್ಗ, ಪು. ೧೦೨ + ೮

ಮಾಸ್ತಿ ವೆಂಕಟೇಶ ಅಯ್ಯಂಗಾರ್
ಸಾಹಿತ್ಯ ಪ್ರೇರಣೆ : ಬಾಪ್ಕೋ ಪ್ರಕಾಶನ, ಬೆಂಗಳೂರು, ಪು. ೫ + ೧೪೯ + ೪

ರಂಗಸ್ವಾಮಿ (ಡಿ. ಟಿ.)
ಸಾಫೋಕ್ಲಿಸ್ ಮಹಾಕವಿಯ ದೊರೆ ಈಡಿಪಸ್ ಮತ್ತು ಅಂತಿಗೊನೆ : ಜನಮಿತ್ರ ಪ್ರಕಾಶನ, ಹಾಸನ, ಪು. ೪೪

ರಘುಸುತ
ಸಾಹಿತ್ಯ ಲೋಕ : ಆಶಾ ಸಾಹಿತ್ಯ, ಬೆಂಗಳೂರು, ಪು. ೯೧

ರಾಮಚಂದ್ರಶರ್ಮ
ಪ್ರತಿಭಾ ಸಂದರ್ಶನ : ಸುಮತಿ ಪ್ರಕಾಶನ, ಬೆಂಗಳೂರು, ಪು. ೧೧೬ + ೪

ರೈಸ್ (ಎಡ್ವರ್ಡ್ ಪಿ.)
ಕ. ಅನು : ಸಂಗಮನಾಥ ಜಿ. ಹಂಡಿ, ಕುಮಾರಿ ಪೌಲಿನ ನಂದಗಾಂವ
ಕನ್ನಡ ಸಾಹಿತ್ಯ ಚರಿತ್ರೆ : ಶರತ್ ಪ್ರಕಾಶನ, ಮೈಸೂರು, ಪು. ೧೬೦ + ೨೪

ಲಂಕೇಶ್ (ಪಿ.)
ಕಂಡದ್ದು ಕಂಡ ಹಾಗೆ : ಹಂಸಧ್ವನಿ ಪ್ರಕಾಶನ, ಬೆಂಗಳೂರು, ಪು. ೧೪೭

ವಿಜಯಾ
ಸಣ್ಣ ಕತೆಯ ಸೊಗಸು : ದಿ ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ, ಲಿಮಿಟೆಡ್, ಬೆಂಗಳೂರು, ಪು. ೭೫

ವೆಂಕಟರಾಮಪ್ಪ (ಕೆ.)
ಕವಿ ರಾಘವಾಂಕ : ಡಿ. ವಿ. ಕೆ. ಮೂರ್ತಿ, ಮೈಸೂರು, ಪು. ೯೯

ವೆಂಕಟೇಶಮೂರ್ತಿ (ಎಚ್. ಎಸ್.)
ಕೀರ್ತನಕಾರರು : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೧೩೪ + ೮

ವೈಕುಂಠರಾಜು (ಬಿ. ವಿ.)
ಸ್ಪಂದನ : ಕಲಾ ಸಾಹಿತ್ಯ ಪ್ರಕಾಶನ, ಬೆಂಗಳೂರು, ಪು. ೧೩೨ + ೮

ಶಂಕರ ಪಾಟೀಲ (ಸಂ)
ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯ : ಲೋಕ ಶಿಕ್ಷಣ ಮಾಲೆ, ಹುಬ್ಬಳ್ಳಿ, ಪು. ೪೮

ಶಿವನಂಜಯ್ಯ (ಮು)
ಕುವೆಂಪು ವ್ಯಕ್ತಿತ್ವ ಮತ್ತು ಸಾಹಿತ್ಯ : ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ಪು. ೧೦೮ – ೧೬

ಶಿವರುದ್ರಪ್ಪ (ಜಿ. ಎಸ್.)
೧. ಕನ್ನಡ ಸಾಹಿತ್ಯ ಸಮೀಕ್ಷೆ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೧೮೭ + ೮

೨. ಕವಿ ಬೇಂದ್ರೆ (ಸಂ) : ಬೆಂಗಳೂರು ವಿಶ್ವವಿದ್ಯಾಲಯ, (ಕನ್ನಡ ಅಧ್ಯಯನ ಕೇಂದ್ರ ಮಾಲೆ ೨೨) ಬೆಂಗಳೂರು, ಪು. ೧೪೪+೮

೩. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂ) : (ಸಂಪುಟ ಎರಡು), ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು, ಪು. ೩೬೨+೧೦

೪. ಕನ್ನಡ ವಿಮರ್ಶೆಯ ನೆಲೆ-ಬೆಲೆ (ಸಂ.) : ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೧೭೬+೮

ಶಿವಣ್ಣ (ಎಸ್.) ಮತ್ತು ಇತರರು

ಸರ್ವಜ್ಞ-ಒಂದು ಸಮೀಕ್ಷೆ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ; ಪು. ೧೧೨+೮

ಶೇಷಗಿರಿರಾವ್ (ಎಲ್. ಎಸ್.)

ಹೊಸಗನ್ನಡ ಸಾಹಿತ್ಯ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ; ಪು. ೩೨೮+೮

ಸೀತಾರಾಮಯ್ಯ (ವಿ.) ಸಂ.

ಜನ್ನ : ಐ. ಬಿ. ಎಚ್. ಪ್ರಕಾಶನ, ಬೆಂಗಳೂರು ; ಪು. ೨೦೫

ಸೀತಾರಾಮಯ್ಯ (ಎಂ. ವಿ.)

ಶಾಸ್ತ್ರ ಸಾಹಿತ್ಯ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ; ಪು. ೬+೩೧೦

ಸೋಮಶೇಖರ ಇಮ್ರಾಪುರ

ಇತ್ತೀಚಿನ ಕನ್ನಡ ಕಾವ್ಯ ಮತ್ತು ಪರಿಸರ : ಯುಗಧ್ವನಿ ಪ್ರಕಾಶನ, ಧಾರವಾಡ ; ಪು. ೨+೮೬

ಹಂಪ ನಾಗರಾಜಯ್ಯ

ಸಾಂಗತ್ಯ ಕವಿಗಳು : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ; ಪು. ೬+೨೨೭

ಕಿತ್ತೂರ (ಕೆ. ಎ.)

ಭಾರತೀಯ ಸಾಹಿತ್ಯ ಸಮೀಕ್ಷೆ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪು. ೮+೨೩೮

ಪ್ರಬಂಧ ಮತ್ತು ಜೀವನ ಚರಿತ್ರೆ

ಆಶಾ. ಬಿ. ಪಾಟೀಲ್ ಮತ್ತು ಇತರರು

ಯುವಭಾರತಿ-೧೯೭೪ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ; ಪು. ೧೭೬+೮

ಕೇಶವಭಟ್ಟ (ಟಿ.)

ಮಣಿಹಾರ : ಚಿರ ಸಾಹಿತ್ಯ ಪ್ರಕಾಶನ, ಬೆಂಗಳೂರು ; ಪು. ೧೫೬

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಮಹಾತ್ಮಾ ಗಾಂಧಿಯವರ ಹಾಸ್ಯ ಪ್ರವೃತ್ತಿ ಮತ್ತು ಇತರ ಲೇಖನಗಳು, ಮಾನಸ ಗಂಗೋತ್ರಿ ಮೈಸೂರು : ಪು. ೧೦+೭೫

ತಿಪ್ಪೇರುದ್ರಸ್ವಾಮಿ (ಎಚ್.) ಸಂ.
ಮಹಾತ್ಮ (ಸಂ. ಎರಡು) ಗಾಂಧಿ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೧೨+೬೦೨

ಸಂಧ್ಯಾ (ವೈ. ಕೆ.)
ಮಹಿಳೆ ಮತ್ತು ಉದ್ಯೋಗ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೬ + ೫೫

ಸಿಂಧುವಳ್ಳಿ ಅನಂತಮೂರ್ತಿ
ರಂಗ : ಸುರುಚಿ ಪ್ರಕಾಶನ, ಮೈಸೂರು ; ಪು. ೧೩೦

ಸೀತಾರಾಮಯ್ಯ (ಎಂ. ವಿ.)
ರಸಿಕತೆ : ಹಂಸಧ್ವನಿ ಪ್ರಕಾಶನ, ಬೆಂಗಳೂರು, ಪು. ೧೬೨

ಸುಬ್ರಹ್ಮಣ್ಯ (ಸೂ.)
ಬಿಳಲುಗಳು : ಅಭಿರುಚಿ ಪ್ರಕಾಶನ ; ಬೆಂಗಳೂರು, ಪು. ೧೪೪

ಸುಮಿತ್ರಾ ರಾಮಣ್ಣ ಮತ್ತು ಇತರರು
ಹೆಣ್ಣು ಸಮಾಜದ ಕಣ್ಣು : ಮಂಗಳ ಭಾರತಿ ಪ್ರಕಾಶನ, ಮೈಸೂರು ; ಪು. ೧೧೦

ಕುಮಾರ ವೆಂಕಣ್ಣ
ರಾಬರ್ಟ್ ಓವೆನ್ : ಇಂಪ್ರಿಂಟ್ ಪ್ರಕಾಶನ : ಬೆಂಗಳೂರು, ಪು. ೨೦೬

ನಾರಾಯಣ ಮೂರ್ತಿ (ಜಿ. ವಿ.)
ವಿನೋಬಾ ಜೀವನ-ದರ್ಶನ : ಕರ್ನಾಟಕ ಸರ್ವೋದಯ ಸಾಹಿತ್ಯ ; ಬೆಂಗಳೂರು, ಪು. ೩೫೦

ನಾರಾಯಣರಾವ್ (ವಿ. ಎಸ್.)
ಸರ್ ಮಿರ್ಜಾ ಇಸ್ಮಾಯಿಲ್ : ಕನ್ನಡ ಸಾಹಿತ್ಯ ಪರಿಷತ್ತು ; ಬೆಂಗಳೂರು, ಪು.೯ + ೧೯೭

ಪರಮಶಿವಯ್ಯ (ಜೀ. ಶಂ.)
ಪಿ. ಆರ್. ತಿಪ್ಪೇಸ್ವಾಮಿ : ಸಾಹಿತ್ಯ ಸದನ ; ಮೈಸೂರು, ಪು. ೨೦

ಮುಗಳಿ (ರಂ. ಶ್ರೀ.)
ಶ್ರೀ ಅರವಿಂದ ಮಕರಂದ :ಉಷಾ ಸಾಹಿತ್ಯ ಮಾಲೆ, ಮೈಸೂರು ; ಪು. ೮ + ೩೦೭

ರೂಪರಾಜ್ (ಎಂ. ಎಸ್.)
ಟಾಲ್‌ಸ್ಟಾಯ್ ಜೀವನ ಚಿತ್ರ ; ರೂಪರಾಜ್ ಪಬ್ಲಿಕೇಷನ್ಸ್ ; ಮೈಸೂರು, ಪು. ೧೧೩

ಸೀತಾರಾಮಯ್ಯ (ಹ. ವೆಂ.)ನಿರೂಪಣೆ
ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮ ; ಕಲಾ ಸಾಹಿತ್ಯ ಪ್ರಕಾಶನ ; ಬೆಂಗಳೂರು, ಪು ೧೩೫ + ೨೪

ನಗೆಬರಹ ಮತ್ತು ಪ್ರವಾಸ ಸಾಹಿತ್ಯ

ನರಸಿಂಹಮೂರ್ತಿ (ಎಂ. ಎಸ್.)
ಶ್ರಮದಾನ : ಉದಯ ಲೇಖಕರ ಸಹಕಾರಿ ಪ್ರಕಾಶನ ; ಬೆಂಗಳೂರು. ಪು. ೧೨೮

ಶಿವರಾಂ (ಆರ್.) [ರಾಶಿ]
ಕೊರವಂಜಿ ಕಂಡ ನಗು ಸಮಾಜ : ಹಂಸಧ್ವನಿ ಪ್ರಕಾಶನ ; ಬೆಂಗಳೂರು, ಪು. ೧೨೦

ಸ್ವಾಮಿ (ಬಿ. ಜಿ. ಎಲ್.)
ದೌರ್ಗಂಧಿಕಾಪಹರಣ : ಮನೋಹರ ಗ್ರಂಥಮಾಲಾ ; ಧಾರವಾಡ, ಪು. ೧೦೬

ಸುನಂದಮ್ಮ (ಟಿ.)
ಮುತ್ತಿನ ಚೆಂಡು : ಹಂಸಧ್ವನಿ ಪ್ರಕಾಶನ ; ಬೆಂಗಳೂರು, ಪು. ೧೨೪

ಜವರೇಗೌಡ ಡಿ. [ದೇ. ಜ. ಗೌ.]
ಆಫ್ರಿಕಾ ಯಾತ್ರೆ : ಸುರುಚಿ ಪ್ರಕಾಶನ ; ಮೈಸೂರು, ಪು. ೧೫೨

ಶಂಕರ ಪಾಟೀಲ
ಸವಿಸಂಚಾರ : ಉಷಾ ಸಾಹಿತ್ಯ ಮಾಲೆ, ಮೈಸೂರು ; ಪು. ೧೬೧ + ೮

ಶಾಸ್ತ್ರಿ (ಎ. ವಿ.)
ಭಾರತ ದರ್ಶನ (ಭಾಗ ೧) : ಶಾಸ್ತ್ರೀಸ್ ಟ್ರಾವಲ್ಸ್ : ಬೆಂಗಳೂರು, ಪು. ೯೧

ಸಂಪಾದಿತ ಕೃತಿಗಳು, ಗದ್ಯಾನುವಾದ ಮತ್ತು ನಿಘಂಟು

ಕುಲಕರ್ಣಿ (ಬಿ. ಎಸ್.) ಸಂ.
ಚಾವುಂಡರಾಯ ವಿರಚಿತ ತ್ರಿಷಷ್ಟಿ ಶಲಾಕಾ ಪುರುಷ ಪುರಾಣಂ :
ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೨೬ + ೪೭೭.

ಕುಕ್ಕಿಲ ಕೃಷ್ಣಭಟ್ಟ (ಸಂ)
ನಾಗವರ್ಮನ ಛಂದೋಂಬುಧಿ : ಡಿ.ವಿ.ಕೆ. ಮೂರ್ತಿ, ಮೈಸೂರು, ಪು. ೨೮೦

ಕೃಷ್ಣ ಜೋಯಿಸ್ (ಎಸ್. ಎನ್.)
ಕುಮಾರವ್ಯಾಸ ವಿರಚಿತ ವಿರಾಟ ಪರ್ವ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು. ೧೦೨ + ೩೯೬

ತಿಪ್ಪೇರುದ್ರಸ್ವಾಮಿ (ಎಚ್.) ಸಂ.
ಸಿದ್ಧರಾಮನ ವಚನಗಳು : ಡಿ. ವಿ. ಕೆ. ಮೂರ್ತಿ, ಮೈಸೂರು, ಪು. ೧೧೪

ಧವಳ ಶ್ರೀ (ಸಂ)
ಅಜ್ಞಾತ ಕವಯಿತ್ರಿ ವಿರಚಿತ ಚಂದನಾಂಬಿಕೆಯ ಕಥೆ : ಉಜ್ವಲ ಪ್ರಾಂಜಲ ಪ್ರಕಾಶನ, ಮಂಡ್ಯ ; ಪು. ೭೪ + ೪

ಬಸಪ್ಪ (ಎಸ್.) ಸಂ,
ಕುಮಾರ ಪದ್ಮರಸ ವಿರಚಿತ ಸಾನಂದ ಚರಿತೆ: ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.ನಿ., ಮೈಸೂರು, ಪು. ೨೨ + ೩೨೦

ಬಸವಾರಾಧ್ಯ (ಎನ್.) ಸಂ.
ಬಾಹುಬಲಿ ಪಂಡಿತ ವಿರಚಿತ ಧರ್ಮನಾಥ ಪುರಾಣಂ : ಕನ್ನಡ ಅಧ್ಯಯನ ಸಂಸ್ಥೆ. ಮೈ.ವಿ.ವಿ.ನಿ. ಮೈಸೂರು ; ಪು. ೩೬ + ೬೧೬

ಭೋಜರಾಜ ಪಾಟೀಲ (ಸಂ)
ಕಪೋತ ಚರಿತ್ರೆ : ಶಿವಬಸವ ಪ್ರಕಾಶನ, ಹಾವೇರಿ : ಪು. ೪೧ + ೫

ಮಂಜುನಾಥನ್ (ಜಿ. ಜಿ.) ಸಂ.
ಇಮ್ಮಡಿ ಗುರುಸಿದ್ಧ ವಿರಚಿತ ಹಾಲಾಸ್ಯ ಪುರಾಣಂ : ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.ನಿ. ಮೈಸೂರು ; ಪು. ೧೬ + ೮೮ + ೮೭೧

ಮಲ್ಲೇದೇವರು (ಎಚ್. ಪಿ.) ಸಂ.
೧. ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು : ಕನ್ನಡ ಅಧ್ಯಯನ ಪೀಠ, ಧಾರವಾಡ : ಪು. ೧೧ + ೨೨೦
೨. ಉರಿಲಿಂಗ ಪೆದ್ದಿಗಳ ವಚನಗಳು : ಕನ್ನಡ ಅಧ್ಯಯನ ಪೀಠ, ಧಾರವಾಡ ; ಪು. [illegible] + ೨೪೦

ಮಹೀಪವಾಡಿ (ಬಿ. ಬಿ.) ಸಂ.
ಜನ್ನಕವಿಯ ಅನಂತನಾಥ ಪುರಾಣ: ಕನ್ನಡ ಅಧ್ಯಯನ ಪೀಠ, ಧಾರವಾಡ ಪು. ೬೪ + ೩೮೦

ಸಾಮರಾಯ (ತ. ಸು.) ಸಂ.
ನಂಜೇಗೌಡ (ಎಚ್.)
ಶಬ್ದಮಣಿದರ್ಪಣ : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ; ಪು. ೩೯ + ೩೯೬

ಶಿವಾನಂದ (ವಿ.) ಸಂ.
ವಿರಕ್ತ ತೋಂಟದಾರ್ಯರ ಕರ್ನಾಟಕ ಶಬ್ದ ಮಂಜರಿ : ವೀರಶೈವ ಅಧ್ಯಯನ ಸಂಸ್ಥೆ. ಗದಗ ; ಪು. ೧೦೭

ಸೇಪಗಿರಿ (ಕೆ. ಆರ್.) ಸಂ.
ವಿಜಯಣ್ಣ ವಿರಚಿತ ದ್ವಾದಶಾನುಪ್ರೇಕ್ಷೆ : ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.ನಿ. ಮೈಸೂರು; ಪು. ೫೧ + ೩೨೦

ಸಣ್ಣಯ್ಯ (ಬಿ. ಎಸ್.) ಸಂ.
ಪದ್ಮಕವಿಯ ವರ್ಧಮಾನ ಚರಿತಂ : ಭಾರತೀಯ ಜ್ಞಾನಪೀಠ, ವಾರಣಾಸಿ ; ಪು. ೫೬ + ೧೩೫

ಸುಂಕಾಪುರ (ಎಂ. ಎಸ್.) ಸಂ.
ಲಿಂಗಚಿದಮೃತ ಬೋಧೆ : ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ ; ಪು. ೭ + ೩೪೫

ಹೆಗಡೆ (ಎನ್. ಕೆ.) ಸಂ.
ರುಂಡ ಭೈರವನ ಕಾಳಗ : ಕನ್ನಡ ಕರಾವಳಿ ಗ್ರಂಥ ಪ್ರಕಾಶನ, ಶಿರಾಲಿ (ಭಟಕಳ) : ಪು. ೧೫ + ೬೪

ಅನಂತರಾಮಯ್ಯ (ಎಲ್. ಆರ್.)
ಪಂಪಭಾರತ ಕಥಾಲೋಕ : ಅಪರ್ಣಾ ಪ್ರಕಾಶನ, ಮೈಸೂರು ; ಪು. ೩೫೬ + ೧೬

ಸಾಮರಾಯ (ತ. ಸು.)
ನಾಗರಾಜಯ್ಯ (ಪ)
ಮಹಾವೀರ : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ; ಪು. ೬೪

ವೆಂಕಟಸುಬ್ಬಯ್ಯ (ಜಿ.) ಸಂ
ಸಂಕ್ಷಿಪ್ತ ಕನ್ನಡ ನಿಘಂಟು : ಕನ್ನಡ ಸಾಹಿತ್ಯ ಪರಿಷತ್ತು, (ಕನ್ನಡ-ಕನ್ನಡ) ಬೆಂಗಳೂರು ; ಪು. ೧೬+೯೫೪

ಸಂಶೋಧನೆ, ಭಾಷೆ, ಸಾಂಸ್ಕೃತಿಕ ಇತಿಹಾಸ ಮತ್ತು ಶಾಸನ

ಕೊಟ್ರಶೆಟ್ಟಿ
ಸಿದ್ಧರಾಮ ಶಿವಯೋಗಿ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪು. ೧೮+೩೦೭

ಧಾರವಾಡಕರ (ರಾ. ಯ.)
ಹೊಸಗನ್ನಡ ಸಾಹಿತ್ಯದ ಉದಯ ಕಾಲ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪು. ೧೭+೬೫೫

ನಾಗರಾಜನ್ (ಕೆ. ಎಸ್.)
ಸಂಸ್ಕೃತ ಸಾಹಿತ್ಯಕ್ಕೆ ಕಾಶ್ಮೀರದ ಕೊಡುಗೆ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. ೭+೨೦೩

ಲಕ್ಷ್ಮೆ (ಎಂ. ಎಸ್.)
ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ : (ಒಂದು ತೌಲನಿಕ ಅಭ್ಯಾಸ) ಕರ್ನಾಟಕ ವಿ.ವಿ., ಧಾರವಾಡ, ಪು. ೧೪+೨೭೦

ಶ್ರೀಕಂಠಶಾಸ್ತ್ರೀ (ಎಸ್.)
ನಾಯಕ (ಹಾ. ಮ.) ಪ್ರ. ಸಂ.
ಸಂಶೋಧನ ಲೇಖನಗಳು : ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.ನಿ., ಮೈಸೂರು : ಪು ೨೯+೬೫೯

ಸೇಡಿಯಾಪು ಕೃಷ್ಣಭಟ್ಟ
ಕೆಲವು ದೇಶನಾಮಗಳು : ಸಾಹಿತ್ಯ ಸಂಘ, ಮಣಿಪಾಲ ; ಪು. ೮+೫೫

ವಿಲಿಯಂ ಮಾಡ್ರ
ಕನ್ನಡ ಭಾಷೆಯ ರೂಪರೇಷೆಗಳು ; ಕನ್ನಡ ಅಧ್ಯಯನ ಪೀಠ, ಧಾರವಾಡ ; ಪು. ೨೦+೧೨೧

ಶಾಂತಕುಮಾರಿ (ಎಸ್. ಎಲ್.)
ಕುಕನೂರು (ಒಂದು ಸಾಂಸ್ಕೃತಿಕ ಸಮೀಕ್ಷೆ) : ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ : ಪು. ೪+೬೨

ಹರಿದಾಸ ಭಟ್ಟಾಚಾರ್ಯ (ಸಂ)

ಯುಗಯಾತ್ರೀ ಭಾರತೀಯ ಸಂಸ್ಕೃತಿ (ಮೂರನೆಯ ಸಂಪುಟ) : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಪು. ೨೪ + ೪೮೨ + plates ೬

ಅಣ್ಣೀಗೇರಿ (ಎ. ಎಂ.)

ಶೇಷಶಾಸ್ತ್ರಿ (ಆರ್.)

ಶಾಸನ ಸಂಗ್ರಹ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ಪು. xxxiv + ೮೮

ಕಲಬುರ್ಗಿ (ಎಂ. ಎಂ.)

೧. ಶಾಸನ ವ್ಯಾಸಂಗ (ಸಂಪುಟ ಎರಡು) : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪು. ೧೨ + ೧೨೯

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ : ಕನ್ನಡ ಅಧ್ಯಯನ ಪೀಠ, ಧಾರವಾಡ ; ಪು. ೧೬ + ೮೦ + ೧೫

ಕುಳ್ಳಿ (ಜಿ. ಎಸ್.)

ಮುರಡಿ (ಜಿ. ವಿ.)

ಅನುವಾದ ಕಲೆ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,

ಅಭಿನಂದನ ಗ್ರಂಥಗಳು

ಜವರೇಗೌಡ, ಡಿ. [ದೇಜಗೌ] ಸಂ.

ಸಹ್ಯಾದ್ರಿ : ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು ; ಪು. ೧೬ + ೧೧೦೪

ಪರಮಶಿವಯ್ಯ (ಜೀ. ಶಂ) ಸಂ.

ಕಬ್ಬಿನ ಹಾಲು : ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು ; ಪು. ೧೬ + ೯೬೦

ಲಿಂಗಯ್ಯ (ಡಿ) ಸಂ.

ರಾಜಕೀಯ ಪಟು : ಕೆಂಗಲ್ ಹನುಮಂತಯ್ಯ ಸನ್ಮಾನ ಸಮಿತಿ, ಬೆಂಗಳೂರು ; ಪು. ೧೧೬

ಜಾನಪದ

ಕ್ಯಾತನಹಳ್ಳಿ ರಾಮಣ್ಣ (ಸಂ)

ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ಪು. ೧೬ + ೧೮೦

ಕುಕ್ಕಿಲ ಕೃಷ್ಣಭಟ್ಟ (ಸಂ)

ಪಾರ್ತಿಸುಬ್ಬನ ಯಕ್ಷಗಾನಗಳು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಮೈಸೂರು, ಪು. ೬೨ + ೬೫೭

ಕೃಷ್ಣಕುಮಾರ್ (ಸಿ. ಪಿ.) [ಸಿ.ಪಿ.ಕೆ.]

ಜನಪದ ಗೀತೆ : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. ಪು. ३२

ನಡಿಕೇರಿಯಂಡ ಚಿಣ್ಣಪ್ಪ (ಸಂ)
ಪಟ್ಟೋಲೆ ಪಳಮೆ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ಪು. ೧೪ + ೧೫೫

ಮತಿಘಟ್ಟ ಕೃಷ್ಣಮೂರ್ತಿ, (ಸಂ)
ಕನ್ನಡ ಜನಪದ ಸಾಹಿತ್ಯ ಭಂಡಾರ. ಸಂಪುಟ ೧. ಗೀತೆಗಳು : ಗುರುಮೂರ್ತಿ ಪ್ರಕಾಶನ, ಬೆಂಗಳೂರು : ಪು. ೧೦೫೬ + ೩೨

ರಾಜಶೇಖರ (ಪಿ. ಕೆ.) ಮತ್ತು ಇತರರು (ಸಂ)
ಮಾಗಡಿ ಕೆಂಪೇಗೌಡ : ಶ್ರೀ ಕಲ್ಲೇಶ್ವರ ಯುವಕ ರೈತ ಸಂಘ, ಗುಡ್ಡೇನಹಳ್ಳಿ (ತುರುವೇಕೆರೆ ತಾಲ್ಲೂಕು) ಪು. ೧೯ + ೧೫೬

ರಾಜಶೇಖರ (ಪಿ.ಕೆ.) ಸಂ.
ಸಣ್ಣ ನಂಜೇಗೌಡ ಸಂ.
ದೊಡ್ಡಲಿಂಗೇಗೌಡ (ಡಿ) ಸಂ.
ಜನಪದ ಚಮತ್ಕಾರ ಗಣಿತ : ಸಂಯುಕ್ತ ಪ್ರಕಾಶನ, ಮೈಸೂರು ; ಪು. ೭೨

ರಾಮೇಗೌಡ (ದೊ. ನಾ.)
ನಮ್ಮೂರಿನ ಜನಪದ ಕತೆಗಳು : ತಿ. ಪಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ಪು. ೧೨೨ + ೮೦

ಲಠ್ಠೆ (ಎಂ. ಎಸ್.) ಸಂ.
ಉತ್ತರ ಕರ್ನಾಟಕದ ಹಂತಿಯ ಹಾಡುಗಳು. ಮಲ್ಲಸರ್ಜ ಪ್ರಕಾಶನ, ಮುತನಾಳ, ಪು. ೩೨ + ೨೫೨

ಶಿವಕುಮಾರ್. (ಕೆ. ವೈ.) ಸಂ.
ಎಪ್ಪತ್ತೊಂದು ಜನಪದ ಕಥೆಗಳು ; ಅರುಣ ಪ್ರಕಾಶನ, ಕೃಷ್ಣರಾಜನಗರ ; ಪು. ೧೩ + ೫೦೦

ಸೀತಾರಾಮಯ್ಯ (ವಿ.) ಸಂ.
ಯಕ್ಷಗಾನ : ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು ; ಪು. ೯ + ೧೫೭

ಸುಂಕಾಪುರ (ಎಂ. ಎಸ್.) ಸಂ.
ಜೀವನ ಜೋಕಾಲಿ (ದುಂದುಮೆಪದ) : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೧೬ + ೧೪೪

ಹೆಗಡೆ (ಎಲ್. ಆರ್.) ಸಂ.
ಉತ್ತರ ಕನ್ನಡ ಜನಪದ ಕಥೆಗಳು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ಪು. ೨೪ + ೨೮೫

ಮಕ್ಕಳ ಸಾಹಿತ್ಯ

ಇಂಡಿಯಾ ಬುಕ್ ಹೌಸ್ (ಐ. ಬಿ. ಎಚ್.) ಪ್ರಕಟಣೆಗಳು, ಬೆಂಗಳೂರು

ಅಣ್ಣೀಗೇರಿ (ಎ. ಎಂ.)
ರೊದ್ದ ಶ್ರೀನಿವಾಸರಾಯರು ಪು. ೪೪

ಶೇಷಗಿರಿರಾವ್ (ಎಂ. ಎಸ್.) [ವೈ. ಸು. ಶೇ.]
ವೀರಕೇಸರಿ ಸೀತಾರಾಮಶಾಸ್ತ್ರಿ : ಪು. ೩೮

ಸಿ. ಪಿ. ಲಿಂಗಣ್ಣ
ಉತ್ತರ ಕರ್ನಾಟಕದ ಜಾನಪದ ಗೀತೆಗಳು : ಪು. ೪೮

ಸುಂದರ (ಅ.)
ಪಟ್ಟದ ಕಲ್ಲು : ಪು. ೬೪

ಸೂರ್ಯನಾಥ ಕಾಮತ್
ಕರ್ನಾಟಕದ ಗಾಂಧಿ ತಿಮ್ಮಪ್ಪನಾಯಕ : ಪು. ೪೪

ಕಣ್ಣದಾಸನ್ (ಮೂಲ ತಮಿಳು)
ಕ. ಅನು ; ಕೆ. ಸುಬ್ರಹ್ಮಣ್ಯ
ಮರಿ ಕತೆಗಳು ; ವಾಣಿಶ್ರೀ ಪ್ರಕಾಶನ, ಮೈಸೂರು ; ಪು. ೧೬+೫೮

ಚನ್ನಪ್ಪ (ಎಸ್.)
ಚಿನ್ನದ ತಟ್ಟೆ : ಅರ್ಕಾವತಿ ಪ್ರಕಾಶನ, ಮೈಸೂರು ; ಪು. ೧೬+೫೮

ಭಾರತ – ಭಾರತಿ ಪುಸ್ತಕ ಸಂಪದ, ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು

ಭರದ್ವಾಜ	'ಕೈಪು' ಲಕ್ಷ್ಮೀನರಸಿಂಹ ಶಾಸ್ತ್ರೀ
ವಲ್ಲತೋಳ	ಶಿವಾನಂದ ಬೇಕಲ
ತಾನಸೇನ	ವಸಂತ ಕವಲಿ
ವಿಭೀಷಣ	ಬಿ. ಶ್ರೀ. ಪಾಂಡುರಂಗರಾವ್
ಅವ್ವೈಯಾರ್	ಬೆ. ಗೋ. ರಮೇಶ್
ಅಖಂಡಾನಂದರು	ಸ್ವಾಮಿ ಜಗದಾತ್ಮನಂದ
ಸೂರ್ಯಸೇನ್	ನಾಯಕ್ ಫಲಿಮಾರ್ಕರ್
ರಾಣಾ ಸಂಗ್ರಾಮಸಿಂಹ	ನುಗ್ಗೆಹಳ್ಳಿ ರಂಗನಾಥ
ಅ. ನ. ಕೃಷ್ಣರಾವ್	ಈಶ್ವರ ಚಂದ್ರ
ಗಂಗಾಧರರಾವ್ ದೇಶಪಾಂಡೆ	ಬಾಳೇಶ ಲಕ್ಷಟ್ಟಿ
ಗರುಡ	ಶ್ರೀನಿವಾಸ ಗ. ಲೋಖಂಡೆ
ವೇದಾಂತ ದೇಶಿಕರು	ಎನ್. ಎಸ್. ಅನಂತರಂಗಾಚಾರ್ಯ
ಆಲೂರು ವೆಂಕಟರಾವ್	ವರದರಾಜ ಹುಯಿಲಗೋಳ
ಠಕ್ಕರ ಬಾಪಾ	ಬಿ. ವಿ. ನಾರಾಯಣಮೂರ್ತಿ
ಮೋತಿಲಾಲ್ ನೆಹರೂ	ವಿ. ಎಸ್. ನಾರಾಯಣರಾವ್
ಬಾಲ ಗಂಧರ್ವ	ನಾ. ಡಿಸೋಜ
ಗೇಂದಲಾಲಿ ದೀಕ್ಷಿತ್	ಚಿರಂಜೀವಿ
ಚಾಣಕ್ಯ	ಬ. ನ. ಗುಂಡೂರಾವ್

ಹೋಮಿ ಭಾಭಾ	ಕೆ. ಸಿ. ಶಿವಪ್ಪ
ದಾದಾಭಾಯಿ ನವರೋಜ	ಹ. ವೆಂ. ನಾಗರಾಜರಾವ್
ಕಾರ್ತಿಕೇಯ	ಟಿ. ಕೇಶವ ಭಟ್ಟ
ಶಂಕರದೇವ	ದಯಾನಂದ ನರಸಿಂಹ ಶಾನಭಾಗ
ಎಸ್. ಆರ್. ರಂಗನಾಥನ್	ಆರ್. ಶಿವಣ್ಣ
ನಾಗಮಹಾಶಯ	ಸ. ಸ. ಮಾಳವಾಡ
ಪ್ರೇಮಚಂದ್	ಎಂ. ಕೆ. ಭಾರತೀರಮಣಾಚಾರ್ಯ
ಈಶ್ವರಚಂದ್ರ ವಿದ್ಯಾಸಾಗರ	ತ್ರಿವಿಕ್ರಮ
ರಾಮಸಿಂಗ ಕೂಕಾ	ಗ. ಕೃ. ವೆಂಕಟೇಶಮೂರ್ತಿ
ರವಿವರ್ಮ	ಬಿ. ನರಸಿಂಗರಾವ್
ಹರ್ಡೇಕರ ಮಂಜಪ್ಪ	ಎಸ್. ಎನ್. ಭೂಸರೆಡ್ಡಿ
ಸಿ. ಎಫ್. ಆ್ಯಂಡ್ರೂಸ್	ಸಿ. ಭಾರತೀ
ಲಾಲಾ ಲಜಪತ್ ರಾಯ್	ಟಿ. ಕೆ. ರಾಮರಾವ್
ನಾಲ್ವಡಿ ಕೃಷ್ಣರಾಜ ಒಡೆಯರ	ಆರ‍್ಯಾಂಬ ಪಟ್ಟಾಭಿ
ಮುತ್ತಯ್ಯ ಭಾಗವತರ	ಬೆಳಕವಾಡಿ ಶ್ರೀನಿವಾಸೈಯ್ಯಂಗಾರ್
ರಾಮಚಂದ್ರ ದತ್ತಾತ್ರೇಯ ರಾನಡೆ	ಬಾಲಚಂದ್ರ ರ. ಮೋಡಕ
ಬಸವಪ್ಪ ಶಾಸ್ತ್ರಿ	ಹಂಪನಾ–'ಕಾವ್ಯಜೀವಿ'
ಶ್ರದ್ಧಾನಂದರು	ಟಿ. ಸಿ. ಗೋಡಬೋಲೆ
ವಿ. ಎಸ್. ಶ್ರೀನಿವಾಸ ಶಾಸ್ತ್ರಿ	ಬಾಲಯೋಗಿ
ವೀರೇಶಲಿಂಗಂ ಪಂತುಲು	ಹೊ. ರಾ. ಸ. ರಾವ್
ರಾಮಮನೋಹರ ಲೋಹಿಯಾ	ಖಾದ್ರಿ ಶಾಮಣ್ಣ
ವ್ಯಾಸರಾಜರು	ಗುಂಡ್ಮಿ ಚಂದ್ರಶೇಖರ ಐತಾಳ
ಡೆಪ್ಯುಟಿ ಚನ್ನಬಸಪ್ಪ	ವೆಂಕಟೇಶ ಸಾಂಗಲಿ
ಹರಿಹರ	ಬಿ. ಎಸ್. ರುಕ್ಕಮ್ಮ
ಲಕ್ಷ್ಮಣ ಕಾಶಿನಾಥ ಕಿರ್ಲೋಸ್ಕರ್	ಲಲಿತಮ್ಮ ಡಾ. ಚಂದ್ರಶೇಖರ್
ಶರತಚಂದ್ರ ಚಟ್ಟೋಪಾಧ್ಯಾಯ	ಕುಂದಾನಿ ಸತ್ಯನ್
ಲಾಲಾ ಹರದಯಾಳ್	ಎನ್. ಪಿ. ಶಂಕರನಾರಾಯಣರಾವ್
ಹರ್ಷವರ್ಧನ	ಎಂ. ಎನ್. ವೆಂಕಟರಮಣಪ್ಪ
ಆಳಶಿಂಗ ಪೆರುಮಾಳ್	ಲ. ನ. ಶಾಸ್ತ್ರೀ
ರಾಮಕೃಷ್ಣಾನಂದರು	ಬಿಂಡಿಗನವಿಲೆ ನಾರಾಯಣಸ್ವಾಮಿ
ಸುರೇಂದ್ರನಾಥ ಬ್ಯಾನರ್ಜಿ	ಬನ್ನಂಜೆ ರಾಮಾಚಾರ್ಯ
ಬಾಲಕೃಷ್ಣ ಶಿವರಾಮ ಮೂಂಜೆ	ಮೈ. ನ. ನಾಗರಾಜ್
ಎ. ವಿ. ವರದಾಚಾರ್	ಎಚ್. ಕೆ. ರಂಗನಾಥ್
ನೃಪತುಂಗ	ಕೊರಟಿ ಶ್ರೀನಿವಾಸರಾವ್
ಚಿತ್ತರಂಜನದಾಸ್	ಎನ್. ಎಸ್. ರಾಮಪ್ರಸಾದ್
ವಾಸವಿ	ಕಾಶಿ ವಿಶ್ವನಾಥ ಶೆಟ್ಟಿ
ಭಾಯಿ ಪರಮಾನಂದ	ಕೆ. ನಾಗರಾಜರಾವ್

ತುಕಾರಾಮ್	ಎ. ಕೆ. ರಾಮೇಶ್ವರ
ಪೃಥ್ವೀರಾಜ್ ಕಪೂರ್	ಸಂತೋಷಕುಮಾರ ಗುಲ್ವಾಡಿ
ವಿದುರ	ಮಾ. ನಾ. ಚೌಡಪ್ಪ
ಎಂ. ವೆಂಕಟಕೃಷ್ಣಯ್ಯ	ಬಿ. ಎಸ್. ಸ್ವಾಮಿ
ಷಡಕ್ಷರದೇವ	ಸಿ. ವಿ. ಕೆರಿಮನಿ
ಶ್ಯಾಮಶಾಸ್ತ್ರೀ	ಜಿ. ಚನ್ನಮ್ಮ
ಕರ್ಣ	ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ
ನರಗುಂದದ ಬಾಬಾ ಸಾಹೇಬ	ವೆ. ಮು. ಜೋಶಿ
ರೇವಣ ಸಿದ್ಧೇಶ್ವರ	ಎಂ. ಜಿ. ನಂಜುಂಡಾರಾಧ್ಯ
ಜ್ಞಾನದೇವ	ಹೊಸಬೆಟ್ಟು ಸೀತಾರಾಮಾಚಾರ್ಯ
ಕುಮಾರರಾಮ	ಬಸವರಾಜ ಕಟ್ಟೀಮನಿ
ಕಮಲನಯನ ಬಜಾಜ್	ಕ. ರಾ. ಮೋಹನ
ವಿದ್ಯಾವತೀದೇವಿ	ಎಂ. ಎಸ್. ನರಸಿಂಹಮೂರ್ತಿ
ಟಿ. ಚೌಡಯ್ಯ	ಎಸ್. ಕೃಷ್ಣಮೂರ್ತಿ
ಮಹಮದ್‌ಪೀರ್	ಮೈ. ಸು. ಶೇಷಗಿರಿರಾವ್
ಕೃಷ್ಣದೇವರಾಯ	ಜಯತೀರ್ಥ ರಾಜಪುರೋಹಿತ
ಆನಂದ ಕೆ. ಕುಮಾರಸ್ವಾಮಿ	ಬಿ. ಶ್ರೀನಿವಾಸರಾವ್
ಮೈಲಾರ ಮಹದೇವ	ವೀ. ಚ. ಹಿತ್ತೇಮನಿ
ಬಿ. ಎಂ. ಶ್ರೀಕಂಠಯ್ಯ	ಎಸ್. ಚನ್ನಪ್ಪ
ಮುತ್ತುಸ್ವಾಮಿ ದೀಕ್ಷಿತರು	ರಾಜಶ್ರೀ
ಮಹೇಂದ್ರಲಾಲ್ ಸರ್ಕಾರ	ಬೆ. ಗೋ. ರಮೇಶ್
ವಲ್ಲಭಬಾಯಿಪಟೇಲ್	ಶಿವರಾಮು
ನಿವೇದಿತಾ	ಪ್ರಭುಶಂಕರ
ಜಾಕಿರ ಹುಸೇನ್	ಚಿದಂಬರ ಕುಲಕರ್ಣಿ
ಅಕ್ಕಮಹಾದೇವಿ	ಹಾ. ಮಾ. ನಾಯಕ

ಅನ್ಯ ಸಾಹಿತ್ಯದಿಂದ

ಕುಂಜನ್ ನಂಬಿಯಾರ
ಕ.ಅನು. ಬಿ. ಕೆ. ತಿಮ್ಮಪ್ಪ

ಕುಂಜನ್ ನಂಬಿಯಾರರ ಕಥೆಗಳು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪು. ೨೯ + ೨೩೭

ನಾರಾಯಣರಾವ ತಾಳೀಕೋಟ

ರಾಮಾಯಣ ಸುಧೆ : ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು ; ಪು. ೮ + ೧೧೨

ರಾಮಗೋಪಾಲನ್
ಕ. ಅನು : ಚಿರಂಜೀವಿ

ತಿಳಿವು ಗೆಲುವು : ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು ; ಪು. ೮ + ೧೬೮

ಹಂಪ. ನಾಗರಾಜಯ್ಯ
ವೀರಜಿನೇಂದ್ರ ಚರಿತೆ : ರಾಜ್ಯ ಶ್ರೀ ಪ್ರಕಾಶನ, ಬೆಂಗಳೂರು, ಪು. ೧೪೨

ಹಿರಣ್ಮಯ ಬ್ಯಾನರ್ಜಿ
ಕ. ಅನು : ಎಚ್. ಕೆ. ರಾಮಚಂದ್ರಮೂರ್ತಿ
ಠಾಕೂರರ ಮಾನವತಾ ಸಿದ್ಧಾಂತ : ಪ್ರಸಾರಾಂಗ, ಮೈಸೂರು, ಪು. ೫೨

ಸಂಕೀರ್ಣ

ಕುವೆಂಪು ಮತ್ತು ಇತರರು.
ಅರವಿಂದ ದರ್ಶನ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ; ಪು. ೮೦ + ೮.

ಗಜೇಂದ್ರ ಗಡ್ (ಎಸ್. ಬಿ.)
ಶಿಕ್ಷಣದಲ್ಲಿ ಕ್ರಾಂತಿಕಾರಿ ರೂಸೋ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು. ೧೪೦ + ೪.

ಗುಂಡೂರಾಯ (ಅ. ವೆಂ.)
ಐತಿಹಾಸಿಕ ರಾಮಾಯಣ : ಶ್ರೀಮತಿ ಸರೋಜ, ಮೈಸೂರು ; ಪು. ೧೦೦

ಜವರೇಗೌಡ (ದೇ.)
1. ಕುಲಪತಿಯ ಭಾಷಣಗಳು : (ಭಾಗ-೬) : ಸುರುಚಿ ಪ್ರಕಾಶನ, ಮೈಸೂರು ; ಪು. ೨೮೧
2. ಕನ್ನಡ ಗ್ರಂಥ ಸೂಚಿ (ಸಂ. ೨) ; ಪ್ರಸಾರಾಂಗ, ಮೈ. ವಿ. ವಿ. ನಿ. ಮೈಸೂರ, ಪು. ೧೬ + ೬೧೮

ನಾಯಕ (ಹ. ಮಾ.) ಪ್ರಧಾನ ಸಂಪಾದಕ
ಕನ್ನಡ ವಿಶ್ವಕೋಶ (ಸಂ. ೮) : ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ.ನಿ. ಮೈಸೂರು ಪು. ೮ + ೯೪೨ + ೮

ಪಂಡಿತ ಯಜ್ಞನಾರಾಯಣ ಉಡುಪ
ಪುರಾಣ ಭಾರತ ಕೋಶ : ಗೀತಾ ಬುಕ್ ಹೌಸ್ ; ಮೈಸೂರು. ಪು. ೭೧೨

ಪಾಟೀಲ ಪುಟ್ಟಪ್ಪ
ನನ್ನದು ಈ ಕನ್ನಡನಾಡು : ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ ; ಪು. ೧೧ + ೧೭೧

ಮಿರ್ಜಿ ಅಣ್ಣಾರಾಯ ಮತ್ತು ಇತರರು
ಕರ್ನಾಟಕ ಮತ್ತು ಜೈನ ಸಂಸ್ಕೃತಿ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಪು. ೧೯೫ + ೪.

ರಂಗಯ್ಯ (ಆರ್.) ಅಧ್ಯಕ್ಷರು
ಕಾನೂನು ಪದಕೋಶ : (ಇಂಗ್ಲಿಷ್-ಹಿಂದೀ-ಕನ್ನಡ) : ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ, ಬೆಂಗಳೂರು ; ಪು. iv + ೨೮೮.

ಲೂಯಿಸ್ ರೇನೋ ಮತ್ತು ಇತರರು

ಭಾರತೀಯ ಪರಂಪರೆ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ; ಪು. ೨೩೧ + ೮

ವೆಂಕಟಾಚಲ ಶಾಸ್ತ್ರೀ (ಟಿ. ವಿ.)

ಕಾವ್ಯ ಚಿತ್ರಗಳು : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ಪು. ೧೬೮ + ೬

ವೆಂಕಟೇಶ ಕುಲಕರಣಿ

ರಾವಣಲೀಲಾ ಆಕ್ರಮವೇ ? ; ಲಂಕಾ ಪ್ರಕಾಶನ, ಧಾರವಾಡ ; ಪು. ೩೨

ಸಾಹಿತ್ಯ ವಾರ್ಷಿಕವನ್ನು ಕುರಿತು

ಇದು ಪ್ರತಿ ವರ್ಷ ಪ್ರಕಟವಾಗುವ ಸಾಹಿತ್ಯ ಕೃತಿಗಳ ಒಂದು ವಿಮರ್ಶಾತ್ಮಕ ಸಮೀಕ್ಷೆ. ಇದು ಆಯಾ ವರ್ಷ ಪ್ರಕಟವಾಗುವ ಪುಸ್ತಕಗಳನ್ನು ಪಟ್ಟಿಮಾಡುವ ಅಥವಾ ವಿವರಣಾತ್ಮಕ ಸೂಚಿಯನ್ನು ಸಿದ್ಧಪಡಿಸುವ ಪ್ರಾಥಮಿಕ ನೆಲೆಯಲ್ಲಿ ಪರ್ಯವಸಾನವಾಗುವ ರೂಪದ್ದಲ್ಲ ; ಆಯಾ ವರ್ಷದ ಸಾಹಿತ್ಯ ಕೃತಿಗಳನ್ನು ಸಮೀಕ್ಷಿಸುವ ಸ್ವರೂಪದ್ದು.

ಇದು ಸುಲಭವಾದ ಕಾರ್ಯವೇನಲ್ಲ. ಬಹು ಸಂಖ್ಯೆಯಲ್ಲಿ ವರ್ಷ ವರ್ಷವೂ ಪ್ರಕಟವಾಗುವ ಸಾಹಿತ್ಯ ಕೃತಿಗಳ ಜಾಡು ಹಿಡಿದು ಗುರುತಿಸುವುದು, ಅನಂತರ ಅವುಗಳನ್ನೆಲ್ಲ ಒಂದೆಡೆ ಕೂಡಿಸಿಕೊಳ್ಳುವುದು ಮೊದಲನೆಯ ಕಷ್ಟ. ಅವುಗಳನ್ನು, ತೀರಾ ಮುಖಾಮುಖಿಯಾಗಿ ನಿಂತು ವಿಮರ್ಶಿಸುವುದು ಎರಡನೆಯ ಕಷ್ಟ. ಆದರೂ ಅಗತ್ಯವಾಗಿ ಮಾಡಬೇಕಾಗಿರುವ ಕಾರ್ಯ ; ತಪ್ಪೋ‌ಒಪ್ಪೋ ಯಾರಾದರೂ ಮಾಡಲೇಬೇಕಾದ ಕಾರ್ಯ. ಅದನ್ನು ನಾವು ಮಾಡಲು ಹೊರಟಿದ್ದೇವೆ. ನಾವು ಹೊರಟಿರುವ ಉದ್ದೇಶ ಒಳ್ಳೆಯದು, ಪ್ರಯತ್ನ ಪ್ರಾಮಾಣಿಕವಾದದ್ದು–ಎಂಬುದೇ ನಮ್ಮ ಬೆಂಬಲಕ್ಕಿರುವ ಧೈರ್ಯ.

ನಾಳೆ, ಕನ್ನಡದಲ್ಲಿ ಯಾವುದೇ ಒಂದು ಸಾಹಿತ್ಯ ಪ್ರಕಾರವನ್ನು ಕುರಿತು ಕೆಲಸ ಮಾಡಲು ತೊಡಗುವವರಿಗೆ ಈ 'ಸಾಹಿತ್ಯ ವಾರ್ಷಿಕ' ಗಳಿಂದಾಗುವ ಪ್ರಯೋಜನ ಅಷ್ಟಿಷ್ಟಲ್ಲ. ಯಾವ ಯಾವ ವರ್ಷ ಕನ್ನಡದಲ್ಲಿ ಏನೇನು ಕೃತಿಗಳು ಪ್ರಕಟವಾಗಿವೆ, ಸಾಹಿತ್ಯದ ಯಾವ ಯಾವ ಪ್ರಕಾರಗಳಲ್ಲಿ ಏನೇನು ಕೆಲಸ ನಡೆದಿದೆ, ಯಾವ ದೃಷ್ಟಿ-ಧೋರಣೆಗಳು ಅವುಗಳ ಹಿನ್ನೆಲೆಗಿವೆ ಎಂಬುದು ನಾಳಿನ ವಿಮರ್ಶಕರಿಗೆ ಹಾಗೂ ಸಂಶೋಧಕರಿಗೆ ಮೂಲಭೂತ ಸಾಮಗ್ರಿಯಾಗಿ ಇದರಿಂದ ಒದಗುತ್ತದೆ. ಹಾಗೆಯೆ ಪ್ರತಿಯೊಂದು ವರ್ಷದ ಸಾಹಿತ್ಯಿಕ ಸಾಧನೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವವರ ಪಾಲಿಗೆ, ಮತ್ತು ಸಾಹಿತ್ಯ ಚರಿತ್ರೆಯ ಲೇಖಕನಿಗೆ ಇದೊಂದು ಋಣದ ಗಣಿಯಾಗುವುದರಲ್ಲಿ ಸಂದೇಹವಿಲ್ಲ.

ಲೇಖಕರ, ಪ್ರಕಾಶಕರ, ವಿಮರ್ಶಕರ, ಪತ್ರಿಕೆಗಳ ಮತ್ತು ಗ್ರಂಥ ಭಂಡಾರದ ನಿರಂತರ ಸಹಕಾರದಿಂದ ಮಾತ್ರ ಇಂಥ ಯೋಜನೆ ಯಶಸ್ವಿಯಾಗುವ ಸಾಧ್ಯತೆಗಳಿವೆ.

ಕನ್ನಡ ವಿಮರ್ಶೆಯ ಬೆಳವಣಿಗೆಯಲ್ಲಿ ಕನ್ನಡ ಅಧ್ಯಯನ ಕೇಂದ್ರವು ಸಕ್ರಿಯವಾಗಿ ಪಾಲುಗೊಳ್ಳುವ ಒಂದು ಅವಕಾಶವನ್ನು ಈ ಯೋಜನೆ ಒದಗಿಸಿದೆ.